ಚಿತ್ರ 9.1: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಾಮಾಜಿಕ ಸಮೂಹಗಳವಾರು ಜನಸಂಖ್ಯೆ ಬೆಳವಣಿಗೆ ಪ್ರಮಾಣ (ಶೇಕಡಾವರುವಿನಲ್ಲಿ) (ಅವಧಿ 2001-2011) ... 132
ಚಿತ್ರ 9.2: ಖಾಜಿಹೊಸಹಳ್ಳಿ ಗ್ರಾಮ ಪಂಚಾಯತಿಯ ಪ್ರತಿ ಗ್ರಾಮದಿಂದಆಯ್ದುಕೊಂಡ ಮಾದರಿ ಕುಟುಂಬಗಳ ಹಂಚಿಕೆ ... 144
ಚಿತ್ರ 9.3: ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ ಲೆಕ್ಕಮಾಡಲು ಬಳಸುವ ಉಪ-ಸೂಚ್ಯಂಕಗಳ ವಿವರಗಳು ... 147
ಚಿತ್ರ 9.4: ಸಾಮಾಜಿಕ ಒಳಗೊಳ್ಳುವಿಕೆ ಉಪಸೂಚ್ಯಂಕದಡಿ ಪ್ರತಿಕ್ರಿಯೆಗಳ ವಿವರಗಳು ... 149
ಚಿತ್ರ 9.5: ತಾರತಮ್ಯದ ಗ್ರಹಿಕೆಯ ಕುರಿತಾದ ಪ್ರಶ್ನೆಗಳಿಗೆ ಉತ್ತರದ ಪ್ರಮಣ ... 149
ಚಿತ್ರ 10.1: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮ ಪಂಚಾಯತಿಗಳ ಸರಾಸರಿ ಆದಾಯ ಮತ್ತು ವೆಚ್ಚಗಳು ... 158
ಚಿತ್ರ 11.1 ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ನಗರ ಜನಸಂಖ್ಯೆ ಪಾಲು ... 166
ಚಿತ್ರ 11.2: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಜನಸಾಂದ್ರತೆ ... 167
ಚಿತ್ರ 11.4: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಲ್ಲಿನೀರಿನ ಲಭ್ಯತೆಯಿರುವ ಕುಟುಂಬಗಳು (ಶೇ.) 169
ಚಿತ್ರ 11.5: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮನೆಯ ಆವರಣದಲ್ಲಿ ನೀರಿನ ಲಭ್ಯತೆಯಿರುವ ಕುಟುಂಬಗಳು (ಶೇ.) ... 169
ಚಿತ್ರ 11.6: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ನಾನಗೃಹದ ಸೌಲಭ್ಯವುಳ್ಳ ಕುಟುಂಬಗಳು (ಶೇ.) ... 169
ಚಿತ್ರ 11.7: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚರಂಡಿ ಸೌಲಭ್ಯವುಳ್ಳ ಕುಟುಂಬಗಳು (ಶೇ.) ... 170
ಚಿತ್ರ 11.8: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೌಚಾಲಯ ಮತ್ತು ಸೌಲಭ್ಯವುಳ್ಳ ಕುಟುಂಬಗಳು (ಶೇ.) ... 170
ಚಿತ್ರ 11.9: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಧುನಿಕ ಅಡುಗೆ ಇಂಧನ ಸೌಲಭ್ಯವುಳ್ಳ ಕುಟುಂಬಗಳು (ಶೇ.) 170
ಚಿತ್ರ 11.10: ನೀರಿನ ಸಂಪರ್ಕದ ಶೇಕಡಾವಾರು ಮತ್ತು ನೀರಿನ ಶುಲ್ಕದ ಸಂಗ್ರಹಣೆಯ ಪ್ರಮಾಣ (2011-2012) ... 171
ಚಿತ್ರ 11.11: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೊಳೆಗೇರಿ ಜನಸಂಖ್ಯೆ ಮತ್ತು ಅದರ ಪಾಲು (2011-2012) ... 172
ಚಿತ್ರ 11.12: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿತೆರಿಗೆ ಬೇಡಿಕೆ ಮತ್ತು ಸಂಗ್ರಹಣೆ (2011-2012) ... 172
ಚಿತ್ರ 11.13: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ.ಜಾ/ಪ.ಪಂ. ಗಳ ನಿಧಿಯ ಬಳಕೆ (2011-2012) ... 173
ಚಿತ್ರ: 3.1-ಅ: 2002 ಮತ್ತು 2010ರಲ್ಲಿ ಕೆಐಎಎಲ್ ಭೂ ಬಳಕೆ ... 176
ಚಿತ್ರ 3.2-ಅ: ನಗರ ಮತ್ತು ನಗರದ ಸುತ್ತ ಇರುವ ಪ್ರದೇಶಗಳಲ್ಲಿ ಸಂಪನ್ಮೂಲಗಳ ಚಕ್ರ ... 177
ಚಿತ್ರ 4.1-ಅ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಕ್ಷೆ ... 180
ಚಿತ್ರ 12.1: ವೈಯಕ್ತಿಕ ಸೂಚ್ಯಂಕಗಳ ತಾಲೂಕುವಾರು ರಡಾರ್ ವಿಶ್ಲೇಷಣೆ (2011) ... 189
ಚಿತ್ರ 12.2. ತಾಲೂಕುವಾರು ಸೂಚ್ಯಂಕಗಳ ನಕ್ಷೆ (2011) ... 191

# ಭಾಗ 1

# ಕಾರ್ಯಕಾರಿ ಸಾರಾಂಶ

# ಕಾರ್ಯಕಾರಿ ಸಾರಾಂಶ

ಮಹಬೂಬ್-ಉಲ್-ಹಕ್ ಮತ್ತು ಅಮಾರ್ತ್ಯ ಸೇನ್ ಪ್ರತಿಪಾದಿಸಿದ ಮಾನವ ಅಭಿವೃದ್ಧಿ ಪರಿಕಲ್ಪನೆಯನ್ನು 'ಜನರಿಗಿರುವ ಅಭಿವೃದ್ಧಿ ಆಯ್ಕೆಗಳನ್ನು ವಿಸ್ತಾರಗೊಳಿಸುವ ಒಂದು ಪ್ರಕ್ರಿಯೆ', ಎಂದು ವಿವರಿಸಬಹುದು. ಅಭಿವೃದ್ಧಿ ಒಂದು ಸಂಕೀರ್ಣ ಪ್ರಕ್ರಿಯೆಯ ಫಲ. ಇಲ್ಲಿ ವೈವಿಧ್ಯಮಯ ಅಂಶಗಳು ಪರಸ್ಪರ ಅಂತರಕ್ರಿಯೆ ನಡೆಸಿ ಜನರಿಗೆ ಒಂದು ಸೃಜನಶೀಲ, ಆರೋಗ್ಯಪೂರ್ಣ, ಮತ್ತು ಪ್ರಯೋಜನಕಾರಿ ಬದುಕನ್ನು ಸಾಗಿಸಲು ಸಜ್ಜುಗೊಳಿಸುತ್ತದೆ. 1990ರಲ್ಲಿ ಯುಎನ್‌ಡಿಪಿ ಈ ಪರಿಕಲ್ಪನೆಯನ್ನು ತನ್ನ ಮೊದಲ ಮಾನವ ಅಭಿವೃದ್ಧಿ ವರದಿಯಲ್ಲಿ ಅಳವಡಿಸಿಕೊಂಡಿತು. ಅಲ್ಲಿಗೆ ಈ ಮೊದಲು ಮಾನವ ಅಭಿವೃದ್ಧಿಯನ್ನು ಮಾಪನ ಮಾಡಲು ಅನುಸರಿಸುತ್ತಿದ್ದ ಆರ್ಥಿಕ ಅಭಿವೃದ್ಧಿ ಮತ್ತು ತಲಾ ಆದಾಯಗಳು ಗೌಣವಾಯಿತು. ಈ ವರದಿ ಮಾನವ ಅಭಿವೃದ್ಧಿಯ ಮಟ್ಟವನ್ನು ಮಾಪನ ಮಾಡಲು ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಕೂಡ ಪರಿಚಯಿಸಿತು, ಅಂತರ-ಕಾಲಿಕ ತುಲನೆಗಳಿಗೆ ನೆರವಾಯಿತು ಮತ್ತು ಅಭಿವೃದ್ಧಿ-ಮುಖಿ ಕಾರ್ಯನೀತಿ ರಚನೆಯೆತ್ತ ಮಾರ್ಗವನ್ನು ಬದಲಿಸಿತು. ಮತ್ತೂ, ಅದು ಲಿಂಗ ಅಸಮಾನತೆ ಸೂಚ್ಯಂಕ, ಲಿಂಗ ಅಭಿವೃದ್ಧಿ ಸೂಚ್ಯಂಕ, ಮತ್ತು ಆಹಾರ ಭದ್ರತೆ ಸೂಚ್ಯಂಕಗಳಂತಹ ವಿವಿಧ ರೀತಿಯಲ್ಲಿ ಮಾನವ ಅಭಿವೃದ್ಧಿಯನ್ನು ಮಾಪನ ಮಾಡುವ ಸೂಚ್ಯಂಕಗಳ ರಚನೆಗೂ ದಾರಿ ಮಾಡಿಕೊಟ್ಟಿತು.

ತಾಲೂಕು ಮಟ್ಟದ ಮಾನವ ಅಭಿವೃದ್ಧಿ ಮಟ್ಟವನ್ನು ಅರ್ಥಮಾಡಿಕೊಳ್ಳಲು ಮತ್ತು ಸಮಗ್ರವಾಗಿ ವಿಶ್ಲೇಷಿಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ, ಮಾನವ ಅಭಿವೃದ್ಧಿ ಸೂಚ್ಯಂಕ, ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ, ಮಕ್ಕಳ ಅಭಿವೃದ್ಧಿ ಸೂಚ್ಯಂಕ, ನಗರಾಭಿವೃದ್ಧಿ ಸೂಚ್ಯಂಕ, ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ, ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ ಮತ್ತು ಸಂಯುಕ್ತ ಜಿಲ್ಲಾ ಅಭಿವೃದ್ಧಿ ಸೂಚ್ಯಂಕಗಳನ್ನು ಬಳಸಿಕೊಳ್ಳುತ್ತದೆ. ಈ ವರದಿಯಲ್ಲಿನ ವಿಶ್ಲೇಷಣೆಯು 2010-11 ಅವಧಿಗೆ ಬೆಂಗಳೂರು ಜಿಲ್ಲಾ ಪಂಚಾಯತಿ ಮತ್ತು ಅಭಿವೃದ್ಧಿ ಇಲಾಖೆಗಳು ಒದಗಿಸಿದ ದತ್ತಾಂಶವನ್ನು ಆಧರಿಸಿದೆ. ಈ ದತ್ತಾಂಶವನ್ನು ಆಂತರಿಕ ಹೊಂದಾಣಿಕೆಗಾಗಿ ಪರೀಕ್ಷಿಸಲಾಗಿದೆ ಮತ್ತು ಕಟ್ಟುನಿಟ್ಟಿನ ಅಡ್ಡ-ತನಿಖೆ ಪ್ರಕ್ರಿಯೆಗೆ ಒಳಪಡಿಸಿ ಸಿಂಧುತ್ವವನ್ನು ಪರೀಕ್ಷಿಸಲಾಗಿದೆ. ಕೆಲವೊಂದು ವಿಷಯಗಳಲ್ಲಿ ಇನ್ನೂ ಆಳವಾದ ಅಧ್ಯಯನ ಮಾಡಲು ಜನಗಣತಿ, ರಾಷ್ಟ್ರೀಯ ಮಾದರಿ ಸರ್ವೇಕ್ಷಣಗಳು, ಜಿಲ್ಲಾ ಮಟ್ಟದ ಕುಟುಂಬ ಮತ್ತು ಸೌಲಭ್ಯಗಳ ಸರ್ವೇಕ್ಷಣ ಮತ್ತು ಇತರ ಕಿರು ಮಾದರಿ ಆಧಾರಿತ ಅಧ್ಯಯನಗಳನ್ನು ಬಳಸಿಕೊಳ್ಳಲಾಗಿದೆ. ಇದರ ಜೊತೆಗೆ ಜಿಲ್ಲೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನಾಲ್ಕು ಕಿರು ಕ್ಷೇತ್ರ ಅಧ್ಯಯನಗಳನ್ನು ನಡೆಸಲಾಗಿದೆ. ಇವುಗಳು, ಖಾಸಗಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ, ಸಂಪೂರ್ಣ ನೈರ್ಮಲ್ಯ ಅಭಿಯಾನದ ಅನುಷ್ಠಾನದಲ್ಲಿನ ಉತ್ತಮ ಸಾಧನೆ, ಬಸ್ ಸೇವೆಗಳ ಲಭ್ಯತೆ ಮತ್ತು ಗುಣಮಟ್ಟ, ಮತ್ತು ಭೂ-ಬಳಕೆಯಲ್ಲಿ ಬದಲಾವಣೆಗಳನ್ನು ಕುರಿತಾದ ವಿಷಯಗಳಿಗೆ ಸಂಬಂಧಿಸಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎರಡು ಕಂದಾಯ ಉಪ-ವಿಭಾಗಗಳು, ನಾಲ್ಕು ತಾಲೂಕುಗಳು, 1052 ಗ್ರಾಮಗಳು, ಮತ್ತು 1272 ಕಂದಾಯ ಗ್ರಾಮಗಳು ಇವೆ. ಡಾ॥ ಡಿ.ಎಂ. ನಂಜುಂಡಪ್ಪ ನೇತೃತ್ವದ ಪ್ರಾದೇಶಿಕ ಅಸಮತೋಲನಗಳ ಕುರಿತಾದ ನಿವಾರಣೆಗೆ ಉನ್ನತ ಅಧಿಕಾರದ ಸಮಿತಿಯ ವರದಿಯು ರಾಜ್ಯದ 176 ತಾಲೂಕುಗಳ ಪಟ್ಟಿಯಲ್ಲಿ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲೂಕುಗಳಿಗೆ ಅನುಕ್ರಮವಾಗಿ 51, 46, 72 ಮತ್ತು 54ನೇ ಸ್ಥಾನಗಳನ್ನು ನೀಡಿದೆ.

2011 ಜನಗಣತಿ ಪ್ರಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನಸಂಖ್ಯೆ 9.90 ಲಕ್ಷಗಳಿತ್ತು. ಅದರಲ್ಲಿ 5.09 ಲಕ್ಷ ಪುರುಷರಿದ್ದರೆ 4.82 ಲಕ್ಷ ಮಹಿಳೆಯರು ಇದ್ದಾರೆ. ಈ ಜಿಲ್ಲೆಯ ಲಿಂಗ ಅನುಪಾತ 946 ಇದ್ದು, ಇದು ರಾಜ್ಯ ಮಟ್ಟದ ಅನುಪಾತಕ್ಕಿಂತ (973) ತುಸು ಕಡಿಮೆ ಇದೆ. ಗ್ರಾಮೀಣ ಜನಸಂಖ್ಯೆಯ ಪಾಲು ಶೇ. 72.88 ಇದ್ದರೆ, ನಗರ ಜನಸಂಖ್ಯೆ ಶೇ.27.12 ರಷ್ಟಿದೆ. ಕಳೆದ ದಶಕದಲ್ಲಿ ಜಿಲ್ಲೆಯ ಜನಸಂಖ್ಯೆ ಹೆಚ್ಚಳದ ಪ್ರಮಾಣ ಶೇ.16.45 ಇದ್ದು ನೆಲಮಂಗಲ ಮತ್ತು ಹೊಸಕೋಟೆ ತಾಲೂಕುಗಳು ಅನುಕ್ರಮವಾಗಿ ಶೇ. 20.59 ಮತ್ತು ಶೇ. 21.75 ಹೆಚ್ಚಳವನ್ನು ದಾಖಲಿಸಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ 2001ರಲ್ಲಿ 2.30 ಲಕ್ಷ ಇದ್ದದ್ದು 2011ರಲ್ಲಿ 2.67 ಲಕ್ಷಕ್ಕೆ ಏರಿತ್ತು.

ಕೃಷಿ ಜನಗಣತಿ (2011) ಪ್ರಕಾರ ಜಿಲ್ಲೆಯ ಭೂಮಿಯ ಶೇ. 55ರಷ್ಟು ಕೃಷಿ ಬಳಕೆಯಲ್ಲಿದೆ, ಭೂ ಹಿಡುವಳಿಗಳಲ್ಲಿ ಶೇ. 87 ರಷ್ಟು ಸಣ್ಣ ಮತ್ತು ಅತಿ ಸಣ್ಣ ವರ್ಗಗಳ ಅಡಿಯಲ್ಲಿ ಬರುತ್ತದೆ. ಜಿಲ್ಲೆಯಲ್ಲಿ 74 ಭಾರಿ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳಿದ್ದು, ಅವುಗಳ ಒಟ್ಟು ಬಂಡವಾಳ ಹೂಡಿಕೆ 1557 ಕೋಟಿ ರೂಪಾಯಿಗಳು ಆಗಿದೆ. ಜಿಲ್ಲೆಯಲ್ಲಿ 12,988 ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ವಾಣಿಜ್ಯೋದ್ಯಮ ಘಟಕಗಳಿದ್ದು ಅವು ಬಹುತೇಕ ಟೆಕ್ಸ್‌ಟೈಲ್ಸ್ ಆಧಾರಿತವಾಗಿದ್ದು, ಸುಮಾರು 56,000 ಕಾರ್ಮಿಕರ ಸಂಖ್ಯೆಯನ್ನು ಒಳಗೊಂಡಿದೆ.

ಮಾನವ ಅಭಿವೃದ್ಧಿ ಸೂಚ್ಯಂಕ ಒಂದು ಸಂಯುಕ್ತ ಸೂಚ್ಯಂಕವಾಗಿದ್ದು ಶಿಕ್ಷಣ, ಜೀವನಮಟ್ಟ ಮತ್ತು ಆರೋಗ್ಯದಲ್ಲಿನ ಸಾಧನೆಗಳನ್ನು ಮಾಪನ ಮಾಡಲು ರಚನೆಯಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಶಿಕ್ಷಣ, ಜೀವನಮಟ್ಟ ಮತ್ತು ಆರೋಗ್ಯಗಳ ಪರಿಮಿತಿಗಳ ಜ್ಯಾಮಿತಿಯ ಸರಾಸರಿ ತೆಗೆದುಕೊಂಡು ಲೆಕ್ಕಮಾಡಲಾಗಿದೆ. ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವನ್ನು ಲೆಕ್ಕಮಾಡಲು ಮೂರು ಆಯಾಮಗಳ ಸಮಾನತೆಯ ಪರಿಮಿತಿಗಳನ್ನು ಆಧಾರವಾಗಿ ತೆಗೆದುಕೊಳ್ಳಲಾಗಿದೆ. ಅವು ಯಾವುವೆಂದರೆ ಸಂತಾನೋತ್ಪತ್ತಿ ಆರೋಗ್ಯ, ಸಬಲೀಕರಣ ಮತ್ತು ಕಾರ್ಮಿಕ ಮಾರುಕಟ್ಟೆ. ಮಕ್ಕಳ ಅಭಿವೃದ್ಧಿ ಸೂಚ್ಯಂಕ, ನಗರಾಭಿವೃದ್ಧಿ ಸೂಚ್ಯಂಕ, ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ ಮತ್ತು ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕಗಳಂತಹ ಇತರ ಸೂಚ್ಯಂಕಗಳನ್ನು ಲೆಕ್ಕ ಮಾಡಲು ಸಂಬಂಧಪಟ್ಟ ಅಭಿವೃದ್ಧಿ ಪರಿಮಿತಿಗಳ ಸರಾಸರಿ ತೆಗೆದುಕೊಳ್ಳಲಾಗಿದೆ. ಈ ಪ್ರತಿಯೊಂದು ಸೂಚ್ಯಂಕವನ್ನು ಲೆಕ್ಕಮಾಡಲು ಬೇಕಾದ ವ್ಯತ್ಯಯಗಳನ್ನು ಆಯ್ಕೆಮಾಡುವಾಗ ಈ ವ್ಯತ್ಯಯಗಳ ದತ್ತಾಂಶವು ತಾಲೂಕು ಮಟ್ಟದಲ್ಲಿ ಇವೆಯೇ ಮತ್ತು ಸಂಗತವೇ ಎಂಬುದನ್ನೂ ಸಹ ನೋಡಲಾಗಿದೆ.

ನೆಲಮಂಗಲ ತಾಲೂಕು ಜಿಲ್ಲೆಯಲ್ಲೇ ಮೊದಲ ಸ್ಥಾನದಲ್ಲಿದ್ದು, ಅದರ ಮಾನವ ಅಭಿವೃದ್ಧಿ ಸೂಚ್ಯಂಕ 0.766 ಆಗಿದೆ. ದೇವನಹಳ್ಳಿ ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳು ಅನುಕ್ರಮವಾಗಿ 0.685, 0.637, 0.616 ಮಾನವ ಅಭಿವೃದ್ಧಿ ಸೂಚ್ಯಂಕ ಹೊಂದಿವೆ. ನೆಲಮಂಗಲ ತಾಲೂಕು ಅತಿ ಹೆಚ್ಚು ತಲಾ ಆದಾಯ (78,875.85 ರೂಗಳು) ಮತ್ತು ಕೃಷಿಯೇತರ ಕಾರ್ಮಿಕರ ಸಂಖ್ಯೆಯನ್ನು (ಶೇ.60.69)ಹೊಂದಿದ್ದು ಸುರಕ್ಷಿತವಾದ ಅಡುಗೆ ಇಂಧನ ಬಳಸುವ ಕುಟುಂಬಗಳ ಸಂಖ್ಯೆ (ಶೇ.40.09), ಶೌಚಾಲಯಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆ (ಶೇ.84.45), ಸುರಕ್ಷಿತ ಕುಡಿಯುವ ನೀರು ಬಳಸುವ ಕುಟುಂಬಗಳ ಸಂಖ್ಯೆ (ಶೇ.89.18), ಮತ್ತು ವಿದ್ಯುತ್ ಸಂಪರ್ಕ ಹೊಂದಿರುವ ಕುಟುಂಬಗಳ ಸಂಖ್ಯೆ (ಶೇ.96.17) ಗಳ ವಿಷಯದಲ್ಲಿ ಪ್ರಥಮ ಸ್ಥಾನದಲ್ಲಿದೆ. ಆದರೆ ನೆಲಮಂಗಲದಲ್ಲಿ ತಾಯಂದಿರ ಮರಣ ಪ್ರಮಾಣ ಹೆಚ್ಚಿದೆ (1 ಲಕ್ಷ ಜೀವಂತ ಜನನಗಳಲ್ಲಿ 150 ತಾಯಂದಿರ ಮರಣ). ದೇವನಹಳ್ಳಿ ತಾಲೂಕು ಜಿಲ್ಲೆಯಲ್ಲಿ ಆರೋಗ್ಯ ಮತ್ತು ಶಿಕ್ಷಣ ವಿಷಯಗಳಲ್ಲಿ ಉತ್ತಮ ಸಾಧನೆ ಮಾಡಿದೆಯಾದರೂ ತಲಾ ಆದಾಯ ಅತ್ಯಂತ ಕಡಿಮೆ (40,093 ರೂಗಳು)ಇದೆ . ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳ ಕಳಪೆ ಸಾಧನೆಗೆ ಹೆಚ್ಚಿನ ಶಿಶು ಮರಣ ಪ್ರಮಾಣ, ಗಣನೀಯವಾಗಿ ಕಡಿಮೆಯಿರುವ ಒಟ್ಟು ಶಾಲಾ ದಾಖಲಾತಿ ಅನುಪಾತ (ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಮಟ್ಟದಲ್ಲಿ) ಮತ್ತು ಜೀವನ ಮಟ್ಟದ ಸೂಚಕದಲ್ಲಿ ಮಾಡಿರುವ ಕಡಿಮೆ ಸಾಧನೆಗಳೇ ಕಾರಣ. ಈ ಮೂರೂ ತಾಲೂಕುಗಳಲ್ಲಿ ತಲಾ ಆದಾಯವು ಉತ್ತಮವಾಗಿದ್ದು ತಾಯಂದಿರ ಮರಣ ಪ್ರಮಾಣ ಕಡಿಮೆಯಿದೆ. ಇದು, ಸಂಪನ್ಮೂಲಗಳ ಹಂಚಿಕೆಯಲ್ಲಿ ದಕ್ಷತೆ ಮತ್ತು ಮಾನವ ಅಭಿವೃದ್ಧಿಯ ಎಲ್ಲಾ ಪರಿಮಿತಿಗಳನ್ನು ಅಭಿವೃದ್ಧಿಪಡಿಸಲು ಸೂಕ್ತ ಕ್ರಮಗಳ ಅಗತ್ಯವನ್ನು ಒತ್ತಿ ಹೇಳುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಉತ್ತಮ ಮಕ್ಕಳ ಅಭಿವೃದ್ಧಿ ಹೊಂದಿದ, ಲಿಂಗ ಸಮಾನತೆ ಹೆಚ್ಚಿರುವ, ಮಾನವ ಅಭಿವೃದ್ಧಿಯಲ್ಲಿ ಮಧ್ಯಮ-ಸಾಧನೆ ಮಾಡಿರುವ, ತಾಲೂಕು ಅಭಿವೃದ್ಧಿ ಮತ್ತು ಆಹಾರ ಭದ್ರತೆ ಸೂಚಕಗಳ ಅಭಿವೃದ್ಧಿಯಲ್ಲಿ ಕಡಿಮೆಯಿರುವ ಜಿಲ್ಲೆ ಎನ್ನಬಹುದು. ಜಿಲ್ಲೆಯಲ್ಲಿ ನೆಲಮಂಗಲ ಮತ್ತು ದೇವನಹಳ್ಳಿ ಎರಡು ಉತ್ತಮ ಸಾಧನೆ ಮಾಡಿರುವ ತಾಲೂಕುಗಳು. ಉಳಿದೆರಡು ತಾಲೂಕುಗಳಿಗಿಂತ ಇವು ಬಹಳಷ್ಟು ಅಭಿವೃದ್ಧಿ ಪರಿಮಿತಿಗಳಲ್ಲಿ

ಗಣನೀಯವಾಗಿ ಉತ್ತಮವಾಗಿವೆ. ಶಿಕ್ಷಣದ ಅಡಿಯಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಮಟ್ಟಗಳಲ್ಲಿ ಶಾಲಾ ದಾಖಲಾತಿ ಪ್ರಮಾಣದಲ್ಲಿ ಲಿಂಗ ಸಮಾನತೆ ಅತ್ಯಂತ ಹೆಚ್ಚಿದೆ. ಆದರೆ, ಉನ್ನತ ಶಿಕ್ಷಣದಲ್ಲಿ ಲಿಂಗ ತಾರತಮ್ಯ ಹೆಚ್ಚಿದೆ. ಶಿಕ್ಷಣದ ಹಕ್ಕಿನ ಮಾನದಂಡಗಳಿಂದಾಗಿ ಪ್ರಾಥಮಿಕ ಮಟ್ಟದಲ್ಲಿ ಲಭ್ಯತೆ, ದಾಖಲಾತಿ ಮತ್ತು ಪರಿವರ್ತನ ಪ್ರಮಾಣ ಹೆಚ್ಚಿವೆ. ಆದರೆ ಪುರುಷರಿಗೆ ಹೋಲಿಸಿದರೆ,ಅದರಲ್ಲೂ ವಿಶೇಷವಾಗಿ ಕಡುಬಡವರ ಕುಟುಂಬದವರಿಗೆ ಉನ್ನತ ಶಿಕ್ಷಣದಲ್ಲಿ ಮಹಿಳೆಯರ ದಾಖಲಾತಿ ಕಡಿಮೆಯಿದೆ. ಇದಕ್ಕಿಂತ ಮಿಗಿಲಾಗಿ ಶಿಕ್ಷಣದ ಎಲ್ಲ ಮಟ್ಟಗಳಲ್ಲಿ ಖಾಸಗಿ ಸಂಸ್ಥೆಗಳ ಸಂಖ್ಯೆ ಹೆಚ್ಚುತ್ತಿರುವುದು ಮತ್ತು ಜಿಲ್ಲೆಯಲ್ಲಿ ಸರ್ಕಾರ ಶಿಕ್ಷಣಕ್ಕೆ ಮಾಡುವ ವೆಚ್ಚ ಇಳಿಮುಖವಾಗುತ್ತಿರುವುದು, ಬಹುಶಃ ಬಡ ಮಕ್ಕಳ, ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳ ದಾಖಲಾತಿ ಕಡಿಮೆಯಾಗಲು ಕಾರಣವಾಗಿರಬಹುದು.

ಆರೋಗ್ಯ ಮತ್ತು ಪೌಷ್ಟಿಕತೆಯ ಸೂಚ್ಯಂಕದ ವಿಷಯಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಒಂದು ವಿಭಿನ್ನವಾದ ಚಿತ್ರವನ್ನೇ ನೀಡುತ್ತದೆ. ಸಾಂಸ್ಥಿಕ ಹೆರಿಗೆಗಳು, ಪ್ರಜನನ ಆರೈಕೆ ಸೇವೆಗಳು, ಪೂರ್ಣಪ್ರಮಾಣದ ರೋಗನಿರೋಧಕ ಚುಚ್ಚುಮದ್ದನ್ನು ಪಡೆದ ಮಕ್ಕಳ ಪ್ರಮಾಣ ಮತ್ತು ಅಂಗನವಾಡಿ ಕೇಂದ್ರಗಳ ಸಂಖ್ಯೆ ಜಿಲ್ಲೆಯಲ್ಲಿ ಸಾಕಷ್ಟು ಉತ್ತಮವಾಗಿಯೇ ಇದೆ. ಆದರೆ ತೀವ್ರ ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿಯರು, ಕಡಿಮೆ ತೂಕದ ಶಿಶುಗಳ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣ ಜಿಲ್ಲೆಯಲ್ಲಿ ಹೆಚ್ಚಿದೆ. ತಾಲೂಕು ಮಟ್ಟದ ಅಂಕಿ-ಸಂಖ್ಯೆಗಳನ್ನ ಸೂಕ್ಷ್ಮವಾಗಿ ಗಮನಿಸಿದರೆ ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳಲ್ಲಿ ರಕ್ತ ಹೀನತೆಯಿಂದ ಬಳಲುವ ಗರ್ಭಿಣಿಯರ ಪ್ರಮಾಣ ಹೆಚ್ಚಿದೆಯಾದರೂ ಇದು ತಾಯಂದಿರ ಮರಣ ಪ್ರಮಾಣದಲ್ಲಿ ಪ್ರತಿಬಿಂಬಿಸುವುದಿಲ್ಲ. ಆಶ್ಚರ್ಯವೆಂದರೆ ದೇವನಹಳ್ಳಿ ಮತ್ತು ನೆಲಮಂಗಲಗಳಲ್ಲಿ ತಾಯಂದಿರ ಮರಣ ಪ್ರಮಾಣ ಹೆಚ್ಚಿದ್ದು ಇಲ್ಲಿ ರಕ್ತ ಹೀನತೆಯಿಂದ ಬಳಲುವ ಗರ್ಭಿಣಿಯರ ಪ್ರಮಾಣ ಉಳಿದೆರಡು ತಾಲೂಕುಗಳಿಗಿಂತ ಕಡಿಮೆಯಿದೆ. ಈ ಅಂಶಗಳು ಜಿಲ್ಲೆಯಲ್ಲಿ ಒದಗಿಸುತ್ತಿರುವ ಸೇವೆಗಳ ಗುಣಮಟ್ಟ ಮತ್ತು ಸಮರ್ಪಕತೆಯ ಕುರಿತಾದ ಪ್ರಶ್ನೆಗಳಿಗೆ ಕಾರಣವಾಗುತ್ತವೆ. ಪ್ರತಿ ಜಿಲ್ಲೆಯಲ್ಲಿ 8000 ಜನರಿಗೆ ಕೇವಲ ಒಬ್ಬ ವೈದ್ಯರು ಮತ್ತು 10000 ಜನರಿಗೆ ಒಬ್ಬ ನರ್ಸ್ ಇದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ಪ್ರತಿ 1000 ಜನರಿಗೆ ಒಬ್ಬ ವೈದ್ಯರು ಮತ್ತು 3 ನರ್ಸುಗಳು/ದಾದಿಯರು ಇರಬೇಕು ಎಂದು ಶಿಫಾರಸ್ಸು ಮಾಡುತ್ತದೆ. ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳ ಮತ್ತು ಅಂಗನವಾಡಿ ಕಾರ್ಯಕರ್ತರ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳಗಳಿಗೆ ಹೊಂದಾಣಿಕೆ ಇಲ್ಲ. ಜಿಲ್ಲೆಯ ಜನರಿಗೆ ಉತ್ತಮ ಮತ್ತು ಪರಿಣಾಮಕಾರಿ ಆರೋಗ್ಯ ಸೇವೆಗಳನ್ನು ಒದಗಿಸಲು ಅಗತ್ಯವಾದ ಭೌತಿಕ ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸಬೇಕಾದ ಅಗತ್ಯ ಇದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಾರ್ಮಿಕರ ಸಂಖ್ಯೆ 2001ರಲ್ಲಿ 4 ಲಕ್ಷ ಇದ್ದದ್ದು 2011 ರಲ್ಲಿ 4.6 ಲಕ್ಷಕ್ಕೆ ಏರಿದೆ ಅಂದರೆ ವರ್ಷಕ್ಕೆ ಶೇ. 1.61 ಹೆಚ್ಚಳವಾಗಿದೆ. ಇದೇ ಅವಧಿಯಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣ ಶೇ. 53 ರಿಂದ 52 ಕ್ಕೆ ಇಳಿದಿದೆ. ಹೊಸಕೋಟೆ ತಾಲೂಕಿನಲ್ಲಿ ಶೇ. 2.8 ಅಂಕಗಳಷ್ಟು ದುಡಿಮೆ ಸಹಭಾಗಿತ್ವ ಪ್ರಮಾಣದಲ್ಲಿ ಇಳಿಕೆ ಆಗಿರುವುದು ಇದಕ್ಕೆ ಮುಖ್ಯ ಕಾರಣ. ನಗರ ವಲಯಗಳಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣ ಹೆಚ್ಚಿದ್ದರೂ ಗ್ರಾಮೀಣ ವಲಯಗಳಲ್ಲಿ ಕಡಿಮೆಯಾಗಿದೆ. ಗ್ರಾಮೀಣ ವಲಯದಲ್ಲಿ ಕೃಷಿ ಕ್ಷೇತ್ರದಲ್ಲಿ ಸುಮಾರು ಶೇ. 71 ರಷ್ಟು ಕಾರ್ಮಿಕರಿದ್ದಾರೆ. ಕೃಷಿ ಕೆಲಸದಿಂದ ಬರುವ ವಾರದ ಸರಾಸರಿ ಕೂಲಿ 513.70 ರೂ.ಗಳು ಆಗಿದ್ದು, ಇದು ಕೃಷಿಯೇತರ ಕೂಲಿಗಿಂತ (927.40) ಕಡಿಮೆ. ನಗರದಲ್ಲಿ ತೃತೀಯ ವಲಯ(ಸೇವಾ ವಲಯ) ಬಹುಪಾಲು ಜನರನ್ನು ತೊಡಗಿಸಿಕೊಂಡಿದೆ ಮತ್ತು ವಾರದ ಸರಾಸರಿ ಕೂಲಿ 1494.20 ರೂ.ಗಳು ಆಗಿರುತ್ತದೆ.

ಆದಾಯದ ವಲಯವಾರು ಹಂಚಿಕೆಯನ್ನು ವಿಶ್ಲೇಷಿಸಿದಾಗ ಪ್ರಾಥಮಿಕ ವಲಯದ ಕೊಡುಗೆ 2004-05ರಲ್ಲಿ ಶೇ. 15.67 ಇದ್ದದ್ದು 2008-09ರಲ್ಲಿ ಶೇ. 13.43 ಕ್ಕೆ ಇಳಿದಿರುವುದು ತಿಳಿಯುತ್ತದೆ. ಮತ್ತೊಂದೆಡೆ ದ್ವಿತೀಯ ವಲಯದ ಪಾಲು ಶೇ. 35.65 ರಿಂದ ಶೇ.37 ಕ್ಕೆ ಏರಿದೆ. ತೃತೀಯ ವಲಯ ಜಿಲ್ಲೆಯ ನಿವ್ವಳ ಆಂತರಿಕ ಉತ್ಪನ್ನದ ಶೇ.49.56 ಕ್ಕೆ ಕಾರಣವಾಗಿದೆ ಮತ್ತು ಇದು 2008-09ರಲ್ಲಿ ಶೇ. 1 ರಷ್ಟು ಏರಿಕೆ ಕಂಡಿದೆ. 2008-09ರಲ್ಲಿ ನೆಲಮಂಗಲ ತಾಲೂಕಿನಲ್ಲಿ ತಲಾ ಆದಾಯ ಅತಿ ಹೆಚ್ಚು ಇದ್ದು(78,875 ರೂ.ಗಳು), ನಂತರದ ಸ್ಥಾನವನ್ನು ಕ್ರಮವಾಗಿ ದೊಡ್ಡಬಳ್ಳಾಪುರ (76,080 ರೂಗಳು), ಹೊಸಕೋಟೆ (75,749 ರೂಗಳು) ಮತ್ತು ದೇವನಹಳ್ಳಿ (40,092 ರೂಗಳು)ತಾಲೂಕುಗಳು ಪಡೆದುಕೊಂಡಿವೆ. ರಾಷ್ಟ್ರೀಯ ಮಾದರಿ ಸರ್ವೇಕ್ಷಣ 66ನೇ ಸುತ್ತಿನ ದತ್ತಾಂಶವನ್ನು ಬಳಸಿಕೊಂಡು ಆದಾಯ ಅಸಮಾನತೆಗಳನ್ನು ಲೆಕ್ಕಮಾಡಿದಾಗ ಗಿನಿ ಸೂಚಕ (Gini coefficient) ಗ್ರಾಮೀಣ ಭಾಗಗಳಿಗಿಂತ (0.15) ನಗರ ಭಾಗಗಳಲ್ಲಿ ಆದಾಯ ಅಸಮಾನತೆ (0.3) ಹೆಚ್ಚು ಎಂದು ತೋರಿಸುತ್ತದೆ. ಆದರೆ ಇಡೀ ರಾಜ್ಯಕ್ಕೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆದಾಯ ಅಸಮಾನತೆ ಕಡಿಮೆ ಇದೆ.

ಜೀವನಮಟ್ಟದ ವಿಷಯಕ್ಕೆ ಬಂದರೆ, 2001-2011 ರ ದಶಕದಲ್ಲಿ ಎಲ್ಲಾ 4 ತಾಲೂಕುಗಳಲ್ಲಿ ಶಾಶ್ವತ ಮನೆಗಳ ಒಡೆತನ ಹೆಚ್ಚಿದೆ, ಸುರಕ್ಷಿತ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸಂಪರ್ಕ, ಬ್ಯಾಂಕಿಂಗ್ ಸೇವೆಗಳು, ಮತ್ತು ಗೃಹಬಳಕೆ ವಸ್ತುಗಳು (ಟಿವಿ, ಕಂಪ್ಯೂಟರ್, ದ್ವಿ-ಚಕ್ರ ಮತ್ತು ನಾಲ್ಕು ಚಕ್ರಗಳ ವಾಹನಗಳು) ಇರುವ ಕುಟುಂಬಗಳ ಪ್ರಮಾಣ ಹೆಚ್ಚಿವೆ. ಜಿಲ್ಲೆಯ ಉತ್ತಮ ಸಾಧನೆಗೆ ಈ ಕೆಳಗಿನವುಗಳು ಕಾರಣವೆನ್ನಬಹುದು, ಶಾಶ್ವತ ಮನೆಗಳು ಮತ್ತು ಶುದ್ಧವಾದ ಕುಡಿಯುವ ನೀರು, ಸ್ವಚ್ಛವಾದ ಅಡುಗೆ ಇಂಧನ, ಮತ್ತು ನೈರ್ಮ್ಯಲ್ಯಗಳಂತಹ ಜೀವನಮಟ್ಟ ಸೂಚಕಗಳಲ್ಲಿ ಗಣನೀಯವಾದ ಹೆಚ್ಚಳ, ಮತ್ತು ಕರ್ನಾಟಕಕ್ಕೆ ಹೋಲಿಸಿದರೆ ಈ ಜಿಲ್ಲೆಯಲ್ಲಿ ಕಳೆದ ದಶಕದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಂತರ ಗಣನೀಯವಾಗಿ ಕಡಿಮೆಯಾಗಿದೆ. ಆದರೂ ಈಗಲೂ, ವಿಶೇಷವಾಗಿ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲೂಕುಗಳಲ್ಲಿ, ವಸತಿ ಪಡೆಯಲು ಸರ್ಕಾರದ ಸಹಾಯ ಅಗತ್ಯವಿರುವ ಕುಟುಂಬಗಳ ಸಂಖ್ಯೆ ಸಾಕಷ್ಟಿವೆ. ಈ ಎರಡು ತಾಲೂಕುಗಳಲ್ಲಿ ಸರ್ಕಾರ ವಸತಿರಹಿತರಿಗೆ ಮನೆ ನಿವೇಶಗಳನ್ನು ನೀಡಲು ಸಾಧ್ಯವಾಗಿಲ್ಲ.. ಈ ವಿಷಯದ ಬಗ್ಗೆ ಗಮನ ಹರಿಸಬೇಕಾಗಿದೆ.

ಲಿಂಗ ಸಂಬಂಧಿತ ಅಸಮಾನತೆ ಸೂಚ್ಯಂಕವು ಪುರುಷ ಮತ್ತು ಮಹಿಳೆ ನಡುವೆ ಅಸಮಾನತೆಯನ್ನು ಅಳೆಯುತ್ತದೆ. ದೇವನಹಳ್ಳಿ ತಾಲೂಕು 0.0710 (ಅತಿ ಹೆಚ್ಚು ) ಮತ್ತು ಹೊಸಕೋಟೆ ತಾಲೂಕು 0.0919 (ಅತಿ ಕಡಿಮೆ) ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಹೊಂದಿವೆ. ಈ ಸೂಚ್ಯಂಕದ ಪ್ರಕಾರ ಜಿಲ್ಲೆಯಲ್ಲಿ ಲಿಂಗ ಅಸಮಾನತೆ ಕಡಿಮೆ ಇದೆ. ಆದರೆ ಪ್ರತಿಯೊಂದು ಸೂಚಕವನ್ನೂ ಸೂಕ್ಷ್ಮವಾಗಿ ಗಮನಿಸಿದರೆ ವಿಭಿನ್ನ ಚಿತ್ರಣ ಸಿಗುತ್ತದೆ. ಕಾರಣ ಸೂಚ್ಯಂಕವು ಲಿಂಗ ಅಸಮಾನತೆಗಳಲ್ಲಿ ಅಂತರ-ತಾಲೂಕು ವ್ಯತ್ಯಯಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಪ್ರತಿ ತಾಲೂಕಿನಲ್ಲಿ ಪುರುಷ-ಮಹಿಳೆ ಅಸಮಾನತೆ ಭಾರಿಯಾಗಿದ್ದರೂ ಈ ಅಂತರ-ತಾಲೂಕು ವ್ಯತ್ಯಯಗಳು ಕಡಿಮೆಯಿದ್ದರೆ ಲೆಕ್ಕಮಾಡಿದ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಕಡಿಮೆಯಿರಬಹುದು. ಅಥವಾ, ಬೇರೆ ರೀತಿಯಲ್ಲಿ ಹೇಳುವುದಾದರೆ ಎಲ್ಲ ತಾಲೂಕುಗಳಲ್ಲಿ ಲಿಂಗ ತಾರತಮ್ಯ ಹೆಚ್ಚಿದ್ದರೆ ಅಸಮಾನತೆ ಸೂಚ್ಯಂಕ ಕಡಿಮೆ ತೋರಿಸುತ್ತದೆ, ಕಾರಣ ಅಂತರ-ತಾಲೂಕು ವ್ಯತ್ಯಾಸಗಳು ಕಡಿಮೆ ಇರುವುದು.

ಕೆಲಸದಲ್ಲಿ ಭಾಗವಹಿಸುವ ಕಾರ್ಮಿಕರ ಮಹಿಳೆ ಮತ್ತು ಪುರುಷರ ನಡುವಿನ ಅನುಪಾತ 2:3 ಇದೆ. ಮಹಿಳೆಯರು ಹೆಚ್ಚಾಗಿ ಗ್ರಾಮೀಣ ಭಾಗಗಳಲ್ಲಿ ಕಡಿಮೆ ಕೂಲಿಯ ಕೃಷಿ ಕೆಲಸಗಳಲ್ಲಿ ಇಲ್ಲವೆ ನಗರ ಭಾಗಗಳಲ್ಲಿ ಮನೆಗೆಲಸಗಳಲ್ಲಿ ತೊಡಗಿರುತ್ತಾರೆ. ಗ್ರಾಮೀಣ ಭಾಗಗಳಲ್ಲಿ ಮಹಿಳೆಯ ಕೂಲಿ ಪುರುಷನ ಕೂಲಿಯ ಅರ್ಧದಷ್ಟು ಇರುವುದು ಕಂಡುಬಂದಿದೆ. ನಗರದಲ್ಲಿ ಪುರುಷನ ಕೂಲಿ ಮಹಿಳೆಯ ಕೂಲಿಯ ಶೇ.112 ರಷ್ಟು ಇದೆ. ಮಹಿಳೆಯರ ನಿರುದ್ಯೋಗ ಪ್ರಮಾಣವೂ ಬಹಳ ಹೆಚ್ಚಿದೆ. ಜಿಲ್ಲೆಯಲ್ಲಿನ ಒಟ್ಟು ಭೂ ಹಿಡುವಳಿಯಲ್ಲಿ ಮಹಿಳೆಯರ ಪಾಲು 1/5 ಕ್ಕಿಂತ ಕಡಿಮೆ. ಆದರೆ ಮಹಿಳಾ ಸಾಕ್ಷರತೆ ಪ್ರಮಾಣ ಮತ್ತು ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಕಳೆದ ಒಂದು ದಶಕದಲ್ಲಿ ಏರಿಕೆ ಕಂಡಿದೆ. ಇವು ಕೇವಲ ಆರಂಭಿಕ ಹೆಜ್ಜೆಗಳು ಮಾತ್ರ. ಜಿಲ್ಲೆಯು ಲಿಂಗ ಸಮಾನತೆಗೆ ಇನ್ನೂ ಬಹಳ ದಾರಿ ಕ್ರಮಿಸುವುದಿದೆ.

ಕೆಲವೊಂದು ಕ್ಷೇತ್ರಗಳಲ್ಲಿ ಭಾರಿ ಸುಧಾರಣೆ ಕಂಡಿದ್ದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಇನ್ನೂ ಪರಿಧಿಯಲ್ಲೇ ಇದ್ದಾರೆ. ಹೊಸಕೋಟೆ ತಾಲೂಕಿನಲ್ಲಿ ದಲಿತ ಕುಟುಂಬಗಳ ಸರ್ವೇಕ್ಷಣೆಯ ಕಿರು ಅಧ್ಯಯನವು ತಾರತಮ್ಯ ಸಡಿಲವಾಗಿದೆ ಎಂದು ತೋರಿದರೂ ದಲಿತರ ಕುರಿತಾದ ವಿಷಯದಲ್ಲಿ ಅಪವಿತ್ರ ಭಾವನೆಗಳು ಈಗಲೂ ಕೆಲವು ಮಜಲುಗಳಲ್ಲಿ ಇದೆ ಎಂಬುದನ್ನು ಹೊರಗೆಡಹಿದೆ. ಭೂ ಬಳಕೆಯ

[1] ಭಾರತಕ್ಕೆ ಸಾರ್ವತ್ರಿಕ ಆರೋಗ್ಯ ರಕ್ಷಣೆ ಕುರಿತು ಉನ್ನತ ಮಟ್ಟದ ತಜ್ಞರ ತಂಡದ ವರದಿ(2011)–http://planningcommission.nic.in/reports/genrep/rep_uhc0812.pdf

ವಿಧಾನದಲ್ಲಿ ಆಗಿರುವ ಬದಲಾವಣೆಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನವರ್ಗಗಳ ಮೇಲೆ ಪ್ರತಿಕೂಲ ಪರಿಣಾಮಗಳಾಗಿವೆ ಎಂದು ತೋರುತ್ತದೆ. ದೇವನಹಳ್ಳಿ ತಾಲೂಕಿನಲ್ಲಿ 2005-06 ಮತ್ತು 2010-11 ನಡುವಿನ 5 ವರ್ಷಗಳ ಅವಧಿಯಲ್ಲಿ ಪರಿಶಿಷ್ಟ ಜಾತಿ ಭೂ ಹಿಡುವಳಿಗಳ ಸಂಖ್ಯೆ 600 ರಷ್ಟು, ಅಂದರೆ 880 ಹೆಕ್ಟೇರುಗಳು ಕಡಿಮೆಯಾಗಿದೆ ಎಂದು ಕಂಡು ಬಂದಿದೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಭೂ ಹಿಡುವಳಿಗಳು ಕಡಿಮೆಯಾಗಿರುವುದು ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಕಂಡುಬರುವುದು. 'ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಭೂ ಬಳಕೆಯಲ್ಲಿ ಬದಲಾವಣೆಗಳು' ಎಂಬ ಕಿರು ಕ್ಷೇತ್ರದ ಅಧ್ಯಯನ ತೋರುವಂತೆ ಕೃಷಿಕರು, ವಿಶೇಷವಾಗಿ ಸಣ್ಣ ಮತ್ತು ಅತಿಸಣ್ಣ ಹಿಡುವಳಿದಾರರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಿಡುವಳಿದಾರರು, ಸರ್ಕಾರದ ಭೂಸ್ವಾಧೀನ ಮತ್ತು ಬಳಕೆಯ ಕಾರ್ಯನೀತಿಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಹೊಂದಿರುವುದಿಲ್ಲ. ಇಷ್ಟೇ ಅಲ್ಲದೆ, ಸರ್ಕಾರ ಈ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳದಿರುವುದರಿಂದ ತಮ್ಮನ್ನು ದೂರಮಾಡಲಾಗಿದೆ ಎಂದು ಈ ಹಿಡುವಳಿದಾರರು ಭಾವಿಸಿದ್ದಾರೆ. ನೆರವಿನ ಕೊರತೆ, ಭೂಮಿಯ ವಾಸ್ತವ ಮಾರುಕಟ್ಟೆ ಬೆಲೆಯ ಮಾಹಿತಿ ಇಲ್ಲದಿರುವುದು ಮತ್ತು ಕಾರ್ಯನೀತಿ ಮಾಹಿತಿಯಿಂದ ದೂರವಿರಿಸಿರುವುದು, ಎಲ್ಲವೂ ಸೇರಿ ಸಮಾಜದ ದುರ್ಬಲ ವರ್ಗಗಳನ್ನು, ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳನ್ನು ರಿಯಲ್ ಎಸ್ಟೇಟ್ ಮಧ್ಯವರ್ತಿಗಳು/ಕೊಳ್ಳುಗರು ಶೋಷಿಸುವ ಸಾಧ್ಯತೆಗಳನ್ನು ಹೆಚ್ಚಿಸುತ್ತವೆ.

ಭಾರತದಲ್ಲೇ ಅತ್ಯಂತ ತ್ವರಿತವಾಗಿ ಬೆಳೆಯುತ್ತಿರುವ ಬೆಂಗಳೂರು ಮಹಾನಗರದ ಸಾಮಿಪ್ಯತೆಯ ಕಾರಣ ಈ ಜಿಲ್ಲೆಯ ಭೂಬಳಕೆಯ ವಿಧಾನಗಳಲ್ಲಿ ಬದಲಾವಣೆ ಮತ್ತು ಸರ್ಕಾರ ಹಾಗೂ ಖಾಸಗಿಯವರಿಂದಲೂ ಭೂ ಸ್ವಾಧೀನವಾಗುತ್ತಿರುವುದು ಕಂಡುಬಂದಿದೆ. ಈ ಸಾಮಿಪ್ಯದಿಂದ ಜಿಲ್ಲೆಯ ಜನರಿಗೆ ಶೈಕ್ಷಣಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅವಕಾಶಗಳು ಹೆಚ್ಚಾಗಿದ್ದು ಜೀವನಮಟ್ಟ ಸುಧಾರಿಸಲು ಸಹಕರಿಸುತ್ತದೆ. ಆದರೆ, ಆಹಾರ ಬೆಲೆಗಳು ಏರಲು, ಶುದ್ಧ ಕುಡಿಯುವ ನೀರು ಮತ್ತು ಗಾಳಿಯ ಅಲಭ್ಯತೆ, ಮಾರುಕಟ್ಟೆ ಶಕ್ತಿಗಳು ಜನರನ್ನು ದುರ್ಬಲಗೊಳಿಸಲೂ ಕಾರಣವಾಗುತ್ತದೆ. ಆದ್ದರಿಂದ ಸರ್ಕಾರವು ಈ ಜಿಲ್ಲೆಯ ಯೋಜನೆ ರೂಪಿಸುವಾಗ, ಅದು ಬೆಂಗಳೂರು ನಗರದ ಸಾಮಿಪ್ಯತೆಯ ಪ್ರಯೋಜನಗಳನ್ನೂ ಉಳಿಸಿಕೊಂಡು ಅದರ ನಕಾರಾತ್ಮಕ ಪ್ರಭಾವಗಳನ್ನು ತಪ್ಪಿಸುವಂತಿರಬೇಕಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇನ್ನೂ ಉತ್ತಮ ನಗರಾಡಳಿತದ ಅಗತ್ಯವನ್ನು ಒತ್ತಿ ಹೇಳುತ್ತವೆ. ನಗರಾಡಳಿತದ ಒಂದು ಮುಖ್ಯ ಸೂಚಕದ ಆದಾಯ ಕ್ರೋಢೀಕರಣದ ಸಾಮರ್ಥ್ಯ ತೋರುವಂತೆ ಜಿಲ್ಲೆಯಲ್ಲಿನ 5 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂರರ ಆಸ್ತಿ ತೆರಿಗೆ ಸಾಮರ್ಥ್ಯ ಬಹಳ ಹೆಚ್ಚಿದೆ. ಆದರೆ ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಂಬಂಧಿತ ಯೋಜನೆಗಳಲ್ಲಿ ಕಡಿಮೆ ಹಣ ಖರ್ಚು ಮಾಡಲಾಗುತ್ತಿದೆ. ಎಲ್ಲ ನಗರ ಸ್ಥಳೀಯ ಸಂಸ್ಥೆಗಳನ್ನು ಒಟ್ಟಾಗಿ ತೆಗೆದುಕೊಂಡರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿಧಿಗಳ ಶೇ.42 ರಷ್ಟು ಬಳಕೆಯಾಗದೆ ಉಳಿದಿರುವುದು ಆತಂಕಕಾರಿಯಾಗಿದೆ. ಹೊಸಕೋಟೆ ಪುರಸಭೆಯಲ್ಲಿ ಈ ನಿಧಿಯ ಬಳಕೆ ಅತ್ಯಂತ ಕಡಿಮೆಯಿದ್ದರೆ ದೊಡ್ಡಬಳ್ಳಾಪುರ ನಗರಸಭೆಯಲ್ಲಿ ಹೆಚ್ಚಾಗಿತ್ತು.

ಅಂತಿಮವಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾನವ ಅಭಿವೃದ್ಧಿ ವಿಷಯಗಳಲ್ಲಿ ಒಂದು ಮಿಶ್ರ ಚಿತ್ರಣವನ್ನು ನೀಡುತ್ತದೆ. ಈ ವರದಿಗಾಗಿ ಲೆಕ್ಕಮಾಡಿದ ಸೂಚ್ಯಂಕಗಳ ಪ್ರಕಾರ ತಾಲೂಕುಗಳ ನಡುವೆ ತೀವ್ರವಾದ ವ್ಯತ್ಯಾಸಗಳಿವೆ. ಆದರೆ ಯಾವ ಒಂದು ತಾಲೂಕೂ ಎಲ್ಲಾ ಸೂಚ್ಯಂಕಗಳಲ್ಲಿ ಏಕಪ್ರಕಾರ ಉತ್ತಮ ಸಾಧನೆ ಮಾಡಿಲ್ಲ. ಈ ವರದಿಯ ವಿಶ್ಲೇಷಣೆ ಮತ್ತು ಫಲಿತಾಂಶಗಳನ್ನು ಅರ್ಥಮಾಡಿಕೊಳ್ಳುವಾಗ ಈ ಜಿಲ್ಲೆ ಬೆಂಗಳೂರಿನಂತಹ ಮಹಾನಗರದ ಪಕ್ಕದಲ್ಲಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಸಾಮಿಪ್ಯತೆಯೇ ಜಿಲ್ಲೆಯ ಹೆಚ್ಚುಕಡಿಮೆ ಎಲ್ಲ ಆಗುಹೋಗುಗಳನ್ನು ನಿರ್ಣಯಿಸುತ್ತದೆ ಮತ್ತು ಪ್ರಭಾವಿಸುತ್ತದೆ. ಹಾಗಾಗಿ ಅನೇಕ ವೇಳೆ ಬೆಂಗಳೂರು ನಗರವನ್ನು ಬಿಟ್ಟು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಶ್ಲೇಷಣೆ ಬಹಳ ಕಷ್ಟವೆನಿಸುತ್ತದೆ. ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ವೈದ್ಯಕೀಯ ಸಂಸ್ಥೆಗಳ ಸೇವೆ ದೊರೆಗೊಳ್ಳುವಿಕೆ, ಜೀವನಮಟ್ಟ, ಉದ್ಯೋಗ ಉತ್ಪಾದನೆ, ಕಾರ್ಮಿಕ ಉತ್ಪಾದಕತೆ, ಮತ್ತು ಎಲ್ಲಾ ಸ್ತರಗಳಲ್ಲಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಬಲ್ಲ ಸಾಮರ್ಥ್ಯವುಳ್ಳ ಅಧಿಕಾರಿಗಳು, ಇತ್ಯಾದಿಗಳ ವಿಷಯಗಳಲ್ಲಿ ಜಿಲ್ಲೆಯು ಆಶಾದಾಯಕ ಪ್ರವೃತ್ತಿಯನ್ನು ತೋರುತ್ತದೆ. ಆದರೆ ಮಹಿಳೆಯರ, ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟ ಪಂಗಡದ ಸಾಮಾಜಿಕ ಮತ್ತು ಆರ್ಥಿಕ ಅಸಮತೋಲನಗಳನ್ನು ನಿವಾರಿಸಲು ಅಭಿವೃದ್ಧಿ ಕಾರ್ಯನೀತಿಗಳನ್ನು ಇನ್ನೂ ಸಮರ್ಥವಾಗಿ ಅನುಷ್ಠಾನಗೊಳಿಸಬೇಕಿದೆ. ಸರ್ಕಾರವು ಉನ್ನತ ಶಿಕ್ಷಣದಲ್ಲಿ ಇರುವ ಲಿಂಗ ಅಸಮಾನತೆಯ ಬಗ್ಗೆ ಹೆಚ್ಚು ಗಮನಹರಿಸಬೇಕಿದೆ ಮತ್ತು ಉನ್ನತ ಶಿಕ್ಷಣ ಸಮಾಜದ ಎಲ್ಲ ವರ್ಗಗಳಿಗೂ ಸುಲಭವಾಗಿ ದೊರೆಯುವಂತೆ ಮಾಡಬೇಕಿದೆ. ಜಿಲ್ಲೆಯಲ್ಲಿ ಆರೋಗ್ಯ ಸೇವೆಗಳ ಗುಣಮಟ್ಟ ಸುಧಾರಿಸಲು ಸರ್ಕಾರ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರು, ನರ್ಸುಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಕ ಮಾಡಿಕೊಳ್ಳುವ ಅಗತ್ಯವಿದೆ. ಇದರ ಜೊತೆಗೆ ತಾಯಂದಿರ ಮರಣ ಪ್ರಮಾಣ, ಮಕ್ಕಳ ಮರಣ ಪ್ರಮಾಣ, ಮತ್ತು ತೀವ್ರ ರಕ್ತಹೀನತೆಯ ಗರ್ಭಿಣಿಯರ ಪ್ರಮಾಣವನ್ನು ಬಹಳಷ್ಟು ಕಡಿಮೆ ಮಾಡಲು ಸೂಕ್ತ ಮತ್ತು ತ್ವರಿತ ಕ್ರಮಗಳ ಅಗತ್ಯವಿದೆ.

# ಭಾಗ 2
# ಅಧ್ಯಾಯಗಳು



# ಪ್ರಸ್ತಾವನೆ



# 1. ಪ್ರಸ್ತಾವನೆ

ಮಾನವ ಅಭಿವೃದ್ಧಿ ಎನ್ನುವುದು ನನ್ನ ದೃಷ್ಟಿಯಲ್ಲಿ ಮೂಲಭೂತ ಅಭಿವೃದ್ಧಿಯ ಕಲ್ಪನೆಗೆ ಸಂಬಂಧಿಸಿದ್ದು ಅಂದರೆ, ಮನುಷ್ಯರ ಜೀವನದ ಕೇವಲ ಒಂದು ಭಾಗವಾದ ಆರ್ಥಿಕತೆಯ ಶ್ರೀಮಂತಿಕೆಗಿಂತ ಇಡಿಯ ಜೀವನದ ಶ್ರೀಮಂತಿಕೆಯ ಸುಧಾರಣೆಗೆ ಸಂಬಂಧಿಸಿದ್ದು”.

-ಅಮಾರ್ತ್ಯ ಸೇನ್,
ಅರ್ಥಶಾಸ್ತ್ರ ಪ್ರಾಧ್ಯಾಪಕರು, ಹಾರ್ವರ್ಡ್ ವಿಶ್ವವಿದ್ಯಾಲಯ, 1998ರಲ್ಲಿ ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ವಿಜೇತರು[2]

## 1.1 ಪರಿಕಲ್ಪನೆ ಮತ್ತು ಅಧ್ಯಯನ ವಿಧಾನ

ಮಹಬೂಬ್ ಉಲ್ ಹಕ್ ಹಾಗೂ ಅಮಾರ್ತ್ಯ ಸೇನ್ ಪ್ರತಿಪಾದಿಸಿದ ಹಾಗೂ ಮೊದಲ ಮಾನವ ಅಭಿವೃದ್ಧಿ ವರದಿ, 1990ರಲ್ಲಿ ಅಳವಡಿಸಿಕೊಂಡಂತೆ ಮಾನವ ಅಭಿವೃದ್ಧಿ ‘ಜನರ ಆಯ್ಕೆಗಳನ್ನು ವಿಸ್ತರಿಸುವ ಪ್ರಕ್ರಿಯೆ’ ಮತ್ತು ‘ ಈ ವ್ಯಾಪಕ ಆಯ್ಕೆಗಳಲ್ಲಿ ಅತಿ ಮುಖ್ಯವಾದ ಅಂಶಗಳೆಂದರೆ ದೀರ್ಘವಾದ ಹಾಗೂ ಆರೋಗ್ಯಪೂರ್ಣ ಜೀವನ ಸಾಗಿಸುವ, ಶಿಕ್ಷಿತರಾಗುವ ಮತ್ತು ಒಂದು ಯೋಗ್ಯ ಮಾನದಂಡದ ಜೀವನ ಸಾಗಿಸಲು ಅಗತ್ಯವಾಗುವ ಸಂಪನ್ಮೂಲಗಳನ್ನು ಪಡೆದುಕೊಳ್ಳುವುದು. ಇದರಲ್ಲಿ ಹೆಚ್ಚುವರಿ ಆಯ್ಕೆಗಳ ಅವಕಾಶಗಳಲ್ಲಿ ರಾಜಕೀಯ ಸ್ವಾತಂತ್ರ್ಯ, ಭರವಸೆಯುಕ್ತ ಮಾನವ ಹಕ್ಕುಗಳು ಹಾಗೂ ವೈಯಕ್ತಿಕ ಆತ್ಮಗೌರವ ಒಳಗೊಂಡಿವೆ[3]. ಮಾನವ ಅಭಿವೃದ್ಧಿ ಮಾಪನದ ವಿಧಾನದಲ್ಲಿನ ಬದಲಾವಣೆಯೊಂದಿಗೆ, ಅಭಿವೃದ್ಧಿಯ ಪ್ರಸ್ತಾವನೆಯಲ್ಲಿ ‘ಆಯ್ಕೆಗಳ ವಿಸ್ತರಣೆ’ ‘ಸ್ವಾತಂತ್ರ್ಯದ ಹೆಚ್ಚಳ’ ಹಾಗೂ ‘ಉತ್ತಮ ಆರೋಗ್ಯದ ಪ್ರತಿಪಾದನೆ’ ಅಂಶಗಳು ಪ್ರಚಲಿತವಾಯಿತು ಮತ್ತು ಇದು ಒಂದು ಆಯಾಮವಾಗಿ ಅಭಿವೃದ್ಧಿ ಕುರಿತಾದ ಸಂಶೋಧನೆ ಹಾಗೂ ಬಳಕೆಯಲ್ಲಿ ಪ್ರಭಾವ ಬೀರುತ್ತಾ ಬಂದಿದೆ. ಅಧಿಕ ವರಮಾನವಿರುವ ರಾಷ್ಟ್ರಗಳಲ್ಲೂ ಅನೇಕ ‘ಅಸ್ವಾತಂತ್ರ್ಯ’ ರೂಢಿಗಳು ಚಾಲ್ತಿಯಲ್ಲಿದ್ದು ಅವು ಆರ್ಥಿಕ ಬೆಳವಣಿಗೆ ಹಾಗೂ ತಲಾ ಆದಾಯ ಕೇಂದ್ರಿತ ಅಭಿವೃದ್ಧಿ ಮಾಪನಗಳನ್ನು ತಿರಸ್ಕರಿಸುವಂತೆ ಮಾಡಿತು. ಇದರಿಂದ ಅಭಿವೃದ್ಧಿ ಮಾಪನಗಳಲ್ಲಿ ಮತ್ತು ಚರ್ಚೆಗಳಲ್ಲಿ ಆರ್ಥಿಕಾಭಿವೃದ್ಧಿಗೆ ಬದಲಾಗಿ ಜನರು ಮತ್ತು ಅವರ ಜೀವನ ಕೇಂದ್ರ ಬಿಂದುವಾಯಿತು.

ಕಾಲಕ್ರಮೇಣ, ಮಾನವ ಅಭಿವೃದ್ಧಿಯ ಕಲ್ಪನೆಯೇ ಬದಲಾಗುತ್ತ ಬಂದಿತು. ಮಾನವ ಅಭಿವೃದ್ಧಿಯ ಮಾನದಂಡಗಳಲ್ಲಿ ಹಾಗೂ ಅದರ ಕುರಿತಾದ ಚರ್ಚೆಗಳಲ್ಲಿ ಜನರ ಸಾಮರ್ಥ್ಯದ ವ್ಯಾಖ್ಯೆಯ ಉಗಮ ಹಾಗೂ ಅದರ ವಿಸ್ತರಣೆಗಳಾದ ಲಿಂಗ ಸಂಬಂಧಗಳು, ಸಾಮಾಜಿಕ ಸೇರ್ಪಡೆ ಮತ್ತು ರಾಜಕೀಯ ಪ್ರಕ್ರಿಯೆಗಳಂಥ ವಿವಿಧ ಕ್ಷೇತ್ರಗಳ ಪ್ರಭಾವ ಕಂಡು ಬಂದಿತು. ಅಭಿವೃದ್ಧಿಯು ಜನರ ಸ್ವಾತಂತ್ರ್ಯವನ್ನು ಆಧರಿಸಿದೆ ಮತ್ತು ವೈಯಕ್ತಿಕ ಸ್ವಾತಂತ್ರ್ಯ ಹಾಗು ಸಾಮಾಜಿಕ ಅಭಿವೃದ್ಧಿಯ ನಡುವೆ ಬಲವಾದ ಸಂಬಂಧಗಳಿವೆ ಎಂದು ಅಮಾರ್ತ್ಯ ಸೇನ್ (1999) ವಾದಿಸುತ್ತಾರೆ. ಜನರ ಸಾಧನೆಗಳು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವ್ಯವಸ್ಥೆಗಳಿಂದ ಹಾಗೂ ಜನರು ಅನುಭವಿಸುವ ರಾಜಕೀಯ ಮತ್ತು ನಾಗರೀಕ ಹಕ್ಕುಗಳಿಂದಲೂ ಪ್ರಭಾವಕ್ಕೊಳಗಾಗುತ್ತವೆ. ತತ್ಪರಿಣಾಮವಾಗಿ ಈ ಅಂಶಗಳು, ಅಭಿವೃದ್ಧಿಯನ್ನು ಹೆಚ್ಚಿಸುವ ಕಾರ್ಯನೀತಿರಚನೆ ಹಾಗೂ ಸಾಮಾಜಿಕ ಆಯ್ಕೆಗಳ ಕುರಿತಾದ ಚರ್ಚೆಗಳಲ್ಲಿ ಜನರ ಪಾಲ್ಗೊಳ್ಳುವಿಕೆ ಮೂಲಕ ಜನರು ತಮ್ಮ ಸ್ವಾತಂತ್ರ್ಯವನ್ನು ಚಲಾಯಿಸುವ ಹಕ್ಕಿನ ಮೇಲೆ ಪ್ರಭಾವ ಬೀರುತ್ತವೆ. ಸೇನರ ಸಾಮರ್ಥ್ಯ ವ್ಯಾಖ್ಯೆಯು[4] ಜನರ ಜೀವನಸ್ಥಿತಿಯು ಅವರ ಬಳಿ ಏನಿದೆ ಎನ್ನುವುದಕ್ಕಿಂತ ಅವರು ಕೈಗೊಳ್ಳುವ ಕ್ರಿಯೆಯಿಂದ ಪ್ರಭಾವಗೊಳ್ಳುತ್ತದೆ ಎಂದು ಪ್ರತಿಪಾದಿಸುತ್ತದೆ. ಆರೋಗ್ಯ, ಶಿಕ್ಷಣ, ರಾಜಕೀಯ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ದಿನನಿತ್ಯದ ಆಯ್ಕೆಗಳನ್ನು ಮಾಡಿಕೊಳ್ಳುವಲ್ಲಿ ಜನರಿಗೆ ಸಂಪನ್ಮೂಲಗಳು ಹಾಗೂ ಸ್ವಾತಂತ್ರ್ಯ ಸಮಾನವಾಗಿ ಲಭ್ಯವಾಗಬೇಕು.

ಇದನ್ನೇ ಸ್ವಲ್ಪ ವಿಸ್ತರಿಸಿ ಹೇಳುವುದಾದರೆ, ಒಬ್ಬ ವ್ಯಕ್ತಿಯ ಆಯ್ಕೆಯು ಲಭ್ಯವಿರುವ ವಿಕಲ್ಪಗಳ(ಆಯ್ಕೆಗಳ) ಗುಣಮಟ್ಟವನ್ನು ಅವಲಂಬಿಸುವುದರಿಂದ, ಲಭ್ಯವಿರುವ ಆಯ್ಕೆಗಳ ಗುಣಮಟ್ಟ ಹೆಚ್ಚಬೇಕು. ಹೀಗಾಗಿ, ಯಾವುದೇ ಅಭಿವೃದ್ಧಿ ಪ್ರಯತ್ನವು ಆಯ್ಕೆಗಳನ್ನು ಹೆಚ್ಚಿಸುವಲ್ಲಿ ಮಾತ್ರವಲ್ಲದೆ ವೈಯಕ್ತಿಕ ಆಯ್ಕೆಗಳು ಲಭ್ಯವಾಗುವುದರತ್ತ ಕೂಡ ಗಮನ ಹರಿಸಬೇಕು. 1990 ರಿಂದ ಒಂದು ವಾರ್ಷಿಕ ವಿಧಿಯಾಗಿರುವ ಜಾಗತಿಕ ಮಾನವ ಅಭಿವೃದ್ಧಿ ವರದಿಗಳು ಕಾಲಾನುಕ್ರಮವಾಗಿ ಮಾನವ ಅಭಿವೃದ್ಧಿಯನ್ನು ಅರ್ಥೈಸುವಲ್ಲಿ ಹೇಗೆ ಬದಲಾವಣೆ ಹೊಂದಿದೆ, ಹೇಗೆ ವಿವರಿಸಲಾಗಿದೆ ಮತ್ತು ಪರಿಗಣಿಸಲಾಗಿದೆ ಎನ್ನುವ ಪರಿಕಲ್ಪನೆಯನ್ನು ಪ್ರತಿಫಲಿಸುತ್ತವೆ. (ಕೋಷ್ಟಕ 1.1)

ಮಾನವ ಅಭಿವೃದ್ಧಿ ಸ್ಥಿತಿಗತಿಗಳನ್ನು ಅವಲೋಕಿಸಿ ರಾಷ್ಟ್ರಗಳ ಶ್ರೇಣಿಯನ್ನು ನೀಡಿರುವ ಮಾನವ ಅಭಿವೃದ್ಧಿ ವರದಿ (1990)ಯ ಪ್ರಕಟಣೆ ನಂತರ ಯು.ಎನ್.ಡಿ.ಪಿ., ರಾಷ್ಟ್ರೀಯ ಹಾಗೂ ಉಪ-ರಾಷ್ಟ್ರೀಯ ಮಟ್ಟಗಳಲ್ಲಿ ಮಾನವ ಅಭಿವೃದ್ಧಿ ವರದಿಗಳನ್ನು ತಯಾರಿಸಿಕೊಳ್ಳಲು ದೇಶಗಳನ್ನು ಉತ್ತೇಜಿಸುತ್ತಿದೆ. ರಾಜ್ಯ ಮಟ್ಟದ ಮಾನವ ಅಭಿವೃದ್ಧಿ ವರದಿ ತಯಾರಿಸುವಲ್ಲಿ ಮಧ್ಯಪ್ರದೇಶ ರಾಜ್ಯ ಪ್ರಥಮವಾಗಿ ಯಶಸ್ವಿಯಾಯಿತು. ತದನಂತರ ಕರ್ನಾಟಕ, ಮೊದಲು 1999ರಲ್ಲಿ ಹಾಗೂ ನಂತರ 2005ರಲ್ಲಿ ರಾಜ್ಯ ಮಟ್ಟದ ಮಾನವ ಅಭಿವೃದ್ಧಿ ವರದಿ ಸಿದ್ಧಪಡಿಸಿತು. ಈ ಪ್ರಯತ್ನದ ನಂತರ ಕರ್ನಾಟಕ ರಾಜ್ಯವು 2008ರಲ್ಲಿ ನಾಲ್ಕು ಜಿಲ್ಲೆಗಳಿಗೆ ಜಿಲ್ಲಾ ಮಟ್ಟದ ಮಾನವ ಅಭಿವೃದ್ಧಿ ವರದಿಗಳನ್ನು ತಯಾರಿಸಿತು. ಇದರಿಂದ ಉತ್ತೇಜಿತಗೊಂಡು ರಾಜ್ಯವು ಎಲ್ಲಾ ಜಿಲ್ಲೆಗಳಲ್ಲಿ ಈ ವರದಿಯನ್ನು ತಯಾರಿಸಲು ಮುಂದಾಗಿದೆ. ಈಗ ಸಿದ್ಧವಾಗುತ್ತಿರುವ ಈ ವರದಿ, ಈ ಉಪಕ್ರಮದ ಭಾಗವಾಗಿದೆ.

ಮಾನವ ಅಭಿವೃದ್ಧಿಯನ್ನು ಕೇಂದ್ರವಾಗಿ ಇಟ್ಟುಕೊಂಡು ಅಳೆಯುವ ಮಾನವ ಅಭಿವೃದ್ಧಿ ಸೂಚ್ಯಂಕ(ಮಾ.ಅ.ಸೂ)ವು, ಮೂರು ಸೂಚಕಗಳಾದ ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟ-ಇವುಗಳ ಸಂಯುಕ್ತ ಮಾಪನವಾಗಿದೆ. ಈ ಸೂಚ್ಯಂಕವು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಉಲ್ಲೇಖನೀಯ ಕಾರ್ಯಚೌಕಟ್ಟನ್ನು ಒದಗಿಸುತ್ತದೆ. ಮಾ.ಅ.ಸೂ, ಪ್ರತಿ ಆಯಾಮಕ್ಕೆ ಮೈಲಿಗಲ್ಲುಗಳು ಎಂದು ಕರೆಯಲ್ಪಡುವ ಕನಿಷ್ಟ ಹಾಗೂ ಗರಿಷ್ಟ ಮಟ್ಟವನ್ನು ಒದಗಿಸುತ್ತದೆ ಮತ್ತು ಈ ಮೈಲಿಗಲ್ಲುಗಳಿಗೆ ಸಂಬಂಧಿಸಿದಂತೆ ಪ್ರತಿ ಭೌಗೋಳಿಕ ಸ್ಥಳ/ಸ್ಥಾನವನ್ನು ತೋರಿಸುತ್ತದೆ. ಇದನ್ನು 0 ಮತ್ತು 1 ಮೌಲ್ಯದ ನಡುವೆ ಅಭಿವ್ಯಕ್ತಪಡಿಸಲಾಗಿದೆ. ಹೀಗೆ, ಮಾನವ ಅಭಿವೃದ್ಧಿ ಸೂಚ್ಯಂಕದ ರಚನೆ, ಅಮಾರ್ತ್ಯಸೇನ್ ಅವರ ಸಾಮರ್ಥ್ಯ ಸಿದ್ಧಾಂತದ ಅನುಸರಣೆಯನ್ನು ಒಳಗೊಂಡು ಮಾರ್ಗ ಮತ್ತು ಫಲಶೃತಿ-ಎರಡರ ಪ್ರಾಮುಖ್ಯತೆಯನ್ನು ಒಳಗೊಂಡಿದೆ. ಅನೇಕ ಬಾರಿ ಫಲಶೃತಿಯೇ ಮಾರ್ಗವಾಗಿದೆ. ಉದಾಹರಣೆಗೆ, ಶಿಕ್ಷಣ ಲಭ್ಯತೆಯೇ ಮಾರ್ಗವಿಧಾನವಾಗಿದ್ದು, ಅನೇಕ ವಿಧದಲ್ಲಿ ಸ್ವಾತಂತ್ರ್ಯದ ವಿಸ್ತಾರತೆಯನ್ನು ಹೆಚ್ಚಿಸುತ್ತ ಆಯ್ಕೆಗಳನ್ನೂ ಮಾಡಲು ಮಾರ್ಗೋಪಾಯವಾಗಿದೆ. ಅದೇ ರೀತಿ, ಜೀವನೋಪಾಯ ಮತ್ತು ವರಮಾನ ಭದ್ರತೆ ಮಾರ್ಗೋಪಾಯವೂ ಹೌದು, ಜೊತೆಗೆ ಫಲಶೃತಿಯೂ ಹೌದು.

ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಪೂರಕವಾಗಿ, ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಪ್ರಾದೇಶಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಲಿಂಗ ಅಸಮಾನತೆಗಳನ್ನು ಅನ್ವೇಷಿಸುವ ಇತರ ಸೂಚ್ಯಂಕಗಳನ್ನು ಸಹ ಮಾನವ ಅಭಿವೃದ್ಧಿ ವರದಿಯುಲ್ಲಿ

[2] http://hdr.undp.org/en/humandev

[3] ಮಾನವ ಅಭಿವೃದ್ಧಿ ವರದಿ,1990

[4] ಸಾಮರ್ಥ್ಯ ವ್ಯಾಖ್ಯೆ ಎನ್ನುವುದು ಒಂದು ಸೈದ್ಧಾಂತಿಕ ಕಾರ್ಯಚೌಕಟ್ಟಾಗಿದ್ದು, ಎರಡು ಮೂಲಭೂತ ಪ್ರತಿಪಾದನೆಗಳನ್ನು ಸೃಷ್ಟಿಸುತ್ತದೆ; ಮೊದಲನೆಯದಾಗಿ ಉತ್ತಮ ಜೀವನ ಪಡೆಯಲು ಸ್ವಾತಂತ್ರ್ಯದ ಪ್ರತಿಪಾದನೆ. ಇದು ಪ್ರಾಥಮಿಕವಾದದ್ದು ಮತ್ತು ನೈತಿಕ ಪ್ರಾಮುಖ್ಯತೆ ಉಳ್ಳದ್ದು ಆಗಿದೆ. ಎರಡನೆಯದಾಗಿ, ಉತ್ತಮ ಜೀವನ ಸಾಧಿಸಲು ಇರುವ ಸ್ವಾತಂತ್ರ್ಯವನ್ನು ಜನರ ಸಾಮರ್ಥ್ಯಗಳಾಗಿ ಅರ್ಥೈಸಬೇಕು, ಅಂದರೆ, ಅವರಿಗಿರುವ ನೈಜ ಅವಕಾಶಗಳು ಮತ್ತು ಮತ್ತು ಅಂತಹ ಜೀವನಕ್ಕೆ ಅವರು ನೀಡುವ ಪ್ರಾಮುಖ್ಯತೆ ಎಂಬುದಾಗಿದೆ. ಸಾಮರ್ಥ್ಯ ವ್ಯಾಖೆಯ ಮೂಲಬೂತ ಕಲ್ಪನೆಗಳೆಂದರೆ- ಸಾಮರ್ಥ್ಯಗಳು ಮತ್ತು ಕಾರ್ಯಚಟುವಟಿಕೆಗಳು. ಕಾರ್ಯಚಟುವಟಿಕೆಗಳನ್ನು ಒಂದು ವ್ಯವಸ್ಥೆಯಲ್ಲಿ “ಇರುವ ಹಾಗೂ ಕೆಲಸ ಮಾಡುವ” ಚಟುವಟಿಕೆಗಳು ಎಂದು ವಿವರಿಸಲಾಗಿದೆ. ಅಂದರೆ, ಮನುಷ್ಯರ ವಿವಿಧ ಸ್ಥಿತಿಗಳು ಹಾಗೂ ಅವರು ಕೈಗೊಳ್ಳಬಹುದಾದ ಚಟುವಟಿಕೆಗಳು. ಸಾಮರ್ಥ್ಯಗಳೆಂದರೆ ಈ ಕಾರ್ಯಚಟುವಟಿಕೆಗಳನ್ನು ನಡೆಸಲು ಒಬ್ಬ ವ್ಯಕ್ತಿಗೆ ಇರುವ ನಿಜವಾದ ಸ್ವಾತಂತ್ರ್ಯ ಅಥವಾ ಅವಕಾಶಗಳು (ರೋಬೆನ್ಸ್ 2011)

**ಕೋಷ್ಟಕ 1.1 : ವಿವಿಧ ಮಾನವ ಅಭಿವೃದ್ಧಿ ವರದಿಗಳಲ್ಲಿ ಅಭಿವ್ಯಕ್ತಪಡಿಸಿರುವ ಮಾನವ ಅಭಿವೃದ್ಧಿಯ ಕಲ್ಪನೆ**

| ವರ್ಷ | ವಿಷಯ |
|---|---|
| 1990 | ಜನರ ಆಯ್ಕೆಗಳನ್ನು ಹೆಚ್ಚಿಸುವ/ವಿಸ್ತರಿಸುವ ಪ್ರಕ್ರಿಯೆ |
| 1991 | ಅಭಿವೃದ್ಧಿಯ ನಿಜವಾದ ಮೂಲಮಂತ್ರವೆಂದರೆ ಜನರ ಆಯ್ಕೆಗಳನ್ನು ಹೆಚ್ಚಿಸುವುದು |
| 1992 | ಜನರ ಆಯ್ಕೆಗಳನ್ನು ಹೆಚ್ಚಿಸುವ/ವಿಸ್ತರಿಸುವ ಪ್ರಕ್ರಿಯೆ |
| 1993 | [ಜನರ] ಆಯ್ಕೆಗಳನ್ನು ವ್ಯಾಪಕಗೊಳಿಸುವುದನ್ನು ಒಳಗೊಂಡಿದೆ |
| 1994 | ಎಲ್ಲಾ ಜನರು ತಮ್ಮ ಸಾಮರ್ಥ್ಯಗಳನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುವಂಥ ಪರಿಸರ/ವಾತಾವರಣ ಸೃಷ್ಟಿಸುವುದು |
| 1995 | ಜನರ ಆಯ್ಕೆಗಳನ್ನು ವಿಸ್ತರಿಸುವ ಪ್ರಕ್ರಿಯೆ |
| 1996 | ಜನರ ಆಯ್ಕೆಗಳನ್ನು ಹೆಚ್ಚಿಸುವ/ವಿಸ್ತರಿಸುವ ಪ್ರಕ್ರಿಯೆ |
| 1997 | ಜನರ ಆಯ್ಕೆಗಳನ್ನು ಹೆಚ್ಚಿಸುವ/ವಿಸ್ತರಿಸುವ ಪ್ರಕ್ರಿಯೆ |
| 1998 | ಜನರ ಆಯ್ಕೆಗಳನ್ನು ಹೆಚ್ಚಿಸುವ/ವಿಸ್ತರಿಸುವ ಪ್ರಕ್ರಿಯೆ |
| 1999 | ಜನರ ಆಯ್ಕೆಗಳನ್ನು ಹೆಚ್ಚಿಸುವ/ವಿಸ್ತರಿಸುವ ಪ್ರಕ್ರಿಯೆ |
| 2000 | ಮಾನವ ಸಾಮರ್ಥ್ಯಗಳನ್ನು ವೃದ್ಧಿಸುವ ಪ್ರಕ್ರಿಯೆ |
| 2001 | ತಾವು ಮೌಲ್ಯವಿರಿಸಿದ ಜೀವನವನ್ನು ನಡೆಸಲು ಜನರ ಆಯ್ಕೆಗಳನ್ನು ವಿಸ್ತರಿಸುವುದು |
| 2002 | ಜನರ ಬಗ್ಗೆ, ಜನರು ತಾವು ಮೌಲ್ಯವಿರಿಸಿದ ಜೀವನವನ್ನು ನಡೆಸಲು ಜನರ ಆಯ್ಕೆಗಳನ್ನು ವಿಸ್ತರಿಸುವುದು |
| 2003 | ಜನರ ಆಯ್ಕೆಗಳನ್ನು, ಸ್ವಾತಂತ್ರ ್ಯವನ್ನು ಆತ್ಮಗೌರವವನ್ನು ವಿಸ್ತರಿಸುವ ಮೂಲಕ ಅವರ ಜೀವನವನ್ನು ಸುಧಾರಿಸುವುದು |
| 2004 | ಜೀವನದಲ್ಲಿ ಜನರು ತಾವು ಏನು ಮಾಡಬೇಕಿಂದಿದ್ದಾರೆ ಮತ್ತು ಯಾವುದರಲ್ಲಿ ಮೌಲ್ಯವಿರಿಸಿದ್ದಾರೆ, ಅದರಲ್ಲಿ ಅವರ ಆಯ್ಕೆಗಳನ್ನು ವಿಸ್ತರಿಸುವ ಪ್ರಕ್ರಿಯೆ |
| 2005 | ಮಾನವ ಸಾಮರ್ಥ್ಯಗಳನ್ನು ಹೆಚ್ಚಿಸುವುದರ ಕುರಿತು-ಜನರು ಏನು ಮಾಡಲು ಸಾಧ್ಯ ಮತ್ತು ಏನಾಗಲು ಸಾಧ್ಯ ಎನ್ನುವ ವಿಷಯಗಳ ವ್ಯಾಪ್ತಿ |
| 2007/08 | ಜನರ ನಿಜವಾದ ಆಯ್ಕೆಗಳು ಮತ್ತು ಸಾರಭೂತವಾದ ಸ್ವಾತಂತ್ರ ್ಯಗಳನ್ನು ವಿಸ್ತರಿಸುವುದು- ಜನರು ಯಾವುದರಲ್ಲಿ ಮೌಲ್ಯವಿರಿಸಿದ್ದಾರೋ ಅಂತಹ ಜೀವನ ನಡೆಸಲು ಅವರ ಸಾಮರ್ಥ್ಯ ವೃದ್ಧಿಸುವುದು |
| 2009 | ಜನರು ತಮ್ಮ ಆಯ್ಕೆಗಳಿಗೆ ಅನುಗುಣವಾಗಿ ತಮ್ಮ ಜೀವನ ನಡೆಸಲು ಜನರ ಸ್ವಾತಂತ್ರ ್ಯಗಳ ವಿಸ್ತರಣೆ |

**ಮೂಲ: ಸಬೀನಾ ಅಲ್ಕಿರೆ, ಯುಎನ್‌ಡಿಪಿ, 2010**

ವಿಸ್ತರಿಸಲಾಗಿದೆ. ಈ ವರದಿಯು, ಮಕ್ಕಳ ಅಭಿವೃದ್ಧಿ ಸೂಚ್ಯಂಕ, ದಲಿತ ಅಭಿವೃದ್ಧಿ ಸೂಚ್ಯಂಕ(ದ.ಅ.ಸೂ), ಆಹಾರ ಭದ್ರತೆ ಸೂಚ್ಯಂಕ, ನಗರಾಭಿವೃದ್ಧಿ ಸೂಚ್ಯಂಕ ಮತ್ತು ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ(ಸ.ತಾ.ಅ.ಸೂ.)[5] ದಂಥ ಪೂರಕ ಸೂಚ್ಯಂಕಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನ ಕೈಗೊಂಡಿದೆ. ಹೆಸರುಗಳೇ ಸೂಚಿಸುವಂತೆ, ಇವು ವೈವಿಧ್ಯ ಸ್ವರೂಪದವು: ಮಕ್ಕಳ ಅಭಿವೃದ್ಧಿ ಸೂಚ್ಯಂಕ ಮತ್ತು ದಲಿತ ಅಭಿವೃದ್ಧಿ ಸೂಚ್ಯಂಕಗಳು ಜನಸಂಖ್ಯೆಯ ನಿರ್ದಿಷ್ಟ ಉಪ ಗುಂಪುಗಳನ್ನು ಉಲ್ಲೇಖಿಸುತ್ತದೆ-ಒಂದು ವಯಸ್ಸನ್ನು ಆಧರಿಸಿದ್ದರೆ ಮತ್ತೊಂದು ಸಮಾಜದ ವರ್ಗವನ್ನು ಆಧರಿಸಿದೆ, ಆಹಾರ ಭದ್ರತೆ ಸೂಚ್ಯಂಕವು ಒಂದು ನಿರ್ದಿಷ್ಟವಾದ ಮಾನವ ಹಕ್ಕಿಗೆ ಸಂಬಂಧಿಸಿದ್ದು ಮತ್ತು ನಗರಾಭಿವೃದ್ಧಿ ಸೂಚ್ಯಂಕ ಹಾಗೂ ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕಗಳು ಭೌಗೋಳಿಕ ಘಟಕಗಳನ್ನು ಸೂಚಿಸುತ್ತವೆ. ಪರಿಚ್ಛೇದ 1.2 ಹಾಗೂ 1.3 ರಲ್ಲಿ ಇವುಗಳ ಮಾಪನಕಾರ್ಯ ವಿಧಾನದ ಬಗ್ಗೆ ಹೆಚ್ಚು ವಿವರಿಸಲಾಗಿದೆ; 1.2 ರಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಪೂರಕವಾದ ಅಂಶಗಳ ಬಗ್ಗೆ ಇದ್ದು, 1.3 ರಲ್ಲಿ ಸೂಚ್ಯಂಕಗಳ ಮಾಪನದಲ್ಲಿ ಅನುಸರಿಸಲಾದ ವಿಧಾನಗಳ ವಿವರಗಳಿವೆ.

## 1.2 ಮಾನವ ಅಭಿವೃದ್ಧಿಗೆ ಒತ್ತು ನೀಡುವ ಅಂಶಗಳು

ಮಾನವ ಅಭಿವೃದ್ಧಿ ಎನ್ನುವುದು ಜನರು ದೀರ್ಘವಾದ, ಆರೋಗ್ಯಕರವಾದ ಮತ್ತು ಸೃಜನಾತ್ಮಕ ಜೀವನ ನಡೆಸುವ ಪರಿಸರವನ್ನು ಸೃಷ್ಟಿಸಲು ಅವಕಾಶ ಕಲ್ಪಿಸಿಕೊಡುವ ವಿವಿಧ ಅಂಶಗಳ ಹಾಗು ಕ್ರಿಯೆ-ಪ್ರತಿಕ್ರಿಯೆಗಳ ಸಂಕೀರ್ಣವಾದ ಫಲಿತಾಂಶ. ಮಾನವ ಅಭಿವೃದ್ಧಿಗೆ ಒಂದಲ್ಲ ಒಂದು ರೀತಿಯಲ್ಲಿ ಪೂರಕವಾಗುವ ಅಂಶಗಳನ್ನು ಈ ಕೆಳಗೆ ಚರ್ಚಿಸಲಾಗಿದೆ. ಮಾನವ ಅಭಿವೃದ್ಧಿಯ ಮೇಲೆ ಪ್ರಭಾವ ಬೀರುವ ಈ ಅಂಶಗಳು ಪರಸ್ಪರ ಹೊರತುಪಡಿಸಿದವುಗಳಲ್ಲ ಎಂದು ಗಮನಿಸಬೇಕು, ಏಕೆಂದರೆ ಒಂದು ಅಂಶದ ಪ್ರಗತಿ ಮತ್ತೊಂದರ ಪ್ರಗತಿಗೆ ಪ್ರಚೋದನೆ ನೀಡಬಲ್ಲದು. ಉದಾಹರಣೆಗೆ, ಸ್ವಚ್ಛತೆ ರೂಢಿಗಳಲ್ಲಿ ಸುಧಾರಣೆಯಾದಾಗ ಉತ್ತಮ ಆರೋಗ್ಯಕ್ಕೆ ಅನುವು ಮಾಡಿಕೊಡುತ್ತದೆ ಮತ್ತು ತನ್ಮೂಲಕ ಶಾಲೆಯ ಹಾಜರಾತಿಯಲ್ಲೂ ಉತ್ತಮ ಫಲಿತಾಂಶ ಕಾಣಬಹುದು.

### 1.2.1 ಶಿಕ್ಷಣ

ಮಾನವ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ಬಹು ದೊಡ್ಡದು. ಶಿಕ್ಷಣವು ವ್ಯಕ್ತಿಯ ಅಂತಸ್ಸತ್ವ ವೃದ್ಧಿಸಲು ಹಾಗೂ ಜೀವನೋಪಾಯ ಸಾಧನವಾಗಿ ಉಪಯೋಗಿಸಬಹುದಾದ ಮೌಲ್ಯಗಳನ್ನು ಒಳಗೊಂಡಿದೆ. ಅದು ಆತ್ಮವಿಶ್ವಾಸ ಹಾಗೂ ಸ್ವಮೌಲ್ಯವನ್ನು ಹೆಚ್ಚಿಸುತ್ತದೆ. ಜ್ಞಾನದ ಹೊಸ ಕ್ಷೇತ್ರಗಳನ್ನು ಅನ್ವೇಷಿಸಲು ಮತ್ತು ಅರ್ಥೈಸುವಿಕೆಯ ಹೊಸ ರೂಪಗಳನ್ನು ಕಂಡುಕೊಳ್ಳಲು ಸಹಾಯ ಮಾಡುತ್ತದೆ ಹಾಗು ಹೊಸ ಅವಕಾಶಗಳ ಬಾಗಿಲುಗಳನ್ನು ತೆರೆದಿಡುತ್ತದೆ. ಬಡತನದ ವಿಷವರ್ತುಲದಿಂದ ಹೊರಬರಲು ಮತ್ತು ಔದ್ಯೋಗಿಕ ವಿಕಲ್ಪಗಳಿಗೆ ಸಂಬಂಧಿಸಿದಂತೆ ವ್ಯಕ್ತಿಯ ಆಯ್ಕೆಗಳನ್ನು ವಿಸ್ತರಿಸಿಕೊಳ್ಳಲು ಶಿಕ್ಷಣ ಬಹಳ ಮುಖ್ಯ ಎಂದು ಪರಿಗಣಿಸಲಾಗಿದೆ[6]. ವಿಶ್ವಾದ್ಯಂತ ಕೈಗೊಳ್ಳಲಾಗಿರುವ ಹಲವಾರು ಅಧ್ಯಯನಗಳನ್ನು ಪರಿಶೀಲಿಸಿದರೆ, ಹೆಣ್ಣುಮಕ್ಕಳ ಶಿಕ್ಷಣವು ಸಮಾಜದಲ್ಲಿ ಹೆಚ್ಚಿನ ಲಿಂಗ ಸಮಾನತೆಗೆ ಅನುವು ಮಾಡಿಕೊಟ್ಟಿದೆ, ಆರೋಗ್ಯ ಸೂಚಕಗಳು ಸುಧಾರಿಸಲು ಸಾಧ್ಯಾವಾಗಿದೆ ಮತ್ತು ಮುಂದಿನ ಪೀಳಿಗೆಯ ಶಿಕ್ಷಣ ಸಾಧ್ಯತೆಯನ್ನು ಹೆಚ್ಚಿಸಿವೆ ಎಂದು ತಿಳಿಸುತ್ತವೆ. ಶಿಕ್ಷಣದ ಪ್ರಾಮುಖ್ಯತೆಯನ್ನು ಗುರುತಿಸುವಲ್ಲಿ ಸಂಯುಕ್ತ ರಾಷ್ಟ್ರಗಳು, 2015 ರೊಳಗೆ ಸಾಧಿಸಬೇಕಾದ ತನ್ನ ಸಹಸ್ರಮಾನದ ಗುರಿಗಳ ಪೈಕಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವೂ ಒಂದು ಎಂದು ಪಟ್ಟಿ ಮಾಡಿದೆ. ಈ ಗುರಿಯನ್ನು ಸಾಧಿಸಲು ಶಿಕ್ಷಣ ಕ್ಷೇತ್ರದಲ್ಲಿ ಮೂಲಭೂತಸೌಕರ್ಯಕ್ಕೆ ಹೆಚ್ಚಿನ ಬಂಡವಾಳ ತೊಡಗಿಸಬೇಕು ಜೊತೆಗೆ ತರಬೇತಿ ಪಡೆದ ಶಿಕ್ಷಕರ ಹಾಗು ಗುಣಮಟ್ಟದ ಶಿಕ್ಷಣ ಸಾಮಗ್ರಿ ಲಭ್ಯವಾಗಬೇಕು.

[5] ತಾಲೂಕುಗಳೆಂದರೆ ಕರ್ನಾಟಕದ ಉಪ-ಜಿಲ್ಲಾ ಆಡಳಿತಾತ್ಮಕ ಘಟಕ, ಸಾಮಾನ್ಯವಾಗಿ ಇತರ ಭಾರತೀಯ ರಾಜ್ಯಗಳಲ್ಲಿ ಇದನ್ನು ಬ್ಲಾಕ್ ಎಂದು ಉಲ್ಲೇಖಿಸಲಾಗುತ್ತದೆ.
[6] ಎಲ್ಲರಿಗೂ ಶಿಕ್ಷಣ : ಜಾಗತಿಕ ಸಂಯೋಜನಾ ವರದಿ,2006, ಅಧ್ಯಾಯ 5.

### 1.2.2 ಆರೋಗ್ಯ

ಆರೋಗ್ಯ ಹಾಗೂ ಪೌಷ್ಠಿಕತೆ, ಮಾನವ ಅಭಿವೃದ್ಧಿಯ ಅವಿಭಾಜ್ಯ ಅಂಗಗಳು. ವಿಶ್ವ ಆರೋಗ್ಯ ಸಂಸ್ಥೆಯ ವಿವರಣೆ ಪ್ರಕಾರ ಆರೋಗ್ಯ ಎಂದರೆ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಆರೋಗ್ಯಗಳನ್ನು ಒಳಗೊಂಡಿರುವಂಥದ್ದು. ಸರಿಯಾದ ಶಿಕ್ಷಣ ಪಡೆದುಕೊಳ್ಳಲು, ಉದ್ಯೋಗಾವಕಾಶಗಳ ಅನ್ವೇಷಣ ಹಾಗೂ ಲಾಭ ಪಡೆದುಕೊಳ್ಳುವುದು, ಹೆಚ್ಚಿನ ಉತ್ಪಾದಕತೆ ಸಾಧಿಸುವುದು, ಕುಟುಂಬ ಹಾಗೂ ಸ್ನೇಹಿತರೊಡನೆ ಹೆಚ್ಚಿನ ಸಮಯ ಕಳೆಯಲು ಸಾಧ್ಯವಾಗುವುದು ಮತ್ತು ಪ್ರಜಾಪ್ರಭುತ್ವದ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅನುವು ಮಾಡಿಕೊಡುವುದು -ಈ ಎಲ್ಲದರಲ್ಲೂ ಆರೋಗ್ಯ ಮುಖ್ಯ ಪಾತ್ರ ವಹಿಸುತ್ತದೆ. ಆರೋಗ್ಯ ಸೂಚಕಗಳ ಪೂರೈಕೆಗಳನ್ನೇ ಅದರ ಫಲಶೃತಿ ಎಂದು ಪರಿಗಣಿಸಬಹುದಾದರೂ, ಅಭಿವೃಧಿಯನ್ನು ಖಚಿತಪಡಿಸಲು ಅವು ಬಹು ಮುಖ್ಯ ಕಾರಣಗಳೂ ಹೌದು. ಒಂದು ದೇಶದ ಬಡತನ ನಿರ್ಮೂಲನೆ, ಸಬಲ ಆರ್ಥಿಕತೆ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಅದರ ಆರೋಗ್ಯ ಕ್ಷೇತ್ರದ ಪ್ರಗತಿ ಬಹಳ ಮುಖ್ಯವಾಗಿದೆ.

### 1.2.3 ಆಹಾರ ಭದ್ರತೆ

ಆಹಾರ ಭದ್ರತೆಯನ್ನು 'ಎಲ್ಲಾ ಜನರೂ, ಎಲ್ಲಾ ಕಾಲಗಳಲ್ಲೂ ಸಕ್ರಿಯವಾದ ಹಾಗೂ ಆರೋಗ್ಯಪೂರ್ಣ ಜೀವನ ಸಾಗಿಸಲು ತಮ್ಮ ಆಹಾರ ಅಗತ್ಯಗಳನ್ನು ಹಾಗೂ ಆದ್ಯತೆಗಳನ್ನು ಪೂರೈಸಿಕೊಳ್ಳಲು ಸಾಕಷ್ಟು ಪ್ರಮಾಣದಲ್ಲಿ ಮತ್ತು ಪೌಷ್ಠಿಕವಾದ ಆಹಾರ ಪಡೆಯುವ ಮೂಲಕ ದೈಹಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಮರ್ಥರಾಗಿರುವುದು' ಎಂದು ವಿವರಿಸಬಹುದು.(ಆಫ್ರಿಕಾದ ಮಾ.ಅ.ವ,2012). ಪೌಷ್ಠಿಕತೆಯ ಕೊರತೆ, ಒಬ್ಬ ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ ತನ್ಮೂಲಕ ವ್ಯಕ್ತಿಯ ಉತ್ಪಾದಕತೆ ಕಡಿಮೆಯಾಗುತ್ತದೆ ಮತ್ತು ವ್ಯಕ್ತಿಯ ಆರ್ಥಿಕ ಸ್ಥಿತಿಯೂ ಕುಗ್ಗುತ್ತದೆ. ಸಾಕಷ್ಟು ಪ್ರಮಾಣದಲ್ಲಿ ಮತ್ತು ಸುಲಭವಾಗಿ ಆಹಾರದ ಲಭ್ಯತೆ ಮಾನವ ಗೌರವಯುತ ಜೀವನಕ್ಕೆ ಮತ್ತು ಅಭಿವೃದ್ಧಿಗೆ ಅತ್ಯಗತ್ಯ. ಎಲ್ಲಾ ವ್ಯಕ್ತಿಗಳಿಗೂ ಹಾಗೂ ಸಮಾಜದ ಪ್ರತಿಯೊಂದು ವರ್ಗಕ್ಕೂ ಸಮಾನವಾದ ಆಹಾರ ಭದ್ರತೆಯು, ವ್ಯಾಪಕ ಪ್ರಾದೇಶಿಕ, ಸಾಮಾಜಿಕ ಹಾಗು ಆರ್ಥಿಕ ಅಸಮತೋಲನ ಇರುವ ದೇಶಗಳಿಗೆ/ಸಮಾಜಕ್ಕೆ ಬಹಳ ಮುಖ್ಯ.

### 1.2.4 ತಲಾ ಆದಾಯ

ಉತ್ತಮವಾದ ವರಮಾನವು ಒಬ್ಬ ವ್ಯಕ್ತಿಯ ಮೂಲಭೂತ ಅವಶ್ಯಕತೆಗಳ ಖರ್ಚಿಗೆ ಸಹಕರಿಸಿ ಉತ್ತಮ ಮಟ್ಟದ ಜೀವನವನ್ನು ನಡೆಸಲು ಸಾಧ್ಯಾವಾಗುತ್ತದೆ. ಒಬ್ಬ ವ್ಯಕ್ತಿಯ ವರಮಾನವು ಒಂದು ದೇಶದ ಅಥವಾ ಅದರ ಅಂಗರಾಜ್ಯಗಳ/ಭಾಗಗಳ ಒಟ್ಟಾರೆ ವರಮಾನದ ನಿಜವಾದ ಹಂಚಿಕೆಯ ಬಗ್ಗೆ ಏನನ್ನೂ ತಿಳಿಸುವುದಿಲ್ಲವಾದರೂ, ತಲಾ ಆದಾಯದ ಬೆಳವಣಿಗೆ ಆ ದೇಶದ ಆರ್ಥಿಕ ಬೆಳವಣಿಗೆಯ ಮುಖ್ಯ ಸೂಚಿಯಾಗುತ್ತದೆ ಮತ್ತು ಮಾನವ ಅಭಿವೃದ್ಧಿಗೂ ಮುಖ್ಯ ಅಂಶವಾಗುತ್ತದೆ.

### 1.2.5 ಯೋಗ್ಯ ಜೀವನಮಟ್ಟದ ಲಭ್ಯತೆ

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಪರಿಚ್ಛೇದ 25(1) ಹೀಗೆ ಹೇಳುತ್ತದೆ 'ಆಹಾರ, ಉಡುಪು, ಮನೆ ಹಾಗೂ ವೈದ್ಯಕೀಯ ಆರೈಕೆ ಮತ್ತು ಅವಶ್ಯ ಸಾಮಾಜಿಕ ಸೇವೆಗಳು ಒಳಗೊಂಡಂತೆ ಒಬ್ಬ ವ್ಯಕ್ತಿ ತನ್ನ ಮತ್ತು ತನ್ನ ಕುಟುಂಬದ ಆರೋಗ್ಯಕ್ಕೆ ಹಾಗೂ ಕ್ಷೇಮಕ್ಕೆ ಸೂಕ್ತವಾದ ಜೀವನಮಟ್ಟದ ಹಕ್ಕು ಹೊಂದಿರುತ್ತಾನೆ ಮತ್ತು ನಿರುದ್ಯೋಗ, ಕಾಯಿಲೆ, ಅಂಗವೈಕಲ್ಯತೆ ಎದುರಾದಾಗ ಮತ್ತು ತನ್ನ ನಿಯಂತ್ರಣ ಮೀರಿ ಜೀವನೋಪಾಯ ನಡೆಸಲು ಸಾಧ್ಯವಾಗದಂಥ ಸಂದರ್ಭದಲ್ಲಿ ಭದ್ರತೆಯ ಹಕ್ಕನ್ನು ಹೊಂದಿರುತ್ತಾನೆ/ಳೆ'. ಆದ್ದರಿಂದ, ಒಟ್ಟಾರೆ ಒಬ್ಬ ವ್ಯಕ್ತಿ ಆರೋಗ್ಯಕರ ಜೀವನ ಸಾಗಿಸಲು ಸುರಕ್ಷಿತ ಕುಡಿಯುವ ನೀರು, ಸ್ವಚ್ಛ ವ್ಯವಸ್ಥೆ, ಯೋಗ್ಯ ನಿವಾಸ, ಸ್ವಚ್ಛ ಅಡಿಗೆ ಇಂಧನ ಮತ್ತು ಭದ್ರತೆ-ಇವುಗಳು ಮುಖ್ಯ ಅಂಶಗಳಾಗುತ್ತವೆ.

### 1.2.6 ರಾಜಕೀಯ ಹಾಗೂ ಆರ್ಥಿಕ ಪಾಲ್ಗೊಳ್ಳುವಿಕೆ

ಇತರರ ಹಾಗೆ, ವಿಶೇಷವಾಗಿ ಮಹಿಳೆಯರು, ಸಾಂಪ್ರದಾಯಿಕವಾಗಿ ಸಬಲತೆ ಹೊಂದಿಲ್ಲದ ಸಮೂಹಗಳಿಗೆ ರಾಜಕೀಯ ಮತ್ತು ಆರ್ಥಿಕ ಪಾಲ್ಗೊಳ್ಳುವಿಕೆ ಬಹಳ ಮುಖ್ಯವಾಗುತ್ತದೆ. ಚುನಾವಣೆಯಂತಹ ರಾಜಕೀಯ ಪ್ರಕ್ರಿಯೆ ಮತ್ತು ಕಾರ್ಮಿಕ ಮಾರುಕಟ್ಟೆಯ ಆರ್ಥಿಕ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವಿಕೆಯು ಒಂದು ನಿರ್ದಿಷ್ಟ ಗುಂಪು/ಸಮೂಹ ಅನುಭವಿಸುತ್ತಿರುವ ಸ್ವಾತ್ರಂತ್ರ್ಯಮಟ್ಟದ ಸೂಚಕಗಳಾಗಿವೆ. ಆದ್ದರಿಂದ ಇವುಗಳ ತುಲನಾತ್ಮಕ ವಿಶ್ಲೇಷಣೆ ಸಮಾಜವನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿವೆ.

### 1.2.7 ಸುರಕ್ಷಿತ ಹಾಗೂ ಸುಭದ್ರ ಪರಿಸರದ ಲಭ್ಯತೆ

ದೌರ್ಜನ್ಯ ಅಥವಾ ಇತರ ಅಪಾಯದ ಪರಿಸ್ಥಿತಿಗಳನ್ನು ಎದುರಿಸುವ ಸಾಧ್ಯತೆ ಕಡಿಮೆಯಾಗಬೇಕಾದರೆ ಸುರಕ್ಷತೆ ಹಾಗೂ ಭದ್ರತೆ ಬಹಳ ಮುಖ್ಯವಾಗಿದ್ದು, ಅಂತಹ ವಾತಾವರಣ ನಿರ್ಮಾಣವಾದಾಗ ಸ್ವಾತಂತ್ರ್ಯವೂ ಹೆಚ್ಚುತ್ತದೆ ಮತ್ತು ಲಭ್ಯವಿರುವ ಅವಕಾಶಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವಲ್ಲಿ ಹೆಚ್ಚಿನ ಆಯ್ಕೆಗಳು ಹೊರಹೊಮ್ಮುತ್ತವೆ. ಇದು ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯಿಸುವಂಥದ್ದಾದರೂ, ಸಾಂಪ್ರದಾಯಿಕವಾಗಿ ಹೆಚ್ಚಿನ ದೌರ್ಜನ್ಯ ಮತ್ತು ನಿರಾಕರಣೆಗೆ ಒಳಗಾದ ಗುಂಪುಗಳಿಗೆ, ಅಂದರೆ ಮಹಿಳೆಯರು ಅಥವಾ ದಲಿತರು ಅಥವಾ ಅಂತಹ ಶೋಷಣೆಗೆ ಒಳಗಾಗುವ ಸಾಧ್ಯತೆ ಇರುವ ಮಕ್ಕಳಿಗೆ ಈ ಸ್ವಾತಂತ್ರ್ಯದ ವಾತಾವರಣ ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.

ಕಳೆದ ಎರಡು ದಶಕಗಳಲ್ಲಿ ಮಾನವ ಅಭಿವೃದ್ಧಿಯನ್ನು ಅಳೆಯುವ ವಿಧಾನವು ವಿಕಾಸಗೊಂಡಿದ್ದು, ಈಗಲೂ ವಿಕಾಸಗೊಳ್ಳುತ್ತಿದೆ. ಆದರೆ, ಕೆಲವು ಸೂಚಕಗಳ ಮಾಪನಕ್ಕೆ ಸಂಬಂಧಿಸಿದ ಸಮಸ್ಯೆಗಳು ಮತ್ತು ದತ್ತಾಂಶದ ನಿರ್ಬಂಧತೆಗಳು ಮಾನವ ಅಭಿವೃದ್ಧಿ ಸ್ಥಿತಿಯನ್ನು ಅಂದಾಜುಮಾಡುವ ಕಾರ್ಯವನ್ನು ಕೆಲವು ಪ್ರಾಥಮಿಕ ಅಂಶಗಳಿಗೆ ಮಾತ್ರ ಸೀಮಿತಗೊಳಿಸುತ್ತವೆ. ಸಧ್ಯದ ಪರಿಶ್ರಮವೂ ಇದಕ್ಕೆ ಹೊರತಾಗಿರದೆ, ಎಲ್ಲಾ ಜಿಲ್ಲೆಗಳ ನಡುವೆ ಹೋಲಿಕೆ ಮಾಡಬೇಕಾದ ಅವಶ್ಯಕತೆಯು, ಅಂಶಗಳ ಆಯ್ಕೆಯನ್ನು ನಿರ್ಧರಿಸಿದವು. ಜಿಲ್ಲೆಯ ಎಲ್ಲಾ ತಾಲೂಕುಗಳಿಗೆ ಸೂಚ್ಯಂಕಗಳನ್ನು ಲೆಕ್ಕ ಹಾಕಲಾಗಿದ್ದು, ಎಲ್ಲಾ ಸೂಚಕಗಳ ಅಂತರ-ತಾಲೂಕು ಹೋಲಿಕೆಯ ವಿಶ್ಲೇಷಣೆಯ ಮಾದರಿಯನ್ನು ವರದಿಯು ಅನುಸರಿಸುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ತಾಲೂಕುಗಳಿಗೆ ಮತ್ತು ಜಿಲ್ಲೆಗೆ ಮಾನವ ಅಭಿವೃಧಿ ಸೂಚ್ಯಂಕವನ್ನು (ಮಾನವ ಅಭಿವೃದ್ಧಿ ಸೂಚ್ಯಂಕ) ಮಾನವ ಅಭಿವೃದ್ಧಿ ವಿಭಾಗ, ಯೋಜನೆ, ಕಾರ್ಯಕ್ರಮ ಪರಿವೀಕ್ಷಣೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಇವರು ಅಭಿವೃಧಿ ಪಡಿಸಿರುವ ವಿಧಾನದ ಆಧಾರದ ಮೇಲೆ ಗಣಿಸಲಾಗಿದ್ದು, ಈ ಮಾದರಿಯು ಯುಎನ್‌ಡಿಪಿ ಯ 2010 ಮಾ.ಅ. ವರದಿಯನ್ನು ಆಧರಿಸಿದೆ. ಮುಂದಿನ ಸರ್ಕಾರ ಭಾಗವು ಸೂಚ್ಯಂಕಗಳ ಮಾಪನವನ್ನು ವಿವರವಾಗಿ ಚರ್ಚಿಸುತ್ತದೆ

## 1.3 ಸೂಚ್ಯಂಕಗಳ ಮಾಪನ[7]

### 1.3.1 ಮಾನವ ಅಭಿವೃದ್ಧಿ ಸೂಚ್ಯಂಕ

ಯಾವುದೇ ತತ್ವದ ಪರಿಮಾಣ ಮಾಪನವು ಕೇವಲ ಅಂದಾಜು ಮಾತ್ರವಾಗಿರುವುದರಿಂದ, ಮಾನವ ಅಭಿವೃದ್ಧಿಯೆಂಬ ತತ್ವವು ಅದನ್ನು ಅಳೆಯಲು ರಚಿಸಲಾಗಿರುವ ಸಂಘಟಿತ ಸೂಚ್ಯಂಕಕ್ಕಿಂತ ಬಹಳ ವಿಸ್ತಾರವಾಗಿದೆ. ಈ ಮಿತಿಗಳಿದ್ದರೂ, ಮಾನವ ಅಭಿವೃದ್ಧಿ ಸೂಚ್ಯಂಕವು ಮಾನವ ಅಭಿವೃದ್ಧಿಯ ಪ್ರಾಥಮಿಕ ಮಾಪನವಾಗಿದ್ದು, ಇದರಿಂದ ಅಂತರಕಾಲಿಕ ಹೋಲಿಕೆಗಳು ಸಾಧ್ಯವಾಗಿದ್ದು, ಇದು ಕಾರ್ಯನೀತಿಗಳ ಮೇಲೆ ಗಂಭೀರವಾದ ಪರಿಣಾಮ ಬೀರುವ ಸಾಮರ್ಥ್ಯವಿರುತ್ತದೆ.

ಮೊದಲ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಮೂರು ಪ್ರಾಥಮಿಕ ಅಂಗಗಳನ್ನು ಆಧರಿಸಿದ್ದವು. ಅವು ಯಾವುವೆಂದರೆ, ಮಾನವ ಜೀವಿತಾವಧಿಯನ್ನು ಅಳೆಯಲು ಜೀವಿತದ ನಿರೀಕ್ಷಣೆ, ಜ್ಞಾನವನ್ನು ಅಳೆಯಲು ಶಿಕ್ಷಣ, ಮತ್ತು ಉತ್ತಮ ಜೀವನಕ್ಕಾಗಿ ಒಬ್ಬ ವ್ಯಕ್ತಿಗೆ ಲಭ್ಯವಿರುವ ಸಂಪನ್ಮೂಲಗಳನ್ನು ಅಳೆಯಲು ತಲಾ ಆದಾಯ (ನೈಜ ಆಂತರಿಕ ಉತ್ಪನ್ನಾಧಾರಿತ ತಲಾ ಆದಾಯ). ಇದೇ ಸೂತ್ರವನ್ನು ಬಳಸಿ ಪ್ರತಿಯೊಂದು ಅಂಶವನ್ನೂ ಸೂಚ್ಯಂಕವಾಗಿ ಪರಿವರ್ತಿಸಲಾಯಿತು. ಮೊದಲ ವರ್ಷಗಳಲ್ಲಿ, ಈ ಮೂರು ಅಂಗಗಳ ಅಂಕಗಣಿತದ ಸರಾಸರಿಯನ್ನು ತೆಗೆದುಕೊಂಡು ಅಂತಿಮ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಿಲಾಯಿತು. ಇತ್ತೀಚಿನ ವರ್ಷಗಳಲ್ಲಿ ಈ ಅಭ್ಯಾಸವು ಬದಲಾಗಿ, ಈಗ ಜೀವನ, ಆರೋಗ್ಯ ಮತ್ತು ಶಿಕ್ಷಣದ ಸೂಚಕಗಳ

[7] ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ, ಬೆಂಗಳೂರು ಇವರ ಸಹಯೋಗದೊಂದಿಗೆ ಕರ್ನಾಟಕ ಸರ್ಕಾರ ಈ ವಿಧಾನವನ್ನು ಅಭಿವೃದ್ಧಿಪಡಿಸಿತು

ಜ್ಯಾಮಿತಿಯ ಸರಾಸರಿಯನ್ನು ತೆಗೆದುಕೊಂಡು ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲಾಗುತ್ತದೆ. ಈ ಮೂರು ಅಂಶಗಳ ಸಾಧನೆಯ ಸರಾಸರಿ ತೆಗೆದುಕೊಂಡು ಅಂಕಗಣಿತ ಸರಾಸರಿ ಲೆಕ್ಕಮಾಡುವುದರಿಂದ, ಒಂದು ಅಂಗದಲ್ಲಿನ ಉತ್ತಮ ಸಾಧನೆಯು ಮತ್ತೊಂದು ಅಂಗದಲ್ಲಿನ ಕಳಪೆ ಸಾಧನೆಯನ್ನು ಸರಿದೂಗಿಸುತ್ತದೆ. ಆದರೆ ಜ್ಯಾಮಿತಿಯ ಸರಾಸರಿಯು, ಯಾವುದೇ ಅಂಗದಲ್ಲಿನ ಕಳಪೆ ಸಾಧನೆಯ ಪ್ರಮಾಣದಷ್ಟು ಒಟ್ಟು ಸರಾಸರಿಯನ್ನು ಕಡಿಮೆ ಮಾಡುತ್ತದೆ. ಆದರೆ, ಜ್ಯಾಮಿತಿಯ ಸರಾಸರಿಯಲ್ಲಿ, ಯಾವುದಾದರೊಂದು ಸೂಚಕವು ಸೊನ್ನೆಯಿದ್ದರೆ, ಅಂತಿಮ ಮೌಲ್ಯವು ಸೊನ್ನೆಯಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಲು, ಪ್ರತಿ ಸೂಚಕದ ಮೌಲ್ಯವನ್ನು ಸೊನ್ನೆಯಲ್ಲದ ಮೌಲ್ಯಕ್ಕೆ ಪರಿವರ್ತಿಸಲಾಗಿದೆ. ಈ ಪರಿವರ್ತನೆಯ ಪ್ರಕ್ರಿಯೆಯನ್ನು ಪ್ರತಿ ಸೂಚ್ಯಂಕದ ಮಾಪನದ ವಿವರಣೆಯೊಂದಿಗೆ ವಿವರಿಸಲಾಗಿದೆ.

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾದ ಅಂಗಗಳನ್ನು ಮತ್ತು ಅದರ ಉಪ-ಸೂಚ್ಯಂಕಗಳಾದ ಜೀವನದ ಮಟ್ಟ, ಶಿಕ್ಷಣ ಮತ್ತು ಆರೋಗ್ಯದ ಚರಮೌಲ್ಯಗಳಿಗೆ ಬಳಸಲಾದ ದತ್ತಾಂಶದ ಮೂಲಗಳನ್ನು ಕೋಷ್ಟಕ 1.2 ರಲ್ಲಿ ನೀಡಲಾಗಿದೆ.

**ಕೋಷ್ಟಕ 1.2: ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾಗುವ ಸೂಚಕಗಳ ವಿವರ**

| ಅಂಗ | ಸೂಚಕ | ಧನಾತ್ಮಕ/ಋಣಾತ್ಮಕ ಸೂಚಕ | ಯೂನಿಟ್ | ಅರ್ಥನಿರೂಪಣೆ | ದತ್ತಾಂಶದ ಮೂಲ |
|---|---|---|---|---|---|
| ಜೀವನದ ಮಟ್ಟ | ಅಡುಗೆ ಇಂಧನ ಲಭ್ಯತೆ | ಧನಾತ್ಮಕ | ಶೇ. | ಆಧುನಿಕ ಇಂಧನಗಳನ್ನು ಬಳಸುತ್ತಿರುವ ಕುಟುಂಬಗಳ ಪ್ರಮಾಣ: (ಎಲ್.ಪಿ.ಜಿ ವಿದ್ಯುತ್ ಸಂಪರ್ಕ ಮತ್ತು ಜೈವಿಕಅನಿಲ) | 2011 ಜನಗಣತಿ |
| | ಶೌಚಾಲಯದ ಲಭ್ಯತೆ | ಧನಾತ್ಮಕ | ಶೇ. | ಮನೆಯ ಆವರಣದಲ್ಲಿಯೇ ಶೌಚಾಲಯದ ಸೌಲಭ್ಯವಿರುವ ಕುಟುಂಬಗಳ ಶೇಕಡಾವಾರು | 2011 ಜನಗಣತಿ |
| | ಸುರಕ್ಷಿತ ಕುಡಿಯುವ ನೀರಿನ ಲಭ್ಯತೆ | ಧನಾತ್ಮಕ | ಶೇ. | ನಲ್ಲಿ, ಕೊಳವೆ ಬಾವಿ, ಕೈಪಂಪು ಮತ್ತು ನಳಕೆ ಬಾವಿ ಲಭ್ಯವಿರುವ ಕುಟುಂಬಗಳ ಶೇಕಡಾವಾರು | 2011 ಜನಗಣತಿ |
| | ವಿದ್ಯುತ್ ಸಂಪರ್ಕದ ಲಭ್ಯತೆ | ಧನಾತ್ಮಕ | ಶೇ. | ವಿದ್ಯುತ್ ಸಂಪರ್ಕವಿರುವ ಕುಟುಂಬಗಳ ಶೇಕಡಾವಾರು | 2011 ಜನಗಣತಿ |
| | ಶಾಶ್ವತ ಮನೆಗಳ ಲಭ್ಯತೆ | ಧನಾತ್ಮಕ | ಶೇ. | ಶಾಶ್ವತ ಮನೆಗಳು ಲಭ್ಯವಿರುವ ಕುಟುಂಬಗಳ ಶೇಕಡಾವಾರು | 2011 ಜನಗಣತಿ |
| | ಕೃಷಿಯೇತರ ಕಾರ್ಮಿಕರು (ಪ್ರಧಾನವಾದದ್ದು ಮತ್ತು ಅತಿ ಸಣ್ಣ ಕಾರ್ಮಿಕರು) | ಧನಾತ್ಮಕ | ಶೇ. | ಕೃಷಿಯೇತರ ಕಾರ್ಮಿಕರ ಶೇಕಡಾವಾರು (ಪ್ರಧಾನ ಮತ್ತು ಅತಿ ಸಣ್ಣ ಕಾರ್ಮಿಕರು) | 2011 ಜನಗಣತಿ |
| | ತಲಾ ಆದಾಯ | ಧನಾತ್ಮಕ | ತಲಾ ಆದಾಯ | ತಾಲುಕಿನ ಜನರ ಆದಾಯದ ಸರಾಸರಿಯನ್ನು ತಲಾ ಆದಾಯ ಎಂದು ವರ್ಣಿಸಲಾಗಿದೆ | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| ಆರೋಗ್ಯ | ಮಕ್ಕಳ ಮರಣ ಪ್ರಮಾಣ | ಋಣಾತ್ಮಕ | ಪ್ರತಿ 1000 ಜೀವಂತ ಜನನಗಳಿಗೆ | ಮಕ್ಕಳ ಮರಣ ಪ್ರಮಾಣ, 5ಕ್ಕಿಂತ ಕಡಿಮೆ ವಯಸ್ಸಿನ ಮರಣ ಪ್ರಮಾಣವೆಂದೂ ಕರೆಯಲಾಗುತ್ತದೆ ಅಂದರೆ ನವಜಾತ ಮಕ್ಕಳು 5 ವರ್ಷ ವಯಸ್ಸನ್ನು ತಲುಪುವ ಮುನ್ನ ಸಾಯುವ ಸಾಧ್ಯತೆ ಪ್ರತಿ 1000ಕ್ಕೆ, ಸಧ್ಯದ ವಯೋಮಾನ–ನಿರ್ದಿಷ್ಟ ಮರಣ ಪ್ರಮಾಣಕ್ಕೆ ಒಳಪಟ್ಟಲ್ಲಿ | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ತಾಯಂದಿರ ಮರಣ ಪ್ರಮಾಣ | ಋಣಾತ್ಮಕ | ಪ್ರತಿ 100000 ಜೀವಂತ ಜನ್ಮ | ತಾಯಂದಿರ ಮರಣ ಪ್ರಮಾಣ ಎಂದರೆ ಗರ್ಭಧಾರಣೆಯ ಮತ್ತು ಹೆರಿಗೆಯ ಅವಧಿಯಲ್ಲಿ ಪ್ರತಿ 100000 ಜೀವಂತ ಜನ್ಮಗಳಿಗೆ ಮರಣ ಹೊಂದುವ ಮಹಿಳೆಯರ ಸಂಖ್ಯೆ | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| ಶಿಕ್ಷಣ | ಸಾಕ್ಷರತೆ ಪ್ರಮಾಣ | ಧನಾತ್ಮಕ | ಶೇ. | ಓದು ಮತ್ತು ಬರೆಯಬಲ್ಲ 7ವರ್ಷ ವಯಸ್ಸಿಗಿಂತ ಹೆಚ್ಚಿನ ಜನರ ಶೇಕಡಾವಾರು | ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| | ಒಟ್ಟು ದಾಖಲಾತಿ ಪ್ರಮಾಣ | ಧನಾತ್ಮಕ | ಶೇ. | ಪ್ರಾಥಮಿಕ ಮತ್ತು ಪ್ರೌಢ ತರಗತಿಗಳಿಗೆ ದಾಖಲಾಗುವ 6–16 ವರ್ಷ ವಯಸ್ಸಿನ ಮಕ್ಕಳ ಶೇಕಡಾವಾರು | ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ |

### 1.3.1.1 ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಅಂದಾಜಿಸಲು ಅನುಸರಿಸಲಾದ ವಿಧಾನ

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಕೆಳಕಂಡ ಕ್ರಮಗಳನ್ನು ಅನುಸರಿಸಲಾಯಿತು:

**ಸ್ವತಂತ್ರ ಮೌಲ್ಯವನ್ನು ಸೂಚ್ಯಂಕ ಮೌಲ್ಯವನ್ನಾಗಿ ಪರಿವರ್ತಿಸುವುದು:**

ಸೂಚ್ಯಂಕ ಮೌಲ್ಯವನ್ನು ಗಣಿಸಲು ಬಳಸಲಾಗುವ ಸೂತ್ರವು ಧನಾತ್ಮಕ ಮತ್ತು ಋಣಾತ್ಮಕ ಸೂಚಕಗಳಿಗೆ ಭಿನ್ನವಾಗಿವೆ, ಏಕೆಂದರೆ ಉನ್ನತ ಸೂಚ್ಯಂಕ ಮೌಲ್ಯವು ಉನ್ನತ ಅಭಿವೃದ್ಧಿ ಮಟ್ಟವನ್ನು ಪ್ರತಿನಿಧಿಸುತ್ತದೆ. ಧನಾತ್ಮಕ ಸೂಚಕಗಳ ಸೂಚ್ಯಂಕ ಮೌಲ್ಯವನ್ನು ಕೆಳಕಂಡ ಸೂತ್ರದಿಂದ ಗಣಿಸಲಾಯಿತು:

$$\text{Index value} = \frac{(\text{Actual value} - \text{Modified minimum value})}{(\text{Maximum value} - \text{Modified minimum value})}$$

ಬದಲಾಯಿಸಿದ ಕನಿಷ್ಠ ಮೌಲ್ಯವು ಗಮನಿಸಲಾದ ಕನಿಷ್ಠ ಮೌಲ್ಯದ ಶೇ. 90 ರಷ್ಟಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದೆಂದರೆ, ಧನಾತ್ಮಕ ಸೂಚಕಗಳ ಗಮನಿಸಲಾದ ಕನಿಷ್ಠ ಮೌಲ್ಯದಿಂದ 10ಶೇ.ರಷ್ಟನ್ನು ತೆಗೆದರೆ, ಬದಲಾಯಿಸಿದ ಕನಿಷ್ಠ ಮೌಲ್ಯ ಸಿಗುತ್ತದೆ.

ಋಣಾತ್ಮಕ ಸೂಚಕಗಳ ಸೂಚ್ಯಂಕ ಮೌಲ್ಯವನ್ನು ಕೆಳಕಂಡ ಸೂತ್ರದಿಂದ ಗಣಿಸಲಾಯಿತು:

$$\text{Index value} = \frac{(\text{Modified maximum value} - \text{Actual value})}{(\text{Modified maximum value} - \text{Minimum value})}$$

ಬದಲಾಯಿಸಿದ ಗರಿಷ್ಠ ಮೌಲ್ಯವು ಗಮನಿಸಲಾದ ಗರಿಷ್ಠ ಮೌಲ್ಯದ ಶೇ. 90 ರಷ್ಟು ಹೆಚ್ಚಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದೆಂದರೆ, ಋಣಾತ್ಮಕ ಸೂಚಕಗಳ ಗಮನಿಸಲಾದ ಗರಿಷ್ಠ ಮೌಲ್ಯದಿಂದ ಶೇ. 10 ರಷ್ಟನ್ನು ಸೇರಿಸಿದರೆ, ಬಹಲಾಯಿಸಿದ ಗರಿಷ್ಠ ಮೌಲ್ಯ ಸಿಗುತ್ತದೆ. ಬದಲಾಯಿಸಿದ ಕನಿಷ್ಠ ಮತ್ತು ಗರಿಷ್ಠ ಮೌಲ್ಯಗಳ ಬಳಕೆಯಿಂದ ಯಾವುದೇ ಒಂದು ಮೌಲ್ಯವು ಶೂನ್ಯವಾಗಿರದಂತೆ ಖಚಿತಪಡಿಸುತ್ತದೆ.

### ಆದಾಯದ ಸೂಚಕದ ಬಳಕೆ ವಿಧಾನ:

ತಾಲೂಕು ಆಂತರಿಕ ಉತ್ಪನ್ನಾಧಾರಿತ ತಲಾ ಆದಾಯವನ್ನು ಅದರ ಕಡಿಮೆಯಾಗುತ್ತಿರುವ ಪ್ರಾಮುಖ್ಯತೆಯನ್ನು ಸೂಚಿಸಲು ತಲಾಆದಾಯವನ್ನು ಮೊದಲು ಲಾಗರಿದಮ್ ಮೌಲ್ಯಗಳಿಗೆ ಪರಿವರ್ತಿಸಲಾಯಿತು ಎಂಬುದನ್ನು ಗಮನಿಸಬೇಕು. 1990ರಲ್ಲಿ ಯುಯೆನ್‌ಡಿಪಿ ಸಿದ್ಧಪಡಿಸಿದ ಮೊದಲ ಮಾನವ ಅಭಿವೃದ್ಧಿ ವರದಿಯಿಂದಲೂ ತಲಾ ಆದಾಯ ಮಾಪನದಲ್ಲಿ ಈ ರೀತಿಯ ನಿರ್ವಹಣೆಯನ್ನು ಅನುಸರಿಸಲಾಗುತ್ತಿದೆ. ಹೀಗಾಗಿ, ಅದಾಯದ ಮಾಪನಗಳನ್ನು ಮೊದಲು ಲಾಗರಿದಂ ಮೌಲ್ಯಗಳಿಗೆ ಪರಿವರ್ತಿಸಿ, ಅವನ್ನು ತಾಲೂಕು ಆಂತರಿಕ ಉತ್ಪನ್ನಾಧಾರಿತ ತಲಾ ಆದಾಯದ ಬದಲಾಯಿಸಿದ ಕನಿಷ್ಠ ಲಾಗರಿದಮ್ ಮೌಲ್ಯಕ್ಕೆ ಮತ್ತು ತಾಲೂಕು ಆಂತರಿಕ ಉತ್ಪನ್ನಾಧಾರಿತ ತಲಾ ಆದಾಯದ ಗರಿಷ್ಠ ಲಾಗರಿದಮ್ ಮೌಲ್ಯಕ್ಕೆ ಸಂಬಂದಿಸಿದಂತೆ ಯಥಾಸ್ಥಿತಿಗೆ ತರಲಾಯಿತು.

### ವಿಮಿತ ಆಧಾರಿತ ಸೂಚ್ಯಂಕದ ಗಣತಿ:

ಮಾ..ಅ.ಸೂ. ನ ಗಣತಿಯ ಎರಡನೆ ಕ್ರಮವೆಂದರೆ ಪ್ರತಿ ವಿಮಿತಿಗೆ ಜ್ಯಾಮಿತಿಯ ಸರಾಸರಿಯನ್ನು ಅಳೆಯುವುದು. ಪ್ರತಿ ವಿಮಿತಿಗೆ ಜ್ಯಾಮಿತಿಯ ಸರಾಸರಿಯನ್ನು ಕೆಳಗಿನ ಸೂತ್ರದಿಂದ ಗಣಿಸಲಾಗುವುದು:

$$\text{Dimension based Index} = (T1 * T2 * T3 * .... *In)^{\left(\frac{1}{n}\right)}$$

ಙ ಎಂದರೆ ಒಂದು ವಿಮಿತಿಗೆ ಪರಿಗಣಿಸಲಾದ ಸೂಚಕಗಳ ಸಂಖ್ಯೆ.

### ಮಾನವ ಅಭಿವೃದ್ಧಿ ಸೂಚ್ಯಂಕದ ಗಣತಿ

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗಣಸಲು ಅಂತಿಮ ಕ್ರಮವೆಂದರೆ ಮೂರು ವಿಮಿತ ಆಧಾರಿತ ಸೂಚ್ಯಂಕಗಳ ಜ್ಯಾಮಿತಿಯ ಸರಾಸರಿಯನ್ನು ಗಣಸುವುದು.

$$\text{HDI} = (\text{Standard of Living Index}) * (\text{Education Index}) * (\text{Health Index})^{\frac{1}{n}}$$

### 1.3.2 ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ

ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವು ಮೂರು ವಿಮಿತಿಗಳನ್ನೊಳಗೊಂಡ ಸಂಘಟಿತ ಸೂಚ್ಯಂಕ: 1. ಪ್ರಜನನ ಆರೋಗ್ಯ 2. ಸಬಲೀಕರಣ ಮತ್ತು 3. ಕಾರ್ಮಿಕ ಮಾರುಕಟ್ಟೆ. ಪುರುಷ ಮತ್ತು ಮಹಿಳೆಯರ ಸಾಧನೆಯಲ್ಲಿನ ಅಸಮಾನತೆಯಿಂದ ಉಂಟಾಗಿರುವ ಮಾನವ ಅಭಿವೃದ್ಧಿಯ ನಷ್ಟವನ್ನೂ, ಇದರ ಜೊತೆಗೆ ಅವರಿಗೆ ಲಭ್ಯವಿರುವ ಅವಕಾಶಗಳನ್ನೂ ಮಾಪನ ಮಾಡುತ್ತದೆ. ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವನ್ನು ಗಣಿಸಲು ಬಳಸಲಾದ ಚರಮೌಲ್ಯಗಳ ವಿವರಗಳನ್ನು ಕೋಷ್ಟಕ 1.3 ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3: ಲಿಂಗ ಸಂಬಂಧಿ ಅಸಮಾನತೆಯನ್ನು ಗಣಿಸಲು ಬಳಸಲಾಗುವ ಸೂಚಕಗಳ ವಿವರಗಳು**

| ವಿಮಿತಿ | ಸೂಚಕ | ಧನಾತ್ಮಕ/ಋಣಾತ್ಮಕ ಸೂಚಕ | ಯೂನಿಟ್ | ಅರ್ಥನಿರೂಪಣೆ | ದತ್ತಾಂಶ ಮೂಲ |
|---|---|---|---|---|---|
| ಪ್ರಜನನ ಆರೋಗ್ಯ | ತಾಯಂದಿರ ಮರಣ ಪ್ರಮಾಣ | ಋಣಾತ್ಮಕ | ಪ್ರತಿ 100000 ಜನನಗಳು | ತಾಯಂದಿರ ಮರಣ ಪ್ರಮಾಣ ಎಂದರೆ ಗರ್ಭಧಾರಣೆಯ ಮತ್ತು ಹೆರಿಗೆಯ ಅವಧಿಯಲ್ಲಿ ಪ್ರತಿ 100000 ಜೀವಂತ ಜನನಗಳಿಗೆ ಮರಣಹೊಂದುವ ಮಹಿಳೆಯರ ಸಂಖ್ಯೆ | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ಸಾಂಸ್ಥಿಕ ಹೆರಿಗೆಗಳು | ಧನಾತ್ಮಕ | ಶೇ. | ಒಟ್ಟು ಹೆರಿಗೆಗಳಿಗೆ ಹೋಲಿಸಿದಂತೆ ಸಾಂಸ್ಥಿಕ ಹೆರಿಗೆಗಳ ಶೇಕಡಾವಾರು | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ರಕ್ತಹೀನತೆ ಇರುವ ಗರ್ಭಿಣಿಯರು | ಋಣಾತ್ಮಕ | ಶೇ. | ಒಟ್ಟು ಗರ್ಭಿಣಿಯರಿಗೆ ಹೋಲಿಸಿದಂತೆ ಅತಿಯಾದ ರಕ್ತಹೀನತೆ ಇರುವ ಗರ್ಭಿಣೀಯರ ಸಂಖ್ಯೆ | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |

| ವಿಮಿತಿ | ಸೂಚಕ | ಧನಾತ್ಮಕ/ಋಣಾತ್ಮಕ ಸೂಚಕ | ಯೂನಿಟ್ | ಅರ್ಥನಿರೂಪಣೆ | ದತ್ತಾಂಶ ಮೂಲ |
|---|---|---|---|---|---|
| ಸಬಲೀಕರಣ | ಪಂಚಾಯತ್ ರಾಜ್ ಸಂಸ್ಥೆ ಮತ್ತು ನ.ಸ್ಥ.ಸಂ. ಗಳಲ್ಲಿ ಮಹಿಳಾ ಚುನಾಯಿತ ಪ್ರತಿನಿಧಿಗಳು | ಧನಾತ್ಮಕ | ಶೇ. | ಪಂಚಾಯತ್ ರಾಜ್ ಸಂಸ್ಥೆ ಮತ್ತು ನ.ಸ್ಥ.ಸಂ. ಗಳಲ್ಲಿ ಒಟ್ಟು ಚುನಾಯಿತ ಪ್ರತಿನಿಧಿಗಳಿಗೆ ಹೋಲಿಸಿದಂತೆ ಮಹಿಳಾ ಚುನಾಯಿತ ಪ್ರತಿನಿಧಿಗಳ ಸಂಖ್ಯೆ | ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ ಅಂಶಗಳ ನೋಟ 2011–12 |
| | ಪಂಚಾಯತ್ ರಾಜ್ ಸಂಸ್ಥೆ ಮತ್ತು ನ.ಸ್ಥ.ಸಂ. ಗಳಲ್ಲಿ ಪುರುಷ ಚುನಾಯಿತ ಪ್ರತಿನಿಧಿಗಳು | ಧನಾತ್ಮಕ | ಶೇ. | ಪಂಚಾಯತ್ ರಾಜ್ ಸಂಸ್ಥೆ ಮತ್ತು ನ.ಸ್ಥ.ಸಂ. ಗಳಲ್ಲಿ ಒಟ್ಟು ಚುನಾಯಿತ ಪ್ರತಿನಿಧಿಗಳಿಗೆ ಹೋಲಿಸಿದಂತೆ ಪುರುಷ ಚುನಾಯಿತ ಪ್ರತಿನಿಧಿಗಳ ಸಂಖ್ಯೆ | ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ ಅಂಶಗಳ ನೋಟ 2011–12 |
| | 0–6 ವರ್ಷ ವಯೋಮಾನದ ಹೆಣ್ಣುಮಕ್ಕಳು | ಧನಾತ್ಮಕ | ಶೇ. | 0–6 ವರ್ಷ ವಯೋಮಾನದ ಒಟ್ಟು ಮಕ್ಕಳ ಸಂಖ್ಯೆಗೆ ಹೋಲಿಸಿದಂತೆ ಹೆಣ್ಣುಮಕ್ಕಳ ಶೇಕಡಾವಾರು | 2011 ಜನಗಣತಿ |
| | 0–6 ವರ್ಷ ವಯೋಮಾನದ ಗಂಡುಮಕ್ಕಳು | ಧನಾತ್ಮಕ | ಶೇ. | 0–6 ವರ್ಷ ವಯೋಮಾನದ ಒಟ್ಟು ಮಕ್ಕಳ ಸಂಖ್ಯೆಗೆ ಹೋಲಿಸಿದಂತೆ ಗಂಡುಮಕ್ಕಳ ಶೇಕಡಾವಾರು | 2011 ಜನಗಣತಿ |
| | ಮಹಿಳಾ ಸಾಕ್ಷರತೆ | ಧನಾತ್ಮಕ | ಶೇ. | 7ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಒಟ್ಟು ಜನಸಂಖ್ಯೆಗೆ ಹೋಲಿಸಿದಂತೆ ಮಹಿಳೆಯರ ಸಾಕ್ಷರತಾ ಶೇಕಡಾವಾರು | 2011 ಜನಗಣತಿ |
| | ಪುರುಷ ಸಾಕ್ಷರತೆ | ಧನಾತ್ಮಕ | ಶೇ. | 7 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಒಟ್ಟು ಜನಸಂಖ್ಯೆಗೆ ಹೋಲಿಸಿದಂತೆ ಮಹಿಳೆಯರ ಸಾಕ್ಷರತಾ ಶೇಕಡಾವಾರು | 2011 ಜನಗಣತಿ |
| ಕಾರ್ಮಿಕ ಮಾರುಕಟ್ಟೆ | ಮಹಿಳಾ ದುಡಿಮೆ ಸಹಭಾಗಿತ್ವ ಪ್ರಮಾಣ | ಧನಾತ್ಮಕ | ಶೇ. | 7 ವರ್ಷಕ್ಕಿಂತ ಹೆಚ್ಚಿನ ವಯೋಮಾನದ ಒಟ್ಟು ಜನಸಂಖ್ಯೆಗೆ ಹೋಲಿಸಿದಂತೆ ಮಹಿಳಾ ಕಾರ್ಮಿಕರ ಶೇಕಡಾವಾರು | 2011 ಜನಗಣತಿ |
| | ಪರುಷ ದುಡಿಮೆ ಸಹಭಾಗಿತ್ವ ಪ್ರಮಾಣ | ಧನಾತ್ಮಕ | ಶೇ. | 7 ವರ್ಷಕ್ಕಿಂತ ಹೆಚ್ಚಿನ ವಯೋಮಾನದ ಒಟ್ಟು ಜನಸಂಖ್ಯೆಗೆ ಹೋಲಿಸಿದಂತೆ ಪುರುಷ ಕಾರ್ಮಿಕರ ಶೇಕಡಾವಾರು | 2011 ಜನಗಣತಿ |
| | ಮಹಿಳಾ ಕೃಷಿಯೇತರ ಕಾರ್ಮಿಕರು | ಧನಾತ್ಮಕ | ಶೇ. | ಒಟ್ಟು ಮಹಿಳಾ ಕಾರ್ಮಿಕರಿಗೆ ಹೋಲಿಸಿದಂತೆ ಕೃಷಿಯೇತರ ಕಾರ್ಮಿಕರ ಶೇಕಡಾವಾರು | 2011 ಜನಗಣತಿ |
| | ಪುರುಷ ಕೃಷಿಯೇತರ ಕಾರ್ಮಿಕರು | ಧನಾತ್ಮಕ | ಶೇ. | ಒಟ್ಟು ಪುರುಷ ಕಾರ್ಮಿಕರಿಗೆ ಹೋಲಿಸಿದಂತೆ ಕೃಷಿಯೇತರ ಕಾರ್ಮಿಕರ ಶೇಕಡಾವಾರು | 2011 ಜನಗಣತಿ |
| | ಮಹಿಳಾ ಕೃಷಿ ಕೂಲಿ ದರ | ಧನಾತ್ಮಕ | ಶೇ. | ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ಮಹಿಳಾ ಕೃಷಿ ಕಾರ್ಮಿಕರ ಕನಿಷ್ಟ ಕೂಲಿ ದರ | ಕೃಷಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| | ಪುರುಷ ಕೃಷಿ ಕೂಲಿ ದರ | ಧನಾತ್ಮಕ | ಶೇ. | ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ಪುರುಷ ಕೃಷಿ ಕಾರ್ಮಿಕರ ಕನಿಷ್ಟ ಕೂಲಿ ದರ | ಕೃಷಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ |

### 1.3.2.1 ಲಿಂಗ ಸಂಬಂಧಿ ಅಸಮಾನತೆಯ ಮಾಪನ ವಿಧಾನ

ಲಿಂಗ ಸಂಬಂಧಿ ಅಸಮಾನತೆಯನ್ನು ಗಣಿಸಲು ಕೆಳಕಂಡ ಪ್ರಕ್ರಿಯೆಯನ್ನು ಅನುಸರಿಸಲಾಗುವುದು. ಮೊದಲು, ಮೂರು ವಿಮಿತಿಗಳ ಅಂದರೆ, ಪ್ರಜನನ ಆರೋಗ್ಯ, ಸಬಲೀಕರಣ ಮತ್ತು ಪುರುಷ ಮತ್ತು ಮಹಿಳೆಯರ ಕಾರ್ಮಿಕ ಮಾರುಕಟ್ಟೆ, ಮೌಲ್ಯಗಳನ್ನು ಯಥಾಸ್ಥಿತಿಗೆ ತರಲಾಗುವುದು ಮತ್ತು ಜ್ಯಾಮಿತಿಯ ಸರಾಸರಿಯನ್ನು ಬಳಸಿ ಕ್ರೋಢೀಕರಿಸಲಾಗುವುದು. ಯಾವುದೇ ನಿರ್ದಿಷ್ಟ ದತ್ತಾಂಶ ಇಲ್ಲದಿದ್ದಲ್ಲಿ, ಸರಾಸರಿ ಲಿಂಗದ ಪ್ರಜನನ ಆರೋಗ್ಯ ವಿಮಿತಿಯನ್ನು ಒಂದು ಎಂದು ಪರಿಗಣಿಸಿ, ಇದರಿಂದ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವನ್ನು ಗಣಿಸಲಾಗುವುದು. ಪುರುಷ ಮತ್ತು ಮಹಿಳೆಯರ ಕ್ರೋಢೀಕರಿಸಿದ ಮೌಲ್ಯಗಳು, ಆರೋಗ್ಯವಾದ ಜೀವನ ಸಾಗಿಸುವುದರಲ್ಲಿ, ಕಾರ್ಮಿಕ ಪಡೆಯಲ್ಲಿ ಪಾಲುದಾರಿಕೆ ಮತ್ತು ತಮ್ಮ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಲು ಸಹಾಯಕವಾಗುವಂತೆ ಸರ್ಕಾರಿ ಕ್ಷೇತ್ರದಲ್ಲಿ ಪ್ರಾತಿನಿಧಿತ್ವದ ಪ್ರಮಾಣ, ಇವುಗಳನ್ನು ಪ್ರತಿನಿಧಿಸುತ್ತವೆ. ಪುರುಷ ಮತ್ತು ಮಹಿಳೆಯರ ಈ ಮೌಲ್ಯಗಳನ್ನು ನಂತರ ಹಾರ್ಮೋನಿಕ್ ಸರಾಸರಿಯನ್ನು ಬಳಸಿ ಕ್ರೋಢೀಕರಿಸಲಾಗುವುದು ಮತ್ತು ಇದು ಸಮಾನವಾಗಿ ವಿತರಿಸಲಾದ ಲಿಂಗ ಸೂಚ್ಯಂಕವನ್ನು ಪ್ರತಿನಿಧಿಸುತ್ತದೆ. ಈ ಮೌಲ್ಯವನ್ನು, ಈಗ, ಮೂರು ವಿಮಿತಿಗಳ ನಡುವಿನ ಒಟ್ಟು ಸರಾಸರಿಯಾದ ಮತ್ತು ಒಂದರಿಂದ ಕಳೆಯಲಾದ ಉಲ್ಲೇಖದ ಮಾನದಂಡಕ್ಕೆ ಹೋಲಿಸಿ, ತಾಲೂಕುಗಳಲ್ಲಿ ಪ್ರಚಲಿತವಾಗಿರುವ ಲಿಂಗ ತಾರತಮ್ಯವನ್ನು ಪತ್ತೆ ಮಾಡಲಾಗುವುದು.

ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವನ್ನು ಗುಣಿಸಲು ಕೆಳಕಂಡ ಕ್ರಮಗಳನ್ನು ಅನುಸರಿಸಲಾಗುವುದು:

### ವಿಮಿತಿ ಆಧಾರಿತ ಸೂಚ್ಯಂಕದ ಗಣತಿ:

ಮಾನವ ಅಭಿವೃದ್ಧಿ ಸೂಚ್ಯಂಕ ನ ಗಣತಿಯನ್ನು ಮೊದಲನೆಯ ಹೆಜ್ಜೆಯೆಂದರೆ ಪ್ರತಿ ವಿಮಿತಿಗೂ ಜ್ಯಾಮಿತಿಯ ಸರಾಸರಿಯನ್ನು ಗಣಿಸುವುದು. ಕೆಳಗಿನ ಸೂತ್ರವನ್ನು

ಬಳಸಿ ಪ್ರತಿ ವಿಮಿತಿಗೆ ಜ್ಯಾಮಿತಿಯ ಸರಾಸರಿಯನ್ನು ಗಣಿಸಲಾಗುವುದು:

$$\text{Dimension based Index} = (T1 * T2 * T3 * .... *In)^{\left(\frac{1}{n}\right)}$$

ಇಲ್ಲಿ ಐ ಎಂದರೆ ವಿಮಿತಿಗೆ ಪರಿಗಣಿಸಲಾಗಿರುವ ಸೂಚಕಗಳ ಸಂಖ್ಯೆ.

## ರಕ್ತಹೀನತೆ ಇರುವ ಗರ್ಭಿಣಿಯರ ನಿರ್ವಹಣೆಯ ಪಾಲು:

ರಕ್ತಹೀನತೆ ಇರುವ ಗರ್ಭಿಣಿಯರ ಚಿಕಿತ್ಸೆಯ ಪಾಲಿನಿಂದ ಒಂದನ್ನು ಕಳೆದು, ರಕ್ತಹೀನತೆ ಇಲ್ಲದ ಗರ್ಭಿಣಿಯರ ಪಾಲನ್ನು ಪಡೆಯಲಾಗುವುದು ಮತ್ತು ಇದನ್ನು ಧನಾತ್ಮಕ ಸೂಚಕವೆಂದ ಪರಿಗಣಿಸಲಾಗಿದೆ. ಏಕೆಂದರೆ ರಕ್ತಹೀನತೆ ಇಲ್ಲದ ಗರ್ಭಿಣಿಯರ ಚಿಕಿತ್ಸೆಯ ಪಾಲಿನಲ್ಲಿ ಸುಧಾರಣೆಯು ತಾಲುಕಿನ ಅಭಿವೃದ್ಧಿ ಸ್ಥಿತಿಯಲ್ಲಿ ಹೆಚ್ಚಳವನ್ನು ತೋರಿಸುತ್ತದೆ.

## ಮಹಿಳೆ ಮತ್ತು ಪುರುಷ ಕೃಷಿ ಕಾರ್ಮಿಕರ ಕೂಲಿ ದರ:

ಮಹಿಳೆ ಮತ್ತು ಪುರುಷ ಕೃಷಿ ಕಾರ್ಮಿಕರ ಕೂಲಿ ದರವನ್ನು, ಮೌಲ್ಯವು ಶುನ್ಯದಿಂದ ಒಂದು ಬರುವಂತೆ, ಸ್ವತಂತ್ರ ಮೌಲ್ಯವನ್ನು ಯಥಾರ್ಥ ಮೌಲ್ಯವನ್ನಾಗಿ ಪರಿವರ್ತಿಸಲಾಗುವುದು. ಸೂಚ್ಯಂಕವನ್ನು ಒಂದೇ ದಿಕ್ಕಿನಲ್ಲಿರುವಂತೆ ಮಾಡಲು, ಧನಾತ್ಮಕ ಮತ್ತು ಋಣಾತ್ಮಕ ಮೌಲ್ಯಗಳ ಸೂಚ್ಯಂಕವನ್ನು ಗಣಿಸಲು ಸೂತ್ರವು ಭಿನ್ನವಾಗಿರುತ್ತದೆ. ಕೆಳಕಂಡ ಸೂತ್ರದಿಂದ ಧನಾತ್ಮಕ ಸೂಚಕಗಳಿಗೆ ಸೂಚ್ಯಂಕ ಮೌಲ್ಯವನ್ನು ಗಣಿಸಲಾಯಿತು.

$$\text{Index value} = \frac{(\text{Actual value} - \text{Modified minimum value})}{(\text{Maximum value} - \text{Modified minimum value})}$$

ಗಮನಿಸಿದ ಕನಿಷ್ಟ ಮೌಲ್ಯದ ಶೇ.೧೦ರಷ್ಟನ್ನು ಬದಲಾಯಿತ ಕನಿಷ್ಟ ಮೌಲ್ಯ ಎನ್ನುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದೆಂದರೆ, ಧನಾತ್ಮಕ ಸೂಚಕಗಳ ಗಮನಿಸಲಾದ ಕನಿಷ್ಟ ಮೌಲ್ಯದಿಂದ ಶೇ 10.ರಷ್ಟನ್ನು ತೆಗೆದರೆ, ಬದಲಾಯಿಸಿದ ಕನಿಷ್ಟ ಮೌಲ್ಯ ಸಿಗುತ್ತದೆ.

## ಪ್ರತಿ ಲಿಂಗ ಗುಂಪಿನಲ್ಲೂ ಎಲ್ಲಾ ವಿಮಿತಿಗಳ ಕ್ರೂಢೀಕರಣ:

ಮ.ಅ.ಸೂ. ಅನ್ನು ಗಣಿಸುವಲ್ಲಿ ಎರಡನೆಯ ಹಂತವೆಂದರೆ, ಪ್ರತಿ ಲಿಂಗ ಗುಂಪಿನಲ್ಲೂ ಜ್ಯಾಮಿತಿಯ ಸರಾಸರಿಯನ್ನು ಬಳಸಿ ಎಲ್ಲಾ ವಿಮಿತಿಗಳಲ್ಲೂ ಕ್ರೂಢೀಕರಿಸುವುದು. ಆದ್ದರಿಂದ, ಮೂರು ವಿಮಿತಿಗಳಾದ ಪ್ರಜನಕ ಆರೋಗ್ಯ, ಸಬಲೀಕರಣ ಮತ್ತು ಕಾರ್ಮಿಕ ಮಾರುಕಟ್ಟೆಗಳನ್ನು ಕೆಳಕಂಡ ಸೂತ್ರದ ಮೂಲಕ ಕ್ರೂಢೀಕರಿಸಲಾಗುವುದು:

$$G(f) = \left(R(f) * E(f) * L(f)\right)^{\frac{1}{3}}$$

ಇದರಲ್ಲಿ

R(f) = ಸ್ತ್ರೀ ಪ್ರಜನಕ ಆರೋಗ್ಯ ವಿಮಿತಿ

E(f) = ಸ್ತ್ರೀ ಸಬಲೀಕರಣ ವಿಮಿತಿ

L(f) = ಸ್ತ್ರೀ ಕಾರ್ಮಿಕ ಮಾರುಕಟ್ಟೆ ವಿಮಿತಿ

$$G(m) = \left(R(m) * E(m) * L(m)\right)^{\frac{1}{3}}$$

ಇದರಲ್ಲಿ

R(m) = ಪುರುಷ ಪ್ರಜನಕ ಆರೋಗ್ಯ ವಿಮಿತಿ

E(m) = ಪುರುಷ ಸಬಲೀಕರಣ ವಿಮಿತಿ

L(m) = ಪುರುಷ ಕಾರ್ಮಿಕ ಮಾರುಕಟ್ಟೆ ವಿಮಿತಿ

## ಲಿಂಗ ವರ್ಗಗಳಲ್ಲಿ ಹಾರ್ಮೊನಿಕ್ ಸರಾಸರಿಗಳನ್ನು ಕ್ರೂಢೀಕರಿಸುವುದು

ಈ ಲಿಂಗವಾರು ಕ್ರೂಢೀಕರಿಸಲಾದ ಮೌಲ್ಯಗಳನ್ನು ಎಲ್ಲಾ ಲಿಂಗಗಳಲ್ಲಿ ಹಾರ್ಮೋನಿಕ್ ಸರಾಸರಿಯನ್ನು ಬಳಸಿ ಇನ್ನೂ ಕ್ರೂಢೀಕರಿಸಿ, ಸಮನಾಗಿ ವಿತರಿಸಿದ ಲಿಂಗ ಸೂಚ್ಯಂಕವನ್ನು ಪಡೆಯಲಾಗುವುದು. ಪ್ರತಿ ತಾಲುಕಿನಲ್ಲೂ ಇರುವ ಸ್ತ್ರೀ ಮತ್ತು ಪುರುಷ ತಾರತಮ್ಯವನ್ನು ಅಳೆಯಲು ಇದನ್ನು ಪಡೆಯಲಾಗುವುದು. ಕೆಳಕಂಡ ಸೂತ್ರವನ್ನು ಬಳಸಿ ಹಾರ್ಮೊನಿಕ್ ಸರಾಸರಿಯನ್ನು ಗಣಿಸಲಾಗುವುದು:

$$HARM(G(f), G(m)) = \left\{ \frac{\left[\left(\frac{1}{G(f)}\right) + \left(\frac{1}{G(m)}\right)\right]}{2} \right\} \wedge (-1)$$

## ಉಲ್ಲೇಖ ಸೂಚ್ಯಂಕವನ್ನು ಗಣಿಸುವುದು:

ಸ್ತ್ರೀ ಮತ್ತು ಪುರುಷ ಸೂಚ್ಯಂಕಗಳನ್ನು ಸಮನಾದ ತೂಕದಿಂದ ಕ್ರೂಢೀಕರಿಸುವುದರಿಂದ ಮತ್ತು ವಿಮಿತಿಗಳಿಗೆ ಅಡ್ಡವಾಗಿ ಕ್ರೂಢೀಕರಿಸುವುದರಿಂದ ಉಲ್ಲೇಖ ಸೂಚ್ಯಂಕವನ್ನು ಪಡೆಲಾಗುವುದು. ಕೆಳಗಿನ ಸೂತ್ರದಿಂದ ಉಲ್ಲೇಖ ಸೂಚ್ಯಂಕವನ್ನು ಗಣಿಸಲಾಗುವುದು:

(G(f),G(m)) = (ಆರೋಗ್ಯ * ಸಬಲೀಕರಣ * ಕಾರ್ಮಿಕ ಮಾರುಕಟ್ಟೆ)$^{1/3}$

ಇದರಲ್ಲಿ

$$\text{Health} = \left\{ \left( \left[ \frac{1}{MMR} \right] * D * ANE \right)^{\frac{1}{3}} + 1 \right) / (2) \}$$

MMR = ತಾಯಂದಿರ ಮರಣ ಪ್ರಮಾಣ

D = ಸಾಂಸ್ಥಿಕ ಹೆರಿಗೆಗಳ ಪಾಲು

ANE = ರಕ್ತಹೀನತೆ ಇಲ್ಲದ ಗರ್ಭಿಣಿಯರ ಪಾಲು

ಇದರಲ್ಲಿ

$$\text{Empowerment} = \left\{ [R(f) * CHLD(f) * LIT(f)]^{\frac{1}{3}} + [R(m) * CHLD(m) * LIT(m)]^{\frac{1}{3}} \right\} / (2)$$

R(f) = ನಗರ ಸ್ಥಳೀಯ ಸಂಸ್ಥೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳಾ ಚುನಾಯಿತ ಪ್ರತಿನಿಧಿಗಳ ಪಾಲು

CHLD(f) = 0-6 ವರ್ಷ ವಯಸ್ಸಿನ ಹೆಣ್ಣುಮಕ್ಕಳ ಪಾಲು

LIT(f) = ಮಹಿಳಾ ಸಾಕ್ಷರತೆಯ ಪಾಲು

R(m) = ನಗರ ಸ್ಥಳೀಯ ಸಂಸ್ಥೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪುರುಷ ಚುನಾಯಿತ ಪ್ರತಿನಿಧಿಗಳ ಪಾಲು

CHLD(m) = 0-6 ವರ್ಷ ವಯಸ್ಸಿನ ಗಂಡುಮಕ್ಕಳ ಪಾಲು

LIT(m) = ಪುರುಷರ ಸಾಕ್ಷರತೆಯ ಪಾಲು

ಇದರಲ್ಲಿ

$$\text{Labor Market} = \left\{ [W(f) * N(f) * Wage(f)]^{\frac{1}{3}} + [W(m) * N(m) * Wage(m)]^{\frac{1}{3}} \right\} / (2)$$

W(f) = ಮಹಿಳೆಯರ ಕೆಲಸದ ಸಹಭಾಗಿತ್ವದ ದರ

N(f) = ಕೃಷಿಯೇತರ ಕ್ಷೇತ್ರದ ಮಹಿಳಾ ಕಾರ್ಮಿಕರ ಪಾಲು

Wage(f) = ಯಥಾವತ್ತಾಗಿಸಿದ ಮಹಿಳಾ ಕೃಷಿ ಕೂಲಿ ದರ

W(m) = ಪುರುಷರ ಕೆಲಸದ ಸಹಭಾಗಿತ್ವದ ದರ

N(m) = ಕೃಷಿಯೇತರ ಕ್ಷೇತ್ರದ ಪುರುಷ ಕಾರ್ಮಿಕರ ಪಾಲು

Wage(m) = ಯಥಾವತ್ತಾಗಿಸಿದ ಪುರುಷರ ಕೃಷಿ ಕೂಲಿ ದರ

## ಲಿಂಗ ಸಂಬಂಧಿ ಅಸಮಾನತೆಯ ಗಣತಿ

ಸಮಾನವಾಗಿ ವಿತರಿಸಿದ ಲಿಂಗ ಸೂಚ್ಯಂಕವನ್ನು ಉಲ್ಲೇಖ ಸೂಚ್ಯಂಕವನ್ನು ಹೋಲಿಸುವುದರಿಂದ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವನ್ನು ಪಡೆಯಲಾಗುವುದು. ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವು ಶೂನ್ಯದಿಂದ ಒಂದರವರೆಗೂ ಇದ್ದು, ಶೂನ್ಯವು ವಿಮಿತಿಗಳಲ್ಲಿ ಲಿಂಗಗಳ ನಡುವೆ ಯಾವ ತಾರತಮ್ಯವೂ ಇಲ್ಲದಿರುವುದನ್ನು ಸೂಚಿಸಿದರೆ, ಒಂದು ವಿಮಿತಿಗಳಲ್ಲಿ ಲಿಂಗಗಳ ನಡುವೆ ಪೂರ್ಣ ತಾರತಮ್ಯವನ್ನು ಸೂಚಿಸುತ್ತದೆ. ಲಿಂಗ ಸಂಬಂಧಿ ಅಸಮಾನತೆಯನ್ನು ಗಣಿಸಲು ಕೆಳಕಂಡ ಸೂತ್ರವನ್ನು ಬಳಸಲಾಗುವುದು:

$$GII = 1 - [HARM(G(f), G(m))/G(f, m)]$$

## 1.4 ಪೂರಕವಾದ ಸೂಚ್ಯಂಕಗಳು

### 1.4.1 ಮಕ್ಕಳ ಅಭಿವೃದ್ಧಿ ಸೂಚ್ಯಂಕ

ಇಂಗ್ಲೆಂಡ್ ದೇಶದ ಸೇವ್ ದಿ ಚಿಲ್ಡ್ರೆನ್ ಎಂಬ ಸಂಸ್ಥೆಯಿಂದ ನಡೆದ ಪ್ರಬಲ ಮತ್ತು ನಿರಂತರ ಆಂದೋಲನದಿಂದ ಮಾನವ ಅಭಿವೃದ್ಧಿ ವರದಿಯ ಭಾಗವಾಗಿ ಮಕ್ಕಳ ಅಭಿವೃದ್ಧಿ ಸೂಚ್ಯಂಕ(ಮಕ್ಕಳ ಅಭಿವೃದ್ಧಿ ಸೂಚ್ಯಂಕ)ದ ಅಭಿವೃದ್ಧಿ ಮತ್ತು ಬಳಕೆಯು ಸಾಧ್ಯವಾಯಿತು. ಮಕ್ಕಳ ಅಭಿವೃದ್ಧಿ ಸೂಚ್ಯಂಕವು ಮಕ್ಕಳಿಗೆ ನಿರ್ದಿಷ್ಟವಾದ ಮೂರು ವಿಮಿತಿಗಳನ್ನು ಆಧರಿಸಿದೆ: ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕತೆ. ಮಕ್ಕಳ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾಗುವ ಸೂಚಕಗಳ ವಿವರಗಳನ್ನು ಕೋಷ್ಟಕ 1.4ರಲ್ಲಿ ನೀಡಲಾಗಿದೆ:

**ಕೋಷ್ಟಕ 1.4: ಮಕ್ಕಳ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾಗುವ ಸೂಚಕಗಳ ವಿವರಗಳು**

| ವಿಮಿತಿ | ಸೂಚಕ | ಧನಾತ್ಮಕ/ಋಣಾತ್ಮಕ ಸೂಚಕ | ಯೂನಿಟ್ | ಅರ್ಥನಿರೂಪಣೆ | ದತ್ತಾಂಶ ಮೂಲ |
|---|---|---|---|---|---|
| ಆರೋಗ್ಯ | ಮಕ್ಕಳ ಮರಣದ ಪ್ರಮಾಣ | ಋಣಾತ್ಮಕ | ಪ್ರತಿ 1000 ಜನನಗಳು | ಮಕ್ಕಳ ಮರಣ ಪ್ರಮಾಣ, 5ಕ್ಕಿಂತ ಕಡಿಮೆ ವಯಸ್ಸಿನ ಪ್ರಾಣಹಾನಿ ಪ್ರಮಾಣವೆಂದೂ ಕರೆಯಲಾಗುತ್ತದೆ, ಅಂದರೆ ನವಜಾತ ಮಕ್ಕಳವು 5 ವರ್ಷ ವಯಸ್ಸನ್ನು ತಲುಪುವ ಮುನ್ನ ಸಾಯುವ ಸಾಧ್ಯತೆ ಪ್ರತಿ 1000ಕ್ಕೆ, ಸದ್ಯದ ವಯೋಮಾನ-ನಿರ್ದಿಷ್ಟ ಪ್ರಾಣಹಾನಿ ಪ್ರಮಾಣಕ್ಕೆ ಒಳಪಟ್ಟಿಲ್ಲ | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| ಪೌಷ್ಟಿಕತೆ | ಅಪೌಷ್ಟಿಕ ಮಕ್ಕಳು (ಸಹಜವಾದದ್ದನ್ನು ಬಿಟ್ಟು) | ಋಣಾತ್ಮಕ | ಶೇ. | ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಧ್ಯಮವಾಗಿ ಅಥವಾ ಅತಿಯಾಗಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಶೇಕಡಾವಾರು | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ಕಡಿಮ ತೂಕವಿರುವ ಮಕ್ಕಳ ಜನನ | ಋಣಾತ್ಮಕ | ಶೇ. | ಜನಿಸಿದಾಗ ಕಡಿಮೆ ತೂಕವಿರುವ ಮಕ್ಕಳ ಶೇಕಡಾವಾರು | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| ಶಿಕ್ಷಣ | ಮುಖ್ಯವಾಹಿನಿಗೆ ಬಂದ ಪ್ರಾಥಮಿಕ ಮತ್ತು ಪ್ರೌಢ ಮಕ್ಕಳು | ಧನಾತ್ಮಕ | ಶೇ. | ಮುಖ್ಯವಾಹಿನಿಗೆ ತರಲಾದ ಶಾಲೆ ತೊರೆದ ಮಕ್ಕಳ ಶೇಕಡಾವಾರು | ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ |

### 1.4.2 ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ

ಪರಿಶಿಷ್ಟ ಜಾತಿ ಜನಸಂಖ್ಯೆಯ ಅಭಿವೃದ್ಧಿ ಸ್ಥಿತಿಯನ್ನು ತಿಳಿದುಕೊಳ್ಳಲು ಹತ್ತು ಉಪ-ಸೂಚ್ಯಂಕಗಳನ್ನು ಬಳಸಿ ಗಣಿಸಲಾಗಿರುವ ಸೂಚ್ಯಂಕವನ್ನು ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ ಎನ್ನಲಾಗುತ್ತದೆ. ಪರಿಶಿಷ್ಟ ಜಾತಿ ಎಂದು ವರ್ಗೀಕೃತವಾಗಿರುವ ದಲಿತರು ಐತಿಹಾಸಿಕವಾಗಿ ವಿವಿಧ ಕ್ಷೇತ್ರಗಳಲ್ಲಿ ಮತ್ತು ವಿವಿಧ ರೀತಿಗಳಲ್ಲಿ ತಾರತಮ್ಯ ಮತ್ತು ಬಹಿಷ್ಕಾರವನ್ನು ಅನುಭವಿಸಿದ್ದಾರೆ. ಸ್ವತಂತ್ರ ಭಾರತವು, ಅಸ್ಪೃಶ್ಯತೆಯನ್ನು ಕಾನೂನುಬಾಹಿರ ಎಂದು ಘೋಷಿಸುವುದರ ಜೊತೆಗೆ, ಈ ಪಂಗಡದ ಹಿತಾಸಕ್ತಿಯನ್ನು ಉತ್ತೇಜಿಸಲು ಬಹಳಷ್ಟು ಸಂಖ್ಯೆಯಲ್ಲಿ ಆರ್ಥಿಕ ಕ್ರಮಗಳನ್ನೂ ಕೈಗೊಂಡಿರುತ್ತದೆ, ಆದರೂ ವಿವಿಧ ಕ್ಷೇತ್ರಗಳಲ್ಲಿ ಈ ಪಂಗಡವು ಇನ್ನೂ ವಂಚಿತರಾಗಿಯೇ ಇದ್ದಾರೆ. ಈ ಪಂಗಡದ ಅಭಿವೃದ್ಧಿಯನ್ನು ಉತ್ತೇಜಿಸುವ ಅಥವಾ ಅಡ್ಡಿಪಡಿಸುವ ಕಾರಣಗಳು ಅನನ್ಯವಾದವು ಎಂಬ ವಿಷಯವನ್ನು ಅಂಗೀಕರಿಸುತ್ತಾ, ದಲಿತ ಜನರಿಗೆ ಪ್ರತ್ಯೇಕ ಸೂಚ್ಯಂಕವನ್ನು ಗಣಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ಪಂಚಾಯತಿಗೆ ಮಾತ್ರವೇ ಈ ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲಾಗಿದ್ದು, ಜಿಲ್ಲೆಯ ಪರಿಶಿಷ್ಟ ಜನಸಂಖ್ಯೆಯ ಅಭಿವೃದ್ಧಿಯ ಸ್ಥಿತಿಯ ಪ್ರತಿನಿಧಿಯಾಗಿರುವುದಿಲ್ಲ. ಆದರೆ, ದಲಿತರಲ್ಲಿ ಮಾನವ ಅಭಿವೃದ್ಧಿಯ ಸ್ಥಿತಿಯನ್ನು ತಿಳಿದುಕೊಳ್ಳಲು ಇದು ಕೆಲವು ಅಂತರ್ದೃಷ್ಟಿಯನ್ನು ನೀಡುತ್ತದೆ. ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾಗುವ ಹತ್ತು ಉಪ-ಸೂಚ್ಯಂಕಗಳು ಹೀಗಿವೆ:

ಅ) ಸಾಂಸ್ಥಿಕ ಒಳಗೊಳ್ಳುವಿಕೆ - ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಆಡಳಿತ ಮತ್ತು ನಿರ್ಧಾರ ಮಾಡುವ ಸಂಸ್ಥೆಗಳಾದ ಗ್ರಾಮ ಪಂಚಾಯತಿ, ಶಾಲಾ ಅಭಿವೃದ್ಧಿ ಮತ್ತು ಪರಿವೀಕ್ಷಣಾ ಸಮಿತಿ, ನೀರು ಬಳಕೆದಾರರ ಸಮಿತಿ, ಜಂಟಿ ಅರಣ್ಯ ನಿರ್ವಹಣಾ ಸಮಿತಿ, ಮತ್ತು ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿಗಳಲ್ಲಿ ದಲಿತ ಜನರ ಸಹಭಾಗಿತ್ವದ ಮಟ್ಟವನ್ನು ಈ ಉಪ-ಸೂಚ್ಯಂಕದಿಂದ ಅಳೆಯಲಾಗುತ್ತದೆ.

ಆ) ಜೀವನಮಟ್ಟ-ಗ್ರಾಮ ಪಂಚಾಯತಿ ಪ್ರದೇಶದಲ್ಲಿ ವಾಸವಿರುವ ದಲಿತ ಕುಟುಂಬಗಳ ಜೀವನಮಟ್ಟವನ್ನು ಈ ಉಪ-ಸೂಚ್ಯಂಕದಿಂದ ಅಳೆಯಲಾಗುತ್ತದೆ. ಈ ಉಪ-ಸೂಚ್ಯಂಕಕ್ಕೆ ಪರಿಗಣಿಸಲಾದ ಅಂಶಗಳೆಂದರೆ ಪರಿಶಿಷ್ಟ ಜಾತಿಯ ಒಡೆತನದಲ್ಲಿರುವ ಕೃಷಿಯೇತರ ಸಂಸ್ಥೆಗಳು, ಶಾಶ್ವತ ಮನೆಗಳು, ದ್ವಿಚಕ್ರ ವಾಹನಗಳು ಮತ್ತು ದಲಿತ ಮನೆಗಳಲ್ಲಿ ವಿದ್ಯುತ್ ಸಂಪರ್ಕ ಸೌಲಭ್ಯಗಳು.

ಇ) ಪ್ರಾಥಮಿಕ ಸೌಲಭ್ಯಗಳ ಲಭ್ಯತೆ - ಸಾಮಾನ್ಯ ಜನರಿಗೆ ಹೋಲಿಸಿದಂತೆ ದಲಿತ ಜನರಿಗೆ ಲಭ್ಯವಿರುವ ಪ್ರಾಥಮಿಕ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ, ಮತ್ತು ಚರಂಡಿ ಸೌಲಭ್ಯಗಳ ಮಟ್ಟವನ್ನು ಈ ಉಪ-ಸೂಚ್ಯಂಕದಿಂದ ಅಳೆಯಲಾಗುತ್ತದೆ.

ಈ) ಪ್ರಾಥಮಿಕ ಶಿಕ್ಷಣ ಸೌಲಭ್ಯಗಳ ಲಭ್ಯತೆ - ಇದು ಪ್ರಾಥಮಿಕ ಸೌಲಭ್ಯಗಳ ಸೂಚ್ಯಂಕದ ವಿಸ್ತರಣೆಯಾಗಿದೆ. ಈ ಸೂಚ್ಯಂಕಕ್ಕೆ ಪರಿಗಣಿಸಲಾದ ಅಂಶಗಳೆಂದರೆ, ಸಾಮಾನ್ಯ ವಿದ್ಯಾರ್ಥಿಗಳಿಗೆ ಹೋಲಿಸಿದಂತೆ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ದಾಖಲಾತಿಯ ಪ್ರಮಾಣ, ಪರಿವರ್ತನೆಯ ಪ್ರಮಾಣ, ಮತ್ತು ಹಾಜರಿ ಪ್ರಮಾಣ.

ಉ) ಲಿಂಗ ವಿಮಿತಿ - ಈ ಉಪ-ಸೂಚ್ಯಂಕವು ಪ್ರಮುಖವಾಗಿ, ಸಾಮಾನ್ಯ ವರ್ಗದ ಮಹಿಳೆಯರ ಪ್ರಜನನ ಆರೋಗ್ಯಕ್ಕೆ ಹೋಲಿಸಿದಂತೆ ಪರಿಶಿಷ್ಟ ಜಾತಿ ಮಹಿಳೆಯರ ಪ್ರಜನನ ಆರೋಗ್ಯದ ಮೇಲೆ ಕೇಂದ್ರೀಕರಿಸುತ್ತದೆ. ಈ ಉಪ-

ಸೂಚ್ಯಂಕದ ಗಣತಿಗೆ ಪರಿಗಣಿಸಲಾದ ಅಂಶಗಳೆಂದರೆ ಸಾಂಸ್ಥಿಕ ಹೆರಿಗೆ ಪ್ರಮಾಣ, ಆರೋಗ್ಯ ಕಾರ್ಯಕರ್ತರ ಭೇಟಿ, ಪ್ರಜನಕ ಆರೋಗ್ಯಕ್ಕೆ ಸಹಾಯ ಮತ್ತು ಹೆರಿಗೆಯ ಮುನ್ನ ಹಾಗು ನಂತರ ಗರ್ಭಿಣಿಯರು ಪಡೆಯುವ ವಿಶ್ರಾಂತಿ.

ಊ) ಸಾಮಾಜಿಕ ಒಳಗೊಳ್ಳುವಿಕೆಯ ಗ್ರಹಿಕೆ -ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ಉಪಸ್ಥಿತರಾಗಿ, ಭಾಗವಹಿಸಲು ದಲಿತರಿಗಿರುವ ಸ್ವಾತಂತ್ರ್ಯ, ದಲಿತ ಮತ್ತು ದಲಿತರಲ್ಲದವರನ್ನು ಕಾಣುವ ರೀತಿ, ಪಂಚಾಯತಿಯ ಪ್ರದೇಶದಲ್ಲಿ ದಲಿತರಲ್ಲದವರು ದಲಿತರನ್ನು ಸಾಮಾಜಿಕವಾಗಿ ಸ್ವೀಕರಿಸುವುದನ್ನು ಈ ಉಪ-ಸೂಚ್ಯಂಕವು ಸೂಚಿಸುತ್ತದೆ.

ಋ) ಸ್ವಾತಂತ್ರ್ಯದ ಗ್ರಹಿಕೆ - ಪಂಚಾಯತಿ ಪ್ರದೇಶದಲ್ಲಿ ದಲಿತರಿಗಿರುವ ಸ್ವಾತಂತ್ರ್ಯದ ಮಟ್ಟವನ್ನು ಸೂಚಿಸಲು ಈ ಉಪ-ಸೂಚ್ಯಂಕವು ಯತ್ನಿಸುತ್ತದೆ. ಪರಿಶಿಷ್ಟ ಜಾತಿ ಸಮುದಾಯದವರಿಗೆ ಪ್ರಶ್ನಿಸಲು, ಉದ್ಯೋಗಾವಕಾಶಗಳಿಗೆ ಮತ್ತು ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮತ್ತು ಸಂಚರಿಸಲು ಸ್ವಾತಂತ್ರ್ಯವಿದೆಯೇ ಎಂಬುದನ್ನು ತಿಳಿಸುತ್ತದೆ.

ೠ) ತಾರತಮ್ಯದ ವಿರುದ್ಧ ಪ್ರತಿಭಟನೆ -ದಲಿತರು ಅನುಭವಿಸುವ ತಾರತಮ್ಯದ ವಿರುದ್ಧ ದನಿ ಎತ್ತುವುದನ್ನು ಈ ಉಪ-ಸೂಚ್ಯಂಕವು ಸೂಚಿಸುತ್ತದೆ. ತಮ್ಮ ತಾರತಮ್ಯದ ವಿರುದ್ಧ ದಲಿತ ಸಮುದಾಯವು ಯಾವುದೇ ಪ್ರತಿಭಟನೆಯನ್ನು ನಡೆಸಿದೆಯೇ ಮತ್ತು ದೂರು ನೀಡಿದೆಯೇ ಎಂದು ಇದು ಪರಿಶೋಧಿಸುತ್ತದೆ.

ಎ) ವ್ಯಾಜ್ಯ ಪರಿಹಾರ-ಈ ಉಪ-ಸೂಚ್ಯಂಕವು ತಾರತಮ್ಯದ ವಿರುದ್ಧ ಪ್ರತಿಭಟನೆ ಉಪ-ಸೂಚ್ಯಂಕದ ವಿಸ್ತರಣೆಯಾಗಿದೆ. ಪರಿಶಿಷ್ಟ ಜಾತಿ ಸಮುದಾಯದ ಮೇಲಿನ ತಾರತಮ್ಯವನ್ನು ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತವಾದ ಕ್ರಮವನ್ನು ಕೈಗೊಂಡಿರುವುದನ್ನು ಇದು ಪರೀಕ್ಷಿಸುತ್ತದೆ.

ಈ ಉಪ-ಸೂಚ್ಯಂಕಗಳನ್ನು ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾಗುವುದು. ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾಗಿರುವ ವಿಧಾನವನ್ನು ಅಧ್ಯಾಯ 9 - ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದಲ್ಲಿ ವಿವರಿಸಲಾಗಿದೆ.

### 1.4.3 ನಗರಾಭಿವೃದ್ಧಿ ಸೂಚ್ಯಂಕ

ನಗರಾಭಿವೃದ್ಧಿ ಸೂಚ್ಯಂಕವು ನಗರದ ಮೂಲಸೌಕರ್ಯದ ಗುಣಮಟ್ಟದ ಜೊತೆಗೆ ಜನಸಂದಣಿಯ ಮಟ್ಟಕ್ಕೆ ಸಂಬಂಧಿಸಿದ ವಿಷಯಗಳನ್ನು ವ್ಯಾಪಿಸುತ್ತದೆ. ಈ ಪ್ರಕರಣದಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ವಾಸಿಸುವ ಸಾಮಾನ್ಯ ಜನರಿಗೆ ಲಭ್ಯವಿರುವ ನಗರ ಮೂಲಸೌಕರ್ಯದ ಗುಣಮಟ್ಟ ಮತ್ತು ಸೇವೆಗಳನ್ನು ಅಳೆಯುತ್ತದೆ. ನಗರಾಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾಗುವ ಸೂಚಕಗಳ ವಿವರಗಳನ್ನು ಕೋಷ್ಟಕ 1.5ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5: ನಗರಾಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾಗುವ ಸೂಚಕಗಳ ವಿವರಗಳು**

| ಸೂಚಕ | ಧನಾತ್ಮಕ/ಋಣಾತ್ಮಕ ಸೂಚಕ | ಯೂನಿಟ್ | ಅರ್ಥ ನಿರೂಪಣೆ | ದತ್ತಾಂಶದ ಮೂಲ |
|---|---|---|---|---|
| ನಗರದ ಜನಸಂಖ್ಯೆ | ಧನಾತ್ಮಕ | ಶೇ. | ನಗರ ಪ್ರದೇಶದಲ್ಲಿ ವಾಸವಿರುವ ಜನರ ಶೇಕಡಾವಾರು | ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ಸ್ವಂತ ಮನೆ ಹೊಂದಿರುವುದು | ಋಣಾತ್ಮಕ | ಶೇ. | ಸ್ವಂತ ಮನೆ ಹೊಂದಿರುವ ಜನರ ಶೇಕಡಾವಾರು | ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ಕೊಳೆಗೇರಿ ಜನಸಂಖ್ಯೆ | ಋಣಾತ್ಮಕ | ಶೇ. | ಕೊಳೇಗೇರಿಗಳಲ್ಲಿ ವಾಸಿಸುವ ಜನರ ಶೇಕಡಾವಾರು | ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ನೀರು ಸರಬರಾಜು | ಧನಾತ್ಮಕ | ಶೇ. | ಮನೆಗಳಲ್ಲಿ ನಲ್ಲಿ ನೀರಿನ ಸಂಪರ್ಕ ಹೊಂದಿರುವ ಮನೆಗಳ ಶೇಕಡಾವಾರು | ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ಚರಂಡಿ ಸೌಲಭ್ಯ | ಧನಾತ್ಮಕ | ಶೇ. | ತೆರೆದ ಅಥವಾ ಮುಚ್ಚಿದ ಚರಂಡಿ ಸೌಲಭ್ಯಗಳಿರುವ ಮನೆಗಳ ಶೇಕಡಾವಾರು | ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ವೈದ್ಯಕೀಯ ಸೌಲಭ್ಯಗಳು | ಧನಾತ್ಮಕ | ಪ್ರತಿ 1000 ಜನರಿಗೆ | ನಗರ ಪ್ರದೇಶದಲ್ಲಿರುವ ವೈದ್ಯಕೀಯ ಸೌಲಭ್ಯಗಳಲ್ಲಿ ಪ್ರತಿ 1000 ಜನರಿಗೆ ಲಭ್ಯವಿರುವ ಆಸ್ಪತ್ರೆ ಬೆಡ್ ಗಳ ಸಂಖ್ಯೆ | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| ಸ್ವಂತ ಸಂಪನ್ಮೂಲಗಳ ಕ್ರೋಢೀಕರಣೆಯಲ್ಲಿ ಬೆಳವಣಿಗೆಯ ಪ್ರಮಾಣ | ಧನಾತ್ಮಕ | ಶೇ. | ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಸಂಪನ್ಮೂಲಗಳ ಕ್ರೋಢೀಕರಣೆ, ನಗರ ಸ್ಥಳೀಯ ಸಂಸ್ಥೆಗಳ ಒಟ್ಟು ಸ್ವೀಕೃತಿಗಳಿಗೆ ಹೋಲಿಸಿದಂತೆ, ಬೆಳವಣಿಗೆಯ ಪ್ರಮಾಣ | ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ಅಭಿವೃದ್ಧಿ ಕಾರ್ಯಗಳಿಗಾದ ವೆಚ್ಚ | ಧನಾತ್ಮಕ | ತಲಾ ಆದಾಯ | ಅಭಿವೃದ್ಧಿ ಕಾರ್ಯಗಳಿಗೆ ನಗರ ಸ್ಥಳೀಯ ಸಂಸ್ಥೆಗಳು ಮಾಡಿದ ತಲಾ ಆದಾಯ ವೆಚ್ಚ. ಇದಕ್ಕೆ ಕೇವಲ ನಗರ ಜನಸಂಖ್ಯೆಯನ್ನು ಮಾತ್ರ ಪರಿಗಣಿಸಲಾಗುವುದು | ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ |

| ಸೂಚಕ | ಧನಾತ್ಮಕ/ಋಣಾತ್ಮಕ ಸೂಚಕ | ಯೂನಿಟ್ | ಅರ್ಥ ನಿರೂಪಣೆ | ದತ್ತಾಂಶದ ಮೂಲ |
|---|---|---|---|---|
| ರಸ್ತೆ ಸಂಪರ್ಕ | ಧನಾತ್ಮಕ | ಪ್ರತಿ ಚ.ಕಿಮಿ.ಗೆ | ಕಿ.ಮಿ. ಗಳಲ್ಲಿ ರಸ್ತೆಗಳ ಅಳತೆ, ನಗರದ ಪ್ರತಿ ಚ.ಕಿಮಿ. ಭೌಗೋಳಿಕ ಪ್ರದೇಶಕ್ಕೆ | ಬೆಂಗಳೂರು ಗ್ರಾಮಾಂತರ ಅಂಕಿ-ಅಂಶಗಳ ನೋಟ 2011-12 |
| ಅಪರಾದದ ಪ್ರಮಾಣ | ಋಣಾತ್ಮಕ | ಪ್ರತಿ 10000 ಜನರಿಗೆ | ನಗರದ ಪ್ರತಿ 10000 ಜನರಿಗೆ ಆಗುವ ಅಪರಾಧಗಳ ಸಂಖ್ಯೆ | ಪೋಲಿಸ್ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ರಸ್ತೆ ಅಪಘಾತಗಳು | ಋಣಾತ್ಮಕ | ಪ್ರತಿ 10000 ಜನರಿಗೆ | ನಗರದ ಪ್ರತಿ 10000 ಜನರಿಗೆ ಆಗುವ ರಸ್ತೆ ಅಪಘಾತಗಳು | ಪೋಲಿಸ್ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ |

### 1.4.4 ಆಹಾರ ಭದ್ರತೆ ಸೂಚ್ಯಂಕ (ಆ.ಭ.ಸೂ.)

ಸಕ್ರಿಯವಾದ ಮತ್ತು ಆರೋಗ್ಯಕರವಾದ ಜೀವನವನ್ನು ನಡೆಸಲು ಬೇಕಿರುವ ಪೌಷ್ಟಿಕಾಂಶದ ಅವಶ್ಯಕತೆಗಳನ್ನು ಮತ್ತು ಆಹಾರ ಆದ್ಯತೆಗಳನ್ನು ಪೂರೈಸುವಂಥ ಪರ್ಯಾಪ್ತವಾದ, ಸೂಕ್ತವಾದ ಮತ್ತು ಪೌಷ್ಟಿಕ ಆಹಾರಕ್ಕೆ ಎಲ್ಲಾ ಜನರಿಗೂ, ಎಲ್ಲಾ ಸಮಯದಲ್ಲಿಯೂ, ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಸಾಮಾರ್ಥ್ಯದ ಲಭ್ಯತೆ ಇರುವ ಸ್ಥಿತಿಯನ್ನು ಆಹಾರ ಭದ್ರತೆ ಎಂದು ವ್ಯಾಖ್ಯಾನಿಸಲಾಗಿದೆ (ಆಫ್ರಿಕಾ ಮಾನವ ಅಭಿವೃದ್ಧಿ ವರದಿ, 2012). ಈ ಸೂಚ್ಯಂಕವು ಮೂರು ವಿಮಿತಿಗಳನ್ನು ಹೊಂದಿದೆ: ಆಹಾರದ ಲಭ್ಯತೆ, ಎಟುಕುವಿಕೆ ಮತ್ತು ಗ್ರಹಿಕೆ. ಆಹಾರ ಭದ್ರತೆ ಸೂಚ್ಯಂಕವನ್ನು ಗಣಿಸಲು ಬಳಸಲಾಗಿರುವ ಚರಮೌಲ್ಯಗಳ ವಿವರಗಳನ್ನು ಕೋಷ್ಟಕ 1.6ರಲ್ಲಿ ನೀಡಲಾಗಿದೆ.

**ಕೋಷ್ಟಕ 1.6 ಆಹಾರ ಭದ್ರತೆಯ ಸೂಚ್ಯಂಕವನ್ನು ಗಣಿಸಲು ಬಳಸಲಾಗುವ ಸೂಚಕಗಳ ವಿವರ**

| ವಿಮಿತಿ | ಸೂಚಕ | ಧನಾತ್ಮಕ/ಋಣಾತ್ಮಕ ಸೂಚಕ | ಯೂನಿಟ್ | ವ್ಯಾಖ್ಯಾನ | ದತ್ತಾಂಶದ ಮೂಲ |
|---|---|---|---|---|---|
| ಲಭ್ಯತೆ | ಬೆಳೆಯ ತೀವ್ರತೆ | ಧನಾತ್ಮಕ | ಶೇ. | ನಿವ್ವಳ ಬಿತ್ತನೆ ಪ್ರದೇಶಕ್ಕೆ ಹೋಲಿಸಿದಂತೆ ಒಟ್ಟು ಬಿತ್ತನೆಯ ಪ್ರದೇಶದ ಶೇಕಡಾವಾರು | ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ-ಅಂಶಗಳ ನೋಟ 2001-02 ಮತ್ತು 2011-12 |
| | ನಿವ್ವಳ ಬಿತ್ತನೆಯ ಪ್ರದೇಶದಲ್ಲಿ ಬದಲಾವಣೆ | ಧನಾತ್ಮಕ | ಶೇ. | ವರ್ಷಗಳಲ್ಲಾಗಿರುವ ನಿವ್ವಳ ಬಿತ್ತನೆಯ ಪ್ರದೇಶದಲ್ಲಿನ ಬದಲಾವಣೆಯ ಶೇಕಡಾವಾರು (2001ರಿಂದ 2011ರವರೆಗೆ ಆಗಿರುವ ಬದಲಾವಣೆ) | ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ-ಅಂಶಗಳ ನೋಟ 2001-02 ಮತ್ತು 2011-12 |
| | ಆಹಾರ ಧಾನ್ಯ ಪ್ರತಿ ಉತ್ಪಾದನೆ ವ್ಯಕ್ತಿ (ಕಿಲೊ ಗಳಲ್ಲಿ) | ಧನಾತ್ಮಕ | ಪ್ರತಿ ವ್ಯಕ್ತಿಗೆ | ಆಹಾರ ಧಾನ್ಯ ಉತ್ಪಾದನೆ (ಕಿಲೊಗಳಲ್ಲಿ) ಒಟ್ಟು ಜನಸಂಖ್ಯೆಯಿಂದ ಭಾಗಿಸಿದ್ದು | ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ-ಅಂಶಗಳ ನೋಟ 2001-02 ಮತ್ತು 2011-12 |
| | ಅರಣ್ಯ ವ್ಯಾಪ್ತಿ | ಧನಾತ್ಮಕ | ಶೇ. | ಒಟ್ಟು ಭೌಗೋಳಿಕ ಪ್ರದೇಶಕ್ಕೆ ಹೋಲಿಸಿದಂತೆ ಅರಣ್ಯ ಪ್ರದೇಶದ ಶೇಕಡಾವಾರು | ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ-ಅಂಶಗಳ ನೋಟ 2001-02 ಮತ್ತು 2011-12 |
| | ನೀರಾವರಿಯ ತೀವ್ರತೆ | ಧನಾತ್ಮಕ | ಶೇ. | ನಿವ್ವಳ ನೀರಾವರಿ ಪ್ರದೇಶಕ್ಕೆ ಹೋಲಿಸಿದಂತೆ ಒಟ್ಟು ನೀರಾವರಿ ಪ್ರದೇಶದ ಶೇಕಡಾವಾರು | ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ-ಅಂಶಗಳ ನೋಟ 2001-02 ಮತ್ತು 2011-12 |
| | ಪಾಳು ಪ್ರದೇಶ (ಕೃಷಿ ಮಾಡಬಹುದಾದ ಹಾಳು ಭೂಮಿ) | ಋಣಾತ್ಮಕ | ಶೇ. | ಒಟ್ಟು ಭೌಗೋಳಿಕ ಪ್ರದೇಶಕ್ಕೆ ಹೋಲಿಸಿದಂತೆ ಪಾಳು ಪ್ರದೇಶ (ಕೃಷಿ ಮಾಡಬಹುದಾದ ಹಾಳು ಭೂಮಿ)ದ ಶೇಕಡಾವಾರು | ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ-ಅಂಶಗಳ ನೋಟ 2001-02 ಮತ್ತು 2011-12 |
| | ದ್ವಿದಳ ಧಾನ್ಯ ಬೆಳೆಗಳು (ಕಾಳುಗಳನ್ನು ಬೆಳೆವ ಪ್ರದೇಶ) | ಧನಾತ್ಮಕ | ಶೇ. | ಒಟ್ಟು ಬೆಳೆಯುವ ಪ್ರದೇಶಕ್ಕೆ ದ್ವಿದಳ ಧಾನ್ಯ ಬೆಳೆಗಳು (ಕಾಳುಗಳನ್ನು ಬೆಳೆವ ಪ್ರದೇಶ) ದ ಶೇಕಡಾವಾರು | ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ-ಅಂಶಗಳ ನೋಟ 2001-02 ಮತ್ತು 2011-12 |

| ವಿಮಿತಿ | ಸೂಚಕ | ಧನಾತ್ಮಕ/ಋಣಾತ್ಮಕ ಸೂಚಕ | ಯೂನಿಟ್ | ವ್ಯಾಖ್ಯಾನ | ದತ್ತಾಂಶದ ಮೂಲ |
|---|---|---|---|---|---|
| ದೊರೆಗೊಳ್ಳುವಿಕೆ | ಬಿ.ಪಿ.ಎಲ್ ಪಡಿತರಚೀಟಿ ಹೊಂದಿದವರು | ಋಣಾತ್ಮಕ | ಶೇ. | ಒಟ್ಟು ಕಾರ್ಡ್‌ದಾರರ ಸಂಖ್ಯೆಗೆ ಹೋಲಿಸಿದಂತೆ ಬಿ.ಪಿ.ಎಲ್ ಪಡಿತರಚೀಟಿ ಹೊಂದಿದವರ ಶೇಕಡಾವಾರು | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ತಲಾ ಆದಾಯ | ಧನಾತ್ಮಕ | ಪ್ರತಿ ವ್ಯಕ್ತಿಗೆ | ತಲಾ ಆದಾಯವೆಂದರೆ ತಾಲೂಕಿನಲ್ಲಿನ ಜನರ ಸರಾಸರಿ ಆದಾಯವೆಂದು ವ್ಯಾಖ್ಯಾನಿಸಲಾಗಿದೆ. ೨೦೦೮ರ ಬೆಲೆಗಳಲ್ಲಿ ತಾಲುಕಿನ ಸಮಗ್ರ ಆಂತರಿಕ ಉತ್ಪಾದನೆಯನ್ನು ತಾಲುಕಿನ ಜನಸಂಖ್ಯೆಯಿಂದ ಭಾಗಿಸುವುದರಿಂದ ಇದನ್ನು ಗಣಿಸಲಾಗಿದೆ. | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ಕೃಷಿಯೇತರ ಕಾರ್ಮಿಕರು | ಧನಾತ್ಮಕ | ಶೇ. | ಒಟ್ಟು ಕಾರ್ಮಿಕರ ಸಂಖ್ಯೆಗೆ ಹೋಲಿಸಿದಂತೆ ಕೃಷಿಯೇತರ ಕಾರ್ಮಿಕರ (ಪ್ರಮುಖ + ಅತಿ ಸಣ್ಣ) ಶೇಕಡಾವಾರು | 2011 ಜನಗಣತಿ |
| | ಹಿಡುವಳಿಯ ಸರಾಸರಿ ಪ್ರಮಾಣ | ಧನಾತ್ಮಕ | ಪ್ರತಿ ಹಿಡುವಳಿಗೆ | ಒಟ್ಟು ಹಿಡುವಳಿಗಳ ವಿಸ್ತೀರ್ಣವನ್ನು ಒಟ್ಟು ಹಿಡುವಳಿಗಳ ಸಂಖ್ಯೆಯಿಂದ ಭಾಗಿಸುವುದು | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ಕೃಷಿ ಕಾರ್ಮಿಕರು | ಋಣಾತ್ಮಕ | ಶೇ. | ಒಟ್ಟು ಕಾರ್ಮಿಕರ ಸಂಖ್ಯೆಗೆ ಹೋಲಿಸಿದಂತೆ ಕೃಷಿ ಕಾರ್ಮಿಕರ ಸಂಖ್ಯೆಯ ಶೇಕಡಾವಾರು | 2011 ಜನಗಣತಿ |
| | ಪಡಿತರ ಅಂಗಡಿ ಉಳ್ಳ ಗ್ರಾಮಗಳು | ಧನಾತ್ಮಕ | ಶೇ. | ಗ್ರಾಮದಲ್ಲಿ ನಾಗರೀಕ ವಿತರಣಾ ವ್ಯವಸ್ಥೆಯ ಅಂಗಡಿಗಳುಳ್ಳ ಗ್ರಾಮಗಳ ಶೇಕಡಾವಾರು | ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ |
| ಜೀರ್ಣಿಸಿಕೊಳ್ಳುವಿಕೆ | ಮಕ್ಕಳ ಮರಣ ಪ್ರಮಾಣ(೦–೫ ವರ್ಷ) | ಋಣಾತ್ಮಕ | ಪ್ರತಿ ೧೦೦೦ ಜೀವಂತ ಜನನಗಳಿಗೆ | ಮಕ್ಕಳ ಪ್ರಾಣಹಾನಿ ಪ್ರಮಾಣ, ೫ಕ್ಕಿಂತ ಕಡಿಮೆ ವಯಸ್ಸಿನ ಪ್ರಾಣಹಾನಿ ಪ್ರಮಾಣವೆಂದೂ ಕರೆಯಲಾಗುತ್ತದೆ, ಅಂದರೆ ನವಜಾತ ಮಕ್ಕಳವು ೫ ವರ್ಷ ವಯಸ್ಸನ್ನು ತಲುಪುವ ಮುನ್ನ ಸಾಯುವ ಸಾಧ್ಯತೆ ಪ್ರತಿ ೧೦೦೦ಕ್ಕೆ | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ನೀರಿನ ಲಭ್ಯತೆ | ಧನಾತ್ಮಕ | ಶೇ. | ನೀರು ಸರಬರಾಜು ಲಭ್ಯವಿರುವ ಮನೆಗಳ ಶೇಕಡಾವಾರು | 2011 ಜನಗಣತಿ |
| | ರಕ್ತಹೀನತೆ ಉಳ್ಳ ಗರ್ಭಿಣಿಯರು | ಋಣಾತ್ಮಕ | ಶೇ. | ರಕ್ತಹೀನತೆಯಿರುವ ಗರ್ಭಿಣಿಯರ ಪಾಲು – (ಸಹಜವಾದ್ದನ್ನು ಹೊರತುಪಡಿಸಿ) – ಒಟ್ಟು ಗರ್ಭಿಣಿಯರ ಸಂಖ್ಯೆಗೆ ಹೋಲಿಸಿದಂತೆ | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ಅಪೌಷ್ಟಿಕತೆಯಿಂದ ಬಳಲುವ ಮಕ್ಕಳು (ಸಹಜವಾದನ್ನು ಹೊರತುಪಡಿಸಿ) | ಋಣಾತ್ಮಕ | ಶೇ. | ಅಪೌಷ್ಟಿಕ ಮಕ್ಕಳ ಶೇಕಡಾವಾರು (ಸಹಜವಾದ್ದನ್ನು ಹೊರತುಪಡಿಸಿ) | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ |
| | ಜನನ ಸಮಯದಲ್ಲಿ ಕಡಿಮೆ ತೂಕವಿದ್ದ ಮಕ್ಕಳು | ಋಣಾತ್ಮಕ | ಶೇ. | ಜನನ ಸಮಯದಲ್ಲಿ ಕಡಿಮೆ ತೂಕವಿದ್ದ ಮಕ್ಕಳ ಶೇಕಡಾವಾರು | ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಾಕ ಸರ್ಕಾರ |
| | ಮಹಿಳಾ ಸಾಕ್ಷರತೆ | ಧನಾತ್ಮಕ | ಶೇ. | 7ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಒಟ್ಟು ಜನಸಂಖ್ಯೆಗೆ ಹೋಲಿಸಿದಂತೆ ಸಾಕ್ಷರ ಮಹಿಳೆಯರ ಶೇಕಡಾವಾರು | 2011 ಜನಗಣತಿ |

### 1.4.5 ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ

ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕವನ್ನು 68 ಸೂಚಕಗಳನ್ನು ಬಳಸಿ ಗಣಿಸಲಾಗಿದ್ದು, ಈ ಸೂಚಕಗಳನ್ನು ಹೀಗೆ ವರ್ಗೀಕರಿಸಬಹುದು: ಜೀವನದ ಗುಣಮಟ್ಟ, ಆರೋಗ್ಯ ಮತ್ತು ಶಿಕ್ಷಣ. ಜನಸಾಂದ್ರತೆ, ಲಿಂಗ ಅನುಪಾತ, ಮಕ್ಕಳ ಮರಣ ಪ್ರಮಾಣ, ತಾಯಂದಿರ ಮರಣ ಪ್ರಮಾಣ, ಸ್ತ್ರೀ ಯಜಮಾನ್ಯದ ಕುಟುಂಬಗಳು, ದುಡಿಮೆ ಸಹಭಾಗಿತ್ವ ಪ್ರಮಾಣ, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ, ಕೂಲಿ ದರ, ಶಾಶ್ವತ ಮನೆಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಆಸ್ತಿಯ ಒಡೆತನಗಳಂತಹ ಚರಮೌಲ್ಯಗಳನ್ನು ಬಳಸಿ ಜೀವನದ ಗುಣಮಟ್ಟದ ವಿಮಿತಿಯನ್ನು ಗಣಿಸಲಾಗುವುದು.

ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿಯರು, ಸಾಂಸ್ಥಿಕ ಹೆರಿಗೆಗಳು, ಲಸಿಕೆಯ ಪ್ರಮಾಣ, ಹರಡುವ ರೋಗಗಳು, ಆರೋಗ್ಯ ಸಂಸ್ಥೆಯ ಮೂಲಸೌಕರ್ಯ, ಶೌಚಾಲಯಗಳ ಲಭ್ಯತೆ, ಸುರಕ್ಷಿತ ಕುಡಿಯುವ ನೀರು ಮತ್ತು ಒಳಚರಂಡಿ ಮತ್ತು ತಲಾ ಆದಾಯದ ಆರೋಗ್ಯ ವೆಚ್ಚಗಳಂತಹ ಚರಮೌಲ್ಯಗಳನ್ನು ಬಳಸಿ ಆರೋಗ್ಯದ ವಿಮಿತಿಯನ್ನು ಗಣಿಸಲಾಗುವುದು.

ಸಾಕ್ಷರತೆಯ ಪ್ರಮಾಣ, ಕ್ರೋಢೀಕರಿಸಿದ ಒಟ್ಟು ದಾಖಲಾತಿ ಪ್ರಮಾಣ ಮತ್ತು ನಿವ್ವಳ ದಾಖಲಾತಿ ಪ್ರಮಾಣ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣ, ವಿದ್ಯಾರ್ಥಿ-ಶಿಕ್ಷಕ ಅನುಪಾತ, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಯಲ್ಲಿ ತೇರ್ಗಡೆ ಪ್ರಮಾಣ, ಶಾಲಾ ಮೂಲಸೌಕರ್ಯ ಸೂಚ್ಯಂಕ ಮತ್ತು ಶೈಕ್ಷಣಿಕ ತಲಾ ವೆಚ್ಚಗಳಂಥ ಚರಮೌಲ್ಯಗಳನ್ನು ಬಳಸಿ ಶಿಕ್ಷಣ ವಿಮಿತಿಯನ್ನು ಗಣಿಸಲಾಗಿದೆ.

#### 1.4.5.1 ಪೂರಕ ಸೂಚ್ಯಂಕಗಳ ಮಾಪನ ವಿಧಾನ

ಕೆಲವು ಪೂರಕ ಸೂಚ್ಯಂಕಗಳನ್ನು ಗಣಿಸಲು ಮಾನವ ಅಭಿವೃದ್ಧಿ ಸೂಚ್ಯಂಕ ಗಣತಿಯ ಅದೇ ವಿಧಾನಗಳನ್ನು ಬಳಸಲಾಗುವುದು. ಮಕ್ಕಳ ಅಭಿವೃದ್ಧಿ ಸೂಚ್ಯಂಕ, ನಗರಾಭಿವೃದ್ಧಿ ಸೂಚ್ಯಂಕ, ಆಹಾರ ಭದ್ರತೆ ಸೂಚ್ಯಂಕ ಮತ್ತು ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕಗಳನ್ನು ಮಾಪನ ಮಾಡುವಾಗ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸಲಾಗುವ ವಿಧಾನವನ್ನೇ ಅನುಸರಿಸಲಾಗುವುದು. ಇದರಲ್ಲಿ ಒಂದೇ ವ್ಯತ್ಯಾಸವೆಂದರೆ, ಪೂರಕ ಸೂಚ್ಯಂಕಗಳನ್ನು ಗಣಿಸಲು ಅಂಕಗಣಿತದ ಸರಾಸರಿಯನ್ನು ಬಳಸಾಗುವುದು. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಜ್ಯಾಮಿತಿಯ ಸರಾಸರಿಯನ್ನು ಬಳಸಲಾಗುವುದು. ಪೂರಕ ಸೂಚ್ಯಂಕಗಳನ್ನು ಗಣಿಸಲು ಕೆಳಕಂಡ ಹಂತಗಳನ್ನು ಅನುಸರಿಸಲಾಗುವುದು:

#### ನೈಜ ಮೌಲ್ಯಗಳನ್ನು ಸೂಚ್ಯಂಕ ಮೌಲ್ಯಗಳನ್ನಾಗಿ ಪರಿವರ್ತಿಸುವುದು:

ಪೂರಕ ಸೂಚ್ಯಂಕಗಳನ್ನು ಗಣಿಸುಲು ಮೊದಲ ಹಂತವೆಂದರೆ ಸೂಚಕಗಳ ನೈಜ ಮೌಲ್ಯಗಳನ್ನು ಸೂಚ್ಯಂಕ ಮೌಲ್ಯಗಳನ್ನಾಗಿ ಪರಿವರ್ತಿಸಿ, ಅವು ಶೂನ್ಯದಿಂದ ಒಂದರವರೆಗೂ ಇರುವಂತೆ ಮಾಡುವುದು. ಸೂಚ್ಯಂಕ ಮೌಲ್ಯವನ್ನು ಗಣಿಸಲು ಬಳಸಲಾಗುವ ಸೂತ್ರವು ಧನಾತ್ಮಕ ಮತ್ತು ಋಣಾತ್ಮಕ ಸೂಚಕಗಳಿಗೆ ಭಿನ್ನವಾಗಿವೆ, ಏಕೆಂದರೆ ಉನ್ನತ ಸೂಚ್ಯಂಕ ಮೌಲ್ಯವು ಉನ್ನತ ಅಭಿವೃದ್ಧಿ ಮಟ್ಟವನ್ನು ಪ್ರತಿನಿಧಿಸುತ್ತದೆ. ಧನಾತ್ಮಕ ಸೂಚಕಗಳ ಸೂಚ್ಯಂಕ ಮೌಲ್ಯವನ್ನು ಕೆಳಕಂಡ ಸೂತ್ರದಿಂದ ಗಣಿಸಲಾಯಿತು:

$$\text{Index value} = \frac{(\text{Actual value} - \text{Minimum value})}{(\text{Maximum value} - \text{Minimum value})}$$

ಋಣಾತ್ಮಕ ಸೂಚಕಗಳ ಸೂಚ್ಯಂಕ ಮೌಲ್ಯವನ್ನು ಕೆಳಕಂಡ ಸೂತ್ರದಿಂದ ಗಣಿಸಲಾಯಿತು:

$$\text{Index value} = \frac{(\text{Maximum value} - \text{Actual value})}{(\text{Maximum value} - \text{Minimum value})}$$

#### ಆದಾಯದ ಸೂಚಕದ ಬಳಕೆ ವಿಧಾನ:

ತಾಲೂಕು ಆಂತರಿಕ ಉತ್ಪನ್ನಾಧಾರಿತ ತಲಾ ಆದಾಯವನ್ನು ಅದರ ಕಡಿಮೆಯಾಗುತ್ತಿರುವ ಪ್ರಾಮುಖ್ಯತೆಯನ್ನು ಸೂಚಿಸಲು ತಲಾಆದಾಯವನ್ನು ಮೊದಲು ಲಾಗರಿದಮ್ ಮೌಲ್ಯಗಳಿಗೆ ಪರಿವರ್ತಿಸಲಾಯಿತು ಎಂಬುದನ್ನು ಗಮನಿಸಬೇಕು. 1990ರಲ್ಲಿ ಯು.ಎನ್.ಡಿ.ಪಿ. ಸಿದ್ಧಪಡಿಸಿದ ಮೊದಲ ಮಾನವ ಅಭಿವೃದ್ಧಿ ವರದಿಯಿಂದಲೂ ತಲಾ ಆದಾಯ ಮಾಪನದಲ್ಲಿ ಈ ರೀತಿಯ ನಿರ್ವಹಣೆಯನ್ನು ಅನುಸರಿಸಲಾಗುತ್ತಿದೆ. ಹೀಗಾಗಿ, ಅದಾಯದ ಮಾಪನಗಳನ್ನು ಮೊದಲು ಲಾಗರಿದಂ ಮೌಲ್ಯಗಳಿಗೆ ಪರಿವರ್ತಿಸಿ, ಅವನ್ನು ತಾಲೂಕು ಆಂತರಿಕ ಉತ್ಪನ್ನಾಧಾರಿತ ತಲಾ ಆದಾಯದ ಬದಲಾಯಿಸಿದ ಕನಿಷ್ಟ ಲಾಗರಿದಮ್ ಮೌಲ್ಯಕ್ಕೆ ಮತ್ತು ತಾಲೂಕು ಆಂತರಿಕ ಉತ್ಪನ್ನಾಧಾರಿತ ತಲಾ ಆದಾಯದ ಗರಿಷ್ಟ ಲಾಗರಿದಮ್ ಮೌಲ್ಯಕ್ಕೆ ಸಂಬಂದಿಸಿದಂತೆ ಯಥಾಸ್ಥಿತಿಗೆ ತರಲಾಯಿತು.

#### ವಿಮಿತ ಆಧಾರಿತ ಉಪ-ಸೂಚ್ಯಂಕಗಳ ಗಣತಿ:

ಪೂರಕ ಸೂಚ್ಯಂಕಗಳ ಗಣತಿಯಲ್ಲಿ ಎರಡನೆಯ ಹಂತವೆಂದರೆ, ಪ್ರತಿ ವಿಮಿತಿಗೆ ಜ್ಯಾಮಿತಿಯ ಸರಾಸರಿಯನ್ನು ಗಣಿಸುವುದು. ಕೆಳಗಿನ ಸೂತ್ರವನ್ನು ಬಳಸಿ ಪ್ರತಿ ವಿಮಿತಿಗೆ ಅಂಕಗಣಿತದ ಸರಾಸರಿಯನ್ನು ಗಣಿಸಲಾಗುವುದು:

$$\text{Dimension based Index} = (T1 + T2 + T3 + \dots + In)/N$$

ಏ ಎಂದರೆ ಪ್ರತಿ ವಿಮಿತಿಗೆ ಪರಿಗಣಿಸಲಾಗಿರುವ ಸೂಚಕಗಳ ಸಂಖ್ಯೆ.

#### ಪೂರಕ ಸೂಚ್ಯಂಕಗಳ ಗಣತಿ:

ಪೂರಕ ಸೂಚಕಗಳನ್ನು ಗಣಿಸಲು ಅಂತಿಮ ಹಂತವೆಂದರೆ ವಿಮಿತ ಆಧಾರಿತ ಉಪ-ಸೂಚ್ಯಂಕಗಳ ಅಂಕಗಣಿತದ ಸರಾಸರಿಯನ್ನು ಪಡೆಯುವುದು. ಅದಕ್ಕೆ ಕೆಳಕಂಡ ಸೂತ್ರವನ್ನು ಬಳಸಲಾಗುವುದು:

$$SI = (D1 + D2 + D3 + \cdots + Dn)/N$$

## 1.5 ದತ್ತಾಂಶ ಸಂಗ್ರಹಣೆ, ಸಂಕಲನ ಮತ್ತು ಸ್ಥಿರೀಕರಣ

ಪ್ರತಿ ಜಿಲ್ಲೆಯಲ್ಲೂ ಮಾನವ ಅಭಿವೃದ್ಧಿ ವರದಿಯ ಅಭಿವೃದ್ಧಿಗೆ ಸರ್ಕಾರವು ಒಂದು ಪ್ರಧಾನ ತಾಂತ್ರಿಕ ಸೇವಾಸಂಸ್ಥೆಯನ್ನು ಗುರುತಿಸಿದೆ. ಜಿಲ್ಲಾ ಪಂಚಾಯತಿಯ ಸಹಯೋಗದೊಂದಿಗೆ ಸಂಸ್ಥೆಯು ಮಾನವ ಅಭಿವೃದ್ಧಿ ವರದಿಯನ್ನು ಅಭಿವೃದ್ಧಿಪಡಿಸಬೇಕು. ಆದ್ದರಿಂದ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಈ ಮಾನವ ಅಭಿವೃದ್ಧಿ ವರದಿ ಜಿಲ್ಲಾ ಪಂಚಾಯತಿ ಮತ್ತು ಪ್ರಧಾನ ತಾಂತ್ರಿಕ ಸೇವಾಸಂಸ್ಥೆಯಾದ, ಸೆಂಟರ್ ಫಾರ್ ಬಜೆಟ್ ಅಂಡ್ ಪಾಲಿಸಿ ಸ್ಟಡೀಸ್‌ನ ಜಂಟಿ ಶ್ರಮದ ಫಲವಾಗಿದೆ. ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯಲ್ಲೂ ದತ್ತಾಂಶ ಸಂಗ್ರಹ ಮತ್ತು ಸ್ಥಿರೀಕರಣಕ್ಕಾಗಿ ಜಿಲ್ಲಾ ಮುಖ್ಯ ಸಮಿತಿಯನ್ನು ಸ್ಥಾಪಿಸಿತು. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅಧ್ಯಕ್ಷರಾದ ಈ ಸಮಿತಿಗೆ ಮುಖ್ಯ ಯೋಜನಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿದ್ದು ಎಲ್ಲಾ ಅಭಿವೃದ್ಧಿ ಇಲಾಖೆಗಳ ಮುಖ್ಯಸ್ಥರು ಮತ್ತು ತಾಂತ್ರಿಕ ಸೇವಾ ಸಂಸ್ಥೆಯವರು ಸದಸ್ಯರಾಗಿದ್ದರು. ದತ್ತಾಂಶ ಸಂಗ್ರಹ ಮತ್ತು ಸ್ಥಿರೀಕರಣದ ಪ್ರಕ್ರಿಯೆಯು ಪ್ರಧಾನ ಸೇವಾಸಂಸ್ಥೆ ಮತ್ತು ಜಿಲ್ಲಾ ಮುಖ್ಯ ಸಮಿತಿಯ ನಡುವೆ ಪುನರಾವರ್ತಿತ ಪ್ರಕ್ರಿಯೆಯಾಗಿದ್ದಿತು.

ಅಭಿವೃದ್ಧಿ ವರದಿ 2001-2011ರ ಕಾಲಾವಧಿಯ ದತ್ತಾಂಶದ ಪರಿಶೀಲನೆಯನ್ನು ಒಂದು ಆಧರಿಸಿದೆ. ಜಿಲ್ಲೆಯಿಂದ ಸಂಗ್ರಹಿಸಲಾದ ದತ್ತಾಂಶವು ಪ್ರಮುಖ ಮೂಲವಾಗಿದ್ದು, ಜನಗಣತಿ ಮತ್ತು ರಾಷ್ಟ್ರೀಯ ಮಾದರಿ ಸಮೀಕ್ಷೆಗಳಂತಹ ಇತರ ಮೂಲಗಳು ಇದಕ್ಕೆ ಬೆಂಬಲವಾಗಿದೆ.

ದತ್ತಾಂಶ ಪರಿಶೀಲನೆಯಲ್ಲಿ ತೀವ್ರವಾದ ದತ್ತಾಂಶ ಮಿತಿಗಳನ್ನು ಎದುರಿಸಬೇಕಾಯಿತು. ಅವುಗಳಲ್ಲಿ ಕೆಲವು, ಎಲ್ಲಾ ಜಿಲ್ಲೆಗಳಿಗೂ ಸಾಮಾನ್ಯವಾಗಿದ್ದರೆ, ಕೆಲವು ಈ ಜಿಲ್ಲೆಗೆ ನಿರ್ದಿಷ್ಟವಾಗಿದ್ದವು. ಹಿಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ನಾಲ್ಕು ತಾಲ್ಲೂಕುಗಳನ್ನು ತೆಗೆದು ಹೊಸ ಜಿಲ್ಲೆಯಾದ ರಾಮನಗರವನ್ನು ಸ್ಥಾಪಿಸಿದಾಗ, 2008ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಉಳಿದ ನಾಲ್ಕು ತಾಲೂಕುಗಳಿಂದ ಪುನಾರಚಿಸಲಾಯಿತು. ಈಗ ಈ ಜಿಲ್ಲೆಯು ನಾಲ್ಕು ತಾಲೂಕುಗಳನ್ನು ಅಂದರೆ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲಗಳನ್ನು ಹೊಂದಿದೆ. ಹಾಗಾಗಿ, 2011ರ ಅಂಕಿಗಳೊಂದಿಗೆ ಹೋಲಿಕೆಗೆ ಅನುವು ಮಾಡಿಕೊಡಲು, ಹಿಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೇವಲ ನಾಲ್ಕು ತಾಲೂಕುಗಳನ್ನು 2001ರ ಅಂಕಿ-ಅಂಶಗಳಿಗೆ ಪರಿಗಣಿಸಲಾಯಿತು.

೨೦೦೧ರಲ್ಲಿ ತಾಲೂಕುವಾರು ದತ್ತಾಂಶ ಇರುವಂಥ ಸೂಚಕಗಳಿಗೆ ಮಾತ್ರವೇ ಇದು ಸಾಧ್ಯವಾಯಿತು. ೨೦೦೧ರಲ್ಲಿ ಎಲ್ಲಾ ಚರಮೌಲ್ಯಗಳಿಗೆ ತಾಲೂಕುವಾರು ದತ್ತಾಂಶವು ಲಭ್ಯವಿರದಿದ್ದರಿಂದ, ಅಂತಹ ಪ್ರಕರಣಗಳಲ್ಲಿ ಹೋಲಿಕೆಯನ್ನು ಮಾಡಲಾಗಿಲ್ಲ. ದತ್ತಾಂಶದ ನಿಖರತೆಯನ್ನು ಪರೀಕ್ಷಿಸಲು, ದತ್ತಾಂಶಂಶ ಸಂಗ್ರಹಣ ಪ್ರಕ್ರಿಯೆಯಲ್ಲಿ ಕೆಲವು ಸ್ಥಿರೀಕರಣ ಕ್ರಮಗಳನ್ನು ಅಳವಡಿಸಲಾಯಿತು. ಅಂತಿಮ ಚರಮೌಲ್ಯಕ್ಕೆ ಮತ್ತು ಅದನ್ನು ರಚಿಸಲು ಬಳಸಲಾಗಿರುವ ಕೆಳ ಚರಮೌಲ್ಯಗಳು ಎರಡಕ್ಕೂ ದತ್ತಾಂಶವನ್ನು ನೀಡುವಂತೆ ಜಿಲ್ಲೆಯನ್ನು ಕೇಳಲಾಯಿತು. ಉದಾಹರಣೆಗೆ, ಸೂಚ್ಯಂಕದ ಗಣತಿಗೆ ಬಳಸಲಾಗುವ ತಾಯಂದಿರ ಮರಣ ಪ್ರಮಾಣವನ್ನು, ಪ್ರತಿ ತಾಲುಕಿಗೂ ತಾಯಂದಿರ ಮರಣ ಪ್ರಮಾಣ ಮತ್ತು ಜೀವಂತ ಜನ್ಮಗಳ ಪ್ರಮಾಣದ ಜೊತೆಗೆ ಸಂಗ್ರಹಿಸಲಾಯಿತು. ಇದು ಅಂತಿಮ ಚರಮೌಲ್ಯದ ಸ್ವತಂತ್ರ ಗಣತಿಗೆ ಸಹಾಯಕವಾಗಿದ್ದು, ಇಲಾಖೆ ನೀಡಿದ ಅಂಕಿಯೊಂದಿಗೆ ಹೋಲಿಸಲು ಸಹಾಯಕವಾಯಿತು. ಇದು, ಅಂತಿಮ ಚರಮೌಲ್ಯ ಮತ್ತು ಅದನ್ನು ರಚಿಸಲು ಬಳಸುವ ಕೆಳ ಚರಮೌಲ್ಯಗಳಲ್ಲಿ ಇರಬಹುದಾದ ಯಾವುದೇ ಸಮಸ್ಯೆಗಳನ್ನು ಗುರುತಿಸಲೂ ಸಹಾಯಕವಾಗಿದ್ದಿತು.

ಎರಡನೇ ಸ್ಥಿರೀಕರಣ ಕ್ರಮವೆಂದರೆ ವಿವಿಧ ಸೂಚಕಗಳಿಗೆ ಆಂತರಿಕ ಸ್ಥಿರತೆಯ ಪರೀಕ್ಷೆ. ಉದಾಹರಣೆಗೆ, ಪ್ರಾಥಮಿಕ ಶಾಲೆಯ ನಿವ್ವಳ ದಾಖಲಾತಿ ಪ್ರಮಾಣ ಮತ್ತು 6-13 ವರ್ಷ ವಯೋಮಾನದ ಶಾಲೆಯಿಂದ ಹೊರಗುಳಿದ ಮಕ್ಕಳು ಇವೆರಡೂ ವಿರುದ್ಧವಾದ ಸಂಬಂಧವನ್ನು ಹೊಂದಿವೆ, ಅಂದರೆ ಒಂದು ಹೆಚ್ಚಾದರೆ ಮತ್ತೊಂದು ಕಡಿಮೆಯಾಗಬೇಕು. ನಿವ್ವಳ ದಾಖಲಾತಿ ಪ್ರಮಾಣವು ಹೆಚ್ಚಾದ ವರ್ಷಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಕಡಿಮೆಯಾಗಿದೆಯೇ ಎಂದು ಪರೀಕ್ಷಿಸಲಾಯಿತು. ಈ ಕ್ರಮಗಳ ಜೊತೆಗೆ, ದತ್ತಾಂಶದಲ್ಲಿ ಹಠಾತ್ತನೆಯ ಹೆಚ್ಚಳ ಅಥವಾ ವೈರುಧ್ಯ ಅಥವಾ ಎರಡು ಚರಮೌಲ್ಯಗಳ ಸಂಬಂಧದಲ್ಲಿ ಬದಲಾವಣೆಯಂತಹ ವಿಭಿನ್ನತೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆಯೂ ಚರ್ಚಿಸಲಾಯಿತು. ಇವಕ್ಕೆ ಸೂಕ್ತವಾದ ಕಾರಣಗಳಿವೆಯೇ ಅಥವಾ ತಪ್ಪು ಮಾಹಿತಿಯಿಂದಾಗಿದೆಯೇ ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯವಾಯಿತು. ದತ್ತಾಂಶದ ಸ್ಥಿರತೆಯನ್ನು ಸ್ಥಾಪಿಸಲಾಗದ ಸಂದರ್ಭದಲ್ಲಿ, ಬೃಹತ್ ಮಾದರಿ ಸಮೀಕ್ಷೆಗಳಿಂದ ಪರ್ಯಾಯ ದತ್ತಾಂಶ ಮೂಲಗಳನ್ನು ಬಳಸಲಾಯಿತು. ದತ್ತಾಂಶ ಸಂಗ್ರಹಣೆ, ಸ್ಥಿರೀಕರಣ ಮತ್ತು ಪರ್ಯಾಯ ಮೂಲಗಳನ್ನು ಬಳಸುವ ನಿರ್ಧಾರಗಳು ಬಹಳ ಶ್ರಮದಾಯಕ ಮತ್ತು ಬಹಳ ಸಮಯ ತೆಗೆದುಕೊಳ್ಳುವ ಪ್ರಕ್ರಿಯೆಯಾಗಿದ್ದು, ಇದು ಸುಮಾರು ಆರರಿಂದ ಎಂಟು ತಿಂಗಳು ತೆಗೆದುಕೊಂಡವು.

ಸರ್ಕಾರ ನೀಡಿದ ದತ್ತಾಂಶಕ್ಕೆ ಪರ್ಯಾಯವಾಗಿ ಅಥವಾ ಪರಿಶೀಲನೆಯನ್ನು ಬಲಗೊಳಿಸಲು ಬಳಸಲಾದ ದತ್ತಾಂಶ ಮೂಲಗಳೆಂದರೆ, ಜಿಲ್ಲಾ ಮಟ್ಟದ ಆರೋಗ್ಯ ಸಮೀಕ್ಷೆ (DLHS), ರಾಷ್ಟ್ರೀಯ ಮಾದರಿ ಸಮೀಕ್ಷೆ, ಭಾರತೀಯ ಜನಗಣತಿ (೨೦೦೧ ಮತ್ತು ೨೦೧೧), ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ-ಅಂಶಗಳ ನೋಟ (೨೦೦೧-೨೦೧೨), ಕರ್ನಾಟಕದ ಅಂಕಿ-ಅಂಶಗಳ ನೋಟ (೨೦೧೧-೧೨) ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ ವರದಿ. ಈ ಮೂಲಗಳ ಬಳಕೆಯು ಪರಿಶೀಲನೆಯನ್ನು ಬಲಗೊಳಿಸಿದವು. ಉದಾ: ಗಿನಿ ಗುಣಾಂಕವನ್ನು, ಆಸ್ತಿ, ಉದ್ಯೋಗ ಮತ್ತು ನಿರುದ್ಯೋಗದ ಪ್ರಮಾಣವನ್ನು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದ ಬಾಲಕಾರ್ಮಿಕರನ್ನು ಗಣಿಸಲು ರಾಷ್ಟ್ರೀಯ ಮಾದರಿ ಸಮೀಕ್ಷೆಯ ೬೬ನೇ ಸುತ್ತಿನ ದತ್ತಾಂಶವನ್ನು ಬಳಸಲಾಯಿತು. ಆದರೆ ಇಂತಹ ಮೂಲಗಳ ಬಳಕೆಗೂ ಎರಡು ಮಿತಿಗಳಿದ್ದವು 1. ಸಮೀಕ್ಷೆಯನ್ನು ನಡೆಸಲಾದ ಕಾಲವನ್ನು ಆಧರಿಸಿ ಭಿನ್ನ ದತ್ತಾಂಶಗಳಿಗೆ ಅವಧಿಯು ಭಿನ್ನವಾಗಿರಬಹುದು, ಉದಾ: ರಾಷ್ಟ್ರೀಯ ಮಾದರಿ ಸಮೀಕ್ಷೆಯ ೬೬ನೇ ಸುತ್ತನ್ನು ೨೦೦೯-೧೦ ರಲ್ಲಿ ನಡೆಸಲಾಯಿತು ಮತ್ತು 2. ಈ ದತ್ತಾಂಶಗಳು ಇಡೀ ಜಿಲ್ಲೆಗೆ ಲಭ್ಯವಿದ್ದು, ತಾಲೂಕು ಮಟ್ಟದಲ್ಲಿ ವಿಂಗಡಿಸಲಾಗಿಲ್ಲದಿರುವುದು.

ಬೃಹತ್ ದತ್ತಾಂಶ ಕೂಟಗಳನ್ನು ಪರಿಶೀಲಿಸುವ ಮತ್ತು ಸೂಚ್ಯಂಕಗಳ ಅಭಿವೃದ್ಧಿಯ ಜೊತೆಗೆ, ಇನ್ನೂ ಆಳವಾಗಿ ಜಿಲ್ಲೆಗೆ ನಿರ್ದಿಷ್ಟವಾದ ಸಮಸ್ಯೆಗಳನ್ನು ಪರಿಶೋಧಿಸಲು ಮತ್ತು ಪರಿಶೀಲನೆಯನ್ನು ಪುಷ್ಟಿಗೊಳಿಸುವ ಉದ್ದೇಶದಿಂದ ನಾಲ್ಕು ಕಿರು ಕ್ಷೇತ್ರ ಅಧ್ಯಯನಗಳನ್ನೂ ಮಾಡಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಕೆಳಕಂಡ ನಾಲ್ಕು ಕಿರು ಕ್ಷೇತ್ರ ಅಧ್ಯಯನಗಳನ್ನು ಮಾಡಿ, ಪರಿಶೀಲನೆಗೆ ಬಳಸಲಾಯಿತು:

1. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಖಾಸಗಿ ಶಾಲೆಗಳ ಗುಣಮಟ್ಟ
2. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಭೂಬಳಕೆಯಲ್ಲಿನ ಬದಲಾವಣೆ
3. ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ನಗರದ ನಡುವೆ ಸಾರಿಗೆ ಸೇವೆಗಳ ಗುಣಮಟ್ಟ
4. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎರಡು ಗ್ರಾಮ ಪಂಚಾಯತಿಗಳಲ್ಲಿ ಸಂಪೂರ್ಣ ನಿರ್ಮಲೀಕರಣ ಅಭಿಯಾನದ ಸಾಧನೆ

## 1.6 ಜಿಲ್ಲಾ ಮಾನವ ಅಭಿವೃದ್ಧಿ ವರದಿಯ ಮಂಡನೆಯ ವಿಧಾನ

ದತ್ತಾಂಶ ಮತ್ತು ಮಾಪನದಲ್ಲಿ ಕೆಲವು ಮಿತಿಗಳಿದ್ದರೂ, ಈ ಮಾನವ ಅಭಿವೃದ್ಧಿ ವರದಿ ಪ್ರತ್ಯೇಕ ಮಟ್ಟದಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ವಿಷಯಗಳಲ್ಲಿ ಮಾಹಿತಿ ನೀಡುವ ಪ್ರಮುಖ ದಾಖಲೆಯಾಗಿದೆ. ಎಲ್ಲರಿಗೂ ತಿಳಿದಂತೆ, ಸಮಗ್ರಗಳು ತುದಿಯ ಮೌಲ್ಯಗಳನ್ನು ಮತ್ತು ವಿವಿಧ ಮಟ್ಟಗಳಲ್ಲಿರುವ ಅಸಮಾನತೆಗಳನ್ನು ಮುಚ್ಚಿಡುತ್ತವೆ. ಜಿಲ್ಲೆಗಳು ಸಾಮಾನ್ಯವಾಗಿ ಬೃಹತ್ ಘಟಕಗಳಾಗಿದ್ದು, ತಾಲೂಕು ಮಟ್ಟದಲ್ಲಿ ಮಾನವ ಅಭಿವೃದ್ಧಿ ಪ್ರಕ್ರಿಯೆಯನ್ನು ಪರಿಶೀಲಿಸದಿದ್ದಲ್ಲಿ, ಈ ಅಸಮಾನತೆಗಳು ಕಾಣುವುದಿಲ್ಲ. ರಾಜ್ಯನೀತಿ ರಚಿಸುವವರಿಂದ ಹೆಚ್ಚು ಗಮನದ ಅಗತ್ಯವಿರುವ ಕ್ಷೇತ್ರಗಳು ಮತ್ತು ಅಂಶಗಳ ಬಗ್ಗೆ ಈ ಮಾನವ ಅಭಿವೃದ್ಧಿ ವರದಿ ಸ್ಪಷ್ಟ ಚಿತ್ರಣ ನೀಡುತ್ತದೆ. ಇನ್ನೂ ಅಧಿಕ ಸಂಶೋಧನೆ ಮತ್ತು ತಪಾಸಣೆ ಅಗತ್ಯವಿರುವಂಥ ಅಂಶಗಳ ಬಗ್ಗೆಯೂ ಇದು ಆಳವಾದ ಅಂತರ್ದೃಷ್ಟಿ ನೀಡುವಲ್ಲಿ ಸಹಾಯಕವಾಗಿದೆ.

ಈ ಮಾನವ ಅಭಿವೃದ್ಧಿ ವರದಿಯನ್ನು, ಈ ಪ್ರಸ್ತಾವನೆಯ ಅಧ್ಯಾಯವೂ ಸೇರಿದಂತೆ 12 ಅಧ್ಯಾಯಗಳಾಗಿ ಸಂಯೋಜಿಸಲಾಗಿದೆ. ಜಿಲ್ಲೆಯ ಪಕ್ಷಿನೋಟ ಮತ್ತು ಸೂಚ್ಯಂಕಗಳ ಗಣತಿಯು ಸೇರಿದಂತೆ, ಶಿಕ್ಷಣ ಮತ್ತು ಸಾಕ್ಷರತೆ, ಆರೋಗ್ಯ ಮತ್ತು ಪೌಷ್ಟಿಕತೆ, ಆದಾಯ, ಬಡತನ ಮತ್ತು ಉದ್ಯೋಗ, ಜೀವನದ ಗುಣಮಟ್ಟ, ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ಥಾನಮಾನ ದಲ್ಲಿ ವಿವರಿಸಲಾಗಿದೆ, ಆಡಳಿತ ಪರಿಪಾಲನೆ ಮತ್ತು ಮಾನವ ಅಭಿವೃದ್ಧಿಯಲ್ಲಿ ನಗರದ ಸಮಸ್ಯೆಗಳ ಮೇಲೆ ಪ್ರತ್ಯೇಕ ಅಧ್ಯಾಯಗಳನ್ನು ಸೇರಿಸಲಾಗಿದೆ. ಈ ಅಧ್ಯಾಯಗಳು ಆಯಾ ವಿಷಯಗಳ ಬಗ್ಗೆ ಆಳವಾದ ವಿವರಣೆ ಹೊಂದಿದ್ದು, ಸೂಚ್ಯಂಕಗಳು ವ್ಯಾಪಿಸದೆ ಇರುವ ಇತರ ಅಂಶಗಳನ್ನೂ ಉಲ್ಲೇಖಿಸುತ್ತದೆ. ಎರಡು ಅಥವಾ ಹೆಚ್ಚು ಪರಿಮಾಣಾತ್ಮಕ ಚರಮೌಲ್ಯಗಳನ್ನು ಎರಡು ವಿಮಿತಿಯ ನಕ್ಷೆ ರೂಪದಲ್ಲಿ ಪ್ರದರ್ಶಿಸುವ ರಡಾರ್ ನಕ್ಷೆಯನ್ನು, ಕೆಲವು ಅಧ್ಯಾಯಗಳಲ್ಲಿ ತಾಲೂಕುಗಳ ನಡುವಿನ ಹೋಲಿಕೆಯನ್ನು ಮಾಡಲು ಬಳಸಲಾಗಿದೆ. ಶ್ರಮ ಮತ್ತು ಹೂಡಿಕೆಯ ಅಗತ್ಯವಿರುವ ಕ್ಷೇತ್ರಗಳನ್ನು ಚಿತ್ರದ ರೂಪದಲ್ಲಿ ಗುರುತಿಸಲು ಇದು ಸಹಾಯಕವಾಗಿದ್ದು, ಅಧಿಕಾರಿಗಳಿಗೆ ಮತ್ತು ರಾಜ್ಯನೀತಿ ರಚನಾಕಾರರಿಗೆ ಯೋಜನೆಯ ಪ್ರಕ್ರಿಯೆಯಲ್ಲಿ ನೆರವಾಗುತ್ತದೆ. ಎಲ್ಲಾ ಚರಮೌಲ್ಯಗಳನ್ನು ಶೇಕಡಾವಾರು ಪ್ರಮಾಣಕ್ಕೆ ತಂದು, ಅದನ್ನು 10 ರಿಂದ ಭಾಗಿಸಿ, ಅದು ಶೂನ್ಯ ಮತ್ತು ಒಂದರ ನಡುವೆ ಇರುವಂತೆ ಮಾಡಿ, ಈ ಎಲ್ಲಾ ಚರಮೌಲ್ಯಗಳನ್ನೂ ಸಮಾನ ಅಳತೆಗೆ ತರುತ್ತದೆ. ಚರಮೌಲ್ಯಗಳನ್ನು ಏಕಮುಖವಾಗಿ ಮಾಡಲಾಗಿದ್ದು, ಮೌಲ್ಯವು ಧನಾತ್ಮಕ ಅಥವಾ ಋಣಾತ್ಮಕವಾಗಿದ್ದರೂ ಇದನ್ನು ಪರಿಗಣಿಸದೆ, ರಡಾರ್ ನಕ್ಷೆಯಲ್ಲಿ ಚರಮೌಲ್ಯದ ಉನ್ನತ ಮೌಲ್ಯವು ಹೆಚ್ಚಿನ ಮಾನವ ಅಭಿವೃದ್ಧಿಯನ್ನು ಸೂಚಿಸುವಂತೆ ಮತ್ತು ಚರಮೌಲ್ಯದ ಕಡಿಮೆ ಮೌಲ್ಯವು ಕಡಿಮೆ ಮಾನವ ಅಭಿವೃದ್ಧಿಯನ್ನು ಸೂಚಿಸುವಂತೆ ಮಾಡಲಾಗಿದೆ.

ಮಾನವ ಅಭಿವೃದ್ಧಿಗೆ ಸಂಬಂಧಪಟ್ಟ ಕಿರು ಕ್ಷೇತ್ರ ಅಧ್ಯಯನಗಳನ್ನು ವರದಿಯ ಭಾಗಗಳಲ್ಲಿ ಸೂಕ್ತವಾಗಿ ವಿಶ್ಲೇಷಿಸಿ, ಸಂಬಂಧಿಸಿದ ಅಧ್ಯಾಯಗಳಲ್ಲಿ ನೀಡಲಾಗಿದೆ. ಕಡೆಯ ಅಧ್ಯಾಯವು ಹೆಚ್ಚು ಗಮನ ಮತ್ತು ಕಾರ್ಯತಂತ್ರದ ಅಗತ್ಯವಿರುವ ಪ್ರದೇಶಗಳನ್ನು ಗುರುತಿಸಿದೆ.



# ಜಿಲ್ಲೆಯ ಪಕ್ಷಿನೋಟ





# 2. ಜಿಲ್ಲೆಯ ಪಕ್ಷಿನೋಟ

## 2.1 ಪ್ರಸ್ತಾವನೆ

ಬೆಂಗಳೂರು ಜಿಲ್ಲೆಯನ್ನು 1986ರಲ್ಲಿ ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಂದು ಎರಡು ಜಿಲ್ಲೆಗಳಾಗಿ ವಿಭಜಿಸಲಾಯಿತು,. ಬೆಂಗಳೂರು ಗ್ರಾಮಾಂತರ ಜಿಲ್ಲೆಯು, ಬೆಂಗಳೂರು ನಗರ ಜಿಲ್ಲೆಯನ್ನು ಸುತ್ತುವರಿದ 8 ತಾಲೂಕುಗಳನ್ನು ಹೊಂದಿತ್ತು. 4 ತಾಲೂಕುಗಳನ್ನುಳ್ಳ ಈಗಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯು, 2007ರಲ್ಲಿ ಅದರ ಉಳಿದ 4 ತಾಲೂಕುಗಳನ್ನು ಸೇರಿಸಿ ರಾಮನಗರ ಜಿಲ್ಲೆಯನ್ನು ಸೃಷ್ಟಿಸಿದಾಗ, ಅಸ್ತಿತ್ವಕ್ಕೆ ಬಂದಿತು. ಆಡಳಿತದ ಉದ್ದೇಶಗಳಿಗಾಗಿ ಈ ಜಿಲ್ಲೆಯಲ್ಲಿ 4 ತಾಲೂಕುಗಳು, 2 ಕಂದಾಯ ಉಪವಿಭಾಗಗಳು, 17 ಉಪ ತಾಲೂಕುಗಳು, 1052 ಗ್ರಾಮಗಳು ಮತ್ತು 1272 ಕಂದಾಯ ಗ್ರಾಮಗಳನ್ನು ಹೊಂದಿದೆ. ಸ್ಥಳೀಯ ಸರ್ಕಾರದ ರಚನೆಯು, 98 ಗ್ರಾಮ ಪಂಚಾಯತಿಗಳು, 4 ತಾಲೂಕು ಪಂಚಾಯತಿ, ಒಂದು ಜಿಲ್ಲಾ ಪಂಚಾಯತಿ, ಒಂದು ನಗರಸಭೆ (ದೊಡ್ಡಬಳ್ಳಾಪುರ), ಮತ್ತು 4 ಪುರಸಭೆಗಳನ್ನು (ದೇವನಹಳ್ಳಿ, ವಿಜಯಪುರ, ಹೊಸಕೋಟೆ ಮತ್ತು ನೆಲಮಂಗಲ) ಹೊಂದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಉತ್ತರದಲ್ಲಿ ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ, ಪೂರ್ವದಲ್ಲಿ ಕೋಲಾರ ಜಿಲ್ಲೆಯಿಂದ, ಪಶ್ಚಿಮದಲ್ಲಿ ರಾಮನಗರ ಜಿಲ್ಲೆಯಿಂದ ಮತ್ತು ದಕ್ಷಿಣದಲ್ಲಿ ಬೆಂಗಳೂರು ನಗರ ಜಿಲ್ಲೆಯಿಂದ ಸುತ್ತುವರೆದಿದೆ. ಈ ಅಧ್ಯಾಯವು ಈ ಜಿಲ್ಲೆಯ ಭೌಗೋಳಿಕ ರಚನೆ, ಜನಸಂಖ್ಯೆ ಮತ್ತು ಸಾಮಾಜಿಕ-ಆರ್ಥಿಕ ಸ್ಥಿತಿಗಳ ಪರಿಚಯವನ್ನು ನೀಡಿ, ಮಾನವ ಅಭಿವೃದ್ಧಿ ವರದಿಗೆ ಹಿನ್ನೆಲೆಯನ್ನು ಒದಗಿಸುತ್ತದೆ.




ಚಿತ್ರ 2.1 ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಕ್ಷೆ (2011)

## 2.2 ಹಿನ್ನೆಲೆ ಮತ್ತು ಸಂಕ್ಷಿಪ್ತ ಪ್ರಾದೇಶಿಕ ಇತಿಹಾಸ




ಚಿತ್ರ 2.2: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಕ್ಷೆ (2014)

ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು 4ನೇ ಶತಮಾನದಲ್ಲಿ ಗಂಗರು ಆಳುತ್ತಿದ್ದು, ಕೋಲಾರ ಮತ್ತು ಚಿಕ್ಕಬಳ್ಳಾಪುರಗಳ ಭಾಗಗಳನ್ನೊಳಗೊಂಡಂತೆ, ಇದು ಅವರ ರಾಜ್ಯವಾಗಿದ್ದಿತು. ನಂತರ, ಎಂಟನೇ ಶತಮಾನದಲ್ಲಿ ಈ ಪ್ರದೇಶವನ್ನು ರಾಷ್ಟ್ರಕೂಟರು ಆಳುತ್ತಿದ್ದು, ಶ್ರೀಪುರುಷನು ನೆಲಮಂಗಲ ತಾಲೂಕಿನ ಮನ್ನೆಯನ್ನು (ಮಾನ್ಯಪುರ) ಆಸ್ಥಾನ ನಿವಾಸವನ್ನಾಗಿ ಮಾಡಿದ್ದನು. ಈ ಜಿಲ್ಲೆಯ ಕೆಲವು ಭಾಗಗಳನ್ನು ಪಲ್ಲವರು, ಹೊಯ್ಸಳರು, ಮರಾಠರು ಮತ್ತು ಮೈಸೂರಿನ ಒಡೆಯರು ಆಳುತ್ತಿದ್ದರೆಂದು ದಾಖಲೆಗಳಿವೆ.

ದೇವನಹಳ್ಳಿಯು ಬೆಂಗಳೂರು ನಗರದಿಂದ 39 ಕಿ.ಮೀ. ದೂರದಲ್ಲಿದೆ. ದೇವನದೊಡ್ಡಿಯಲ್ಲಿ ಮಲ್ಲಭೈರೆ ಗೌಡನು ದೇವನ ಅನುಮತಿಯಿಂದ ಒಂದು ಕೋಟೆಯನ್ನು ಕಟ್ಟಿ, ಅದರ ಹೆಸರನ್ನು ದೇವನಹಳ್ಳಿಯೆಂದು ಬದಲಾಯಿಸಿದನು. ಈ ಜಾಗವು ಮರಾಠರ ಮತ್ತು ಮೈಸೂರು ಒಡೆಯರ ಆಳ್ವಿಕೆಯಲ್ಲಿತ್ತು. ಟಿಪ್ಪು ಸುಲ್ತಾನ್ ದೇವನಹಳ್ಳಿಯಲ್ಲಿ ಜನಿಸಿದನು. ಆಗಿನ ಕಾಲದಲ್ಲಿ ಪ್ರಖ್ಯಾತ ಶಿಲ್ಪಿಯಾದ ಹನುಮಂತಾಚಾರ್ಯನು ದೇವನಹಳ್ಳಿಯಲ್ಲಿ ಸಾಂಪ್ರದಾಯಿಕ ಶಿಲ್ಪಕಲಾ ಶಾಲೆಯನ್ನು ನಡೆಸುತ್ತಿದ್ದನು.

[8] https://www.google.co.in/search?q=bangalore+rural+map&oq=bangalore+rural+map&aqs=chrome..69i57j69i60l3j69i59j69i60.2126j0j7&sourceid=chrome&es_sm=93&ie=UTF-8#q=bangalore+rural+district+map&revid=432793632

**ಕೋಷ್ಟಕ 2.1: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪರಿಚಯಾತ್ಮಕ ಅಂಕಿ-ಅಂಶಗಳು**

| ವಿವರ | ದೇವನಹಳ್ಳಿ | ದೊಡ್ಡಬಳ್ಳಾಪುರ | ಹೊಸಕೋಟೆ | ನೆಲಮಂಗಲ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
|---|---|---|---|---|---|
| ವಿಸ್ತೀರ್ಣ (ಚ.ಕಿಮಿ.) | 431 | 778 | 544 | 506 | 2,259 |
| ನಗರ ಸ್ಥಳೀಯ ಸಂಸ್ಥೆ | 2 | 1 | 1 | 1 | 5 |
| ಗ್ರಾಮ ಪಂಚಾಯತಿಗಳು | 21 | 29 | 26 | 22 | 98 |
| ಗ್ರಾಮಗಳು | 214 | 298 | 297 | 243 | 1052 |
| ಒಟ್ಟು ಜನಸಂಖ್ಯೆ (2011) | 209,622 | 299,594 | 270,818 | 210,889 | 990,923 |
| ಜನ ಸಾಂದ್ರತೆ | 486 | 385 | 498 | 417 | 439 |
| ಗ್ರಾಮೀಣ ಜನಸಂಖ್ಯೆ (2011) | 146,705 | 198,546 | 213,838 | 163,090 | 722,179 |
| ನಗರ ಜನಸಂಖ್ಯೆ (2011) | 62,917 | 101,048 | 56,980 | 47,799 | 268,744 |
| ಪರಿಶಿಷ್ಟ ಜಾತಿ ಜನಸಂಖ್ಯೆ (2011) | 49,517 | 60,773 | 57,882 | 45,528 | 213,700 |
| ಪರಿಶಿಷ್ಟ ಪಂಗಡ ಜನಸಂಖ್ಯೆ (2011) | 20,385 | 14,259 | 9,753 | 8,506 | 52,903 |
| ಸಾಕ್ಷರತಾ ಪ್ರಮಾಣ (2011) | 76.76 | 78.00 | 77.98 | 78.91 | 77.93 |
| ಪರಿಶಿಷ್ಟ ಜಾತಿ ಸಾಕ್ಷರತಾ ಪ್ರಮಾಣ (2011) | 66.43 | 67.81 | 69.31 | 71.27 | 68.64 |
| ಪರಿಶಿಷ್ಟ ಪಂಗಡ ಸಾಕ್ಷರತಾ ಪ್ರಮಾಣ (2011) | 70.68 | 72.19 | 70.37 | 75.38 | 71.79 |
| ಲಿಂಗ ಅನುಪಾತ (2011) | 944 | 951 | 930 | 962 | 946 |
| ಪುರುಷ ದುಡಿಮೆ ಸಹಭಾಗಿತ್ವ ಪ್ರಮಾಣ (2011) | 69.45 | 70.08 | 69.29 | 68.76 | 69.45 |
| ಸ್ತ್ರೀ ದುಡಿಮೆ ಸಹಭಾಗಿತ್ವ ಪ್ರಮಾಣ (2011) | 36.94 | 38.64 | 29.08 | 28.88 | 33.61 |
| ಕೃಷಿಯೇತರ ಕಾರ್ಮಿಕರ ಶೇಕಡಾವಾರು | 47.21 | 53.61 | 54.70 | 60.69 | 53.92 |
| ಕೃಷಿ ಕಾರ್ಮಿಕರ ಶೇಕಡಾವಾರು | 52.79 | 46.39 | 45.30 | 39.31 | 46.08 |
| ಒಟ್ಟು ಆಂತರಿಕ ಉತ್ಪನ್ನ 2008-09 ಸ್ಥಿರ ಬೆಲೆಗಳಲ್ಲಿ | 68,510 | 176,592 | 142,635 | 115,246 | 502,983 |
| ಮಕ್ಕಳ ಮರಣ ಪ್ರಮಾಣ | 25 | 36 | 37 | 26 | 31 |
| ತಾಯಂದಿರ ಮರಣ ಪ್ರಮಾಣ | 126 | 101 | 102 | 150 | 120 |
| ಒಟ್ಟು ದಾಖಲಾತಿ ಪ್ರಮಾಣ | 90.11 | 85.74 | 84.02 | 89.13 | 86.97 |

ಮೂಲ: ಭಾರತೀಯ ಜನಗಣತಿ ಮತ್ತು HMIS 2011 ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ದೊಡ್ಡಬಳ್ಳಾಪುರ ಬೆಂಗಳೂರು ನಗರದಿಂದ 32 ಕಿ.ಮಿ. ದೂರದಲ್ಲಿದೆ. ಹೊಯ್ಸಳರ ಕಾಲದಿಂದಲೂ ಇದು ಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿದೆ. ಹೈದರ್‌ಅಲಿಯು ಈ ಜಾಗವನ್ನು ಆಕ್ರಮಿಸಿಕೊಂಡಾಗ, ಇದನ್ನು ಚಿಕ್ಕಬಳ್ಳಾಪುರದಿಂದ ಪ್ರತ್ಯೇಕಿಸಲು ದೊಡ್ಡಬಳ್ಳಾಪುರ ಎಂದು ಹೆಸರಿಟ್ಟನು. ರೇಷ್ಮೆ ನೇಯ್ಗೆಯು ಇಲ್ಲಿನ ಪ್ರಮುಖ ಸಾಂಪ್ರದಾಯಿಕ ಉದ್ಯೋಗವಾಗಿದೆ ಮತ್ತು ಇಂದಿಗೂ ಇಲ್ಲಿ ಅನೇಕ ವಿದ್ಯುತ್ ಮಗ್ಗಗಳಿವೆ. ಈ ಸ್ಥಳವೂ ವೀಣಾ ಮತ್ತು ತಂಬೂರಿಯಂತಹ ವಾದ್ಯಗಳ ತಯಾರಿಕೆಗೂ ಹೆಸರಾಗಿತ್ತು ಹಾಗೂ ಮಡಕೆ ಮತ್ತು ಅಗರಬತ್ತಿಗಳೂ ಬಹಳ ಜನಪ್ರಿಯವಾಗಿದ್ದುವು.

ಹೊಸಕೋಟೆಯು ಬೆಂಗಳೂರು ನಗರದಿಂದ 25 ಕಿಮಿ ದೂರದಲ್ಲಿದೆ. 1494ರಲ್ಲಿ ವೀರಶೈವ ಮಠಕ್ಕೆ ನೀಡಿದ ತಾಮ್ರದ ಶಾಸನದ ಪ್ರಕಾರ, ಈ ಸ್ಥಳವನ್ನು ಸುಗಟೂರಿನ ಮುಖ್ಯಸ್ಥರಾದ ತಮ್ಮೇಗೌಡರು ಸ್ಥಾಪಿಸಿದರು. ಈ ಸ್ಥಳವು 3.2 ಕಿಮಿ ಉದ್ದದ ಏರಿ ಹೊಂದಿದ್ದ ಮತ್ತು ಅದು ಪೂರ್ಣ ತುಂಬಿದಾಗ 12 ಕಿ.ಮಿ. ಸುತ್ತಳತೆಯ ದೊಡ್ಡ ಕಲ್ಯಾಣಿಗೆ ಪ್ರಖ್ಯಾತವಾಗಿತ್ತು. ಈ ಸ್ಥಳವನ್ನು 1687ರಲ್ಲಿ ಮೊಘಲರು ವಶಪಡಿಸಿಕೊಂಡು, ಸಿರಾ ಸಂಸ್ಥಾನದ ಭಾಗವಾಯಿತು. 1761ರಲ್ಲಿ ಪುನಃ ಮೈಸೂರಿನ ರಾಜರ ಆಳ್ವಿಕೆಗೆ ಬಂದಿತು. ಹೊಸಕೋಟೆಯ ಹಳೆ ಕೋಟೆಯ ಪ್ರದೇಶದಲ್ಲಿ ಅವಿಮುಕ್ತೇಶ್ವರ, ವರದರಾಜ ಮತ್ತು ವಿಠೋಬಾ ದೇವಸ್ಥಾನಗಳಿವೆ.

ನೆಲಮಂಗಲವು ಬೆಂಗಳೂರಿನಿಂದ 27 ಕಿ.ಮಿ. ದೂರದಲ್ಲಿದೆ. 1464ನೇ ಇಸವಿ ದಾಖಲೆಗಳು ಈ ಸ್ಥಳವನ್ನು ಕಾನಸವಾಡಿಯ ನೆಲವಂಗಲ ಎಂಬ ಹೆಸರಿನ ವಿಜಯನಗರದ ಸಾಮಂತನ ರಾಜ್ಯವೆಂದು ಉಲ್ಲೇಖಿಸುತ್ತವೆ. ಬಿಜಾಪುರದ ಸುಲ್ತಾನರಿಂದ ಪಡೆದುಕೊಂಡ ನಂತರ, 1689ರಲ್ಲಿ ಮೊಘಲರು ನೆಲಮಂಗಲವನ್ನು ಮೈಸೂರು ಒಡೆಯರಿಗೆ ವರ್ಗಾಯಿಸಿದರೆಂದು ಕಾಣುತ್ತದೆ. ಈ ಸ್ಥಳದಲ್ಲಿ ರುದ್ರದೇವ, ಬಸವೇಶ್ವರ, ಆಂಜನೇಯ, ಲಕ್ಷ್ಮಿ, ಚೆನ್ನಕೇಶವ, ವಿಜಯವಿಟ್ಠಲ ಮತ್ತು ಬಸವಣ್ಣನ ದೇವಸ್ಥಾನಗಳಿವೆ.

## 2.3 ಭೌಗೋಳಿಕ ಲಕ್ಷಣಗಳು ಮತ್ತು ಪ್ರಾಕೃತಿಕ ಸಂಪನ್ಮೂಲಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆಯು 77 04'ಇ ಮತ್ತು 77 59'ಇ ನ ಅಕ್ಷಾಂಶ ಮತ್ತು 12 15'ಓ ಮತ್ತು 13 31'ಓ ನ ರೇಖಾಂಶದ ನಡುವೆ ನೆಲೆಗೊಂಡಿದೆ. ಜಿಲ್ಲೆಯ ವಿಸ್ತೀರ್ಣ 2259 ಚ.ಕಿ.ಮಿ. ಇದ್ದು, ಅತಿ ದೊಡ್ಡ ವಿಸ್ತೀರ್ಣದ 778 ಚ.ಕಿ.ಮಿ. ಉಳ್ಳ ತಾಲೂಕು ದೊಡ್ಡಬಳ್ಳಾಪುರವಾಗಿದೆ. ಹೊಸಕೋಟೆ, ನೆಲಮಂಗಲ ಮತ್ತು ದೇವನಹಳ್ಳಿ ತಾಲೂಕುಗಳು 544, 506 ಮತ್ತು 431 ಚ.ಕಿಮಿ. ಗಳ ವಿಸ್ತೀರ್ಣ ಹೊಂದಿವೆ. ಈ ಜಿಲ್ಲೆಯು ದಕ್ಕನ್ ಪ್ರಸ್ಥಭೂಮಿಯ ಭಾಗವಾಗಿದ್ದು, 650 ರಿಂದ 900 ಮೀಟರ್ ಶ್ರೇಣಿಯ ಎತ್ತರದಲ್ಲಿದೆ. ಜಿಲ್ಲೆಯು ಕಲ್ಲಿನ ಮೇಲುಭೂಮಿ, ಪ್ರಸ್ಥಭೂಮಿ ಮತ್ತು ಚಪ್ಪಟೆ ಮೇಲ್ಭಾಗದ ಲ್ಯಾಟೆರೈಟ್ ಗುಡ್ಡಗಳನ್ನು ಹೊಂದಿದೆ. ಚಪ್ಪಟೆ ಮೇಲ್ಭಾಗದ ಗುಡ್ಡಗಳು ಜಿಲ್ಲೆಯ ಉತ್ತರ ಭಾಗದಲ್ಲಿ ಸಮುದ್ರ ಮಟ್ಟದಿಂದ 900 ಮೀ ಎತ್ತರದಲ್ಲಿದೆ. ಜಿಲ್ಲೆಯ ಬಹಳಷ್ಟು ಭಾಗ ಸಮತಟ್ಟಾದ ಪ್ರದೇಶವಾಗಿದ್ದು, ನೈಸ್ ಮತ್ತು ಗ್ರಾನೈಟ್ ರೀತಿಯ

ಕಲ್ಲುಗಳಿಂದ ಕೂಡಿದ್ದು, ಅದು ಸಮುದ್ರ ಮಟ್ಟದಿಂದ 650-850 ಮೀ ಎತ್ತರದಲ್ಲಿದೆ. ಜಿಲ್ಲೆಯ ಬಹಳಷ್ಟು ಭಾಗವು ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಬರುತ್ತದೆ. ಈ ಜಿಲ್ಲೆಯಲ್ಲಿ ಹರಿವ ನದಿಗಳೆಂದರೆ ಅರ್ಕಾವತಿ, ಕುಮುದ್ವತಿ, ಮತ್ತು ದಕ್ಷಿಣ ಪಿನಾಕಿನಿ. ಈ ನದಿಗಳು ಈಗ ಕೇವಲ ಮಳೆಗಾಲದ ಹೊಳೆಗಳಾಗಿವೆ. ನೀರಾವರಿ, ಉದ್ಯಮ ಮತ್ತು ಗೃಹಬಳಕೆಗಳ ಉದ್ದೇಶಕ್ಕೆ ಅಂತರ್ಜಲದ ಮೇಲಿನ ಒತ್ತಡವು ಅತಿ ಹೆಚ್ಚಾಗಿದೆ. ನೆಲಮಂಗಲವನ್ನು ಹೊರತುಪಡಿಸಿ ಉಳಿದ ತಾಲುಕುಗಳಲ್ಲಿ ಅಂತರ್ಜಲದ ಅತೀ ಬಳಕೆ ಆಗಿರುವುದು ದಾಖಲಾಗಿದೆ.

ಈ ಜಿಲ್ಲೆಯು ಕರ್ನಾಟಕದ ಪೂರ್ವ ಒಣ ಕೃಷಿ ವಲಯದಲ್ಲಿ[9] ಇದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳೂ ಇದರಲ್ಲಿ ಸೇರಿವೆ. ಈ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖವಾದ ಮಣ್ಣೆಂದರೆ ಕೆಂಪು ಮಣ್ಣು ಮಿಶ್ರಿತ ಮರಳು ಲ್ಯಾಟೆರೈಟ್ ಮಣ್ಣು, ಮತ್ತು ಲ್ಯಾಟೆರೈಟಿಕ್ ಗ್ರವೆಲ್ಲಿ ಮಣ್ಣು. ಈ ಮಣ್ಣುಗಳಲ್ಲಿ ಕಡಿಮೆ ಸಾರಜನಕ, ಕಡಿಮೆ ಸಾವಯವ ಇಂಗಾಲ, ಮಧ್ಯಮ ಪ್ರಮಾಣದಲ್ಲಿ ರಂಜಕ ಮತ್ತು ಪೊಟಾಸಿಯಂ ಇದ್ದು, ಮಧ್ಯಮ ಜಲಧಾರಣಾ ಶಕ್ತಿ ಮತ್ತು ಸಾಧಾರಣ ಫಲವತ್ತತೆ ಹೊಂದಿದೆ. ಈ ಮಣ್ಣಿಗೆ ಹೆಚ್ಚು ಸವೆತಕ್ಕೆ ಈಡಾಗುವ ಪ್ರವೃತ್ತಿಯಿದ್ದು, ಕೆರೆಗಳಲ್ಲಿ ಬೇಗನೆ ಹೂಳುತುಂಬುವುದು. ಇಲ್ಲಿ ವಾರ್ಷಿಕ ಮಳೆಯು ಸರಿಸುಮಾರು 820 ಮಿ.ಮೀ ಇದ್ದು, ಇತರ ತಾಲೂಕುಗಳಲ್ಲಿ 650 ಮಿ.ಮೀ. ನಿಂದ 850 ಮಿ.ಮೀ ವರೆಗೂ ಇದೆ. ಈ ಜಿಲ್ಲೆಯು ಜಿಸಿಯಾದ ಮತ್ತು ಅರೆಶುಷ್ಕ ವಾತಾವರಣ ಇದ್ದು, ಬಹಳ ಹಿತಕರವಾಗಿದೆ. ಚಳಿಗಾಲದಲ್ಲಿ ಮತ್ತು ಬೇಸಿಗೆಯಲ್ಲಿ ತಾಪಮಾನವು ಸುಮಾರು 15 ಸೆ ಮತ್ತು 34 ಸೆ ನಡುವೆಇರುತ್ತವೆ. ಈ ಜಿಲ್ಲೆಯ 2259 ಚ.ಕಿಮಿ ಗಳಲ್ಲಿ ಸುಮಾರು 113 ಚ.ಕಿ.ಮಿ. ರಕ್ಷಿತ ಅರಣ್ಯವಾಗಿದೆ.

## 2.4 ಜನಸಂಖ್ಯೆ

2011ರ ಜನಗಣತಿಯ ಪ್ರಕಾರ, ಜಿಲ್ಲೆಯ ಒಟ್ಟು ಜನಸಂಖ್ಯೆಯು 9.90 ಲಕ್ಷಗಳಿದ್ದು, ಇದರಲ್ಲಿ 5.09 ಲಕ್ಷ ಪುರುಷರು ಮತ್ತು 4.82 ಲಕ್ಷ ಸ್ತ್ರೀಯರಿದ್ದಾರೆ. 2001-2011 ರ ಅವಧಿಗೆ ಜನಸಂಖ್ಯೆಯ ದಶವಾರ್ಷಿಕ ಬೆಳವಣಿಗೆಯು ಇಡೀ ಜಿಲ್ಲೆಗೆ ಶೇ. 16.45 ಇದ್ದು, ನೆಲಮಂಗಲ ಮತ್ತು ಹೊಸಕೋಟೆ ತಾಲೂಕುಗಳು ಹೆಚ್ಚಿನ ಜನಸಂಖ್ಯಾ ಬೆಳವಣಿಗೆಯ ದರಗಳಾದ ಶೇ. 20.59 ಮತ್ತು ಶೇ. 21.75 ದಾಖಲಿಸಿವೆ. ಗ್ರಾಮೀಣ ಮತ್ತು ನಗರದ ಜನಸಂಖ್ಯೆಯು 7.22 ಲಕ್ಷ ಮತ್ತು 2.68 ಲಕ್ಷಗಳಿದ್ದು, ಇದು ಒಟ್ಟು ಜನಸಂಖ್ಯೆಯ ಶೇ. 72.88 ಮತ್ತು ಶೇ. 27.12 ಇತ್ತು. ನಗರ ಪ್ರದೇಶದ ಜನಸಂಖ್ಯೆಯ ದಶವಾರ್ಷಿಕ ಬೆಳವಣಿಗೆಯು ಶೇ. 39.73 ಇದ್ದು, ಇದು ಬೆಂಗಳೂರು ನಗರ ಮತ್ತು ಉಡುಪಿ ಜಿಲ್ಲೆಗಳ ನಂತರ ರಾಜ್ಯದಲ್ಲಿ 3 ನೇ ಅತಿ ಹೆಚ್ಚಿನದ್ದಾಗಿದೆ. ಹೊಸಕೋಟೆ ಮತ್ತು ನೆಲಮಂಗಲ ತಾಲೂಕುಗಳು ಶೇ. 56.87 ಮತ್ತು ಶೇ. 89.03 ರಷ್ಟು ನಗರ ಜನಸಂಖ್ಯೆ ಬೆಳವಣಿಗೆಯನ್ನು ದಾಖಲಿಸಿದೆವು. ಹೆಚ್ಚು ಜನಸಂಖ್ಯಾ ಬೆಳವಣಿಗೆಗೆ ವಲಸೆಯು ಬಹಳ ಮುಖ್ಯವಾಗಿದ್ದು, ಮತ್ತು ಬೆಂಗಳೂರು ನಗರ ಜಿಲ್ಲೆಗೆ ಹತ್ತಿರವಿರುವುದು ಇದಕ್ಕೆ ಒಂದು ಪ್ರಮುಖ ಕಾರಣವಾಗಿದೆ. (ಕೋಷ್ಟಕ 2.2 ಮತ್ತು 2.3)

**ಕೋಷ್ಟಕ 2.2: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜನಸಂಖ್ಯೆಯಲ್ಲಿ ದಶವಾರ್ಷಿಕ ಬದಲಾವಣೆಗಳು**

| ತಾಲೂಕು/ಜಿಲ್ಲೆ/ ರಾಜ್ಯ | 2001 | | | 2011 | | | ದಶವಾರ್ಷಿಕ ಬೆಳವಣಿಗೆ | | |
|---|---|---|---|---|---|---|---|---|---|
| | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ದೇವನಹಳ್ಳಿ | 95,288 | 90,038 | 185,326 | 107,842 | 101,780 | 209,622 | 13.17 | 13.04 | 13.11 |
| ದೊಡ್ಡಬಳ್ಳಾಪುರ | 137,541 | 130,791 | 268,332 | 153,527 | 146,067 | 299,594 | 11.62 | 11.68 | 11.65 |
| ಹೊಸಕೋಟೆ | 115,187 | 107,243 | 222,430 | 140,299 | 130,519 | 270,818 | 21.80 | 21.70 | 21.75 |
| ನೆಲಮಂಗಲ | 89,473 | 85,407 | 174,880 | 107,504 | 103,385 | 210,889 | 20.15 | 21.05 | 20.59 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 437,489 | 413,479 | 850,968 | 509,172 | 481,751 | 990,923 | 16.39 | 16.51 | 16.45 |
| ಕರ್ನಾಟಕ | 26,898,918 | 25,951,644 | 52,850,562 | 30,966,657 | 30,128,640 | 61,095,297 | 15.12 | 16.10 | 15.60 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 2.3 ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರಪ್ರದೇಶದ ಜನಸಂಖ್ಯೆಯಲ್ಲಿ ದಶವಾರ್ಷಿಕ ಬದಲಾವಣೆಗಳು**

| ತಾಲೂಕು/ಜಿಲ್ಲೆ/ರಾಜ್ಯ | 2001 | | | 2011 | | | ದಶವಾರ್ಷಿಕ ಬೆಳವಣಿಗೆ | | |
|---|---|---|---|---|---|---|---|---|---|
| | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ | ಒಟ್ಟು |
| ದೇವನಹಳ್ಳಿ | 132,380 | 52,946 | 185,326 | 146,705 | 62,917 | 209,622 | 10.82 | 18.83 | 13.11 |
| ದೊಡ್ಡಬಳ್ಳಾಪುರ | 190,554 | 77,778 | 268,332 | 198,546 | 101,048 | 299,594 | 4.19 | 29.92 | 11.65 |
| ಹೊಸಕೋಟೆ | 186,107 | 36,323 | 222,430 | 213,838 | 56,980 | 270,818 | 14.90 | 56.87 | 21.75 |
| ನೆಲಮಂಗಲ | 149,593 | 25,287 | 174,880 | 163,090 | 47,799 | 210,889 | 9.02 | 89.03 | 20.59 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 658,634 | 192,334 | 850,968 | 722,179 | 268,744 | 990,923 | 9.65 | 39.73 | 16.45 |
| ಕರ್ನಾಟಕ | 34,889,033 | 17,961,529 | 52,850,562 | 37,469,335 | 23,625,962 | 61,095,297 | 7.40 | 31.54 | 15.60 |

ಮೂಲ: ಭಾರತೀಯ ಜನಗಣತಿ

[9] ವಾರ್ಷಿಕಮಳೆ ಹಾಗು ನೆಲದ ಗುಣಗಳನ್ನಾಧರಿಸಿ ವರ್ಗೀಕರಣ ಮಾಡಲಾದ ರಾಜ್ಯದ ಕೃಷಿ ವಲಯಗಳಲ್ಲಿ ಇದೂ ಒಂದು.

**ಕೋಷ್ಟಕ 2.4: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಗರದ, ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಯ ಪ್ರಮಾಣ**

| ತಾಲೂಕು/ಜಿಲ್ಲೆ/ರಾಜ್ಯ | 2001 | | | 2011 | | |
|---|---|---|---|---|---|---|
| | ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| ದೇವನಹಳ್ಳಿ | 28.57 | 23.36 | 9.76 | 30.01 | 23.62 | 9.72 |
| ದೊಡ್ಡಬಳ್ಳಾಪುರ | 28.99 | 20.40 | 4.33 | 33.73 | 20.29 | 4.76 |
| ಹೊಸಕೋಟೆ | 16.33 | 21.92 | 3.44 | 21.04 | 21.37 | 3.60 |
| ನೆಲಮಂಗಲ | 14.46 | 22.77 | 3.61 | 22.67 | 21.59 | 4.03 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 22.60 | 21.93 | 5.13 | 27.12 | 21.57 | 5.34 |
| ಕರ್ನಾಟಕ | 33.99 | 16.20 | 6.55 | 38.67 | 17.15 | 6.95 |

ಮೂಲ: ಭಾರತೀಯ ಜನಗಣತಿ

ಜಿಲ್ಲೆಯಲ್ಲಿ ನಗರ ಜನಸಂಖ್ಯೆಯ ಪಾಲು 2001 ರಲ್ಲಿ ಶೇ. 22.6 ನಿಂದ 2011ರಲ್ಲಿ ಶೇ. 27.12 ಕ್ಕೆ ಏರಿದ್ದು (ಕೋಷ್ಟಕ 2.4), 2001 ಮತ್ತು 2011 ಎರಡೂ ವರ್ಷಗಳಲ್ಲಿಯೂ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ನಗರ ಜನಸಂಖ್ಯೆಯ ಹೆಚ್ಚಿನ ಪ್ರಮಾಣವನ್ನು ಹೊಂದಿದ್ದುವು. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯು 2001ರಲ್ಲಿ ಶೇ. 21.93 ರಿಂದ 2011ರಲ್ಲಿ ಶೇ. 21.57 ಗೆ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿದೆ. ಜಿಲ್ಲೆಯಲ್ಲಿ ಪ.ಪಂ ಜನಸಂಖ್ಯೆಯ ಪ್ರಮಾಣ ಶೇ. 5.13 ನಿಂದ ಶೇ. 5.34 ಕ್ಕೆ ಸ್ವಲ್ಪ ಏರಿಕೆಯಾಗಿದೆ. ರಾಜ್ಯಕ್ಕೆ ಹೋಲಿಸಿದಂತೆ, ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯ ಪ್ರಮಾಣ ಹೆಚ್ಚಿದ್ದು, ಪರಿಶಿಷ್ಟ ಪಂಗಡ ಜನಸಂಖ್ಯೆಯ ಪ್ರಮಾಣ ಕಡಿಮೆಯಿದೆ.

ಜನಸಂಖ್ಯಾ ಬೆಳವಣಿಗೆಯ ಕಾರಣದಿಂದಾಗಿ, ಜಿಲ್ಲೆಯಲ್ಲಿ ಜನಸಾಂದ್ರತೆಯು 2001 ನಿಂದ 2011ರ ಅವಧಿಯಲ್ಲಿ ಪ್ರತಿ ಚ.ಕಿಮಿ.ಗೆ 377 ರಿಂದ 439 ಕ್ಕೆ ಏರಿಕೆಯಾಗಿದೆ (ಕೋಷ್ಟಕ 2.5). ಇದೇ ಅವಧಿಯಲ್ಲಿ ಹೊಸಕೋಟೆ ಮತ್ತು ನೆಲಮಂಗಲ ತಾಲೂಕುಗಳಲ್ಲಿ ಸಾಂದ್ರತೆಯ ಏರಿಕೆಯು, ಇತರ ಎರಡು ತಾಲೂಕುಗಳಿಗೆ ಹೋಲಿಸಿದಂತೆ ಇನ್ನೂ ಹೆಚ್ಚಾಗಿದ್ದಿತು. ಜಿಲ್ಲೆಯಲ್ಲಿ ಸಾಕ್ಷರತೆಯು 2001ರಲ್ಲಿದ್ದ ಶೇ. 69.59 ರಿಂದ 2011ರಲ್ಲಿ ಶೇ. 77.93 ಕ್ಕೆ ಏರಿಕೆಯಾಗಿದ್ದು, ಎರಡೂ ವರ್ಷಗಳಲ್ಲಿ ಇದು ರಾಜ್ಯದ ಸರಾಸರಿಗಿಂತ ಹೆಚ್ಚಾಗಿದ್ದಿತು. 2001 ಮತ್ತು 2011 ಎರಡೂ ವರ್ಷಗಳಲ್ಲಿ ನೆಲಮಂಗಲ ತಾಲೂಕು, ಜಿಲ್ಲೆಯ 4 ತಾಲೂಕುಗಳ ಪೈಕಿ ಅತಿ ಹೆಚ್ಚು ಸಾಕ್ಷರತೆಯನ್ನು ದಾಖಲಿಸಿತ್ತು. ಜಿಲ್ಲೆಯಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣ 2001ರಲ್ಲಿ ಶೇ. 53.28 ಇದ್ದದ್ದು 2011ರಲ್ಲಿ ಶೇ. 52.08 ಕ್ಕೆ ಅಲ್ಪ ಪ್ರಮಾಣದಲ್ಲಿ ಕಡಿಮೆಯಾಯಿತು. ದೊಡ್ಡಬಳ್ಳಾಪುರವನ್ನು ಹೊರತುಪಡಿಸಿ ಎಲ್ಲಾ ತಾಲೂಕುಗಳು ಇದೇ ಅವಧಿಯಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣದಲ್ಲಿ ಇಳಿಕೆಯಾಗಿರುವುದನ್ನು ಕಾಣಬಹುದು.

**ಕೋಷ್ಟಕ 2.5: ಜನಸಾಂದ್ರತೆ, ಸಾಕ್ಷರತೆ ಮತ್ತು ದುಡಿಮೆ ಸಹಭಾಗಿತ್ವ ಪ್ರಮಾಣ (ದು.ಸ.ಪ್ರ)**

| ತಾಲೂಕು/ಜಿಲ್ಲೆ/ರಾಜ್ಯ | 2001 | | | 2011 | | |
|---|---|---|---|---|---|---|
| | ಜನ ಸಾಂದ್ರತೆ | ಸಾಕ್ಷರತೆ ಪ್ರಮಾಣ | ದು.ಸ.ಪ್ರ | ಸಾಂದ್ರತೆ | ಸಾಕ್ಷರತೆ ಪ್ರಮಾಣ | ದು.ಸ.ಪ್ರ |
| ದೇವನಹಳ್ಳಿ | 430 | 68.17 | 54.69 | 486 | 76.76 | 53.69 |
| ದೊಡ್ಡಬಳ್ಳಾಪುರ | 345 | 69.14 | 54.59 | 385 | 78.00 | 54.76 |
| ಹೊಸಕೋಟೆ | 409 | 69.18 | 52.62 | 498 | 77.98 | 49.92 |
| ನೆಲಮಂಗಲ | 346 | 72.30 | 50.63 | 417 | 78.91 | 49.19 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 377 | 69.59 | 53.28 | 439 | 77.93 | 52.03 |
| ಕರ್ನಾಟಕ | 275 | 66.64 | 51.53 | 318 | 75.36 | 51.68 |

ಮೂಲ: ಭಾರತೀಯ ಜನಗಣತಿ

ಜಿಲ್ಲೆಯಲ್ಲಿ ಲಿಂಗ ಅನುಪಾತವು ಸುಧಾರಿಸಿದ್ದು, 2001ರಲ್ಲಿ 945 ಇದ್ದದ್ದು 2011ರಲ್ಲಿ 946 ಕ್ಕೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಪರಿಶಿಷ್ಟ ಜಾತಿ. ಯಲ್ಲಿ ಲಿಂಗ ಅನುಪಾತವು ಸುಧಾರಿಸಿದ್ದು, ಪರಿಶಿಷ್ಟ ಪಂಗಡಗಳಲ್ಲಿ ಇದು ಕಡಿಮೆಯಾಗಿದೆ. ಎಲ್ಲಾ ವರ್ಗಗಳಲ್ಲಿಯೂ ಎರಡೂ ವರ್ಷಗಳಿಗೆ ಲಿಂಗ ಅನುಪಾತವು ರಾಜ್ಯ ಸರಾಸರಿಗಿಂತ ಕಡಿಮೆಯಿರುವುದು ಕಂಡುಬಂದಿದೆ (ಚಿತ್ರ 2.3). 2001 ಮತ್ತು 2011 ಎರಡೂ ವರ್ಷಗಳಲ್ಲಿ ಪರಿಶಿಷ್ಟ ಜಾತಿ / ಪ.ಪಂ ಜನಸಂಖ್ಯೆಯ ಲಿಂಗ ಅನುಪಾತವು ಜಿಲ್ಲೆಯ ಒಟ್ಟು ಜನಸಂಖ್ಯೆಗಿಂತ ಉತ್ತಮವಾಗಿದೆ.

**ಚಿತ್ರ 2.3: ಕರ್ನಾಟಕಕ್ಕೆ ಹೋಲಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಲಿಂಗ ಅನುಪಾತದಲ್ಲಿ ವ್ಯತ್ಯಾಸ**



## 2.5 ಕೃಷಿ

2010-11ರ ಕೃಷಿ ಜನಗಣತಿ ಪ್ರಕಾರ, ಶೇ. 55 ರಷ್ಟು ಭೂಮಿಯು ಕೃಷಿ ಉತ್ಪಾದನೆಯಲ್ಲಿದೆ ಮತ್ತು ಇದರಲ್ಲಿ ಶೇ. 87 ರಷ್ಟು ಹಿಡುವಳಿಯು ಸಣ್ಣ ಮತ್ತು ಅತಿಸಣ್ಣ ಹಿಡುವಳಿಗಳಾಗಿವೆ. ರಾಗಿ ಮತ್ತು ಜೋಳ ಜಿಲ್ಲೆಯ ಪ್ರಮುಖ ಆಹಾರ ಬೆಳೆಗಳಾಗಿದ್ದು, ಇವು ಮಳೆ ಆಶ್ರಿತ ಬೆಳೆಗಳಾಗಿವೆ. ತೊಗರಿ ಮತ್ತು ಕಡಲೆಕಾಯಿ ಬೆಳೆಯೂ ಮಳೆಯನ್ನೇ ಅವಲಂಬಿಸಿದೆ. ಬೆಂಗಳೂರು ನಗರದ ಬೃಹತ್ ಮಾರುಕಟ್ಟೆಗೆ ಹತ್ತಿರವಿರುವ ಕಾರಣದಿಂದಾಗಿ ಹಣ್ಣು, ಹೂವು ಮತ್ತು ತರಕಾರಿ ಬೆಳೆಗಳು ಕೂಡ ಪ್ರಮುಖ ಬೆಳೆಗಳಾಗಿವೆ. ದೇವನಹಳ್ಳಿ, ಹೊಸಕೋಟೆ ಮತ್ತು ದೊಡ್ಡಬಳ್ಳಾಪುರ ತಾಲೂಕುಗಳಲ್ಲಿ ರೋಜಾ, ಮಲ್ಲಿಗೆ ಮತ್ತು ಕನಕಾಂಬರ ಹೂವುಗಳನ್ನು ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ಮಾವು, ದ್ರಾಕ್ಷಿ ಮತ್ತು ಸಪೋಟಾ ಮೊದಲಾದ ಹಣ್ಣುಗಳನ್ನು ಬೆಳೆಯಲಾಗುತ್ತದೆ. ಹೆಚ್ಚು ಸಂಖ್ಯೆಯಲ್ಲಿರುವ ಮಿಶ್ರತಳಿಯ ಹಸುಗಳಿಂದಾಗಿ ಹೈನುಗಾರಿಕೆಯೂ ಉತ್ತಮವಾಗಿದೆ. ಜಿಲ್ಲೆಯಲ್ಲಿ ನೀರಾವರಿಯು ಮುಖ್ಯವಾಗಿ ಅಂತರ್ಜಲ ಅಥವಾ ಕೊಳವೆಬಾವಿಗಳನ್ನು ಅವಲಂಬಿಸಿದೆ. ಜಿಲ್ಲೆಯ 25635 ಹೆಕ್ಟೇರುಗಳಲ್ಲಿನ ಪ್ರದೇಶದಲ್ಲಿ 30645 ಕೊಳವೆಬಾವಿಗಳು ನೀರಾವರಿಗೆ ಬಳಕೆಯಾಗುತ್ತಿವೆ (ಜಿಲ್ಲಾ ಅಂಕಿ ಅಂಶಗಳ ನೋಟ 2011-12). ನೀರಾವರಿ, ಉದ್ಯಮ ಮತ್ತು ಗೃಹಬಳಕೆಯ ಉದ್ದೇಶಗಳಿಗೆ ಅಂತರ್ಜಲದ ಮೇಲಿನ ಒತ್ತಡವು ಹೆಚ್ಚಾಗಿದೆ. ಕೇಂದ್ರ ಅಂತರ್ಜಲ ಮಂಡಳಿಯ ಪ್ರಕಾರ, ನೆಲಮಂಗಲವನ್ನು ಹೊರತುಪಡಿಸಿ ಎಲ್ಲಾ ತಾಲೂಕುಗಳು ಅಂತರ್ಜಲದ ಅತಿ ಬಳಕೆಯನ್ನು ದಾಖಲಿಸಿವೆ.

## 2.6 ಉದ್ಯಮ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸುಮಾರು 74 ಬೃಹತ್ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿದ್ದು, ಇವುಗಳ ಬಂಡವಾಳ ಹೂಡಿಕೆಯು ರೂ. 1557 ಕೋಟಿಯಿದೆ. ಪ್ರಮುಖ ಸಂಸ್ಥೆಗಳೆಂದರೆ ಹಿಮಾಲಯ ಡ್ರಗ್ ಕಂ, ಕಿರ್ಲೋಸ್ಕರ್ ಎಲೆಕ್ಟ್ರಿಕ್, ಟಾಟಾ ಟಿ, ಬೆಲ್ ಸೆರಾಮಿಕ್ಸ್, ಇತ್ಯಾದಿ. ಜಿಲ್ಲೆಯಲ್ಲಿ ಏಳು ಮಧ್ಯಮ ಪ್ರಮಾಣದ ಉದ್ಯಮಗಳಿದ್ದ (ದೊಡ್ಡಬಳ್ಳಾಪುರ ಮತ್ತು ಹೊಸಕೋಟೆಯಲ್ಲಿ ತಲಾ 3 ಮತ್ತು ನೆಲಮಂಗಲದಲ್ಲಿ ಒಂದು), ಇವುಗಳು ರೈಲು ಮತ್ತು ವಾಹನ ಬಿಡಿಭಾಗಗಳ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿವೆ. ಜಿಲ್ಲೆಯಲ್ಲಿನ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಂಖ್ಯೆಯು 12988 ಇದ್ದು, ಇವು ಒಟ್ಟಾರೆಯಾಗಿ 56000ಕ್ಕೂ ಹೆಚ್ಚು ಕಾರ್ಮಿಕರಿಗೆ ಉದ್ಯೋಗವನ್ನು ನೀಡಿವೆ. ಅವುಗಳಲ್ಲಿ ಶೇ.48ಕ್ಕೂ ಹೆಚ್ಚು ಜವಳಿ ಆಧಾರಿತವಾಗಿದ್ದು, ಸುಮಾರು 21000 ಜನರಿಗೆ ಉದ್ಯೋಗವನ್ನು ನೀಡಿವೆ. ಎಲೆಕ್ಟ್ರಾನಿಕ್ಸ್, ಲೆದರ್ ವಸ್ತುಗಳು, ಆಹಾರ, ತಂಪು ಪಾನೀಯಗಳು ಮತ್ತು ಕಬ್ಬಿಣದ ಮತ್ತು ಕಬ್ಬಿಣೇತರ ಉದ್ಯಮಗಳು ಈ ಜಿಲ್ಲೆಯ ಇತರ ಪ್ರಮುಖ ಅತಿ ಸಣ್ಣ ಉದ್ಯಮಗಳಾಗಿವೆ.

ಬೆಂಗಳೂರು ಗ್ರಾಮಂತರ ಜಿಲ್ಲೆಯಲ್ಲಿ 2 ಉದ್ಯಮ ವಲಯಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಒಂದು ದೊಡ್ಡಬಳ್ಳಾಪುರದಲ್ಲಿದೆ ಮತ್ತು ಇನ್ನೊಂದು ಹೊಸಕೋಟೆಯಲ್ಲಿದೆ. ದೊಡ್ಡಬಳ್ಳಪುರದಲ್ಲಿರುವ ಘಟಕಗಳು ಬಹುವಾಗಿ ಜವಳಿ ಉದ್ದಿಮೆ ಆಧಾರಿತವಾಗಿದ್ದು, ಹೊಸಕೋಟೆಯಲ್ಲಿರುವುದು ವಾಹನ ಬಿಡಿಭಾಗಗಳ ಕೋರಿಕೆಯನ್ನು ಆಧರಿಸಿವೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನನಿಲ್ದಾಣ (ಕೆಂ.ವಿ.ನಿ) ಹತ್ತಿರದಲ್ಲೇ ಇರುವುದರಿಂದ, ದೇವನಹಳ್ಳಿಯು ಉದ್ಯಮದ ಹೊಸ ಕೇಂದ್ರವಾಗಿ ರೂಪುಗೊಳ್ಳುತ್ತಿದೆ. ಕೆಂ.ವಿ.ನಿ ಹತ್ತಿರವಿರುವ ಏರೋಸ್ಪೇಸ್ ಪಾರ್ಕ್ ಅನ್ನು 950 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಇವು ಅಂತರಿಕ್ಷದ ಉದ್ಯಮಗಳಿಗೆ ಕೇಂದ್ರವಾಗಲಿದೆ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್, ನ್ಯಾಶನಲ್ ಏರೋಸ್ಪೇಸ್ ಲ್ಯಾಬೊರೈಲುಟರೀಸ್, ಡಿಫೆನ್ಸ್ ರಿಸರ್ಚ್ ಆಂಡ್ ಡೆವೆಲಪ್ಮೆಂಟ್ ಲ್ಯಾಬೊರೈಲುಟರೀಸ್, ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಜೇಶನ್, ಏರೋನಾಟಿಕಲ್ ಡೆವೆಲಪ್ಮೆಂಟ್ ಎಸ್ಟಾಬ್ಲಿಶ್ಮೆಂಟ್ ನಂತಹ ಸಂಸ್ಥೆಗಳಿರುವುದರಿಂದ, ಬೆಂಗಳೂರು ಭಾರತದ ಅಂತರಿಕ್ಷ ಉದ್ಯಮಗಳಿಗೆ ಪ್ರಶಸ್ತ ಸ್ಥಳವಾಗಿದೆ. ಬೆಂಗಳೂರು ಏರೋಸ್ಪೇಸ್ ಪಾರ್ಕ್ ಮತ್ತು ಬೆಂಗಳೂರು ಅಂತರಿಕ್ಷ ವಿಶೇಷ ಆರ್ಥಿಕ ವಲಯವು ಏಶಿಯಾದ ಅತಿ ಮುಖ್ಯ ಅಂತರಿಕ್ಷ ಕೇಂದ್ರವಾಗುವ ನಿರೀಕ್ಷೆಯಿದೆ ಮತ್ತು ಜಾಗತಿಕ ಮಾನ್ಯತೆ ಪಡೆದ ಅಂತರಿಕ್ಷ ಉದ್ಯಮದ ತಾಣವಾಗಲಿದೆ. ಅಂತರಿಕ್ಷ ನಿರ್ವಹಣಾ, ರಿಪೇರಿ ಮತ್ತು ಕೂಲಂಕುಶ ಪರೀಕ್ಷಣಾ ಚಟುವಟಿಕೆಗೆ ಸಂಬಂಧಿಸಿದ ಹಲವಾರು ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳು ಇಲ್ಲಿ ಬೆಳೆಯುವ ನಿರೀಕ್ಷೆಯಿದೆ.

## 2.7 ಮೂಲಭೂತಸೌಕರ್ಯಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು ರಸ್ತೆಗಳ ಅಳತೆಯು 4512 ಕಿ.ಮಿ. ಇದೆ (ಜಿಲ್ಲಾ ಅಂಕಿ ಅಂಶಗಳ ನೋಟ 2011-12). ದೊಡ್ಡಬಳ್ಳಾಪುರ ಮತ್ತು ಹೊಸಕೋಟೆಯಲ್ಲಿ ರಸ್ತೆಗಳ ಉದ್ದವು 2.1 ಕಿಮಿ/ಚ.ಕಿಮಿ ಇದ್ದರೆ, ದೇವನಹಳ್ಳಿ ಮತ್ತು ನೆಲಮಂಗಲಗಳಲ್ಲಿ ಇದು ಸುಮಾರು 1.8 ಕಿ.ಮಿ./ಚ.ಕಿ.ಮಿ. ಇದೆ. ರಾಷ್ಟ್ರೀಯ ಹೆದ್ದಾರಿಗಳಾದ ರಾ.ಹೆ. 4, ರಾ.ಹೆ. 7, ರಾ.ಹೆ. 207 ಮತ್ತು ರಾ.ಹೆ. 48 ಜಿಲ್ಲೆಯ ರಸ್ತೆ ಜಾಲದ ಭಾಗವಾಗಿವೆ. ಎಲ್ಲಾ 4 ತಾಲೂಕುಗಳು ರೈಲು ಸಂಪರ್ಕವನ್ನು ಹೊಂದಿದ್ದು, ಜಿಲ್ಲೆಯು ಸುಮಾರು 75 ಕಿ.ಮಿ.ಗಳ ರೈಲು ಮಾರ್ಗವನ್ನು ಹೊಂದಿದೆ. ತನ್ನ ಜನಸಂಖ್ಯೆಗೆ ಅಂಚೆ ಸೇವೆಗಳನ್ನು ನೀಡಲು ಜಿಲ್ಲೆಯಲ್ಲಿ 133 ಅಂಚೆ ಕಛೇರಿಗಳಿವೆ. ನೆಲಮಂಗಲ ತಾಲೂಕಿನಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ ಅಂಚೆ ಕಛೇರಿಗಳ ಸಂಖ್ಯೆಯು 20 ಇದ್ದರೆ, ಇಡೀ ಜಿಲ್ಲೆಗೆ ಈ ಸಂಖ್ಯೆಯು 13 ಇದೆ.

ಜಿಲ್ಲೆಯ 1272 ಜನವಸತಿಗಳ ಪೈಕಿ, ಶೇ. 61 ರಷ್ಟು ಹಳ್ಳಿಗಳಿಗೆ ಸರ್ವಋತು ರಸ್ತೆಗಳ ಸಂಪರ್ಕವಿದೆ. ತಾಲೂಕು ಮಟ್ಟದಲ್ಲಿ ಶೇ. 51 ರಿಂದ ಶೇ. 75 ರಷ್ಟು ವಸತಿಗಳಿಗೆ ಸರ್ವಋತು ರಸ್ತೆಗಳಿಗೆ ಸಂಪರ್ಕವಿದೆ. ಜಿಲ್ಲೆಯಲ್ಲಿ 1.9 ಲಕ್ಷ ವಾಹನಗಳಿವೆ. ಜಿಲ್ಲೆಯಲ್ಲಿರುವ ಸಹಕಾರಿ ಸಾಲ ಸಂಸ್ಥೆಗಳ ಸಂಖ್ಯೆಯು 880 ಇದ್ದು, ಅತಿ ಹೆಚ್ಚಿನ ಸಂಖ್ಯೆಯ ಸಂಸ್ಥೆಗಳು ದೊಡ್ಡಬಳ್ಳಾಪುರದಲ್ಲಿವೆ. ವಿದ್ಯುತ್ ಸಂಪರ್ಕ ಹೊಂದಿದ ಗ್ರಾಮಗಳ (ಕಂದಾಯ ಗ್ರಾಮಗಳನ್ನೂ ಸೇರಿ) ಸಂಖ್ಯೆಯು 1052. ಶುದ್ಧ ಕುಡಿಯುವ ನೀರನ್ನು (40 ಲೀಟರ್ ಪ್ರತಿದಿನ) ಒದಗಿಸಲಾಗಿರುವ ಗ್ರಾಮಗಳ ಸಂಖ್ಯೆಯು 638 ಆಗಿದ್ದು, ಜಿಲ್ಲೆಯ ಶೇ. 61 ರಷ್ಟು ಗ್ರಾಮಗಳನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ 45 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇದ್ದು 16 ಖಾಸಗಿ ಆಸ್ಪತ್ರೆಗಳಿವೆ. ಜಿಲ್ಲೆಯಲ್ಲಿರುವ ವೈದ್ಯರ ಸಂಖ್ಯೆಯು (ಖಾಸಗಿ ಮತ್ತು ಸರ್ಕಾರಿ) 237 ಆಗಿದ್ದು, ಆಸ್ಪತ್ರೆ ಹಾಸಿಗೆಗಳ ಸಂಖ್ಯೆಯು 723 ಆಗಿದೆ. ಬೆಂಗಳೂರು ಗ್ರಾಮಂತರ ಜಿಲ್ಲೆಯಲ್ಲಿ 1171 ಪ್ರಾಥಮಿಕ ಶಾಲೆಗಳು, 92 ಪ್ರೌಢಶಾಲೆಗಳು ಮತ್ತು 36 ಪದವಿ ಪೂರ್ವ ಕಾಲೇಜುಗಳಿವೆ. ಭಾರತೀಯ ವಿಜ್ಞಾನ ಸಂಸ್ಥೆ, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಜವಹರಲಾಲ್ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ, ರಾಷ್ಟ್ರೀಯ ಉನ್ನತ ಅಧ್ಯಯನಗಳ ಸಂಸ್ಥೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆಯಂತಹ ಉನ್ನತ ಶಿಕ್ಷಣ ಕೇಂದ್ರಗಳು ಬೆಂಗಳೂರಿನಲ್ಲಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಹತ್ತಿರವಿರುವ ಕಾರಣದಿಂದ ಉನ್ನತ ವಿದ್ಯಾಭ್ಯಾಸ ಬಯಸುವ ಜಿಲ್ಲೆಯ ವಿದ್ಯಾರ್ಥಿಗಳಿಗೆ ಇದು ಹೆಚ್ಚಿನ ಲಾಭವಾಗಿದೆ.

## 2.8 ಪ್ರವಾಸೋದ್ಯಮ

ಜಿಲ್ಲೆಯಲ್ಲಿ ಪ್ರವಾಸೀ ಆಕರ್ಷಣೆಗಳಾದ ಧಾರ್ಮಿಕ ಸ್ಥಳಗಳೂ ಇವೆ. ದೊಡ್ಡಬಳ್ಳಾಪುರ ತಾಲೂಕಿನ ಘಾಟಿ ಸುಬ್ರಹ್ಮಣ್ಯ ದೇವಸ್ಥಾನವು ಪ್ರತಿ ವರ್ಷವೂ ಸಾವಿರಾರು ಭಕ್ತರನ್ನು ಆಕರ್ಷಿಸುತ್ತದೆ. ನೆಲಮಂಗಲದ ಶಿವಗಂಗೆ/ಶಿವಗಂಗಾ ಕೂಡ ಮತ್ತೊಂದು ಯಾತ್ರಾಸ್ಥಳ. ಇಲ್ಲಿನ ನೀರು ಕಾಶಿಯ ಗಂಗೆಯಷ್ಟೇ ಪವಿತ್ರವಾಗಿದೆಯೆಂದು ನಂಬಲಾಗಿದೆ. ದೇವನಹಳ್ಳಿಯ ಟಿಪ್ಪುಸುಲ್ತಾನರ ಕೋಟೆಯು ಮತ್ತೊಂದು ಐತಿಹಾಸಿಕವಾಗಿ ಮುಖ್ಯವಾಗಿರುವ ಸ್ಥಳ.

## 2.9 ಪ್ರಾದೇಶಿಕ ಆಯಾಮಗಳು ಮತ್ತು ಹಿಂದುಳಿದಿರುವಿಕೆ

ಡಾ|| ಡಿ.ಎಂ.ನಂಜುಂಡಪ್ಪ ನೇತೃತ್ವದ ಪ್ರಾದೇಶಿಕ ಅಸಮತೋಲನಗಳ ನಿವಾರಣೆಗೆ ಉನ್ನತ ಅಧಿಕಾರದ ಸಮಿತಿಯ ವರದಿಯು[10] ತಾಲೂಕು ಮಟ್ಟದಲ್ಲಿ ಅಸಮತೋಲನವನ್ನು ಗುರುತಿಸಲು ಸುಮಾರು 35 ಸೂಚಕಗಳನ್ನು ನಿರ್ಧರಿಸಿದವು. ಈ ಸೂಚಕಗಳನ್ನು 5 ವರ್ಗಗಳನ್ನಾಗಿಸಲಾಯಿತು. ಅವುಗಳೆಂದರೆ ಕೃಷಿ ಮತ್ತು ಸಂಬಂಧಿತ ಉದ್ಯಮ, ವಾಣಿಜ್ಯ ಮತ್ತು ಹಣಕಾಸು, ಆರ್ಥಿಕ ಮೂಲ ಸೌಕರ್ಯ, ಸಾಮಾಜಿಕ ಮೂಲಸೌಕರ್ಯ ಮತ್ತು ಜನಸಂಖ್ಯಾ ಗುಣಗಳು. ಒಂದು ಸಂಯುಕ್ತ ಅಭಿವೃದ್ಧಿ ಸೂಚಿಯನ್ನು ಅಭಿವೃದ್ಧಿಪಡಿಸಲಾಗಿದ್ದು, ಈ 35 ಸೂಚಕಗಳನ್ನು ಬಳಸಿ ಹಿಂದುಳಿಯುವಿಕೆ ಸೂಚಿಸಲಾಯಿತು. ಈ ವರದಿಯ ಪ್ರಕಾರ ಹೊಸಕೋಟೆ ತಾಲೂಕನ್ನು ಮಾತ್ರ ಹಿಂದುಳಿದ ಪ್ರದೇಶವೆಂದು ವರ್ಗೀಕರಿಸಿ, ಉಳಿದ 3 ತಾಲೂಕುಗಳನ್ನು ತುಲನಾತ್ಮಕವಾಗಿ ಅಭಿವೃದ್ಧಿ ಹೊಂದಿದ ತಾಲೂಕುಗಳೆಂದು ವರ್ಗೀಕರಿಸಲಾಯಿತು. ರಾಜ್ಯದ 176 ತಾಲೂಕುಗಳ ಕೋಷ್ಟಕಯಲ್ಲಿ ದೊಡ್ಡಬಳ್ಳಪುರ, ದೇವನಹಳ್ಳಿ, ನೆಲಮಂಗಲ ಮತ್ತು ಹೊಸಕೋಟೆ ತಾಲೂಕುಗಳ

[10] ಇದರ ವರದಿಯನ್ನು 2002 ರಲ್ಲಿ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಲಾಯಿತು

ಅನುಕ್ರಮವಾಗಿ 46, 51, 54 ಮತ್ತು 72ನೇ ಸ್ಥಾನಗಳನ್ನು ಪಡೆದವು.

ಜಿಲ್ಲೆಯ ಎಲ್ಲಾ ನಾಲ್ಕು ತಾಲೂಕುಗಳು ರಾಜ್ಯದ ಸರಾಸರಿಗಿಂತ ಹೆಚ್ಚಿನ ಕೃಷಿ, ಮೂಲಸೌಕರ್ಯ ಮತ್ತು ಕೃಷಿ ಉತ್ಪಾದನಾ ಸಾಧನೆಯನ್ನು ಹೊಂದಿದುದಾಗಿ ವರ್ಗೀಕರಿಸಲಾಯಿತು. ಆದರೆ, ದೊಡ್ಡಾಬಳ್ಳಾಪುರ ಮತ್ತು ದೇವನಹಳ್ಳಿ ತಾಲೂಕುಗಳು ಕಳೆದ ಕೆಲವು ದಶಕಗಳಿಂದ ಹಲವು ಬಾರಿ ಬರಗಾಲವನ್ನು ಎದುರಿಸಿವೆ. ಔದ್ಯಮಿಕ ಮೂಲಸೌಕರ್ಯ ಮತ್ತು ಔದ್ಯಮಿಕ ಸಾಧನೆಯಡಿ ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ ತಾಲೂಕುಗಳನ್ನು ಔದ್ಯಮಿಕ ಮೂಲಸೌಕರ್ಯ ಮತ್ತು ಔದ್ಯಮಿಕ ಸಾಧನೆಯಲ್ಲಿ ರಾಜ್ಯದ ಸರಾಸರಿಗಿಂತ ಕಡಿಮೆ ಇರುವ ತಾಲೂಕುಗಳೆಂದು ವರ್ಗೀಕರಿಸಲಾಗಿದೆ. ದೊಡ್ಡಬಳ್ಳಪುರವು ಔದ್ಯಮಿಕ ಮೂಲಸೌಕರ್ಯದಲ್ಲಿ ರಾಜ್ಯ ಸರಾಸರಿಗಿಂತ ಕಡಿಮೆ ಇದ್ದರೂ, ಔದ್ಯಮಿಕ ಉತ್ಪಾದನೆಯಲ್ಲಿ ರಾಜ್ಯದ ಸರಾಸರಿಗಿಂತ ಉತ್ತಮ ಸಾಧನೆ ಮಾಡಿದೆ.

ನೆಲಮಂಗಲ ತಾಲೂಕನ್ನು ಹೊರತುಪಡಿಸಿ, ಎಲ್ಲಾ ತಾಲೂಕುಗಳು ರಸ್ತೆ ಜಾಲದ ಅಭಿವೃದ್ಧಿಯಡಿಯಲ್ಲಿ ತುಲನಾತ್ಮಕವಾಗಿ ಅಭಿವೃದ್ಧಿ ಹೊಂದಿದ ವರ್ಗದಲ್ಲಿ ಇವೆ. ಆರೋಗ್ಯ ಮತ್ತು ಶೈಕ್ಷಣಿಕ ಮೂಲಸೌಕರ್ಯವನ್ನೊಳಗೊಂಡ ಸಾಮಾಜಿಕ ಮೂಲಸೌಕರ್ಯ ಸೂಚಿಯಡಿ, ಹೊಸಕೋಟೆ ಮತ್ತು ದೇವನಹಳ್ಳಿ ತಾಲೂಕುಗಳನ್ನು ಹೆಚ್ಚು ಹಿಂದುಳಿದ ತಾಲೂಕುಗಳೆಂದು ಮತ್ತು ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲೂಕುಗಳನ್ನು ಅನುಕ್ರಮವಾಗಿ ಹಿಂದುಳಿದ ತಾಲೂಕು ಮತ್ತು ತುಲನಾತ್ಮಕವಾಗಿ ಅಭಿವೃದ್ಧಿ ಹೊಂದಿದ ತಾಲೂಕು ಎಂದು ವರ್ಗೀಕರಿಸಲಾಯಿತು. ಆರೋಗ್ಯ ಮೂಲಸೌಕರ್ಯ ಸೂಚಿಯಡಿ, ನೆಲಮಂಗಲವನ್ನು ಹಿಂದುಳಿದ ತಾಲೂಕೆಂದೂ, ಇತರ ಮೂರು ತಾಲೂಕುಗಳನ್ನು ಹೆಚ್ಚು ಹಿಂದುಳಿದ ತಾಲೂಕುಗಳೆಂದೂ ವರ್ಗೀಕರಿಸಲಾಗಿದೆ. ಗ್ರಾಮೀಣ ವಸತಿಗಳಿಗೆ ಕುಡಿಯುವ ನೀರು ಪೂರೈಕೆ ಮಾಡುವ ನಿಟ್ಟಿನಲ್ಲಿ (40 ಲೀಟರ್ ಪ್ರತಿದಿನ ಮತ್ತು ಹೆಚ್ಚು), ದೇವನಹಳ್ಳಿಯನ್ನು ಅತೀ ಹಿಂದುಳಿದ ತಾಲೂಕೆಂದು ಮತ್ತು ಇತರ ಮೂರು ತಾಲೂಕುಗಳನ್ನು ತುಲನಾತ್ಮಕವಾಗಿ ಅಭಿವೃದ್ಧಿ ಹೊಂದಿದ ತಾಲೂಕುಗಳೆಂದೂ ವರ್ಗೀಕರಿಸಲಾಗಿದೆ. ಶೈಕ್ಷಣಿಕ ಮೂಲಸೌಕರ್ಯದಡಿ ಎಲ್ಲಾ ತಾಲೂಕುಗಳನ್ನೂ ತುಲನಾತ್ಮಕವಾಗಿ ಅಭಿವೃದ್ಧಿ ಹೊಂದಿದ ತಾಲೂಕುಗಳೆಂದು ವರ್ಗೀಕರಿಸಲಾಗಿದೆ.

## 2.10 ತಾತ್ಪರ್ಯ

ಬೆಂಗಳೂರು ನಗರಕ್ಕೆ ಸಮೀಪವಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯು, ಅವಕಾಶಗಳು, ಸವಾಲುಗಳು ಮತ್ತು ಸಮಸ್ಯೆಗಳ ವಿಷಯದಲ್ಲಿ ವಿಶಿಷ್ಟವಾದ ಸ್ಥಾನದಲ್ಲಿದೆ. ಔದ್ಯಮಿಕ ಹೂಡಿಕೆ ಮತ್ತು ಬೆಳವಣಿಗೆ, ಕೃಷಿಯೇತರ ಕ್ಷೇತ್ರದಲ್ಲಿ ಔದ್ಯೋಗಿಕ ಅವಕಾಶಗಳು, ಸ್ಥಿರಾಸ್ತಿ ಮಾರುಕಟ್ಟೆ ಮತ್ತು ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿರುವ ಅವಕಾಶಗಳು ಅಗಾಧವಾಗಿವೆ. ಆದರೆ, ಮುಂದಿನ ಅಧ್ಯಾಯಗಳು ಅನಾವರಣಗೊಳಿಸುವಂತೆ, ಕೃಷಿಗೆ ನೀರಾವರಿ ಜಮೀನಿನ ನಷ್ಟ, ಪರಿಸರದ ಅವನತಿ, ವನಗಳ ಮತ್ತು ಅಂತರ್ಜಲದ ಬರಿದಾಗುವಿಕೆ, ಸಾಮಾಜಿಕ ರಚನೆಯ, ಪ್ರಕ್ರಿಯೆಗಳ ಮತ್ತು ಸಂಬಂಧಗಳ ವಿಯೋಜನೆ, ಮೊದಲಾದ ಸವಾಲುಗಳು ಸಹ ಹೆಚ್ಚಾಗಿವೆ. ಒಂದು ಪ್ರಮಾಣದವರೆಗೂ ಈ ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಲು ಸಾಧ್ಯವಿದೆ ಆದರೆ ಇದು ಕಾರ್ಯನೀತಿ, ನಿಯಂತ್ರಕ ರಚನೆಗಳು ಮತ್ತು ಪ್ರಕ್ರಿಯೆಗಳನ್ನೊಳಗೊಂಡಂತೆ ಆಡಳಿತ ಕ್ರಮಗಳು ಮತ್ತು ನಾಗರಿಕ ಸಮಾಜದ ಎಚ್ಚರ ಮತ್ತು ಕ್ರಮಗಳನ್ನು ಬಹುವಾಗಿ ಅವಲಂಬಿಸಿದೆ. ಈ ವರದಿಯು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಅವಕಾಶಗಳು ಮತ್ತು ಸವಾಲುಗಳು ಹೇಗೆ ಪ್ರಕಟಗೊಳ್ಳುತ್ತಿವೆ ಮತ್ತು ಈ ಸಂದರ್ಭಗಳಲ್ಲಿ ಮಾನವ ಅಭಿವೃದ್ಧಿಯು ಎತ್ತ ಸಾಗಿದೆ ಎಂಬುದರ ಮೇಲೆ ಬೆಳಕು ಚೆಲ್ಲಿದೆ.

# ಮಾನವ ಅಭಿವೃದ್ಧಿ ಸೂಚ್ಯಂಕಗಳ ರಚನೆ



# 3. ಮಾನವ ಅಭಿವೃದ್ಧಿ ಸೂಚ್ಯಂಕಗಳ ರಚನೆ

ಜನರ ಆಯ್ಕೆಗಳನ್ನು ವಿಸ್ತರಿಸುವುದೇ ಅಭಿವೃದ್ಧಿಯ ಮೂಲ ಉದ್ದೇಶವಾಗಿದೆ. "ತಾತ್ವಿಕವಾಗಿ, ಈ ಆಯ್ಕೆಗಳು ಅಗಣಿತವಾಗಿರಬಹುದು ಹಾಗೂ ಕಾಲಾನುಕಾಲಕ್ಕೆ ಬದಲಾಗಬಹುದು. ಸಾಮಾನ್ಯವಾಗಿ ಜನರು, ತಕ್ಷಣಕ್ಕೆ ಕಾಣದ ಅಥವಾ ಗೋಚರಿಸದೆಯೇ ಹೋಗುವ ಆದಾಯದಲ್ಲಿನ ಅಥವಾ ಬೆಳವಣಿಗೆಯ ಅಂಕಿಅಂಶದಲ್ಲಿರುವ ಸಾಧನೆಗಳಿಗೆ ಹೆಚ್ಚು ಮಹತ್ವ ನೀಡುತ್ತಾರೆ. ಜ್ಞಾನ ಹೆಚ್ಚಿಸಿಕೊಳ್ಳುವಲ್ಲಿನ ಅವಕಾಶ, ಉತ್ತಮ ಪೌಷ್ಟಿಕತೆ ಮತ್ತು ಆರೋಗ್ಯ ಸೇವೆಗಳು, ಹೆಚ್ಚು ಸುಭದ್ರವಾದ ಜೀವನೋಪಾಯ ಮಾರ್ಗ, ಅಪರಾಧ ಹಾಗೂ ದೈಹಿಕ ಹಿಂಸಾಚಾರದ ವಿರುದ್ಧ ಭದ್ರತೆ, ತೃಪ್ತಿ ನೀಡುವಂತಹ ವಿರಾಮದ ವೇಳೆಗಳು, ರಾಜಕೀಯ ಹಾಗೂ ಸಾಂಸ್ಕೃತಿಕ ಸ್ವಾತಂತ್ರ್ಯ ಮತ್ತು ಸಾಮುದಾಯಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆಯ ಅವಕಾಶ, ದೀರ್ಘವಾದ, ಆರೋಗ್ಯಪೂರ್ಣವಾದ ಮತ್ತು ಸೃಜನಾತ್ಮಕ ಜೀವನ ಆನಂದಿಸಲು ಸಾಧ್ಯವಾಗುವಂಥ ಒಂದು ಉತ್ತಮ ಪರಿಸರವನ್ನು ಜನರಿಗೆ ಸೃಷ್ಟಿಸಿಕೊಡುವುದು ಅಭಿವೃದ್ಧಿಯ ಮೂಲ ಧ್ಯೇಯವಾಗಿದೆ" ಮಹಬೂಬ್ ಉಲ್ ಹಖ್[11]

## 3.1 ಪ್ರಸ್ತಾವನೆ

ಈ ಅಧ್ಯಾಯದಲ್ಲಿ, ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವನ್ನು 2010 ಯುಎನ್‌ಡಿಪಿ ಮಾನವ ಅಭಿವೃದ್ಧಿ ವರದಿಯಲ್ಲಿ ಅಳವಡಿಸಿಕೊಳ್ಳಲಾದ ವಿಧಾನವನ್ನು ಅನುಸರಿಸಿದೆ. ಮುಂಚೆಯೇ ಹೇಳಿದಂತೆ, ಈ ಸೂಚ್ಯಂಕಗಳ ಜೊತೆಗೆ, ಈ ವರದಿಯು ಮಕ್ಕಳ ಅಭಿವೃದ್ಧಿ ಸೂಚ್ಯಂಕ, ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ, ಆಹಾರ ಭದ್ರತೆ ಸೂಚ್ಯಂಕ ಮತ್ತು ನಗರಾಭಿವೃದ್ಧಿ ಸೂಚ್ಯಂಕಗಳನ್ನೂ ಗಣಿಸುತ್ತದೆ. ಈ ಪೂರಕ ಸೂಚ್ಯಂಕಗಳನ್ನು ಮಕ್ಕಳ ಅಭಿವೃದ್ಧಿ, ಅಹಾರ ಭದ್ರತೆ, ನಗರದ ಮೂಲಸೌಕರ್ಯದ ಮತ್ತು ಸೇವೆಗಳ ಗುಣಮಟ್ಟ, ಸುರಕ್ಷತೆ ಹಾಗೂ ಭದ್ರತೆ ಮತ್ತು ತಾಲೂಕು ಮಟ್ಟದ ಅಭಿವೃದ್ಧಿಗಳಿಗೆ ಚರ್ಚೆಯನ್ನು ವಿಸ್ತರಿಸಲು ಗಣಿಸಲಾಗಿದೆ.

## 3.2 ಮಾನವ ಅಭಿವೃದ್ಧಿ ಸೂಚ್ಯಂಕ

ಮಾನವ ಅಭಿವೃದ್ಧಿ ಸೂಚ್ಯಂಕವು ಒಂದು ಸಂಘಟಿತ ಸೂಚ್ಯಂಕವಾಗಿದ್ದು, ಅಭಿವೃದ್ಧಿಯ ಮೂರು ಅಂಶಗಳಲ್ಲಿ ಸಾಧನೆಯನ್ನು ಅಳೆಯಲು ರಚಿಸಲಾಗಿದೆ. ಅವುಗಳೆಂದರೆ, ಜೀವನಮಟ್ಟ, ಶಿಕ್ಷಣ ಮತ್ತು ಆರೋಗ್ಯ. ತನ್ನ ನಾಗರಿಕರಿಗೆ ಆರೋಗ್ಯಕರ ಜೀವನ, ಜ್ಞಾನದ ಲಭ್ಯತೆ ಮತ್ತು ಉತ್ತಮ ಜೀವನಮಟ್ಟವನ್ನು ನೀಡುವಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾಧನೆಗಳನ್ನು ಗ್ರಹಿಸಲು ಸೂಚಕಗಳು/ಚರಮೌಲ್ಯಗಳನ್ನು ಆಯ್ಕೆ ಮಾಡಲಾಯಿತು.

ಜೀವನಮಟ್ಟದ ಘಟಕಾಂಶಗಳು ಕುಟುಂಬಗಳಿಗೆ ಕುಡಿಯು ನೀರಿನ ಲಭ್ಯತೆ, ವಿದ್ಯುತ್ ಸಂಪರ್ಕ, ಶೌಚಾಲಯ, ಸ್ವಚ್ಛ ಅಡುಗೆ ಇಂಧನದ ಬಳಕೆ ಮತ್ತು ಶಾಶ್ವತ ಮನೆಗಳು, ಕೃಷಿಯೇತರ ಕಾರ್ಮಿಕರ ಪ್ರಮಾಣ ಮತ್ತು ತಲಾ ಆದಾಯಗಳನ್ನು ಒಳಗೊಂಡಿದೆ. ಹಿಂದಿನ ಮಾನವ ಅಭಿವೃದ್ಧಿ ವರದಿಗಳಾದ ಕರ್ನಾಟಕ ಮಾನವ ಅಭಿವೃದ್ಧಿ ವರದಿ 2005 ಮತ್ತು ಯುಎನ್‌ಡಿಪಿ ಮಾನವ ಅಭಿವೃದ್ಧಿ ವರದಿ 2010 ರಲ್ಲಿ ತಲಾ ಆದಾಯವೊಂದನ್ನೇ ಜೀವನಮಟ್ಟಕ್ಕೆ ಪ್ರತಿನಿಧಿಯನ್ನಾಗಿ ಬಳಸಲಾಗಿತ್ತು ಎಂಬುದನ್ನು ಗಮನಿಸಬೇಕು. ಜೀವನಮಟ್ಟದ ಗಣತಿಗೆ ಪ್ರಾಥಮಿಕ ಸೇವೆಗಳ ಲಭ್ಯತೆಯನ್ನು ಸೇರಿಸುವುದರ ಕಾರಣವೆಂದರೆ, ಆರ್ಥಿಕ ಅಭಿವೃದ್ಧಿ ಮತ್ತು ಮಾನವ ಯೋಗಕ್ಷೇಮದ ಜೊತೆಗೆ ಇವುಗಳ ಗಾಢವಾದ ಸಂಬಂಧವಾಗಿದೆ. ಮೇಲಾಗಿ, ತಲಾ ಆದಾಯವು ಉತ್ತಮ ಜೀವನವನ್ನು ನಡೆಸಲು ಸಾಧನವೇ ಹೊರತು ಅದೇ ಮಾನವ ಅಭಿವೃದ್ಧಿಯನ್ನು ಬಿಂಬಿಸುವುದಿಲ್ಲ.

ಮಾನವ ಅಭಿವೃದ್ಧಿ ಸೂಚ್ಯಂಕದ ಗಣತಿಗೆ ಮಕ್ಕಳ ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣಗಳನ್ನು ಆರೋಗ್ಯದ ಸೂಚಕಗಳನ್ನಾಗಿ ಬಳಸಲಾಗಿದೆ. ಯುಎನ್‌ಡಿಪಿ ಮತ್ತು ರಾಜ್ಯ ಮಾನವ ಅಭಿವೃದ್ಧಿ ವರದಿಗಳಲ್ಲಿ ಆರೋಗ್ಯ ಮಿತಿಯ ಸೂಚಕಗಳಾಗಿ ಬಳಸಲಾದ ಜನನ ಕಾಲದಲ್ಲಿ ನಿರೀಕ್ಷಿತ ಜೀವನದ ಆಯಸ್ಸಿನ ಬದಲಾಗಿ ಈ ಚರಮೌಲ್ಯಗಳನ್ನು ಬಳಸಲು ಕಾರಣವೆಂದರೆ, ತಾಲೂಕು ಮಟ್ಟದಲ್ಲಿ ಜೀವನದ ಆಯಸ್ಸಿನ ದತ್ತಾಂಶವು ಲಭ್ಯವಿಲ್ಲದ್ದಾಗಿದೆ. ಆದರೂ, ಮಕ್ಕಳ ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣ ಎರಡೂ ನಿರೀಕ್ಷಿತ ಜೀವನದ ಆಯಸ್ಸನ್ನು ನಿರ್ಧರಿಸುವಲ್ಲಿ ಗಣನೀಯ ಪಾತ್ರವನ್ನು ವಹಿಸುತ್ತವೆ.

ಶೈಕ್ಷಣಿಕ ಸಾಧನೆಯನ್ನು ಸಾಕ್ಷರತೆ ಮತ್ತು ಸಂಘಟಿತ ಪ್ರಾಥಮಿಕ ಮತ್ತು ಸಮಗ್ರ ದಾಖಲಾತಿ ಅನುಪಾತಗಳ ಕೂಡಿಕೆಯಿಂದ ಅಳೆಯಲಾಗುವುದು. ಕೋಷ್ಟಕ 3.1 ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲೂಕುಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕದ ಜೊತೆಗೆ ಮಾನವ ಅಭಿವೃದ್ಧಿ ವರದಿಯ ಸೂಚಕಗಳನ್ನು ತೋರಿಸುತ್ತದೆ.

**ಕೋಷ್ಟಕ 3.1: ತಾಲೂಕು ಮಾನವ ಅಭಿವೃದ್ಧಿ ಸೂಚ್ಯಂಕ (2011)**

| ತಾಲೂಕು | ಮಾನವ ಅಭಿವೃದ್ಧಿ ವರದಿಯ ಉಪ-ಸೂಚ್ಯಂಕಗಳು | | | ಮಾನವ ಅಭಿವೃದ್ಧಿ ಸೂಚ್ಯಂಕ | ಶ್ರೇಣಿ |
|---|---|---|---|---|---|
| | ಜೀವನದ ಗುಣಮಟ್ಟ | ಆರೋಗ್ಯ | ಶಿಕ್ಷಣ | | |
| ದೇವನಹಳ್ಳಿ | 0.465 | 0.781 | 0.884 | 0.685 | 2 |
| ದೊಡ್ಡಬಳ್ಳಾಪುರ | 0.592 | 0.547 | 0.796 | 0.637 | 3 |
| ಹೊಸಕೋಟೆ | 0.670 | 0.482 | 0.724 | 0.616 | 4 |
| ನೆಲಮಂಗಲ | 0.995 | 0.468 | 0.966 | 0.766 | 1 |

ಮೂಲ: ಸಿಬಿಪಿಎಸ್ ನ ಸಂಕಲನ

[11] http://hdr.undp.org/en/humandev

ಈ ನಾಲ್ಕು ತಾಲೂಕುಗಳಲ್ಲಿ, ಸೂಚ್ಯಂಕ ಮೌಲ್ಯ 0.766 ಹೊಂದಿರುವ ನೆಲಮಂಗಲ ಮಾನವ ಅಭಿವೃದ್ಧಿಯಲ್ಲಿ ಮೊದಲ ಸ್ಥಾನ ಪಡೆದಿದೆ. ಇದು ಜೀವನದ ಗುಣಮಟ್ಟ ಮತ್ತು ಶಿಕ್ಷಣ ವಿಮಿತಿಗಳಲ್ಲಿ ಮೊದಲ ಸ್ಥಾನ ಪಡೆದಿದ್ದು, ಅನುಕ್ರಮವಾಗಿ ಉಪ-ಸೂಚ್ಯಂಕ ಮೌಲ್ಯ 0.995 ಮತ್ತು 0.966 ಹೊಂದಿದೆ. ಈ ಎರಡು ವಿಮಿತಿಗಳಡಿ ಸೂಚಕಗಳನ್ನು ಪರಿಶೀಲಿಸಿದಲ್ಲಿ, ಅತಿ ಹೆಚ್ಚು ಸಂಖ್ಯೆಯ ಕುಟುಂಬಗಳು ಸುರಕ್ಷಿತ ಅಡುಗೆ ಇಂಧನ (ಶೇ. 40.09), ಶೌಚಾಲಯ (ಶೇ. 84.45), ಸುರಕ್ಷಿತ ಕುಡಿಯುವ ನೀರು (ಶೇ. 89.18) ಮತ್ತು ವಿದ್ಯುತ್ ಸಂಪರ್ಕ (ಶೇ.96.17) ಹೊಂದಿರುವುದು ತಿಳಿಯುತ್ತದೆ. ಇದರ ಜೊತೆಗೆ, ಈ ತಾಲೂಕು ಕೃಷಿಯೇತರ ಕಾರ್ಮಿಕರ ಪ್ರಮಾಣ (ಶೇ. 60.69) ಮತ್ತು ಅತಿ ಹೆಚ್ಚಿನ ತಲಾ ಆದಾಯ (ರೂ 78875.85) ಹೊಂದಿದೆ.

ಆದರೆ, ನೆಲಮಂಗಲ ತಾಲೂಕಿನಲ್ಲಿ ಆರೋಗ್ಯ ವಿಮಿತಿಯ ಸಾಧನೆಯು ಜೀವನದ ಗುಣಮಟ್ಟ ಮತ್ತು ಶಿಕ್ಷಣ ವಿಮಿತಿಗಳ ಉನ್ನತ ಮಟ್ಟದ ಸಾಧನೆಗಳೊಂದಿಗೆ ಹೋಗುತ್ತಿಲ್ಲ. ಆರೋಗ್ಯ ವಿಮಿತಿಯನ್ನು ಗಣಿಸಲು ಬಳಸುವ ಈ ಎರಡು ಸೂಚಕಗಳ ತೀಕ್ಷ್ಣ ಪರಿಶೀಲನೆಯಿಂದ, ಈ ನಾಲ್ಕು ತಾಲೂಕುಗಳಲ್ಲಿ ನೆಲಮಂಗಲವು ತಾಯಂದಿರ ಮರಣ ಪ್ರಮಾಣ ಹೆಚ್ಚಾಗಿರುವುದು ಕಂಡುಬರುತ್ತದೆ (ಪ್ರತಿ 100000 ಜೀವಂತ ಜನ್ಮಗಳಿಗೆ 150 ತಾಯಂದಿರ ಮರಣ) . ಇದು, ಒಂದು ಅಥವಾ ಎರಡು ವಿಮಿತಿಗಳ ಅಭಿವೃದ್ಧಿಗೆ ಮಾತ್ರ ಸಂಪನ್ಮೂಲಗಳನ್ನು ಹೂಡುವುದರಿಂದ ಉನ್ನತ ಮಟ್ಟದ ಮಾನವ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬ ವಾದಕ್ಕೆ ಪುಷ್ಟಿ ನೀಡುತ್ತದೆ. ನೆಲಮಂಗಲದ ವಿಚಾರದಲ್ಲಿ, ಜೀವನದ ಗುಣಮಟ್ಟ ಮತ್ತು ಶಿಕ್ಷಣಗಳಲ್ಲಿ ಉನ್ನತ ಸಾಧನೆಗಳ ಜೊತೆಗೆ ತಾಯಂದಿರ ಮರಣ ಪ್ರಮಾಣ ಮತ್ತು ಮಕ್ಕಳ ಮರಣ ಪ್ರಮಾಣಗಳನ್ನು ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಸರಿಯಾಗಿ-ಕೇಂದ್ರೀಕರಿಸಲಾದ ರಾಜ್ಯನೀತಿಗಳ ಮೂಲಕ ಸಂಪನ್ಮೂಲಗಳನ್ನು ಹೂಡಿಕೆ ಮಾಡಬೇಕು.

ದೇವನಹಳ್ಳಿಯು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಎರಡನೇ ಸ್ಥಾನದಲ್ಲಿದ್ದು, ಆರೋಗ್ಯ ಮತ್ತು ಶಿಕ್ಷಣ ವಿಮಿತಿಗಳಲ್ಲಿ ಉತ್ತಮ ಸಾಧನೆ ಮಾಡಿರುವುದರಿಂದ 0.685 ಸೂಚ್ಯಂಕವನ್ನು ಪಡೆದಿದೆ. ಜೀವನ ಮಟ್ಟದ ಸೂಚ್ಯಂಕ ವಿಮಿತಿಯಲ್ಲಿ 0.465 ಸೂಚ್ಯಂಕ ದಿಂದ ನಾಲ್ಕನೇ ಸ್ಥಾನದಲ್ಲಿದ್ದು, ಇದು ನೆಲಮಂಗಲ ತಾಲೂಕಿನ ಜೀವನ ಮಟ್ಟದ ಸೂಚ್ಯಂಕಕ್ಕಿಂತ 0.53 ಅಂಕಿ ಕಡಿಮೆಯಿದೆ. ಕಡಿಮೆ ತಲಾ ಆದಾಯ ಮತ್ತು ಕಡಿಮೆ ಸಂಖ್ಯೆಯ ಕೃಷಿಯೇತರ ಕಾರ್ಮಿಕರು ಇರುವ ಈ ಎರಡು ಅಂಶಗಳ ಕಾರಣದಿಂದ ತಾಲೂಕಿನ ಸಾಧನೆ ಕಡಿಮೆಯಾಗಿದೆ. ದೇವನಹಳ್ಳಿಯ ತಲಾ ಆದಾಯವು ರೂ 40,093 ಇದ್ದು, ಇದು ನೆಲಮಂಗಲದ ತಲಾ ಆದಾಯದ ಅರ್ಧಕ್ಕಿಂತ ಕೊಂಚ ಹೆಚ್ಚಾಗಿದೆ.

ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕ್ರಮವಾಗಿ ಮೂರು ಮತ್ತು ನಾಲ್ಕನೆ ಸ್ಥಾನವನ್ನು ಪಡೆದಿದ್ದು, ಅನುಕ್ರಮವಾಗಿ 0.636 ಮತ್ತು 0.616 ಸೂಚ್ಯಂಕ ಪಡೆದಿವೆ. ಜೀವನದ ಗುಣಮಟ್ಟದ ಸೂಚ್ಯಂಕದಲ್ಲಿ ಹೊಸಕೋಟೆ ಮತ್ತು ದೊಡ್ಡಬಳ್ಳಾಪುರವು ಅನುಕ್ರಮವಾಗಿ ಎರಡು ಮತ್ತು ಮೂರನೆ ಸ್ಥಾನ ಪಡೆದಿರುವುದರಿಂದ ಇದು ಆಶ್ಚರ್ಯಕರವಾಗಿದೆ. ತಲಾ ಆದಾಯವು ದೊಡ್ಡಬಳ್ಳಾಪುರದಲ್ಲಿ (ರೂ 76080) ಮತ್ತು ಹೊಸಕೋಟೆಯಲ್ಲಿ (ರೂ 75749) ದೇವನಹಳ್ಳಿಯ ತಲಾ ಆದಾಯಕ್ಕಿಂತ ಗಣನೀಯವಾಗಿ ಹೆಚ್ಚಾಗಿದೆ. ಇದರ ಜೊತೆಗೆ, ಈ ಎರಡೂ ತಾಲೂಕುಗಳಲ್ಲಿ ಜಿಲ್ಲೆಯಲ್ಲಿಯೇ ಅತಿ ಕಡಿಮೆ ತಾಯಂದಿರ ಮರಣ ಪ್ರಮಾಣ ಇದೆ. ದೊಡ್ಡಬಳ್ಳಾಪುರ ಮತ್ತು ಹೊಸಕೋಟೆಯಲ್ಲಿ ತಾಯಂದಿರ ಮರಣ ಪ್ರಮಾಣ ಅನುಕ್ರಮವಾಗಿ 101 ಮತ್ತು 102 ಪ್ರತಿ 100000 ಜೀವಂತ ಜನ್ಮಗಳಿಗೆ ಇದ್ದು, ದೇವನಹಳ್ಳಿಗಿಂತ ಸುಮಾರು 26 ಮತ್ತು ನೆಲಮಂಗಲಕ್ಕಿಂತ 50 ಸಂಖ್ಯೆಯಷ್ಟು ಕಡಿಮೆ ಇವೆ. ಮೇಲಾಗಿ, ಜೀವನದ ಗುಣಮಟ್ಟವನ್ನು ಅಳೆಯುವ ಸೂಚಕಗಳಲ್ಲಿ ಅವು ಸುಸಂಗತವಾಗಿ ಎರಡನೇ ಅಥವಾ ಮೂರನೇ ಸ್ಥಾನವನ್ನು ಪಡೆದಿವೆ. ಆದರೆ ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳು ಅಧಿಕ ಶಿಶುಗಳ ಮರಣ ಪ್ರಮಾಣ ಹೊಂದಿದ್ದು, ಜಿಲ್ಲೆಯಲ್ಲಿ ಬಹಳ ಕಡಿಮೆ ಶಾಲಾ ದಾಖಲಾತಿ ಅನುಪಾತವನ್ನು ಹೊಂದಿವೆ. ಈ ಎರಡು ಸೂಚಕಗಳಲ್ಲಿ ಕಳಪೆ ಸಾಧನೆಯಿಂದ ಮತ್ತು ಇತರ ಸೂಚಕಗಳಲ್ಲಿ ಸಾಧಾರಣ ಸಾಧನೆಯು ಈ ತಾಲೂಕುಗಳ ಒಟ್ಟು ಮಾನವ ಅಭಿವೃದ್ಧಿ ವರದಿ ಮೌಲ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿವೆ.

ಅಂತಿಮವಾಗಿ, ಮಾನವ ಅಭಿವೃದ್ಧಿ ಸೂಚ್ಯಂಕದ ಬಹಳಷ್ಟು ಸೂಚಕಗಳಲ್ಲಿ ನೆಲಮಂಗಲವು ಇತರ ತಾಲೂಕುಗಳಿಗಿಂತ ಹೆಚ್ಚಿನ ಅಂಕಿಯನ್ನು ಸಾಧಿಸಿರುವುದರಿಂದ, ಮಾನವ ಅಭಿವೃದ್ಧಿಯಲ್ಲಿ ಉತ್ತಮ ಮಟ್ಟದ ಸಾಧನೆ ಮಾಡಿದೆ. ಆದರೆ, ಜಿಲ್ಲೆಯಲ್ಲಿ ಇನ್ನೂ ಹೆಚ್ಚಿನ ಮಟ್ಟದ ಮಾನವ ಅಭಿವೃದ್ಧಿಯನ್ನು ಸಾಧಿಸಲು ಅವಕಾಶವಿದೆ. ಸ್ವಚ್ಛ ಅಡುಗೆ ಇಂಧನ, ಶೌಚಾಲಯ, ಕುಡಿಯುವ ನೀರಿನ ಲಭ್ಯತೆ ಮತ್ತು ಪಕ್ಕಾ ಮನೆಗಳಿರುವ ಕುಟುಂಬಗಳ ಸಂಖ್ಯೆಯನ್ನು ಹೆಚ್ಚುಮಾಡಲು ಕ್ರಮಗಳನ್ನು ಕೈಗೊಳ್ಳಬೇಕು. ಮೇಲಾಗಿ, ಕೃಷಿಯೇತರ ಉದ್ಯಮಗಳಲ್ಲಿ ಉದ್ಯೋಗವನ್ನು ಹುಡುಕುತ್ತಿರುವ ಜನರಿಗೆ ಸಂಚರಿಸಲು ಅನುಕೂಲ ಮಾಡಿಕೊಡಬೇಕು. ಬೆಂಗಳೂರು ನಗರದ ಸೇವಾ ಉದ್ಯಮದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನರು ಉದ್ಯೋಗಾವಕಾಶಗಳನ್ನು ಪಡೆಯಬಹುದು. ಇದಕ್ಕಾಗಿ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಇಚ್ಛಿಸುವ ಜನರ ಕೌಶಲ್ಯಗಳನ್ನು ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಲು ಹೂಡಿಕೆ ಮಾಡಬೇಕು. ಆರೋಗ್ಯದ ವಿಚಾರದಲ್ಲಿ, ತಾಯಂದಿರ ಆರೋಗ್ಯ ಮತ್ತು ಐದು ವರ್ಷಕ್ಕಿಂತ ಚಿಕ್ಕ ಮಕ್ಕಳ ಮರಣವನ್ನು ಕಡಿಮೆ ಮಾಡಲು ಆದ್ಯತೆ ನೀಡಿ, ಜಿಲ್ಲೆಯ ಮಾನವ ಅಭಿವೃದ್ಧಿ ಸ್ಥಿತಿಯನ್ನು ಸುಧಾರಿಸಬೇಕು.

## 3.3 ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ

ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವು, ಗಂಡು ಮತ್ತು ಹೆಣ್ಣಿನ ಸಾಧನೆಯಲ್ಲಿ ಇರುವ ತಾರತಮ್ಯದಿಂದ ಮಾನವ ಅಭಿವೃದ್ಧಿಗೆ ಆಗುವ ಹಾನಿ ಮತ್ತು ಗಂಡು ಮತ್ತು ಹೆಣ್ಣಿಗೆ ಲಭ್ಯವಿರುವ ಅವಕಾಶಗಳನ್ನು ಮಾಪನ ಮಾಡುತ್ತದೆ. ಮುಂಚೆಯೇ ಹೇಳಿದಂತೆ, ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವು ಮೂರು ವಿಮಿತಿಗಳನ್ನು ಹೊಂದಿರುವ ಸಂಘಟಿತ ಸೂಚ್ಯಂಕ: 1. ಪ್ರಜನನ ಆರೋಗ್ಯ - ತಾಯಂದಿರ ಮರಣ ಪ್ರಮಾಣ, ಸಾಂಸ್ಥಿಕ ಹೆರಿಗೆಗಳ ಪಾಲು ಮತ್ತು ಅತಿಯಾದ ರಕ್ತಹೀನತೆಯಿರುವ ಗರ್ಭಿಣಿಯರ ಪಾಲು ಇವುಗಳಿಂದ ಪ್ರತಿನಿಧಿಸಲ್ಪಡುತ್ತದೆ, 2. ಸಬಲೀಕರಣ- ಪಂಚಾಯತಿ ರಾಜ್ ಸಂಸ್ಥೆಗಳಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಮಹಿಳಾ ಮತ್ತು ಪುರುಷರ ಪ್ರಮಾಣ, 0-6 ವರ್ಷ ವಯೋಮಾನದ ಹೆಣ್ಣು ಮತ್ತು ಗಂಡು ಮಕ್ಕಳ ಪ್ರಮಾಣ, ಮತ್ತು ಪುರುಷ ಮತ್ತು ಮಹಿಳಾ ಸಾಕ್ಷರತೆ ಇವುಗಳಿಂದ ಪ್ರತಿನಿಧಿಸಲ್ಪಡುತ್ತದೆ ಮತ್ತು 3. ಕಾರ್ಮಿಕ ಮಾರುಕಟ್ಟೆ - ಮಹಿಳಾ ಮತ್ತು ಪುರುಷ ಕಾರ್ಮಿಕರ ಸಂಖ್ಯೆ, ಕೃಷಿಯೇತರ ಕ್ಷೇತ್ರದಲ್ಲಿ ಮಹಿಳೆ ಮತ್ತು ಪುರುಷ ಕಾರ್ಮಿಕರ ಸಂಖ್ಯೆ ಮತ್ತು ಮಹಿಳೆ ಮತ್ತು ಪುರುಷರ ಕೃಷಿ ಕೂಲಿದರ ಇವುಗಳಿಂದ ಪ್ರತಿನಿಧಿಸಲ್ಪಡುತ್ತದೆ.

**ಕೋಷ್ಟಕ 3.2: ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ (2011)**

| ತಾಲೂಕು | ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ | ಶ್ರೇಣಿ |
|---|---|---|
| ದೇವನಹಳ್ಳಿ | 0.071 | 1 |
| ದೊಡ್ಡಬಳ್ಳಾಪುರ | 0.076 | 2 |
| ಹೊಸಕೋಟೆ | 0.092 | 4 |
| ನೆಲಮಂಗಲ | 0.085 | 3 |

ಮೂಲ: ಸಿಬಿಪಿಎಸ್ ನ ಸಂಕಲನ

ಲಿಂಗ ಸಂಬಂಧಿ ಅಸಮಾನತೆ ವಿಷಯದಲ್ಲಿ ಎಲ್ಲಾ ನಾಲ್ಕು ತಾಲೂಕುಗಳ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವು ಹೆಚ್ಚುಕಡಿಮೆ ಸಮನಾಗಿದೆ. ಈ ನಾಲ್ಕು ತಾಲೂಕುಗಳ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವು 0.071 ರಿಂದ 0.092 ರ ನಡುವೆ ಇದೆ. ಈ ನಾಲ್ಕು ತಾಲೂಕುಗಳಲ್ಲಿ, ದೇವನಹಳ್ಳಿ ತಾಲೂಕು ಅತಿ ಕಡಿಮೆ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವನ್ನು ಹೊಂದಿದ್ದು, ಅದು ಜಿಲ್ಲೆಯಲ್ಲೇ ಉತ್ತಮ ಲಿಂಗ ಸಮಾನತೆಯನ್ನು ಹೊಂದಿರುವ ತಾಲೂಕಾಗಿದೆ. ದೇವನಹಳ್ಳಿ ತಾಲೂಕಿನ ಉತ್ತಮ ಸಾಧನೆಗೆ ಕಾರಣಗಳು ಯಾವುವೆಂದರೆ:

ಅ. ಬಹಳ ಕಡಿಮೆ ರಕ್ತಹೀನತೆ ಇರುವ ಗರ್ಭಿಣಿಯರ ಸಂಖ್ಯೆ : ದೇವನಹಳ್ಳಿ ತಾಲೂಕಿನಲ್ಲಿ ರಕ್ತಹೀನತೆ ಇರುವ ಗರ್ಭಿಣಿಯರ ಪ್ರಮಾಣ ಕೇವಲ ಶೇ. 21.63 ಇದ್ದು, ದೊಡ್ಡಬಳಾಪುರದಲ್ಲಿ ಮತ್ತು ಹೊಸಕೋಟೆ ತಾಲೂಕುಗಳಲ್ಲಿ ರಕ್ತಹೀನತೆ ಇರುವ ಗರ್ಭಿಣಿಯರ ಪ್ರಮಾಣ ಅನುಕ್ರಮವಾಗಿ ಶೇ, 57 ಮತ್ತು ಶೇ .63 ಇದ್ದು, ಇದು ದೇವನಹಳ್ಳಿ ಮತ್ತು ನೆಲಮಂಗಲ ತಾಲೂಕುಗಳಿಗಿಂತ ಗಣನೀಯವಾಗಿ ಹೆಚ್ಚಾಗಿದೆ.

ಆ. ಹೆಚ್ಚು ಸಂಖ್ಯೆಯ ಸಾಂಸ್ಥಿಕ ಹೆರಿಗೆಗಳು: ದೇವನಹಳ್ಳಿಯಲ್ಲಿ, ಸಾಂಸ್ಥಿಕ ಹೆರಿಗೆಗಳ ಪ್ರಮಾಣ ಶೇ.99.65 ಇದ್ದು, ಇದು ಜಿಲ್ಲೆಯಲ್ಲಿಯೇ ಅತಿ ಹೆಚ್ಚಿನದ್ದಾಗಿದೆ. ಈ ಸೂಚಕದಲ್ಲಿ ಅತಿ ಕಡಿಮೆ ಸಾಧನೆ ಮಾಡಿದ ತಾಲೂಕು ಹೊಸಕೋಟೆಯಾಗಿದ್ದು, ಇಲ್ಲಿ ಇದು ಶೇ. 91 ಇದೆ ಮತ್ತು ದೊಡ್ಡಬಳಾಪುರ ಮತ್ತು ನೆಲಮಂಗಲ ತಾಲೂಕುಗಳಲ್ಲಿ ಸಾಂಸ್ಥಿಕ ಹೆರಿಗೆಗಳ ಪ್ರಮಾಣ ಶೇ. 98 ಇದೆ.

ಇ. ತಾಲೂಕುಗಳ ನಡುವೆ ಇತರ ಸೂಚಕಗಳಲ್ಲಿ ಕಡಿಮೆ ವ್ಯತ್ಯಾಸ: ಮೇಲ್ಕಂಡ ಎರಡು ಸೂಚಕಗಳನ್ನು ಹೊರತುಪಡಿಸಿ, ಇತರ ಸೂಚಕಗಳಲ್ಲಿ ನಾಲ್ಕೂ ತಾಲೂಕುಗಳ ನಡುವೆ ಗಣನೀಯವಾದ ವ್ಯತ್ಯಾಸವಿಲ್ಲ. ಇದರ ಪರಿಣಾಮವಾಗಿ, ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕದಲ್ಲಿ, ದೇವನಹಳ್ಳಿಯು ಇತರ ಮೂರು ತಾಲೂಕುಗಳಿಗಿಂತ ಕೊಂಚ ಉತ್ತಮವಾಗಿದೆ.

ನಾಲ್ಕು ತಾಲೂಕುಗಳಲ್ಲಿ ಹೊಸಕೋಟೆಯು ಅತಿ ಹೆಚ್ಚು ಲಿಂಗ ಸಂಬಂಧಿತ ಅಸಮಾನತೆಯನ್ನು ಹೊಂದಿದೆ. ಈ ತಾಲೂಕು ಎಲ್ಲಾ ಸೂಚಕಗಳಲ್ಲಿಯೂ ಅತಿ ಹೆಚ್ಚಿದ್ದು ಸುಸಂಗತವಾಗಿ ಕಳಪೆ ಪ್ರದರ್ಶನ ನೀಡಿದೆ. ಈ ತಾಲೂಕಿನಲ್ಲಿ ರಕ್ತಹೀನಿತೆ ಇರುವ ಗರ್ಭಿಣಿಯರ ಸಂಖ್ಯೆ ಹೆಚ್ಚಿದ್ದು, ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಜಿಲ್ಲೆಯಲ್ಲೇ ಕಡಿಮೆ ಇದೆ. ಮಹಿಳಾ ಕಾರ್ಮಿಕರ ಪ್ರಮಾಣವೂ ಕಡಿಮೆ ಇದೆ. ಮೇಲಾಗಿ, ನೆಲಮಂಗಲ ತಾಲೂಕು ಬೆಂಗಳೂರು ಗ್ರಾಮಾಂತರದಲ್ಲಿಯೇ ಅತಿ ಹೆಚ್ಚು ತಾಯಂದಿರ ಮರಣ ಪ್ರಮಾಣವನ್ನು ಹೊಂದಿದ್ದು ಲಿಂಗ ಅಸಮಾನತೆಯಲ್ಲಿ ಜಿಲ್ಲೆಯಲ್ಲಿ ಎರಡನೆ ಸ್ಥಾನದಲ್ಲಿದೆ. ನೆಲಮಂಗಲದ ತಾಯಂದಿರ ಮರಣ ಪ್ರಮಾಣವು 150 ಇದ್ದು, ಜಿಲ್ಲೆಯ ತಾಯಂದಿರ ಮರಣ ಪ್ರಮಾಣ 114 ಇದೆ. ಹಾಗಾಗಿ ನೆಲಮಂಗಲ ತಾಲೂಕಿನ ಬಗ್ಗೆ ಹೆಚ್ಚಿನ ಗಮನವಿರಿಸಿ, ಜಿಲ್ಲೆಯಲ್ಲಿ ತಾಯಂದಿರ ಮರಣದ ವಿಷಯದಲ್ಲಿ ತೀವ್ರವಾದ ಪರಿಹಾರ ಕ್ರಮಗಳ ಅಗತ್ಯವಿದೆ.

ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವು ತುಲನಾತ್ಮಕ ಸೂಚ್ಯಂಕವಾಗಿರುವುದರಿಂದ, ನಿಖರವಾದ ಅಂಶಗಳಲ್ಲಿ ನೋಡಿದಾಗ ಪುರುಷ ಮಹಿಳೆಯರ ನಡುವಿನ ತಾರತಮ್ಯವನ್ನು ಮಸುಕುಮಾಡುತ್ತದೆ. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಎಲ್ಲಾ ನಾಲ್ಕು ತಾಲೂಕುಗಳಲ್ಲಿಯೂ ಪುರುಷ ಮತ್ತು ಮಹಿಳೆಯರ ನಡುವೆ ಅಗಾಧವಾದ ತಾರತಮ್ಯ ಇರುವುದು ಗೋಚರಿಸುತ್ತದೆ. ಮಹಿಳಾ ಸಾಕ್ಷರತೆಗಿಂತ ಪುರುಷ ಸಾಕ್ಷರತೆಯು 14-15 ಶೇಕಡಾವಾರು ಅಂಕಿಗಳಷ್ಟು ಹೆಚ್ಚಾಗಿದೆ. ಕಾರ್ಮಿಕ ಪಾಲುದಾರಿಕೆಯಲ್ಲಿ, ಸರಾಸರಿ ಮಹಿಳಾ ಪಾಲುದಾರಿಕೆಯು 33.39 ಶೇಕಡಾವಾರು ಇದ್ದು, ಪುರುಷ ಪಾಲುದಾರಿಕೆಯು ಶೇ. 69.40 ಇದೆ. ಸರ್ಕಾರವು ಪುರುಷ ಮತ್ತು ಮಹಿಳೆಯರ ನಡುವೆ ಅಂತರವಿಲ್ಲದೆ ಕೃಷಿದ ಚಟುವಟಿಕೆಗಳಿಗೆ ಕನಿಷ್ಠ ಕೂಲಿದರವನ್ನು ನಿಗದಿಪಡಿಸುತ್ತದೆಯಾದರೂ, ಎಲ್ಲಾ ನಾಲ್ಕು ತಾಲೂಕುಗಳಲ್ಲಿಯೂ ಪ್ರಚಲಿತವಾಗಿರುವ ಪುರುಷ ಕೂಲಿದರವು ಮಹಿಳಾ ಕೂಲಿದರಕ್ಕಿಂತ ಗಣನೀಯವಾಗಿ ಹೆಚ್ಚಾಗಿದೆ.

ರಾಜ್ಯವು ಸಕ್ರಿಯವಾಗಿ ಮಧ್ಯಪ್ರವೇಶಿಸಿ, ಮಹಿಳಾ ಸಾಕ್ಷರತೆ, ಕಾರ್ಮಿಕ ಪಾಲುದಾರಿಕೆ ಮತ್ತು ಕೂಲಿದರಗಳಲ್ಲಿ ನಿಖರವಾದ ಸುಧಾರಣೆಯನ್ನು ತರಬೇಕು. ದೊಡ್ಡಬಳಾಪುರದಲ್ಲಿ ಮತ್ತು ಹೊಸಕೋಟೆ ತಾಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ರಕ್ತಹೀನತೆ ಹೊಂದಿರುವ ಗರ್ಭಿಣಿಯರ ಪ್ರಮಾಣವನ್ನು ಕಡಿಮೆ ಮಾಡಲು ಕೇಂದ್ರೀಕೃತ ಕ್ರಮಗಳ ಅಗತ್ಯವಾಗಿದೆ.

## 3.4 ಮಕ್ಕಳ ಅಭಿವೃದ್ಧಿ ಸೂಚ್ಯಂಕ

ಮಕ್ಕಳ ಅಭಿವೃದ್ಧಿ ಸೂಚ್ಯಂಕವು ಯು ಮಕ್ಕಳಿಗೆ ನಿರ್ದಿಷ್ಟವಾದ ಮೂರು ವಿಮಿತಿಗಳನ್ನು ಆಧರಿಸಿದೆ: ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕತೆ. ನಾಲ್ಕು ತಾಲೂಕುಗಳಿಗೆ ಮಕ್ಕಳ ಅಭಿವೃದ್ಧಿ ಸೂಚ್ಯಂಕ ಮತ್ತು ಶ್ರೇಣಿಗಳನ್ನು ಕೋಷ್ಟಕ 3.3 ರಲ್ಲಿ ನೀಡಲಾಗಿದೆ.

ನಾಲ್ಕು ತಾಲೂಕುಗಳಲ್ಲಿ ನೆಲಮಂಗಲ ಅತಿ ಹೆಚ್ಚಿನ ಮಕ್ಕಳ ಅಭಿವೃದ್ಧಿ ಸೂಚ್ಯಂಕ (0.943) ಹೊಂದಿದೆ. ನಾಲ್ಕು ತಾಲೂಕುಗಳಲ್ಲಿ ಇದು ಮಕ್ಕಳ ಅಭಿವೃದ್ಧಿ ಸೂಚ್ಯಂಕವನ್ನು ಗಣಿಸಲು ಬಳಸುವ ಎಲ್ಲಾ ವಿಮಿತಿಗಳಲ್ಲಿಯೂ ಸುಸಂಗತವಾಗಿ ಉತ್ತಮ ಸಾಧನೆ ತೋರಿದೆ. ದೇವನಹಳ್ಳಿ ತಾಲೂಕು ಎರಡನೇ ಸ್ಥಾನದಲ್ಲಿದೆ. ಆದರೆ, ದೇವನಹಳ್ಳಿ ಮತ್ತು ನೆಲಮಂಗಲ ತಾಲೂಕುಗಳ ಮಕ್ಕಳ ಅಭಿವೃದ್ಧಿ ಸೂಚ್ಯಂಕಗಳ ನಡುವಿನ ಅಂತರ ಅಗಾಧವಾಗಿದೆ. ಹೊಸಕೋಟೆ ಮತ್ತು ದೊಡ್ಡಬಳ್ಳಾಪುರ ತಾಲೂಕುಗಳು ಅನುಕ್ರಮವಾಗಿ ಮೂರನೆ ಮತ್ತು ನಾಲ್ಕನೆ ಸ್ಥಾನಗಳನ್ನು ಪಡೆದಿವೆ.

**ಕೋಷ್ಟಕ 3.3: ಮಕ್ಕಳ ಅಭಿವೃದ್ಧಿ ಸೂಚ್ಯಂಕ (2011)**

| ತಾಲೂಕು | ಮಕ್ಕಳ ಮರಣ ಪ್ರಮಾಣ | ಕಡಿಮೆ ತೂಕ ಹೊಂದಿದ ಮಕ್ಕಳ ಪ್ರಮಾಣ (%) | ಅಪೌಷ್ಟಿಕ ಮಕ್ಕಳ ಪ್ರಮಾಣ (%) | ಶಾಲೆ ಬಿಟ್ಟ ಮಕ್ಕಳನ್ನು ಮುಖ್ಯ ವಾಹಿನಿಗೆ ತಂದ ಪ್ರಮಾಣ (%) | ಮಕ್ಕಳ ಅಭಿವೃದ್ಧಿ ಸೂಚ್ಯಂಕ | ಶ್ರೇಣಿ |
|---|---|---|---|---|---|---|
| ದೇವನಹಳ್ಳಿ | 25 | 13.5 | 26.16 | 65.96 | 0.479 | 2 |
| ದೊಡ್ಡಬಳ್ಳಾಪುರ | 36 | 9.85 | 24.95 | 65.37 | 0.265 | 4 |
| ಹೊಸಕೋಟೆ | 37 | 12.18 | 27.08 | 66.1 | 0.311 | 3 |
| ನೆಲಮಂಗಲ | 26 | 8.1 | 19.97 | 66.01 | 0.943 | 1 |

ಮೂಲ: ಸಿಬಿಪಿಎಸ್ ನ ಸಂಕಲನ

ಎಲ್ಲಾ ತಾಲೂಕುಗಳಿಗೆ ಹೋಲಿಸಿದಂತೆ ದೊಡ್ಡಬಳ್ಳಾಪುರವು ಆರೋಗ್ಯ ವಿಮಿತಿಯಲ್ಲಿ ಉತ್ತಮ ಸಾಧನೆ ತೋರಿದೆ. ತಾಲೂಕುಗಳ ನಡುವೆ ಮಕ್ಕಳ ಮರಣ ಪ್ರಮಾಣದಲ್ಲಿ ಗಣನೀಯವಾದ ಅಂತರವಿರುವುದನ್ನು ಗಮನಿಸಬಹುದು[12]. ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳು ಅನುಕ್ರಮವಾಗಿ 36 ಮತ್ತು 37 ಮಕ್ಕಳ ಮರಣ ಪ್ರಮಾಣ ಸೂಚ್ಯಂಕಗಳನ್ನು ಪಡೆದಿದೆ.

ನೆಲಮಂಗಲದಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಐದು ವರ್ಷಗಿಂತ ಚಿಕ್ಕ ವಯಸ್ಸಿನ ಅಪೌಷ್ಟಿಕ ಮಕ್ಕಳು (ಶೇ. 19.97) ಮತ್ತು ಜನನದಲ್ಲಿ ಕಡಿಮೆ ತೂಕ ಹೊಂದಿದ ಮಕ್ಕಳು (ಶೇ. 8.10) ಇರುವುದು ಕಂಡುಬಂದಿದೆ. ಪೌಷ್ಟಿಕತೆಯ ವಿಮಿತಿಯಲ್ಲಿ ದೇವನಹಳ್ಳಿಯು ಅತಿ ಕಳಪೆ ಸಾಧನೆ ತೋರಿದೆ. ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಪೌಷ್ಟಿಕ ಮಕ್ಕಳ ಪ್ರಮಾಣ ಶೇ. 26.16 ಇದ್ದು, ಇದು ನೆಲಮಂಗಲ ತಾಲೂಕಿಗಿಂತ ಶೇ. 6.19 ರಷ್ಟು ಹೆಚ್ಚಾಗಿದೆ. ದೇವನಹಳ್ಳಿಯಲ್ಲಿ ಕಡಿಮೆ ತೂಕದ ಮಕ್ಕಳು ಶೇ. 13.5 ಇದ್ದು, ಇದು ನಾಲ್ಕು ತಾಲೂಕುಗಳಲ್ಲಿ ಅತಿ ಹೆಚ್ಚಿನದ್ದಾಗಿದೆ. ಮಕ್ಕಳ ಪೌಷ್ಟಿಕತೆಯ ವಿಮಿತಿಯಲ್ಲಿ ದೇವನಹಳ್ಳಿಯ ಕಳಪೆ ಸಾಧನೆಯು ಅದರ ಒಟ್ಟಾರೆ ಮಕ್ಕಳ ಅಭಿವೃದ್ಧಿ ಸೂಚ್ಯಂಕಲ್ಯದ ಮೇಲೆ ವ್ಯತಿರಿಕ್ತ ಪರಿಣಮ ಬೀರಿದೆ.

ಶಿಕ್ಷಣದ ವಿಮಿತಿಯಲ್ಲಿ ಹೊಸಕೋಟೆಯು ಜಿಲ್ಲೆಯಲ್ಲೇ ಅತ್ಯುತ್ತಮ ಸಾಧನೆ ಮಾಡಿದೆ. ಆದರೆ, ಎಲ್ಲಾ ತಾಲೂಕುಗಳೂ ಶಿಕ್ಷಣದ ವಿಮಿತಿಯಲ್ಲಿ ಬಹಳ ಸಮಾನವಾಗಿವೆ ಎಂದು ಗಮನಿಸಬೇಕು ಏಕೆಂದರೆ, ಮುಖ್ಯ ವಾಹಿನಿಯಲ್ಲಿರುವ ಮಕ್ಕಳಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣದಲ್ಲಿ ನಾಲ್ಕು ತಾಲೂಕುಗಳ ನಡುವೆ ಹೆಚ್ಚು ಭಿನ್ನತೆ ಇಲ್ಲ.

[12] ಮಕ್ಕಳ ಮರಣ ಪ್ರಮಾಣ ಎಲ್ಲಾ ತಾಲೂಕಗಳಲ್ಲಿ ವಿಚಲನವು 6.67 ಇರುತ್ತದೆ

## 3.5 ನಗರಾಭಿವೃದ್ಧಿ ಸೂಚ್ಯಂಕ

ಕರ್ನಾಟಕ ರಾಜ್ಯವು ದೇಶದ ನಗರೀಕರಣ ಹೊಂದಿದ ಐದನೇ ದೊಡ್ಡ ರಾಜ್ಯವಾಗಿದ್ದು, 2011ರಲ್ಲಿ ನಗರೀಕರಣದ ಪ್ರಮಾಣವು ಸುಮಾರು ಶೇ. 38.63 ಇತ್ತು. ನಗರಾಭಿವೃದ್ಧಿ ಸೂಚ್ಯಂಕವು ನಗರ ಮೂಲಸೌಕರ್ಯದ ಗುಣಮಟ್ಟಕ್ಕೆ ಸಂಬಂಧಿಸಿದ ಅಂಶಗಳ ಜೊತೆಗೆ ಜನಸಾಂದ್ರತೆಯನ್ನು ವ್ಯಾಪಿಸುತ್ತದೆ. ಪ್ರತಿಯೊಂದು ತಾಲೂಕಿನಲ್ಲೂ ಇರುವ ನಗರ ಸ್ಥಳೀಯ ಸಂಸ್ಥೆಗಳೇ ನಗರಾಭಿವೃದ್ಧಿ ಸೂಚ್ಯಂಕದ ಪರಿಶೀಲನಾ ಘಟಕಗಳು ಎಂಬುದನ್ನು ಒತ್ತಿ ಹೇಳಬೇಕಿದೆ. ದೇವನಹಳ್ಳಿ ತಾಲೂಕಿನಲ್ಲಿ ಎರಡು ನಗರ ಸ್ಥಳೀಯ ಸಂಸ್ಥೆಗಳಿವೆ -ಅವುಗಳೆಂದರೆ ದೇವನಹಳ್ಳಿ ಪುರಸಭೆ ಮತ್ತು ವಿಜಯಪುರ ಪುರಸಭೆ. ಇತರ ಮೂರು ತಾಲೂಕುಗಳು ತಲಾ ಒಂದು ನಗರ ಸ್ಥಳೀಯ ಸಂಸ್ಥೆಗಳನ್ನು ಹೊಂದಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಐದು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜನರಿಗೆ ಲಭ್ಯವಾಗಿರುವ ನಗರ ಮೂಲಭೂತಸೌಕರ್ಯ ಮತ್ತು ಸೇವೆಗಳ ಗುಣಮಟ್ಟವನ್ನು ಈ ಸೂಚ್ಯಂಕವು ಅಳೆಯುತ್ತದೆ. ಹೀಗೆ ಗಣಿಸಲಾದ ನಗರಾಭಿವೃದ್ಧಿ ಸೂಚ್ಯಂಕವನ್ನು ಕೋಷ್ಟಕ 3.4ರಲ್ಲಿ ನೀಡಲಾಗಿದೆ.

**ಕೋಷ್ಟಕ 3.4: ನಗರಾಭಿವೃದ್ಧಿ ಸೂಚ್ಯಂಕ (2011)**

| ಸೂಚಕಗಳು | ದೇವನಹಳ್ಳಿ | ವಿಜಯಪುರ | ದೊಡ್ಡಬಳ್ಳಾಪುರ | ಹೊಸಕೋಟೆ | ನೆಲಮಂಗಲ |
|---|---|---|---|---|---|
| ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದಂತೆ ನಗರ ಸ್ಥಳೀಯ ಸಂಸ್ಥೆ ಜನಸಂಖ್ಯೆ | 13.38 | 16.63 | 28.25 | 21.04 | 17.65 |
| ಸ್ವಂತ ಮನೆಯಿರದ ಕುಟುಂಬಗಳ ಶೇಕಡಾವಾರು | 2.01 | 4.00 | 15.50 | 2.42 | 39.35 |
| ಒಟ್ಟು ನಗರ ಸ್ಥಳೀಯ ಸಂಸ್ಥೆ ಜನಸಂಖ್ಯೆಗೆ ಹೋಲಿಸಿದಂತೆ ಕೊಳಗೇರಿ ಜನಸಂಖ್ಯೆ | 23.92 | 25.10 | 19.11 | 13.33 | 7.86 |
| ನೀರು ಸರಬರಾಜು – ನಲ್ಲಿ ನೀರಿನ ಸಂಪರ್ಕವುಳ್ಳ ಕುಟುಂಬಗಳ ಶೇಕಡಾವಾರು | 79.38 | 84.11 | 80.10 | 68.73 | 84.18 |
| ಚರಂಡಿ – ಚರಂಡಿ ವ್ಯವಸ್ಥೆಯುಳ್ಳ ಕುಟುಂಬಗಳ ಶೇಕಡಾವಾರು (ತೆರೆದ ಮತ್ತು ಮುಚ್ಚಿದ ಚರಂಡಿ ಸೌಲಭ್ಯಗಳು) | 84.05 | 92.90 | 90.31 | 92.43 | 95.98 |
| ನಗರ ಪ್ರದೇಶದ ಪ್ರತಿ 1000 ಜನಸಂಖ್ಯೆಗೆ ಆಸ್ಪತ್ರೆ ಹಾಸಿಗೆಗಳ ಸಂಖ್ಯೆ | 2.10 | 1.69 | 1.29 | 15.02 | 4.30 |
| ಒಟ್ಟು ಸ್ವೀಕೃತಿಗಳಿಗೆ ಹೋಲಿಸಿದಂತೆ ಶೇಕಡಾವಾರು ಸ್ವಂತ ಸಂಪನ್ಮೂಲ ಸಿದ್ಧತೆ | 39.57 | 43.84 | 27.46 | 76.92 | 9.25 |
| ಅಭಿವೃದ್ಧಿ ಕಾರ್ಯಗಳಿಗೆ ತಲಾ ಆದಾಯದ ಲಾಗ್ | 2,076.72 | 1,115.16 | 366.78 | 650.53 | 1,586.48 |
| ಭೌಗೋಳಿಕ ಪ್ರದೇಶದ ಪ್ರತಿ ಚ.ಕಿಮೀ.ಗೆ ರಸ್ತೆಗಳ ಉದ್ದ (ಕಿ.ಮಿ.ಗಳಲ್ಲಿ) | 3.88 | 4.56 | 10.33 | 4.11 | 3.74 |
| ಪ್ರತಿ 1000 ಜನಸಂಖ್ಯೆಗೆ ಅಪರಾಧ ಪ್ರಕರಣಗಳು | 252 | 204 | 176 | 401 | 403 |
| ಪ್ರತಿ 10000 ಜನಸಂಖ್ಯೆಗೆ ರಸ್ತೆ ಅಪಘಾತಗಳು | 252 | 58 | 39 | 142 | 158 |
| **ನಗರಾಭಿವೃದ್ಧಿ ಸೂಚ್ಯಂಕ** | 0.359 | 0.527 | 0.592 | 0.512 | 0.424 |
| **ಶ್ರೇಣಿ** | 5 | 2 | 1 | 3 | 4 |

**ಮೂಲ: ಸಿಬಿಪಿಎಸ್ ನ ಸಂಕಲನ**

ಕೋಷ್ಟಕ 3.4ನಿಂದ ಜಿಲ್ಲೆಯಲ್ಲಿ ನಗರಾಭಿವೃದ್ಧಿ ಸ್ಥಿತಿಯು ಉತ್ಸಾಹದಾಯಕವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದು ನಗರ ಪ್ರದೇಶಗಳಲ್ಲಿ ಅಭಿವೃದ್ಧಿಯ ಮಟ್ಟದ ಬಗ್ಗೆ ತೀವ್ರ ಚಿಂತೆಯನ್ನು ಉಂಟುಮಾಡುತ್ತದೆ ಮತ್ತು ವರ್ತಮಾನದಲ್ಲಿ ಹಾಗೂ ಭವಿಷ್ಯದಲ್ಲಿ ಲಭ್ಯವಿರುವ ಸಂಪನ್ಮೂಲಗಳ ಮೇಲೆ ಆಗಬಹುದಾದ ಒತ್ತಡವನ್ನು ಸೂಚಿಸುತ್ತದೆ.

ನೆಲಮಂಗಲ, ಹೊಸಕೋಟೆ ಮತ್ತು ದೇವನಹಳ್ಳಿ ನಗರ ಸ್ಥಳೀಯ ಸಂಸ್ಥೆಗಳ ಕಳಪೆ ಸಾಧನೆಗೆ ಕಾರಣ ವೆಂದರೆ ಹೆಚ್ಚಿನ ಪ್ರಮಾಣದ ಅಪರಾಧಗಳು ಮತ್ತು ರಸ್ತೆ ಅಪಘಾತ ಪ್ರಕರಣಗಳು. ಅಪರಾಧಗಳ ವಿಷಯದಲ್ಲಿ, ನೆಲಮಂಗಲ ಪುರಸಭೆಯಲ್ಲಿ ಪ್ರತಿ 10000 ಜನರಿಗೆ 403 ಜನ ಅಪರಾಧಕ್ಕೆ ತುತ್ತಾಗಿದ್ದಾರೆ. ಹೊಸಕೋಟೆ ಮತ್ತು ದೇವನಹಳ್ಳಿ ಪುರಸಭೆಗಳಲ್ಲಿ, ಪ್ರತಿ 10000 ಜನರಿಗೆ ಅನುಕ್ರಮವಾಗಿ 401 ಮತ್ತು 252 ಜನ ಅಪರಾಧಗಳಿಗೆ ತುತ್ತಾಗಿದ್ದಾರೆ. ಇದಕ್ಕೆ ಹೋಲಿಸಿದಂತೆ ವಿಜಯಪುರ ಪುರಸಭೆಯಲ್ಲಿ ಮತ್ತು ದೊಡ್ಡಬಳ್ಳಾಪುರ ನಗರ ಸಭೆಯಲ್ಲಿ ಪ್ರತಿ 10000 ಜನರಿಗೆ ಅಪರಾಧಗಳ ಪ್ರಕರಣಗಳು ಅನುಕ್ರಮವಾಗಿ 204 ಮತ್ತು 176 ಸಂಖ್ಯೆಯಲ್ಲಿ ದಾಖಲಾಗಿದೆ. ಮೇಲಾಗಿ, ರಸ್ತೆ ಅಪಘಾತಗಳ ಸಂಖ್ಯೆ ದೇವನಹಳ್ಳಿ, ನೆಲಮಂಗಲ ಮತ್ತು ಹೊಸಕೋಟೆಗಳಲ್ಲಿ ಹೆಚ್ಚಾಗಿದೆ. ದೇವನಹಳ್ಳಿ, ನೆಲಮಂಗಲ ಮತ್ತು ಹೊಸಕೋಟೆ ತಾಲೂಕುಗಳಲ್ಲಿ ರಸ್ತೆ ಅಪಘಾತಗಳ ಸಂಖ್ಯೆಯು ಪ್ರತಿ 10000 ಜನರಿಗೆ ದೇವನಹಳ್ಳಿ (39)ಗಿಂತ ಐದರಷ್ಟು ಹೆಚ್ಚಾಗಿದ್ದು, ದೊಡ್ಡಬಳ್ಳಾಪುರದಲ್ಲಿ ಇದು ಅತಿ ಕಡಿಮೆಯಿದೆ. ನಗರಾಭಿವೃದ್ಧಿ ಸೂಚ್ಯಂಕದ ಮೇಲೆ ಈ ಸೂಚಕಗಳ ವ್ಯತಿರಿಕ್ತ ಪರಿಣಾಮವು, ಮಾನವ ಯೋಗಕ್ಷೇಮ ಮತ್ತು ಅಭಿವೃದ್ಧಿಯಲ್ಲಿ ಸುರಕ್ಷತೆ ಮತ್ತು ಭದ್ರತೆಗಳ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುತ್ತವೆ. ತಾಲೂಕಿನಲ್ಲಿ ಹೆಚ್ಚಿನ ನಗರ ಸಾಂದ್ರತೆಯು, ನಗರ ಜನಸಂಖ್ಯೆಯ ಶೇಕಡಾವಾರಾಗಿ ಅಳೆಯಲಾಗಿದ್ದು, ಪ್ರತಿ 10000 ಜನರಿಗೆ ಆಗುವ ಅಪರಾಧಗಳ ಮತ್ತು ರಸ್ತೆ ಅಪಘಾತಗಳ ಸಂಖ್ಯೆಗಳಿಗೆ ನಕಾರಾತ್ಮಕವಾಗಿವೆ ಎಂಬುದನ್ನು ಗಮನಿಸಬಹುದು.[13]

[13] ನಗರ ಜನಸಂಖ್ಯೆ ಹಾಗೂ ಅಪರಾಧ ಪ್ರಮಾಣದ ಶೇಕಡಾವಾರುವಿನ ನಡುವಿನ ಪರಸ್ಪರ ಸೂಚಕ -0.228. ಮತ್ತು ಪ್ರತಿ 10,000 ಜನಸಂಖ್ಯೆಗೆ ನಗರ ಜನಸಂಖ್ಯೆ ಹಾಗೂ ರಸ್ತೆ ಅಪಘಾತಗಳ ಪ್ರಮಾಣದ ನಡುವಿನ ಪರಸ್ಪರ ಸೂಚಕ -0.708

ಚಿತ್ರ 3.1: ನಗರ ಸಂಸ್ಥೆಗಳು: ಆಯ್ದ ನಗರ ಸ್ಥಳೀಯ ಸಂಸ್ಥೆ ಸೂಚಕಗಳ ಸ್ಥಿತಿಗತಿ (2011)




* ಎ=ಸ್ವಂತ ಮನೆ ಇಲ್ಲದಂತಹ ನಗರ ಕುಟುಂಬಗಳ ಶೇಕಡಾವಾರು; ಬಿ=ಕೊಳೆಗೇರಿಯ ಜನಸಂಖ್ಯೆಯ ಶೇಕಡಾವಾರು; ಸಿ=ನೀರು ಸರಬರಾಜು; ಡಿ=ಒಳಚರಂಡಿ;ಮತ್ತು ಇ=ಒಟ್ಟು ಸ್ವೀಕೃತಿಗಳಿಗೆ ಹೋಲಿಸಿದಂತೆ
ಸ್ವಂತ ಸಂಪನ್ಮೂಲಗಳ ಕ್ರೂಢೀಕರಣ

ಅಭಿವೃದ್ಧಿ ಕಾರ್ಯಗಳಿಗೆ ತಮ್ಮ ಸ್ವಂತ ಆದಾಯವನ್ನು ಕ್ರೋಢೀಕರಿಸಲು ಜಿಲ್ಲೆಯ ಸ್ಥಳೀಯ ನಗರ ಸಂಸ್ಥೆಗಳ ಸಾಮರ್ಥ್ಯದಲ್ಲಿ ಅಗಾಧವಾದ ಅಂತರವಿದೆ. ನೆಲಮಂಗಲ ಪುರಸಭೆಯ ನಗರ ಸ್ಥಳೀಯ ಸಂಸ್ಥೆಗಳ ಒಟ್ಟು ಸ್ವೀಕೃತಿಗಳಿಗೆ ಹೋಲಿಸಿದಂತೆ ಸ್ವಂತ ಬಂಡವಾಳದ ಪ್ರಮಾಣ ಕೇವಲ ಶೇ. 9.25 ಇದ್ದರೆ, ಹೊಸಕೋಟೆಯ ಪುರಸಭೆಯು ತನ್ನ ಸ್ವೀಕೃತಿಗಳ ಶೇ. 76.92 ರಷ್ಟು ಸ್ವಂತ ಆದಾಯವನ್ನು ಕ್ರೋಢೀಕರಿಸಿದೆ. ಆದರೆ, ಅಭಿವೃದ್ಧಿ ಕಾರ್ಯಗಳ ಮೇಲೆ ಹೊಸಕೋಟೆ ಪುರಸಭೆಯಲ್ಲಿ ತಲಾ ವೆಚ್ಚವು ರೂ 651 ಇದ್ದು, ಇದು ಜಿಲ್ಲೆಯಲ್ಲೇ ಅತೀ ಕಡಿಮೆಯಾಗಿದೆ. ಆದರೆ ನೆಲಮಂಗಲ ಪುರಸಭೆಯಲ್ಲಿ, ಹೆಚ್ಚಿನ ಸ್ವಂತ ಅದಾಯವನ್ನು ಕ್ರೋಢೀಕರಣ ಮಾಡಿದ್ದರೂ, ನಾಲ್ಕು ಪುರಸಭೆಗಳಿಗೆ ಹೋಲಿಸಿದರೆ ಅಭಿವೃದ್ಧಿ ಕಾರ್ಯಗಳಿಗೆ ಮಾಡಿದ ವೆಚ್ಚದಲ್ಲಿ ಎರಡನೇ ಹೆಚ್ಚು ವೆಚ್ಚವನ್ನು ಮಾಡಿತ್ತು. ದೇವನಹಳ್ಳಿ ನಂತರದಲ್ಲಿ, ಎರಡನೇ ಸ್ಥಾನ ಪಡೆದಿದ್ದು, ದೇವನಹಳ್ಳಿಯು ಅಭಿವೃದ್ಧಿ ಕಾರ್ಯಗಳ ಮೇಲೆ ಪ್ರತಿ ವ್ಯಕ್ತಿಗೆ ರೂ 2077 ಗಳನ್ನು ಖರ್ಚು ಮಾಡಿತ್ತು.

## 3.6. ಆಹಾರ ಭದ್ರತೆ ಸೂಚ್ಯಂಕ

ಭಾರತವು ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗಲು ಮತ್ತು ಮಾರುಕಟ್ಟೆಯಲ್ಲಿ ಭೌತಿಕವಾಗಿ ಆಹಾರವು ಸಿಗುವಂತೆ ಮಾಡಲು ಆಹಾರ ಭದ್ರತೆ ಪರಿಕಲ್ಪನೆ ವಿಕಸನಗೊಂಡಿದೆ. 1960 ರ ದಶಕದ ಅಂತ್ಯದಲ್ಲಿ ಹಸಿರು ಕ್ರಾಂತಿಯ ನಂತರ ಆಹಾರ ಭದ್ರತೆಗೆ ಆಹಾರಕ್ಕೆ ಆರ್ಥಿಕತೆ ಲಭ್ಯವಾಗಬೇಕು ಎಂಬುದು ಸ್ಪಷ್ಟವಾಯಿತು.

ನಂತರ, 1980ರ ದಶಕದಲ್ಲಿ ಸಾಮಾಜಿಕ ಲಭ್ಯತೆ ಸಿದ್ಧಾಂತವು ಅಸ್ತಿತ್ವಕ್ಕೆ ಬಂದಿತು, ಅದರಲ್ಲೂ ವಿಶೇಷವಾಗಿ ಆಹಾರ ಭದ್ರತೆ ಪರಿಕಲ್ಪನೆಗೆ ಕಡೆಗಾಣಿಸಲ್ಪಟ್ಟ ಸಮುದಾಯಗಳು ಮತ್ತು ಅಂಗ ತಾರತಮ್ಯಗಳನ್ನು ಪರಿಗಣಿಸಲಾಯಿತು. ಈ ಆಹಾರ ಭದ್ರತೆ ಸೂಚ್ಯಂಕಕ್ಕೆ (ಆಭಸೂ) 3 ಆಯಾಮಗಳೆಂದರೆ: ಆಹಾರದ ಲಭ್ಯತೆ, ದೊರೆಗೊಳ್ಳುವಿಕೆ, ಮತ್ತು ಜೀರ್ಣಿಸಿಕೊಳ್ಳುವಿಕೆ. ಹೀಗೆ ಲೆಕ್ಕಮಾಡಿದ ಆ.ಭ.ಸೂ. ಸೂಚ್ಯಂಕವನ್ನು ಕೋಷ್ಟಕ3.5ರಲ್ಲಿ ನೀಡಲಾಗಿದೆ. ಆ.ಭ.ಸೂ.ದ ಜೊತೆಗೆ ಈ ಕೆಳಗಿನ ಕೋಷ್ಟಕ ಆ.ಭ.ಸೂ. ಯ ಮೂರು ಆಯಾಮಗಳ ಸ್ಥಾನಮಾನಗಳನ್ನು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲೂಕುಗಳ ಆ.ಭ.ಸೂ. ಗಳನ್ನು ಒದಗಿಸುತ್ತದೆ.

**ಕೋಷ್ಟಕ3.5: ಆಹಾರ ಭದ್ರತೆ ಸೂಚ್ಯಂಕ (2011)**

| ತಾಲೂಕು | ಲಭ್ಯತೆ | ದೊರೆಗೊಳ್ಳುವಿಕೆ | ಜೀರ್ಣಿಸಿಕೊಳ್ಳುವಿಕೆ | ಆ.ಭ.ಸೂ. | ಶ್ರೇಣಿ |
|---|---|---|---|---|---|
| ದೇವನಹಳ್ಳಿ | 0.441 | 0.160 | 0.410 | 0.337 | 4 |
| ದೊಡ್ಡಬಳ್ಳಾಪುರ | 0.507 | 0.561 | 0.288 | 0.452 | 3 |
| ಹೊಸಕೋಟೆ | 0.792 | 0.581 | 0.157 | 0.510 | 2 |
| ನೆಲಮಂಗಲ | 0.275 | 0.816 | 0.964 | 0.685 | 1 |

ಮೂಲ: ಸಿಬಿಪಿಎಸ್ ಸಂಕಲನ

ನಾಲ್ಕು ತಾಲೂಕುಗಳಲ್ಲಿ, ಆ.ಭ.ಸೂ. ದಲ್ಲಿ ನೆಲಮಂಗಲ ತಾಲೂಕು 0.685 ಸೂಚ್ಯಂಕದೊಂದಿಗೆ ಪ್ರಥಮ ಸ್ಥಾನದಲ್ಲಿದೆ. ದೊರೆಗೊಳ್ಳುವಿಕೆ ಮತ್ತು ಜೀರ್ಣಿಸಿಕೊಳ್ಳುವಿಕೆ ಸೂಚಕಗಳಲ್ಲಿಯೂ ನೆಲಮಂಗಲ ತಾಲೂಕು ಉಳಿದೆಲ್ಲ ತಾಲೂಕುಗಳಿಗಿಂತ ಬಹಳ ಮುಂದಿದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ ಅಲ್ಲಿಯ ತಲಾ ಆದಾಯ ಹೆಚ್ಚಿರುವುದು, ಕೃಷಿಯೇತರ ಕಾರ್ಮಿಕರ ಸಂಖ್ಯೆ (ಶೇಕಡಾವಾರು) ಹೆಚ್ಚಿರುವುದು, ಮಹಿಳಾ ಸಾಕ್ಷರತಾ ಪ್ರಮಾಣ ಹೆಚ್ಚಿರುವುದು, ಮತ್ತು ಗ್ರಾಮದಲ್ಲೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಹೊಂದಿರುವ ಗ್ರಾಮಗಳ ಸಂಖ್ಯೆ ಹೆಚ್ಚಿರುವುದು. ಇದರ ಜೊತೆಗೆ ಇಡೀ ಜಿಲ್ಲೆಯಲ್ಲೇ, ಇಲ್ಲಿ ಕೃಷಿ ಕಾರ್ಮಿಕರ ಶೇಕಡಾವಾರು ಪ್ರಮಾಣ ಅತ್ಯಂತ ಕಡಿಮೆಯಿದೆ, ಕಡಿಮೆ ತೂಕದ ಮಕ್ಕಳ ಜನನದ ಪ್ರಮಾಣ ಹಾಗೂ ಅಪೌಷ್ಠಿಕತೆಯಿಂದ ಬಳಲುವ ಮಕ್ಕಳ ಪ್ರಮಾಣವೂ ಕಡಿಮೆ ಇದೆ.

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ನೋಡಿದಾಗ ದೇವನಹಳ್ಳಿ 2ನೇ ಸ್ಥಾನದಲ್ಲಿದೆಯಾದರೂ ಆ.ಭ.ಸೂ.ದ ವಿಷಯದಲ್ಲಿ ಕಡೆಯ ಸ್ಥಾನದಲ್ಲಿದೆ. ದೇವನಹಳ್ಳಿಯ ಆ.ಭ.ಸೂ. 0.337, ಅಂದರೆ ನೆಲಮಂಗಲದ ಆ.ಭ.ಸೂ. ಕಕ್ಕಿಂತ 0.34 ಅಂಕಗಳು ಕಡಿಮೆ. ದೇವನಹಳ್ಳಿ ದೊರೆಗೊಳ್ಳುವಿಕೆ ಸೂಚಕ 0.160 ಇದ್ದು, ನೆಲಮಂಗಲದ್ದಕ್ಕಿಂತ (0.816) ಗಣನೀಯವಾಗಿ ಕಡಿಮೆ ಇದೆ. ದೊರೆಗೊಳ್ಳುವಿಕೆ ಸೂಚಕ ಬಹಳ ಕಡಿಮೆ ಇರುವುದರಿಂದ ಆ.ಭ.ಸೂ. ದೇವನಹಳ್ಳಿ ತಾಲೂಕಿನ ಒಟ್ಟಾರೆ ಸಾಧನೆಯ ಮೇಲೆ ಪ್ರತಿಕೂಲ ಪರಿಣಾಮವಾ ಬೀರಿದೆ. ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ತಲಾ ಆದಾಯ ಇರುವುದೂ ಈ ತಾಲೂಕಿನಲ್ಲಿರುವುದು ಇದಕ್ಕೆ ಪುಷ್ಠಿ ನೀಡುತ್ತದೆ. ಜೊತೆಗೆ, ಅತಿ ಹೆಚ್ಚು ಶೇಕಡಾವಾರು ಕೃಷಿ ಕಾರ್ಮಿಕರು ಮತ್ತು, ಬಿಪಿಎಲ್ ಪಡಿತರ ಚೀಟಿ ಹೊಂದಿರುವವರ ಬಡತನ ರೇಖೆಗಿಂತ ಕೆಳಗಿರುವ ಪ್ರಮಾಣವೂ ಕೂಡ ಇಲ್ಲೇ ಹೆಚ್ಚಾಗಿದೆ.

ಒಟ್ಟಾರೆ ಹೇಳುವುದಾದರೆ, ದೇವನಹಳ್ಳಿಯ ಲಭ್ಯತೆ, ದೊರೆಗೊಳ್ಳುವಿಕೆ ಮತ್ತು ಜೀರ್ಣಿಸಿಕೊಳ್ಳುವಿಕೆ ಆಯಾಮಗಳ ಸ್ಥಿತಿಗತಿಗಳು ಆಯಾ ಇಲಾಖೆಗಳ ಗಮನವನ್ನು ಮತ್ತು ತಾಲೂಕಿನ ಆಹಾರ ಭದ್ರತೆಯ ಮಟ್ಟವನ್ನು ಸುಧಾರಿಸಲು ಸೂಕ್ತವಾದ ಕಾರ್ಯನೀತಿಗಳನ್ನು ಎದುರು ನೋಡುತ್ತಿವೆ. ಎಲ್ಲ ತಾಲೂಕುಗಳಲ್ಲೂ ದೀರ್ಘಕಾಲದಲ್ಲಿ ಆಹಾರ ಭದ್ರತೆ ಮತ್ತು ಜನರ ಯೋಗಕ್ಷೇಮವನ್ನು ಖಾತ್ರಿಪಡಿಸಬೇಕಿದ್ದರೆ ಸಂಪನ್ಮೂಲಗಳ ಲಭ್ಯತೆಯನ್ನು ಸುಧಾರಿಸಬೇಕು,.

## 3.7. ಸಂಯುಕ್ತ ತಾಲೂಕು ಅಧಿವೃದ್ಧಿ ಸೂಚ್ಯಂಕ (ಸ.ತಾ.ಅ.ಸೂ.)

ಸಂಯುಕ್ತ ತಾಲೂಕು ಅಧಿವೃದ್ಧಿ ಸೂಚ್ಯಂಕ (ಸ.ತಾ.ಅ.ಸೂ.) ರಚಿಸಲು 68 ಸೂಚಕಗಳ ದತ್ತಾಂಶ ಸಂಗ್ರಹಣ ಮತ್ತು ಕ್ರಮಬದ್ಧಗೊಳಿಸಲಾಗಿದೆ. ಇದನ್ನು ಮೂರು ಆಯಾಮಗಳಲ್ಲಿ ಒಟ್ಟುಗೂಡಿಸಬಹುದು - ಶಿಕ್ಷಣ, ಆರೋಗ್ಯ ಮತ್ತು ಜೀವನ ಮಟ್ಟ. ಈ ಮೂರು ಆಯಾಮಗಳ ಮತ್ತು ಒಟ್ಟಾರೆ ಸೂಚ್ಯಂಕಗಳ ವಿಷಯದಲ್ಲಿ ಪ್ರತಿ ತಾಲೂಕಿನ ಸ್ಥಾನವನ್ನು ಅರಿಯಲು ಸ.ತಾ.ಅ.ಸೂ. ಅನ್ನು ರಚಿಸಲಾಗುತ್ತದೆ. ಆದ್ದರಿಂದ ಸ.ತಾ.ಅ.ಸೂ. ತಾಲೂಕು ಮಟ್ಟದಲ್ಲಿ ಮಾನವ ಅಭಿವೃದ್ಧಿಯ ಸ್ಥಿತಿಗತಿಯ ಬಗ್ಗೆ ಒಂದು ಸಮಗ್ರವಾದ ಚಿತ್ರಣವನ್ನು ನೀಡುತ್ತದೆ. ಜಿಲ್ಲೆಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಇರುವ ಅಂತರ ತಾಲೂಕುಗಳ ನಡುವಿನ ಜಿಲ್ಲಾ ವ್ಯತ್ಯಾಸಗಳನ್ನು ಅರಿಯಲೂ ಈ ಸೂಚ್ಯಂಕ ನೆರವಾಗುತ್ತದೆ.

**ಕೋಷ್ಟಕ 3.6: ಸಂಯುಕ್ತ ತಾಲೂಕು ಅಧಿವೃದ್ಧಿ ಸೂಚ್ಯಂಕ (2011)**

| ತಾಲೂಕು | ಜೀವನ ಮಟ್ಟದ ಸೂಚಕ | ಆರೋಗ್ಯ ಸೂಚಕ | ಶಿಕ್ಷಣ ಸೂಚಕ | ಸ.ತಾ.ಅ.ಸೂ. | ಶ್ರೇಣಿ |
|---|---|---|---|---|---|
| ದೇವನಹಳ್ಳಿ | 0.528 | 0.665 | 0.492 | 0.562 | 2 |
| ದೊಡ್ಡಬಳ್ಳಾಪುರ | 0.459 | 0.428 | 0.411 | 0.433 | 3 |
| ಹೊಸಕೋಟೆ | 0.548 | 0.223 | 0.416 | 0.396 | 4 |
| ನೆಲಮಂಗಲ | 0.503 | 0.573 | 0.780 | 0.619 | 1 |

ಮೂಲ: ಸಿಬಿಪಿಎಸ್ ಸಂಕಲನ

ನೆಲಮಂಗಲ ತಾಲೂಕು ಸ.ತಾ.ಅ.ಸೂ. 0.619 ಹೊಂದಿದ್ದು, ಉಳಿದ ತಾಲೂಕುಗಳಿಗಿಂತ ಹೆಚ್ಚಿನ ಸಾಧನೆ ಮಾಡಿದೆ. ಈ ಉತ್ತಮ ಸಾಧನೆಗೆ ಕಾರಣ, ಈ ತಾಲೂಕಿನಲ್ಲಿ ಶಿಕ್ಷಣದ ಮೂಲಭೂತ ಸೌಲಭ್ಯಗಳು ಹೆಚ್ಚಿರುವುದು, ಹೆಚ್ಚಿನ ಸಾಕ್ಷರತಾ ಪ್ರಮಾಣ, ಎಸ್‌ಎಸ್‌ಎಲ್‌ಸಿ ತೇರಗಡೆ ಪ್ರಮಾಣ ಹೆಚ್ಚಿರುವುದು, ಮತ್ತು ತಲಾ ಶಿಕ್ಷಣ ವೆಚ್ಚ ಹೆಚ್ಚಿರುವುದು. ಶಿಕ್ಷಣದ ಆಯಾಮದಲ್ಲಿ ನೆಲಮಂಗಲ ಪರವಾಗಿಲ್ಲ ಎನ್ನುವಂತಹ ಸಾಧನೆ ಮಾಡಿದ್ದರೂ, ಅದು ಜೀವನ ಮಟ್ಟ ಮತ್ತು ಆರೋಗ್ಯದ ಆಯಾಮಗಳಲ್ಲಿ ಉತ್ತಮ ಸಾಧನೆ ಮಾಡಿಲ್ಲ. ಆರೋಗ್ಯದ ಆಯಾಮದಲ್ಲಿ ನೆಲಮಂಗಲದಲ್ಲಿ ತಾಯಂದಿರ ಮರಣ ಪ್ರಮಾಣ ಅತಿ ಹೆಚ್ಚು ಇದ್ದು, ಅತಿ ಹೆಚ್ಚಿನ ಪ್ರಮಾಣದ ಜನರು ಸಾಂಕ್ರಾಮಿಕ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ತಲಾ 1000 ಜನಸಂಖ್ಯೆಗೆ ಇರುವ ನರ್ಸುಗಳ ಸಂಖ್ಯೆ ಕಡಿಮೆ ಇದ್ದು, ರೋಗ ನಿರೋಧಕ ಚುಚ್ಚುಮದ್ದು ಪಡೆದ ಮಕ್ಕಳ ಸಂಖ್ಯೆ ಕಡಿಮೆಯಿದೆ ಹಾಗೂತಲಾ ಆರೋಗ್ಯ ವೆಚ್ಚ ಕಡಿಮೆಯಿದೆ.

ನೆಲಮಂಗಲಕ್ಕೆ ಹೋಲಿಸಿದರೆ ಇತರ ತಾಲೂಕುಗಳು ಶಿಕ್ಷಣದ ಆಯಾಮಗಳಲ್ಲಿ ಬಹಳ ಕಳಪೆ ಸಾಧನೆ ಮಾಡಿವೆ. 0.562 ಸೂಚ್ಯಂಕ ಹೊಂದಿರುವ ದೇವನಹಳ್ಳಿ ತಾಲೂಕು ಸ.ತಾ.ಅ.ಸೂ. ನಲ್ಲಿ 2ನೇ ಸ್ಥಾನದಲ್ಲಿದೆ; ಜೀವನ ಮಟ್ಟ ಹಾಗೂ ಆರೋಗ್ಯ ಆಯಾಮಗಳೆರಡರಲ್ಲೂ ದೇವನಹಳ್ಳಿ ತಾಲೂಕು ನೆಲಮಂಗಲಕ್ಕಿಂತ ಬಹಳ ಉತ್ತಮ ಸಾಧನೆ ಮಾಡಿದ್ದರೂ ಸಹ ಇದು ಎರಡನೆ ಸ್ಥಾನದಲ್ಲಿದೆ.. ಶಿಕ್ಷಣದ ಆಯಾಮದಲ್ಲಿ ದೇವನಹಳ್ಳಿ ಶಾಲಾ ಮೂಲಭೂತ ಸೌಲಭ್ಯ ಸೂಚಕ, ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾರ್ಥಿ-ಶಿಕ್ಷಕ ಅನುಪಾತ, ತಲಾ ಶಿಕ್ಷಣ ವೆಚ್ಚ, ಮತ್ತು ಎಸ್‌ಎಸ್‌ಎಲ್‌ಸಿ ತೇರ್ಗಡೆ ಪ್ರಮಾಣ, ದೇವನಹಳ್ಳಿಯ ಒಟ್ಟಾರೆ ಸಾಧನೆಯ ಮೇಲೆ ಗಣನೀಯ ಪ್ರಭಾವ ಬೀರಿವೆ. ಸ.ತಾ.ಅ.ಸೂ. ನಲ್ಲಿ ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ಅನುಕ್ರಮವಾಗಿ 3 ಮತ್ತು 4ನೇ ಸ್ಥಾನಗಳಲ್ಲಿವೆ. ದೊಡ್ಡಬಳ್ಳಾಪುರ ಮೂರೂ ಆಯಮಗಳಲ್ಲಿ ಸತತವಾಗಿ 0.41-0.46 ರ ನಡುವೆ ಇದ್ದರೆ, ಹೊಸಕೋಟೆ ಜಿಲ್ಲೆಯಲ್ಲೇ ಅತ್ಯಂತ ಕಡಿಮೆ 0.22 ಆರೋಗ್ಯ ಸೂಚಕ ಹೊಂದಿದೆ. ಹೊಸಕೋಟೆಯಲ್ಲಿ ತಲಾ 1000 ಜನಸಂಖ್ಯೆಗೆ ಲಭ್ಯವಿರುವ ವೈದ್ಯರು ಮತ್ತು ನರ್ಸುಗಳು ಸಂಖ್ಯೆ ಜಿಲ್ಲೆಯಲ್ಲೇ ಅತ್ಯಂತ ಕಡಿಮೆ. ಇಲ್ಲಿ 21,383 ಜನರಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಇಡೀ ಜಿಲ್ಲೆಯನ್ನು ತೆಗೆದುಕೊಂಡರೆ ಈ ಸರಾಸರಿಸಂಖ್ಯೆ 16,312 ಇದೆ. ಇದರ ಜೊತೆಗೆ ಜಿಲ್ಲೆಯಲ್ಲಿ, ಸಾಂಕ್ರಾಮಿಕ ಕಾಯಿಲೆಗಳಿಂದ ಬಾಧಿತರಾಗುವ ಜನರ ಸಂಖ್ಯೆಯೂ (ಶೇಕಡಾವಾರು) ಹೊಸಕೋಟೆಯಲ್ಲಿ ಅತಿ ಹೆಚ್ಚು, ಶೇ. 35.84 ರಷ್ಟು. ಅಪೌಷ್ಠಿಕತೆಯಿಂದ ಬಳಲುವ ಮಕ್ಕಳ ಪ್ರಮಾಣವೂ ಅತಿ ಹೆಚ್ಚು ಶೇ. 27.08 ನಷ್ಟಿದೆ. ವಿಪರ್ಯಾಸವೆಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತಲಾ ಆರೋಗ್ಯ ವೆಚ್ಚ ಹೊಸಕೋಟೆಯಲ್ಲಿಯೇ ಅತಿ ಹೆಚ್ಚಿನದಾಗಿರುತ್ತದೆ.

ಆತಂಕದ ವಿಷಯವೆಂದರೆ, ಯಾವುದೇ ತಾಲೂಕು ಎಲ್ಲ ಸೂಚಕಗಳಲ್ಲಿ ಏಕಪ್ರಕಾರವಾದ ಉತ್ತಮ ಸಾಧನೆ ಮಾಡಿಲ್ಲ. ತಾಲೂಕುಗಳ ನಡುವೆ ವಿವಿಧ ಸೂಚಕಗಳಲ್ಲಿ ವ್ಯಾಪಕವಾದ ವ್ಯತ್ಯಾಸಗಳಿವೆ. ಜೀವನ ಮಟ್ಟ, ಆರೋಗ್ಯ ಮತ್ತು

ಶಿಕ್ಷಣ ಸುಧಾರಿಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕೂ ತಾಲೂಕುಗಳಲ್ಲಿ ಬಹಳಷ್ಟು ಪ್ರಯತ್ನಗಳ ಅಗತ್ಯವಿದೆ ಎಂಬುದನ್ನು ಇದು ತೋರಿಸುತ್ತದೆ.

## 3.8 ಆತಂಕಗಳು ಮತ್ತು ಸವಾಲುಗಳು

ಮಾನವ ಅಭಿವೃದ್ಧಿ ಸೂಚ್ಯಂಕ, ಲಿಂಗಸಂಬಂಧಿ ಅಸಮಾನತೆ ಸೂಚ್ಯಂಕ, ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ, ಆಹಾರ ಭದ್ರತೆ ಸೂಚ್ಯಂಕ ಮತ್ತು ಮಕ್ಕಳ ಅಭಿವೃದ್ಧಿ ಸೂಚ್ಯಂಕಗಳನ್ನು ನೋಡಿದಾಗ ದೇವನಹಳ್ಳಿ ಮತ್ತು ನೆಲಮಂಗಲ ತಾಲೂಕುಗಳು ಮೊದಲ ಎರಡು ಸ್ಥಾನದಲ್ಲಿದ್ದರೆ, ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳು ನಂತರ ಸ್ಥಾನದಲ್ಲಿವೆ ಎಂದು ತಿಳಿಯುತ್ತದೆ. ಮಾನವ ಅಭಿವೃದ್ಧಿ ಸೂಚ್ಯಂಕ ನೋಡಿದರೆ ದೇವನಹಳ್ಳಿ ಅತ್ಯಂತ ಕಳಪೆ ಸಾಧನೆ ಮಾಡಿದೆ. ಇದಕ್ಕೆ ತಲಾ ಆದಾಯ ಕಡಿಮೆ ಇರುವುದು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಲಭ್ಯತೆ ಸರಿಯಿಲ್ಲದಿರುವುದೇ ಕಾರಣ.

ಸೂಚ್ಯಂಕಗಳನ್ನು ಲೆಕ್ಕ ಮಾಡಲು ಬಳಸಿದ ಸೂಚಕಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಪ್ರತಿಯೊಂದು ತಾಲೂಕೂ ಒಂದು ಭಿನ್ನ ಚಿತ್ರವನ್ನು ತೋರುತ್ತದೆ, ಅಥವಾ, ಯಾವುದೇ ತಾಲೂಕೂ ಎಲ್ಲ ಸೂಚಕಗಳಲ್ಲಿ ಸ್ಥಿರವಾದ ಬೆಳವಣಿಗೆ ತೋರಿಲ್ಲ ಎನ್ನಬಹುದು. ಪ್ರತಿ ತಾಲೂಕೂ ಒಂದು ಅಥವಾ ಎರಡು ಸೂಚಕಗಳಲ್ಲಿ ಕಳಪೆ ಸಾಧನೆ ತೋರಿವೆ. ಅಂದರೆ, ದೇವನಹಳ್ಳಿ ಮತ್ತು ನೆಲಮಂಗಲ ತಾಲೂಕುಗಳಲ್ಲಿ ನಿರ್ದಿಷ್ಟ ಕ್ಷೇತ್ರಗಳಲ್ಲಿ ಹೆಚ್ಚು ಗಮನ ಮತ್ತು ಮಾರ್ಗೋಪಾಯಗಳ ಅನುಷ್ಠಾನದ ಅಗತ್ಯವಿದ್ದರೆ, ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳು ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಕ್ಷೇತ್ರಗಳಲ್ಲೂ ಸುಧಾರಿಸಬೇಕಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿಯ ಸ್ಥಿತಿಗತಿಗಳನ್ನು ಸುಧಾರಿಸಲು ಗಮನ ನೀಡಬೇಕಾದ ನಿರ್ದಿಷ್ಟ ಕ್ಷೇತ್ರಗಳು ಯಾವುವೆಂದರೆ:

ತಾಯಿಂದಿರ ಮರಣ ಪ್ರಮಾಣ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕೂ ತಾಲೂಕುಗಳಲ್ಲಿ ಇದು ಬಹಳ ಹೆಚ್ಚಿದೆ. ಬೇರೆ ವಿಷಯಗಳಲ್ಲಿ ಉತ್ತಮ ಸಾಧನೆ ಮಾಡಿರುವ ನೆಲಮಂಗಲ ತಾಲೂಕಿನಲ್ಲಿ ಇದು ಅತಿ ಹೆಚ್ಚಿದೆ.

ಮಹಿಳಾ ಕೃಷಿ ಕೂಲಿ ದರ: ಪುರುಷ ಮತ್ತು -ಮಹಿಳೆಯ ನಡುವಣ ಕೂಲಿಯ ದರಗಳಲ್ಲಿ ಬಹಳ ಅಂತರವಿದೆ, ಇದನ್ನು ಸರಿಪಡಿಸುವ ಅಗತ್ಯವಿದೆ. ಮಹಿಳೆಯ ಕೃಷಿ ಕೂಲಿ ದರಗಳನ್ನು ಹೆಚ್ಚಿಸಬೇಕಿದೆ. ಮಹಿಳೆಯ ಆದಾಯ ಹೆಚ್ಚಿದ್ದರೆ ಅವರ ಯೋಗಕ್ಷೇಮವೂ ಸುಧಾರಿಸುತ್ತದೆ ಮತ್ತು ಮನೆಯ ಪರಿಸ್ಥಿತಿಯೂ ಸುಧಾರಿಸುತ್ತದೆ, ವಿಶೇಷವಾಗಿ ಚಿಕ್ಕ ಮಕ್ಕಳ ಶಿಕ್ಷಣ, ಆರೋಗ್ಯ ಇತ್ಯಾದಿಗಳು ಉತ್ತಮಗೊಳ್ಳುತ್ತವೆ.

ಮಕ್ಕಳಲ್ಲಿ ಅಪೌಷ್ಠಿಕತೆ: 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಅಪೌಷ್ಠಿಕತೆಯಿಂದಾಗಿ ಕಡಿಮೆ ತೂಕದವರಾಗಿರುವ ಪ್ರಕರಣಗಳು ಜಿಲ್ಲೆಯ ಸರಾಸರಿಗೆ ಹೋಲಿಸಿದರೆ ದೇವನಹಳ್ಳಿ ಮತ್ತು ಹೊಸಕೋಟೆ ತಾಲೂಕುಗಳಲ್ಲಿ ಬಹಳ ಹೆಚ್ಚು. ಇದರಲ್ಲಿ ಸೂಕ್ತ ಕ್ರಮ ಮತ್ತು ಉಸ್ತುವಾರಿಯ ಅಗತ್ಯವಿದೆ. ಗರ್ಭಿಣಿ ಸ್ತ್ರೀಯರು ಮತ್ತು 5 ವರ್ಷದ ಒಳಗಿನ ಮಕ್ಕಳಿಗೆ ಸಾಕಷ್ಟು ಪೌಷ್ಟಿಕಾಂಶ ಸಿಗುವಂತಾಗಬೇಕು. ಇದು ಜನರ ಆರೋಗ್ಯ, ಶಿಕ್ಷಣ ಮತ್ತು ಜೀವನೋಪಾಯಗಳ ಸ್ಥಿತಿಗತಿಗಳ ಮೇಲೆ ದೀರ್ಘಕಾಲಿಕ ಪ್ರಭಾವ ಬೀರುತ್ತದೆ.

ನಗರ ಸೇವಾ ಸೌಲಭ್ಯಗಳು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕೂ ತಾಲೂಕುಗಳಲ್ಲಿ ನಗರಾಭಿವೃದ್ಧಿ ಸೂಚ್ಯಂಕದಲ್ಲಿ ಸಾಧನೆ ಉತ್ತಮವಾಗಿಲ್ಲ. ನಗರದ ಮೂಲಭೂತ ಸೌಲಭ್ಯಗಳು ಮತ್ತು ಸೇವೆಗಳ ಗುಣಮಟ್ಟ ಸುಧಾರಿಸುವುದರ ಜೊತೆಗೆ ಲಭ್ಯವಿರುವ ಸಂಪನ್ಮೂಲಗಳ ದಕ್ಷ ನಿರ್ವಹಣೆ ಮತ್ತು ಬಳಕೆ ಆಗಬೇಕಿದೆ.

ಆಹಾರ ಭದ್ರತೆ: ನಾಲ್ಕೂ ತಾಲೂಕುಗಳಲ್ಲಿ ಆಹಾರ ಭದ್ರತೆ ಸೂಚ್ಯಂಕದಲ್ಲಿ ಲಭ್ಯತೆಯ ಸೂಚ್ಯಂಕ ಬಹಳ ಕಡಿಮೆಯಿದೆ. ಇದು ಆಹಾರದ ಲಭ್ಯತೆ ಮತ್ತು ದೊರೆಗೊಳ್ಳುವಿಕೆಯ ಬಗ್ಗೆ ಇರುವ ಗಂಭೀರವಾದ ಅಡೆತಡೆಗಳನ್ನು ಸೂಚಿಸುತ್ತದೆ. ಇದಕ್ಕೆ ತಕ್ಷಣ ಗಮನ ನೀಡಬೇಕು ಮತ್ತು ಸೂಕ್ತ ಪರಿಹಾರಗಳನ್ನು ಒದಗಿಸಬೇಕು. ಇದು ಅಪೌಷ್ಠಿಕತೆ ಮತ್ತು ತಾಯಂದಿರ ಮರಣ ಪ್ರಮಾಣಕ್ಕೂ ಸಂಬಂಧ ಹೊಂದಿದೆ. ಆಹಾರ ಭದ್ರತೆ ಹೆಚ್ಚಿದರೆ ಈ ಸಮಸ್ಯೆಗಳ ಮೇಲೆ ಧನಾತ್ಮಕ ಪರಿಣಾಮ ಉಂಟಾಗುತ್ತದೆ.



# ಸಾಕ್ಷರತೆ ಮತ್ತು ಶಿಕ್ಷಣ








“ಓದಲು ಅಥವಾ ಬರೆಯಲು ಅಥವಾ ಎಣಿಸಲು ಅಥವಾ ಸಂವಹಿಸಲು ಸಾಧ್ಯವಿಲ್ಲದಿರುವುದು ಒಂದು ಭಾರಿ ನಷ್ಟ ಉಂಟುಮಾಡುತ್ತದೆ. ಈ ನಷ್ಟದಿಂದ ತೀವ್ರವಾದ ಅಭದ್ರತೆ ಉಂಟಾಗುತ್ತದೆ ಮತ್ತು ಆ ಹಣೆಬರಹವನ್ನು ತಪ್ಪಿಸುವ ಕೊನೆಯ ಅವಕಾಶವೂ ಕಳೆದುಹೋಗುತ್ತದೆ”, ಅಮಾರ್ತ್ಯ ಸೇನ್, 2003 ನಲ್ಲಿ ಕಾಮನ್‌ವೆಲ್ತ್ ಎಜುಕೇಷನ್ ಕಾನ್ಫರೆನ್ಸ್‌ನಲ್ಲಿ ನುಡಿದದ್ದು.

## 4.1. ಪ್ರಸ್ತಾವನೆ

ಮಾನವ ಹಕ್ಕುಗಳ ವಿಶ್ವ ಘೋಷಣೆ (1948) ಶಿಕ್ಷಣದ ಸಾರ್ವತ್ರಿಕ ಲಭ್ಯತೆಯನ್ನು ಮೂಲಭೂತ ಹಕ್ಕುಗಳಲ್ಲಿ ಒಂದೆಂದು ಗುರುತಿಸಿದೆ. ಮಾನವನ ಅಭಿವೃದ್ಧಿಗೆ ಕೊಡುಗೆ ನೀಡುವ ಒಂದು ಅತಿ ಮುಖ್ಯ ಅಂಶವೆಂದು ಶಿಕ್ಷಣವನ್ನು ಸಾರ್ವತ್ರಿಕವಾಗಿ ಮಾನ್ಯ ಮಾಡಲಾಗಿದೆ. ಸರ್ವರಿಗೂ ಶಿಕ್ಷಣ ಬಗೆಗಿನ ವಿಶ್ವ ಘೋಷಣೆ ಮತ್ತು 2000 ದಲ್ಲಿ ಶಿಕ್ಷಣದ ಬಗೆಗಿನ ಡಾಕರ್ ಶೃಂಗಸಭೆ, ವ್ಯಕ್ತಿ ಹಾಗೂ ಸಮಾಜದ ಅಭಿವೃದ್ಧಿಗೆ ಶಿಕ್ಷಣವು ಅತ್ಯಗತ್ಯ ಎಂದು ಘೋಷಿಸಿವೆ. ಶಿಕ್ಷಣದಲ್ಲಿ ಅಂತರ್ಗತ ಹಾಗೂ ಸಾಧನವಾಗುವ, ಎರಡೂ ಮೌಲ್ಯಗಳು ಇವೆ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಿ ಆಯ್ಕೆಗಳನ್ನು ವ್ಯಾಪಕಗೊಳಿಸುವಲ್ಲಿ ಅಪ್ರಮಾಣ ಪಾತ್ರದ ಬಗ್ಗೆ ಸಾಕಷ್ಟು ಬರೆದಾಗಿದೆ. ಮಾನವ ಅಭಿವೃದ್ಧಿಗೆ ಶಿಕ್ಷಣದ ಲಭ್ಯತೆ ಎಂಬ ಒಂದು ಅಂಶ ಮಾನವ ಅಭಿವೃದ್ಧಿಗೆ ಕೊಡುಗೆ ನೀಡುವ ಇನ್ನಿತರ ಸೇವೆಗಳನ್ನು ಪಡೆಯುವಲ್ಲಿಯೂ ಪ್ರಭಾವ ಬೀರುತ್ತದೆ.

ತುರ್ಕಿ, ನೇಪಾಳ, ಬೊಲಿವಿಯ, ಮೆಕ್ಸಿಕೊ, ಮತ್ತು ನೈಜೀರಿಯಾಗಳಂತಹ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನಡೆಸಿದ ಸಂಶೋಧನೆಗಳು, ಸಬಲೀಕರಣಕ್ಕೆ ಅದರಲ್ಲೂ ವಿಶೇಷವಾಗಿ ಕಡೆಗಾಣಿಸಲ್ಪಟ್ಟ ವರ್ಗಗಳ ಸಬಲೀಕರಣಕ್ಕೆ ಬಲ ತುಂಬುತ್ತದೆ ಎಂದು ರುಜುವಾತು ಮಾಡಿವೆ[15] (Education for All: Global Monitoring Report, 2006, Chapter 5). ಶಿಕ್ಷಣ ಎಲ್ಲ ಮಟ್ಟಗಳಲ್ಲೂ ವ್ಯಕ್ತಿ, ಸಮೂಹ ಮತ್ತು ಸಮಾಜದ ಯೋಗಕ್ಷೇಮವನ್ನು ಹೆಚ್ಚಿಸುತ್ತದೆ. ಶಿಕ್ಷಣದ ಪ್ರಕ್ರಿಯೆಯಲ್ಲಿ ಮತ್ತು ಜ್ಞಾನದ ಲಭ್ಯತೆಗಳಲ್ಲಿ ಭಾಗಗೊಳ್ಳುವುದು ಮಹಿಳೆಯರು ಅಥವಾ ದಲಿತರಂತಹ ದುರ್ಬಲ ವರ್ಗಗಳಿಗೆ ಇನ್ನೂ ಹೆಚ್ಚು ಮುಖ್ಯವಾಗುತ್ತದೆ. ವ್ಯಕ್ತಿಯ ಮಟ್ಟದಲ್ಲಿ ಅದು ಅಂತಃಸತ್ವವನ್ನು ಹೆಚ್ಚಿಸಿ ಬುದ್ಧಿವಂತ ಆಯ್ಕೆಗಳನ್ನು ಮಾಡಲು ಆತನನ್ನು ಸಜ್ಜಾಗಿಸುತ್ತದೆ. ಸಮೂಹದ ಮಟ್ಟದಲ್ಲಿ ಸಾರ್ವಜನಿಕ ಕ್ರಿಯೆಗಳಿಗೆ ಧ್ವನಿ ಮತ್ತು ಚಲನೆ ನೀಡುತ್ತದೆ. ಸಮಾಜದ ಮಟ್ಟದಲ್ಲಿ ಅವಕಾಶಗಳ ಮತ್ತು ಸಾಧನೆಗಳ ಅಸಮಾನತೆಗಳನ್ನು ಕಡಿಮಮಾಡುತ್ತದೆ.

## 4.2. ಸಾಕ್ಷರತೆ - ಸ್ಥೂಲ ಚಿತ್ರಣ

ಸಾಕ್ಷರತೆಯನ್ನು ಗ್ರಾಹ್ಯ ಕೌಶಲಗಳು ಎಂದು ವಿವರಿಸಲಾಗುತ್ತದೆ. ನಿರ್ದಿಷ್ಟವಾಗಿ ಓದುವ ಮತ್ತು ಬರೆಯುವ ಕೌಶಲಗಳು. ಇವು ಯಾವ ಸಂದರ್ಭದಲ್ಲಿ ಪಡೆದುಕೊಂಡಿದ್ದು ಅಥವಾ ಪಡೆದುಕೊಂಡವನ ಹಿನ್ನೆಲೆಯಿಂದ ಹೊರತಾಗಿರುತ್ತವೆ. ಭಾರತದ ಜನಗಣತಿ ಸಾಕ್ಷರ ವ್ಯಕ್ತಿಯನ್ನು ಹೀಗೆ ವಿವರಿಸುತ್ತದೆ-ಯಾವುದೇ ಒಂದು ಭಾಷೆಯಲ್ಲಿ ಅರ್ಥಮಾಡಿಕೊಂಡು ಓದಲು ಮತ್ತು ಬರೆಯಲು ಸಮರ್ಥನಾದವನು. ಯುನೆಸ್ಕೊ ಪ್ರಕಾರ ಕಳೆದ ಒಂದು ದಶಕದಲ್ಲಿ ಸಾಕ್ಷರತೆಯ ವಿವರಣೆಯು ಬರಿಯ ಓದುವುದು ಮತ್ತು ಬರೆಯುವುದಕ್ಕಿಂತ ಮುಂದೆ ಹೋಗಿದೆ. ಅರ್ಥಮಾಡಿಕೊಂಡಿದ್ದನ್ನು ಮತ್ತು ಮುದ್ರಿತ ಮಾಹಿತಿಗಳನ್ನು ಮನೆಯಲ್ಲಿ, ಕೆಲಸದಲ್ಲಿನ ದೈನಂದಿನ ಚಟುವಟಿಕೆಗಳಲ್ಲಿ ಮತ್ತು ಸಮುದಾಯದಲ್ಲಿ ಅಳವಡಿಸಿಕೊಳ್ಳುವ ಸಾಮರ್ಥ್ಯ, ವ್ಯಕ್ತಿಯ ಗುರಿಗಳನ್ನು ಸಾಧಿಸುವುದು ಮತ್ತು ಅವನ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು. ಯುನೆಸ್ಕೊ ಸಾಕ್ಷರತೆಯನ್ನು ಒಂದು ಕೌಶಲವೆಂದು ಪರಿಗಣಿಸುತ್ತದೆ ಜೊತೆಗೆ ಅದನ್ನು ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ನಿರ್ಧರಿಸಿದ ಅಭ್ಯಾಸಗಳ ಒಂದು ಕಂತೆ ಎನ್ನುತ್ತದೆ. ಹ್ಯಾಂಬರ್ಗ್ ಘೋಷಣೆ (1997) ಸಾಕ್ಷರತೆಯನ್ನು ಜೀವನಪರ್ಯಂತ ಕಲಿಕೆಗೆ ಅಗತ್ಯ ಮತ್ತು ಸಮುದಾಯದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಪ್ರಚೋದಕ ಎನ್ನುತ್ತದೆ.

ಕೋಷ್ಟಕ 4.1 ತೋರುವಂತೆ ಕಳೆದ ಒಂದು ದಶಕದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾಕ್ಷರತಾ ಪ್ರಮಾಣದಲ್ಲಿ ಗಣನೀಯ ಹೆಚ್ಚಳ ಕಂಡುಬಂದಿದೆ. ಸಾಕ್ಷರತಾ ಪ್ರಮಾಣ ಗ್ರಾಮೀಣ ಮತ್ತು ನಗರ ಭಾಗಗಳೆರಡರಲ್ಲೂ ಹೆಚ್ಚಿದೆ. ನಗರ ಭಾಗಗಳಿಗಿಂತ ಗ್ರಾಮೀಣ ಭಾಗಗಳಲ್ಲೇ ಹೆಚ್ಚು ಗಣನೀಯವಾಗಿದೆ. ಇಷ್ಟಾದರೂ ನಗರ ಮತ್ತು ಗ್ರಾಮೀಣ ಭಾಗಗಳ ನಡುವಣ ಸಾಕ್ಷರತಾ ಪ್ರಮಾಣಗಳ ಅಂತರ ಸಾಕಷ್ಟಿದೆ. ಇಡೀ ಕರ್ನಾಟಕಕ್ಕೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮುಂದಿದೆ. ಆದರೆ ನಗರ ಭಾಗಗಳಲ್ಲಿ ಈ ಅಂತರ ಕಡಿಮೆಯಿದೆ.

**ಕೋಷ್ಟಕ: 4.1: 2001 ಮತ್ತು 2011ರಲ್ಲಿ ಸಾಕ್ಷರತಾ ಪ್ರಮಾಣಗಳು**

| ತಾಲೂಕು/ಜಿಲ್ಲೆ/ರಾಜ್ಯ | 2001 | | | 2011 | | |
|---|---|---|---|---|---|---|
| | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ | ಒಟ್ಟು |
| ದೇವನಹಳ್ಳಿ | 65.99 | 73.66 | 68.17 | 75.02 | 80.84 | 76.76 |
| ದೊಡ್ಡಬಳ್ಳಾಪುರ | 65.90 | 77.10 | 69.14 | 74.07 | 85.74 | 78.00 |
| ಹೊಸಕೋಟೆ | 67.32 | 78.71 | 69.18 | 75.79 | 86.22 | 77.98 |
| ನೆಲಮಂಗಲ | 69.90 | 86.43 | 72.30 | 75.81 | 89.52 | 78.91 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 63.23 | 84.02 | 74.84 | 75.16 | 85.37 | 77.93 |
| ಕರ್ನಾಟಕ | 59.33 | 80.58 | 66.64 | 68.73 | 85.78 | 75.36 |

ಮೂಲ: 2001 ಮತ್ತು 2011 ಜನಗಣತಿ

**ಚಿತ್ರ 4.1: ತಾಲೂಕುವಾರು ಸಾಕ್ಷರತಾ ಪ್ರಮಾಣಗಳು, 2001 ಮತ್ತು 2011**




[15] ಸರ್ವರಿಗೂ ಶಿಕ್ಷಣ: ಜಾಗತಿಕ ಸಂಯೋಜನಾ ವರದಿ, 2006, ಅಧ್ಯಾಯ 5

ಸಾಕ್ಷರತಾ ಪ್ರಮಾಣಗಳನ್ನು ಬಿಡಿ ಬಿಡಿಯಾಗಿ ನೋಡಿದಾಗ ಎಲ್ಲ ನಾಲ್ಕೂ ತಾಲೂಕುಗಳಲ್ಲಿ ಗಣನೀಯ ಸುಧಾರಣೆ ಆಗಿರುವುದು ಕಂಡುಬರುತ್ತದೆ. ಉಳಿದ ಮೂರಕ್ಕೆ ಹೋಲಿಸಿದರೆ ನೆಲಮಂಗಲದಲ್ಲಿ ಇದು ಸ್ವಲ್ಪ ಹೆಚ್ಚು (ಚಿತ್ರ 4.1). ಕೋಷ್ಟಕ 4.2 ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣಗಳಲ್ಲಿ ಲಿಂಗ ತಾರತಮ್ಯವಿದೆ ಎಂದು ತೋರಿಸುತ್ತದೆ. ರಾಜ್ಯಕ್ಕೆ ಹೋಲಿಸಿದರೆ ಈ ತಾರತಮ್ಯ ಕಡಿಮೆಯಿದೆ. ಈ ದಶಕದಲ್ಲಿ ಎಲ್ಲ ನಾಲ್ಕು ತಾಲೂಕುಗಳು ಮಹಿಳಾ ಸಾಕ್ಷರತಾ ಪ್ರಮಾಣಗಳಲ್ಲಿ ಏರಿಕೆ ದಾಖಲಿಸಿವೆಯಾದರೂ ಲಿಂಗ ತಾರತಮ್ಯ ಇನ್ನೂ ಇದೆ. ಕೋಷ್ಟಕ 4.3 ತೋರುವಂತೆ ಗ್ರಾಮೀಣ ಮತ್ತು ನಗರ ಭಾಗಗಳ ಮಹಿಳೆಯರ ಸಾಕ್ಷರತಾ ಪ್ರಮಾಣಗಳ ನಡುವೆ ವ್ಯಾಪಕ ಅಂತರವಿದೆ. ಆದರೆ ಪುರುಷರ ವಿಷಯದಲ್ಲಿ ಈ ಅಂತರ ಅಷ್ಟು ಹೆಚ್ಚಿಲ್ಲ. ಎಲ್ಲ ತಾಲೂಕುಗಳಲ್ಲೂ ಗ್ರಾಮೀಣ ಭಾಗಗಳ ಮಹಿಳಾ ಸಾಕ್ಷರತಾ ಪ್ರಮಾಣ ಅತ್ಯಂತ ಕಡಿಮೆಯಿದೆ ಮತ್ತು ನಗರ ಭಾಗಗಳ ಪುರುಷರ ಸಾಕ್ಷರತಾ ಪ್ರಮಾಣ ಅತಿ ಹೆಚ್ಚಿದೆ. ಈ ಪರಿಸ್ಥಿತಿ 2001 ಮತ್ತು 2011 ಅವಧಿಯಲ್ಲಿ ಬದಲಾಗಿಲ್ಲ.

**ಕೋಷ್ಟಕ 4.2: ಲಿಂಗ ವರ್ಗೀಕರಿಸಿದ ಸಾಕ್ಷರತಾ ಪ್ರಮಾಣಗಳು (2001 ಮತ್ತು 2011)**

| ತಾಲೂಕು/ಜಿಲ್ಲೆ/ರಾಜ್ಯ | ಪುರುಷರ ಸಾಕ್ಷರತಾ ಪ್ರಮಾಣ 2001 | ಮಹಿಳೆಯರ ಸಾಕ್ಷರತಾ ಪ್ರಮಾಣ 2001 | ಪುರುಷರ ಸಾಕ್ಷರತಾ ಪ್ರಮಾಣ 2011 | ಮಹಿಳೆಯರ ಸಾಕ್ಷರತಾ ಪ್ರಮಾಣ 2011 |
|---|---|---|---|---|
| ದೇವನಹಳ್ಳಿ | 77.63 | 58.16 | 83.84 | 69.24 |
| ದೊಡ್ಡಬಳ್ಳಾಪುರ | 78.98 | 58.80 | 85.18 | 70.44 |
| ಹೊಸಕೋಟೆ | 78.20 | 59.51 | 84.45 | 71.01 |
| ನೆಲಮಂಗಲ | 81.42 | 62.75 | 85.76 | 71.79 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 82.21 | 66.98 | 84.82 | 70.63 |
| ಕರ್ನಾಟಕ | 76.10 | 56.87 | 82.47 | 68.08 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 4.3: ಲಿಂಗ ಮತ್ತು ಪ್ರದೇಶವಾರು ಸಾಕ್ಷರತಾ ಪ್ರಮಾಣಗಳು (2001 ಮತ್ತು 2011)**

| ತಾಲೂಕು/ಜಿಲ್ಲೆ/ರಾಜ್ಯ | ಪುರುಷ | | | | ಮಹಿಳೆ | | | |
|---|---|---|---|---|---|---|---|---|
| | ಗ್ರಾಮೀಣ | | ನಗರ | | ಗ್ರಾಮೀಣ | | ನಗರ | |
| | 2001 | 2011 | 2001 | 2011 | 2001 | 2011 | 2001 | 2011 |
| ದೇವನಹಳ್ಳಿ | 76.40 | 82.89 | 80.72 | 86.10 | 55.02 | 66.58 | 66.14 | 75.37 |
| ದೊಡ್ಡಬಳ್ಳಾಪುರ | 77.14 | 82.71 | 83.44 | 89.98 | 54.16 | 65.07 | 70.34 | 81.19 |
| ಹೊಸಕೋಟೆ | 77.08 | 83.11 | 83.91 | 89.58 | 56.85 | 67.89 | 73.11 | 82.68 |
| ನೆಲಮಂಗಲ | 79.75 | 83.59 | 91.06 | 93.26 | 59.66 | 67.70 | 81.41 | 85.68 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 73.77 | 83.06 | 88.68 | 89.57 | 52.35 | 66.80 | 78.91 | 80.95 |
| ಕರ್ನಾಟಕ | 70.45 | 77.61 | 86.66 | 90.04 | 48.01 | 59.71 | 74.12 | 81.36 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 4.4: ಸಾಕ್ಷರ ಮತ್ತು ಅನಕ್ಷರ ಜನಸಂಖ್ಯೆ (2001 ಮತ್ತು 2011)**

| ತಾಲೂಕು/ಜಿಲ್ಲೆ | 2001 | | | 2011 | | | 2001 ಮತ್ತು 2011 ನಡುವೆ ಅನಕ್ಷರ ಜನಸಂಖ್ಯೆಗಳ ನಡುವಣ ವ್ಯತ್ಯಾಸ (ಶೇ.) |
|---|---|---|---|---|---|---|---|
| | ಜನಸಂಖ್ಯೆ (17 ಮತ್ತು ಹೆಚ್ಚಿನ ವಯಸ್ಕರು) | ಸಾಕ್ಷರ ಜನಸಂಖ್ಯೆ | ಅನಕ್ಷರ ಜನಸಂಖ್ಯೆ | ಜನಸಂಖ್ಯೆ (17 ಮತ್ತು ಹೆಚ್ಚಿನ ವಯಸ್ಕರು) | ಸಾಕ್ಷರ ಜನಸಂಖ್ಯೆ | ಅನಕ್ಷರ ಜನಸಂಖ್ಯೆ | |
| ದೇವನಹಳ್ಳಿ | 161,886 | 110,358 | 74,968 | 186,612 | 143,244 | 66,378 | -10.74 |
| ದೊಡ್ಡಬಳ್ಳಾಪುರ | 234,180 | 161,902 | 106,430 | 268,922 | 209,756 | 89,838 | -12.04 |
| ಹೊಸಕೋಟೆ | 193,383 | 133,790 | 88,640 | 239,790 | 186,979 | 83,839 | -10.87 |
| ನೆಲಮಂಗಲ | 154,218 | 111,500 | 63,380 | 188,537 | 148,770 | 62,119 | -8.15 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 743,667 | 517,550 | 333,418 | 883,861 | 688,749 | 302,174 | -10.65 |

ಮೂಲ: ಭಾರತೀಯ ಜನಗಣತಿ

ಕೋಷ್ಟಕ 4.4, 2001 ಮತ್ತು 2011 ನಡುವೆ ಅನಕ್ಷರಸ್ಥರ ಸಂಖ್ಯೆ ಎಲ್ಲ 4 ತಾಲೂಕುಗಳಲ್ಲೂ ಇಳಿಮುಖವಾಗಿದೆ ಎಂಬುದನ್ನು ತೋರಿಸುತ್ತದೆ. ಇದು ಗಣನೀಯ. ಕಾರಣ, ಸಾಕ್ಷರತೆ ಪ್ರಮಾಣ ಹೆಚ್ಚಿದರೆ ಅನಕ್ಷರಸ್ಥರ ಸಂಖ್ಯೆ ಇಳಿಮುಖವಾಗಬೇಕೆಂದಿಲ್ಲ. ಜನಸಂಖ್ಯೆ ಸಹಜವಾಗಿ ಹೆಚ್ಚಿದಾಗ ಸಾಕ್ಷರಸ್ಥರ ಸಂಖ್ಯೆಯೂ ಅಷ್ಟೇ ಹೆಚ್ಚಿದರೆ ಮಾತ್ರ ಅನಕ್ಷರಸ್ಥರ ಸಂಖ್ಯೆ ಕಡಿಮೆಯಾಗುತ್ತದೆ. 2011ರಲ್ಲಿ 7 ಮತ್ತು ಮೇಲ್ಪಟ್ಟ ವಯಸ್ಸಿನ ಅನಕ್ಷರಸ್ಥರ ಸಂಖ್ಯೆ 3 ಲಕ್ಷಕ್ಕಿಂತ ಸ್ವಲ್ಪ ಹೆಚ್ಚಿತ್ತು.

### 4.2.1. ಕಾರ್ಯನೀತಿ ಪ್ರತಿಕ್ರಿಯೆ

ವಯಸ್ಕರಲ್ಲಿ ಅನಕ್ಷರತೆಯನ್ನು ತೊಲಗಿಸಲು ಕೈಗೊಂಡ ಪ್ರಮುಖ ಕಾರ್ಯನೀತಿ ಪ್ರತಿಕ್ರಿಯೆಗಳೆಂದರೆ ಸಂಪೂರ್ಣ ಸಾಕ್ಷರತಾ ಅಭಿಯಾನ (ಟಿಎಲ್‌ಸಿ) ನಂತರ ಸಾಕ್ಷರ್ ಭಾರತ್ ಮಿಷನ್ (ಎಸ್‌ಬಿಎಂ). ಟಿಎಲ್‌ಸಿ ಯಂತೆ ಎಸ್‌ಬಿಎಂ ಕೂಡ ಕೇಂದ್ರ ಪ್ರಾಯೋಜಕತ್ವದ ಒಂದು ಯೋಜನೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ ಒಳಗೊಂಡಿವೆ. ಕರ್ನಾಟಕ ರಾಜ್ಯ ಸರ್ಕಾರ ಈ ಯೋಜನೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯೂ ಸೇರಿದಂತೆ ಎಲ್ಲ ಜಿಲ್ಲೆಗಳಲ್ಲೂ ಅನುಷ್ಠಾನ ಮಾಡಿದೆ. ಸಾಕ್ಷರ್ ಭಾರತ್ ಮಿಷನ್‌ನ ಗುರಿ, ವಯಸ್ಕರ ಶಿಕ್ಷಣವನ್ನು ವಿಶೇಷವಾಗಿ ಮಹಿಳೆಯರ ವಿಷಯದಲ್ಲಿ ಉತ್ತೇಜಿಸುವುದು ಮತ್ತು ಬಲಪಡಿಸುವುದು. ಪ್ರಾಥಮಿಕ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ (ಔಪಚಾರಿಕ ಶಿಕ್ಷಣಕ್ಕೆ ಸಮನಾದ), ವೃತ್ತಿಪರ ಶಿಕ್ಷಣ, ಇತ್ಯಾದಿ ಶೈಕ್ಷಣಿಕ ಆಯ್ಕೆಗಳಿವೆ. ಸಾಕ್ಷರ್ ಭಾರತ್ ಮಿಷನ್, ರಾಷ್ಟ್ರೀಯ ಸಾಕ್ಷರತಾ ಮಿಷನ್, ನಿರಂತರ ಶಿಕ್ಷಣ ಕಾರ್ಯಕ್ರಮ ಮತ್ತು ವಿಶೇಷ ಅಂಶಗಳ ಕಾರ್ಯಕ್ರಮಗಳು ಸಮ್ಮಿಶ್ರಗೊಂಡು ಒಟ್ಟು 14 ನಿರಂತರ ಶಿಕ್ಷಣ ಶಿಬಿರಗಳು ನಡೆದವು ಹಾಗೂ 260 ಹೊಸ ಸಾಕ್ಷರರು ನೋಂದಾಯಿಸಿಕೊಂಡರು ಎಂದು ಹೊಸ ಸಾಕ್ಷರರರ ಪ್ರಗತಿ ವರದಿ ದಿನಾಂಕ 31.03.2013 ಹೇಳುತ್ತದೆ. ಈ ಯೋಜನೆಗೆ ಮೊದಲು ಕರ್ನಾಟಕ ಸರ್ಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಂಪೂರ್ಣ ಸಾಕ್ಷರತಾ ಮಿಷನ್ ಅನ್ನು ನಡೆಸಿತು. 1.31 ಲಕ್ಷ ಪುರುಷರು ಮತ್ತು 1.86 ಲಕ್ಷ ಮಹಿಳೆಯರನ್ನು ಸಾಕ್ಷರರನ್ನಾಗಿಸುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. 9 ವರ್ಷಗಳ ಅವಧಿಯಲ್ಲಿ 24 ಸಾವಿರ ಪುರುಷರು ಮತ್ತು 24 ಸಾವಿರ ಮಹಿಳೆಯರು ಸಾಕ್ಷರರಾಗಿದ್ದಾರೆ (Total Literacy Campaign, progress report, 1990-99, Government of Karnataka).

## 4.3 ಪ್ರಾಥಮಿಕ ಶಿಕ್ಷಣ

ಶಿಕ್ಷಣದ ಹಕ್ಕು, 2009 (ಶಿಕ್ಷಣ ಹಕ್ಕು) ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿಸಿದೆ. ಆದ್ದರಿಂದ ಇದು ನ್ಯಾಯಬದ್ಧ ಹಕ್ಕು. ಶಿಕ್ಷಣ ಹಕ್ಕು ಅಡಿಯಲ್ಲಿ 6-14 ವಯೋಮಿತಿಯಲ್ಲಿರುವ ಪ್ರತಿಯೊಂದು ಮಗುವೂ ಕಡ್ಡಾಯವಾಗಿ 8 ವರ್ಷಗಳ ಗುಣಮಟ್ಟದ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿದೆ. ಗುಣಮಟ್ಟವನ್ನು ಖಚಿತಪಡಿಸಲು ಮೂಲಭೂತ ಸೌಲಭ್ಯ, ಮಧ್ಯಾಹ್ನದ ಬಿಸಿ ಊಟ, ಉಚಿತ ಪಠ್ಯ ಪುಸ್ತಕಗಳು, ಸಮವಸ್ತ್ರಗಳು, ತರಬೇತುಗೊಂಡ ಮತ್ತು ಅರ್ಹ ವಿದ್ಯಾವಂತ ಶಿಕ್ಷಕರು, ಮತ್ತು ಉತ್ತಮ ಶಾಲಾ ಪರಿಸರ ಇತ್ಯಾದಿಗಳ ಮಾನದಂಡಗಳನ್ನು ಹಾಕಿಕೊಡಲಾಗಿದೆ. ಕರ್ನಾಟಕ ರಾಜ್ಯ ನಿರ್ದಿಷ್ಟ ಶಿಕ್ಷಣ ಹಕ್ಕು ನಿಯಮಾವಳಿಗಳನ್ನು 2012ರಲ್ಲಿ ಅಳವಡಿಸಿಕೊಂಡಿದೆ. ಈ ಸಂದರ್ಭದಲ್ಲಿ ರಾಜ್ಯದ ವಿಶಿಷ್ಟ ಸ್ಥಳೀಯ ಗುಣಲಕ್ಷಣಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಲಾಗಿದೆ. ಇದರ ಉದ್ದೇಶ, ರಾಜ್ಯದಲ್ಲಿ ಈ ಅಧಿನಿಯಮವನ್ನು ಸುಸೂತ್ರವಾಗಿ, ಅಪ್ರಮಾಣ ನಿಜವಾದ ಅರ್ಥದಲ್ಲಿ ಅನುಷ್ಠಾನಗೊಳಿಸುವುದು.

### 4.3.1 ಲಭ್ಯತೆ ಮತ್ತು ದಾಖಲಾತಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1,323 ಪ್ರಾಥಮಿಕ ಶಾಲೆಗಳಿವೆ. 2001-2011 ಅವಧಿಯಲ್ಲಿ ದೇವನಹಳ್ಳಿ ಮತ್ತು ಹೊಸಕೋಟೆ ತಾಲೂಕೆಗಳಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆಯಾಗಿದ್ದರೆ, ಉಳಿದೆರಡು ತಾಲೂಕುಗಳಲ್ಲಿ ಹೆಚ್ಚುಕಡಿಮೆ ಬದಲಾವಣೆಯಿಲ್ಲ. ಎಲ್ಲ 4 ತಾಲೂಕುಗಳಲ್ಲೂ ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚಿವೆ. ಕಾರಣ, ಖಾಸಗಿ ಶಾಲೆಗಳಿಗೆ ಇರುವ ಬೇಡಿಕೆ. ಆದರೆ ಈಗಲೂ ಒಟ್ಟು ಶಾಲೆಗಳಲ್ಲಿ ಶೇ. 86 ರಷ್ಟು ಸರ್ಕಾರಿ ಶಾಲೆಗಳು ಎನ್ನುವುದು ಗಮನಾರ್ಹ ಸಂಗತಿಯಾಗಿದೆ.

ಖಾಸಗಿ ಶಾಲೆಗಳಿಗೆ ಬೇಡಿಕೆ ಹೆಚ್ಚು ಎನ್ನುವ ದೃಷ್ಟಿಯಿಂದ ಅವುಗಳ ಸಂಖ್ಯೆಯೂ ಹೆಚ್ಚಿದೆ ಎನ್ನುವ ಹಿನ್ನೆಲೆಯಲ್ಲಿ ಆ ಶಾಲೆಗಳು ಒದಗಿಸುವ ಸೌಲಭ್ಯಗಳು ಮತ್ತು ಶಿಕ್ಷಣದ ಗುಣಮಟ್ಟವನ್ನು ಪರಿಶೀಲಿಸಬೇಕು. ಪ್ರತಿ ತಾಲೂಕಿನಲ್ಲಿ 2 ಶಾಲೆಗಳಂತೆ 8 ಖಾಸಗಿ ಶಾಲೆಗಳಲ್ಲಿ ಒಂದು ಸಣ್ಣ ಅಧ್ಯಯನ ಮಾಡಲಾಯಿತು. ಇದರಲ್ಲಿ ಭೌತಿಕ ಮೂಲಭೂತ ಸೌಲಭ್ಯ, ಶಿಕ್ಷಕರು, ನ್ಯಾಯಬದ್ಧತೆ ಮತ್ತು ಶಿಕ್ಷಕ-ವಿದ್ಯಾರ್ಥಿ ಸಂಬಂಧವಾದ ಪದ್ಧತಿಗಳು, ಇತ್ಯಾದಿಗಳನ್ನು ಶಿಕ್ಷಣ ಹಕ್ಕು ಮಾನದಂಡಗಳು ಮತ್ತು ಶಿಫಾರಸುಗಳ ಬೆಳಕಲ್ಲಿ ಪರಿಶೀಲಿಸಲಾಯಿತು.

ಶಿಕ್ಷಣದ ಹಕ್ಕು, 2009, ನೆರೆಹೊರೆಯಲ್ಲಿರುವ ಶಾಲೆಯ ಲಭ್ಯತೆ ಬಗ್ಗೆ ಹೇಳುತ್ತದೆ. 1-5ನೇ ತರಗತಿಗೆ ಸೇರಿಕೊಳ್ಳಲು ಅರ್ಹರಾದ ಎಲ್ಲ ಮಕ್ಕಳಿಗೂ ಅವರ ನಿವಾಸದಿಂದ 1 ಕಿಮೀ. ದೂರದ ಒಳಗೆ ಶಾಲೆ ಲಭ್ಯವಿರಬೇಕು. ಅಂತೆಯೇ 6-8ನೇ ತರಗತಿಗಳಿಗೆ ಸೇರಲು ಅರ್ಹರಾದ ಎಲ್ಲ ಮಕ್ಕಳಿಗೂ ಅವರ ನಿವಾಸದಿಂದ 3 ಕಿಮೀ. ದೂರದ ಒಳಗೆ ಶಾಲೆ ಲಭ್ಯವಿರಬೇಕು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಹಂತಗಳಲ್ಲಿ ಲಭ್ಯತೆ ಪ್ರಮಾಣ ಹೆಚ್ಚೇ ಇದೆ (ಕೋಷ್ಟಕ 4.6). ಎಲ್ಲ ತಾಲೂಕುಗಳಲ್ಲೂ ಶಾಲೆಗಳ ಲಭ್ಯತೆ ಪ್ರಮಾಣ ಹೆಚ್ಚೇ ಇದ್ದರೂ ತಾಲೂಕುಗಳ ನಡುವೆ ಅಲ್ಪಸ್ವಲ್ಪ ವ್ಯತ್ಯಾಸಗಳು ಇವೆ.

**ಕೋಷ್ಟಕ 4.5: ಆಡಳಿತವಾರು ಪ್ರಾಥಮಿಕ ಶಾಲೆಗಳು (2001 ಮತ್ತು 2011)**

| ತಾಲೂಕು/ಜಿಲ್ಲೆ | 2001 | | | 2011 | | |
|---|---|---|---|---|---|---|
| | ಸರ್ಕಾರಿ | ಖಾಸಗಿ | ಒಟ್ಟು | ಸರ್ಕಾರಿ | ಖಾಸಗಿ | ಒಟ್ಟು |
| ದೇವನಹಳ್ಳಿ | 223 | 28 | 251 | 218 | 49 | 267 |
| ದೊಡ್ಡಬಳ್ಳಾಪುರ | 360 | 39 | 399 | 360 | 52 | 412 |
| ಹೊಸಕೋಟೆ | 298 | 32 | 330 | 269 | 46 | 315 |
| ನೆಲಮಂಗಲ | 296 | 16 | 312 | 296 | 33 | 329 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 1,177 | 115 | 1,292 | 1,143 | 180 | 1,323 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆ

**ಕೋಷ್ಟಕ 4.6: ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತಗಳಲ್ಲಿ ಶಾಲೆಗಳ ಲಭ್ಯತೆ (2011-12).**

| ತಾಲೂಕು/ಜಿಲ್ಲೆ | ನಿವಾಸಗಳು | ಪ್ರಾಥಮಿಕ ಶಾಲೆಗಳು | | ಹಿರಿಯ ಪ್ರಾಥಮಿಕ ಶಾಲೆಗಳು | |
|---|---|---|---|---|---|
| | | 1 ಕಿಮೀ ಒಳಗೆ | ಲಭ್ಯತೆ ಪ್ರಮಾಣ | 3 ಕಿಮೀ ಒಳಗೆ | ಲಭ್ಯತೆ ಪ್ರಮಾಣ |
| ದೇವನಹಳ್ಳಿ | 211 | 205 | 97.15 | 205 | 97.15 |
| ದೊಡ್ಡಬಳ್ಳಾಪುರ | 417 | 405 | 97.12 | 404 | 96.88 |
| ಹೊಸಕೋಟೆ | 298 | 289 | 96.97 | 289 | 96.97 |
| ನೆಲಮಂಗಲ | 372 | 360 | 96.77 | 364 | 97.84 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 1,298 | 1,259 | 97.00 | 1,262 | 97.25 |

ಸೂಚನೆ:

1. ಲಭ್ಯತೆ ಪ್ರಮಾಣ = ನಿವಾಸದಿಂದ 1 ಕಿ.ಮೀ. ಮತ್ತು 3 ಕಿ.ಮೀ. ಅಂತರದ ಒಳಗೆ ಇರುವ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು / ತಾಲೂಕು ಅಥವಾ ಜಿಲ್ಲೆಯಲ್ಲಿರುವ ಒಟ್ಟು ನಿವಾಸಗಳು * 100.
2. ಲಭ್ಯತೆ ಪ್ರಮಾಣವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆದ ಸಾರ್ವಜನಿಕ ನಿರ್ದೇಶನಗಳ ಇಲಾಖೆಯು ಲೆಕ್ಕ ಮಾಡಿದೆ.

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆ

ಶಾಲೆಗಳು ಸಾರ್ವತ್ರಿಕವಾಗಿ ಲಭ್ಯವಿರಬೇಕು ಎನ್ನುವುದಕ್ಕೆ ಶಾಲೆಗಳು ಸುಲಭವಾಗಿ ಲಭ್ಯವಿರಬೇಕು ಎನ್ನುವುದು ಪೂರ್ವಭಾವಿ ಅಗತ್ಯವಾದರೂ, ಇದರಿಂದಲೇ ಅರ್ಹ ಮಕ್ಕಳೆಲ್ಲ ಶಾಲೆಗೆ ಹೋಗುತ್ತಾರೆ ಎಂದಿಲ್ಲ. ದೇಶದ ವಿವಿಧ ಭಾಗಗಳಲ್ಲಿ ನಡೆಸಿದ ಅಧ್ಯಯನಗಳ ಪ್ರಕಾರ ಶಾಲೆಗಳು ನಿವಾಸಗಳಿಂದ, ಸಾಮಾನ್ಯವಾಗಿ ಸಾಮಾಜಿಕವಾಗಿ ನಷ್ಟಹೊಂದಿದ ದಲಿತರು, ಆದಿವಾಸಿಗಳು ಮತ್ತು ಮುಸ್ಲಿಮರ ನಿವಾಸಗಳಿಂದ ಸ್ವಲ್ಪವೇ ದೂರದಲ್ಲಿದ್ದರೂ ಅವರ ಮಕ್ಕಳು ಶಾಲೆಗೆ ಹೋಗುವುದಿಲ್ಲ [ನಂಬಿಸನ್ (2001) ಮತ್ತು ಝೂ ಮತ್ತು ಜಿಂಗ್ರನ್ (2005)]. ಆದ್ದರಿಂದ ಲಭ್ಯತೆಯ ಬಗ್ಗೆ ಒಂದು ಸಮಗ್ರ ಚಿತ್ರಣವನ್ನು ಪಡೆಯಬೇಕಾದರೆ ಸಾಮಾಜಿಕ ವರ್ಗಗಳ ಮಕ್ಕಳ ನೋಂದಾವಣಿ ಮತ್ತು ಹಾಜರಾತಿ ಪ್ರಮಾಣಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

**ಕೋಷ್ಟಕ 4.7: ಪ್ರಾಥಮಿಕ ಹಂತದಲ್ಲಿ ಒಟ್ಟು ಮತ್ತು ನಿವ್ವಳ ನೋಂದಾವಣಿ ಅನುಪಾತಗಳು (2004 ಮತ್ತು 2011)**

| ತಾಲೂಕು/ಜಿಲ್ಲೆ/ರಾಜ್ಯ | ಒ.ದಾ.ಪ್ರ (ಪ್ರಾ) | ಒ.ದಾ.ಪ್ರ.(ಹಿ.ಪ್ರಾ) | ನಿ.ದಾ.ಪ್ರ.(ಪ್ರಾ) | ನಿ.ದಾ.ಪ್ರ.(ಹಿ.ಪ್ರಾ) | ಒ.ದಾ.ಪ್ರ.(ಪ್ರಾ) | ಒ.ದಾ.ಪ್ರ.(ಹಿ.ಪ್ರಾ) | ನಿ.ದಾ.ಪ್ರ.(ಪ್ರಾ) | ನಿ.ದಾ.ಪ್ರ.(ಹಿ.ಪ್ರಾ) |
|---|---|---|---|---|---|---|---|---|
| | 2004 | | | | 2011 | | | |
| ದೇವನಹಳ್ಳಿ | 86 | 71 | 83 | 65 | 95 | 96 | 91 | 92 |
| ದೊಡ್ಡಬಳ್ಳಾಪುರ | 79 | 68 | 77 | 68 | 96 | 82 | 92 | 80 |
| ಹೊಸಕೋಟೆ | 90 | 74 | 88 | 73 | 92 | 91 | 89 | 89 |
| ನೆಲಮಂಗಲ | 90 | 75 | 87 | 68 | 94 | 97 | 91 | 92 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 86 | 72 | 83 | 84 | 94 | 90 | 91 | 87 |
| ಕರ್ನಾಟಕ | 106 | - | 96 | - | 109 | 71.5 | 99.8 | 61.7 |

ವಿವರಣೆ: ಪ್ರಾ=ಪ್ರಾಥಮಿಕ, ಹಿ.ಪ್ರಾ= ಹಿರಿಯ ಪ್ರಾಥಮಿಕ,

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಡೈಸ್ ರಾಜ್ಯ ವರದಿಪತ್ರ 2004-05, 2011-12

ಒಟ್ಟು ದಾಖಲಾತಿ ಪ್ರಮಾಣ (ಒ.ದಾ.ಪ್ರ.) ಎಂದರೆ ವಯಸ್ಸಿನ ಲೆಕ್ಕವಿಲ್ಲದೆ ಶಿಕ್ಷಣಕ್ಕೆ ದಾಖಲಾದವರ ಒಟ್ಟು ಸಂಖ್ಯೆ. ಇದನ್ನು ಆಯಾ ಶಾಲೆಯ ಆಯಾ ವರ್ಷದ ಶಾಲಾ ವಯಸ್ಸಿನ ಪ್ರತಿಶತದಲ್ಲಿ ಹೇಳಲಾಗುತ್ತದೆ. ಕೋಷ್ಟಕ 4.7 ತೋರಿಸುವಂತೆ 2004-2011 ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ, ಎರಡೂ ಹಂತಗಳಲ್ಲಿ ಒ.ದಾ.ಪ್ರ. ಏರಿವೆ. ಹಿರಿಯ ಪ್ರಾಥಮಿಕದಲ್ಲಿ ಏರಿಕೆ ಹೆಚ್ಚೇ ಇದೆ. ಪ್ರತಿ ತಾಲೂಕಿನಲ್ಲೂ ಇದೇ ಸನ್ನಿವೇಶವಿದೆ. ಆದರೆ 2011ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಹಂತದಲ್ಲಿನ ಒ.ದಾ.ಪ್ರ. ಇಡೀ ರಾಜ್ಯದ ಒ.ದಾ.ಪ್ರ. ಗಿಂತ ಕಡಿಮೆಯಿದೆ. ಆದರೆ ಹಿರಿಯ ಪ್ರಾಥಮಿಕ ಹಂತದಲ್ಲಿ ಇದಕ್ಕಿಂತ ಭಿನ್ನವಾಗಿದೆ. ಇದಕ್ಕೆ ಕಾರಣ ದತ್ತಾಂಶವು ಎರಡು ಬೇರೆ ಬೇರೆ ಮೂಲಗಳಿಂದ ಬಂದಿರುವುದರಿಂದ ಇರಬಹುದು. ಹಾಗಾಗಿ ಅವುಗಳನ್ನು ಕಟ್ಟುನಿಟ್ಟಾಗಿ ಹೋಲಿಸಲೂ ಆಗದು.

**ಚಿತ್ರ 4.2 : ಒಟ್ಟು ಮತ್ತು ನಿವ್ವಳ ದಾಖಲಾತಿ ಪ್ರಮಾಣಗಳು, ಪ್ರಾಥಮಿಕ ಮಟ್ಟ (2004 ಮತ್ತು 2011)**




ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ತಾಲೂಕಿನ ದತ್ತಾಂಶಕ್ಕೆ)

ನಿವ್ವಳ ದಾಖಲಾತಿ ಪ್ರಮಾಣ (ನಿ.ದಾ.ಪ್ರ.)ವನ್ನು ತುಲನೆ ಮಾಡಿದಾಗ ಅಸಂಗತತೆಯು ಸ್ಪಷ್ಟವಾಗುತ್ತದೆ, ನಿ.ದಾ.ಪ್ರ. ಎಂದರೆ ಶಾಲೆಯ ಮಕ್ಕಳ ವಯಸ್ಸಿನ ವರ್ಗವನ್ನು ಜನಸಂಖ್ಯೆಯ ಶೇಕಡಾವಾರಾಗಿ ವ್ಯಕ್ತಪಡಿಸುವುದು. ನಿ.ದಾ.ಪ್ರ. ಸೂಕ್ತವಾದ ವಯೋ-ವರ್ಗದ ಶಾಲೆಯ ಸಹಭಾಗಿತ್ವದ ನಿಖರವಾದ ಮಾಪನ ನೀಡುತ್ತದೆ. ಕೋಷ್ಟಕ 4.7 ಜಿಲ್ಲೆಯ ನಿ.ದಾ.ಪ್ರ. ಅನ್ನು 91 ಎಂದು, ಮತ್ತು ರಾಜ್ಯದ ನಿ.ದಾ.ಪ್ರ. ಅನ್ನು 99.8 ಎಂದೂ ತೋರಿಸುತ್ತದೆ; ಆದರೆ ರಾಜ್ಯದ ಪ್ರತಿ ಜಿಲ್ಲೆಯೂ ನಿ.ದಾ.ಪ್ರ. 100 ಪಡೆದಿರದಿದ್ದಲ್ಲಿ ಇದು ಸಾಧ್ಯವಿಲ್ಲ. ಇದಕ್ಕೆ ವಿರುದ್ಧವಾಗಿ, ರಾಜ್ಯದ ಸರಾಸರಿಗೆ ಹೋಲಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯಲ್ಲಿ ಪ್ರೌಢ ಪ್ರಾಥಮಿಕ ಮಟ್ಟದಲ್ಲಿ ನಿ.ದಾ.ಪ್ರ. ಬಹಳ ಹೆಚ್ಚಾಗಿದೆ. DISE ದತ್ತಾಂಶಕ್ಕೂ ಸಾರ್ವಜನಿಕ ಶಿಕ್ಷಣ ಇಲಾಖೆಯು ಮೂಲವಾಗಿರುವುದರಿಂದ ಇದು ದತ್ತಾಂಶದ ಪ್ರಾಮಾಣಿಕತೆಯನ್ನು ಪ್ರಶ್ನಿಸುವಂತೆ ಮಾಡುತ್ತದೆ.

ದತ್ತಾಂಶವು ಅದೇ ಮೂಲದಿಂದ ಬಂದಿರುವುದರಿಂದ ಅಂತರ-ತಾಲೂಕು ಹೋಲಿಕೆಯು ಸರಿಯಾಗಿದೆ ಎಂದು ಭಾವಿಸಿದರೂ, 2004 ಮತ್ತು 2011ರ ನಡುವೆ ದೊಡ್ಡಬಳ್ಳಾಪುರ ಒ.ದಾ.ಪ್ರ. ಮತ್ತು ನಿ.ದಾ.ಪ್ರ.ಗಳಲ್ಲಿ ಅತಿ ಹೆಚ್ಚು ಏರಿಕೆಯನ್ನು ವರದಿಮಾಡಿರುವುದು ಈ ಕೆಳಕಂಡ ರಡಾರ್ ನಕ್ಷೆ ತೋರಿಸುತ್ತದೆ, ಮತ್ತು ಈ ಏರಿಕೆಯು ಇತರರಿಗಿಂತ ಹೆಚ್ಚಾಗಿದೆ (ಚಿತ್ರ 4.2). ಒ.ದಾ.ಪ್ರ. ಮತ್ತು ನಿ.ದಾ.ಪ್ರ. ಎರಡಕ್ಕೂ ಹೊಸಕೋಟೆಯಲ್ಲಿ ಬದಲಾವಣೆಯು ಬಹಳ ಕಡಿಮೆಯಿದೆ. ಈ ಅವಧಿಯಲ್ಲಿ ಎಲ್ಲಾ ನಾಲ್ಕು ತಾಲೂಕುಗಳು ಒ.ದಾ.ಪ್ರ. ಮತ್ತು ನಿ.ದಾ.ಪ್ರ. ನಡುವೆ ಅಂತರವನ್ನು ಕಡಿಮೆ ಮಾಡಿದ್ದು, ಪ್ರಾಥಮಿಕ ಮಟ್ಟದಲ್ಲಿ ಸೂಕ್ತ ವಯೋವರ್ಗದ ಸಹಭಾಗಿತ್ವವು ಹೆಚ್ಚಾಗಿರುವುದನ್ನು ತೋರಿಸುತ್ತದೆ.

**ಚಿತ್ರ 4.3: ಸಮಗ್ರ ಮತ್ತು ನಿವ್ವಳ ದಾಖಲಾತಿ ಅನುಪಾತ, ಹಿರಿಯ ಪ್ರಾಥಮಿಕ ಮಟ್ಟ (2004 ಮತ್ತು 2011)**




ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ತಾಲೂಕಿನ ದತ್ತಾಂಶಕ್ಕೆ)

ಈ ಚಿತ್ರಣವು ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಬದಲಾಗಿ, ದೊಡ್ಡಬಳ್ಳಾಪುರವು ಅತಿ ಕಡಿಮೆ ಪ್ರಮಾಣದ ಏರಿಕೆಯನ್ನು ದಾಖಲಿಸಿದೆ (ಚಿತ್ರ 4.3). ಇದರ ಅರ್ಥವೆಂದರೆ ಈ ತಾಲೂಕಿನಲ್ಲಿ ಪ್ರಾಥಮಿಕದಿಂದ ಹಿರಿಯ ಪ್ರಾಥಮಿಕ ಮಟ್ಟಕ್ಕೆ ಪರಿವರ್ತನೆಯು ಬಹಳ ಕಡಿಮೆಯಿದೆ. ಈ ತಾಲೂಕು ಪ್ರಾಥಮಿಕ ಮಟ್ಟದಲ್ಲಿ ದಾಖಲಾತಿ ಪ್ರಮಾಣವನ್ನು ವರ್ಧಿಸಲು ಸಾಧ್ಯವಾಗಿದೆ. ಆದರೆ ಇದರ ಬಹಳಷ್ಟು ಪ್ರಮಾಣವನ್ನು ಉನ್ನತ ಪ್ರಾಥಮಿಕ ಮಟ್ಟದಲ್ಲಿ ಉಳಿಸಿಕೊಳ್ಳುವುದರಲ್ಲಿ ವಿಫಲವಾಗಿದೆ. ಪ್ರಾಥಮಿಕ ಮಟ್ಟದಲ್ಲಿ ಹೆಚ್ಚು ದಾಖಲಾತಿಯು ಉತ್ತಮ ಹಾಜರಾತಿಯಾಗಿ ಮಾರ್ಪಡುವುದಿಲ್ಲ ಎಂಬುದೂ ಸಾಧ್ಯವಿದ್ದು, ಉತ್ತೇಜನ ಮತ್ತು ಆಂದೋಲನಗಳ ಫಲವಾಗಿ ಹೊಸ ದಾಖಲಾತಿಗಳನ್ನು ಮಾಡಿರುವ ಪ್ರದೇಶಗಳಲ್ಲಿ ಇದು ಸಾಮಾನ್ಯ ಸಮಸ್ಯೆಯಾಗಿದೆ.

ಪ್ರಾಥಮಿಕ ಮಟ್ಟದಲ್ಲಿ ಲಿಂಗ ಪ್ರತ್ಯೇಕಿತ ಒ.ದಾ.ಪ್ರ. ಮತ್ತು ನಿ.ದಾ.ಪ್ರ. ಗಳು ಬಹಿರಂಗಪಡಿಸುವಂತೆ ಎಲ್ಲಾ ನಾಲ್ಕು ತಾಲೂಕುಗಳಲ್ಲಿಯೂ ಲಿಂಗ ಸಾಮ್ಯ ಸೂಚ್ಯಂಕವು(ಲಿ.ಸಾ.ಸೂ.) ಸುಮಾರು ಒಂದು ಅಥವಾ ಹೆಚ್ಚಾಗಿದೆ (ಕೋಷ್ಟಕ 4.8). ಎಲ್ಲಾ ನಾಲ್ಕು ತಾಲೂಕುಗಳಲ್ಲಿಯೂ ಮಹಿಳೆಯರ ದಾಖಲಾತಿ ಪ್ರಮಾಣವು ಪುರುಷರಿಗೆ ಸಮನಾಗಿದೆ ಅಥವಾ ಕೊಂಚ ಹೆಚ್ಚಾಗಿದೆ. ಆದ್ದರಿಂದ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದಾಖಲಾತಿಯಲ್ಲಿ ಲಿಂಗ ಸಂಬಂಧಿತ ಅಸಮಾನತೆಯು ಸಮಸ್ಯೆಯಲ್ಲ.

**ಕೋಷ್ಟಕ 4.8: ಪ್ರಾಥಮಿಕ ಮಟ್ಟದಲ್ಲಿ ಲಿಂಗ ಪ್ರತ್ಯೇಕಿತ ದಾಖಲಾತಿ ಪ್ರಮಾಣ ಮತ್ತು ಲಿಂಗ ಸಾಮ್ಯತೆ ಸೂಚ್ಯಂಕ (ಲಿ.ಸಾ.ಸೂ.) –2011**

| ತಾಲೂಕು/ಜಿಲ್ಲೆ | ಒ.ದಾ.ಪ್ರ.. | | | ನಿ.ದಾ.ಪ್ರ | | |
|---|---|---|---|---|---|---|
| | ಪುರುಷ | ಮಹಿಳೆ | ಲಿ.ಸಾ.ಸೂ | ಪುರುಷ | ಮಹಿಳೆ | ಲಿ.ಸಾ.ಸೂ |
| ದೇವನಹಳ್ಳಿ | 94 | 97 | 1.03 | 90 | 92 | 1.02 |
| ದೊಡ್ಡಬಳ್ಳಾಪುರ | 89 | 92 | 1.03 | 85 | 89 | 1.04 |
| ಹೊಸಕೋಟೆ | 91 | 93 | 1.02 | 88 | 90 | 1.02 |
| ನೆಲಮಂಗಲ | 95 | 95 | 1.00 | 92 | 91 | 0.98 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 92 | 94 | 1.02 | 88 | 90 | 1.02 |

ಟಿಪ್ಪಣಿ: 1. ಪ್ರಾಥಮಿಕ ಹಂತ 1 ರಿಂದ 7ನೇ ತರಗತಿವರೆವಿಗೂ ದಾಖಲಾತಿಯನ್ನು ಒಳಗೊಂಡಿದೆ

2. ಲಿ.ಸಾ.ಸೂ ಪುರುಷ ದಾಖಲಾತಿಯಿಂದ ಭಾಗಿಸಿದ ಮಹಿಳಾ ದಾಖಲಾತಿ, ಮತ್ತು 100 ರಿಂದ ಗುಣಿಸಲಾದ ಸಂಖ್ಯೆಗೆ ಸಮನಾಗಿದೆ

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಶಾಲೆಗಳಲ್ಲಿ ಪಾಲ್ಗೊಳ್ಳುವಿಕೆಯನ್ನು ದಾಖಲಾತಿಯೊಂದರಿಂದಲೇ ಅಳೆಯಲಾಗುವುದಿಲ್ಲ. ಇತರ ಸೂಚಕಗಳಾದ ಉಳಿಯುವಿಕೆಯ ಪ್ರಮಾಣ, ಪರಿವರ್ತನಾ ಪ್ರಮಾಣ ಮತ್ತು ಮುಕ್ತಾಯ ಪ್ರಮಾಣಗಳನ್ನು ಬಳಸಿ, ಶಿಕ್ಷಣ ವ್ಯವಸ್ಥೆಯ ದಕ್ಷತೆಯನ್ನು ನಿರ್ಧರಿಸಲು ಮತ್ತು ಶಾಲಾ ಸಹಭಾಗಿತ್ವದ ಸ್ಥಿತಿಯನ್ನು ತಿಳಿಯಲು ಸಾಧ್ಯವಾಗುವುದು. ಕೋಷ್ಟಕ 4.9 ರಲ್ಲಿ ಕಾಣುವಂತೆ, ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣವು ಜಿಲ್ಲೆಯಲ್ಲಿ ಬಹಳ ಹೆಚ್ಚಾಗಿಲ್ಲ, ಆದರೆ ಅದು ಅಸಾಧಾರಣ ಪ್ರಮಾಣವನ್ನು ತೋರಿಸುತ್ತದೆ, ಮುಖ್ಯವಾಗಿ ಹಿರಿಯ ಪ್ರಾಥಮಿಕ ಮಟ್ಟದಲ್ಲಿ. ಪ್ರಾಥಮಿಕ ಮಟ್ಟದಲ್ಲಿ ಪ್ರಮಾಣವು ಶೇ. 2 ರಿಂದ 3 ರ ಮಟ್ಟದಲ್ಲಿದ್ದರೆ, ಮತ್ತು 2001ರಿಂದ 2011ರವರೆಗೂ ಹೆಚ್ಚುಕಡಿಮೆ ಇಷ್ಟೇ ಇದೆ, ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಪ್ರಾಥಮಿಕ ಮಟ್ಟಕ್ಕಿಂತ ಹೆಚ್ಚಾಗಿರುವುದು ಮಾತ್ರವಲ್ಲ, 2001ರಿಂದ 2011ರ ವರೆಗೆ ಹೆಚ್ಚಾಗಿದೆ. ಇಲ್ಲಿ ಲಿಂಗ ಸಂಬಂಧಿ ಅಸಮಾನತೆಗಳನ್ನು ಅಳೆಯಲಾಗಿಲ್ಲ ಆದರೆ ಹುಡುಗರ ಮತ್ತು ಹುಡುಗಿಯರ ನಡುವೆ ಅಂತರವಿದೆ.

**ಕೋಷ್ಟಕ 4.9 : ಪ್ರಾಥಮಿಕ ಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣ (2001 ಮತ್ತು 2011)**

| ತಾಲೂಕು/ಜಿಲ್ಲೆ | ಪ್ರಾಥಮಿಕ | | | ಹಿರಿಯ ಪ್ರಾಥಮಿಕ | | | ಪ್ರಾಥಮಿಕ | | | ಹಿರಿಯ ಪ್ರಾಥಮಿಕ | | |
|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| | 2001 | | | | | | 2011 | | | | | |
| ದೇವನಹಳ್ಳಿ | 2.18 | 2.70 | 2.44 | 4.11 | 4.90 | 4.51 | 2.04 | 2.43 | 2.23 | 6.01 | 6.31 | 6.16 |
| ದೊಡ್ಡಬಳ್ಳಾಪುರ | 2.01 | 2.50 | 2.26 | 4.43 | 5.05 | 4.74 | 2.18 | 2.41 | 2.30 | 8.94 | 6.83 | 7.89 |
| ಹೊಸಕೋಟೆ | 2.45 | 2.35 | 2.40 | 5.26 | 5.32 | 5.29 | 2.63 | 2.84 | 2.74 | 7.04 | 7.14 | 7.09 |
| ನೆಲಮಂಗಲ | 2.35 | 2.80 | 2.58 | 5.23 | 4.54 | 4.89 | 2.03 | 2.08 | 2.06 | 6.00 | 8.26 | 7.13 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 2.25 | 2.59 | 2.42 | 4.76 | 4.95 | 4.85 | 2.22 | 2.44 | 2.33 | 7.00 | 7.14 | 7.07 |

ಟಿಪ್ಪಣಿ:1 ಪ್ರಾಥಮಿಕ ಶಾಲೆಗಳಿಗೆ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಅಧಿಕಾರಿಗಳು ಗಣಿಸಿದರು 2. ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣದ ಅರ್ಥನಿರೂಪಣೆಯನ್ನು ಸೇರಿಸತಕ್ಕದ್ದು, ಅಧಿಕಾರಿಗಳು ಅರ್ಥನಿರೂಪಣೆ ಮತ್ತು ಗಣತಿಯ ವಿವರಗಳನ್ನು ನೀಡಿದ ನಂತರ

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಪ್ರಾಥಮಿಕ ಶಾಲಾ ಹಂತದಲ್ಲಿ ನೆಲಮಂಗಲ ತಾಲೂಕು ಅತ್ಯುನ್ನತ ಸಾಧಕ ಎಂದು ರಡಾರ್ ಪರಿಶೀಲನೆಯು ತೋರಿಸಿದ್ದು, 2001 ಮತ್ತು 2011 ಅವಧಿಯಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣದಲ್ಲಿ ಇಳಿಕೆಯಾಗಿದೆ ಆದರೆ ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳು ಏರಿಕೆಯನ್ನು ವರದಿ ಮಾಡಿವೆ. ದೇವನಹಳ್ಳಿಯಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣವು ಕೊಂಚ ಕಡಿಮೆಯಾಗಿದೆ (ಚಿತ್ರ 4.4). ಹಿರಿಯ ಪ್ರಾಥಮಿಕ ಹಂತದಲ್ಲಿ, ಎಲ್ಲಾ ತಾಲೂಕುಗಳೂ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣದಲ್ಲಿ ಏರಿಕೆಯನ್ನು ವರದಿ ಮಾಡಿವೆ, ಆದರೆ ಅತಿ ಹೆಚ್ಚಿನ ಏರಿಕೆಯು ದೊಡ್ಡಬಳ್ಳಾಪುರದಲ್ಲಿ ಆಗಿದೆ (ಚಿತ್ರ 4.4).

**ಚಿತ್ರ 4.4: ಪ್ರಾಥಮಿಕ ಮತ್ತು ಹಿರಿಯಪ್ರಾಥಮಿಕ ಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣ (2001 ಮತ್ತು 2011)**




ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಹೆಚ್ಚಿನ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣಕ್ಕೆ ಒಂದು ವಿವರಣೆಯೆಂದರೆ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಮಟ್ಟಗಳ ಸಂಯೋಜನೆಯಲ್ಲಿನ ಬದಲಾವಣೆಯಿರಬಹುದು. ಪ್ರಾಥಮಿಕ ಹಂತಕ್ಕೆ ಕರ್ನಾಟಕವು ಏಳು ವರ್ಷ ಶಾಲಾ ವ್ಯವಸ್ಥೆಯನ್ನು ಅನುಸರಿಸುತ್ತಿತ್ತು, ಇದರಲ್ಲಿ ಮೊದಲ ನಾಲ್ಕು ವರ್ಷಗಳು ಪ್ರಾಥಮಿಕವಾಗಿದ್ದು, ರಾಜ್ಯದಲ್ಲಿ ಇದನ್ನು ಕೆಳ ಪ್ರಾಥಮಿಕ ಎಂದು ಕರೆಯುತ್ತಿದ್ದರು, ಮತ್ತು ಮುಂದಿನ ಮೂರು ವರ್ಷಗಳನ್ನು ಹಿರಿಯ ಪ್ರಾಥಮಿಕ, ರಾಜ್ಯದಲ್ಲಿ ಮೇಲಿನ ಪ್ರಾಥಮಿಕ ಎನ್ನಲಾಗುತ್ತಿತ್ತು. ನಂತರ, ಅದು ಐದನೇ ತರಗತಿಯನ್ನು ಕೆಳಗಿನ ಪ್ರಾಥಮಿಕಕ್ಕೆ ಸೇರಿಸಿತು, ಆದರೆ ಪ್ರಾಥಮಿಕ ಹಂತವು ಏಳು ವರ್ಷಗಳಾಗಿಯೇ ಇದ್ದುದು. ಇತ್ತೀಚೆಗೆ ರಾಜ್ಯವು ಪ್ರಾಥಮಿಕ ಶಿಕ್ಷಣಕ್ಕೆ ಎಂಟು ವರ್ಷಗಳ ಶಾಲಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಆದರೆ ಬಹಳಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಇನ್ನೂ 8ನೇ ತರಗತಿಯನ್ನು ಹೊಂದಿಲ್ಲ ಮತ್ತು ಆ ಕಾರಣದಿಂದ ಬಹಳಷ್ಟು ಮಕ್ಕಳು ಆ ಹಂತದಲ್ಲಿ ಶಾಲೆ ಬಿಡುತ್ತಾರೆ. ದತ್ತಾಂಶವು 8ನೇ ತರಗತಿಯ ಮಾಹಿತಿಯನ್ನು ಹಿರಿಯ ಪ್ರಾಥಮಿಕ ಮಟ್ಟದ ಭಾಗವಾಗಿ ಹೊಂದಿದೆ, ಆದರೆ ಆ ಅವಧಿಯಲ್ಲಿ ಅದು ಹಿರಿಯ ಪ್ರಾಥಮಿಕ ವ್ಯವಸ್ಥೆಯ ಭಾಗವಾಗಿರಲಿಲ್ಲ. ಆದರೆ, ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಹೆಚ್ಚಳವನ್ನು ಇದು ವಿವರಿಸುವುದಿಲ್ಲ. ಒಂದು ಸಂಭಾವ್ಯ ಕಾರಣವೆಂದರೆ, ಉತ್ತಮ ಗುಣಮಟ್ಟದ ಶಾಲೆಗಳಿವೆಯೆಂದು ನಂಬಲಾಗಿರುವ ಬೆಂಗಳೂರು ನಗರ ಪದೇಶಕ್ಕೆ ವಿದ್ಯಾರ್ಥಿಗಳ ವಲಸೆಯಾಗಿರಬಹುದು, ಆದರೆ ಇದನ್ನು ಖಚಿತಪಡಿಸಲು ಹೆಚ್ಚಿನ ತನಿಖೆಯ ಅಗತ್ಯವಿದೆ.

ಜಿಲ್ಲೆ ಹೆಚ್ಚಿನ ಮುಕ್ತಾಯ ಪ್ರಮಾಣವನ್ನು ವರದಿ ಮಾಡುತ್ತದೆ, ಇದು ಪ್ರಾಥಮಿಕ ಮಟ್ಟಕ್ಕೆ ಹೋಲಿಸಿದಂತೆ ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಕಡಿಮೆಯಿದೆ. ಪ್ರಾಥಮಿಕ ಮಟ್ಟದಲ್ಲಿ ಇದು ಹೆಚ್ಚುಕಡಿಮೆ ಸ್ಥಿರವಾಗಿದ್ದರೆ, 2001 ಮತ್ತು 2011ರ ನಡುವೆ ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಇದು ಇಳಿಕೆಯನ್ನು ಕಂಡಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಪ್ರಾಥಮಿಕದಿಂದ ಹಿರಿಯ ಪ್ರಾಥಮಿಕಕ್ಕೆ ಹೆಚ್ಚಿನ ಪರಿವರ್ತನಾ ಪ್ರಮಾಣವನ್ನು ಹೊಂದಿದೆ. ಆದರೆ, ಜಿಲ್ಲೆಯು ಎಲ್ಲಾ ತಾಲೂಕುಗಳಿಗೂ 2001ರಲ್ಲಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಮಟ್ಟಗಳ ನಡುವೆ ಶೇ. 100 ರಷ್ಟು ಪರಿವರ್ತನೆಯನ್ನು ವರದಿಮಾಡಿತ್ತು; ಈಗಾಗಲೇ ಚರ್ಚಿಸಲಾದ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಸಂಖ್ಯೆಯಿಂದ ಮತ್ತು ಮುಂದೆ ಚರ್ಚಿಸಲಾಗುವ ಶಾಲೆಯ ಹೊರಗಿರುವ ಮಕ್ಕಳ ಸಂಖ್ಯೆಯ ಕಾರಣದಿಂದ ಇದು ಸಾಧ್ಯವಾಗುವುದಿಲ್ಲ. ಹಿರಿಯ ಪ್ರಾಥಮಿಕ ಮಟ್ಟ ಮತ್ತು ಹಿರಿಯ ಪ್ರಾಥಮಿಕ ಮಟ್ಟದಿಂದ ಪ್ರೌಢಶಾಲಾ ಹಂತಕ್ಕೆ ಪರಿವರ್ತನೆಯಲ್ಲಿಯೂ ಇಳಿಕೆಯನ್ನು ವರದಿ ಮಾಡಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪರಿವರ್ತನೆ ಮತ್ತು ಮುಕ್ತಾಯದ ಪ್ರಮಾಣಗಳಲ್ಲಿ ಇಳಿಕೆ ಮತ್ತು ಹಿರಿಯ ಪ್ರಾಥಮಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣವನ್ನು ಹೆಚ್ಚು ತನಿಖೆ ಮಾಡಬೇಕಿದೆ.

**ಕೋಷ್ಟಕ 4.10: ಪ್ರಾಥಮಿಕ ಶಾಲಾ ಹಂತದಲ್ಲಿ ಪರಿವರ್ತನೆ ಮತ್ತು ಮುಕ್ತಾಯದ ಪ್ರಮಾಣಗಳು**

| ತಾಲೂಕು/ಜಿಲ್ಲೆ | ಪರಿವರ್ತನಾ ಪ್ರಮಾಣ | | ಮುಕ್ತಾಯದ ಪ್ರಮಾಣ | | ಪರಿವರ್ತನಾ ಪ್ರಮಾಣ | | ಮುಕ್ತಾಯದ ಪ್ರಮಾಣ | |
|---|---|---|---|---|---|---|---|---|
| | ಪ್ರಾ. ದಿಂದ ಹಿ.ಪ್ರಾ. ಗೆ | ಹಿ.ಪ್ರಾ. ದಿಂದ ಪ್ರೌಢ ಶಾಲೆಗೆ | ಪ್ರಾ | ಹಿ.ಪ್ರಾ | ಪ್ರಾ. ದಿಂದ ಹಿ.ಪ್ರಾ. ಗೆ | ಹಿ.ಪ್ರಾ. ದಿಂದ ಪ್ರೌಢ ಶಾಲೆಗೆ | ಪ್ರಾ | ಹಿ.ಪ್ರಾ |
| | 2001 | | | | 2011 | | | |
| ದೇವನಹಳ್ಳಿ | 97.56 | 95.5 | 96.34 | 94.13 | 100 | 93.84 | 96.34 | 92.45 |
| ದೊಡ್ಡಬಳ್ಳಾಪುರ | 97.75 | 95.26 | 96.49 | 94.23 | 100 | 92.12 | 96.44 | 91.18 |
| ಹೊಸಕೋಟೆ | 97.6 | 94.71 | 95.95 | 93.37 | 100 | 92.91 | 95.83 | 91.78 |
| ನೆಲಮಂಗಲ | 97.43 | 95.12 | 96.03 | 93.93 | 100 | 92.87 | 96.31 | 91.82 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 97.58 | 95.35 | 96.2 | 94.01 | 100 | 92.37 | 96.23 | 91.8 |

ಟಿಪ್ಪಣಿ: ಪ್ರಾ – ಪ್ರಾಥಮಿಕ, ಹಿ.ಪ್ರಾ. – ಹಿರಿಯ ಪ್ರಾಥಮಿಕ
ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

1. ಪರಿವರ್ತನಾ ಪ್ರಮಾಣವೆಂದರೆ ಒಂದು ವರ್ಷದಲ್ಲಿ ಹೆಚ್ಚಿನ ಮಟ್ಟದ ಶಿಕ್ಷಣದ ಮೊದಲನೆ ತರಗತಿಗೆ ನೋಂದಾಯಿತರಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಹಿಂದಿನ ವರ್ಷದ ಕಡಿಮೆ ಮಟ್ಟದ ಶಿಕ್ಷಣದ ಅಂತಿಮ ತರಗತಿಗೆ ನೋಂದಾಯಿತರಾದ ವಿದ್ಯಾರ್ಥಿಗಳ ಸಂಖ್ಯೆಯ ಶೇಕಡಾವಾರಾಗಿ ಉಲ್ಲೇಖಿಸುವುದು.

2. ಮುಕ್ತಾಯ ಪ್ರಮಾಣವೆಂದರೆ ಯಾವುದೇ ಮಟ್ಟದ ಅಂತಿಮ ತರಗತಿಗೆ, ಯಾವುದೇ ವಯಸ್ಸಿನಲ್ಲಿ, ನೋಂದಾಯಿತರಾದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ಆ ವರ್ಷದಲ್ಲಿ ಆ ತರಗತಿಗೆ ಒಟ್ಟು ಸೂಕ್ತವಾದ ವಯೋವರ್ಗದ ಶೇಕಡಾವಾರಾಗಿ ಉಲ್ಲೇಖಿಸುವುದು.

ಶಾಲೆಯಿಂದ ಹೊರಗುಳಿದ ಮಕ್ಕಳು ಎಂದರೆ, ಎಂದೂ ದಾಖಲಾಗಿರದ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳು. ವರದಿಗಳ ಪ್ರಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯು ಗಣನೀಯವಾಗಿ ಇಳಿದಿದೆ. ನೆಲಮಂಗಲ ತಾಲೂಕಿನಲ್ಲಿ ಮಾತ್ರ ಪ್ರಾಥಮಿಕ ಶಿಕ್ಷಣದ ವಯೋವರ್ಗದ (6-10 ವರ್ಷಗಳು) ಮಕ್ಕಳ ಸಂಖ್ಯೆಯು 2005ರಲ್ಲಿ 232 ಇಂದ 2011ರಲ್ಲಿ 269ಕ್ಕೆ ಏರಿದೆ. ಅಧಿಕೃತವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಯಗಳಾದ ದಲಿತರು ಮತ್ತು ಆದಿವಾಸಿಗಳ ಪ್ರಾತಿನಿಧಿತ್ವವು ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಕಡಿಮೆಯಾಗಿದ್ದು, ಈ ಅವಧಿಯಲ್ಲಿ ಶಾಲೆಯ ಭಾಗವಹಿಸುವಿಕೆಯು ಹೆಚ್ಚಿದೆ ಎಂದು ತೋರಿಸುತ್ತದೆ(ಕೋಷ್ಟಕ 4.11). 11-13 ವರ್ಷಗಳಿಗೆ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯು ಕಡಿಮೆ ಇದೆ. ಮತ್ತು ಎಲ್ಲಾ ತಾಲೂಕುಗಳಲ್ಲಿಯೂ ಇಳಿಕೆ ಕಂಡಿದೆ. ಆದರೆ, ಮುಂಚೆ ಚರ್ಚಿಸಿದಂತೆ ಹಿರಿಯ ಪ್ರಾಥಮಿಕ ಹಂತದಲ್ಲಿ ಹೆಚ್ಚುತ್ತಿರುವ ಶಾಲೆಯಿಂದ ಹೊರಗುಳಿದ ಪ್ರಮಾಣದೊಂದಿಗೆ ಇದು ಸುಸಂಗತವಾಗಿಲ್ಲ. ದತ್ತಾಂಶದ ಈ ಅಸಂಗತತೆಯನ್ನು ಪರಿಶೀಲಿಸಬೇಕಾಗಿದೆ.

**ಕೋಷ್ಟಕ 4.11: ವಿವಿಧ ಸಾಮಾಜಿಕ ವರ್ಗದಡಿ ಶಾಲೆಯಿಂದ ಹೊರಗುಳಿದ ಮಕ್ಕಳು(6–10 ವರ್ಷ ಮತ್ತು 11–13 ವರ್ಷ ವಯೋಮಿತಿಯಲ್ಲಿ)**

| ತಾಲೂಕು/ಜಿಲ್ಲೆ | ವಯೋಮಿತಿ | 2005 | | | | 2011 | | | |
|---|---|---|---|---|---|---|---|---|---|
| | | ಸಾಮಾನ್ಯ | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಒಟ್ಟು | ಸಾಮಾನ್ಯ | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಒಟ್ಟು |
| ದೇವನಹಳ್ಳಿ | 6 –10 ವರ್ಷಗಳು | 139 | 103 | 46 | 288 | 0 | 0 | 0 | 0 |
| | 11 –13 ವರ್ಷಗಳು | 79 | 58 | 27 | 164 | 0 | 0 | 0 | 0 |
| ದೊಡ್ಡಬಳ್ಳಾಪುರ | 6 –10 ವರ್ಷಗಳು | 354 | 212 | 49 | 615 | 19 | 6 | 3 | 28 |
| | 11 –13 ವರ್ಷಗಳು | 182 | 120 | 28 | 330 | 6 | 3 | 0 | 9 |
| ಹೊಸಕೋಟೆ | 6 –10 ವರ್ಷಗಳು | 75 | 31 | 1 | 107 | 24 | 11 | 2 | 37 |
| | 11 –13 ವರ್ಷಗಳು | 44 | 18 | 0 | 62 | 10 | 6 | 2 | 18 |
| ನೆಲಮಂಗಲ | 6 –10 ವರ್ಷಗಳು | 97 | 42 | 8 | 147 | 163 | 76 | 5 | 244 |
| | 11 –13 ವರ್ಷಗಳು | 56 | 24 | 5 | 85 | 16 | 8 | 1 | 25 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 6 –10 ವರ್ಷಗಳು | 635 | 388 | 104 | 1127 | 206 | 93 | 10 | 309 |
| | 11 –13 ವರ್ಷಗಳು | 361 | 220 | 60 | 641 | 32 | 17 | 3 | 52 |

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಕೋಷ್ಟಕ 4.12: ಲಿಂಗ ವರ್ಗದಡಿ ಶಾಲೆಯಿಂದ ಹೊರಗುಳಿದ ಮಕ್ಕಳು (6–10 ವರ್ಷ ಮತ್ತು 11–13 ವರ್ಷ ವಯೋಮಿತಿಯಲ್ಲಿ)**

| ತಾಲೂಕು/ಜಿಲ್ಲೆ | ವಯೋಮಿತಿ (ವರ್ಷಗಳಲ್ಲಿ) | ಗಂಡು | ಹೆಣ್ಣು | ಗಂಡು | ಹೆಣ್ಣು |
|---|---|---|---|---|---|
| | | 2005 | | 2011 | |
| ದೇವನಹಳ್ಳಿ | 6–10 ವರ್ಷಗಳು | 145 | 143 | 0 | 0 |
| | 11–13 ವರ್ಷಗಳು | 83 | 81 | 0 | 0 |
| ದೊಡ್ಡಬಳ್ಳಾಪುರ | 6–10 ವರ್ಷಗಳು | 297 | 288 | 22 | 6 |
| | 11–13 ವರ್ಷಗಳು | 168 | 162 | 8 | 1 |
| ಹೊಸಕೋಟೆ | 6–10 ವರ್ಷಗಳು | 54 | 53 | 16 | 21 |
| | 11–13 ವರ್ಷಗಳು | 31 | 31 | 13 | 5 |
| ನೆಲಮಂಗಲ | 6–10 ವರ್ಷಗಳು | 82 | 65 | 134 | 110 |
| | 11–13 ವರ್ಷಗಳು | 47 | 38 | 11 | 14 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 6–10 ವರ್ಷಗಳು | 578 | 549 | 172 | 137 |
| | 11–13 ವರ್ಷಗಳು | 329 | 312 | 32 | 20 |

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಹುಡುಗರ ಪಾಲು ಹುಡುಗಿಯರಿಗಿಂತ ಹೆಚ್ಚಾಗಿದೆ (ಕೋಷ್ಟಕ 4.12). ಇದಕ್ಕೆ ಹಲವಾರು ಕಾರಣಗಳಿರಬಹುದು. ವಲಸೆ ಹೋಗುವುದು ಮತ್ತು ಬೆಂಗಳೂರು ನಗರದಲ್ಲಿ ಲಭಿಸುವ ಉದ್ಯೋಗಾವಕಾಶಗಳ ಕಾರಣಕ್ಕಾಗಿ ಹುಡುಗರನ್ನು ಬಾಲಕಾರ್ಮಿಕರನ್ನಾಗಿ ತೊಡಗಿಸುವುದು ಒಂದು ಕಾರಣವಿರಬಹುದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 6-14 ವಯೋವರ್ಗದ ಬಾಲಕರ ಸಂಖ್ಯೆಯು ಹೆಚ್ಚಾಗಿದ್ದು, ಒಟ್ಟು ಜನಸಂಖ್ಯೆಯ ಶೇ. 51.92 ರಷ್ಟು ಇದೆ.

## 4.3.2 ಮೂಲಸೌಕರ್ಯ

ಶಾಲೆಯ ಭೌತಿಕ ಮೂಲಸೌಕರ್ಯವು ಶಿಕ್ಷಣಕ್ಕೆ ಪೂರಕವಾಗುವಂತಹ ವಾತಾವರಣ ಸೃಷ್ಟಿಸುವಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತದೆ. ಶಾಲೆಯ ಭೌತಿಕ ಪರಿಸರವು ಎಲ್ಲಾ ಮಕ್ಕಳಿಗೂ ಸೂಕ್ತ ಮೂಲಸೌಕರ್ಯದ ಲಭ್ಯತೆಯನ್ನು ಅವಲಂಬಿಸಿದೆ, ಪ್ರಮುಖವಾಗಿ ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೆ. ಈ ಅಗತ್ಯ ಸೌಲಭ್ಯಗಳನ್ನು ಎಲ್ಲಾ ಶಾಲೆಗಳು ಒದಗಿಸುವಂತೆ ಮತ್ತು ಶಾಲೆಗಳು ಪಾಲಿಸಬೇಕಾದ ಕಠಿಣವಾದ ನಿಯಮಗಳನ್ನು ಶಿಕ್ಷಣ ಹಕ್ಕು ರೂಪಿಸಿದೆ. ಇದು, ಹುಡುಗ ಮತ್ತು ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯಗಳು, ವಿಶೇಷ ಅಗತ್ಯಗಳಿರುವ ಮಕ್ಕಳಿಗೆ ಶಾಲೆಗಳಲ್ಲಿ ರ್‍ಯಾಂಪ್‌ಗಳನ್ನು ಹೊಂದಿರುವುದು, ಬ್ರೇಲ್ ಪುಸ್ತಕಗಳುಳ್ಳ ಗ್ರಂಥಾಲಯದ ಜೊತೆಗೆ ವಿವಿಧ ವಿಷಯಗಳಿಗೆ ಸೂಕ್ತ ವಯಸ್ಸಿನ ಮತ್ತು ತರಗತಿಯ ಪುಸ್ತಕಗಳು, ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ಮತ್ತು ಇತರ ಸೌಲಭ್ಯಗಳನ್ನು ಒಳಗೊಂಡಿದೆ.

**ಕೋಷ್ಟಕ 4.13: ಪ್ರಾಥಮಿಕ ಶಾಲೆಗಳಲ್ಲಿ ಮೂಲಸೌಕರ್ಯದ ಸೌಲಭ್ಯಗಳು (2005 ಮತ್ತು 2011)**

| ಮೂಲಸೌಕರ್ಯ ಸೌಲಭ್ಯಗಳು | ವರ್ಷ | ದೇವನಹಳ್ಳಿ | | ದೊಡ್ಡಬಳ್ಳಾಪುರ | | ಹೊಸಕೋಟೆ | | ನೆಲಮಂಗಲ | | ಬೆಂಗಳೂರು ಗ್ರಾಮಾಂತರ ಜಿಲ್ಲೆ | |
|---|---|---|---|---|---|---|---|---|---|---|---|
| | | ಪ್ರಾ | ಹಿ.ಪ್ರಾ. | ಪ್ರಾ | ಹಿ.ಪ್ರಾ. | ಪ್ರಾ | ಹಿ.ಪ್ರಾ. | ಪ್ರಾ | ಹಿ.ಪ್ರಾ. | ಪ್ರಾ | ಹಿ.ಪ್ರಾ. |
| ಒಟ್ಟು ಶಾಲೆಗಳ ಸಂಖ್ಯೆ | 2005 | 137 | 114 | 259 | 146 | 166 | 144 | 230 | 105 | 792 | 509 |
| | 2011 | 133 | 134 | 228 | 184 | 151 | 164 | 203 | 126 | 715 | 608 |
| ಆವರಣ ಗೋಡೆಯುಳ್ಳ ಶಾಲೆಗಳ ಶೇ. | 2005 | 29.20 | 30.70 | 35.14 | 56.16 | 37.95 | 41.67 | 40.00 | 28.57 | 36.11 | 40.67 |
| | 2011 | 51.13 | 92.54 | 75.44 | 88.04 | 58.28 | 80.49 | 67.98 | 85.71 | 65.17 | 86.51 |
| ಕುಡಿವ ನೀರಿನ ಸೌಲಭ್ಯವುಳ್ಳ ಶಾಲೆಗಳ ಶೇ. | 2005 | 71.53 | 70.18 | 64.86 | 75.34 | 68.07 | 69.44 | 73.04 | 80.95 | 69.07 | 73.67 |
| | 2011 | 93.23 | 92.54 | 87.28 | 87.50 | 87.42 | 92.07 | 91.13 | 98.41 | 89.51 | 92.11 |
| ಹುಡುಗಿಯರ ಶೌಚಾಲಯವುಳ್ಳ ಶಾಲೆಗಳ ಶೇ. | 2005 | 8.76 | 55.26 | 24.71 | 47.95 | 9.04 | 40.28 | 14.78 | 57.14 | 15.78 | 49.31 |
| | 2011 | 58.65 | 65.67 | 60.96 | 63.59 | 66.89 | 70.12 | 42.36 | 68.25 | 56.50 | 66.78 |
| ಹುಡುಗರ ಶೌಚಾಲಯವುಳ್ಳ ಶಾಲೆಗಳ ಶೇ. | 2005 | 37.23 | 59.65 | 50.97 | 68.49 | 52.41 | 62.50 | 63.91 | 71.43 | 52.65 | 65.42 |
| | 2011 | 83.46 | 97.76 | 91.67 | 94.57 | 92.72 | 93.29 | 97.04 | 98.41 | 91.89 | 95.72 |
| ಆಟದ ಮೈದಾನವುಳ್ಳ ಶಾಲೆಗಳ ಶೇ. | 2005 | 24.09 | 39.47 | 19.31 | 39.73 | 22.89 | 38.19 | 14.78 | 28.57 | 19.57 | 36.94 |
| | 2011 | 41.35 | 43.28 | 29.39 | 41.30 | 49.67 | 47.56 | 24.14 | 50.79 | 34.41 | 45.39 |
| ಅಡುಗೆ ಕೋಣೆಯಿರುವ ಶಾಲೆಗಳ ಶೇ. | 2005 | 32.12 | 43.86 | 29.73 | 47.95 | 54.22 | 40.28 | 40.00 | 42.86 | 38.26 | 43.81 |
| | 2011 | 82.71 | 89.55 | 87.72 | 86.41 | 82.78 | 91.46 | 93.60 | 98.41 | 87.41 | 90.95 |
| ರ್‍ಯಾಂಪ್ ಸೌಲಭ್ಯವುಳ್ಳ ಶಾಲೆಗಳ ಶೇ. | 2005 | 37.96 | 41.23 | 35.91 | 37.67 | 60.24 | 40.28 | 47.39 | 35.24 | 44.70 | 38.70 |
| | 2011 | 84.21 | 76.87 | 81.58 | 81.52 | 86.09 | 89.63 | 77.34 | 92.06 | 81.82 | 84.87 |
| ಗ್ರಂಥಾಲಯ ಇರುವ ಶಾಲೆಗಳ ಶೇ. | 2005 | 27.74 | 43.86 | 27.03 | 47.95 | 45.18 | 41.67 | 37.39 | 42.86 | 33.96 | 44.20 |
| | 2011 | 89.47 | 98.51 | 91.67 | 97.83 | 92.72 | 98.17 | 96.55 | 96.83 | 92.87 | 97.86 |

ಟಿಪ್ಪಣಿ: ಪ್ರಾ – ಪ್ರಾಥಮಿಕ; ಹಿ.ಪ್ರಾ – ಹಿರಿಯ ಪ್ರಾಥಮಿಕ

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕೋಷ್ಟಕ 4.13ರಲ್ಲಿ ಕಾಣುವಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2005 ರಿಂದ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮೂಲಸೌಕರ್ಯದ ಸೌಲಭ್ಯಗಳು ಸುಧಾರಿಸುತ್ತಿವೆ. ಗುಣಮಟ್ಟದ ಶಿಕ್ಷಣಕ್ಕೆ ಅಗತ್ಯವೆಂದು ಶಿಕ್ಷಣದ ಹಕ್ಕು ಸೂಚಿಸಿರುವ ಎಲ್ಲಾ ಸೌಲಭ್ಯಗಳಲ್ಲಿಯೂ ಸುಧಾರಣೆಯಾಗಿರುವುದನ್ನು ಕಾಣಬಹುದು. ಆದರೆ, ಇದನ್ನು ಎಲ್ಲಾ ಶಾಲೆಗಳಿಗೂ ಸಾರ್ವತ್ರಿಕವಾಗಿ ಲಭ್ಯವಾಗುವಂತೆ ಮಾಡುವಲ್ಲಿ ಬಹಳ ದೂರ ಕ್ರಮಿಸಬೇಕಿದೆ. 2011ರಲ್ಲಿ, ಜಿಲ್ಲೆಯ ಸುಮಾರು 35ಶೇ. ಪ್ರಾಥಮಿಕ ಶಾಲೆಗಳಲ್ಲಿ ಆವರಣದ ಗೋಡೆಯಿಲ್ಲ, ಶೇ. 43.5 ಪ್ರಾಥಮಿಕ ಮತ್ತು ಶೇ.33.22 ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಹುಡುಗಿಯರಿಗೆ ಶೌಚಾಲಯವಿಲ್ಲ, ಶೇ. 65.59 ಪ್ರಾಥಮಿಕ ಮತ್ತು ಶೇ. 54.61 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆಟದ ಮೈದಾನವಿಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ, ಸೌಲಭ್ಯ ಇರುವುದರಿಂದ ಮಾತ್ರವೇ ಅದರ ಸ್ಥಿತಿ ಮತ್ತು ಬಳಕೆಯ ಬಗ್ಗೆ ತಿಳಿಯುವುದಿಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯಲ್ಲಿ 8 ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಸಿ.ಬಿ.ಪಿ.ಎಸ್ ನಡೆಸಿದ ಕಿರು ಕ್ಷೇತ್ರ ಅಧ್ಯಯನದಲ್ಲಿ, ಶಾಲೆಗಳಲ್ಲಿ ಸ್ಥಿತಿ ಮತ್ತು ಬಳಕೆಯು ಅಗಾಧವಾಗಿ ಭಿನ್ನವಾಗಿತ್ತೆಂದು ಪತ್ತೆ ಮಾಡಿತು ಮತ್ತು ಇತರ ಸರ್ಕಾರಿ ಶಾಲೆಗಳಲ್ಲಿ ಪರಿಸ್ಥಿತಿಯು ಭಿನ್ನವಾಗಿರುವುದಿಲ್ಲ ಎಂಬುದನ್ನು ನಾವು ತಿಳಿಯಬಹುದು. ಆದರೆ, ಸೌಲಭ್ಯಗಳಿವೆ ಎಂದು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯವಾಗಿದೆ ಏಕೆಂದರೆ ಪೂರಕ ವಾತಾವರಣ ಸೃಷ್ಟಿಸುವಲ್ಲಿ ಇದು ಮೊದಲನೆಯ ಹೆಜ್ಜೆ, ಹಾಗಾಗಿ ಇದು ಅನಿವಾರ್ಯವಾಗಿದೆ.

### 4.3.3 ಶಿಕ್ಷಕರು

ಶಿಕ್ಷಣದ ಹಕ್ಕಿನ ಪ್ರಕಾರ, ಒಂದು ಆದರ್ಶಪ್ರಾಯವಾದ ಶಾಲಾ ಪರಿಸರದಲ್ಲಿ ತಾರತಮ್ಯ ಮತು ಒತ್ತಡಗಳು ಇರುವುದಿಲ್ಲ ಮತ್ತು ಇದು ಮಗುವಿನ ಸರ್ವಾಂಗ ಅಭಿವೃದ್ಧಿಯನ್ನು ಸಾಧ್ಯಮಾಡುತ್ತದೆ. ಈ ಸನ್ನಿವೇಶದಲ್ಲಿ, ಶಿಕ್ಷಕರ ಪಾತ್ರವು ಪ್ರಮುಖವಾಗಿದೆ ಏಕೆಂದರೆ ಶಿಕ್ಷಣದ ಅನುಭವಗಳು ಅಂತರ್ವಿಷ್ಟ ಮತ್ತು ಅರ್ಥವತ್ತಾಗಿರುವಂತೆ ಮಾಡುವಲ್ಲಿ ಅವರು ಮುಖ್ಯ ಪಾತ್ರ ವಹಿಸುತ್ತಾರೆ. ಈ ಆದರ್ಶಪ್ರಾಯವಾದ ಶಾಲಾ ಪರಿಸರವನ್ನು ಸಾಧಿಸಲು ಶಿಕ್ಷಣದ ಹಕ್ಕು, ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕ ವಿದ್ಯಾರ್ಥಿ ಅನುಪಾತ 1:30 ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 1:35 ಕ್ಕೆ ಮತ್ತು ವ್ಯವಸ್ಥೆಯಲ್ಲಿ ತರಬೇತಿ ಪಡೆದ ನಿಯತ ಶಿಕ್ಷಕರನ್ನು ನೇಮಿಸಲು ನಿಯಮಗಳನ್ನು ರೂಪಿಸಿದೆ.

ತಾಲೂಕು ಮಟ್ಟದಲ್ಲಿ ಸರಾಸರಿಯಾಗಿ, ಶಿಕ್ಷಣದ ಹಕ್ಕು ಸೂಚಿಸಿರುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಅಪೇಕ್ಷಿಸಿದ ಶಿಕ್ಷಕ ವಿದ್ಯಾರ್ಥಿ ಅನುಪಾತವನ್ನು ಪೂರೈಸುತ್ತದೆ (ಕೋಷ್ಟಕ 4.14). ಆದರೆ ಶಾಲಾ ಮಟ್ಟದಲ್ಲಿ ಈ ದತ್ತಾಂಶವನ್ನು ಪ್ರತ್ಯೇಕಿಸಿ ಪರಿಶೀಲಿಸಿದಾಗ ಚಿತ್ರಣವು ಬದಲಾಗುತ್ತದೆ. DISE ಜಿಲ್ಲಾ ವರದಿ ಕಾರ್ಡ್ 2011-12 ಪ್ರಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶೇ. 5.4ಪ್ರಾಥಮಿಕ ಶಾಲೆಗಳು ಶಿಕ್ಷಕ-ವಿದ್ಯಾರ್ಥಿ ಅನುಪಾತ 1:30 ಕ್ಕಿಂತ ಹೆಚ್ಚು ಹೊಂದಿವೆ, ಮತ್ತು ಶೇ. 5.3 ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಶಿಕ್ಷಕ-ವಿದ್ಯಾರ್ಥಿ ಅನುಪಾತ 1:35 ಕ್ಕಿಂತ ಹೆಚ್ಚು ಹೊಂದಿವೆ. ಆದ್ದರಿಂದ, ಶಿಕ್ಷಕರ ತಾರ್ಕಿಕ ಪುನರ್-ನಿಯೋಜನೆ ಮತ್ತು ವರ್ಗಾವಣೆಯ ಅಥವಾ ಹೊಸ ಶಿಕ್ಷಕರ ನೇಮಕಾತಿಯ ಅವಶ್ಯಕತೆಯಿದ್ದು, ಪ್ರತಿ ಶಾಲೆಯೂ ನಿಯಮಗಳನ್ನು ಪಾಲಿಸುವಂತೆ ಖಚಿತಪಡಿಸಿಕೊಳ್ಳಬೇಕು.

ಸಾಂಪ್ರದಾಯಿಕವಾಗಿ ಕರ್ನಾಟಕವು ಪೂರ್ಣಾವಧಿ ಶಿಕ್ಷಕರನ್ನೇ ನೇಮಿಸಿಕೊಂಡಿದ್ದು, ಇತರ ರಾಜ್ಯಗಳಂತೆ ಅರೆಕಾಲಿಕ ಶಿಕ್ಷಕರೆಂದು ಕರೆಸಿಕೊಳ್ಳುವವರನ್ನು ನೇಮಿಸಿಲ್ಲ. ಜಿಲ್ಲಾ ವರದಿ ಪತ್ರ 2011-12 DISE ಪ್ರಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶೇ. 95 ರಷ್ಟು ಶಿಕ್ಷಕರು ವೃತ್ತಿಪರ ತರಬೇತಿ ಪಡೆದಿದ್ದಾರೆ. ವ್ಯವಸ್ಥೆಯಲ್ಲಿ ಪೂರ್ಣಾವಧಿ ಶಿಕ್ಷಕರಾಗಲು ಕರ್ನಾಟಕವು ಕನಿಷ್ಠ ಶೈಕ್ಷಣಿಕ ಅರ್ಹತೆಯನ್ನೂ ನಿಗದಿಪಡಿಸಿದೆ. ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಲು ಅರ್ಹತೆಯೆಂದರೆ ಪದವಿ-ಪೂರ್ವ ಶಿಕ್ಷಣ ಮತ್ತು ಶಿಕ್ಷಣದಲ್ಲಿ ಡಿಪ್ಲೊಮ ಪದವಿ ಪಡೆದಿರಬೇಕು. ಹಾಗೆಯೇ, ಹಿರಿಯ ಪ್ರಾಥಮಿಕ ಅಥವಾ ಪ್ರೌಢ ಶಾಲಾ ಶಿಕ್ಷಕರಾಗಲು ವ್ಯಕ್ತಿಯು ಪದವಿಯೊಂದಿಗೆ ಶಿಕ್ಷಣದಲ್ಲಿ ಬ್ಯಾಚುಲರ್ ಪದವಿ ಪಡೆದಿರಬೇಕು (ಸರ್ವ ಶಿಕ್ಷ ಅಭಿಯಾನ ವಾರ್ಷಿಕ ವರದಿ, 2009-10, ಪುಟ 80-81), ಮತ್ತು ಇದು ಶಿಕ್ಷಣದ ಹಕ್ಕು ನಿಯಮದಂತೆಯೇ ಇದೆ. ಕೋಷ್ಟಕ 4.15 ತೋರಿಸುವಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಾಥಮಿಕ ಮಟ್ಟದಲ್ಲಿ 1422 ಶಿಕ್ಷಕರು ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ 1630 ಶಿಕ್ಷಕರು ಪರಿಷ್ಕೃತ ಅರ್ಹತೆಗಳನ್ನು ಪೂರೈಸುವುದಿಲ್ಲ, ಮತ್ತು ಅವರು ಅನರ್ಹರಾಗಿದ್ದಾರೆ. ಇವು ಬಹಳ ದೊಡ್ಡ ಸಂಖ್ಯೆಗಳಾಗಿದ್ದು, ಜಿಲ್ಲೆಯು ಇದನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಈಗ ಹಾಲಿ ಶಿಕ್ಷಕರ ಸೇವೆಗಳನ್ನು ರದ್ದುಪಡಿಸಲು ಸಾಧ್ಯವಿಲ್ಲವಾದ್ದರಿಂದ, ಒಂದು ಸಂಭಾವ್ಯ ಕ್ರಮವೆಂದರೆ ಶಿಕ್ಷಕರಿಗೆ ಹೆಚ್ಚುವರಿ ಅರ್ಹತೆಗಳನ್ನು ಪಡೆದುಕೊಳ್ಳುವಂತೆ ಉತ್ತೇಜಿಸುವುದು.

**ಕೋಷ್ಟಕ 4.14: ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ಶಿಕ್ಷಕ–ವಿದ್ಯಾರ್ಥಿ ಅನುಪಾತ**

| ತಾಲೂಕು/ಜಿಲ್ಲೆ | 2004 | | 2011 | |
|---|---|---|---|---|
| | ಪ್ರಾಥಮಿಕ | ಹಿರಿಯ ಪ್ರಾಥಮಿಕ | ಪ್ರಾಥಮಿಕ | ಹಿರಿಯ ಪ್ರಾಥಮಿಕ |
| ದೇವನಹಳ್ಳಿ | 25 | 32 | 12 | 19 |
| ದೊಡ್ಡಬಳ್ಳಾಪುರ | 24 | 33 | 12 | 19 |
| ಹೊಸಕೋಟೆ | 23 | 30 | 12 | 20 |
| ನೆಲಮಂಗಲ | 19 | 29 | 10 | 18 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 23 | 31 | 12 | 19 |

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಕೋಷ್ಟಕ 4.15 : ಶಿಕ್ಷಕರ ಶೈಕ್ಷಣಿಕ ವಿದ್ಯಾರ್ಹತೆ, 2011**

| ಶಾಲಾ ವರ್ಗ | 0 ಕ್ಕಿಂತ ಕಡಿಮೆ | ಪ್ರೌ | ಹಿ.ಪ್ರಾ. | ಪದವಿ | ಸ್ನಾತಕೋತ್ತರ | ಎಮ್.ಫಿಲ್ | ಇತರೆ |
|---|---|---|---|---|---|---|---|
| ಪ್ರಾಥಮಿಕ ಮಾತ್ರ | 22 | 430 | 779 | 200 | 73 | 4 | 14 |
| ಹಿರಿಯ ಪ್ರಾಥಮಿಕದೊಂದಿಗೆ ಪ್ರಾಥಮಿಕ | 33 | 819 | 1,327 | 486 | 233 | 8 | 64 |
| ಹಿ.ಪ್ರಾ ಮತ್ತು ಪ್ರೌಢ/ಹಿ.ಪ್ರೌ. ದೊಂದಿಗೆ ಪ್ರಾಥಮಿಕ. | 21 | 56 | 229 | 359 | 220 | 3 | 78 |
| ಹಿರಿಯ ಪ್ರಾಥಮಿಕ ಮಾತ್ರ | 2 | 5 | 2 | 9 | 8 | 0 | 18 |
| ಪ್ರೌಢ ಮತ್ತು ಹಿ.ಪ್ರೌ. ದೊಂದಿಗೆ ಹಿರಿಯ ಪ್ರಾಥಮಿಕ | 9 | 112 | 72 | 512 | 592 | 16 | 89 |
| ಒಟ್ಟು | 87 | 1,422 | 2,409 | 1,566 | 1,126 | 31 | 263 |

ಪ್ರ–ಪ್ರೌಢ; ಹಿ.ಪ್ರ.: ಹಿರಿಯ ಪ್ರೌಢ; ಎಮ್.ಫಿಲ್: ಮಾಸ್ಟರ್ ಆಫ್ ಫಿಲಾಸಫಿ

### 4.3.4 ಕಲಿಕೆಯ ಫಲಿತಾಂಶಗಳು

ಕಲಿಕೆಯ ಗುಣಮಟ್ಟಕ್ಕೆ ಕಲಿಕೆಯ ಫಲಿತಾಂಶವೊಂದೇ ಸೂಚಕವಲ್ಲದಿದ್ದರೂ, ಅದು ಬಹಳ ಮುಖ್ಯವಾದ ಮಾಪನ ಮಾಡಬಹುದಾದ ಸೂಚಕವು. ಆದರೆ, ಕಲಿಕೆಯ ಸಾಧನೆಯ ಬಗ್ಗೆ ದತ್ತಾಂಶವು ಸುಲಭವಾಗಿ ಲಭ್ಯವಿಲ್ಲ ಮತ್ತು ASER ಸಮೀಕ್ಷೆಯಿಂದ ಲಭ್ಯವಿರುವ ದತ್ತಾಂಶವು ವಿವಿಧ ಮಿತಿಗಳಿಂದ ಬಳಲುತ್ತಿದೆ: ಸಣ್ಣ ಮಾದರಿ, ಕೆಲವು ಪ್ರಕರಣಗಳಲ್ಲಿ ಅಸಂಜಸವಾದ ಪರೀಕ್ಷೆಗಳು, ವಿಧಾನ ಸಂಬಂಧಿತ ಸಮಸ್ಯೆಗಳು, ಉದಾ. ಶಾಲೆಯ ವಾತಾವರಣದ ಬದಲಾಗಿ ಮನೆಯಲ್ಲಿ ಪರೀಕ್ಷೆಗಳು. ಆದರೂ, ಬೇರೆ ಯಾವುದೇ ಮೂಲವು ಲಭ್ಯವಿರದ ಕಾರಣ, ಇದು ಮುಖ್ಯವಾಗುತ್ತದೆ ಮತ್ತು ಒಂದು ಮಿತಿಯಲ್ಲಾದರೂ ಸತ್ಯದ ಸೂಚಕವೆಂದು ಪರಿಗಣಿಸಬಹುದಾಗಿದೆ. ಕೋಷ್ಟಕ 4.16, ಅದರಲ್ಲಿ ಸೇರಿಸಲಾದ ನಾಲ್ಕೂ ಸೂಚಕಗಳಲ್ಲಿ ಕರ್ನಾಟಕದ ಮಕ್ಕಳಿಗಿಂತ ಬೆಂಗಳೂರು ಗ್ರಾಮಾಂತರ ಜಿಲ್ಲೆದ ಮಕ್ಕಳ ಸಾಧನೆಯು ಉತ್ತಮವಾಗಿತ್ತೆಂದು ತೋರಿಸುತ್ತದೆ. ತರಗತಿ 1 ಮತ್ತು 2 ರ ಸುಮಾರು ಶೇ. 95 ರಷ್ಟು ಮಕ್ಕಳು ಸಂಖ್ಯೆಗಳನ್ನು ಓದಿ, ಗುರುತಿಸಬಲ್ಲವರಾಗಿದ್ದರು. ತರಗತಿ 3 ರಿಂದ 5 ರವರೆಗಿನ ಮಕ್ಕಳ ಸಾಧನೆಯು, ಭಾಷೆ ಮತ್ತು ಗಣಿತ ಎರಡರಲ್ಲಿಯೂ ಅಷ್ಟು ಉತ್ತಮವಾಗಿರಲಿಲ್ಲ. ಇದು ಚಿಂತೆಗೆ ಕಾರಣವಾಗಿದ್ದು, ಇದರ ಬಗ್ಗೆ ಗಮನ ಹರಿಸಬೇಕು.

**ಕೋಷ್ಟಕ 4.16: ಪ್ರಾಥಮಿಕ ಶಾಲೆಯ ಮಕ್ಕಳ ಕಲಿಕೆಯ ಸಾಧನೆಗಳು (2013)**

| ಸೂಚಕಗಳು | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಕರ್ನಾಟಕ |
|---|---|---|
| ಅಂಕಿಗಳನ್ನು (0-9) ಅಥವಾ ಹೆಚ್ಚನ್ನು ಗುರುತಿಸಬಲ್ಲ ಮಕ್ಕಳ ಶೇ. (ಕಕ್ಷೆ 1-2) | 94.7 | 86.1 |
| ಅಕ್ಷರಗಳನ್ನು ಅಥವಾ ಹೆಚ್ಚನ್ನು ಓದಬಲ್ಲ ಮಕ್ಕಳ ಶೇ. (ಕಕ್ಷೆ 1-2) | 94.7 | 83.8 |
| ಕಳಕೆಯನ್ನು (0-9) ಅಥವಾ ಹೆಚ್ಚನ್ನು ಮಾಡಬಲ್ಲ ಮಕ್ಕಳ ಶೇ. (ಕಕ್ಷೆ 3-5) | 56.5 | 45.0 |
| ತರಗತಿ 1 ಮಟ್ಟದ ಪಠ್ಯ (0-9) ಅಥವಾ ಹೆಚ್ಚನ್ನು ಓದಬಲ್ಲ ಮಕ್ಕಳ ಶೇ. (ಕಕ್ಷೆ 3-5) | 70.8 | 56.6 |

ಮೂಲ: ASER 2013, ಜಿಲ್ಲಾ ಸಾಧನೆ ಕೋಷ್ಟಕಗಳು, ಕರ್ನಾಟಕ

### 4.3.6 ಕಾರ್ಯನೀತಿಯ ಪ್ರತಿಕ್ರಿಯೆಗಳು

ಶಿಕ್ಷಣದ ಲಭ್ಯತೆ ಮತ್ತು ಗುಣಮಟ್ಟವನ್ನು ಸುಧಾರಿಸಲು ರಾಜ್ಯ ಸರ್ಕಾರವು ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ.ಇದರಲ್ಲಿ ಹಲವು ಉಪಕ್ರಮಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೂ ಅನುಷ್ಠಾನಗೊಂಡಿವೆ. ಬಹಳಷ್ಟು ಉಪಕ್ರಮಗಳು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳ ಭಾಗವಾಗಿದೆ ಮತ್ತು ಕೆಲವು ರಾಜ್ಯದ ಉಪಕ್ರಮಗಳಾಗಿವೆ. ಉದಾಹರಣೆಗೆ, ಕರ್ನಾಟಕ ಸರ್ಕಾರವು ಇಡೀ ರಾಜ್ಯದ ಎಲ್ಲಾ ಪ್ರಾಥಮಿಕ ತರಗತಿಗಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ವಿತರಿಸುವ ಯೋಜನೆಯನ್ನು, ದೇಶದ ಇತರ ಭಾಗಗಳಲ್ಲಿ ಕೇಂದ್ರ ಪ್ರಾಯೋಜಿತ ಯೋಜನೆಗಳ ಬೆಂಬಲ ಸಿಗುವ ಬಹಳಷ್ಟು ಮುಂಚೆಯೇ ಆರಂಭಿಸಿತ್ತು. 1996ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯೆಂಬ ಬೃಹತ್ ಪ್ರಾಥಮಿಕ ಶಿಕ್ಷಣ ಸುಧಾರಣಾ ಯೋಜನೆಯ ಭಾಗವಾಗಿತ್ತು. 1994ರಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು, ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕತೆಯ ಉದ್ದೇಶವನ್ನು ಈಡೇರಿಸಲು ಮತ್ತು ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ಸುಧಾರಿಸಲು ಹೊಸ ಮಾದರಿಯನ್ನು ವಿಕಸಿಸಲು, ಆರಂಭಿಸಲಾಯಿತು. 1994ರಲ್ಲಿ ಆರಂಭವಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಒಂದನೇ ಹಂತದ ಭಾಗವಾಗಿದ್ದ ಏಳು ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದ್ದು, ನಾಲ್ಕು ಜಿಲ್ಲೆಗಳನ್ನು ವ್ಯಾಪಿಸಿತ್ತು. ಅವುಗಳೆಂದರೆ, ಕೋಲಾರ, ಮಂಡ್ಯ, ರಾಯಚೂರು ಮತ್ತು ಬೆಳಗಾವಿ. ಎರಡನೇ ಹಂತದಲ್ಲಿ, ಬೆಂಗಳೂರು ಸೇರಿದಂತೆ ಮತ್ತೂ 14 ಜಿಲ್ಲೆಗಳನ್ನು ಸೇರಿಸಲಾಯಿತು. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಪ್ರಮುಖ ಉದ್ದೇಶವು ಜಿಲ್ಲಾ ನಿರ್ದಿಷ್ಟ ಶೈಕ್ಷಣಿಕ ಯೋಜನೆಗಳನ್ನು ತಯಾರಿಸುವುದು ಮತ್ತು ಶಿಕ್ಷಣದಲ್ಲಿ ಸಾರ್ವತ್ರಿಕ ಲಭ್ಯತೆ, ದಾಖಲಾತಿ, ಧಾರಣೆ ಮತ್ತು ಗುಣಮಟ್ಟದಲ್ಲಿ ಸುಧಾರಣೆಯನ್ನು ಸಾಧಿಸಿ, ಎಲ್ಲಾ ಮಕ್ಕಳು ಅಗತ್ಯ ಮಟ್ಟದ ಕಲಿಕೆಯನ್ನು ಪಡೆಯಲು ಸಾಧ್ಯವಾಗಿಸುವುದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪೂರ್ಣ ಸಾಕ್ಷರತಾ ಮಿಶನ್ ಅಭಿಯಾನಗಳು ಪ್ರಾಥಮಿಕ ಶಿಕ್ಷಣದ ಬಗ್ಗೆ ಜಾಗೃತಿ ಮತ್ತು ಬೇಡಿಕೆ ಮೂಡಿಸುವಲ್ಲಿ ಸಹಾಯಕವಾಗಿದ್ದವು. ಇದನ್ನು ಅನುಸರಿಸಿ, ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಆಸಕ್ತಿಯನ್ನು ಮರುಸ್ಥಾಪಿಸಲು ಮತ್ತು ಬೆಂಬಲ ನೀಡಲು ಸಾಧ್ಯವಾಯಿತು.

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಅನುಭವವನ್ನು ಅನುಸರಿಸಿ, ಸರ್ವ ಶಿಕ್ಷ ಅಭಿಯಾನವನ್ನು 2002ರಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ, ನಿರ್ದಿಷ್ಟ ಅವಧಿಯಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉದ್ದೇಶಗಳನ್ನು ಈಡೇರಿಸಲು, ಆರಂಭಿಸಲಾಯಿತು. ಈ ಕಾರ್ಯಕ್ರಮವು, ಶಾಲಾ ಸೌಲಭ್ಯಗಳಿಲ್ಲದ ಪ್ರದೇಶಗಳಲ್ಲಿ ಹೊಸ ಶಾಲೆಗಳನ್ನು ತೆರೆಯಲು ಮತ್ತು ಈಗಿರುವ ಶಾಲಾ ಮೂಲಸೌಕರ್ಯಗಳನ್ನು ಹೆಚ್ಚುವರಿ ಕೋಣೆಗಳು, ಶೌಚಾಲಯಗಳನ್ನು, ಕುಡಿಯುವ ನೀರು, ನಿರ್ವಹಣಾ ಅನುದಾನ ಮತ್ತು ಶಾಲಾ ಸುಧಾರಣೆ ಅನುದಾನಗಳನ್ನು ನೀಡುವ ಮೂಲಕ ಬಲಪಡಿಸುವ ಉದ್ದೇಶ ಹೊಂದಿದೆ. ಸಾಕಷ್ಟು ಶಿಕ್ಷಕರಿಲ್ಲದ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ನೀಡುವುದರ ಜೊತೆಗೆ, ಹಾಲಿ ಶಿಕ್ಷಕರಿಗೆ, ವ್ಯಾಪಕ ತರಬೇತಿ, ಶಿಕ್ಷಕ-ಕಲಿಕೆ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲು ಅನುದಾನ ಮತ್ತು ಕ್ಲಸ್ಟರ್, ಬ್ಲಾಕ್ ಮತ್ತು ಜಿಲ್ಲಾ ಮಟ್ಟದಲ್ಲಿ ಶೈಕ್ಷಣಿಕ ಬೆಂಬಲ ವ್ಯವಸ್ಥೆಗಳನ್ನು ಬಲಪಡಿಸಲಾಗುವುದು. ಇದರ ಜೊತೆಗೆ, ಎಲ್ಲಾ ಜಿಲ್ಲೆಗಳಲ್ಲೂ ಇಲ್ಲದ ಕೆಲವು ಮಧ್ಯಸ್ಥಿಕೆಗಳನ್ನು ಸರ್ವ ಶಿಕ್ಷಣ ಅಭಿಯಾನವು ಮಾಡಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾರ್ಯರೂಪದಲ್ಲಿರುವ ಕೆಲವು ಉಪಕ್ರಮಗಳನ್ನು ಕೆಳಗೆ ಚರ್ಚಿಸಲಾಗಿದೆ.

ಚಿಣ್ಣರ ಜಿಲ್ಲಾ ದರ್ಶಿನಿ, ಸರ್ವ ಶಿಕ್ಷಣ ಅಭಿಯಾನ ಅಡಿ ಆರಂಭಿಸಲಾಗಿರುವ ನವೀನ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ, 2009-10ರಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಆರಂಭಿಸಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತವಾಗಿರುವ ಈ ಎರಡು ದಿನಗಳ ಕಾರ್ಯಕ್ರಮವು, ಹೊರಗಿನ ಪ್ರಪಂಚದೊಂದಿಗೆ ಶಾಲಾ ಚಟುವಟಿಕೆಗಳನ್ನು ಸಮಗ್ರಗೊಳಿಸಿ ತರಗತಿ ಕಲಿಕೆಗೆ ಪೂರಕವಾಗಿರುವುದು ಇದರ ಉದ್ದೇಶ. 2009-10 ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ 1600 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಈ ಯೋಜನೆಯ ಲಾಭ ಪಡೆದುಕೊಂಡಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಯೋಜನೆಗೆ ರಾಜ್ಯವು ರೂ. 15 ಲಕ್ಷಗಳನ್ನು ಖರ್ಚು ಮಾಡಿತ್ತು. ಗಣಕಯಂತ್ರ ಬೆಂಬಲಿತ ಕಲಿಕಾ ಕೇಂದ್ರಗಳನ್ನು ಸರ್ವ ಶಿಕ್ಷಣ ಅಭಿಯಾನದ ಅಡಿ ಆರಂಭಿಸಲಾಗಿದ್ದು, ದೃಶ್ಯ ಮಾಧ್ಯಮದ ಮೂಲಕ ತರಗತಿ ಚಟುವಟಿಕೆಗಳಲ್ಲಿ ಬದಲಾವಣೆ ತರುವುದರ ಮೂಲಕ ಇದರಲ್ಲೇ ಸೇರಿರುವ ಮೌಲ್ಯಮಾಪನದ ಮೂಲಕ ಕಲಿಕೆಯನ್ನು ಬಲಗೊಳಿಸುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 93 ಗಣಕಯಂತ್ರ ಬೆಂಬಲಿತ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇದರ ವ್ಯಾಪ್ತಿಯಲ್ಲಿ 20558 ವಿದ್ಯಾರ್ಥಿಗಳಿದ್ದಾರೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕತೆಯನ್ನು ಸಾಧಿಸಲು ಭಾರತ ಸರ್ಕಾರವು ಬೆಂಬಲಿಸಿದ ಮತ್ತೊಂದು ಕಾರ್ಯಕ್ರಮವೆಂದರೆ ಮಧ್ಯಾಹ್ನದ ಊಟ. ಮಧ್ಯಾಹ್ನದ ಊಟ ಕಾರ್ಯಕ್ರಮವನ್ನು ಮೊದಲು ಪ್ರಾಥಮಿಕ ತರಗತಿಗಳಿಗೆ ಶಿಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ರಾಜ್ಯದ 7 ಈಶಾನ್ಯ ಜಿಲ್ಲೆಗಳಲ್ಲಿ 2001-2002ರಲ್ಲಿ ಆರಂಭಿಸಲಾಯಿತು. ನಂತರ, ಈ ಯೋಜನೆಯನ್ನು ಇತರ ಜಿಲ್ಲೆಗಳಿಗೂ ಹಂತ ಹಂತವಾಗಿ ವಿಸ್ತರಿಸಲಾಯಿತು. ಈಗ ಈ ಯೋಜನೆಯನ್ನು ತರಗತಿ 1 ರಿಂದ 8 ರವರೆಗೂ ದಾಖಲಾದ ಮಕ್ಕಳಿಗೆ ವಿಸ್ತರಿಸಲಾಗಿದೆ. ಕರ್ನಾಟಕ ಸರ್ಕಾರವು, ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 9 ಮತ್ತು 10 ನೇ ತರಗತಿಯ ಮಕ್ಕಳಿಗೆ ಮಧ್ಯಾಹ್ನದ ಬಿಸಿಊಟದ ವ್ಯವಸ್ಥೆಯನ್ನು ತನ್ನ ಸಂಪನ್ಮೂಲಗಳಿಂದಲೇ ಒದಗಿಸುತ್ತದೆ. ಇತ್ತೀಚೆಗೆ, ಪ್ರತಿ ಮಗುವಿಗೂ ಊಟದ ಜೊತೆಗೆ ಹಾಲನ್ನು ನೀಡುವುದು ಕಡ್ಡಾಯವೆಂದು ರಾಜ್ಯ ಸರ್ಕಾರವು ಸಾರಿತು. ಈ ಯೋಜನೆಯು ಮಕ್ಕಳಲ್ಲಿ ಪೌಷ್ಟಿಕತೆಯನ್ನು ಹೆಚ್ಚಿಸಿ, ಗಣನೀಯ ರೀತಿಯಲ್ಲಿ ಆಹಾರ ಭದ್ರತೆಯನ್ನು ಒದಗಿಸುವ ಉದ್ದೇಶ ಹೊಂದಿದೆ. ಇದು ದಾಖಲಾತಿ, ಹಾಜರಿ ಮತ್ತು ಧಾರಣೆ ಪ್ರಮಾಣಗಳ ಮೇಲೂ ಸಕಾರಾತ್ಮಕವಾದ ಪರಿಣಾಮ ಬೀರುತ್ತದೆ. ನವೆಂಬರ್ 2013ರ ವರೆಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಯೋಜನೆಯ ವ್ಯಾಪ್ತಿಯನ್ನು ಕೋಷ್ಟಕ 4.17ರಲ್ಲಿ ನೀಡಲಾಗಿದೆ.

**ಕೋಷ್ಟಕ 4.17: ಮಧ್ಯಾಹ್ನದ ಬಿಸಿ ಊಟ ಯೋಜನೆಯಡಿ ಬರುವ ವಿದ್ಯಾರ್ಥಿಗಳ ಸಂಖ್ಯೆ (ನವೆಂಬರ್ 2013ವರೆಗೆ)**

| ತಾಲೂಕು/ಜಿಲ್ಲೆ | ತರಗತಿ | | | | | ಹಾಲನ್ನು ನೀಡಲಾಗುತ್ತಿದೆಯೆ | ಶಾಲಾ ಅಡುಗೆ ಕೋಣೆಯನ್ನು ಪ್ರಾಯೋಜಿಸಿರುವ ಶಾಲೆಗಳ ಸಂಖ್ಯೆ | |
|---|---|---|---|---|---|---|---|---|
| | 1 ರಿಂದ 5 | 6 ರಿಂದ 7 | 8 | 9 ರಿಂದ 10 | ಒಟ್ಟು | | ಸರ್ಕಾರ | ಖಾಸಗಿ |
| ದೇವನಹಳ್ಳಿ | 8,352 | 3,830 | 2,177 | 3,875 | 18,234 | ಹೌದು | 243 | 8 |
| ದೊಡ್ಡಬಳ್ಳಾಪುರ | 12,502 | 5,474 | 3,004 | 5,451 | 26,431 | ಹೌದು | 390 | 16 |
| ಹೊಸಕೋಟೆ | 10,475 | 4,650 | 1,950 | 4,860 | 21,935 | ಹೌದು | 290 | 40 |
| ನೆಲಮಂಗಲ | 9,152 | 4,432 | 1,343 | 3,601 | 18,528 | ಹೌದು | 317 | 0 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 40,481 | 18,386 | 8,474 | 17,787 | 85,128 | ಹೌದು | 1240 | 64 |

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ರಾಜ್ಯದ ಮತ್ತೊಂದು ಪ್ರಮುಖ ಕಾರ್ಯಕ್ರಮವೆಂದರೆ ನಲಿ-ಕಲಿ. ನಲಿ-ಕಲಿ ಎಂದರೆ ಸಂತೋಷದ ಕಲಿಕೆ, ಇದನ್ನು 1995ರಲ್ಲಿ ಎಚ್ ಡಿ ಕೋಟೆ, ಮೈಸೂರು ಜಿಲ್ಲೆಯಲ್ಲಿ ಯೂನಿಸೆಫ್ ಬೆಂಬಲಿತ ಮಾರ್ಗದರ್ಶಿ ಯೋಜನೆಯನ್ನಾಗಿ ಆರಂಭಿಸಲಾಯಿತು. ಪ್ರಾಥಮಿಕ ಶಾಲೆಗಳನ್ನು ಪುನರುಜ್ಜೀವನಗೊಳಿಸಲು ಮಾರ್ಗಗಳನ್ನು ಅರಸುತ್ತಾ, 15 ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು ಆಡಳಿತಗಾರರ ತಂಡವು ಋಷಿ ವ್ಯಾಲಿಗೆ (ಮದನಪಲ್ಲಿ, ಚಿತ್ತೂರ್ ಜಿಲ್ಲೆ, ಆಂಧ್ರ ಪ್ರದೇಶ) ತೆರಳಿ, ಉಪಗ್ರಹ ಶಾಲೆಗಳಲ್ಲಿ, ಬಹು-ಶ್ರೇಣಿ ತರಗತಿಗಳಲ್ಲಿ ಮಕ್ಕಳು ಓದಲು ಬರೆಯಲು ಕಲಿಯುತ್ತಾ, ಆನಂದಕರ ಮತ್ತು ರೋಮಾಂಚಕ ಪರಿಸರದಲ್ಲಿ ತಮ್ಮ ಸೃಜನಶೀಲತೆಯನ್ನು ಹರಿಯಬಿಟ್ಟಿರುವುದನ್ನು ಅಧ್ಯಯನ ಮಾಡಿದರು. ಹಿಂದಿರುಗಿಬಂದಾಗ, ಅವರು ಈ ಮಾರ್ಗವನ್ನು ಕರ್ನಾಟಕಕ್ಕೆ ಅಳವಡಿಸಿಕೊಂಡು, ರಾಜ್ಯವ್ಯಾಪಿ ಕಾರ್ಯಕ್ರಮದ ಬೀಜವನ್ನು ನೆಟ್ಟರು, ಇದು ನಂತರ ನಲಿ ಕಲಿ ಎಂದು ಪ್ರಸಿದ್ಧವಾಯಿತು. ನಲಿ ಕಲಿ ಬಹಳ ಪ್ರಮುಖವಾದದ್ದು ಏಕೆಂದರೆ, ರಾಜ್ಯ ಸರಕಾರವು ಮಾನ್ಯ ಮಾಡಿದ ಶಿಕ್ಷಕ ಮುಂದಾಳತ್ವದ ಉಪಕ್ರಮವು. 2009-2010ರಲ್ಲಿ, ರಾಜ್ಯದ ಎಲ್ಲಾ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ 1 ಮತ್ತು 2 ನೇ ತರಗತಿಗಳಿಗೆ ನಲಿ-ಕಲಿ ಯನ್ನು ವಿಸ್ತರಿಸಲಾಯಿತು. ಶಾಲೆಗಳಲ್ಲಿ ಕಾರ್ಯಕ್ರಮವನ್ನು ನಡೆಸಲು ಅಗತ್ಯವಿರುವ ಎಲ್ಲಾ ಸಾಮಗ್ರಿಗಳನ್ನು ಸರ್ಕಾರವು ಒದಗಿಸಿತು ಮತ್ತು ಶಿಕ್ಷಕರಿಗೆ ತರಬೇತಿ ನೀಡಿತು. ನಲಿ ಕಲಿಯು ಮುಖ್ಯವಾಗಿ ಚಟುವಟಿಕೆ ಆಧಾರಿತ ಕಲಿಕೆ ಪ್ರಕ್ರಿಯೆಯಾಗಿದೆ. ಇದು ಆನಂದದಾಯಕ ಕಲಿಕೆಯನ್ನು ಒಳಗೊಂಡಿದ್ದು, ಇದರಲ್ಲಿ ಹಾಡು, ಆಟ, ಸಮೀಕ್ಷೆ, ಕಥೆಗಳು ಮತ್ತು ಶಿಕ್ಷಣಿಕ ಆಟಿಕೆಗಳ ಬಳಕೆಯಾಗುತ್ತದೆ. ಇದರ ಉದ್ದೇಶವು ವಿದ್ಯಾರ್ಥಿಗಳು ತರಗತಿಯಲ್ಲಿ ಪಾಲ್ಗೊಂಡು, ತರಗತಿಯ ಪರಸ್ಪರ ಚಟುವಟಿಕೆಗಳ ಮಟ್ಟವನ್ನು ಹೆಚ್ಚಿಸಿ, ಶಿಕ್ಷಕರ ಮೇಲಿನ ಭಾರವನ್ನು ಇಳಿಸಿ, ತರಗತಿಯ ಪರಿಸರವನ್ನು ಒತ್ತಡರಹಿತವಾಗಿ ಮಾಡುವುದಾಗಿದೆ. ಸಿಎಮ್‌ಡಿಆರ್, ಧಾರವಾಡ ನಡೆಸಿದ ನಲಿಕಲಿಯ ಮೌಲ್ಯಮಾಪನದಲ್ಲಿ, (ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಒಳಗೊಂಡಿತ್ತು) ಮಾದರಿ ಶಾಲೆಗಳಲ್ಲಿ ತರಗತಿ ಪರಿಸರವು ಅನುಕೂಲಕರ ಮತ್ತು ಚಿಂತನಶೀಲವಾಗಿದ್ದು, ಬಹಳಷ್ಟು ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದುದು ಕಂಡುಬಂದಿತು (ಸಿಎಮ್‌ಡಿಆರ್, ಧಾರವಾಡ 2010).

ಜಿಲ್ಲೆಯು ಶಾಲಾ ದತ್ತು ಕಾರ್ಯಕ್ರಮವನ್ನು ಆರಂಭಿಸಿದ್ದು, ಇದರಲ್ಲಿ ಸಮುದಾಯ/ಖಾಸಗಿ ತಂಡಗಳು ಶಾಲೆಗಳನ್ನು ದತ್ತು ಪಡೆಯಲು, ಮತ್ತು ವಿವಿಧ ಉದ್ದೇಶಗಳಿಗೆ ಸಂಪನ್ಮೂಲಗಳನ್ನು ಸೃಷ್ಟಿಸಲು ಉತ್ತೇಜಿಸಲಾಗುತ್ತದೆ. ಬಹಳಷ್ಟು ಸಂಖ್ಯೆಯಲ್ಲಿ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳಾದ, ಪ್ರಜಾಯತ್ನ, ಅಕ್ಷರ ಫೌಂಡೇಶನ್, ಅಮೇರಿಕ ಇಂಡಿಯಾ ಫೌಂಡೇಶನ್ ಮತ್ತು ಶಿಕ್ಷಣ ಫೌಂಡೇಶನ್ ಮತ್ತು ಸಿಸ್ಕೊ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ನಂತಹ ಸಂಸ್ಥೆಗಳು, ಸಾಮುದಾಯಿಕ ಸುಸಜ್ಜಿತೆ, ಶಾಲಾ ಉಸ್ತುವಾರಿ ಸಮಿತಿ ತರಬೇತಿ, ಶಿಕ್ಷಣ ಕಲಿಕೆ ಸಾಮಗ್ರಿಗಳ ಒದಗಿಸುವಿಕೆ, ಭೌತಿಕ ಮೂಲಸೌಕರ್ಯದ ವರ್ಧನೆ ಮತ್ತು ತಂತ್ರಜ್ಞಾನ ಬೆಂಬಲಿತ ಕಲಿಕೆಗಳಂತಹ ವಿವಿಧ ಉದ್ದೇಶಗಳಿಗೆ ಸರ್ಕಾರದೊಂದಿಗೆ ಸಕ್ರಿಯವಾಗಿ ಸಹಯೋಗಿಸುತ್ತಿವೆ.

## 4.4 ಪ್ರೌಢ ಶಿಕ್ಷಣ

ಪ್ರೌಢ ಶಿಕ್ಷಣವನ್ನು ಅವಕಾಶಗಳ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಲಾಭಗಳ ಹೆಬ್ಬಾಗಿಲಾಗಿ ಪರಿಗಣಿಸಲಾಗಿದೆ. ವ್ಯಕ್ತಿಗಳು ಮತ್ತು ದೇಶ ಎರಡಕ್ಕೂ ಉತ್ತಮವಾದ ಭವಿಷ್ಯವನ್ನು ಸೃಷ್ಟಿಸಲು ಗುಣಮಟ್ಟದ ಪ್ರೌಢ ಶಿಕ್ಷಣವು ಅನುಪೇಕ್ಷ್ಯವಾಗಿದೆ. ಇದು ಬಾಲ್ಯ ಮತ್ತು ಯೌವನಾವಸ್ಥೆಯ ನಡುವಿನ ಅತಿಮುಖ್ಯ ಘಟ್ಟವಾಗಿದ್ದು, ಶಿಕ್ಷಣವು ಅಗಾಧ ರೀತಿಯ ಅವಶ್ಯಕತೆಗಳಿಗೆ ಪ್ರತಿಕ್ರಿಯಿಸಬೇಕಿದೆ: ಉನ್ನತ ಶಿಕ್ಷಣಕ್ಕೆ ತಯಾರಿ, ಮತ್ತು/ಅಥವ ಕಾರ್ಮಿಕ ಮಾರುಕಟ್ಟೆಯ ಪಾಲ್ಗೊಳ್ಳಲು ತಯಾರಿ, ಆಳವಾಗುವ ಅಂಗ ಸಂಬಂಧಿತ ವ್ಯಕ್ತಿತ್ವಗಳು ಮತ್ತು ತಮ್ಮ ಹಾಗೂ ಇತರರ ಬಗೆಬಗೆಯ ನಿರೀಕ್ಷೆಗಳನ್ನು ಈಡೇರಿಸಲು ಅಗತ್ಯವಿರುವ ಜೀವ-ಕೌಶಲ್ಯಗಳನ್ನು ಬಲಪಡಿಸುವುದು.

### 4.4.1 ಲಭ್ಯತೆ ಮತ್ತು ದಾಖಲಾತಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರೌಢ ಶಿಕ್ಷಣವು ಅಗಾಧ ಸಂಖ್ಯೆಯ ಖಾಸಗಿ ಶಾಲೆಗಳಿಂದ ಕೂಡಿದೆ. ಶುಲ್ಕ ಪಡೆಯುವ ಖಾಸಗಿ ಅನುದಾನರಹಿತ ಶಾಲೆಗಳು ಪ್ರತಿ ತಾಲೂಕಿನಲ್ಲೂ ಇರುವ ಪ್ರೌಢ ಶಾಲೆಗಳ ಅರ್ಧದಷ್ಟು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿವೆ; ಅತಿ ಹೆಚ್ಚು ಪಾಲು ನೆಲಮಂಗಲದಲ್ಲಿ ಮತು ನಂತರ ಹೊಸಕೋಟೆಯಲ್ಲಿವೆ (ಕೋಷ್ಟಕ 4.18). ಸರ್ಕಾರಿ ಶಾಲೆಗಳು ಪ್ರೌಢ ಶಾಲೆಗಳ ಒಟ್ಟು ಸಂಖ್ಯೆಯ ಮೂರನೇ ಒಂದಕ್ಕಿಂತ ಕಡಿಮೆಯಿದ್ದು, ಉಳಿದ ಭಾಗವು ಅನುದಾನಿತ ಖಾಸಗಿ ಶಾಲೆಗಳಾಗಿವೆ. ದೇಶದ ಬಹಳಷ್ಟು ಸ್ಥಳಗಳಲ್ಲಿ ಸಾಮಾನ್ಯವಾಗಿರುವಂತೆ, ಜಿಲ್ಲೆಯಲ್ಲಿ ಖಾಸಗಿ ಶಾಲೆಗಳ ಬೆಳವಣಿಗೆಗೆ ಕಾರಣವು, ಆಂಗ್ಲ ಮಾಧ್ಯಮ ಶಾಲೆಗಳಿಗೆ ಇರುವ ಬೇಡಿಕೆ ಮತ್ತು ಖಾಸಗಿ ಶಾಲೆಗಳು ಸರ್ಕಾರಿ ಶಾಲೆಗಳಿಗಿಂತ ಉತ್ತಮ ಎಂಬ ಪೋಷಕರಲ್ಲಿನ ಭಾವನೆ ಆಗಿರಬಹುದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಈ ಬೆಳವಣಿಗೆಯು ಶಾಲೆಯಿಂದ ಹೊರಗುಳಿದ ಮಕ್ಕಳ ಮತ್ತು ಶಿಶು ಜಾಡಿನ ದತ್ತಾಂಶದ ಪರಿಶೀಲನೆಯು ಸೂಚಿಸುವಂತೆ ಬೆಂಗಳೂರು ನಗರಕ್ಕೆ ಆಗುವ ಹೆಚ್ಚು ಮಟ್ಟದ ವಲಸೆಗೆ ಪ್ರತಿಕ್ರಿಯೆಯಾಗಿರಬಹುದು.

**ಕೋಷ್ಟಕ 4.18: ಆಡಳಿತ ಮಂಡಳಿಯ ವರ್ಗದಡಿ ಪ್ರೌಢ ಶಾಲೆಗಳ ಒಟ್ಟು ಸಂಖ್ಯೆ (2013–14)**

| ತಾಲೂಕು/ಜಿಲ್ಲೆ | ಒಟ್ಟು ಪ್ರೌಢ ಶಾಲೆಗಳ ಸಂಖ್ಯೆ | ಸರ್ಕಾರಿ ಶಾಲೆಗಳು | ಸರಕಾರ ಅನುದಾನಿತ ಖಾಸಗಿ ಶಾಲೆಗಳು | ಖಾಸಗಿ ಅನುದಾನರಹಿತ ಶಾಲೆಗಳು |
|---|---|---|---|---|
| ದೇವನಹಳ್ಳಿ | 51 | 18 | 8 | 25 |
| ದೊಡ್ಡಬಳ್ಳಾಪುರ | 53 | 17 | 13 | 23 |
| ಹೊಸಕೋಟೆ | 56 | 21 | 6 | 29 |
| ನೆಲಮಂಗಲ | 52 | 11 | 14 | 27 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 212 | 67 | 41 | 104 |

ಟಿಪ್ಪಣಿ: ಶಿಕ್ಷಣ ಇಲಾಖೆಯಡಿ 63 ಶಾಲೆಗಳು ಮತ್ತು ಬುಡಕಟ್ಟು/ಸಾಮಾಜಿಕ ಯೋಗಕ್ಷೇಮ ಇಲಾಖೆಯಡಿ 4 ಶಾಲೆಗಳಿವೆ. ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ನಾಲ್ಕು ತಾಲೂಕುಗಳಲ್ಲಿ ಪ್ರೌಢ ಶಾಲಾ ಹಂತದಲ್ಲಿ ಒಟ್ಟು ಮತ್ತು ನಿವ್ವಳ ದಾಖಲಾತಿ ಅನುಪಾತಗಳು ಗಣನೀಯವಾಗಿ ಇಳಿದಿದೆ. ಒ.ದಾ.ಪ್ರ. ಮತ್ತು ನಿ.ದಾ.ಪ್ರ ಎರಡರಲ್ಲೂ ಅತಿ ಹೆಚ್ಚಿನ ಇಳಿಕೆಯು ಹೊಸಕೋಟೆ ತಾಲೂಕಿನಲ್ಲಿದ್ದು, 2007 ಮತ್ತು 2011ರ ನಡುವೆ ಒ.ದಾ.ಪ್ರ.ನಲ್ಲಿ ಶೇ. 16.83 ರಷ್ಟು ಮತ್ತು ನಿ.ದಾ.ಪ್ರ.ದಲ್ಲಿ ಶೇ. 16.38 ರಷ್ಟು ದೊಡ್ಡ ಇಳಿಕೆ ಕಂಡಿದೆ (ಕೋಷ್ಟಕ 4.19). ಸಾಮಾನ್ಯವಾಗಿ ಇದರ ಅರ್ಥವೆಂದರೆ ಶಾಲೆಯ ಹೊರಗಿರುವ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳ, ಆದರೆ ದತ್ತಾಂಶವು ಈ ತರ್ಕವನ್ನು ಬೆಂಬಲಿಸುವುದಿಲ್ಲ (ಕೋಷ್ಟಕ 4.23). ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇದೇ ಅವಧಿಯಲ್ಲಿ ಸೂಕ್ತ ವಯೋಮಿತಿಯ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯು ಇಳಿಮುಖವಾಗಿದೆ. ಶಿಶು ಜಾಡಿನ ದತ್ತಾಂಶವು ಸೂಚಿಸುವುದೇನೆಂದರೆ. ಹುಡುಗ ಮತ್ತು ಹುಡುಗಿ ಇಬ್ಬರಲ್ಲೂ ಇತರ ಜಿಲ್ಲೆಗಳಿಗೆ ವಲಸೆಯ ಪ್ರಮಾಣ ಹೆಚ್ಚಾಗಿದ್ದು, ಕೊಂಚ ಮಟ್ಟಿಗೆ ಇದು ಈ ಅಸಂಗತತೆಯನ್ನು ವಿವರಿಸುತ್ತದೆ.

**ಕೋಷ್ಟಕ 4.19: ಪ್ರೌಢ ಮಟ್ಟದಲ್ಲಿ ಒಟ್ಟು ಮತ್ತು ನಿವ್ವಳ ದಾಖಲಾತಿ ಅನುಪಾತಗಳು**

| ತಾಲೂಕು/ಜಿಲ್ಲೆ | ಒ.ದಾ.ಪ್ರ | | ನಿ.ದಾ.ಪ್ರ. | |
|---|---|---|---|---|
| | 2007 | 2011 | 2007 | 2011 |
| ದೇವನಹಳ್ಳಿ | 78.04 | 72.69 | 75.41 | 69.95 |
| ದೊಡ್ಡಬಳ್ಳಾಪುರ | 74.44 | 71.23 | 72.59 | 69.86 |
| ಹೊಸಕೋಟೆ | 78.06 | 61.23 | 75.88 | 59.50 |
| ನೆಲಮಂಗಲ | 73.96 | 69.79 | 72.65 | 67.70 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 76.07 | 68.26 | 74.07 | 66.36 |

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಕೋಷ್ಟಕ 4.20: ಶಾಲೆಯಿಂದ ಹೊರಗುಳಿದ ಮಕ್ಕಳು (2007 ಮತ್ತು 2011)**

| ತಾಲೂಕು/ಜಿಲ್ಲೆ | 2007 | | | 2011 | | |
|---|---|---|---|---|---|---|
| | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ದೇವನಹಳ್ಳಿ | 38 | 32 | 70 | 26 | 22 | 48 |
| ದೊಡ್ಡಬಳ್ಳಾಪುರ | 54 | 38 | 92 | 47 | 30 | 77 |
| ಹೊಸಕೋಟೆ | 46 | 40 | 86 | 38 | 32 | 70 |
| ನೆಲಮಂಗಲ | 56 | 44 | 100 | 48 | 38 | 86 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 194 | 154 | 348 | 159 | 122 | 281 |

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಚಿತ್ರ 4.5: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರೌಢ ಶಾಲೆಗಳ ಒಟ್ಟು ದಾಖಲೆ ಪ್ರಮಾಣ ಮತ್ತು ನಿವ್ವಳ ದಾಖಲೆ ಪ್ರಮಾಣ**




ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ದಾಖಲಾತಿ ಅನುಪಾತ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಲಿಂಗ ವಿಭಜಿತ ದತ್ತಾಂಶವು ಜಿಲ್ಲೆಯ ಸಂಗತ ಚಿತ್ರಣವನ್ನು ನೀಡುತ್ತವೆ. ಎಲ್ಲಾ ತಾಲೂಕುಗಳಲ್ಲಿಯೂ ಗಂಡು ಮತ್ತು ಹೆಣ್ಣು ಇಬ್ಬರಿಗೂ ಒ.ದಾ.ಪ್ರ. ಮತ್ತು ನಿ.ದಾ.ಪ್ರ ಎರಡೂ ಸಂಗತವಾಗಿ ಇಳಿಕೆಯಾಗಿದ್ದರೂ, ಹೊಸಕೋಟೆ ತಾಲೂಕನ್ನು ಹೊರತುಪಡಿಸಿ, ಎಲ್ಲಾ ತಾಲೂಕುಗಳಲ್ಲಿಯೂ ಹುಡುಗರಿಗಿಂತ ಹುಡುಗಿಯರಿಗೆ ಇಳಿಕೆಯು ಬಹಳ ತೀಕ್ಷ್ಣವಾಗಿದೆ. ಹುಡುಗಿಯರ ದಾಖಲಾತಿಯಲ್ಲಿ ತೀಕ್ಷ್ಣವಾದ ಇಳಿಕೆಯನ್ನು ಲಿಂಗ ತಾರತಮ್ಯಕ್ಕೆ ಜೋಡಿಸಬಹುದು ಏಕೆಂದರೆ, ಸರ್ಕಾರಿ ಶಾಲೆಗಳು ಸುಲಭವಾಗಿ ಲಭ್ಯವಿಲ್ಲದ ಕಾರಣಕ್ಕೆ ಮತ್ತು ಶುಲ್ಕವನ್ನು ಪಡೆಯುವ ಖಾಸಗಿ ಶಾಲೆಗಳು ಹುಡುಗಿಯರ ಶಿಕ್ಷಣವನ್ನು ವಿವೇಚನೆಯ ಹೂಡಿಕೆ ಎಂದು ಪರಿಗಣಿಸಲಾಗುವುದಿಲ್ಲವಾದ್ದರಿಂದ ಪೋಷಕರು ಹುಡುಗಿಯರನ್ನು ಪ್ರೌಢಶಾಲಾ ಹಂತದಲ್ಲಿ ಶಾಲೆ ಬಿಡಿಸುತ್ತಾರೆ. 2013-14ಸಾಲಿನ ಶಿಶು ಜಾಡಿನ ದತ್ತಾಂಶವು ತೋರಿಸುವಂತೆ, ಹುಡುಗಿಯರು ಶಾಲೆಯನ್ನು ಬಿಡಲು ಮಾಡಲು ಎರಡು ಪ್ರಮುಖ ಕಾರಣಗಳೆಂದರೆ ಪ್ರಾಯ ಮತ್ತು ಹುಡುಗಿಗೆ ಸಂಬಂಧಿತ ಕಾರಣಗಳು. ಅದೇ ರೀತಿ ಹುಡುಗ ಮತ್ತು ಹುಡುಗಿ ಇಬ್ಬರಿಗೂ ಮುಖ್ಯವಾದ ಕಾರಣವೆಂದರೆ ವಲಸೆ ಹೋಗುವುದೇ ಆಗಿದೆ (ಚಿತ್ರ 4.6).

**ಕೋಷ್ಟಕ 4.21: ಪ್ರೌಢಶಾಲಾ ಹಂತದಲ್ಲಿ ಒಟ್ಟು ಮತ್ತು ನಿವ್ವಳ ದಾಖಲಾತಿ ಪ್ರಮಾಣ**

| ತಾಲೂಕು/ಜಿಲ್ಲೆ | ಒ.ದಾ.ಪ್ರ. | | | | ನಿ.ದಾ.ಪ್ರ | | | |
|---|---|---|---|---|---|---|---|---|
| | 2007 | | 2011 | | 2007 | | 2011 | |
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| ದೇವನಹಳ್ಳಿ | 76.01 | 80.11 | 73.88 | 71.47 | 73.30 | 77.58 | 70.51 | 69.37 |
| ದೊಡ್ಡಬಳ್ಳಾಪುರ | 74.12 | 74.76 | 73.86 | 68.53 | 72.37 | 72.81 | 71.99 | 67.66 |
| ಹೊಸಕೋಟೆ | 78.01 | 78.11 | 52.08 | 74.74 | 75.88 | 75.88 | 50.70 | 72.51 |
| ನೆಲಮಂಗಲ | 71.87 | 76.09 | 73.94 | 65.58 | 69.21 | 76.09 | 71.14 | 64.20 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 75.10 | 77.07 | 66.58 | 70.17 | 72.86 | 75.32 | 64.41 | 68.57 |

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಚಿತ್ರ 4.6: 6-16 ವಯೋವರ್ಗದಲ್ಲಿ ಶಾಲೆಗೆ ಹಾಜರಿಯಾಗದ ಕಾರಣಗಳು % (2013-2014)**




ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಕ್ಕಳು ಶಾಲೆಗೆ ಹಾಜರಾಗಿರುವುದಕ್ಕೆ ಮುಖ್ಯ ಕಾರಣ ವಲಸೆ ಹೋಗುವುದೆಂದು ಶಿಶು ಜಾಡಿನ ದತ್ತಾಂಶವು ತೋರಿಸುತ್ತದೆ. ಜಿಲ್ಲೆಯಲ್ಲಿನ ಇತರ ಶಾಲೆಗಳನ್ನು ಸೇರಿಕೊಂಡ ಮಕ್ಕಳ ಮಾಹಿತಿಯನ್ನು ಸಂಗ್ರಹಿಸುವ ವಿಧಾನದಲ್ಲಿ ಈ ಶಿಶು ಜಾಡಿನ ಕ್ರಿಯೆಯನ್ನು ನಡೆಸಲಾಯಿತು. ಇದರ ಅರ್ಥವೆಂದರೆ, ಈ ಮಕ್ಕಳು ಪಕ್ಕದ ಜಿಲ್ಲೆಯಲ್ಲಿರುವ ಶಾಲೆಗಳಿಗೆ ಹೋಗುತ್ತಿದ್ದಾರೆ ಅಥವಾ ಮತ್ತೆಲ್ಲಿಗೋ ವಲಸೆ ಹೋಗಿದ್ದಾರೆ ಎಂದು. ಈ ಜಿಲ್ಲೆಯು ಬೆಂಗಳೂರು ನಗರವನ್ನು ಸುತ್ತಿಕೊಂಡಿದೆ ಎಂಬುದನ್ನು ಪರಿಗಣಿಸಿದರೆ, ರಾಜ್ಯದ/ದೇಶದ ಇತರ ಭಾಗಗಳಿಂದ ಅಗಾಧ ಪ್ರಮಾಣದ ವಲಸೆ ಕಾರ್ಮಿಕರನ್ನು ಇಲ್ಲಿನ ಕಟ್ಟಡ ನಿರ್ಮಾಣ ಮತ್ತು ಅಂತಹ ಚಟುವಟಿಕೆಗಳು ಸೆಳೆಯುತ್ತವೆ ಮತ್ತು ಆ ಕೆಲಸ ಮುಗಿದ ನಂತರ ಪೋಷಕರ ಜೊತೆಗೆ ಮಕ್ಕಳೂ ಆ ಸ್ಥಳವನ್ನು ಬಿಡುತ್ತಾರೆ.

### 4.4.2 ವಿದ್ಯಾಭ್ಯಾಸ ಪೂರ್ಣಗೊಳಿಸುವಿಕೆ ಮತ್ತು ಕಲಿಕೆಯ ಮಟ್ಟಗಳು

ಕಲಿಕೆಯ ಮಟ್ಟವನ್ನು ಪರೀಕ್ಷಿಸುವುದು ಜಟಿಲವಾದ ಕೆಲಸ. ಒಂದು ಮಗುವಿನ ಕಲಿಕೆಯ ಮತ್ತು ಕೌಶಲ್ಯದ ಮಟ್ಟವನ್ನು ಪರೀಕ್ಷಿಸಲು ಪರೀಕ್ಷೆಯ ಅಂಕಗಳು ಅತ್ಯುತ್ತಮ ಮಾರ್ಗವಾಗುವುದಿಲ್ಲ ಏಕೆಂದರೆ ಈ ವ್ಯವಸ್ಥೆಯೇ ಅರ್ಥಗ್ರಹಣ ಮತ್ತು ಪರಿಶೀಲನೆಯ ಬದಲಾಗಿ ಕಂಠಪಾಟಕ್ಕೆ ಒತ್ತು ನೀಡುತ್ತದೆ, ಮತ್ತು ಇತ್ತೀಚೆಗೆ ರಾಷ್ಟ್ರೀಯ ಮಟ್ಟದಲ್ಲಿ ನಡೆದ ರಾಜ್ಯನೀತಿಯ ಬದಲಾವಣೆಗಳು ಈ ಅಂಶವನ್ನು ಗುರುತಿಸಿವೆ. ಆದರೆ, ಈ ವ್ಯವಸ್ಥೆಯ ಒಟ್ಟಾರೆ ಸಾಧನೆಯ ಸೂಚಕವೆಂದರೆ ಹಿರಿಯ ಶಾಲಾ ವಿಯೋಗ ಪ್ರಮಾಣಪತ್ರದ ಯಶಸ್ವಿ ತೇರ್ಗಡೆಯಾಗಿದೆ. 10ನೇ ತರಗತಿಯ ಮಂಡಳಿ ಪರೀಕ್ಷೆಗಳನ್ನು ಯಶಸ್ವಿಯಾಗಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳ ಸಂಖ್ಯೆಯು ಈ ವ್ಯವಸ್ಥೆಯು ತನಗಾಗಿಯೇ ಸಿದ್ಧಪಡಿಸಿರುವ ಮಾನದಂಡಗಳನ್ವಯ ಸಾಧನೆ ಮಾಡುವ ಸಾಮರ್ಥ್ಯವನ್ನು ಬಿಂಬಿಸುತ್ತದೆ.

**ಕೋಷ್ಟಕ 4.22: ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆ ಪ್ರಮಾಣ**

| ತಾಲೂಕು/ಜಿಲ್ಲೆ | 2009-2010 | 2012-2013 |
|---|---|---|
| ದೇವನಹಳ್ಳಿ | 83.25 | 84.2 |
| ದೊಡ್ಡಬಳ್ಳಾಪುರ | 78.97 | 83.2 |
| ಹೊಸಕೋಟೆ | 78.34 | 80.88 |
| ನೆಲಮಂಗಲ | 82.69 | 89.42 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 80.81 | 83.84 |

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಈ ಜಿಲ್ಲೆಯಲ್ಲಿ 2011ರಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ ಶೇ. 82.84 ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರೆಂದು ದತ್ತಾಂಶವು ತೋರಿಸಿದ್ದು, 2009-2010ರಿಂದ ಶೇ. 3.03 ರಷ್ಟು ಸುಧಾರಣೆಯಾಗಿದೆ. ನೆಲಮಂಗಲ ತಾಲೂಕಿನಲ್ಲಿ ಉತ್ತೀರ್ಣರಾಗಿರುವವರ ಸಂಖ್ಯೆಯು ಅತಿ ಹೆಚ್ಚು ಅಂದರೆ ಶೇ. 89.42 ಇದ್ದು, ಶೇ. 80.88ರಷ್ಟು ತೇರ್ಗಡೆ ಪ್ರಮಾಣ ಇರುವ ಹೊಸಕೋಟೆ ತಾಲೂಕು ಕಡೇ ಸ್ಥಾನದಲ್ಲಿದೆ. ಈ ಸಂಖ್ಯೆಗಳು ಕಡಿಮೆಯಿಲ್ಲದಿದ್ದರೂ, ಎಲ್ಲಾ ವಿದ್ಯಾರ್ಥಿಗಳೂ ಪ್ರೌಢಶಾಲಾ ಹಂತವನ್ನು ಉತ್ತೀರ್ಣರಾಗುವ ಸ್ಥಿತಿ ತಲುಪಲು ವ್ಯವಸ್ಥೆಯು ಶ್ರಮ ವಹಿಸಬೇಕು.

### 4.4.3 ಕಾರ್ಯನೀತಿ ಪ್ರತಿಕ್ರಿಯೆಗಳು

ಪ್ರೌಢ ಶಾಲಾ ಶಿಕ್ಷಣದಲ್ಲಿ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ (RMSA) ಎಂಬುದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ನಡೆಸುತ್ತಿರುವ ಅತಿ ಮುಖ್ಯ ಯೋಜನೆ. ಈ ಯೋಜನೆಯನ್ನು 2009ರಲ್ಲಿ ಆರಂಭಿಸಲಾಗಿದ್ದು, ಇದರ ಉದ್ದೇಶ ಪ್ರೌಢಶಾಲಾ ಶಿಕ್ಷಣದ ಲಭ್ಯತೆಯನ್ನು ವರ್ಧಿಸುವುದು ಮತ್ತು ಅದರ ಗುಣಮಟ್ಟವನ್ನು ಸುಧಾರಿಸುವುದು ಆಗಿದೆ. ಈ ಯೋಜನೆಯ ಅನುಷ್ಠಾನ 2009-2010ರಲ್ಲಿ ಆರಂಭವಾಯಿತು. ಕರ್ನಾಟಕದಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನವು ಮುಖ್ಯ ಉದ್ದೇಶವೆಂದರೆ ಗರಿಷ್ಠ ಐದು ಕಿಮೀ ಅಂತರದಲ್ಲಿ ಪ್ರೌಢ ಶಾಲೆಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು. ಹುಡುಗಿಯರಿಗೆ, ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ವಿದ್ಯಾರ್ಥಿಗಳಿಗೆ, ಧಾರ್ಮಿಕ ಅಲ್ಪಸಂಖ್ಯಾತರಿಗೆ ಮತ್ತು ಹೆಚ್ಚು ಜನಸಂಖ್ಯೆ ಇಲ್ಲದ ಪ್ರದೇಶಗಳಲ್ಲಿ ವಸತಿ ಶಾಲೆಗಳನ್ನು ತೆರೆಯುವುದು ಅಥವಾ ವಸತಿ ಸೌಲಭ್ಯಗಳನ್ನು ನೀಡಲಾಗುವುದು.

2010ರಿಂದ ಜಿಲ್ಲೆಯು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನದಿಂದ ಅನುದಾನ ಪಡೆಯುತ್ತಿದ್ದು, ಇದರ ಉದ್ದೇಶ ಪ್ರೌಢಶಾಲಾ ಶಿಕ್ಷಣ ಮತ್ತು ಶಾಲೆಗಳನ್ನು ಬಲಪಡಿಸುವುದಾಗಿದೆ. ಆರಂಭದ ವರ್ಷಗಳಲ್ಲಿ ಶಾಲೆಯ ಕಟ್ಟಡಗಳಿಗೆ ದೊಡ್ಡ ಮತ್ತು ಸಣ್ಣ ದುರಸ್ತಿಗಳನ್ನು ನಡೆಸಲು ಅನುದಾನ ಪಡೆಯುತ್ತಿರುವುದರ ಜೊತೆಗೆ, ಈ ಯೋಜನೆಯು ಎಲ್ಲಾ ಸರ್ಕಾರಿ ಶಾಲೆಗಳಿಗೆ ವಾರ್ಷಿಕ ಅನುದಾನವಾಗಿ ರೂ 50000 ಗಳನ್ನು ನೀಡುತ್ತಿದ್ದು, ಈ ಮೊತ್ತವನ್ನು ಗ್ರಂಥಾಲಯ, ಪ್ರಯೋಗಾಲಯ ಮತ್ತು ಶಾಲಾ ಮಟ್ಟದಲ್ಲಿ ನಿಯತವಾಗಿ ನಿರ್ವಹಣೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಬಳಸಬೇಕಾಗಿದೆ. ಜಿಲ್ಲೆಯು 100 ಪ್ರೌಢ ಶಾಲೆಗಳಲ್ಲಿ ಪಾರಿಸರಿಕ ನಿರ್ವಹಣ ಮತ್ತು ನೀತ ಸಂಶೋಧನಾ ಸಂಸ್ಥೆಯ ಸಹಯೋಗದೊಂದಿಗೆ ಕೆಲವು ಎಕೊ-ಪ್ರಯೋಗಾಲಯಗಳ ಚಟುವಟಿಕೆಗಳನ್ನು ಆರಂಭಿಸಿದ್ದು, 6000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವಾಸಗಳನ್ನು ಏರ್ಪಡಿಸಿದೆ. ಕೌಶಲ್ಯಗಳ ನವೀಕರಣ ಮತ್ತು ವಿಷಯ ಜ್ಞಾನವನ್ನು ಹೆಚ್ಚಿಸಲು ರಾ.ಮಾ.ಶಿ.ಅ.ಯು ಶಿಕ್ಷಕರ ಮತ್ತು ಮುಖ್ಯೋಪಾಧ್ಯಾಯರ ತರಬೇತಿಯನ್ನೂ ಬೆಂಬಲಿಸಿದೆ.

## 4.5 ಉನ್ನತ ಶಿಕ್ಷಣ

ಉನ್ನತ ಶಿಕ್ಷಣಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಉತ್ತಮ ಸಂಖ್ಯೆಯ ಕಾಲೇಜುಗಳನ್ನು ಹೊಂದಿದೆ. ಪ್ರತಿ ತಾಲೂಕು ಕನಿಷ್ಠ ಒಂದು ಸಾಮಾನ್ಯ ಪದವಿ ಕಾಲೇಜನ್ನು ಮತ್ತು ಕನಿಷ್ಠ ಒಂದು ಎಂಜಿನಿಯರಿಂಗ್ ಅಥವಾ ಒಂದು ವೈದ್ಯಕೀಯ ಕಾಲೇಜನ್ನು ಹೊಂದಿದೆ. ಜಿಲ್ಲೆಯಲ್ಲಿ ಹೊಸ ಸಂಸ್ಥೆಗಳ ಸೇರ್ಪಡೆಯಿಂದ ಈ ಸಂಖ್ಯೆಯು ಹೆಚ್ಚುತ್ತಿದೆ. ಇದಕ್ಕೆ ಕಾರಣ ಬೆಂಗಳೂರು ನಗರಕ್ಕೆ ಹತ್ತಿರವಿರುವುದು ಮತ್ತು ಅಲ್ಲಿ ಹೊಸ ಸಂಸ್ಥೆಗಳನ್ನು ಆರಂಭಿಸಲು ಸ್ಥಳದ ಅಭಾವವಿರಬಹುದು. ಆದರೆ, ಈ ಕಾಲೇಜುಗಳಲ್ಲಿ ದಾಖಲಾತಿಯು, ಪ್ರಮುಖವಾಗಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಹೆಣ್ಣು ಮಕ್ಕಳಿಗೆ ಹೋಲಿಸಿದಂತೆ ಗಂಡು ಮಕ್ಕಳ ದಾಖಲಾತಿ ಸಂಖ್ಯೆ ಹೆಚ್ಚಿದ್ದು, ಈ ಮಟ್ಟದಲ್ಲಿ ಲಿಂಗ ಸಂಬಂಧಿತ ಅಸಮಾನತೆಯು ಬಹಳ ಅಧಿಕವಾಗಿದೆ ಎಂದು ತೋರಿಸುತ್ತದೆ (ಕೋಷ್ಟಕ 4.23 ಮತ್ತು 4.24). ಪ್ರಾಥಮಿಕ ಮತ್ತು ಪ್ರೌಢ ಶಾಲಾ ಹಂತದಲ್ಲಿ ಅತಿ ಹೆಚ್ಚಿನ ಲಿಂಗ ಸಮಾನತೆಯು ಉನ್ನತ ಶಿಕ್ಷಣದ ಮಟ್ಟದಲ್ಲಿ ಹೆಚ್ಚಿನ ಲಿಂಗ ಸಂಬಂಧಿತ ಅಸಮಾನತೆಗೆ ಬದಲಾಗುತ್ತದೆ. ಇದು ಸಾಮಾಜಿಕ ನಿಯಮವನ್ನು ಸೂಚಿಸುತ್ತಿದ್ದು, ಹುಡುಗಿಯರನ್ನು 10ನೇ ತರಗತಿ ಅಥವಾ ಪದವಿ ಪೂರ್ವ ಶಿಕ್ಷಣದವರೆಗೂ ಓದಿಸುವುದು ಕನಿಷ್ಠ ಅಪೇಕ್ಷಿತ ಮಟ್ಟವಾಗಿದ್ದು, ಅದರ ನಂತರ ಇದು ಪ್ರತ್ಯೇಕ ಕುಟುಂಬದ ಆಯ್ಕೆ, ಸಾಮರ್ಥ್ಯ ಮತ್ತು ಹುಡುಗಿಯ ಉನ್ನತ ಶಿಕ್ಷಣಕ್ಕೆ ಅವರು ಕೊಡುವ ಪ್ರಾಮುಖ್ಯತೆಯನ್ನು ಅವಲಂಬಿಸುತ್ತದೆ.

**ಕೋಷ್ಟಕ 4.23: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾಲೇಜುಗಳು ಮತ್ತು ದಾಖಲಾತಿ (2009-2010)**

| ತಾಲೂಕು/ಜಿಲ್ಲೆ | | | | | | | ವೈದ್ಯಕೀಯ ಕಾಲೇಜುಗಳು | | ಪಾಲಿಟೆಕ್ನಿಕ್ ಕಾಲೇಜುಗಳು | | | ಇಂಜಿನಿಯರಿಂಗ್ ಕಾಲೇಜುಗಳು | | |
|---|---|---|---|---|---|---|---|---|---|---|---|---|---|---|
| | ಸಂಸ್ಥೆಗಳ ಸಂಖ್ಯೆ | ದಾಖಲಾತಿ | | ಸಂಸ್ಥೆಗಳ ಸಂಖ್ಯೆ | ದಾಖಲಾತಿ | | ಸಂಸ್ಥೆಗಳ ಸಂಖ್ಯೆ | ದಾಖಲಾತಿ | ಸಂಸ್ಥೆಗಳ ಸಂಖ್ಯೆ | ದಾಖಲಾತಿ | | ಸಂಸ್ಥೆಗಳ ಸಂಖ್ಯೆ | ದಾಖಲಾತಿ | |
| | | ಗಂಡು | ಹೆಣ್ಣು | | ಗಂಡು | ಹೆಣ್ಣು | | | | ಗಂಡು | ಹೆಣ್ಣು | | ಗಂಡು | ಹೆಣ್ಣು |
| ದೇವನಹಳ್ಳಿ | 1 | 450 | 212 | 0 | 0 | 0 | 0 | 0 | 0 | 0 | 0 | 1 | 280 | 124 |
| ದೊಡ್ಡಬಳ್ಳಾಪುರ | 1 | 205 | 103 | 1 | 561 | 484 | 0 | 0 | 0 | 0 | 0 | 1 | 180 | 164 |
| ಹೊಸಕೋಟೆ | 1 | 507 | 369 | 1 | 484 | 348 | 1 | 100 | 0 | 0 | 0 | 0 | 0 | 0 |
| ನೆಲಮಂಗಲ | 2 | 303 | 292 | 0 | 0 | 0 | 0 | 0 | 1 | 130 | 58 | 1 | – | – |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 5 | 1,465 | 976 | 2 | 1,045 | 832 | 1 | 100 | 1 | 130 | 58 | 3 | 460 | 288 |

ಟಿಪ್ಪಣಿ: 1. ವೈದ್ಯಕೀಯ, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಖಾಸಗಿ ಸಂಸ್ಥೆಗಳು
2. ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಪುರುಷ ಮಹಿಳೆ ಭೇದವನ್ನು ನೀಡಿಲ್ಲ
ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ ಅಂಶಗಳ ನೋಟ (2011-2012)

**ಕೋಷ್ಟಕ 4.24: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾಲೇಜುಗಳು ಮತ್ತು ದಾಖಲಾತಿ (2011–2012)**

| ತಾಲೂಕು/ಜಿಲ್ಲೆ | ಸಾಧಾರಣ ಪದವಿ ಕಾಲೇಜುಗಳು | | | | | | ವೈದ್ಯಕೀಯ ಕಾಲೇಜುಗಳು | | | ಪಾಲಿಟೆಕ್ನಿಕ್ ಕಾಲೇಜುಗಳು | | ಇಂಜಿನಿಯರಿಂಗ್ ಕಾಲೇಜುಗಳು | |
|---|---|---|---|---|---|---|---|---|---|---|---|---|---|
| | ಸರ್ಕಾರಿ | | | ಖಾಸಗಿ | | | | | | | | | |
| | ಸಂಸ್ಥೆಗಳ ಸಂಖ್ಯೆ | ದಾಖಲಾತಿ | | ಸಂಸ್ಥೆಗಳ ಸಂಖ್ಯೆ | ನೊಂದಣಿ | | ಸಂಸ್ಥೆಗಳ ಸಂಖ್ಯೆ | ನೊಂದಣಿ | | ಸಂಸ್ಥೆಗಳ ಸಂಖ್ಯೆ | ಒಟ್ಟು ದಾಖಲಾತಿ | ಸಂಸ್ಥೆಗಳ ಸಂಖ್ಯೆ | ಒಟ್ಟು ನೊಂದಣಿ |
| | | ಗಂಡು | ಹೆಣ್ಣು | | ಗಂಡು | ಹೆಣ್ಣು | | ಗಂಡು | ಹೆಣ್ಣು | | | | |
| ದೇವನಹಳ್ಳಿ | 1 | 574 | 398 | 0 | 0 | 0 | 0 | 0 | 0 | 0 | 0 | 2 | 660 |
| ದೊಡ್ಡಬಳ್ಳಾಪುರ | 1 | 451 | 248 | 1 | 299 | 339 | 0 | 0 | 0 | 0 | 0 | 1 | 211 |
| ಹೊಸಕೋಟೆ | 2 | 795 | 605 | 0 | 0 | 0 | 1 | 38 | 62 | 0 | 0 | 0 | 0 |
| ನೆಲಮಂಗಲ | 2 | 449 | 441 | 1 | 502 | 475 | 0 | 0 | 0 | 1 | 126 | 3 | 194 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 6 | 2,269 | 1,692 | 2 | 801 | 814 | 1 | 38 | 62 | 1 | 126 | 6 | 1065 |

ಟಿಪ್ಪಣಿ: 1. ವೈದ್ಯಕೀಯ, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಖಾಸಗಿ ಸಂಸ್ಥೆಗಳು 2. ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಪುರುಷ ಮಹಿಳೆ ಭೇದವನ್ನು ನೀಡಿಲ್ಲ ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ ಅಂಶಗಳ ನೋಟ (2011–2012)

## 4.6 ಶಿಕ್ಷಣದಲ್ಲಿ ಖಾಸಗಿ ಸಂಸ್ಥೆಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಖಾಸಗಿ ವಲಯವು ಬೃಹತ್ ಪ್ರಮಾಣದಲ್ಲಿದೆ. ಉನ್ನತ ಶಿಕ್ಷಣದಲ್ಲಿ, ಸಾಧಾರಣ ಪದವಿಪೂರ್ವ ಶಿಕ್ಷಣಕ್ಕೆ ಆರು ಕಾಲೇಜುಗಳನ್ನು ಹೊರತುಪಡಿಸಿ, ಮಿಕ್ಕೆಲ್ಲವೂ ಶುಲ್ಕ ಪಡೆಯುವ ಖಾಸಗಿ ಮಂಡಳಿಯವರ ಒಡೆತನದಲ್ಲಿದೆ. ಮುಂಚೆಯೇ ಚರ್ಚಿಸಿದಂತೆ, ಪ್ರಾಥಮಿಕ ಶಾಲಾ ಹಂತದಲ್ಲಿ ಕೇವಲ ಶೇ. 14ರಷ್ಟು ಸಂಸ್ಥೆಗಳು ಶುಲ್ಕ ಪಡೆಯುವ ಖಾಸಗಿ ಸಂಸ್ಥೆಯವರದ್ದಾಗಿದ್ದರೆ, ಪ್ರೌಢಶಾಲಾ ಹಂತದಲ್ಲಿ ಈ ಪಾಲು ಶೇ. 68 ಕ್ಕಿಂತ ಹೆಚ್ಚಿಗೆ ಏರುತ್ತದೆ. ಬಡವರ ಅಥವಾ ಶಿಕ್ಷಣವನ್ನು ಮುಖ್ಯವೆಂದು ಪರಿಗಣಿಸಲಾರದವರ ಭಾಗವಹಿಸುವಿಕೆಯ ಮೇಲೆ ಇದು ಪರಿಣಾಮ ಬೀರುತ್ತದೆ. ಉದಾಹರಣೆಗೆ, ಉನ್ನತ ಶಿಕ್ಷಣದಲ್ಲಿ ಹುಡುಗಿಯರ ವಿರುದ್ಧ ಅತಿಯಾದ ಲಿಂಗ ಸಂಬಂಧಿತ ಅಸಮಾನತೆಗೆ ಕಾರಣ ಪಿತೃಶಾಹಿ ಪದ್ಧತಿಗಳಿದ್ದು, ಪೋಷಕರು ಹುಡುಗಿಯರ ಶಿಕ್ಷಣಕ್ಕೆ ಹಣ ತೊಡಗಿಸಲು ಇಚ್ಛಿಸದೆ ಇರಬಹುದು. ಹುಡುಗಿಯರು ವಿವಾಹವಾಗಿ, ಹೊರಟು ಹೋಗುತ್ತಾರಾದ್ದರಿಂದ, ಅವರು ಕುಟುಂಬದ ಆದಾಯಕ್ಕೆ ಕೊಡುಗೆ ನೀಡುವುದಿಲ್ಲ. ಸಾರ್ವಜನಿಕ ವಲಯದಲ್ಲಿ ಅಗ್ಗವಾದ ಶಿಕ್ಷಣದ ಲಭ್ಯತೆ ಬಹಳ ಕಡಿಮೆಯಾದಾಗ, ಬಡ ಪೋಷಕರು ತಮ್ಮ ಮಕ್ಕಳನ್ನು ಪ್ರಾಥಮಿಕ ಮಟ್ಟದ ನಂತರ ಶಾಲೆ ಕಳುಹಿಸುವುದನ್ನು ನಿಲ್ಲಿಸಬಹುದು. 2007-08ರಲ್ಲಿ ನಡೆದ ರಾಷ್ಟ್ರೀಯ ಮಾದರಿ ಸರ್ವೇಕ್ಷಣದ 66ನೇ ಸುತ್ತಿನ ಕೌಟುಂಬಿಕ ಸಮೀಕ್ಷೆಯ ದತ್ತಾಂಶವು ಈ ಊಹೆಗಳನ್ನು ಖಚಿತಪಡಿಸುತ್ತದೆ.

ಕೋಷ್ಟಕ 4.25ನಲ್ಲಿ ತೋರಿಸುವಂತೆ, ಎರಡು ಅತೀ ಕಡಿಮೆ ವೆಚ್ಚದ ಕ್ವಿನ್ಟೈಲ್ (ಶೇ. 0-40) ಗಳನ್ನು ಸೂಚಿಸುವ ಅತಿ ಬಡ ವರ್ಗಕ್ಕೆ ಸೇರುವ ಮತ್ತು ಶಾಲೆಗೆ ಹೋಗುವ ಎಲ್ಲಾ ಮಕ್ಕಳು ಎಲ್ಲಾ ಮಟ್ಟಗಳಲ್ಲಿಯೂ ಸರ್ಕಾರಿ ಸಂಸ್ಥೆಗಳಿಗೆ ಹೋಗುತ್ತಿದ್ದಾರೆ. ಮುಂದಿನ ಹಂತದಲ್ಲಿ ಸ್ಥಿತಿಯು ಕೊಂಚ ಭಿನ್ನವಾಗಿ (ಶೇ. 41-80), ಶಾಲೆಗೆ ಹೋಗುವ ಶೇ. 9 ರಷ್ಟು ಮತ್ತು ಕಾಲೇಜಿಗೆ ಹೋಗುವ ಶೇ. 12 ರಷ್ಟು ಜನ ಖಾಸಗಿ ಸಂಸ್ಥೆಗಳಿಗೆ ಹೋಗುತ್ತಿದ್ದಾರೆ. ಅತಿ ಹೆಚ್ಚಿನ ಕ್ವಿಂಟೈಲ್‌ನಲ್ಲಿ ಪರಿಸ್ಥಿತಿಯು ಬದಲಾಗುತ್ತದೆ. ಹಿರಿಯ ಪ್ರಾಥಮಿಕ ವನ್ನು ಹೊರತುಪಡಿಸಿ ಮಿಕ್ಕೆಲ್ಲಾ ಮಟ್ಟದಲ್ಲಿ ಶಾಲೆ ಮತ್ತು ಕಾಲೇಜಿಗೆ ಹೋಗುವ ಜನರ ಅರ್ಧಕ್ಕಿಂತ ಹೆಚ್ಚು ಖಾಸಗಿ ಸಂಸ್ಥೆಗಳಿಗೆ ಹೋಗುತ್ತಿದ್ದಾರೆ. ಜಿಲ್ಲೆಯ ಖಾಸಗಿ ಪ್ರಾಥಮಿಕ ಶಾಲೆಗಳ ಮೇಲೆ, ಅಲ್ಲಿನ ಗುಣಮಟ್ಟದ ಅಂಶಗಳ ಬಗ್ಗೆ ಅಂತರ್ದೃಷ್ಟಿಯನ್ನು ಪಡೆಯಲು, ಕಿರು ಕ್ಷೇತ್ರ ಅಧ್ಯಯನವನ್ನು ನಡೆಸಲಾಯಿತು.

**ಕೋಷ್ಟಕ 4.25: ವೆಚ್ಚ ಮತ್ತು ಸಂಸ್ಥೆಗಳ ಮಾದರಿಗಳಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಶೈಕ್ಷಣಿಕ ಸಂಸ್ಥೆಗೆ ಹಾಜಾರಾಗುವವರ ಸಂಖ್ಯೆ (ನಿವ್ವಳ ಸಹಭಾಗಿತ್ವ ಪ್ರಮಾಣವನ್ನು ಆಧರಿಸಿ) (2007–2008)**

| ಹಾಜರಾಗುತ್ತಿರುವ ಮಟ್ಟ | ಕೌಟುಂಬಿಕ ಮಾಸಿಕ ಬಳಕೆ ವೆಚ್ಚಗಳ ಕ್ವಿನ್ಟೈಲ್ | | | | | |
|---|---|---|---|---|---|---|
| | 0 ನಿಂದ 40 | | 41 ನಿಂದ 80 | | 81 ನಿಂದ 100 | |
| | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ |
| ಪೂರ್ವ ಪ್ರಾಥಮಿಕ | 100.00 | 0.00 | 100.00 | 0.00 | 24.83 | 75.17 |
| ಪ್ರಾಥಮಿಕ | 100.00 | 0.00 | 91.02 | 8.98 | 35.94 | 64.06 |
| ಹಿರಿಯ ಪ್ರಾಥಮಿಕ | 100.00 | 0.00 | 100.00 | 0.00 | 37.66 | 62.34 |
| ಪ್ರೌಢ | 100.00 | 0.00 | 100.00 | 0.00 | 40.66 | 59.34 |
| ಹಿರಿಯ ಪ್ರೌಢ | 100.00 | 0.00 | 100.00 | 0.00 | 74.19 | 25.81 |
| ಪದವಿ | 100.00 | 0.00 | 88.28 | 11.72 | 32.33 | 67.67 |
| ಸ್ನಾತಕೋತ್ತರ ಪದವಿ | – | – | – | – | 100.00 | 0.00 |
| ಡಿಪ್ಲೊಮ (ಪದವಿಗಿಂತ ಕೆಳಗಿನ ಮಟ್ಟ) | – | – | 100.00 | 0.00 | 0.00 | 100.00 |
| ಡಿಪ್ಲೊಮ (ಪದವಿ ಮಟ್ಟ) | – | – | – | – | – | – |
| ಡಿಪ್ಲೊಮ (ಸ್ನಾತಕೋತ್ತರ ಪದವಿ ಮಟ್ಟ) | – | – | – | – | – | – |

ಟಿಪ್ಪಣಿ: 1. ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ನಿರ್ದಿಷ್ಟ ತರಗತಿ ಮತ್ತು ಸೂಕ್ತ ವಯೋಮಿತಿಯಲ್ಲಿ ಹಾಜರಾಗುತ್ತಿರುವ ಹಾಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಅಂದಾಜಿಸಿ, ಅದನ್ನು ನಿರ್ದಿಷ್ಟ ತರಗತಿ ಮತ್ತು ಸೂಕ್ತ ವಯೋಮಿತಿಯಲ್ಲಿ ಹಾಜರಾಗುತ್ತಿರುವ ಹಾಲಿ ವಿದ್ಯಾರ್ಥಿಗಳ ಸಂಖ್ಯೆಯಿಂದ ಭಾಗಿಸಿ ಈ ಪ್ರಮಾಣವನ್ನು ಗಣಿಸಲಾಗುವುದು

2. ವಯೋಮಿತಿ ವಿವರಗಳು – ಪೂರ್ವ ಪ್ರಾಥಮಿಕ (3 – 5 ವರ್ಷ); ಪ್ರಾಥಮಿಕ (6 – 10 ವರ್ಷ); ಹಿರಿಯ ಪ್ರಾಥಮಿಕ (11–13 ವರ್ಷ); ಪ್ರೌಢ (14–15 ವರ್ಷ); ಹಿರಿಯ ಪ್ರೌಢ (16–17 ವರ್ಷ); ಇತರರು – ಪದವಿ/ಸ್ನಾತಕೋತ್ತರ ಪದವಿ/ಡಿಪ್ಲೊಮ (18–24 ವರ್ಷ) ಮೂಲ: ರಾಷ್ಟ್ರೀಯ ಮಾದರಿ ಸಮೀಕ್ಷೆ (2007–2008)

ಕೋಷ್ಟಕ 4.26 ಆಂಗ ವಿಮಿತಿಯನ್ನು ಮುಂದಕ್ಕೆ ತರುತ್ತದೆ: ಅತಿ ಹೆಚ್ಚಿನ ಕ್ವಿಂಟೈಲ್‌ನಲ್ಲೂ, ಖಾಸಗಿ ಸಂಸ್ಥೆಗಳಿಗೆ ಹೋಗುತ್ತಿರುವ ಹುಡುಗಿಯರ ಸಂಖ್ಯೆಯು ಎಲ್ಲಾ ಹಂತದಲ್ಲೂ ಒಟ್ಟಾರೆಗಿಂತ ಕಡಿಮೆಯಿದ್ದು, ಪೋಷಕರು ಹುಡುಗರ ಶಿಕ್ಷಣಕ್ಕೆ ಹೆಚ್ಚು ಖರ್ಚುಮಾಡಲು ಸಿದ್ಧವಿದ್ದಾರೆಂದು ಸೂಚಿಸುತ್ತದೆ. ಹಿಂದೆ ಗಮನಿಸಲಾದ, ಉನ್ನತ ಶಿಕ್ಷಣದಲ್ಲಿ ಹುಡುಗಿಯರ ಪಾಲು ಬಹಳ ಕಡಿಮೆಯಿರುವ ಅಂಶದೊಂದಿಗೆ ಸೇರಿ, ಜಿಲ್ಲೆಯಲ್ಲಿ ಉನ್ನತ ಶಿಕ್ಷಣದಲ್ಲಿ ಪರ್ಯಾಪ್ತ ಸಂಖ್ಯೆಯ ಸಾರ್ವಜನಿಕ ಸಂಸ್ಥೆಗಳು ಅಲಭ್ಯವಾಗಿರುವುದು, ಅವರ ಅವಕಾಶಗಳನ್ನು ಮಿತಗೊಳಿಸಿ, ಅವರ ಪಾಲುದಾರಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಸೂಚಿಸುತ್ತದೆ. ಸಾಮಾನ್ಯವಾಗಿ, ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ಹರವು ಮತ್ತು ಗುಣಮಟ್ಟವನ್ನು ಸುಧಾರಿಸುವುದರ ಮೇಲೆ ಒತ್ತನ್ನು ನೀಡಿದಲ್ಲಿ, ಇದು ಅವಕಾಶಗಳನ್ನು ವಿಸ್ತರಿಸುವಲ್ಲಿ ಸಕಾರಾತ್ಮಕ ಪರಿಣಾಮ ಬೀರುತ್ತದೆ ಮತ್ತು ಜಿಲ್ಲೆಯ ಎಲ್ಲಾ ಆರ್ಥಿಕ ಸ್ತರಗಳ ಹುಡುಗಿಯರಿಗೆ ಮತ್ತು ಬಡವರಿಗೆ ಸ್ವಾತಂತ್ರ್ಯವನ್ನು ನೀಡಿದಂತಾಗುತ್ತದೆ.

**ಕೋಷ್ಟಕ 4.26: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಮಹಿಳಾ ವಿದ್ಯಾರ್ಥಿಗಳ ಸಂಖ್ಯೆ (ಸೂಕ್ತ ವಯೋಮಿತಿ ದಾಖಲಾತಿಗೆ ಅನುಸಾರವಾಗಿ) (2007-2008)**

| ಶ್ರೇಣಿ | 0 ಇಂದ 40 | | 41 ಇಂದ 80 | | 81 ಇಂದ 100 | |
|---|---|---|---|---|---|---|
| | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ | ಸರ್ಕಾರಿ | ಖಾಸಗಿ |
| ಪೂರ್ವ ಪ್ರಾಥಮಿಕ | – | – | – | – | 3.61 | 96.39 |
| ಪ್ರಾಥಮಿಕ | 100.00 | 0.00 | 84.10 | 15.90 | 14.26 | 85.74 |
| ಹಿರಿಯ ಪ್ರಾಥಮಿಕ | 100.00 | 0.00 | 100.00 | 0.00 | 28.53 | 71.47 |
| ಪ್ರೌಢ | 100.00 | 0.00 | 100.00 | 0.00 | 96.43 | 3.57 |
| ಹಿರಿಯ ಪ್ರೌಢ | 100.00 | 0.00 | 100.00 | 0.00 | 95.07 | 4.93 |
| ಪದವಿ | – | – | 100.00 | 0.00 | 0.00 | 100.00 |
| ಸ್ನಾತಕೋತ್ತರ ಪದವಿ | – | – | – | – | 100.00 | 0.00 |
| ಡಿಪ್ಲೊಮ (ಪದವಿಗಿಂತ ಕೆಳಗಿನ ಮಟ್ಟ) | – | – | 100.00 | 0.00 | – | – |
| ಡಿಪ್ಲೊಮ (ಪದವಿ ಮಟ್ಟ) | – | – | – | – | – | – |
| ಡಿಪ್ಲೊಮ (ಸ್ನಾತಕೋತ್ತರ ಪದವಿ ಮಟ್ಟ) | – | – | – | – | – | – |

ಟಿಪ್ಪಣಿ:

1. ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ನಿರ್ದಿಷ್ಟ ತರಗತಿ ಮತ್ತು ಸೂಕ್ತ ವಯೋಮಿತಿಯಲ್ಲಿ ಹಾಜರಾಗುತ್ತಿರುವ ಹಾಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಅಂದಾಜಿಸಿ, ಅದನ್ನು ನಿರ್ದಿಷ್ಟ ತರಗತಿ ಮತ್ತು ಸೂಕ್ತ ವಯೋಮಿತಿಯಲ್ಲಿ ಹಾಜರಾಗುತ್ತಿರುವ ಹಾಲಿ ವಿದ್ಯಾರ್ಥಿಗಳ ಸಂಖ್ಯೆಯಿಂದ ಭಾಗಿಸಿ ಈ ಪ್ರಮಾಣವನ್ನು ಗಣಿಸಲಾಗುವುದು

2. ವಯೋಮಿತಿ ವಿವರಗಳು – ಪೂರ್ವ ಪ್ರಾಥಮಿಕ (3 – 5 ವರ್ಷ); ಪ್ರಾಥಮಿಕ (6 – 10 ವರ್ಷ); ಹಿರಿಯ ಪ್ರಾಥಮಿಕ (11–13 ವರ್ಷ); ಪ್ರೌಢ (14–15 ವರ್ಷ); ಹಿರಿಯ ಪ್ರೌಢ (16–17 ವರ್ಷ); ಇತರರು – ಪದವಿ/ಸ್ನಾತಕೋತ್ತರ ಪದವಿ/ಡಿಪ್ಲೊಮ (18–24 ವರ್ಷ)

ಮೂಲ: ರಾಷ್ಟ್ರೀಯ ಮಾದರಿ ಸಮೀಕ್ಷೆ (2007-2008)

## 4.7. ಶಿಕ್ಷಣದ ಸಾರ್ವಜನಿಕ ವೆಚ್ಚ

ಒಟ್ಟು ಮೊತ್ತದ ಲೆಕ್ಕದಲ್ಲಿ ದೊಡ್ಡಬಳ್ಳಾಪುರ ಅತಿ ಹೆಚ್ಚು ಸಾರ್ವಜನಿಕ ವೆಚ್ಚಗಳನ್ನು ಮಾಡುವ ತಾಲೂಕಾಗಿದೆ. ಆದರೆ ತಲಾ ವೆಚ್ಚದ ಲೆಕ್ಕದಲ್ಲಿ ನೆಲಮಂಗಲ ತಾಲೂಕು ಮೊದಲ ಸ್ಥಾನದಲ್ಲಿದೆ (ಕೋಷ್ಟಕ 4.27 ಮತ್ತು 4.28). 2010-11 ಅವಧಿಯಲ್ಲಿ ಇಡೀ ಜಿಲ್ಲೆಯಲ್ಲಿ ಶಿಕ್ಷಣದ ಮೇಲೆ ಸಾರ್ವಜನಿಕ ವೆಚ್ಚದಲ್ಲಿ ಶೇ. 11.45 ರಷ್ಟು ನಿಜವಾದ ಹೆಚ್ಚಳ ಕಂಡುಬಂದಿದೆ. ಆದರೆ 2011-12 ರಲ್ಲಿ ವೆಚ್ಚವೂ ಶೇ. 27 ರಷ್ಟು ತೀವ್ರ ಇಳಿಮುಖ ಕಂಡಿದೆ. ಎಲ್ಲ ತಾಲೂಕುಗಳಲ್ಲೂ ಏರಿಕೆ ನಂತರ ಇಳುಮುಖ ಕಂಡುಬಂದಿದೆಯಾದರೂ ಬದಲಾವಣೆಗಳ ಪ್ರಮಾಣ ಮಾತ್ರ ಬೇರೆ ಬೇರೆಯಾಗಿವೆ. 2010-11ರಲ್ಲಿ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಅತಿ ಹೆಚ್ಚು ಅಭಿವೃದ್ಧಿ ಕಂಡುಬಂದಿದ್ದು ಶಿಕ್ಷಣದ ಸಾರ್ವಜನಿಕ ವೆಚ್ಚ ಹೆಚ್ಚು ಕಡಿಮೆ ನೆಲಮಂಗಲ ತಾಲೂಕಿನಷ್ಟೇ ಆಗಿದೆ ಮತ್ತು ಈ ವಿಷಯದಲ್ಲಿ ದೇವನಹಳ್ಳಿ ತಾಲೂಕು ಕೊನೆಯ ಸ್ಥಾನದಲ್ಲಿದೆ. ಹಿರಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಗಳ ಹಂತದಲ್ಲಿ ಜಿಲ್ಲೆ ಇನ್ನೂ ಉತ್ತಮ ಸಾಧನೆ ಮಾಡಬೇಕಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೆಣ್ಣು ಮಕ್ಕಳು ಮತ್ತು ಅದರಲ್ಲೂ ವಿಶೇಷವಾಗಿ ಬಡ ಕುಟುಂಬಗಳ ಮಕ್ಕಳ ವಿಷಯದಲ್ಲಿ ಶಾಲಾ ದಾಖಲಾತಿಗೆ ಪ್ರತಿಕೂಲ ಪರಿಸ್ಥಿತಿಗಳು ಇದ್ದಾಗ, ಸಾರ್ವಜನಿಕ ಶಿಕ್ಷಣದ ವೆಚ್ಚ ಇಳಿಮುಖವಾಗುತ್ತಿರುವುದು ಮಾನವ ಅಭಿವೃದ್ಧಿ ದೃಷ್ಟಿಯಿಂದ ನಿಜಕ್ಕೂ ಒಂದು ಆತಂಕಕಾರಿ ಸಂಗತಿಯಾಗಿದೆ.

**ಕೋಷ್ಟಕ4.27: ಶಿಕ್ಷಣದ ಮೇಲಿನ ಸಾರ್ವಜನಿಕ ವೆಚ್ಚ (ಲಕ್ಷ ರೂಗಳಲ್ಲಿ– 2009–10 ಬೆಲೆಗಳಲ್ಲಿ)**

| ತಾಲೂಕು/ಜಿಲ್ಲೆ | 2009–2010 | 2010–2011 | 2011–2012 | ಅಭಿವೃದ್ಧಿ ದರ (ಶೇ.) (2010–2011) | ಅಭಿವೃದ್ಧಿ ದರ (ಶೇ.) (2011–2012) |
|---|---|---|---|---|---|
| ದೇವನಹಳ್ಳಿ | 1,469.09 | 1,581.17 | 1,494.46 | 7.63 | –5.48 |
| ದೊಡ್ಡಬಳ್ಳಾಪುರ | 2,176.91 | 2,614.41 | 2,513.57 | 20.10 | –3.86 |
| ಹೊಸಕೋಟೆ | 1,878.50 | 1,991.47 | 1,995.16 | 6.01 | 0.19 |
| ನೆಲಮಂಗಲ | 1,856.09 | 2,038.96 | ಓ೦ | 9.85 | ಓ೦ |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 7,380.59 | 8,226.00 | 6,003.19 | 11.45 | –27.02 |
| ರಾಜ್ಯ ಒಟ್ಟು ಆಂತರಿಕ ಉತ್ಪನ್ನ ಸೂಚಿ | 100.00 | 110.46 | 119.48 | | |

**ಸೂಚನೆ:** 1 ಆಧಾರ ವರ್ಷದ ಬದಲಾವಣೆ= (Tನಲ್ಲಿ. *100/( 2009–2010 ರಲ್ಲಿ ಹಣದುಬ್ಬರ ತಗ್ಗಿಸುವ ಮೌಲ್ಯ) ಇಲ್ಲಿ $T_1$ 2004–2005 ರಿಂದ 2011–2012 ವರೆಗೆ ವ್ಯತ್ಯಾಸವಾಗುತ್ತದೆ

2. 2009–2010 ನಲ್ಲಿ ಶಿಕ್ಷಣ ವೆಚ್ಚ = $T_2$ ನಲ್ಲಿ ಶಿಕ್ಷಣ ವೆಚ್ಚ / ಹಣದುಬ್ಬರ ತಗ್ಗಿಸುವ ಮೌಲ್ಯ ಇಲ್ಲಿ $T_2$ 2009–2010 ರಿಂದ 2011–2012 ವರೆಗೆ ವ್ಯತ್ಯಾಸವಾಗುತ್ತದೆ
3. ಬೆಳವಣಿಗೆ ಪ್ರಮಾಣ =( ಚಾಲ್ತಿವರ್ಷದ ವೆಚ್ಚ–ಮುಂಚಿನ ವರ್ಷದ ವೆಚ್ಚ) x 100 / ಮುಂಚಿನ ವರ್ಷದ ವೆಚ್ಚ
4. ಬೆಂಗಳೂರು ಗ್ರಾಮಾಂತರಕ್ಕೆ ಶಿಕ್ಷಣ ವೆಚ್ಚ, ಆಯಾ ವರ್ಷಗಳಿಗೆ ತಾಲೂಕುಗಳ ಒಟ್ಟು ಮೌಲ್ಯವಾಗಿರುತ್ತದೆ.

**ಮೂಲ:** ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ (ಶಿಕ್ಷಣ ವೆಚ್ಚ) ಕರ್ನಾಟಕ ಆರ್ಥಿಕ ಸಮೀಕ್ಷೆ 2011–12 (ಸ್ಥಿರ ಬೆಲೆಗಳ ಲೆಖ್ಖಕ್ಕಾಗಿ)

**ಕೋಷ್ಟಕ. 4.28: ತಲಾ ಶಿಕ್ಷಣ ವೆಚ್ಚ (2009–10 ಬೆಲೆಗಳಲ್ಲಿ)**

| ತಾಲೂಕು/ಜಿಲ್ಲೆ | 2009–2010 | 2010–2011 | 2011–2012 | ಅಭಿವೃದ್ಧಿ ದರ (ಶೇ.) (2010–2011) | ಅಭಿವೃದ್ಧಿ ದರ (ಶೇ.) (2011–2012) |
|---|---|---|---|---|---|
| ದೇವನಹಳ್ಳಿ | 714.27 | 758.81 | 712.93 | 6.24 | –6.05 |
| ದೊಡ್ಡಬಳ್ಳಾಪುರ | 739.48 | 877.86 | 838.99 | 18.71 | –4.43 |
| ಹೊಸಕೋಟೆ | 710.96 | 737.67 | 736.72 | 3.76 | –0.13 |
| ನೆಲಮಂಗಲ | 901.67 | 970.52 | ಓ೦ | 7.64 | ಓ೦ |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 761.20 | 834.67 | 605.82 | 9.65 | –27.42 |

**ಸೂಚನೆ:** 1 ಆಧಾರ ವರ್ಷದ ಬದಲಾವಣೆ= ($T_1$ ನಲ್ಲಿ. *100/( 2009–2010 ರಲ್ಲಿ ಹಣದುಬ್ಬರ ತಗ್ಗಿಸುವ ಮೌಲ್ಯ) ಇಲ್ಲಿ $T_1$ 2004–2005 ರಿಂದ 2011–2012 ವರೆಗೆ ವ್ಯತ್ಯಾಸವಾಗುತ್ತದೆ

2. 2009–2010 ನಲ್ಲಿ ಶಿಕ್ಷಣ ವೆಚ್ಚ = $T_2$ನಲ್ಲಿ ಶಿಕ್ಷಣ ವೆಚ್ಚ / ಹಣದುಬ್ಬರ ತಗ್ಗಿಸುವ ಮೌಲ್ಯ ಇಲ್ಲಿ $T_2$ 2009–2010 ರಿಂದ 2011–2012 ವರೆಗೆ ವ್ಯತ್ಯಾಸವಾಗುತ್ತದೆ
3. ಬೆಳವಣಿಗೆ ಪ್ರಮಾಣ =( ಚಾಲ್ತಿವರ್ಷದ ವೆಚ್ಚ–ಹಿಂದಿನ ವರ್ಷದ ವೆಚ್ಚ) x 100 / ಹಿಂದಿನ ವರ್ಷದ ವೆಚ್ಚ
4. ಬೆಂಗಳೂರು ಗ್ರಾಮಾಂತರಕ್ಕೆ ಶಿಕ್ಷಣ ವೆಚ್ಚ, ಆಯಾ ವರ್ಷಗಳಿಗೆ ತಾಲೂಕುಗಳ ಸಂಚಿತ ಮೌಲ್ಯವಾಗಿರುತ್ತದೆ..

**ಮೂಲ:** ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ (ಶಿಕ್ಷಣ ವೆಚ್ಚ) ಕರ್ನಾಟಕ ಆರ್ಥಿಕ ಸಮೀಕ್ಷೆ 2011–12 (ಸ್ಥಿರ ಬೆಲೆಗಳ ಲೆಖ್ಖಕ್ಕಾಗಿ)

## 4.8 ತಾತ್ಪರ್ಯ

ಕಳೆದ ಕೆಲವು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಸಾಕ್ಷರತಾ ಪ್ರಮಾಣ ಮತ್ತು ಶಾಲೆಗಳಲ್ಲಿ ದಾಖಲಾತಿ ಪ್ರಮಾಣದಲ್ಲಿ ಗಣನೀಯ ಸುಧಾರಣೆ ತೋರಿದೆ. ಇದು ಸಾಕ್ಷರತಾ ಪ್ರಮಾಣ, ದಾಖಲಾತಿ ಅನುಪಾತಗಳು, ಮೂಲಭೂತ ಸೌಲಭ್ಯಗಳು ಮತ್ತು ಎಸ್.ಎಸ್.ಎಲ್.ಸಿ ಯಲ್ಲಿ ತೇರ್ಗಡೆ ಪ್ರಮಾಣ ಇತ್ಯಾದಿಗಳಲ್ಲಿ ಪ್ರತಿಫಲಿತವಾಗಿವೆ. ಈ ಅಧ್ಯಾಯದಲ್ಲಿ ಚರ್ಚಿಸಿದಂತೆ ಸರ್ಕಾರವು ಹಲವಾರು ಕಾರ್ಯಕ್ರಮಗಳ ಮೂಲಕ ಮಧ್ಯಪ್ರವೇಶಿಸಿ ಶಿಕ್ಷಣ ಹಕ್ಕು ಮಾನದಂಡಗಳನ್ನು ಸಾಧಿಸುವ ನಿಟ್ಟಿನಲ್ಲಿ ಪ್ರಯತ್ನಿಸಿದೆ. ಆದರೆ ಜಿಲ್ಲಾ ನಿರ್ದಿಷ್ಟ ಪ್ರಯತ್ನಗಳ ಮೇಲೆ ಹೆಚ್ಚು ಒತ್ತು ನೀಡಿರುವುದು ಕಂಡುಬರುವುದಿಲ್ಲ.

ಜಿಲ್ಲೆಯ ಸಾಕ್ಷರತೆ ಮತ್ತು ಶಿಕ್ಷಣದ ಸ್ಥೂಲಚಿತ್ರಣ, ಈ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅತ್ಯಂತ ಕಡೆಗಾಣಿಸಲ್ಪಟ್ಟವರಿಗೆ ನ್ಯಾಯಯುತವಾದ ಪ್ರಾತಿನಿಧ್ಯ ದೊರೆತಿಲ್ಲ ಎಂಬುದನ್ನು ತಿಳಿಸುತ್ತದೆ. ಹೆಣ್ಣು ಮಕ್ಕಳ ಅದರಲ್ಲೂ ಗ್ರಾಮೀಣ ಭಾಗಗಳ ಹೆಣ್ಣು ಮಕ್ಕಳ ಸಾಕ್ಷರತಾ ಪ್ರಮಾಣದಲ್ಲಿ ನಗರ ಭಾಗಗಳ ಹೆಣ್ಣು ಮಕ್ಕಳ ಸಾಕ್ಷರತಾ ಪ್ರಮಾಣದಲ್ಲಿ ಆಗಿರುವಷ್ಟು ಸುಧಾರಣೆ ಆಗಿಲ್ಲ. ಅದರಂತೆಯೇ, ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದವರ ಪ್ರಮಾಣಗಳನ್ನು ನೋಡಿದರೆ ನೆಲಮಂಗಲ ತಾಲೂಕಿನಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಹೆಣ್ಣು ಮಕ್ಕಳು ಶಾಲೆ ಬಿಟ್ಟಿರುವುದು ಕಂಡುಬರುತ್ತದೆ, ಈ ತಾಲೂಕಿನಲ್ಲಿ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳು ಇರುವ ಶಾಲೆಗಳ ಸಂಖ್ಯೆ ಬಹಳ ಕಡಿಮೆ ಇದೆ.

ಜಿಲ್ಲೆಯ ಒಂದು ಗಮನಾರ್ಹವಾದ ಲಕ್ಷಣವೆಂದರೆ ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚಿರುವುದು, ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಹಂತದ ನಂತರದ ಶಾಲೆಗಳು. ಇವುಗಳಿಗೆ ಹೋಲಿಸಿದರೆ ಸರ್ಕಾರಿ ಶಾಲೆಗಳ ಸಂಖ್ಯೆ ಬಹಳ ಕಡಿಮೆ ಇದೆ. ಹಾಗಾಗಿ ಶಾಲಾ ಶಿಕ್ಷಣದ ಲಭ್ಯತೆ, ತಂದೆತಾಯಿಯರ ಶುಲ್ಕ ಭರಿಸುವ ಸಾಮರ್ಥ್ಯದ ಮೇಲೆ ಬಹಳವಾಗಿ ಅವಲಂಬಿಸಿದೆ. ಇದರಿಂದ ಬಡವ-ಶ್ರೀಮಂತರ ನಡುವಿನ ಅಂತರ ಬಹಳವಾಗಿ ಹೆಚ್ಚಬಹುದು. ಶ್ರೀಮಂತರು ಯಾವ ಶಾಲೆಯನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದಾದರೂ ಬಡವರಿಗೆ ಇರುವುದು ಎರಡೇ ಆಯ್ಕೆಗಳು-ಒಂದು, ಸರ್ಕಾರಿ ಶಾಲೆ ಅಥವಾ ಶಾಲೆಗೆ ಕಳುಹಿಸದಿರುವುದು. ಈ ಸರ್ಕಾರಿ ಶಾಲೆಗಳಾದರೂ ಅವರ ಮನೆಗೆ ಸಮೀಪವಿರುವುದಿಲ್ಲ. ಕಾರಣ, ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆ ಇದೆ. ಹೆಣ್ಣುಮಕ್ಕಳ ಕಲಿಕೆಗೆ ಹೆಚ್ಚು ಬೆಲೆ ಕೊಡದಿರುವುದರಿಂದ ಮತ್ತು ಖಾಸಗಿ ಶಾಲೆಗಳಿಗೆ ಸೇರುವುದು ಕಷ್ಟವಿರುವುದರಿಂದ ಲಿಂಗ ಸಂಬಂಧದ ಅಸಮಾನತೆಗಳ ಮೇಲೆ ಇದು ಪ್ರತಿಕೂಲ ಪ್ರಭಾವ ಬೀರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಶಿಕ್ಷಣದ ಸಾರ್ವಜನಿಕ ವೆಚ್ಚದಲ್ಲಿ ಆಗಿರುವ ಇಳಿತ ಆತಂಕಕಾರಿಯಾಗಿದೆ.

# ಕಿರು ಕ್ಷೇತ್ರ ಅಧ್ಯಯನ 1

## ಬೆಂಗಳೂರು ಗ್ರಾಮಾಂತರ ಜಿಲ್ಲೆ ಖಾಸಗಿ ಶಾಲೆಗಳ ಗುಣಮಟ್ಟ

### 1.1 ಪ್ರಸ್ತಾವನೆ

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಒಪ್ಪಿಕೊಂಡ ಕಾಲದಿಂದಲೂ ಶಿಕ್ಷಣವನ್ನು ಅದರ ಒಂದು ಪ್ರಮುಖ ಭಾಗವೆಂದು ಮಾನ್ಯಮಾಡಲಾಗಿದೆ. ಸಾರ್ವಜನಿಕ ಆರೋಗ್ಯದಂತೆಯೇ ಸಾರ್ವಜನಿಕ ಶಿಕ್ಷಣವೂ ಒಂದು ಅಮೂಲ್ಯವಾದ ಸಾಮಾಜಿಕ ಒಳಿತು ಮತ್ತು ಅದಕ್ಕೆ ಸಾರ್ವಜನಿಕರ ಹಣ ಒದಗಿಸುವುದು ಯೋಗ್ಯ ಎಂಬುದು ಸಾಂಪ್ರದಾಯಿಕ ಆಲೋಚನೆಯಾಗಿತ್ತು. ಆದರೆ ವಿಮರ್ಶಾತೀತವೆಂದು ಭಾವಿಸಿದ್ದ ಈ ಅಭಿಪ್ರಾಯಗಳಿಗೆ ಜಾಗತಿಕ ಹಣಕಾಸು ಮುಗ್ಗಟ್ಟು ಮತ್ತು ಹೆಚ್ಚುತ್ತಿರುವ ಹೊಸ ಆರ್ಥಿಕ ಉದಾರೀಕರಣಗಳು ಸವಾಲುಗಳನ್ನು ಒಡ್ಡುತ್ತಿವೆ. ಬದಲಾಗುತ್ತಿರುವ ಭಾರಿ-ಆರ್ಥಿಕ ಸನ್ನಿವೇಶದಲ್ಲಿ ಭಾರತದಲ್ಲಿ ಸಾಮಾಜಿಕ ವ್ಯಯಗಳಿಗೆ ಪ್ರೋತ್ಸಾಹವಿಲ್ಲದಿರುವುದು ಒಂದು ಕಡೆಯಾದರೆ 'ಪೋಷಕರು ಸಾರ್ವಜನಿಕ ಶಾಲೆಗಳಿಗಿಂತ ಖಾಸಗಿ ಶಾಲೆಗಳನ್ನು ಬಯಸುತ್ತಾರೆ', 'ಖಾಸಗಿ ಶಾಲೆಗಳೆಂದರೆ ಉತ್ತಮ ಶಿಕ್ಷಣ', ಎನ್ನುವ ಮಾತುಗಳು ಮತ್ತೊಂದು ಕಡೆ. ಇದು ಇಂದು ಹಿಂದೆಂದಿಗಿಂತಲೂ ಹೆಚ್ಚು ಪ್ರಚಾರದಲ್ಲಿದೆ.

ಕರ್ನಾಟಕದ ಶಿಕ್ಷಣ ವ್ಯವಸ್ಥೆಯಲ್ಲಿನ ಒಂದು ಗಣನೀಯ ಲಕ್ಷಣವೆಂದರೆ ಶಿಕ್ಷಣದ ಎಲ್ಲ ಹಂತಗಳಲ್ಲೂ ಖಾಸಗೀ ವಲಯವು ಭಾರಿ ಪಾತ್ರ ವಹಿಸುತ್ತಿದೆ. ಕಳೆದ ಎರಡು ದಶಕಗಳಿಂದ ಖಾಸಗಿ ಅನುದಾನ ರಹಿತ ಶಾಲೆಗಳು ಅತ್ಯಂತ ವೇಗವಾಗಿ ಬೆಳೆದು ರಾಜ್ಯದಲ್ಲಿನ ಒಟ್ಟು ಶಾಲೆಗಳ ಸಂಖ್ಯೆ 17.23ಶೇ. ತಲುಪಿದೆ ಮತ್ತು ಒಟ್ಟು ನೋಂದಾವಣೆಗಳಲ್ಲಿ 40ಶೇ. ನೋಂದಾವಣೆಗಳನ್ನು ಆಕರ್ಷಿಸುತ್ತಿವೆ(ಎಸ್‌ಎಸ್‌ಎ ಕರ್ನಾಟಕ ವಾರ್ಷಿಕ ವರದಿ 2011-12). ಸರ್ಕಾರ ಸಾರ್ವಜನಿಕ ಶಾಲೆಗಳ ಮೂಲಭೂತ ಸೌಲಭ್ಯಗಳು ಮತ್ತು ಶಿಕ್ಷಕರ ತರಬೇತಿಯ ವಿಷಯಗಳಲ್ಲಿ ಹೂಡಿಕೆಯನ್ನು ಉತ್ತಮಗೊಳಿಸಬೇಕು ಎಂದು ಯತ್ನಿಸುತ್ತಿರುವ ಸಂದರ್ಭದಲ್ಲೇ ಖಾಸಗಿ ಶಾಲೆಗಳ ಬಗ್ಗೆ ಒಲವು ಹೆಚ್ಚುತ್ತಲೇ ಇದೆ. ಈ ಬಗೆಯ ಪ್ರಯತ್ನಗಳು ಬಲ ಪಡೆದಿರುವುದು ಶಿಕ್ಷಣದ ಹಕ್ಕು ಅಧಿನಿಯಮ ಜಾರಿಯಾದ ನಂತರದಲ್ಲಿ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಖಾಸಗಿ ಶಾಲೆಗಳ ಗುಣಮಟ್ಟದ ಬಗ್ಗೆ ಸಿಬಿಪಿಎಸ್ ಒಂದು ಕಿರು ಕ್ಷೇತ್ರ ಅಧ್ಯಯನ ಮಾಡಿದೆ. ಇದರ ಉದ್ದೇಶ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂದರ್ಭದಲ್ಲಿ ಖಾಸಗಿ ಶಾಲೆಗಳ ಗುಣಮಟ್ಟದ ಬಗ್ಗೆ ಇರುವ ಜನಪ್ರಿಯ ಗ್ರಹಿಕೆಗಳನ್ನು ಮತ್ತು ಹೇಳಿಕೆಗಳನ್ನು ಅಧ್ಯಯನ ಮಾಡುವುದು. 2011ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 163 ಹಿರಿಯ-ಪ್ರಾಥಮಿಕ (7ನೇ ತರಗತಿಯವರೆಗೆ) ಖಾಸಗಿ ಶಾಲೆಗಳಿದ್ದವು, ನಂತರ ಇನ್ನೂ ಅನೇಕ ಶಾಲೆಗಳು ತೆರೆದಿವೆ. 2001ರಲ್ಲಿ ಅಂತಹ 80 ಖಾಸಗಿ ಶಾಲೆಗಳಿದ್ದರೆ 2010-11 ದಶಕದಲ್ಲಿ ಈ ಸಂಖ್ಯೆ ದ್ವಿಗುಣಗೊಂಡಿವೆ.

### 1..2. ಅಧ್ಯಯನದ ಉದ್ದೇಶಗಳು:

1. 'ಖಾಸಗಿ ಶಾಲೆಗಳ ಗುಣಮಟ್ಟ'ಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ದತ್ತಾಂಶ ಸಂಗ್ರಹಣ. ಇದನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲೂಕುಗಳಾದ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲಗಳಿಂದ ಪ್ರತಿ ತಾಲೂಕಿಗೆ 2 ಶಾಲೆಗಳಂತೆ ಆಯ್ಕೆ ಮಾಡಿ ಸಂಗ್ರಹಿಸಲಾಗಿದೆ (ಒಟ್ಟು 8 ಶಾಲೆಗಳು). ಇದಕ್ಕೆ ಶಿಕ್ಷಣ ಹಕ್ಕು (RTE) ಮಾನದಂಡಗಳನ್ನು ಹೋಲಿಕೆಗೆ ಇಟ್ಟುಕೊಳ್ಳಲಾಗಿರುತ್ತದೆ.

2. ಹೀಗೆ ಸಂಗ್ರಹಿಸಿದ ದತ್ತಾಂಶವನ್ನು 5 ಮುಖ್ಯ ತಲೆಬರಹಗಳಡಿ ವಿಂಗಡಿಸಿ ವಿಶ್ಲೇಷಿಸಲಾಗುತ್ತದೆ - (1) ಭೌತಿಕ ಮೂಲಭೂತ ಸೌಲಭ್ಯಗಳು, (2) ಮಾನವ ಸಂಪನ್ಮೂಲಗಳ ಗುಣಮಟ್ಟ (3) ಸಮನ್ಯಾಯ ದೃಷ್ಟಿ (4) ಬೋಧನೆ/ಕಲಿಕಾ ಪ್ರಕ್ರಿಯೆಗಳ ಹಾಗೂ (5) ಶಾಲಾ ಆಡಳಿತದ ಗುಣಮಟ್ಟ.

### 1.3. ಫಲಿತಾಂಶಗಳು

#### 1.3.1. ಭೌತಿಕ ಮೂಲಭೂತ ಸೌಲಭ್ಯಗಳು

ಇದರಲ್ಲಿ ಎಸ್‌ಎಸ್‌ಎ ವಿವರಿಸಿರುವ 7 ಪರಿಮಿತಿಗಳನ್ನು ಪರೀಕ್ಷೆ ಮಾಡಲಾಗುತ್ತದೆ: ಪಕ್ಕಾ ಶಾಲಾ ಕಟ್ಟಡ, ಹುಡುಗರು ಮತ್ತು ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯಗಳು, ಕಾಂಪೌಂಡ್ ಗೋಡೆ, ಕುಡಿಯುವ ನೀರು, ಇಳಿಜಾರುಗಳು, ಆಟದ ಮೈದಾನಗಳು, ವಿದ್ಯುತ್ತೀಕರಣ, ಗ್ರಂಥಾಲಯ ಇವುಗಳ ಜೊತೆಗೆ ಪ್ರತಿ ತರಗತಿಗೆ ಇರುವ ಶಾಲಾಕೊಠಡಿಗಳ ಸಂಖ್ಯೆ, ಶಾಲಾ ತರಗತಿಗಳಲ್ಲಿ ಆಸನ ವ್ಯವಸ್ಥೆ ಮತ್ತು ಸಲಕರಣೆಗಳು, ಮತ್ತು ಶಾಲೆ ಸಾರಿಗೆ ವ್ಯವಸ್ಥೆ ಮಾಡಿದೆಯೇ, ಇತ್ಯಾದಿಗಳನ್ನೂ ಪರೀಕ್ಷಿಸಲಾಗುತ್ತದೆ.

ಸಂದರ್ಶಿಸಿದ 8 ಶಾಲೆಗಳಲ್ಲೂ ಪಕ್ಕಾ ಕಟ್ಟಡಗಳಿದ್ದವು. 4 ನಿರ್ಮಾಣ ಹಂತದಲ್ಲಿದ್ದವು. 3 ಶಾಲೆಗಳಲ್ಲಿ ಇದನ್ನು ಹೊಸ ವಿಭಾಗವನ್ನಾಗಿ ನಿರ್ಮಿಸಲಾಗುತ್ತಿದ್ದರೆ, ಮತ್ತೊಂದರಲ್ಲಿ ಕೆಲವು ತರಗತಿ ಕೋಣೆಗಳಿಗೆ ಲೋಹದ ಹಾಳೆಯ ಮೇಲ್ಹಾವಣಿ ಇತ್ತು, ಕಾರಣ ಭವಿಷ್ಯದಲ್ಲಿ ಈ ಕೋಣೆಗಳನ್ನು ಮೇಲಂತಸ್ತಿನಲ್ಲಿ ನಿರ್ಮಿಸುತ್ತಿದ್ದ ಹೆಚ್ಚುವರಿ ಕೋಣೆಗಳ ಪಕ್ಕದಲ್ಲೇ ನಿರ್ಮಿಸುವ ಯೋಜನೆಯಿತ್ತು. ಎಲ್ಲ ಶಾಲೆಗಳಲ್ಲೂ ಹುಡುಗರು ಮತ್ತು ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯಗಳಿದ್ದವು. ಆದರೆ ನೆಲದ, ಬೆಳಕಿನ, ಗಾಳಿಯಾಡುವ ಮತ್ತು ನಲ್ಲಿಯಲ್ಲಿ ನೀರು ಬರುವ ವಿಷಯಗಳಲ್ಲಿ ಗುಣಮಟ್ಟಗಳಲ್ಲಿ ವಿಪರೀತ ವ್ಯತ್ಯಾಸಗಳಿದ್ದವು. ಎರಡು ಎಲ್ಲ ವಿಷಯಗಳಲ್ಲೂ ಬಹಳ ಉತ್ತಮವಾಗಿದ್ದರೆ ಒಂದು ತೀರಾ ಕಳಪೆಯಾಗಿತ್ತು. ಉಳಿದ 5 ಸುಮಾರಾಗಿದ್ದವು, ಅದರಲ್ಲಿ ಮೂರರಲ್ಲಿ ನಲ್ಲಿ ನೀರು ಬರದಿದ್ದರೆ ಪರ್ಯಾಯ ವ್ಯವಸ್ಥೆ ಮಾಡಲಾಗಿತ್ತು (ಟ್ಯಾಂಕರ್‌ನಿಂದ ಪಂಪ್, ಅಥವಾ ದೈಹಿಕವಾಗಿ ಬಕೆಟುಗಳಲ್ಲಿ ತುಂಬಿಸಿಡುವುದು). 5 ಶಾಲೆಗಳಲ್ಲಿ ಸಿಬ್ಬಂದಿಗೆ ಪ್ರತ್ಯೇಕ ಶೌಚಾಲಯಗಳಿದ್ದವು (ಇದರಲ್ಲಿ ಅತ್ಯುತ್ತಮ ವಿದ್ಯಾರ್ಥಿ ಶೌಚಾಲಯಗಳ ಶಾಲೆಯೂ ಸೇರಿದೆ), 3 ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯ ಇರಲಿಲ್ಲ (ಅತ್ಯಂತ ಕೆಟ್ಟ ಶೌಚಾಲಯಗಳ ಶಾಲೆಯೂ ಸೇರಿದೆ). ಈ ಶಾಲೆಯಲ್ಲಿ ಪತಿ-ಪತ್ನಿ ಜೋಡಿ ಆಡಳಿತ ವರ್ಗದ ಪ್ರತ್ಯೇಕ ಬಳಕೆಗೆಂದು ಒಂದು ಪ್ರತ್ಯೇಕ ಶೌಚಾಲಯವಿತ್ತು (ಆದರೆ ನಲ್ಲಿ ನೀರು ಇಲ್ಲ). 5 ಶಾಲೆಗಳಿಗೆ ಪೂರ್ತಿಯಾಗಿ ಕಾಂಪೌಂಡ್ ಗೋಡೆಗಳಿದ್ದವು, 3ಕ್ಕೆ ಭಾಗಶಃ ಗೋಡೆಗಳು/ಬೇಲಿ. 4 ಶಾಲೆಗಳಲ್ಲಿ ಯಾವುದೋ ಮೂಲದಿಂದ ತಂದ ಕುಡಿಯುವ ನೀರು ಜೊತೆಗೆ ಗೋಚರವಾಗುವ ನೀರು ಶುದ್ಧಕ/ಫಿಲ್ಟರ್ ಕಂಡುಬಂದವು. 2 ಶಾಲೆಗಳಲ್ಲಿ ಶುದ್ಧಗೊಳಿಸದ ನಲ್ಲಿ ನೀರು ಮತ್ತು 2 ಶಾಲೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಯಿಂದಲೇ ಕುಡಿಯುವ ನೀರನ್ನು ತರಬೇಕಿತ್ತು.

ಒಂದು ಶಾಲೆಯಲ್ಲಿ ಮಾತ್ರವೇ ವಿಶೇಷ ಅಗತ್ಯಗಳಿರುವ ವಿದ್ಯಾರ್ಥಿಗಳಿಗೆ ಓಡಾಡುವ ವ್ಯವಸ್ಥೆಗಳಿದ್ದವು (ಕಟ್ಟಡದಲ್ಲಿ ಲಿಫ್ಟ್), ಉಳಿದ ಯಾವುದೇ ಶಾಲೆಗಳಲ್ಲಿ ಅಂತಹ ಯಾವುದೇ ವ್ಯವಸ್ಥೆಗಳಿರಲಿಲ್ಲ/ಕೋಣೆಗಳಿರಲಿಲ್ಲ ಅಥವಾ ಬೋಧಕರಿರಲಿಲ್ಲ. ಒಬ್ಬ ಪ್ರಿನ್ಸಿಪಾಲ್ ಮಾತ್ರ ಏಕಾಗ್ರತೆ ಕೊರತೆ ಸಮಸ್ಯೆಯಿಂದ ಬಳಲುತ್ತಿರುವ ಒಂದು ಮಗುವನ್ನು ಸಾಮಾನ್ಯ ವಿದ್ಯಾರ್ಥಿಗಳ ಸಮಕ್ಕೆ ತರಲು ತರಗತಿಯ ಬೋಧಕರಿಗೆ ವಿಶೇಷವಾಗಿ ಹೇಳಿದ್ದರು. ಎಲ್ಲ ಶಾಲೆಗಳಲ್ಲೂ ಆಟದ ಮೈದಾನಕ್ಕಾಗಿ ಜಾಗ ನಿಗದಿಯಾಗಿತ್ತು. ಅದರಲ್ಲಿ 5 ರಲ್ಲಿ ಚಿಕ್ಕವರಿಗಾಗಿ ಜಂಗಲ್-ಜಿಮ್ಸ್ ನಿಂದ ಹಿಡಿದು ವಾಲಿಬಾಲ್ ಮೈದಾನಗಳವರೆಗೆ ಕೆಲವಾರು ಆಟದ ಸಲಕರಣೆಗಳಿದ್ದವು. ಎಲ್ಲ ಶಾಲೆಗಳಲ್ಲೂ ವಿದ್ಯುತ್ ಸಂಪರ್ಕವಿತ್ತು, 5ರಲ್ಲಿ ತರಗತಿಗಳಲ್ಲಿ ಫ್ಯಾನ್ ಇರಲಿಲ್ಲ, 3 ರಲ್ಲಿ ಮಾತ್ರ ವಿದ್ಯಾರ್ಥಿಗಳಿಗೆಂದು ಕಂಪ್ಯೂಟರುಗಳಿದ್ದವು, 2 ರಲ್ಲಿ ಬೋಧಕರೇ ಪ್ರದರ್ಶಿಸಿ ತೋರಿಸುತ್ತಿದ್ದರು ಅಥವಾ ವಿದ್ಯಾರ್ಥಿಗಳು ತಂಡ ತಂಡವಾಗಿ ಇರುವ ಸೀಮಿತ ಸಂಖ್ಯೆಯ ಕಂಪ್ಯೂಟರುಗಳನ್ನು ಬಳಸಬೇಕಿತ್ತು. 8 ರಲ್ಲಿ 5 ಶಾಲೆಗಳಲ್ಲಿ (60ಶೇ.) ಗ್ರಂಥಾಲಯಕ್ಕೆಂದೇ ಒಂದು ಕೋಣೆ, ಅದರಲ್ಲಿ ಜೋಡಿಸಿದ್ದ ಪುಸ್ತಕಗಳು ಇದ್ದವು. 2 ಶಾಲೆಗಳಲ್ಲಿ ಪುಸ್ತಕಗಳನ್ನು ವಿವಿಧ ಸ್ಥಳಗಳಲ್ಲಿ ಜೋಡಿಸಿದ್ದರು. ಒಂದು ಶಾಲೆಯಲ್ಲಿ ಬೀಗ ಹಾಕಿದ್ದ ಕೋಣೆಯೊಂದನ್ನು ತೋರಿಸಿ ಇದೇ ಗ್ರಂಥಾಲಯ ಎಂದರು, ಆದರೆ ನಮಗೆ ಪರಿಶೀಲಿಸಲಾಗಲಿಲ್ಲ. ಈ ಕೆಳಗಿನ ಕೋಷ್ಟಕ ನಮ್ಮ ಅಧ್ಯಯನದ ಶಾಲೆಗಳಲ್ಲಿನ ಗ್ರಂಥಾಲಯಗಳ ವ್ಯವಸ್ಥೆ ಬಗ್ಗೆ ಗಮನಿಸಿದ ಕೆಲವಾರು ವಿಷಯಗಳನ್ನು ತಿಳಿಸುತ್ತದೆ.

**ಕೋಷ್ಟಕ 1.1–ಅ: ಗ್ರಂಥಾಲಯ ಸೌಲಭ್ಯಗಳು ಮತ್ತು ವಾತಾವರಣ**

| ಗ್ರಂಥಾಲಯದ ಬಗ್ಗೆ ನಮ್ಮ ಗಮನಿಕೆಗಳು | | ಶಾಲೆಗಳ ಸಂಖ್ಯೆ |
|---|---|---|
| ಲಭ್ಯವಿರುವ ಪುಸ್ತಕಗಳು | < 100 | 1 |
| | 100–500 | 2 |
| | 500–1000 | 1 |
| | 1000–2000 | |
| | 2000–3000 | 3 |
| | ಇತರ ಗಮನಿಕೆಗಳು | ಒಂದು ಶಾಲೆಯಲ್ಲಿ ಗ್ರಂಥಾಲಯವನ್ನು ಮುಚ್ಚಲಾಗಿತ್ತು ಮತ್ತು ಅದನ್ನು ಸಮವಸ್ತ್ರಗಳನ್ನು ಸಂಗ್ರಹಿಸಿಡಲು ಬಳಸಲಾಗುತ್ತಿದೆ ಎಂದು ವರದಿ ಬಂದಿತು. |
| ಪ್ರತಿ ತರಗತಿಗೆ ವಯೋಮಾನಕ್ಕೆ ಸರಿಯಾದ ವಸ್ತುಗಳು | ಹೌದು | 6 |
| | ಇಲ್ಲ | 0 |
| | ಗೊತ್ತಿಲ್ಲ | 2 |
| ಗಾಳಿ ಬೆಳಕು | ಬಹಳ ಉತ್ತಮ | 1 |
| | ಉತ್ತಮ | 3 |
| | ಕಳಪೆ | 1 |
| | ಲಭ್ಯವಿಲ್ಲ | 3 |
| ಮಕ್ಕಳಿಗೆ ಓದುವ ವಸ್ತುಗಳು ಸಿಗುವ ಕುರಿತು | ಗ್ರಂಥಾಲಯಕ್ಕೆ ನಿಗದಿತ ಅವಧಿಯಲ್ಲಿ | 6 |
| | ತರಗತಿ ಇಲ್ಲದಿರುವಾಗ/ಪರ್ಯಾಯ ತರಗತಿ | 3 |
| | ವಿಶ್ರಾಂತಿ ಸಮಯದಲ್ಲಿ | 3 |
| | ನಿಗದಿತ ಶಾಲಾ ಸಮಯದ ನಂತರ | 1 |
| | ಇನ್ಯಾವುದಾದರೂ | 1 (ತರಗತಿಯಲ್ಲಿ ಪುಸ್ತಕಗಳನ್ನು ನೀಡಲಾಗುವುದು) |

ಮೂಲ: ಸಿಬಿಪಿಎಸ್ ಸಂಗ್ರಹಿಸಿರುವ ಪ್ರಾಥಮಿಕ ದತ್ತಾಂಶ

ಶಾಲೆಯಲ್ಲಿದ್ದ ತರಗತಿಗಳ ಸಂಖ್ಯೆಗಳಲ್ಲಿ ವ್ಯತ್ಯಾಸಗಳಿದ್ದವು, 1ಶಾಲೆಯಲ್ಲಿ 10ಕ್ಕಿಂತ ಕಡಿಮೆ ಇದ್ದರೆ 2 ಶಾಲೆಗಳಲ್ಲಿ 40ಕ್ಕೂ ಹೆಚ್ಚಿದ್ದವು. 3 ಶಾಲೆಗಳಲ್ಲಿ ಸುಮಾರು 20 ಮತ್ತು 2 ಶಾಲೆಗಳಲ್ಲಿ ಸುಮಾರು 30 ಕೊಠಡಿಗಳಿದ್ದವು. 6 ಶಾಲೆಗಳಲ್ಲಿ ಒಂದು ತರಗತಿಗೆ ಒಂದೇ ಕೊಠಡಿ ಇತ್ತು. ಅದನ್ನೇ ಭಾಗಮಾಡಿಕೊಂಡು 2 ತರಗತಿಗಳನ್ನು ನಡೆಸಲಾಗುತ್ತಿತ್ತು (ಹೊಸ ಕಟ್ಟಡ ನಿರ್ಮಾಣವಾಗುತ್ತಿತ್ತು). ಮತ್ತೊಂದು ಶಾಲೆಯಲ್ಲಿ ಪ್ರಾಥಮಿಕ ವಿಭಾಗಕ್ಕೆ ಬಹು–ಶ್ರೇಣಿ ತರಗತಿ ಕೊಠಡಿಗಳಿದ್ದವು. 7 ಶಾಲೆಗಳು ವಿದ್ಯಾರ್ಥಿಗಳಿಂದ ಹೆಚ್ಚುವರಿ ಹಣ ಪಡೆದು ಸಾರಿಗೆ ಸೌಲಭ್ಯವನ್ನು ಒದಗಿಸಿತ್ತು. ಅವುಗಳಲ್ಲಿ ಒಂದರಲ್ಲಿ ಬಸ್ ಮತ್ತು ವ್ಯಾನ್ ಎರಡೂ ಇದ್ದವು. ಉಳಿದವುಗಳಲ್ಲಿ ಬರಿಯ ವ್ಯಾನ್‌ಗಳಿದ್ದವು. ತರಗತಿಯಲ್ಲಿ ಆಸನ ವ್ಯವಸ್ಥೆ – 7 ಶಾಲೆಗಳಲ್ಲಿ ಬೆಂಚುಗಳು ಮತ್ತು ಡೆಸ್ಕುಗಳಿದ್ದವು. ಅವುಗಳಲ್ಲಿ ಒಂದು ಶಾಲೆಯಲ್ಲಿ ಸಾಕಷ್ಟು ಬೆಂಚು ಮತ್ತು ಡೆಸ್ಕುಗಳು ಇಲ್ಲದಿದ್ದುದರಿಂದ ನೆಲವನ್ನೂ ಬಳಸುತ್ತಿತ್ತು. ಒಂದು ಶಾಲೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತ್ಯೇಕ ಡೆಸ್ಕ್ ಮತ್ತು ಕುರ್ಚಿಗಳನ್ನು ಒದಗಿಸಿತ್ತು, ಕೆಳ ಶ್ರೇಣಿಯವರಿಗೆ ಮಕ್ಕಳ ಅಳತೆಯ ಮತ್ತು ಬಣ್ಣಬಣ್ಣದವು. ತರಗತಿಗಳಲ್ಲಿನ ಸೌಲಭ್ಯಗಳು ಮತ್ತು ಸಲಕರಣೆಗಳ ಬಗ್ಗೆ ಪಟ್ಟಿಯನ್ನು ನೋಡಿ (1.2 – 6);

**ಕೋಷ್ಟಕ 1.2–ಅ: ತರಗತಿಗಳಲ್ಲಿನ ಸೌಲಭ್ಯಗಳು ಮತ್ತು ಸಲಕರಣೆಗಳು**

| ತರಗತಿಗಳಲ್ಲಿನ ಸೌಲಭ್ಯಗಳು ಮತ್ತು ಸಲಕರಣೆಗಳು | | ಶಾಲೆಗಳ ಸಂಖ್ಯೆ |
|---|---|---|
| ಕಪ್ಪುಹಲಗೆ | ಇದೆ | 8 |
| | ಇಲ್ಲ | 0 |
| ಇತರ (ಸ್ಮಾರ್ಟ್ ಬೋರ್ಡ್) | ಒಂದು ಶಾಲೆಯಲ್ಲಿ ಪ್ರತಿ ತರಗತಿಯಲ್ಲೂ ಒಂದು ಸ್ಮಾರ್ಟ್ ಬೋರ್ಡ್ ಇತ್ತು. 4ರಲ್ಲಿ 3 ತರಗತಿಗಳು ಅದನ್ನು ಬಳಸುತ್ತಿದ್ದುದು ಕಂಡುಬಂದಿತು (ಪವರ್–ಬ್ಯಾಕ್‌ಅಪ್ ಸಹಿತ). ಮತ್ತೊಂದು ಶಾಲೆ 3 ಕೋಣೆಗಳಲ್ಲಿ ಸ್ಮಾರ್ಟ್ ಬೋರ್ಡುಗಳಿವೆ ಮತ್ತು ಅದಕ್ಕೆ ವಿದ್ಯಾರ್ಥಿಗಳಿಂದ ಪ್ರತಿ ತಿಂಗಳೂ 100 ರೂ. ಸಂಗ್ರಹಿಸುತ್ತಿದೆ ಎಂದು ವರದಿ ಮಾಡಿತು. ಆದರೆ ಈ ಕೋಣೆಗಳಿಗೆ ಬೀಗಹಾಕಿದ್ದು ಗಮನಿಸಲು ಆಗಲಿಲ್ಲ. | |
| ಸೀಮೆಸುಣ್ಣ ಮತ್ತು ಡಸ್ಟರ್ | ಇದೆ | 8 |
| | ಇಲ್ಲ | 0 |
| | ಇತರ* | ಒಂದು ಶಾಲೆಯ 1 ತರಗತಿಯಲ್ಲಿ ಸೀಮೆಸುಣ್ಣ ಮತ್ತು ಡಸ್ಟರ್ ಇರಲಿಲ್ಲ. |
| ಸಾಕಷ್ಟು ಗಾಳಿಬೆಳಕು | ಇಲ್ಲ | 8 |
| | ಇಲ್ಲ | 0 |
| | ಇತರ* | ಒಂದು ಶಾಲೆಯ 1 ತರಗತಿಯಲ್ಲಿ |
| ಸಾಕಷ್ಟು ದೀಪಗಳು | ಇದೆ | 7 |
| | ಇಲ್ಲ | 1 |
| ಸೀಲಿಂಗ್ ಫ್ಯಾನ್(ಗಳು) | ಇದೆ | 3 |
| | ಇಲ್ಲ | 5 |
| ತ್ಯಾಜ್ಯ ಕಾಗದ ಬಿಸಾಡುವ ಬುಟ್ಟಿ | ಇದೆ | 5 |
| | ಇಲ್ಲ | 3 |
| | ಇತರ* | 1 (ಕೆಲವು ತರಗತಿಗಳಲ್ಲಿ ಇದ್ದರೆ ಕೆಲವಲ್ಲಿ ಇಲ್ಲ) |
| ನಕ್ಷೆಗಳು ಮತ್ತು TLM | ಇದೆ | 5 |
| | ಇಲ್ಲ | 3 |

ಸೂಚನೆ: ಕೆಲವು ತರಗತಿಗಳಲ್ಲಿ ಮಾತ್ರ ಈ ಸಲಕರಣೆಗಳ ಕೊರತೆ ಕಂಡುಬಂದಿತು

ಮೂಲ: ಸಿಬಿಪಿಎಸ್ ಸಂಗ್ರಹಿಸಿರುವ ಪ್ರಾಥಮಿಕ ದತ್ತಾಂಶ

### 1.3.2. ಮಾನವ ಸಂಪನ್ಮೂಲಗಳ ಗುಣಮಟ್ಟ

ಖಾಸಗಿ ಶಾಲೆಗಳಲ್ಲಿ ಮಾನವ ಸಂಪನ್ಮೂಲಗಳ ಗುಣಮಟ್ಟ ಪರೀಕ್ಷಿಸಲು RTE ಅಧಿನಿಯಮದ ಪ್ರಕಾರ ಬೋಧಕ-ವಿದ್ಯಾರ್ಥಿ ಅನುಪಾತ ಇದೆಯೋ ಇಲ್ಲವೋ (1:30 1-4 ತರಗತಿಗಳಿಗೆ, ಮತ್ತು 1:35 6-8 ತರಗತಿಗಳಿಗೆ), ಎಲ್ಲ ಶಿಕ್ಷಕರ ಶಿಕ್ಷಣ ಮತ್ತು ತರಬೇತಿ ಮಟ್ಟಗಳು, ಸಿಬ್ಬಂದಿ ವರ್ಗದಲ್ಲಿ ಲಿಂಗ ಸಮತೋಲನ, ಮತ್ತು ಅವರ ಸಮುದಾಯದ ಹಿನ್ನೆಲೆ (ಅವರ ಅಂತರ-ಪೀಳಿಗೆ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಹಕ್ಕನ್ನು ಪರೋಕ್ಷವಾಗಿ ಸೂಚಿಸುತ್ತದೆ, ಮತ್ತು 'ಯಾರು ಶಿಕ್ಷಕರಾಗುತ್ತಾರೆ ಮತ್ತು ಅವರು ಎಲ್ಲಿಂದ ಬಂದವರು?' ಎಂಬ ಪ್ರಶ್ನೆಗೆ ಉತ್ತರಿಸಲು ನೆರವಾಗುತ್ತದೆ).

1:30ಕ್ಕಿಂತ ಕಡಿಮೆ ಅಥವಾ ಸಮನಾದ ಶಿಕ್ಷಕ–ವಿದ್ಯಾರ್ಥಿ ಅನುಪಾತ (Teacher Pupil ratio - TPR) ನಾಲ್ಕು ಶಾಲೆಗಳಲ್ಲಿದ್ದರೆ ಅಷ್ಟೇ ಸಂಖ್ಯೆಯ 1:30ಕ್ಕಿಂತ ಹೆಚ್ಚಿನ ಶಿಕ್ಷಕ–ವಿದ್ಯಾರ್ಥಿ ಅನುಪಾತವಿರುವ ಶಾಲೆಗಳಿದ್ದವು. ಈ 8 ಶಾಲೆಗಳಲ್ಲಿ ನೋಡಿದಾಗ ಸಾಮಾನ್ಯವಾಗಿ ಶಿಕ್ಷಕರೆಂದರೆ ಹೆಣ್ಣುಮಕ್ಕಳೇ ಎಂಬುದಾಗಿ ಕಂಡುಬಂದಿತು. ಕೇವಲ 49 ಪುರುಷ ಶಿಕ್ಷಕರಿದ್ದರೆ 131 ಮಹಿಳಾ ಶಿಕ್ಷಕರಿದ್ದರು. ಯಾದೃಚ್ಛೀಕೃತವಾಗಿ ಶಿಕ್ಷಕರ ಹಿನ್ನೆಲೆಯನ್ನು ಪರಿಶೀಲಿಸಿದಾಗ ಬಹುತೇಕ ಶಿಕ್ಷಕರು ಇತರೆ ಹಿಂದುಳಿದ ವರ್ಗಕ್ಕೆ (45/67) ಸೇರಿರುವುದಾಗಿ ತಿಳಿಯಿತು. ಹಿಂದೂ, ಸಾಮಾನ್ಯ, ಪರಿಶಿಷ್ಟ ಜಾತಿ, ಕ್ರಿಶ್ಚಿಯನ್ ಮತ್ತು ಮುಸ್ಲಿಂ ಶಿಕ್ಷಕರ ಸಂಖ್ಯೆ ಬಹಳ ಕಡಿಮೆಯಿತ್ತು. ಶಿಕ್ಷಕರ ಶಿಕ್ಷಣದ ಮತ್ತು ತರಬೇತಿಯ ಮಟ್ಟವನ್ನು ನೋಡಿದಾಗ ಬಹುತೇಕ ಶಿಕ್ಷಕರು ಪಿಯುಸಿ ಮಾಡಿದ್ದರು, ನಂತರದ ಸ್ಥಾನ ಬಿಎ; ಬಹು ಸಾಮಾನ್ಯವಾದ ವೃತ್ತಿಪರ ತರಬೇತಿ ಎಂದರೆ ಬಿ.ಎಡ್. 67ರಲ್ಲಿ ಇಬ್ಬರು ಮಾತ್ರವೇ ಬಿಇ ಮತ್ತು ಎಂಸಿಎ ಮಾಡಿರುವುದಾಗಿ ತಿಳಿಯಿತು. ವಿವರಗಳಿಗಾಗಿ ಈ ಕೆಳಗಿನ ಕೋಷ್ಟಕ ನೋಡಿ.

**ಕೋಷ್ಟಕ 1.3–ಅ: ಆಯ್ದ 8 ಶಾಲೆಗಳಲ್ಲಿ ಅತ್ಯುನ್ನತ ಶಾಲಾಕಾಲೇಜು ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣ ಪಡೆದಿದ್ದ ಶಿಕ್ಷಕರು**

| ಅತ್ಯುನ್ನತ ಶಾಲಾಕಾಲೇಜು ಶಿಕ್ಷಣ | ವೃತ್ತಿಪರ ಶಿಕ್ಷಣ | | | | | | | ಒಟ್ಟು |
|---|---|---|---|---|---|---|---|---|
| | ವೃತ್ತಿಪರ ಶಿಕ್ಷಣ ಇಲ್ಲ | ರಾ.ಶಿ.ತ. | ಟಿ.ಸಿ.ಹೆಚ್ | ಡಿ.ಎಡ್ | ಬಿ.ಎಡ್ | ಬಿಪಿ.ಎಡ್ | ಇತರೆ | |
| ಎಸ್.ಎಸ್.ಎಲ್.ಸಿ | 0 | 0 | 1 | 0 | 0 | 0 | 0 | 1 |
| ಪಿ.ಯು.ಸಿ | 0 | 0 | 7 | 6 | 1 | 0 | 1 | 15 |
| ಬಿ.ಎ. | 4 | 0 | 1 | 1 | 9 | 0 | 1 | 16 |
| ಬಿ.ಕಾಂ. | 2 | 0 | 0 | 0 | 0 | 0 | 1 | 3 |
| ಬಿ.ಎಸ್‌ಸಿ | 3 | 1 | 0 | 1 | 5 | 0 | 1 | 11 |
| ಬಿ.ಇ | 0 | 1 | 0 | 0 | 0 | 0 | 0 | 1 |
| ಒಂ | 1 | 0 | 0 | 0 | 10 | 1 | 0 | 12 |
| ಎಂ.ಎ | 1 | 0 | 0 | 0 | 5 | 0 | 0 | 6 |
| ಎಂ.ಎಸ್‌ಸಿ | 0 | 0 | 1 | 0 | 0 | 0 | 0 | 1 |
| ಎಮ್.ಸಿ.ಎ | 0 | 0 | 0 | 0 | 0 | 0 | 1 | 1 |
| ಡಿ.ಸಿ.ಎ | 1 | 0 | 0 | 0 | 0 | 0 | 0 | 1 |
| ಒಟ್ಟು | 12 | 2 | 9 | 8 | 30 | 1 | 5 | 67 |

ಮೂಲ: ಸಿಬಿಪಿಎಸ್ ಸಂಗ್ರಹಿಸಿರುವ ಪ್ರಾಥಮಿಕ ದತ್ತಾಂಶ

ಈ ಕೆಳಗಿನ ಕೋಷ್ಟಕಸೂಚಿಸುವಂತೆ ಮಾಸಿಕ ಸಂಬಳಗಳು ಸುಮಾರು 5,000 ರೂಗಳಿಂದ 20,000 ರೂಗಳು ಮತ್ತು ಶಿಕ್ಷಕರ ಅರ್ಹತೆಯ ಮೇರೆಗೆ ವ್ಯತ್ಯಾಸಗಳಿದ್ದವು. ಬಹುಪಾಲು ಶಿಕ್ಷಕರು (ಸ್ಯಾಂಪಲ್‌ನ 67ಶೇ.) ಅರ್ಹತೆ ಇದ್ದಾಗ್ಯೂ 5,000 ರೂಗಳಿಂದ 20,000 ರೂಗಳು ಸಂಬಳ ಪಡೆಯುತ್ತಿದ್ದರು.

**ಕೋಷ್ಟಕ 1.4–ಅ: ಶಿಕ್ಷಕ ವರ್ಗದ ಶಿಕ್ಷಣ ಅರ್ಹತೆ ಮತ್ತು ಸಂಬಳ**

| ಶಾಲೆಯ ಹೆಸರು | | | ಶಿಕ್ಷಕ ವರ್ಗದ ಸಂಬಳ | | | | ಒಟ್ಟು |
|---|---|---|---|---|---|---|---|
| | | | 0–5000 | 5001–10000 | 10001–15000 | 15001–20000 | |
| ಒಟ್ಟು | ಅತ್ಯುನ್ನತ ಶಾಲಾಕಾಲೇಜು ಶಿಕ್ಷಣ ಅರ್ಹತೆ | ಎಸ್.ಎಸ್.ಎಲ್.ಸಿ | 0 | 0 | 1 | 0 | 1 |
| | | ಪಿ.ಯು.ಸಿ | 3 | 7 | 2 | 3 | 15 |
| | | ಬಿ.ಎ. | 1 | 14 | 1 | 0 | 16 |
| | | ಬಿ.ಕಾಂ. | 0 | 3 | 0 | 0 | 3 |
| | | ಬಿ.ಎಸ್‌ಸಿ | 0 | 7 | 4 | 0 | 11 |
| | | ಬಿ.ಇ | 0 | 1 | 0 | 0 | 1 |
| | | ಒಂ | 0 | 9 | 3 | 0 | 12 |
| | | ಎಂ.ಎ | 0 | 3 | 2 | 1 | 6 |
| | | ಎಂ.ಎಸ್‌ಸಿ | 0 | 1 | 0 | 0 | 1 |
| | | ಎಮ್.ಸಿ.ಎ | 1 | 0 | 0 | 0 | 1 |
| | ಒಟ್ಟು | | 5 | 45 | 13 | 4 | 67 |

ಮೂಲ: ಸಿಬಿಪಿಎಸ್ ಸಂಗ್ರಹಿಸಿರುವ ಪ್ರಾಥಮಿಕ ದತ್ತಾಂಶ

## 1.3.3 ಸಮಾನತೆಯ ಆಯಾಮ

ಖಾಸಗಿ ಶಾಲೆಗಳ ಗುಣಮಟ್ಟವನ್ನು ಪರೀಕ್ಷಿಸುವಾಗ ಸಮಾನತೆಯ ಆಯಾಮವನ್ನು ಒಂದು ಪರಿಮಿತಿಯನ್ನಾಗಿ ಪರೀಕ್ಷಿಸಲಾಯಿತು – ಶುಲ್ಕದ ರಚನೆ, ವಿದ್ಯಾರ್ಥಿಗಳಲ್ಲಿ ಲಿಂಗ–ತಾರತಮ್ಯ, ಸಮುದಾಯಗಳ ಪ್ರಮಾಣಾನುಬದ್ಧ ಪ್ರಾತಿನಿಧ್ಯ (ತಾಲೂಕಿನ ಜನಸಂಖ್ಯೆಯನ್ನು ಪ್ರತಿಫಲಿಸುತ್ತದೆ ಎಂದು ಆಡಳಿತ ಗ್ರಹಿಸಿದ ಮಟ್ಟಿಗೆ), ಆರ್‌ಟಿಇ ಖಂಡ 12 (1) (ಸಿ) ಪಾಲನೆ, ಮತ್ತು ದೈನಂದಿನ ಕಲಿಕೆಯಲ್ಲಿ ವಿದ್ಯಾರ್ಥಿಗಳಲ್ಲಿ ತಾರತಮ್ಯ ಕಂಡು ಬರದಿರುವುದು.

ಭೇಟಿ ಇತ್ತ ಈ 8 ಶಾಲೆಗಳಲ್ಲಿ ವಾರ್ಷಿಕ ಶುಲ್ಕ 5,000 ರೂಗಳಿಂದ 10,000 ರೂಗಳವರೆಗಿಗೆ ಇತ್ತು. 3 ಶಾಲೆಗಳಲ್ಲಿ 7,000 ರೂ. – 9,000 ರೂ.ಗಳಿದ್ದರೆ ಮತ್ತೆ 3 ಶಾಲೆಗಳಲ್ಲಿ ಅದಕ್ಕೂ ಹೆಚ್ಚಿತ್ತು. 8ರಲ್ಲಿ 7 ಶಾಲೆಗಳಲ್ಲಿ ಹುಡುಗರ ಸಂಖ್ಯೆ ಹೆಚ್ಚಿತ್ತು. ಕೆಲವೆಡೆ ಈ ಅಂತರ ಹುಡುಗರು 64ಶೇ. ಹುಡುಗಿಯರು 36ಶೇ. ಇದ್ದರೆ ಕೆಲವೆಡೆ ಇದು ಹೆಚ್ಚುಕಡಿಮೆ 50ಶೇ. – 50ಶೇ. ಇತ್ತು (ಹುಡುಗಿಯರು ಸ್ವಲ್ಪ ಕಡಿಮೆ). ಈ ಕೆಳಗಿನ ಕೋಷ್ಟಕನೋಂದಾಯಿತ ವಿದ್ಯಾರ್ಥಿಗಳಲ್ಲಿ ಹೆಣ್ಣು–ಗಂಡು ಅಂತರವನ್ನು ತೋರುತ್ತದೆ.

**ಕೋಷ್ಟಕ 1.5–ಅ: ದಾಖಲಿಸಿಕೊಂಡವರಲ್ಲಿ ಲಿಂಗ–ಅಂತರ**

| ಶಾಲೆಯ ಕ್ರಮ ಸಂಖ್ಯೆ | ಸಂಖ್ಯೆ–ಗಂಡು–ಹೆಣ್ಣು ವಿದ್ಯಾರ್ಥಿಗಳು | | ಒಟ್ಟು |
|---|---|---|---|
| | ಗಂಡು | ಹೆಣ್ಣು | |
| 1 | 387 | 221 | 608 |
| 2 | 562 | 516 | 1078 |
| 3 | 139 | 114 | 253 |
| 4 | 58 | 40 | 98 |
| 5 | 131 | 84 | 215 |
| 6 | 173 | 136 | 309 |
| 7 | 487 | 520 | 1007 |
| 8 | 90 | 89 | 179 |

ಮೂಲ: ಸಿಬಿಪಿಎಸ್ ಸಂಗ್ರಹಿಸಿರುವ ಪ್ರಾಥಮಿಕ ದತ್ತಾಂಶ

ಶಾಲೆಗಳಲ್ಲಿ ಆಡಳಿತವರ್ಗದ ಪ್ರತಿನಿಧಿಗಳ ಅಭಿಪ್ರಾಯದಂತೆ ಅವರ ಶಾಲೆಗಳ ವಿದ್ಯಾರ್ಥಿಗಳು ತಾಲೂಕಿನ ಜನಗಳನ್ನು ಪ್ರತಿನಿಧಿಸುತ್ತಾರೆ (ಜಾತಿ, ಸಮುದಾಯ ಮತ್ತು ವೃತ್ತಿಗಳು). ಇಬ್ಬರ ಅಭಿಪ್ರಾಯದಂತೆ ಅವರ ಶಾಲೆ ಮಧ್ಯಮ ವರ್ಗ/ಬಡ ಜನರನ್ನು ಹೆಚ್ಚು ಆಕರ್ಷಿಸುತ್ತದೆ, ಕಾರಣ ಅದರ ಶುಲ್ಕ ರಚನೆ. 2013-14ಕ್ಕೆ ಎಲ್ಲ ಶಾಲೆಗಳೂ ಆರ್‌ಟಿಇ ಅನುಸರಿಸಿದ್ದವಾದರೂ 1 ಶಾಲೆ 2012-13ರಲ್ಲಿ ಈ ಕಾನೂನಿನಂತೆ ನೀಡಿರಲಿಲ್ಲ. 3 ಶಾಲೆಗಳಲ್ಲಿ 25ಶೇ. ಗಿಂತ ಕಡಿಮೆ ಸೀಟುಗಳನ್ನು (15-20ಶೇ.) ಭರ್ತಿಮಾಡಿದ್ದವು, ಮತ್ತು 1 ಶಾಲೆ ಸ್ವಲ್ಪ ಹೆಚ್ಚಿಗೆ (28ಶೇ.).

ಏಳು ಶಾಲೆಗಳು 'ಮೊದಲು ಬಂದವರಿಗೆ ಆದ್ಯತೆ' ಪ್ರಕಾರ ಪ್ರವೇಶಾತಿಗಳನ್ನು ಮಾಡಿದ್ದವು. ಒಂದು ಶಾಲೆಯಲ್ಲಿ 50 ವಿದ್ಯಾರ್ಥಿಗಳು ಇದ್ದದ್ದು ಬಿಟ್ಟರೆ ಯಾವುದೇ ತರಗತಿಗಳಲ್ಲಿ 40ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರಲಿಲ್ಲ. ಕಳೆದ ವರ್ಷ ಆರಂಭವಾದ ಒಂದು ಶಾಲೆಯ ಉನ್ನತ ಪ್ರಾಥಮಿಕ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಒಂದಂಕಿಗಳಲ್ಲಿದ್ದವು. 3 ಶಾಲೆಗಳು 8, 9 ತರಗತಿಗಳಿಗೆ ಪ್ರವೇಶ ಪರೀಕ್ಷೆಯನ್ನೂ ನಡೆಸಿದ್ದಾಗಿ ಹೇಳಿದವು. ಸಾಮಾನ್ಯವಾಗಿ 10ನೇ ತರಗತಿಗೆ ಹೊಸ ಪ್ರವೇಶ ಗಳಿಗೆ ಅವಕಾಶವಿರಲಿಲ್ಲ. ಬಹುಪಾಲು ಮಕ್ಕಳು ಸ್ವಚ್ಛವಾದ ಐರನ್ ಮಾಡಿದ ಸಮವಸ್ತ್ರಗಳಲ್ಲಿದ್ದವು. ಒಂದು ಶಾಲೆಯಲ್ಲಿ ಕೆಲವು ಮಕ್ಕಳು ಬರಿಗಾಲಲ್ಲಿ ಅಥವಾ ಚಪ್ಪಲಿಗಳಲ್ಲಿದ್ದವು (ಶೂ ಮತ್ತು ಕಾಲುಚೀಲ ಇರಲಿಲ್ಲ) ಮತ್ತು ಕೆಲವು ಮಕ್ಕಳು ಸಮವಸ್ತ್ರ ತೊಳೆದು ಐರನ್ ಆಗಿರಲಿಲ್ಲವೆಂದು ಮಾಮೂಲಿ ಉಡುಪು ಧರಿಸಿದ್ದವು. ಎಲ್ಲ ಮಕ್ಕಳಿಗೂ ಶಾಲೆಯ ಆವರಣದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಗಳು (ಇದ್ದಲ್ಲಿ) ಮತ್ತು ತರಗತಿಗಳಲ್ಲಿ ಆಸನ ವ್ಯವಸ್ಥೆಗಳು ಒಂದೇ ಬಗೆಯಲ್ಲಿದ್ದವು. ಸಂದರ್ಶಿಸಿದ ಯಾವುದೇ ಶಾಲೆಯಲ್ಲೂ ಮಕ್ಕಳಿಗೆ ಮಧ್ಯಾಹ್ನ ಭೋಜನದ ವ್ಯವಸ್ಥೆ ಇರಲಿಲ್ಲ.

## 1.3.4. ಬೋಧನೆಯ ಗುಣಮಟ್ಟ/ಕಲಿಕೆಯ ಪ್ರಕ್ರಿಯೆ

ಒಂದು ಶಾಲೆಯ ಗುಣಮಟ್ಟ ನಿಂತಿರುವುದೇ ಅದರ ಬೋಧನೆಯ/ಕಲಿಕೆಯ ಪ್ರಕ್ರಿಯೆಗಳ ಮೇಲೆ. ಇದನ್ನು ಪರೀಕ್ಷಿಸಲು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಿಯಮಿತ ಹಾಜರಾತಿ (ಹಜಾರಾತಿ ಪುಸ್ತಕಗಳು), TLMಗಳ ಬಳಕೆ, ಶಾಲಾ ಕೆಲಸಗಳ ಕರಾರುವಾಕ್ಕುತನ ಮತ್ತು ಪರಿಪೂರ್ಣತೆ, ಉಸ್ತುವಾರಿ ಮತ್ತು ಹಿಮ್ಮುಖ ವರದಿ, ಮೌಲ್ಯಮಾಪನಗಳ ಸ್ವರೂಪ ಮತ್ತು ವಿನ್ಯಾಸ, ತರಗತಿಗಳಲ್ಲಿನ ಅಂತರಕ್ರಿಯೆಗಳು, ಪೋಷಕರು ಭಾಗಿಯಾಗುವ ಮತ್ತು ನೆರವು ನೀಡುವರೆಂಬ ನಿರೀಕ್ಷೆಗಳು, ಹೋಂವರ್ಕ್ ಮಾರ್ಗದರ್ಶಕಗಳು, ಮತ್ತು ಆಟ ಮತ್ತು ಇತರ ಪಠ್ಯೇತರ ಚಟುವಟಿಕೆಗಳಿಗೆ ನೀಡುವ ಕಾಲಾವಕಾಶ, ಇತ್ಯಾದಿಗಳನ್ನು ಗಮನಿಸಲಾಯಿತು.

ಎಲ್ಲ ಶಾಲೆಗಳಲ್ಲೂ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಹಾಜರಾತಿ ಪುಸ್ತಕಗಳು ನವೀಕರಿಸಲ್ಪಟ್ಟಿದ್ದವು. ಸಾಲಾಗಿ 5ಕ್ಕಿಂತ ಹೆಚ್ಚು ದಿನಗಳು ಗೈರಾಗಿದ್ದರೆ 'ಅತಿಯಾದ ಗೈರು' ಎಂದು ಪರಿಗಣಿಸಲಾಗುತ್ತಿತ್ತು. ಈ ತರಹದ ವಿದ್ಯಾರ್ಥಿಗಳ ಸಂಖ್ಯೆ ಯಾವುದೇ ಶಾಲೆಯಲ್ಲೂ 5ಕ್ಕಿಂತ ಹೆಚ್ಚಿರಲಿಲ್ಲ. ತಡ ಪ್ರವೇಶಾತಿ (ಶಾಲಾ ವರ್ಷದ ಆರಂಭದಲ್ಲಿ), ಗಂಭೀರವಾದ ಕಾಯಿಲೆ (ಉದಾ: ಡೆಂಘೀ) ಅಥವಾ ಮನೆಯಲ್ಲಿ ಜನನ/ಸಾವು, ಇತ್ಯಾದಿಗಳು ವಿಶೇಷವಾಗಿ ಚಿಕ್ಕ ಮಕ್ಕಳು ಶಾಲೆಗೆ ಗೈರಾಗುವಂತೆ ಮಾಡಿದ್ದವು. ಗೈರಾದ ಪ್ರತಿ ವಿದ್ಯಾರ್ಥಿಯ ವಿಷಯವೂ ಪ್ರಿನ್ಸಿಪಾಲ್‌ಗೆ ತಿಳಿದಿತ್ತು ಮತ್ತು ಬಹುತೇಕ ಶಾಲೆಗಳಲ್ಲಿ ದೀರ್ಘ ಕಾಲ ಗೈರಿಗೆ ಉಚಿತ ಮನವಿ ನೀಡಬೇಕಾದ್ದು ಕಡ್ಡಾಯವಾಗಿತ್ತು.

ಆರು ಶಾಲೆಗಳಲ್ಲಿ ಮತ್ತು ಒಂದು ಶಾಲೆಯ ಕೆಲವು ತರಗತಿಗಳಲ್ಲಿ ವಿದ್ಯಾರ್ಥಿಗಳು ಮಾಡಿದ್ದನ್ನು ಶಿಕ್ಷಕರು ಪರೀಕ್ಷಿಸುವ ಪರಿಪಾಠವಿದ್ದದ್ದರ ಸಾಕ್ಷಿಗಳಿದ್ದವು. ಒಂದು ಶಾಲೆಯನ್ನು ಹೊರತುಪಡಿಸಿ (ಇಲ್ಲಿ ಓದುವುದು ಮತ್ತು ಗ್ರಹಿಕೆಯನ್ನು ಮೌಖಿಕವಾಗಿ ಪರೀಕ್ಷಿಸಲಾಗುತ್ತಿತ್ತು) ಉಳಿದ ಎಲ್ಲ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ಕಾಗದ-ಪೆನ್ಸಿಲ್ ಪರೀಕ್ಷೆಗಳೇ ಬಳಕೆಯಾಗುತ್ತಿದ್ದವು. ಕೆಲವು ಶಾಲೆಗಳಲ್ಲಿ ಈ ಪರೀಕ್ಷೆಗಳನ್ನು 'Continuous Comprehensive Evaluation (CCE)' ಎಂದು ಕರೆಯುತ್ತಿದ್ದರು. ಇದರಲ್ಲಿ 2 ಸುತ್ತಿನ 'ಸಿದ್ಧತೆ' ಪರೀಕ್ಷೆಗಳು ಮತ್ತು ಒಂದು 'ಅಂತಿಮ' ಪರೀಕ್ಷೆ ಇರುತ್ತದೆ (ಅಂದರೆ ಒಟ್ಟು 3 ಪರೀಕ್ಷೆಗಳು, ಒಂದೊಂದು ಅವಧಿಗೆ ಒಂದೊಂದು). ಆದರೆ ಎಲ್ಲ ಪರೀಕ್ಷೆಗಳ ಪತ್ರಿಕೆಗಳೂ ಹೆಚ್ಚು ಕಡಿಮೆ ಒಂದೇ ರೀತಿ ಇದ್ದವು. ಇವು ಹೇಗೆ ಸಿದ್ಧತೆ ಪರೀಕ್ಷೆಗಳೆಂದು ಅರ್ಹತೆ ಪಡೆಯುತ್ತವೆ ಎಂಬುದು ತಿಳಿಯುವುದಿಲ್ಲ (ಅಂತಿಮ ಪರೀಕ್ಷೆಯಿಂದ ಇವು ಭಿನ್ನವಾಗಿರಲಿಲ್ಲ). ಇದಕ್ಕೆ ಯಾವುದೇ ಪ್ರಿನ್ಸಿಪಾಲ್ ಉತ್ತರ ನೀಡಲು ಸಾಧ್ಯವಾಗಲಿಲ್ಲ. ಇದು ಸಿಬಿಎಸ್‌ಇ ನಿಯಮಾವಳಿಗಳ ಪ್ರಕಾರ ಇದೆ ಎಂದಷ್ಟೇ ಉತ್ತರಿಸಿದರು. ಬಹುಪಾಲು ಸಂದರ್ಭಗಳಲ್ಲಿ (6 ಶಾಲೆಗಳು) ಪ್ರಶ್ನಪತ್ರಿಕೆಗಳ ವಿಷಯವಸ್ತು ಪಠ್ಯಪುಸ್ತಕದ ವಿಷಯಗಳ ಧಾರಣೆಯನ್ನಷ್ಟೇ ಪರೀಕ್ಷಿಸುತ್ತಿದ್ದವು. 2 ಶಾಲೆಗಳಲ್ಲಿ ಮಾತ್ರ ಪಠ್ಯದಲ್ಲಿರುವ ವಿಷಯದ ಜ್ಞಾನವನ್ನು ಮತ್ತು ಕೌಶಲಗಳನ್ನು ಪಡೆಯುವ ಮತ್ತು ಅದನ್ನು ಬಳಸಿಕೊಳ್ಳುವುದರ ಬಗ್ಗೆ ಪರೀಕ್ಷಿಸುವ ಸ್ವಲ್ಪ ಪ್ರಯತ್ನ ನಡೆದಿತ್ತು. ಉದಾ: ಮೊದಲು ನೋಡಿರದ ಒಂದು ಭಾಗವನ್ನು ಕೊಟ್ಟು ಅದನ್ನು ಗ್ರಹಿಸುವ ಶಕ್ತಿಯ ಪರೀಕ್ಷೆಯನ್ನು ಇಂಗ್ಲಿಷಿನಲ್ಲಿದ್ದ ಪ್ರಶ್ನೆಗಳ ಮೂಲಕ ಮಾಡಲಾಗಿತ್ತು ಅಥವಾ ಪಠ್ಯದಲ್ಲಿರುವುದಕ್ಕಿಂತ ಸ್ವಲ್ಪ ಭಿನ್ನವಾದ ಲೆಕ್ಕಗಳನ್ನು ಕೊಡಲಾಗಿತ್ತು. ಬಹುಪಾಲು ಶಾಲೆಗಳಲ್ಲಿ (5) ಪಿಟಿ ಅವಧಿ ಕೇವಲ ಆಟಕ್ಕೆ ಸೀಮಿತವಾಗಿತ್ತು. ಕೆಲವು ಶಾಲೆಗಳಲ್ಲಿ ಪಿಟಿ ಸಮಯ ಮತ್ತು ಊಟದ ಸಮಯಗಳನ್ನು ಆಟದ ಸಮಯ ಎಂದು ಸೂಚಿಸಲಾಗಿತ್ತು. 7 ಶಾಲೆಗಳಲ್ಲಿ ಕಾರ್ಪೊರಲ್ ಶಿಕ್ಷೆಯ ನೀತಿ (ಇದಕ್ಕೆ ಅವಕಾಶವಿಲ್ಲ) ಇದೆಯೆಂದು ವರದಿಯಾಯಿತು. ಎಲ್ಲ 8 ಶಾಲೆಗಳು ಹೋಂವರ್ಕ್ ಸಂಖ್ಯೆಯನ್ನು ಸೀಮಿತಗೊಳಿಸಿದ್ದೇವೆ ಎಂದು ತಿಳಿಸಿದವು. ಕೆಲಸದಲ್ಲಿರುವ ಸವಾಲುಗಳ ಬಗ್ಗೆ ಕೇಳಿದಾಗ ಯಾದೃಚ್ಛೀಕೃತವಾಗಿ ಸಂದರ್ಶಿಸಿದ 10 ಶಿಕ್ಷಕರು (ಸ್ಯಾಂಪಲ್‌ನ 15ಶೇ.) 'ತಂದೆತಾಯಿ ಮಕ್ಕಳ ಓದಿಗೆ ಸಾಕಷ್ಟು ಗಮನ ಕೊಡುವುದಿಲ್ಲ', 'ಪೋಷಕರು ಮಕ್ಕಳ ಹೋಂವರ್ಕ್ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ', "ಪೋಷಕರು ಹಳ್ಳಿಯಲ್ಲಿರುತ್ತಾರೆ, ಅವಿದ್ಯಾವಂತರು', ಇತ್ಯಾದಿ ಉತ್ತರಗಳನ್ನು ನೀಡಿದರು. ಇದು ಮಗುವಿಗೆ ಶಿಕ್ಷಣ ಸಿಗಬೇಕಾದರೆ 'ಆದರ್ಶ ಮನೆಯ' ಅಗತ್ಯ ಎಂಬ ನಗರವಾಸಿ ಮಧ್ಯಮ ವರ್ಗದ ಜನರ ಮನಃಸ್ಥಿತಿಯನ್ನು ತೋರಿಸುತ್ತದೆ. ಇನ್ನು ಕೆಲವರು 'ದುರ್ಬಲ ವಿದ್ಯಾರ್ಥಿಗಳು ಅದರಲ್ಲೂ ಮೊದಲ ಪೀಳಿಗೆಯ ಕಲಿಯುವವರು ಇದ್ದಾರೆ'', 'ಕೆಲವು ಮಕ್ಕಳಿಗೆ ಕಂಪ್ಯೂಟರ್ಸ್ ಪರಿಚಯವೇ ಇಲ್ಲ', ಎಂದೆಲ್ಲ ಕಾರಣಗಳನ್ನು ನೀಡಿದರು.

ಶಾಲೆಗಳಲ್ಲಿ ಒಟ್ಟು 34 ತರಗತಿಗಳನ್ನು ಗಮನಿಸಿದಾಗ ಬಹುತೇಕ ತರಗತಿಗಳಲ್ಲಿ ಶಿಕ್ಷಕರು:ವಿದ್ಯಾರ್ಥಿ ಮಾತನಾಡುವ ಅತಿ ಹೆಚ್ಚಿನ ಅನುಪಾತ 70:30 (15) ಇತ್ತು, ನಂತರ 90:10 (9) ಮತ್ತು 50:50 (8). ಶಿಕ್ಷಕರ ಬಹುಪಾಲು ಮಾತಿನ ಸಮಯ ಪಠ್ಯಪುಸ್ತಕದಲ್ಲಿನ ವಿಷಯವನ್ನು ಸೀಮೆಸುಣ್ಣ-ಮಾತುಗಳ ಮೂಲಕ ವಿವರಿಸುವುದರಲ್ಲೇ ಕಳೆಯುತ್ತದೆ. ಗೊತ್ತಿಲ್ಲದ ವಿಷಯವನ್ನು ಪರಿಚಯಿಸಲು ಏಕಮುಖ ಸೂಚನೆ-ವಿವರಣೆಗಳು ಉಪಯುಕ್ತವಾದರೂ ಸುಮ್ಮನೆ ಕೇಳುವ ಬದಲು ವಿದ್ಯಾರ್ಥಿಗಳು ಭಾಗವಹಿಸುವಂತಾದರೆ ಹೆಚ್ಚು ಮಹತ್ವವಿರುತ್ತದೆ. ಬಹಳ ಸಂದರ್ಭಗಳಲ್ಲಿ 70:30 ಅನುಪಾತದ ಸಮಯದಲ್ಲಿ ಶಿಕ್ಷಕರು ತಾವೇ ಪ್ರಶ್ನಿಸಿ ಮಾಹಿತಿಗಳನ್ನು ಹೊರತೆಗೆಯುತ್ತಿದ್ದರೇ ಹೊರತು ಪ್ರಶ್ನೆಗಳು ವಿದ್ಯಾರ್ಥಿಗಳಿಂದ ಬರುತ್ತಿರಲಿಲ್ಲ ಅಥವಾ ಉನ್ನತ ಮಟ್ಟದ ಆಲೋಚನೆಗೆ ಪ್ರೋತ್ಸಾಹ ನೀಡುತ್ತಿರಲಿಲ್ಲ. ಇದಕ್ಕೆ ಪ್ರತಿಯಾದ ಒಂದೇ ಉದಾಹರಣೆಯೆಂದರೆ 5ನೇ ತರಗತಿಯ EVS ಪಾಠ ಮಾಡುತ್ತಿದ್ದಾಗ ಒಬ್ಬ ಶಿಕ್ಷಕರು ಸಸ್ಯಾಹಾರಿ, ಮಾಂಸಾಹಾರಿ, ಸರ್ವಭಕ್ಷಕ, ಸ್ವಂತ-ಆಹಾರ ಉತ್ಪಾದಿಸಿಕೊಳ್ಳುವ ಮತ್ತು ಪರಾವಲಂಬಿಗಳ ಬಗ್ಗೆ ನಿಮಗೇನು ತಿಳಿದಿದೆ ಎಂದು ಪ್ರಶ್ನಿಸಿದರು. ಅದರ ಜೊತೆಗೆ ಸಸ್ಯಗಳು ನಿಜಕ್ಕೂ ಪರಾವಲಂಬಿಗಳೇ,

ಏಕೆಂದರೆ ಅವು ದ್ಯುತಿಸಂಶ್ಲೇಷಣಕ್ಕಾಗಿ ಅಗತ್ಯವಾದ ಇಂಗಾಲಾಮ್ಲವನ್ನು ಪ್ರಾಣಿಗಳಿಂದ ಪಡೆಯುತ್ತವಲ್ಲ ಎಂದೂ ಕೇಳಿದರು. ನೇರ ವಿವರಣೆಯ ಜೊತೆಗೆ ನಿಜ-ಜೀವನದ ಉದಾಹರಣೆಗಳನ್ನೂ ಸೇರಿಸಿ ಮೌಲ್ಯವರ್ಧಿಸುವುದೂ ನಡೆಯುತ್ತಿದೆ. ಒಂದು 2ನೇ ತರಗತಿ ವಿಜ್ಞಾನ ಪಾಠ 'ನನ್ನ ಶರೀರ' ಪಾಠಮಾಡುವಾಗ ಶಿಕ್ಷಕರು ಕಣ್ಣಿಗೆ ಕಾಣುವ ಅಂಗಗಳ ಮತ್ತು ಕಾಣದ ಅಂಗಗಳ ನಡುವಿನ ವ್ಯತ್ಯಾಸವನ್ನು ಕೇಳಿದರು. ಕಾಣುವ ಅಂಗಗಳಿಗೆ ಆಕೆ ಸಮಾನಂತರ ಉದಾಹರಣೆಗಳನ್ನು ಕೊಟ್ಟರು; ಮಿದುಳು-ಕಂಪ್ಯೂಟರ್, ಹೊಟ್ಟೆ-ಮಿಕ್ಸಿ, ಹೃದಯ-ಪಂಪ್, ಇತ್ಯಾದಿ. ವಿದ್ಯಾರ್ಥಿಗಳಿಗೆ ಮಾತನಾಡಲು ಹೆಚ್ಚು ಸಮಯ ಸಿಕ್ಕಿತೆಂದರೆ ಬೋಧನೆ-ಕಲಿಕೆ ಉತ್ತಮ ಎಂದೇನಲ್ಲ (ಬಹು ಸಂದರ್ಭಗಳಲ್ಲಿ ಇದು ನಿಜ). ಮತ್ತೊಂದು ಉದಾಹರಣೆ ಎಂದರೆ 4ನೇ ತರಗತಿಯಲ್ಲಿ 'ಲಾಂಗ್ ಡಿವಿಷನ್' ಬಗ್ಗೆ ಗಣಿತದ ಪಾಠ. ಶಿಕ್ಷಕಿ ಹಲಗೆಯ ಮೇಲೆ ಒಂದು ಭಾಜಕ ಮತ್ತು ಭಾಜ್ಯ ಬರೆದರು. ಭಾಜಕದ ಮಗ್ಗಿ ಹೇಳಲು ಹೇಳಿದರು. ಉದಾ: 7*1. ಒಬ್ಬ ವಿದ್ಯಾರ್ಥಿ 7*3=27 ಎಂದು ತಪ್ಪು ಹೇಳಿದ. "ಹಾಂ? ನೀನು" ಎಂದು ಇನ್ನೊಬ್ಬ ಹುಡುಗನನ್ನು ಕೇಳಿದಾಗ ಅವನೂ ತಪ್ಪು ಹೇಳಿದ. ಶಿಕ್ಷಕಿ 'ಮಗ್ಗಿ ಬರಲ್ವಾ?' ಎಂದು ಗದರಿಸಿದರು. ಆದರೆ ಗುಣಿಸುವುದು ಎಂದರೆ ಕೂಡುವುದರ ಸರಳ ಕ್ರಮ ಎಂದು ಅವರು ಹೇಳಲೇ ಇಲ್ಲ. ಮಕ್ಕಳ ಕಷ್ಟ ದೂರಮಾಡಲು ಈ ರೀತಿಯಲ್ಲಿ ತಿಳಿಹೇಳಬೇಕಾಗುತ್ತದೆ. 90:10 ಸನ್ನಿವೇಶಗಳಲ್ಲಿ ಸ್ಮಾರ್ಟ್ ಬೋರ್ಡುಗಳ ಬಳಕೆಯಾಗುತ್ತಿತ್ತು. ಇಲ್ಲಿ ದೃಶ್ಯ-ಶ್ರವಣ ಸ್ಫುರಣೆಗಳು ಶಿಕ್ಷಕರ ಕೆಲಸ ಮಾಡುತ್ತಿದ್ದವು. ಜೊತೆಗೆ ವಿಷಯದ ಮೇಲೆ ಶಿಕ್ಷಕರ ಪ್ರಭಾವವೂ ಕಡಿಮೆಯಾಗುತ್ತಿತ್ತು. 6ನೇ ತರಗತಿಯಲ್ಲಿನ ಚರಿತ್ರೆ ಪಾಠ, ವೇದಗಳ ಕಾಲದ ಬಗ್ಗೆ ಪಾಠ, ಶಿಕ್ಷಕಿ ಆಗಿನ ಕಾಲದ ಕುಟುಂಬದ ವ್ಯವಸ್ಥೆಯ ರೇಖಾಚಿತ್ರ ಬಿಡಿಸಿ ವಿವರಿಸುತ್ತಿದ್ದರು. ತಂದೆ ಕುಟುಂಬದ ಮುಖ್ಯಸ್ಥ ಇತ್ಯಾದಿ. ಇದಕ್ಕೆ ಆಕೆ ತಮ್ಮದೇ (ಸಾಂಪ್ರದಾಯಿಕ/ಮಾಮೂಲಿ/ಸರಳವಾದ) ಉದಾಹರಣೆ ಸೇರಿಸಿದರು. ಶಿಕ್ಷಕಿ: ನಿಮ್ಮ ಮನೆಯಲ್ಲಿ ನಿರ್ಣಯಗಳನ್ನು ಕೈಗೊಳ್ಳುವವರು ಯಾರು? ಶಿಸ್ತು, ಕರ್ತವ್ಯ, ಎಲ್ಲರ ಒಳಿತನ್ನು ನೋಡಿಕೊಳ್ಳುವವರು ಯಾರು? ಹೌದು, ತಂದೆ. ಆದರೆ ಕೇರಳದಲ್ಲಿ? ತಾಯಿ.

ಶಿಕ್ಷಕರು ತರಗತಿಗಳಲ್ಲಿ ಮಾಡುವ ತಪ್ಪುಗಳು (ವಾಸ್ತವಾಂಶಗಳ ಮತ್ತು ಭಾಷೆಯ) ಶಿಕ್ಷಣದ ಗುಣಮಟ್ಟವನ್ನು ಮತ್ತಷ್ಟು ಕೆಳಗಿಳಿಸುತ್ತವೆ. ಉದಾ: ಮೇಲಿನ ಶಿಕ್ಷಕಿ ಕೇರಳದ ಮಾತೃಸಂಬಂಧದ ಕುಟುಂಬಗಳನ್ನು ಮಾತೃಪ್ರಾಧಾನ್ಯ ಕುಟುಂಬಗಳೆಂದು ತಪ್ಪು ತಿಳಿದಿದ್ದಾರೆ. ಆಕೆ ploughing ಪದವನ್ನು fluffing ಎಂದು ಉಚ್ಚರಿಸಿದರು; Portuguese ಅನ್ನು Portugal people ಎಂದರು; ಮಾನವ ಮೊದಲು ಬಳಸಿದ ಪ್ರಾಣಿ ಕುದುರೆ ಎಂದರು (ವಾಸ್ತವವಾಗಿ ನಾಯಿ). ಮತ್ತೊಂದು ಶಾಲೆಯಲ್ಲಿ 1ನೇ ತರಗತಿಗೆ ಇಂಗ್ಲಿಷ್ ಪಾಠ ಮಾಡುತ್ತಿದ್ದ ಶಿಕ್ಷಕಿ ಹಲಗೆಯ ಮೇಲೆ ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳಿಂದ ವಾಕ್ಯಗಳನ್ನು ಬರೆಯುತ್ತಿದ್ದರು. ವಿದ್ಯಾರ್ಥಿಗಳು ಬರೆದುಕೊಂಡು ಕಂಠಪಾಠ ಮಾಡಬೇಕಿತ್ತು. ಆಕೆಯ ಸೂಚನೆಗಳಲ್ಲಿ ಕೆಲವು ಹೀಗಿದ್ದವು: "Sharp the pencil", "Give the scale for him." 8ನೇ ತರಗತಿ ಶಿಕ್ಷಕಿ 'Energy and momentum' ವಿಷಯವನ್ನು ರಿವೈಸ್ ಮಾಡುತ್ತಿದ್ದರು. ಅವರು "Are you understood that one?", "Won't you confuse?" ಎಂದು ಹೇಳಿದರು. NCF 2005 ಸ್ಪಷ್ಟವಾಗಿ ಹೇಳುವಂತೆ ಇಂಗ್ಲಿಷನ್ನು ದ್ವಿತೀಯ ಭಾಷೆಯಾಗಿ ಕಲಿಯುವಾಗ ಮಕ್ಕಳಿಗೆ ಶಾಲಾ ಇಂಗ್ಲಿಷ್ ತರಗತಿಯಲ್ಲದೆ, ಬೇರೆ ಬೇರೆ ಸನ್ನಿವೇಶಗಳಲ್ಲಿಯೂ ಇಂಗ್ಲಿಷಿನ ಸರಿಯಾದ ಬಳಕೆಯ ಬಗ್ಗೆ ಕೇಳುವ ಅವಕಾಶವಿರಬೇಕು. ಈ ಬಗ್ಗೆ ನಾವು ಸಂದರ್ಶಿಸಿದ ಶಾಲೆಗಳಲ್ಲಿ ಕಂಡಿದ್ದು ಅಪರೂಪ. ಇದು ಮೌಲ್ಯಮಾಪನ ಸಾಧನಗಳಲ್ಲೂ ಪ್ರತಿಬಿಂಬಿತವಾಗಿದೆ. 1ನೇ ತರಗತಿ ಇಂಗ್ಲಿಷ್ ಶಿಕ್ಷಕರ ಮಾದರಿ ಉತ್ತರ (ಸ್ವರ ಚಿಹ್ನೆಗಳೂ ಸೇರಿದಂತೆ) ಈ ಕೆಳಗಿನಂತಿತ್ತು:

*Q. At what time did* **rahul***wake up?*

*Ans. Rahul* **wake up** *at 8 o'clock in the morning.*

*Q. How does* **neeta** *go to school?*

*Ans. Neeta* **walk to** *school with her friend*

ಮತ್ತೊಂದೆಡೆ 4ನೇ ತರಗತಿಯ ಇಂಗ್ಲಿಷ್ ಶಿಕ್ಷಕರೊಬ್ಬರು ಹಲಗೆಯ ಮೇಲೆ consonents (consonants) ಎಂದು ಬರೆದರು ಮತ್ತೊಬ್ಬ ಬಯಾಲಜಿ ಶಿಕ್ಷಕರು ಪುನಃ ಪುನಃ gens (genes) ಎಂದು ಬರೆದರು. 8 ಶಾಲೆಗಳಲ್ಲಿ 6 ಶಾಲೆಗಳು ಇಂಗ್ಲಿಷ್ ಮತ್ತು ಕನ್ನಡ ಎರಡನ್ನೂ ಬೋಧನಾ ಮಾಧ್ಯಮವಾಗಿ ಬಳಸಲಾಗುತ್ತಿದೆ. ಹೆಚ್ಚಿನ ಶಿಕ್ಷಕರು ಇಂಗ್ಲಿಷಿಗಿಂತ ಹೆಚ್ಚಾಗಿ ಕನ್ನಡ ಬಳಸುತ್ತಿದ್ದರು. ಅದರಲ್ಲಿ ಸಂಪೂರ್ಣ ಇಂಗ್ಲಿಷ್ ಮಾಧ್ಯಮ ಎಂದು ಘೋಷಿಸಿಕೊಂಡಿರುವ 2 ಶಾಲೆಗಳಲ್ಲಿ ಒಂದು ಸೇರಿದೆ.

ಬೋಧನೆ-ಕಲಿಕೆ ಪ್ರಕ್ರಿಯೆಯ ಗುಣಮಟ್ಟಕ್ಕೂ ಶಿಕ್ಷಕರಿಗೆ ಸಿದ್ಧತೆಗೆಂದು ವೇಳಾಪಟ್ಟಿಯಲ್ಲಿ ನಿಗದಿಪಡಿಸಿರುವ ಸಮಯಕ್ಕೂ ಸಂಬಂಧವಿದೆ. ನಾವು ಸಂದರ್ಶಿಸಿದ ಶಿಕ್ಷಕರಲ್ಲಿ ಬಹುಪಾಲು (55/67 ಅಥವಾ ಸ್ಯಾಂಪಲ್‌ನ 82ಶೇ.) ದಿನಕ್ಕೆ 6-8 (ಒಟ್ಟು 8 ಅವಧಿಗಳು) ಗಂಟೆ ಪಾಠ ಮಾಡಬೇಕಿದೆ ಎಂದು ವರದಿ ಮಾಡಿದರು. ಕೇವಲ 11 ಶಿಕ್ಷಕರು ಮಾತ್ರ 1-5 ಪಾಠದ ಗಂಟೆಗಳಿವೆ ಎಂದರು. ಬಹುಪಾಲು (65 ಅಥವಾ 97ಶೇ.) ಶಾಲೆಯು ಬೋಧನೆ-ಕಲಿಕೆ ಸಾಮಗ್ರಿಗಳನ್ನು ಒದಗಿಸಿದೆ ಎಂದು ಹೇಳಿದರೆ, ಇಬ್ಬರ ಪ್ರಕಾರ ಇಲ್ಲ. 33 ಶಿಕ್ಷಕರು ಅಂದರೆ 49ಶೇ. ಪ್ರಕಾರ ಅವರು ಇಡೀ ದಿನ ಹಲವಾರು ತರಗತಿಗಳ ವಿಭಿನ್ನ ವಿದ್ಯಾರ್ಥಿಗಳಿಗೆ ಒಂದು ಅಥವಾ ಹೆಚ್ಚಿಗೆ ವಿಷಯಗಳನ್ನು ಬೋಧಿಸುತ್ತಾರೆ. 26 ಶಿಕ್ಷಕರು ಅಂದರೆ 39ಶೇ. ತಾವು ವಿಭಿನ್ನ ತರಗತಿಗಳಿಗೆ ಕೇವಲ ಒಂದೇ ವಿಷಯ ಪಾಠ ಮಾಡುತ್ತೇವೆ ಎಂದು ಹೇಳಿದರು. 7 ಶಿಕ್ಷಕರು ತಾವು ಇಡೀ ದಿನ ಅದೇ ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಿಷಯಗಳನ್ನು ಪಾಠ ಮಾಡುತ್ತೇವೆ ಎಂದು ತಿಳಿಸಿದರು. ಇದರೊಂದಿಗೆ 63 ಶಿಕ್ಷಕರು ಅಂದರೆ 94ಶೇ. ಹೇಳಿದ ಪ್ರಕಾರ ಅವರು ತಮ್ಮ ಎಲ್ಲ ವಿದ್ಯಾರ್ಥಿಗಳ ಕ್ಲಾಸ್ ವರ್ಕ್ ಮತ್ತು ಹೋಂವರ್ಕ್‌ಗಳನ್ನೂ ತಿದ್ದಬೇಕಿದೆ.

### 1.3.5 ಶಾಲಾ ಆಡಳಿತ

ಶಾಲೆಯ ಆಡಳಿತ ಗುಣಮಟ್ಟದ ಮೇಲೆ ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ಪರೀಕ್ಷಿಸಲು ಈ ಅಂಶಗಳನ್ನು ಪರಿಗಣಿಸಲಾಯಿತು: ಶಾಲಾ ಮಟ್ಟದಲ್ಲಿ ಆಡಳಿತದ ಗುಣಮಟ್ಟವನ್ನು ಪರಿಶೀಲಿಸುವಾಗ ವ್ಯಾಪಕ-ನೆಲೆಯ ಹಿತಾಸಕ್ತಿದಾರರ ಭಾಗವಹಿಸುವಿಕೆ (ತಳಗಿನಿಂದ ಮೇಲಕ್ಕೆ ಹೋಗಬೇಕಾದ ಸಂವಹನಗಳಿಗೆ ಪೋಷಕರು-ಶಿಕ್ಷಕರ ಸಂಘಗಳು ಮತ್ತು ಶಿಕ್ಷಕರ ಮಾರ್ಗಗಳು), ಪಾರದರ್ಶಕತೆ (ಪೋಷಕರು-ಶಿಕ್ಷಕರ ಸಭೆಗಳಲ್ಲಿ ಮುಖ್ಯವಾದ ನೀತಿ ಬದಲಾವಣೆಗಳನ್ನು ಚರ್ಚಿಸಲಾಗಿದೆಯೇ), ಬಾಧ್ಯತೆ(ಪೋಷಕರು-ಶಿಕ್ಷಕರ ಸಭೆಗಳ ಆವರ್ತನ ಮತ್ತು ಅವುಗಳಿಗಿರುವ ನಿರ್ದೇಶನಗಳು, ಮಾನವ ಸಂಪನ್ಮೂಲಗಳ ತರಬೇತು ಮತ್ತು ಸಾಧನೆ, ಶಿಕ್ಷಕರ ಮೇಲಿನ ಉಸ್ತುವಾರಿ)ಗಳನ್ನು ಪರಿಶೀಲಿಸಲಾಯಿತು.

ಎಲ್ಲ 8 ಶಾಲೆಗಳಲ್ಲಿಯೂ ಪೋಷಕ-ಶಿಕ್ಷಕ ಸಂಘಗಳು ಅಸ್ತಿತ್ವದಲ್ಲಿ ಇರಲಿಲ್ಲ ಮತ್ತು ಪೋಷಕ-ಶಿಕ್ಷಕ ಸಭೆಗಳು ಕೇವಲ ರಿಪೋರ್ಟ್-ಕಾರ್ಡ್‌ಗಳನ್ನು ಹಂಚಿಕೊಳ್ಳುವ ಮತ್ತು ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗ್ಗೆ ಚರ್ಚಿಸುವುದಕ್ಕೇ ಸೀಮಿತವಾಗಿದ್ದವು. 8ರಲ್ಲಿ 6 ಶಾಲೆಗಳಲ್ಲಿ ಈ ಬಗೆಯ ಸಭೆಗಳ ಸಂಖ್ಯೆ ತಿಂಗಳಿಗೆ ಒಂದರಂತೆ ಮತ್ತು ಒಂದು ಶಾಲೆಯಲ್ಲಿ ಅದಕ್ಕೂ ಹೆಚ್ಚು (15ದಿನಗಳಿಗೆ 1) ಆದರೆ ಒಂದು ಶಾಲೆಯಲ್ಲಿ ಒಂದು ಅವಧಿಗೆ ಒಮ್ಮೆ ಮಾತ್ರ ಎಂದು ವರದಿಯಾಗಿದೆ. ಬಹುಪಾಲು ಆಡಳಿತ ವರ್ಗದ ಪ್ರತಿನಿಧಿಗಳು ಸಿಬ್ಬಂದಿ ಸಾಧನೆ ಮೌಲ್ಯಮಾಪನಗಳ ಬಗ್ಗೆ ತಪ್ಪಿಸಿಕೊಳ್ಳುವ ಉತ್ತರಗಳನ್ನು ನೋಡಿದರು. ಒಂದೇ ಒಂದು ಶಾಲೆ ಮಾತ್ರ ನಮ್ಮಲ್ಲಿನ ಉತ್ತಮ ಪದ್ಧತಿಗಳು ಮತ್ತು ಸ್ಪರ್ಧಾತ್ಮಕ ಸಂಬಳದ ಕಾರಣ ಸಿಬ್ಬಂದಿ ಬಿಟ್ಟು ಹೋಗುವುದು ಕಡಿಮೆ ಎಂದು ಉತ್ತರಿಸಿತು. 2 ಶಾಲೆಗಳು ಸಂಬಳವು ಸೇವೆಯ ಅವಧಿ ಮತ್ತು ಗುಣಮಟ್ಟ, ಜೊತೆಗೆ ಶಾಲಾ ನಿಯಮಗಳಿಗೆ ಬದ್ಧರಾಗಿರುವುದರ ಮೇಲೆ ಆಧರಿಸಿದೆ ಎಂದು ಹೇಳಿತು. ಪ್ರಿನ್ಸಿಪಾಲ್-ಸಿಬ್ಬಂದಿ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸುತ್ತೇವೆ ಎಂದು 8ರಲ್ಲಿ 4 ಶಾಲೆಗಳು ಹೇಳಿದರೆ ಮತ್ತೆ 3ರಲ್ಲಿ ವಾರಕ್ಕೊಮ್ಮೆ. ಒಂದು ಶಾಲೆ ಪ್ರಿನ್ಸಿಪಾಲ್ ಆಗಾಗ್ಗೆ ಎಂದರೆ ಅಗತ್ಯವಿದ್ದಾಗಲೆಲ್ಲ ಎಂದು ವಿವರಿಸಿದರು, ಶಿಕ್ಷಕರೇ ಸಭೆ ಕರೆಯಲು ಕೋರಬಹುದಿತ್ತು. ಅಂತಹ ಸಭೆಗಳಲ್ಲಿ ಮುಖ್ಯವಾಗಿ ಪ್ರಿನ್ಸಿಪಾಲರು ಶಿಕ್ಷರಿಗೆ ಹಿಮ್ಮುಖ ವರದಿ ಕೊಡುತ್ತಾರೆ ಎಂದು 8 ಶಾಲೆಗಳೂ ವರದಿ ಮಾಡಿವೆ. ವರ್ಷಕ್ಕೊಮ್ಮೆ ಶಿಕ್ಷಕರಿಗೆ ಸೇವೆಯ ಜೊತೆಗೆ ತರಬೇತು ನೀಡಲಾಗುತ್ತದೆ ಎಂದು 4 ಶಾಲೆಗಳು ಹೇಳಿದರೆ ಇನ್ನೆರಡರಲ್ಲಿ 2 ಅಥವಾ ಹೆಚ್ಚು ಸಲ. 2 ಶಾಲೆಗಳು ಅವಕಾಶಗಳು ಬಂದಾಗಲೆಲ್ಲ ಎಂದು ಹೇಳಿದವು. ಒಂದು ಶಾಲೆಯಲ್ಲಿ ಹಿಂದಿನ ವರ್ಷ ಯಾವುದೇ ತರಬೇತು ಆಯೋಜಿಸಿರಲಿಲ್ಲ. ಸ್ಯಾಂಪಲ್‌ನ ಬಹುಪಾಲು ಶಿಕ್ಷಕರು 2-5 ವರ್ಷಗಳ ಅನುಭವವಿದೆಯೆಂದು ವರದಿ ಮಾಡಿದರೆ ಇನ್ನೂ ಸ್ವಲ್ಪ ಕಡಿಮೆ ಶಿಕ್ಷಕರು 6-10 ವರ್ಷಗಳ ಅನುಭವವಿದೆಯೆಂದು ವರದಿ ಮಾಡಿದರು. ಈ ಕೆಳಗಿನ ಕೋಷ್ಟಕನೋಡಿದರೆ ಸೇವೆಯ ಅವಧಿಗೂ ಸಂಬಳಕ್ಕೂ ಸ್ಪಷ್ಟ ಸಂಪರ್ಕವಿಲ್ಲವೆಂದು ತಿಳಿಯುತ್ತದೆ

**ಕೋಷ್ಟಕ 1.6–ಅ: ಶಿಕ್ಷಕ ವರ್ಗದ ಸಂಬಳ ಮತ್ತು ಶಿಕ್ಷಕ ವೃತ್ತಿಯಲ್ಲಿ ಅನುಭವ(ವರ್ಷಗಳಲ್ಲಿ)**

| ಅನುಭವ–ವರ್ಷಗಳಲ್ಲಿ | ಶಿಕ್ಷಕ ವರ್ಗದ ಸಂಬಳ | | | | ಒಟ್ಟು |
|---|---|---|---|---|---|
| | 0–5000 | 5001–10000 | 10001–15000 | 15001–20000 | |
| 0–1 | 1 | 5 | 0 | 0 | 6 |
| 2–5 | 3 | 18 | 0 | 0 | 21 |
| 6–10 | 0 | 14 | 4 | 2 | 20 |
| 11–15 | 1 | 5 | 7 | 2 | 15 |
| 16–20 | 0 | 3 | 2 | 0 | 5 |
| ಒಟ್ಟು | 5 | 45 | 13 | 4 | 67 |

ಮೂಲ: ಸಿಬಿಪಿಎಸ್ ಸಂಗ್ರಹಿಸಿರುವ ಪ್ರಾಥಮಿಕ ದತ್ತಾಂಶ

## 1.4 ತಾತ್ಪರ್ಯ

ಶಿಕ್ಷಣ ಹಕ್ಕು, 2009 ವಿಧಿಸಿರುವ ಮಾನಕಗಳ ವಿರುದ್ಧ ಬೆಂಗಳೂರಿನ ಖಾಸಗಿ ಶಾಲೆಗಳ ಗುಣಮಟ್ಟವನ್ನು ಪರಿಶೀಲಿಸುವಾಗ ಅಧ್ಯಯನದ ಈ ಸಣ್ಣ ಪ್ರದೇಶವು 'ಗುಣಮಟ್ಟ' ಎನ್ನುವುದು ಒಂದು ಅಸ್ಪಷ್ಟ ಕಲ್ಪನೆ ಮತ್ತು ಪೂರ್ಣತೆಯನ್ನು ಇಡಿಯಾಗಿ ನೋಡಬೇಕೇ ಹೊರತು ಭಾಗ ಭಾಗಗಳನ್ನಾಗಿ ಅಲ್ಲ ಎಂಬುದನ್ನು ತೋರಿಸಿಕೊಟ್ಟಿತು. ಗ್ರಂಥಾಲಯಗಳು ಅಥವಾ ಶಿಕ್ಷಕರ ಗುಣಮಟ್ಟಗಳ ಮಾನದಂಡಗಳನ್ನು ತಲುಪಿದ್ದರೂ ಈ ಮಾನಕಗಳ ಉದ್ದೇಶ - ವಿದ್ಯಾರ್ಥಿಗಳಿಗೆ ಓದುವ ಸಾಮಗ್ರಿಗಳು ಲಭಿಸಬೇಕು ಅಥವಾ ಗುಣಮಟ್ಟದ ಕಲಿಕೆಯ ಅನುಭವವಾಗಬೇಕು, ಎನ್ನುವುದು ಮರೀಚಿಕೆಯೇ ಆಗಿದೆ. ಗುಣಮಟ್ಟದ ಶಿಕ್ಷಣದ ಹೃದಯ ಭಾಗ, ಯುವಜನರ ಸಾಮರ್ಥ್ಯ ನಿರ್ಮಾಣ. ಇದನ್ನು ಸಬಲೀಕರಣದಿಂದ ಆಗಿಸಬೇಕೇ ಹೊರತು ಕಟ್ಟಡಗಳು ಅಥವಾ ಸಾಮಗ್ರಿಗಳಿಂದಲ್ಲ. ಇವು ಮಾರ್ಗಗಳಾಗಬಲ್ಲವೇ ಹೊರತು ಗಮ್ಯವಾಗುವುದಿಲ್ಲ. ಶಿಕ್ಷಣ ಎನ್ನುವುದು ಮಾನವನ ಅಂತರಕ್ರಿಯೆಗಳ ಒಂದು ವ್ಯವಹಾರ. ಆದ್ದರಿಂದ ಶಿಕ್ಷಕರ ಪಾತ್ರ ಮತ್ತು ಅವರ ವೃತ್ತಿಪರ ತರಬೇತಿ ಮತ್ತು ಅಭಿವೃದ್ಧಿಗಳ ಮಹತ್ತ್ವದ ಬಗ್ಗೆ ಹೇಳಿದಷ್ಟೂ ಕಡಿಮೆಯೇ. ಮಾನವನ ಅಭಿವೃದ್ಧಿಯ ಸಂದರ್ಭದಲ್ಲಿ ಶಿಕ್ಷಣ ಒಂದು ಮೌಲ್ಯ ವರ್ಧನೆಯ ಪ್ರಕ್ರಿಯೆ. ಇದನ್ನು ಮರೆಯಬಾರದು ಮತ್ತು ಇದನ್ನು ಸಾಕಾರಗೊಳಿಸಲು ಅಗತ್ಯವಾದ ಸೌಲಭ್ಯಗಳನ್ನು ಒದಗಿಸಬೇಕು.

# ಆರೋಗ್ಯ ಮತ್ತು ಪೌಷ್ಟಿಕತೆ







"ನನ್ನ ಹೆಬ್ಬಯಕೆ ಏನೆಂದರೆ, ಆರೋಗ್ಯ ಒಂದು ವರವಾಗಬಾರದು, ಹೋರಾಡಿ ಪಡೆಯಬೇಕಾದ ಮಾನವ ಹಕ್ಕಾಗಬೇಕು',

ಕೋಫಿ ಅನ್ನನ್

(ವಿಶ್ವ ಸಂಸ್ಥೆಯ ಮಾಜಿ ಮಹಾ-ಕಾರ್ಯದರ್ಶಿ)

## 5.1. ಪ್ರಸ್ತಾವನೆ

ಮಾನವ ಅಭಿವೃದ್ಧಿ ಸೂಚ್ಯಂಕವು ದೀರ್ಘಾಯುಷ್ಯವನ್ನು ಜನರ ಪೌಷ್ಟಿಕತೆ ಮತ್ತು ಆರೋಗ್ಯಗಳ ಸ್ಥಿತಿಗತಿಗೆ ಪ್ರತಿನಿಧಿಯನ್ನಾಗಿ ಬಳಸಿಕೊಳ್ಳುತ್ತದೆ. ದೀರ್ಘಕಾಲ ಬಾಳುವುದು ಮತ್ತು ಪ್ರಯೋಜನಕಾರಿ ಜೀವನಕ್ಕೆ ಆರಂಭದಲ್ಲಿ ಹಾಕುವ ಉತ್ತಮ ಅಡಿಪಾಯವೆಂದರೆ ಪೌಷ್ಟಿಕತೆ, ಕಾಯಿಲೆ ಮತ್ತು ಅಸಾಮರ್ಥ್ಯಗಳು ಬರುವ ಅಪಾಯ ಕಡಿಮೆ ಮಾಡುವ ರೋಗನಿರೋಧಕ, ಮತ್ತು ಜೀವನದುದ್ದಕ್ಕೂ ಸುಲಭವಾಗಿ ಲಭ್ಯವಾಗಬಹುದಾದ ಆರೋಗ್ಯ ರಕ್ಷಣೆ ಸೌಲಭ್ಯಗಳು. ಹುಟ್ಟುವಾಗ ಉತ್ತಮ ತೂಕ, ತಾಯಿಯ ಉತ್ತಮ ಆರೋಗ್ಯ ಮತ್ತು ಪೌಷ್ಟಿಕತೆಯ ಸ್ಥಿತಿಗತಿ, ಸಮತೂಲಿತ ಆಹಾರ ಕ್ರಮಗಳು ಮತ್ತು ನೈರ್ಮಲ್ಯ ಹಾಗೂ ನಿರ್ಮಲೀಕರಣ ವ್ಯವಸ್ಥೆಯ ಬಗ್ಗೆ ಕುಟುಂಬದ ಹಾಗೂ ಸಮಾಜದ ಮಟ್ಟಗಳಲ್ಲಿ ಇರುವ ಅರಿವು, ತಲಾ ಆದಾಯ, ಜೊತೆಗೆ ಹಲವಾರು ಆರ್ಥಿಕ ಮತ್ತು ಸಾಮಾಜಿಕ ಅಂಶಗಳು ಇತ್ಯಾದಿಗಳು ಒಟ್ಟಾಗಿ ವ್ಯಕ್ತಿಯ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ.

## 5.2 ಜನಸಂಖ್ಯೆ ಮತ್ತು ಅದರ ಲಕ್ಷಣಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 9.90 ಲಕ್ಷ ಜನಸಂಖ್ಯೆ ಇದೆ (ಭಾರತದ ಜನಗಣತಿ-2011). ಇದು ರಾಜ್ಯದ ಜನಸಂಖ್ಯೆಯ ಶೇ. 1.6. 2011 ಜನಗಣತಿ ಪ್ರಕಾರ ಜಿಲ್ಲೆಯ ಜನಸಂಖ್ಯೆಯ ಶೇ. 21.57 ಪರಿಶಿಷ್ಟ ಜಾತಿ ಮತ್ತು ಶೇ. 5.34 ಪರಿಶಿಷ್ಟ ಪಂಗಡ. ಕರ್ನಾಟಕದಲ್ಲಿ ನಗರ ಜನಸಂಖ್ಯೆ ಗಣನೀಯವಾಗಿದೆ. ರಾಜ್ಯದ ಶೇ. 38 ಕ್ಕೂ ಹೆಚ್ಚು ಜನಸಂಖ್ಯೆ ನಗರ ಪ್ರದೇಶಗಳಲ್ಲಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ಈ ಸಂಖ್ಯೆ ಶೇ. 27. ಅಂದರೆ, ಜಿಲ್ಲೆಯ ಜನಸಂಖ್ಯೆಯ ಬಹುಭಾಗ ಇನ್ನೂ ಗ್ರಾಮೀಣ ಭಾಗಗಳಲ್ಲೇ ಇದ್ದಾರೆ. ಆದ್ದರಿಂದ ಆರೋಗ್ಯದ ವಿಷಯದಲ್ಲಿ ಗ್ರಾಮೀಣ-ನಗರ ತಾರತಮ್ಯಗಳು ಬಹಳ ಆತಂಕಕ್ಕೆ ಕಾರಣವಾಗುತ್ತವೆ. ಖಾಸಗಿ ವಲಯವು ಆರೋಗ್ಯ ರಕ್ಷಣೆ ಒದಗಿಸುವುದೂ ಬಹುತೇಕ ನಗರದ ವಿಷಯವೇ ಆಗಿದೆ. ಗ್ರಾಮೀಣ ಭಾಗಗಳಲ್ಲಿ ಜನರು ಆರೋಗ್ಯ ರಕ್ಷಣೆಗೆ ಸರ್ಕಾರವನ್ನೇ ಅವಲಂಬಿಸಿದ್ದಾರೆ. ಈ ಕಾರಣಕ್ಕಾಗಿಯೇ ಸರ್ಕಾರ ಪ್ರಾಯೋಜಿತ ಆರೋಗ್ಯ ರಕ್ಷಣೆಯ ಸಾಕು-ಬೇಕುಗಳನ್ನು ಪರಿಶೀಲಿಸಬೇಕಿದೆ. ಮೊದಲಿನಿಂದಲೂ ದುರ್ಬಲವಾಗಿರುವ ವರ್ಗಗಳ-ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಮಹಿಳೆಯರು-ಆರೋಗ್ಯವು ಸಾರ್ವಜನಿಕ ಆರೋಗ್ಯ ರಕ್ಷಣಾ ಸೌಲಭ್ಯಗಳೊಂದಿಗೆ ನಿಕಟ ಸಂಬಂಧ ಹೊಂದಿದೆ.

ಕೋಷ್ಟಕ5.1 ಸೂಚಿಸುವಂತೆ ಕರ್ನಾಟಕದಲ್ಲಿ 1000 ಪುರುಷರಿಗೆ 973 ಮಹಿಳೆಯರಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ 1000 ಪುರುಷರಿಗೆ 946 ಮಹಿಳೆಯದ್ದರೆ, ಗ್ರಾಮೀಣ ಕರ್ನಾಟಕದಲ್ಲಿ 979, ನಗರ ಕರ್ನಾಟಕದಲ್ಲಿ 963, ಬೆಂಗಳೂರು ಗ್ರಾಮೀಣ ಹಾಗೂ ನಗರಭಾಗಗಳಲ್ಲಿ ಅನುಕ್ರಮವಾಗಿ 945 ಮತ್ತು 950 ಮಹಿಳೆಯರು ಇದ್ದಾರೆ.

## 5.3 ಶಿಶುಗಳ ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣ

ನವಜಾತ ಶಿಶುಗಳ ಜೀವನದ ಮೊದಲ ವರ್ಷದ ಆಯಸ್ಸು ಹಲವಾರು ಅಂಶಗಳಿಗೆ ಸಂಬಂಧಿಸಿದೆ. ಇವು ಒಂದು ಸಮಾಜದ ಸಾರ್ವಜನಿಕ ಆರೋಗ್ಯ ಸ್ಥಿತಿಯನ್ನು ತೋರಿಸುತ್ತದೆ. ಕುಟುಂಬಗಳ ಸಾಮಾಜಿಕ-ಆರ್ಥಿಕ ಸ್ಥಿತಿಗತಿ, ಲಿಂಗ ಸಂಬಂಧಿತ ಅಸಮಾನತೆಯ ಫಲಿತಗಳಾದ ಶೀಘ್ರ ಮದುವೆ ಮತ್ತು ಮಗು ಹೆರುವುದು, ಸಮರ್ಪಕ ಕುಟುಂಬ ಯೋಜನೆ ಇಲ್ಲದಿರುವಿಕೆ ಮತ್ತು ಜನನಗಳ ನಡುವಿನ ಅಂತರ ಇಲ್ಲದಿರುವಿಕೆ, ಶೈಕ್ಷಣಿಕವಾಗಿ ಮಹಿಳೆಯರ ಹಿಂದುಳಿದಿರುವಿಕೆ , ಮತ್ತು ತಾಯಂದಿರ ಹಾಗೂ ಮಗುವಿನ ಆರೋಗ್ಯಕ್ಕೆ ಸರಿಯಾದ ಸಾಂಸ್ಥಿಕ ನೆರವು ಇಲ್ಲದಿರುವುದು, ಇವೆಲ್ಲವೂ ಮಕ್ಕಳ ಮರಣ ಪ್ರಮಾಣ ಮತ್ತು ತಾಯಂದಿರ ಮಕ್ಕಳ ಪ್ರಮಾಣದ ಮೇಲೆ ತೀವ್ರ ಪರಿಣಾಮ ಬೀರುತ್ತವೆ.

ಶಿಶುಗಳು ಜನಿಸಿದಾಗ ಕಡಿಮೆ ತೂಕವಿರುವುದು, ಜನಿಸಿದ ತಕ್ಷಣ ಬರುವ ಸೋಂಕು ರೋಗಗಳು, ಸ್ತನಪಾನ ಮಾಡಿಸಲು ಮತ್ತು ಮಗುವನ್ನು ನೋಡಿಕೊಳ್ಳಲು ಅಡ್ಡಿಮಾಡುವ ತಾಯಿಯ ದುರ್ಬಲ ಆರೋಗ್ಯ, ಅಸುರಕ್ಷಿತ ಹೆರಿಗೆಗಳು ಮತ್ತು ಸಾಮಾಜಿಕ/ಸಾಂಸ್ಥಿಕ ಲೋಪಗಳಿಂದಾಗಿ ಸಕಾಲಕ್ಕೆ ಆರೈಕೆ ಮತ್ತು ನೆರವು ಸಿಗದಿರುವುದು, ಇವೆಲ್ಲವೂ ತಮ್ಮ ಪ್ರಭಾವ ಬೀರುತ್ತವೆ. ಶಿಶು ಮರಣವನ್ನು ಇನ್ನೂ ವರ್ಗೀಕರಿಸಲಾಗಿದೆ - ನವಜಾತ ಶಿಶು ಮರಣ (ಜನಿಸಿದ 4 ವಾರಗಳ ಒಳಗೆ), ಮತ್ತು ನವಜಾತ-ನಂತರ ಮರಣ (ಜನಿಸಿದ 1 ತಿಂಗಳಿಂದ 1 ವರ್ಷ). ಇದರಲ್ಲಿ ಮೊದಲನೆಯದರ ಅಪಾಯ ಹೆಚ್ಚು. ಕಾರಣ, ಹೆರಿಗೆಯೇ ಒಂದು ಅಪಾಯಕಾರಿ ಪ್ರಕ್ರಿಯೆಯಾದರೆ ನವಜಾತ ಶಿಶು ತಾಯಿಯ ಗರ್ಭದಿಂದ ಹೊರಬಂದ ನಂತರ ಅನೇಕ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ- ಉಸಿರಾಟ, ಹಾಲು ಕುಡಿಯುವುದು, ಕರುಳು ಮತ್ತು ಕೋಶಗಳ ಕೆಲಸ, ಇತ್ಯಾದಿ. ಈ ಅವಧಿಯಲ್ಲಿ ಅದು ವಿಪರೀತವಾದ ಒತ್ತಡ ಮತ್ತು ಶ್ರಮವನ್ನು ಅನುಭವಿಸುತ್ತಿರುತ್ತದೆ. ಹಾಗಾಗಿ ಮಗು ಹುಟ್ಟಿದ ನಂತರ ಅದರ ತೂಕ ಇದ್ದಕ್ಕಿದ್ದಂತೆ ಕಡಿಮೆಯಾಗುತ್ತದೆ. ಅಪೌಷ್ಟಿಕತೆಯಿಂದ ಬಳಲುತ್ತಿರುವ ತಾಯಿಯ ಮಗುವಾದರೆ ಹುಟ್ಟುವಾಗಲೇ ಕಡಿಮೆ ತೂಕವಿರುವ ಮಗುವಿನ ತೂಕ ಮತ್ತಷ್ಟು ಕಡಿಮೆಯಾಗಿ ಜೀವಕ್ಕೇ ಅಪಾಯ ಒದಗಬಹುದು. ಮಗುವಿಗೆ ಒಂದು ತಿಂಗಳಾಗುವ ವೇಳೆಗೆ ಅದು ಅಗತ್ಯವಾದ ಹೊಂದಾಣಿಕೆಗಳನ್ನು ಸಾಕಷ್ಟು ಚೆನ್ನಾಗಿ ಮಾಡಿಕೊಂಡಿರುತ್ತದೆ, ನಂತರ ಅದರ ಜೀವಕ್ಕೆ ಇರುವ ಅಪಾಯಗಳ ಸಾಕಷ್ಟು ಕಡಿಮೆಯಾಗಿರುತ್ತವೆ.

ಇಡೀ ರಾಜ್ಯದ ಶಿಶುಗಳ ಮರಣ ಪ್ರಮಾಣ ಸರಾಸರಿ 14. ಇದಕ್ಕೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸರಾಸರಿ 10 ಇದ್ದು ಜಿಲ್ಲೆ 6 ನೇ ಸ್ಥಾನದಲ್ಲಿದೆ. ತಾಲೂಕುಗಳಲ್ಲಿ ದೊಡ್ಡಬಳ್ಳಾಪುರ ತಾಲೂಕಿನ ಶಿಶುಗಳ ಮರಣ ಪ್ರಮಾಣ ರಾಜ್ಯದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಜಿಲ್ಲೆಯಾದ ಬೆಂಗಳೂರು ನಗರದ ಸರಾಸರಿಗೆ ಸನಿಹದಲ್ಲಿದೆ. ಆದರೆ ಹೊಸಕೋಟೆ ತಾಲೂಕಿನ ಸರಾಸರಿ ಕೋಷ್ಟಕದಲ್ಲಿ ಅತ್ಯಂತ ಕೆಳಗಿರುವ ಮೂರನೇ ಒಂದು ಜಿಲ್ಲೆಗಳ ಸರಾಸರಿಗೆ ಸನಿಹವಿದೆ. ದೇವನಹಳ್ಳಿ ಮತ್ತು ನೆಲಮಂಗಲ ತಾಲೂಕುಗಳ ಸರಾಸರಿಗಳು ಸರಿಸುಮಾರು ಜಿಲ್ಲೆಯ ಸರಾಸರಿಗೆ ಹೋಲಿಸುವಂತಿದೆ.

**ಕೋಷ್ಟಕ 5.1: ಲಿಂಗ ಮತ್ತು ಸ್ಥಳವಾರು ಜನಸಂಖ್ಯೆ (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಒಟ್ಟು ಜನಸಂಖ್ಯೆ | ಪುರುಷ | ಮಹಿಳೆ |
|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಗ್ರಾಮೀಣ | 722,179 | 371,369 | 350,810 |
| | ನಗರ | 268,744 | 137,803 | 130,941 |
| | ಒಟ್ಟು | 990,923 | 509,172 | 481,751 |
| ಕರ್ನಾಟಕ | ಗ್ರಾಮೀಣ | 37,469,335 | 18,929,354 | 18,539,981 |
| | ನಗರ | 23,625,962 | 12,037,303 | 11,588,659 |
| | ಒಟ್ಟು | 61,095,297 | 30,966,657 | 30,128,640 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 5.2: ಜಿಲ್ಲಾವಾರು ಶಿಶು ಮರಣದ ಪ್ರಮಾಣ, ಕರ್ನಾಟಕ 2011**

| ಜಿಲ್ಲೆ | 2011 ರಲ್ಲಿ ವರದಿಯದ ಜೀವಂತ ಜನನಗಳು | ಶಿಶುಗಳು ಮರಣಿಸಿದ ಸಂಖ್ಯೆ (0-1ವರ್ಷ) | ಶಿಶುಗಳ ಮರಣ ಪ್ರಮಾಣ |
|---|---|---|---|
| ಬೆಂಗಳೂರು ನಗರ | 1,876 | 9 | 5 |
| ಧಾರವಾಡ | 2,387 | 14 | 6 |
| ಬೀದರ್ | 2,140 | 13 | 6 |
| ಶಿವಮೊಗ್ಗ | 1,832 | 12 | 7 |
| ಚಿತ್ರದುರ್ಗ | 2,344 | 16 | 7 |
| ಗುಲಬರ್ಗ | 3,130 | 22 | 7 |
| ದಕ್ಷಿಣ ಕನ್ನಡ | 1,667 | 14 | 8 |
| ಚಿಕ್ಕಬಳ್ಳಾಪುರ | 1,428 | 13 | 9 |
| ಕೋಲಾರ | 1,515 | 14 | 9 |
| ಉಡುಪಿ | 1,174 | 11 | 9 |
| **ಬೆಂಗಳೂರು ಗ್ರಾಮಾಂತರ ಜಿಲ್ಲೆ** | **1,123** | **11** | **10** |
| ರಾಮನಗರ | 984 | 10 | 10 |
| ಹಾವೇರಿ | 2,137 | 24 | 11 |
| ದಾವಣಗೆರೆ | 2,395 | 27 | 11 |
| ಹಾಸನ | 1,573 | 18 | 11 |
| ಉತ್ತರಕನ್ನಡ | 1,920 | 22 | 11 |
| ಬೆಳಗಾವಿ | 7,565 | 95 | 13 |
| ಮೈಸೂರು | 3,102 | 40 | 13 |
| ಚಿಕ್ಕಮಗಳೂರು | 1,041 | 14 | 13 |
| ಮಂಡ್ಯ | 1,515 | 22 | 15 |
| ಬೆಳ್ಳಾರಿ | 2,693 | 42 | 16 |
| ಬಾಗಲಕೋಟೆ | 3,235 | 55 | 17 |
| ಗದಗ | 1,506 | 27 | 18 |
| ತುಮಕೂರು | 2,408 | 46 | 19 |
| ಚಾಮರಾಜನಗರ | 890 | 18 | 20 |
| ಯಾದಗಿರಿ | 1,837 | 38 | 21 |
| ಕೊಡಗು | 411 | 9 | 22 |
| ಕೊಪ್ಪಳ | 2,042 | 46 | 23 |
| ಬಿಜಾಪುರ | 3,310 | 80 | 24 |
| ರಾಯಚೂರು | 2,969 | 90 | 30 |

ಸೂಚನೆ: ಶಿಶುಗಳ ಮರಣ ಪ್ರಮಾಣ ಎಂದರೆ 1000 ಜೀವಂತ ಜನನಗಳಲ್ಲಿ 1 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮರಣಗಳ ಸಂಖ್ಯೆ;

ಮೂಲ: Economic Survey 2012-13

**ಕೋಷ್ಟಕ 5.3. ತಾಲೂಕುವಾರು ಶಿಶುಗಳ ಮರಣ ಪ್ರಮಾಣ, 2011**

| ತಾಲೂಕು/ಜಿಲ್ಲೆ | ವರದಿಯಾದ ಜನನಗಳು | ಶಿಶುಗಳ (0-1 ವರ್ಷ) ಸಾವುಗಳ ಸಂಖ್ಯೆ | ಶಿಶುಗಳ ಮರಣ ಪ್ರಮಾಣ |
|---|---|---|---|
| ದೇವನಹಳ್ಳಿ | 285 | 3 | 11 |
| ದೊಡ್ಡಬಳ್ಳಾಪುರ | 389 | 2 | 5 |
| ಹೊಸಕೋಟೆ | 250 | 4 | 16 |
| ನೆಲಮಂಗಲ | 199 | 2 | 10 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 1,123 | 11 | 10 |

ಮೂಲ: HMIS 2012-13

ನಮ್ಮ ದೇಶದಲ್ಲಿ ಮಕ್ಕಳಾಗುವ ವಯಸ್ಸಿನ ಮಹಿಳೆಯರ ಸಾವಿಗೆ ಏಕೈಕ ಅತಿ ದೊಡ್ಡ ಕಾರಣವೆಂದರೆ ಹೆರಿಗೆ. ಮಹಿಳೆಯರ ಆರೋಗ್ಯದ ಬಗ್ಗೆ ನೋಡುವಾಗ ಹಲವಾರು ಅಂಶಗಳನ್ನು ಪರಿಗಣಿಸಬೇಕು-ಜೀವನದುದ್ದಕ್ಕೂ ಸಿಗುವ ಪೌಷ್ಟಿಕಾಂಶಗಳು (ವಿಶೇಷವಾಗಿ ಅತಿ ಮುಖ್ಯ ಘಟ್ಟಗಳಲ್ಲಿ, ಉದಾ: ಮೊದಲ ವರ್ಷದಲ್ಲಿ ಮತ್ತು ಹದಿಹರೆಯದಲ್ಲಿ), ಗುಣಮಟ್ಟದ ಆರೋಗ್ಯ ಸೇವೆಗಳ ಸುಲಭ ಲಭ್ಯತೆ, ಇತ್ಯಾದಿ. ಆದರೂ ಮಹಿಳೆಯರ ಆರೋಗ್ಯದ ಬಗ್ಗೆ ಒಂದೇ ಚಿತ್ರದಲ್ಲಿ ಬಹಳಷ್ಟು ಹೇಳುವುದೆಂದರೆ ತಾಯಂದಿರ ಮರಣ ಪ್ರಮಾಣ ಮಾತ್ರ. ತಾಯಂದಿರ ಮರಣ ಪ್ರಮಾಣ, ಶಿಶುವಿನ ಜೀವಕ್ಕೆ ಭಾರಿ ಅಪಾಯ ಒಡ್ಡುತ್ತದೆ. ಕರ್ನಾಟಕದಲ್ಲಿ ತಾಯಂದಿರ ಮರಣಕ್ಕೆ ಇರುವ ಪ್ರಮುಖ ಕಾರಣಗಳು, ನೆತ್ತರುನಂಜು, ರಕ್ತಸ್ರಾವ, ರಕ್ತಹೀನತೆ ಮತ್ತು ಗರ್ಭಪಾತ. ಇವೆಲ್ಲವನ್ನೂ ತೊಲಗಿಸಲು ಸಾಧ್ಯವಾಗಿಲ್ಲವಾದರೂ ಗಣನೀಯವಾಗಿ ಕಡಿಮೆ ಮಾಡಲಾಗಿದೆ. ಉತ್ತಮ ಹೆರಿಗೆ ಆರೈಕೆ ಮತ್ತು ಗರ್ಭಪಾತ ಸೌಲಭ್ಯಗಳನ್ನು ಒದಗಿಸಲಾಗಿದೆ (ಕರ್ನಾಟಕ ಮಾನವ ಅಭಿವೃದ್ಧಿ ವರದಿ 2005). ಅತ್ಯುತ್ತಮ ಸಾಧನೆ ಮಾಡಿರುವ ಉಡುಪಿ ಜಿಲ್ಲೆಗೆ (ಉಡುಪಿ:50) ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಯಂದಿರ ಮರಣ ಪ್ರಮಾಣ ಹೆಚ್ಚಿದೆ. ಆದರೂ ರಾಜ್ಯದ ಉಳಿದ ಅನೇಕ ಜಿಲ್ಲೆಗಳಿಗೆ ಹೋಲಿಸಿದರೆ ಪರವಾಗಿಲ್ಲ.

**ಕೋಷ್ಟಕ 5.4. ತಾಲೂಕುವಾರು ಮತ್ತು ಜಿಲ್ಲಾ ಮಟ್ಟದಲ್ಲಿ ತಾಯಂದಿರ ಮರಣ ಪ್ರಮಾಣ 2011**

| ತಾಲೂಕು/ಜಿಲ್ಲೆ | ತಾಯಂದಿರ ಮರಣ ಪ್ರಮಾಣ |
|---|---|
| ದೇವನಹಳ್ಳಿ | 126 |
| ದೊಡ್ಡಬಳ್ಳಾಪುರ | 101 |
| ಹೊಸಕೋಟೆ | 102 |
| ನೆಲಮಂಗಲ | 150 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 120 |

ಮೂಲ: HMIS 2011-12

ತಾಯಂದಿರ ಮರಣ ಪ್ರಮಾಣ ಮತ್ತು ಶಿಶುಗಳ ಮರಣ ಪ್ರಮಾಣಗಳಿಗೂ ತಾಯಿಯ ವಯಸ್ಸಿಗೂ ಸಂಬಂಧವಿದೆ. ತಾಯಿಯ ವಯಸ್ಸು 20 ರ ಒಳಗೆ ಅಥವಾ 30ರ ಮೇಲಿದ್ದರೆ ಇಂತಹ ಪ್ರಕರಣಗಳು ಹೆಚ್ಚುತ್ತವೆ. 2007-08ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 20-24 ವಯೋಮಿತಿಯ ಮಹಿಳೆಯರಲ್ಲಿ 36.3ಶೇ. ಮಹಿಳೆಯರಿಗೆ 18 ವರ್ಷಗಳಿಗೆ ಮೊದಲೇ ಮದುವೆಯಾಗಿತ್ತು ಎಂದು ವರದಿಯಾಗಿದೆ (Karnataka DLHFS 2007-08). ಅದೇ ವರ್ಷ ನಡೆದ ಮದುವೆಗಳಲ್ಲಿ 14.6ಶೇ. ಮದುವೆಗಳಲ್ಲಿ ವಧುವಿನ ವಯಸ್ಸು ಕಾನೂನು ಮಿತಿಯಾದ 18 ವರ್ಷಗಳಿಗಿಂತ ಕಡಿಮೆ ಇತ್ತು (ಅದೇ ಮೂಲ).

ತಾಯಂದಿರ ಮರಣ ಪ್ರಮಾಣ ಮತ್ತು ಶಿಶುಗಳ ಮರಣ ಪ್ರಮಾಣಗಳಿಗೂ ಜನನಗಳ ನಡುವಿನ ಅಂತರಕ್ಕೂ ಸಂಬಂಧವಿದೆ. ಎರಡು ಸತತ ಜನನಗಳ ನಡುವೆ 24 ತಿಂಗಳಿಗಿಂತ ಕಡಿಮೆ ಅಂತರವಿದ್ದರೆ ಅಪಾಯ ಗಣನೀಯವಾಗಿ

ಹೆಚ್ಚು. ಅಂತರ 36 ತಿಂಗಳಿಗಿಂತ ಹೆಚ್ಚಿದ್ದರೆ ಶಿಶುಗಳು ಬದುಕುಳಿಯುವ ಅವಕಾಶಗಳು ಹೆಚ್ಚು (ಕರ್ನಾಟಕ ಮಾನವ ಅಭಿವೃದ್ಧಿ ವರದಿ 2005). ಜನನದ ಕುರಿತಾದ ನಿರ್ಣಯಗಳನ್ನು ಕೈಗೊಳ್ಳುವ ವಿಷಯಗಳಲ್ಲಿ ಮಹಿಳೆಯರಿಗೆ ಪಾತ್ರವಿಲ್ಲ ಎಂಬುದನ್ನು ತಾಯಂದಿರ ಮರಣ ಪ್ರಮಾಣ ಮತ್ತು ಶಿಶುಗಳ ಮರಣ ಪ್ರಮಾಣಗಳು ಸೂಚಿಸುತ್ತವೆ ಎಂದು ಈ ಅಂಶಗಳು ವಿವರಿಸುತ್ತವೆ. ಇದು ಲಿಂಗ ಸಂಬಂಧಿತ ಅಸಮಾನತೆಯ ಫಲ.

## 5.4 ದಂಪತಿಗಳ ಸುರಕ್ಷತೆ ಸಮಸ್ಯೆಗಳು ಮತ್ತು ಕೌಟುಂಬಿಕ ಯೋಗಕ್ಷೇಮ

ತಾಯಂದಿರ ಮರಣ ಪ್ರಮಾಣ ಮತ್ತು ಶಿಶುಗಳ ಮರಣ ಪ್ರಮಾಣಕ್ಕೆ ತೀರ ಹತ್ತಿರವಾದ ವಿಷಯಗಳೆಂದರೆ ಕುಟುಂಬ ಯೋಜನೆ. ಇದು ಬಹಳವಾಗಿ ಮಹಿಳೆಯರ ಮೇಲೆ ಅತಿಯಾದ ಹೊರೆಯನ್ನು ಹಾಕುವಂಥದ್ದಾಗಿದೆ, ಲಾಪರೊಸ್ಕೊಪಿಕ್ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಸಂಖ್ಯೆಗಳನ್ನು ವ್ಯಾಸೆಕ್ಟಮಿ ಸಂಖ್ಯೆಗಳಿಗೆ ಹೋಲಿಸಿದರೆ, ಕೋಷ್ಟಕ 5.5 ತೋರಿಸುವಂತೆ. 2011ರಲ್ಲಿ ಒಂದೂ ವ್ಯಾಸೆಕ್ಟಮಿ ಮಾಡಿರದಂತಹ ಕುಖ್ಯಾತಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಹೊಂದಿದ್ದು, ಇಡೀ ರಾಜ್ಯಕ್ಕೆ ಇದರ ಸಂಖ್ಯೆಯು ಕೇವಲ 112. ಇದಕ್ಕೆ ವಿರುದ್ಧವಾಗಿ, ರಾಜ್ಯದಲ್ಲಿ ನಡೆಸಲಾದ ಲಾಪರೊಸ್ಕೊಪಿಕ್ ಸಂತಾನಹರಣ ಶಸ್ತ್ರಚಿಕಿತ್ಸೆಗಳ ಸಂಖ್ಯೆಯು 10000ಅನ್ನು ಮೀರಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ 250 ಮಹಿಳೆಯರು ಈ ಕುಟುಂಬ ಯೋಜನೆಯ ಕ್ರಮವನ್ನು ಆಯ್ದುಕೊಂಡರು. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಎರಡರಲ್ಲೂ ನಂತರದ ಮೆಚ್ಚಿನ ಆಯ್ಕೆಯು ಇಂಟ್ರಾ ಯುಟರೈನ್ ಡಿವೈಸ್ (ಐಯುಡಿ) ಆಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಕುಟುಂಬ ಯೋಜನೆಯ ಮಾರ್ಗವು ಮೌಖಿಕ ಗರ್ಭನಿರೋಧಕವನ್ನು ಅತಿಯಾಗಿ ಅವಲಂಬಿಸಿದೆ. ವಿಶ್ವ ಆರೋಗ್ಯ ಸಂಸ್ಥೆಯು (ವಿಆಸಂ), ಮೌಖಿಕ ಗರ್ಭನಿರೋಧಕಗಳನ್ನು 1 ವರ್ಗದ ಕ್ಯಾನ್ಸರ್ ಕಾರಕವೆಂದು ಕೋಷ್ಟಕಮಾಡಿದೆ. ಆದ್ದರಿಂದ ಗರ್ಭನಿರೋಧಕಗಳ ಬಗ್ಗೆ ಮಾಹಿತಿಯುಕ್ತ, ಜವಾಬ್ದಾರಿಯುತ ಮತ್ತು ಲಿಂಗ ಸಂವೇದನಾಶೀಲ ಮಾರ್ಗವನ್ನು ಅನುಸರಿಸುವಂತೆ ಕರೆ ನೀಡಿದೆ.

**ಕೋಷ್ಟಕ 5.5: ಕುಟುಂಬ ಯೋಜನೆ ಕ್ರಮಗಳ ಬಳಕೆ (2013-2014)**

| ಕ್ರಮ ಸಂ. | ಸುರಕ್ಷತಾ ಕ್ರಮಗಳು | ಕರ್ನಾಟಕ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
|---|---|---|---|
| 1.1 | ಸಾರ್ವಜನಿಕ ಸೌಲಭ್ಯಗಳಲ್ಲಿ, ಅಂದರೆ PHC, CHC, SDH, DH ಮತ್ತು ಇತರ ರಾಜ್ಯ ಒಡೆತನದ ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಸಲಾದ NSV ಅಥವಾ ಸಾಂಪ್ರದಾಯಿಕ ವ್ಯಾಸೆಕ್ಟಮಿ ಗಳ ಒಟ್ಟು ಸಂಖ್ಯೆ | 107 | 0 |
| 1.2 | ಖಾಸಗಿ ಸೌಲಭ್ಯಗಳಲ್ಲಿ ನಡೆಸಲಾದ ಓಖಿ ಅಥವಾ ಸಾಂಪ್ರದಾಯಿಕ ವ್ಯಾಸೆಕ್ಟಮಿಗಳ ಸಂಖ್ಯೆ | 5 | 0 |
| 2.1 ಎ | ಪ್ರಾ.ಆ.ಕೇಂ. ಗಳಲ್ಲಿ ನಡೆಸಲಾದ ಲಾಪರೊಸ್ಕೊಪಿಕ್ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಸಂಖ್ಯೆಗಳು | 2,875 | 0 |
| 2.1.ಬಿ | ನ.ಆ.ಕೇಂ. ಗಳಲ್ಲಿ ನಡೆಸಲಾದ ಲಾಪರೊಸ್ಕೊಪಿಕ್ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಸಂಖ್ಯೆಗಳು | 3,092 | 32 |
| 2.1.ಸಿ | ರಾ.ಜಿ.ಆ..ಅಥವಾ ಜಿ.ಆ ಗಳಲ್ಲಿ ನಡೆಸಲಾದ ಲಾಪರೊಸ್ಕೊಪಿಕ್ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಸಂಖ್ಯೆಗಳು | 6,698 | 224 |
| 2.1.ಜಿ | ಸಾರ್ವಜನಿಕ ಸೌಲಭ್ಯಗಳಲ್ಲಿ, ಅಂದರೆ ಪ್ರಾ.ಆ.ಕೇಂ, ಸ.ಆ.ಕೇಂ, ರಾ.ಜಿ.ಆ, ಜಿ.ಆ ಮತ್ತು ಇತರ ರಾಜ್ಯ ಒಡೆತನದ ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಸಲಾದ ಲಾಪರೊಸ್ಕೊಪಿಕ್ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಸಂಖ್ಯೆಗಳು (2.1.ಎ ನಿಂದ 2.1.ಸಿ ನ ಕೂಡಿಕೆ) | 12,665 | 256 |
| 2.2 | ಖಾಸಗಿ ಸೌಲಭ್ಯಗಳಲ್ಲಿ ನಡೆಸಲಾದ ಲಾಪರೊಸ್ಕೊಪಿಕ್ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಸಂಖ್ಯೆಗಳು | 1,447 | 20 |
| 3.1. | ಸಾರ್ವಜನಿಕ ಸೌಲಭ್ಯಗಳಲ್ಲಿ, ಅಂದರೆ ಪ್ರಾ.ಆ.ಕೇಂ, ಸ.ಆ.ಕೇಂ, ರಾ.ಜಿ.ಆ, ಜಿ.ಆ ಮತ್ತು ಇತರ ರಾಜ್ಯ ಒಡೆತನದ ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಸಲಾದ ಮಿನಿ-ಲ್ಯಾಪ್ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಸಂಖ್ಯೆ | 5,790 | 38 |
| 3.2 | ಖಾಸಗಿ ಸಂಸ್ಥೆಗಳಲ್ಲಿ ನಡೆಸಲಾದ ಮಿನಿ-ಲ್ಯಾಪ್ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಸಂಖ್ಯೆ | 2,045 | 23 |
| 4.1. | ಸಾರ್ವಜನಿಕ ಸೌಲಭ್ಯಗಳಲ್ಲಿ, ಅಂದರೆ ಪ.ಜಾಪ್ರಾ.ಆ.ಕೇಂ, ಸ.ಆ.ಕೇಂ, ರಾ.ಜಿ.ಆ, ಜಿ.ಆ ಮತ್ತು ಇತರ ರಾಜ್ಯ ಒಡೆತನದ ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಸಲಾದ ಪ್ರಸವಾನಂತರದ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗಳ ಸಂಖ್ಯೆ | 3,367 | 16 |
| 4.2 | ಖಾಸಗಿ ಸೌಲಭ್ಯಗಳಲ್ಲಿ ನಡೆಸಲಾದ ಪ್ರಸವಾನಂತರದ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗಳ ಸಂಖ್ಯೆ | 1,939 | 26 |
| 5.1 | ಸಾರ್ವಜನಿಕ ಸೌಲಭ್ಯಗಳಲ್ಲಿ, ಅಂದರೆ., ಪ್ರಾ.ಆ.ಕೇಂ, ಸ.ಆ.ಕೇಂ, ರಾ.ಜಿ.ಆ, ಜಿ.ಆ ಮತ್ತು ಇತರ ರಾಜ್ಯ ಒಡೆತನದ ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಸಲಾದ ಐಯುಡಿ ಅಂತರ್ಯೋಜನೆಯ ಸಂಖ್ಯೆ | 12,550 | 195 |
| 5.2 | ಖಾಸಗಿ ಸಂಸ್ಥೆಗಳಲ್ಲಿ ನಡೆಸಲಾದ IUD ಅಂತರ್ಯೋಜನೆಯ ಸಂಖ್ಯೆ | 1,869 | 92 |
| 6 | ಐಯುಡಿ ತೆಗೆಯುವಿಕೆಯ ಸಂಖ್ಯೆ | 5,378 | 99 |
| 7 | ಮೌಖಿಕ ಮಾತ್ರೆ ಚಕ್ರಗಳ ವಿತರಣೆಯ ಸಂಖ್ಯೆ | 103,697 | 2,623 |
| 8 | ವಿತರಿಸಲಾದ ಕಾಂಡೋಂ ಗಳ ಸಂಖ್ಯೆ | 887,683 | 21,662 |
| 9 | ಕೊಡಲಾದ ಸೆಂಟ್ ಖ್ರೊಮನ್ (ಸಪ್ತಾಹಿಕ) ಮಾತ್ರೆಗಳ ಸಂಖ್ಯೆ | 4,007 | 20 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ (2013-14 ಏಪ್ರಿಲ್‌ವರೆಗೂ ನೀಡಲಾದ ತಾತ್ಕಾಲಿಕ ಅಂಕಿಗಳು)

DLHS-2 ಮತ್ತು DLHS-3 ನ ಮಧ್ಯದ ಅವಧಿಯ ಬದಲಾವಣೆಯನ್ನು ಕೋಷ್ಟಕ 5.6ರಲ್ಲಿ ನೀಡಲಾಗಿದೆ. ಮಹಿಳೆಯರು ಕೊಂಚ ಹೆಚ್ಚಿನ ಪಾಲಿನಲ್ಲಿ (ಸುಮಾರು ಶೇ. 4 ಅಂಕಿಗಳ ಹೆಚ್ಚಳ) ಈಗ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಒಂದು ಗರ್ಭನಿರೋಧಕ ಕ್ರಮವನ್ನು ಬಳಸುತ್ತಿದ್ದಾರೆ. ಮಹಿಳಾ ಸಂತಾನಶಕ್ತಿಹರಣವನ್ನು ಮಾಡಿಸುವ ಪ್ರಮಾಣವೂ ನಗರ ಪ್ರದೇಶಗಳ ಶೇ. 1 ಅಂಕಿ ಗೆ ಹೋಲಿಸಿದರೆ ಗ್ರಾಮೀಣ ಪ್ರದೇಶಗಳಲ್ಲಿ ಗಣನೀಯವಾಗಿ ಹೆಚ್ಚಾಗಿದೆ (ಶೇ. 4 ಅಂಕಿಗಳಷ್ಟು). ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶ ಎರಡರಲ್ಲೂ ಐಯುಡಿ ಬಳಕೆ ಕಡಿಮೆಯಾಗಿದೆ. ಕುಟುಂಬ ಯೋಜನೆಯ ಪೂರೈಸಲಾಗದ ಅಗತ್ಯತೆಯೂ (ಶೇಕಡಾವಾರಿನಲ್ಲಿ) ಶೇ. 3 ಅಂಕಿಗಳಷ್ಟು ಕಡಿಮೆಯಾಗಿದ್ದು, ಇದು ಉತ್ತಮ ಬೆಳವಣಿಗೆಯಾಗಿದೆ.

ದೇಶದಲ್ಲಿ ಗರ್ಭ ಪ್ರಾಯದ ಮಹಿಳೆಯರ ಸಾವಿಗೆ ಅತಿ ದೊಡ್ಡ ಕಾರಣವೆಂದರೆ ಹೆರಿಗೆ, ಮತ್ತು ಮಹಿಳೆಯ ಆರೋಗ್ಯಕ್ಕೆ ವಿವಿಧ ಕಾರಣಗಳನ್ನು ಪರಿಗಣಿಸಬೇಕಾಗಿದ್ದು, ಅಂದರೆ ಜೀವಮಾನದಲ್ಲಿ ಪೌಷ್ಟಿಕತೆ ಸ್ಥಿತಿ (ಜೀವಮಾನದ ಪ್ರಮುಖಘಟ್ಟಗಳಾದ ಜೀವನದ ಮೊದಲ ವರ್ಷ ಮತ್ತು ಪ್ರಾಯದಲ್ಲಿ, ಮುಖ್ಯವಾಗಿ), ಆರೋಗ್ಯ ಸೇವೆಗಳ ಲಭ್ಯತೆ ಮತ್ತು ಗುಣಮಟ್ಟ; ಮಹಿಳೆಯರ ಆರೋಗ್ಯದ ಬಗ್ಗೆ ಚಿತ್ರಣ ನೀಡಬಲ್ಲ ಪ್ರಮುಖ ಸೂಚಕ ತಾಯಂದಿರ ಮರಣ ಪ್ರಮಾಣ ಆಗಿದೆ. ತಾಯಿಯ ಮರಣವು ಶಿಶುವಿನ ಜೀವಕ್ಕೆ ಮತ್ತೂ ಸಮಸ್ಯೆಯನ್ನುಂಟು ಮಾಡುತ್ತದೆ. ಕರ್ನಾಟಕದಲ್ಲಿ ತಾಯಿಯ ಮರಣಕ್ಕೆ ಪ್ರಮುಖ ಕಾರಣಗಳೆಂದರೆ ಸೆಪ್ಸಿಸ್, ರಕ್ತಸ್ರಾವ, ರಕ್ತಹೀನತೆ ಮತ್ತು ಗರ್ಭಪಾತ - ಇವೆಲ್ಲವನ್ನೂ ತಡೆಯಲಾಗದಿದ್ದರೂ, ಉತ್ತಮ ಪ್ರಸೂತಿ ಆರೈಕೆ ಮತ್ತು ಗರ್ಭಪಾತದ ಸೌಲಭ್ಯಗಳ ಲಭ್ಯತೆಯಿಂದ ಕಡಿಮೆ ಮಾಡಬಹುದು (ಕರ್ನಾಟಕ DLHFS 2005). ರಾಜ್ಯದ ಉತ್ತಮ ಸಾಧನೆಯ ಜಿಲ್ಲೆಗೆ (ಉಡುಪಿ:50) ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತಾಯಂದಿರ ಮರಣ ಪ್ರಮಾಣ ಹೆಚ್ಚಾಗಿದೆ, ಆದರೆ ಇತರ ಜಿಲ್ಲೆಗಳಿಗಿಂತ ಉತ್ತಮವಾಗಿದೆ.

**ಕೋಷ್ಟಕ 5.6: ಹಾಲಿ ವಿವಾಹಿತ ಮಹಿಳೆಯರಲ್ಲಿ ಕುಟುಂಬ ಯೋಜನೆ (15–49 ವರ್ಷಗಳು), ಬೆಂಗಳೂರು ಗ್ರಾಮಾಂತರ ಜಿಲ್ಲೆ**

| ವಿವರಗಳು | DLHS -2: 2002–2004 | | DLHS–3: 2007–2008 | |
|---|---|---|---|---|
| | ಒಟ್ಟು | ಗ್ರಾಮೀಣ | ಒಟ್ಟು | ಗ್ರಾಮೀಣ |
| **ಸಧ್ಯದ ಬಳಕೆ:** | | | | |
| ಯಾವುದೇ ವಿಧಾನ (ಶೇ.) | 66.9 | 64.6 | 66.1 | 68.0 |
| ಯಾವುದೇ ಆಧುನಿಕ ವಿಧಾನ (ಶೇ.) | 66.4 | 64.2 | 66.1 | 68.0 |
| ಮಹಿಳಾ ಸಂತಾನಶಕ್ತಿಹರಣ (ಶೇ.) | 61.5 | 62.0 | 62.9 | 66.2 |
| ಪುರುಷ ಸಂತಾನಶಕ್ತಿಹರಣ (ಶೇ.) | – | – | 0.0 | 0.0 |
| ಐ ಯು ಡಿ (ಶೇ.) | 3.5 | 1.7 | 1.9 | 1.4 |
| ಮಾತ್ರೆ (ಶೇ.) | 0.2 | 0.2 | 0.2 | 0.3 |
| ಕೋಂಡೋಂ(ಶೇ.) | 1.2 | 0.4 | 1.1 | 0.1 |
| **ಕುಟುಂಬ ಯೋಜನೆಯ ಪೂರೈಸಲಾಗದ ಅಗತ್ಯತೆ** | | | | |
| ಒಟ್ಟು ಪೂರೈಸಲಾಗದ ಅಗತ್ಯತೆ (ಶೇ.) | 13.4 | 12.0 | 10.7 | 9.7 |
| ಅಂತರಕ್ಕಾಗಿ (ಶೇ.) | 4.6 | 4.8 | 6.0 | 6.5 |
| ಮಿತಿಗಾಗಿ (ಶೇ.) | 8.8 | 7.3 | 4.7 | 3.2 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ DLHS – 3 (2007–2008)

## 5.5 ಮೂಲಸೌಕರ್ಯ, ಸೌಲಭ್ಯಗಳು ಮತ್ತು ಆರೋಗ್ಯ ಕಾರ್ಯಕರ್ತರು

5000 ಜನಸಂಖ್ಯೆಗೆ ಸೇವೆ ನೀಡಲು ಉಪ-ಕೇಂದ್ರಗಳ ಉದ್ದೇಶವಾಗಿದ್ದರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸೇವಾ ವ್ಯಾಪ್ತಿಯು ಬಯಲುಸೀಮೆಗಳಲ್ಲಿ 30000 ಮತ್ತು ಗುಡ್ಡಗಾಡು ಮತ್ತು ಗಿರಿಜನ ಪ್ರದೇಶಗಳಲ್ಲಿ 20000 ಜನಸಂಖ್ಯೆ. ಸಾಮುದಾಯಿಕ ಆರೋಗ್ಯ ಕೇಂದ್ರಗಳು ಸುಧಾರಿಸಲಾದ ಪ್ರಾ.ಆ.ಕೇಂ. ಆಗಿದ್ದು, ಇದರ ಉದ್ದೇಶ ಪ್ರಾಥಮಿಕ ಮತ್ತು ರೋಗಪರಿಹರಕ ಸೇವೆಗಳನ್ನು ನೀಡುವುದು. ಸುತ್ತಮುತ್ತಲಿನ ಪ್ರಾ.ಆ.ಕೇಂ. ಗಳಿಗೆ ಇವು ಮೊದಲ ಉಲ್ಲೇಖ ಘಟಕಗಳಾಗಿಯು ಕಾರ್ಯನಿರ್ವಹಿಸುತ್ತವೆ. 120 ಸಾವಿರ ಜನಸಂಖ್ಯೆ ವ್ಯಾಪ್ತಿಯಿರುವ ಪ್ರತಿ ನಾಲ್ಕು ಪ್ರಾ.ಆ.ಕೇಂ. ಗಳನ್ನು ಸುಧಾರಿಸಿ ಸ.ಆ.ಕೇಂ.ಗಳನ್ನು ಸ್ಥಾಪಿಸಲಾಗುತ್ತದೆ. ಸ.ಆ.ಕೇಂ ಗಳಲ್ಲಿ 30 ಹಾಸಿಗೆಗಳು ಮತ್ತು ಮೂರು ತಜ್ಞತೆಗಳಿರುತ್ತವೆ-ವೈದ್ಯಕೀಯ, ಶಸ್ತ್ರಚಿಕಿತ್ಸೆ ಮತ್ತು ಸ್ತ್ರೀರೋಗಶಾಸ್ತ್ರ. ದಂತಚಿಕಿತ್ಸೆಯು ಸ.ಆ.ಕೇಂ ಗಳಲ್ಲಿ ಇತ್ತೀಚೆಗೆ ಸೇರಿಸಲಾದ ಹೊಸ ತಜ್ಞತೆಯಾಗಿದೆ. ಉಪವಿಭಾಗಗಳ ಮಟ್ಟದಲ್ಲಿ 50 ಹಾಸಿಗೆ ಮತ್ತು ಐದು ತಜ್ಞತೆಗಳನ್ನು ಹೊಂದಿರುವ ಸ.ಆ.ಕೇಂಗಳಿವೆ-ವೈದ್ಯಕೀಯ, ಶಸ್ತ್ರಚಿಕಿತ್ಸೆ, ಶಿಶುರೋಗಶಸ್ತ್ರ, ಸ್ತ್ರೀರೋಗಶಾಸ್ತ್ರ ಮತ್ತು ದಂತ ಶಸ್ತ್ರಚಿಕಿತ್ಸೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಿವಿಧ ಸೌಲಭ್ಯಗಳು ವ್ಯಾಪಿಸುವ ಜನಸಂಖ್ಯೆಯನ್ನು DLHS-3 (2007-08) ಹೀಗೆ ತೋರಿಸುತ್ತದೆ: ಉಪಕೇಂದ್ರ-4254; ಪ್ರಾ.ಆ.ಕೇಂ.-21827 ಮತ್ತು ಸ.ಆ.ಕೇಂ - 528085. ಹೀಗಾಗಿ, ಉಪಕೇಂದ್ರಗಳು ಮತ್ತು ಪ್ರಾ.ಆ.ಕೇಂ. ಗಳು ಸೇವೆನೀಡುವ ಜನಸಂಖ್ಯೆಯ ನಿಯಮವನ್ನು ಅಂದಾಜುಗೊಳಿಸಿದರೆ, ಸ.ಆ.ಕೇಂ ಗಳ ಸಂಖ್ಯೆಯು ಸಾಮಾನ್ಯ ಅವಶ್ಯಕತೆಗಿಂತ ನಾಲ್ಕರಷ್ಟು ಕಡಿಮೆಯಿದೆ.

DLHS-3 ಯು ಗ್ರಾಮೀಣ ಪ್ರದೇಶಗಳಲ್ಲಿ ಸಂತಾನೋತ್ಪತ್ತಿ ಮತ್ತು ಶಿಶು ಆರೋಗ್ಯ ಸೇವೆಗಳ ಪರ್ಯಾಪ್ತತೆಯನ್ನು ಪರಿಶೀಲಿಸಲು, ಉಪಕೇಂದ್ರ, ಪ್ರಾ.ಆ.ಕೇಂ. ಮತ್ತು ಸ.ಆ.ಕೇಂ ಗಳಲ್ಲಿ ಆರೋಗ್ಯ ಕಾರ್ಯಕರ್ತರು, ಔಷಧಗಳ ಲಭ್ಯತೆ, ಉಪಕರಣಗಳು, ಪ್ರಾಥಮಿಕ ಸಂತಾನೋತ್ಪತ್ತಿ ಮತ್ತು ಶಿಶು ಆರೋಗ್ಯ ಆರೈಕೆಯ ಸೌಲಭ್ಯಗಳು, ಸಂವಹನದ ವಿಧಾನಗಳು ಮತ್ತು ಮೂಲಸೌಕರ್ಯದ ಬಗ್ಗೆ ದತ್ತಾಂಶವನ್ನು ಸಂಗ್ರಹಿಸಿತು. 2007-08ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಲಾದ ಒಟ್ಟು 36 ಉಪಕೇಂದ್ರಗಳಲ್ಲಿ, 24 (ಶೇ. 67) ನ್ನು ಪರ್ಯಾಪ್ತವಾಗಿ ಸಜ್ಜುಗೊಳಿಸಲಾಗಿದೆ ಮತ್ತು 29ಅನ್ನು (ಶೇ. 80.5) ಪರ್ಯಾಪ್ತ ಔಷಧಗಳನ್ನು ಹೊಂದಿದೆ ಎಂದು ನಿರ್ಧರಿಸಲಾಯಿತು, ಎರಡೂ ಪ್ರಕರಣಗಳಲ್ಲಿ, ಸಾಮಾನ್ಯ ಅವಶ್ಯಕತೆಯ, ಸುಮಾರು ಮೃದುವಾದ ಮಾನದಂಡವಾದ, ಶೇ. 60 ರಷ್ಟು ಪೂರೈಕೆಯನ್ನು ಆಧರಿಸಿ.

ಜಿಲ್ಲೆಯಲ್ಲಿ 16 ಪ್ರಾ.ಆ.ಕೇಂ ಗಳಿರುವ ದೊಡ್ಡಬಳ್ಳಾಪುರವು ಪ್ರಥಮ ಸ್ಥಾನದಲ್ಲಿದ್ದು, ಇತರ ಮೂರು ತಾಲೂಕುಗಳಿಗಿಂತ ಸುಮಾರು 1/3 ರಷ್ಟು ಅಧಿಕ ಪ್ರಾ.ಆ.ಕೇಂ ಗಳನ್ನು ಹೊಂದಿದೆ (ಕೋಷ್ಟಕ 5.7). ಎಲ್ಲಾ ತಾಲೂಕುಗಳು ಒಂದು ಅಥವಾ ಎರಡು ಸ.ಆ.ಕೇಂ ಗಳನ್ನು ಹೊಂದಿವೆ. ನಾಲ್ಕೂ ತಾಲೂಕುಗಳಲ್ಲಿರುವ ಖಾಸಗಿ ಆಸ್ಪತ್ರೆಗಳ ಸಂಖ್ಯೆಯು ಬಹಳವಾಗಿ ವ್ಯತ್ಯಾಸವನ್ನು ಹೊಂದಿದ್ದು, ದೇವನಹಳ್ಳಿಯಲ್ಲಿ 3 ರಿಂದ ದೊಡ್ಡಬಳ್ಳಾಪುರದಲ್ಲಿ 49 ಇವೆ. ಉಪಕೇಂದ್ರಗಳ ಬಗ್ಗೆ, ದೇವನಹಳ್ಳಿ ತಾಲೂಕು ಉತ್ತಮ ಸ್ಥಿತಿಯಲ್ಲಿದ್ದು, 40 ಉಪಕೇಂದ್ರ ಹೊಂದಿರುವ ದೇವನಹಳ್ಳಿ ತಾಲೂಕಿಗಿಂತ 1/3 ರಷ್ಟು ಹೆಚ್ಚನ್ನು ಹೊಂದಿದೆ.

**ಕೋಷ್ಟಕ 5.7: ಆರೋಗ್ಯ ಸೌಲಭ್ಯಗಳ ಸಂಖ್ಯೆ (2011)**

| ತಾಲೂಕು/ಜಿಲ್ಲೆ | ಪ್ರಾಥಮಿಕ ಆರೋಗ್ಯ ಕೇಂದ್ರಗಳು | ಸಾಮುದಾಯಿಕ ಆರೋಗ್ಯ ಕೇಂದ್ರಗಳು | ಖಾಸಗಿ ಆಸ್ಪತ್ರೆ | ಉಪಕೇಂದ್ರ |
|---|---|---|---|---|
| ದೇವನಹಳ್ಳಿ | 11 | 2 | 3 | 40 |
| ದೊಡ್ಡಬಳ್ಳಾಪುರ | 16 | 1 | 49 | 59 |
| ಹೊಸಕೋಟೆ | 10 | 1 | 31 | 50 |
| ನೆಲಮಂಗಲ | 9 | 2 | 13 | 50 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 46 | 6 | 96 | 199 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

2001, 2008 ಮತ್ತು 2011 ರ ಪ್ರವೃತ್ತಿ ಪರಿಶೀಲನೆಯು, 2001 ರಿಂದ 2011ರ ಅವಧಿಯಲ್ಲಿ ದೇವನಹಳ್ಳಿ ತಾಲೂಕಿನಲ್ಲಿ ಉಪಕೇಂದ್ರಗಳ ಸಂಖ್ಯೆಯು ಸುಮಾರು ದ್ವಿಗುಣಗೊಂಡಿರುವುದನ್ನು ಸೂಚಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಇತರ ಮೂರು ತಾಲೂಕುಗಳಲ್ಲಿ ಉಪಕೇಂದ್ರಗಳ ಸಂಖ್ಯೆಯು 2001ರಿಂದ ಬದಲಾಗದೆ ಇವೆ. 2001ರಿಂದ 2008ರ ಅವಧಿಯಲ್ಲಿ ದೇವನಹಳ್ಳಿ ತಾಲೂಕಿನಲ್ಲಿ ಪ್ರಾ.ಆ.ಕೇಂ. ಗಳ ಸಂಖ್ಯೆಯು ಹೆಚ್ಚಿದ್ದು, ನಂತರ ಬದಲಾಗಿಲ್ಲ. ಈ ತಾಲೂಕುನಲ್ಲಿ 2001 ಮತ್ತು

2008ರಲ್ಲಿ ಖಾಸಗಿ ಆಸ್ಪತ್ರೆಗಳು ಒಂದೂ ಇಲ್ಲದಿದ್ದು, 2011ರಲ್ಲಿ ಮೂರಾಗಿವೆ. ಇದೇ ಅವಧಿಯಲ್ಲಿ ಇತರ ತಾಲೂಕುಗಳಲ್ಲಿಯೂ ಖಾಸಗಿ ಆಸ್ಪತ್ರೆಗಳ ಸಂಖ್ಯೆಯು ಹೆಚ್ಚಾಗಿದ್ದು, ದೊಡ್ಡಬಳ್ಳಾಪುರವು ಅದರ ಸಂಖ್ಯೆಯಲ್ಲಿ ಸುಮಾರು ಶೇ.100 ರಷ್ಟು ಹೆಚ್ಚಳವನ್ನು ತೋರಿಸಿತು (25 ರಿಂದ 49). 2001ರಲ್ಲಿ ಎಲ್ಲಾ ತಾಲೂಕುಗಳಲ್ಲಿಯೂ ಒಂದು ಸಾ.ಆ.ಕೇಂ ಇದ್ದರೆ, 2011ರ ವೇಳೆಗೆ, ಎರಡು ತಾಲೂಕುಗಳು- ದೇವನಹಳ್ಳಿ ಮತ್ತು ನೆಲಮಂಗಲ- ಎರಡನ್ನು ಹೊಂದಿದ್ದವು (ಕೋಷ್ಟಕ 5.8).

ಭೌತಿಕ ಮೂಲಸೌಕರ್ಯಗಳಿಗೆ ದೇವನಹಳ್ಳಿ ತಾಲೂಕು ಖಚಿತವಾದ ಉತ್ತಮ ಸೂಚಕಗಳನ್ನು ಹೊಂದಿದ್ದರೆ, ಆರೋಗ್ಯ ಕಾರ್ಯಕರ್ತರ ವಿಷಯದಲ್ಲಿ ಹೀಗಿಲ್ಲ. 2011ರಲ್ಲಿ ದೇವನಹಳ್ಳಿ ತಾಲೂಕಿಗಿಂತ ದೊಡ್ಡಬಳ್ಳಾಪುರ ತಾಲೂಕು 4 ಅಧಿಕ ವೈದ್ಯರನ್ನು (ಶೇ. 12 ಹೆಚ್ಚು) ಮತ್ತು 3 ಅಧಿಕ ದಾದಿಯರನ್ನು (ಶೇ. 10 ಹೆಚ್ಚು) ಹೊಂದಿದ್ದು, ಇದು ಜಿಲ್ಲೆಯಲ್ಲಿ ಶೇ. 30 ಅಧಿಕ ವೈದ್ಯರು ಮತ್ತು 32ಶೇ. ಅಧಿಕ ದಾದಿಯರನ್ನು ಹೊಂದಿದೆ.

**ಕೋಷ್ಟಕ 5.8: ಪ್ರಾಥಮಿಕ ಮತ್ತು ಸಾಮುದಾಯಿಕ ಆರೋಗ್ಯ ಕೇಂದ್ರಗಳ, ಖಾಸಗಿ ಆಸ್ಪತ್ರೆಗಳ ಮತ್ತು ಉಪಕೇಂದ್ರಗಳ ಸಂಖ್ಯೆ**

| ತಾಲೂಕು/ಜಿಲ್ಲೆ | 2001 | | | | 2008 | | | | 2011 | | | |
|---|---|---|---|---|---|---|---|---|---|---|---|---|
| | ಪ್ರಾಥಮಿಕ ಆರೋಗ್ಯ ಕೇಂದ್ರಗಳು | ಸಮುದಾಯಿಕ ಆರೋಗ್ಯ ಕೇಂದ್ರಗಳು | ಖಾಸಗಿ ಆಸ್ಪತ್ರೆಗಳು | ಉಪಕೇಂದ್ರಗಳು | ಪ್ರಾ.ಆ.ಕೇಂ | ಸಾ.ಆ.ಕೇಂ. | ಖಾಸಗಿ ಆಸ್ಪತ್ರೆಗಳು | ಉಪಕೇಂದ್ರಗಳು | ಪ್ರಾ.ಆ.ಕೇಂ | ಸಾ.ಆ.ಕೇಂ | ಖಾಸಗಿ ಆಸ್ಪತ್ರೆಗಳು | ಉಪಕೇಂದ್ರಗಳು |
| ದೇವನಹಳ್ಳಿ | 8 | 1 | ಓಂ | 25 | 11 | 1 | 0 | 40 | 11 | 2 | 3 | 40 |
| ದೊಡ್ಡಬಳ್ಳಾಪುರ | 10 | 1 | 25 | 59 | 16 | 1 | 31 | 59 | 16 | 1 | 49 | 59 |
| ಹೊಸಕೋಟೆ | 8 | 1 | 11 | 50 | 10 | 1 | 28 | 50 | 10 | 1 | 31 | 50 |
| ನೆಲಮಂಗಲ | 6 | 1 | 6 | 50 | 10 | 1 | 12 | 50 | 9 | 2 | 13 | 50 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 32 | 4 | 42 | 184 | 47 | 4 | 71 | 199 | 46 | 6 | 96 | 199 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಕೋಷ್ಟಕ 5.9: ವೈದ್ಯಕೀಯ ಸಿಬ್ಬಂದಿ (2001, 2008 ಮತ್ತು 2011)**

| ತಾಲೂಕು/ಜಿಲ್ಲೆ | 2001 | | 2008 | | 2011 | |
|---|---|---|---|---|---|---|
| | ವೈದ್ಯರು | ದಾದಿಯರು | ವೈದ್ಯರು | ದಾದಿಯರು | ವೈದ್ಯರು | ದಾದಿಯರು |
| ದೇವನಹಳ್ಳಿ | 27 | 16 | 34 | 24 | 33 | 28 |
| ದೊಡ್ಡಬಳ್ಳಾಪುರ | 28 | 10 | -- | -- | 37 | 31 |
| ಹೊಸಕೋಟೆ | 23 | 5 | 29 | 11 | 29 | 22 |
| ನೆಲಮಂಗಲ | 26 | 10 | 28 | 15 | 27 | 17 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 104 | 41 | 91 | 50 | 126 | 98 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

2001 ಮತ್ತು 2011 ರ ಅವಧಿಯಲ್ಲಿ ಒಟ್ಟಾರೆ ಜಿಲ್ಲೆಯಲ್ಲಿ ದಾದಿಯರ ಸಂಖ್ಯೆಯು ಸುಮಾರು ದ್ವಿಗುಣವಾಗಿದೆ. ಜಿಲ್ಲೆಯಲ್ಲಿ 2001ರಲ್ಲಿ ಕೇವಲ ಶೇ. 12 ರಷ್ಟು ದಾದಿಯರಿದ್ದು, 2011ರಲ್ಲಿ ಹೊಸಕೋಟೆ ತಾಲೂಕು ಸುಮಾರು ಶೇ. 22 ರಷ್ಟು ಹೊಂದಿತ್ತು, ಇದು ಸುಧಾರಣೆಯಾಗಿದೆ. ಪ್ರತಿ 187.7 ಸಾವಿರ ಜನಸಂಖ್ಯೆಗೆ, ಜಿಲ್ಲೆಯಲ್ಲಿ ಪ್ರತಿ 1000 ಜನರಿಗೆ ಕನಿಷ್ಟ 2 ವೈದ್ಯರು ಅಥವಾ 2 ದಾದಿಯರಿಲ್ಲ.

ಹಾಸಿಗೆಗಳು ಮತ್ತು ಆಸ್ಪತ್ರೆಗಳ ದತ್ತಾಂಶವು ಸೂಚಿಸುವುದೇನೆಂದರೆ, ಒಂದು ಪ್ರಾ.ಆ.ಕೇಂ. ದಲ್ಲಿ ಸರಾಸರಿ 6 ಹಾಸಿಗೆಗಳಿದ್ದು, ಗ್ರಾಮದ ಮಟ್ಟದಲ್ಲಿ ಜನರಿಗೆ ಸೇವೆ ನೀಡಲು ದೊಡ್ಡಬಳ್ಳಾಪುರವು ಅತಿಹೆಚ್ಚಿನ ಸಂಖ್ಯೆಯ ಹಾಸಿಗೆಗಳನ್ನು ಹೊಂದಿದ್ದರೆ (102), ಉಳಿದ ಮೂರು ತಾಲೂಕುಗಳು ತಮ್ಮ ಪ್ರಾ.ಆ.ಕೇಂ ಗಳಲ್ಲಿ 60 ಅಥವಾ ಕೊಂಚ ಹೆಚ್ಚಿನ ಸಂಖ್ಯೆಯ ಬೆಡ್ ಗಳನ್ನು ಹೊಂದಿವೆ. ಹೊಸಕೋಟೆಯಲ್ಲಿ ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಗಳು ದೊಡ್ಡ ಪ್ರಮಾಣದಲ್ಲಿದ್ದು, ಇದರ ನಂತರ ದೊಡ್ಡಬಳ್ಳಾಪುರ ಇದ್ದು, ಮೇಲಿನ ಕೋಷ್ಟಕವು ಸೂಚಿಸುವಂತೆ 2008ರದ ಶ್ರೇಣಿಯಲ್ಲಿ ಬದಲಾವಣೆಯಾಗಿದೆ. ಗ್ರಾಮದ ಮಟ್ಟದಲ್ಲಿ ಆಯುಶ್ ಎನ್ನಲಾಗುವ (ಆಯುರ್ವೇದ, ಯುನಾನಿ, ಸಿದ್ಧ ಮತ್ತು ಹೋಮಿಯೊಪತಿ) ಪರ್ಯಾಯ ಆರೋಗ್ಯ ವ್ಯವಸ್ಥೆಗಳನ್ನು ಪುನರುಜ್ಜೀವನ ಗೊಳಿಸುವ ಅವಶ್ಯಕತೆಯನ್ನು 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಉಲ್ಲೇಖಿಸಿದ್ದರೂ, ಮೂರು ತಾಲೂಕುಗಳು ಭಾರತೀಯ ವೈದ್ಯಕೀಯ ವ್ಯವಸ್ಥೆಯನ್ನು ಅನುಸರಿಸುವ ಒಂದು ಆಸ್ಪತ್ರೆ ಅಥವಾ ಹಾಸಿಗೆಯನ್ನು ಹೊಂದಿಲ್ಲ. ಅಂತಿಮವಾಗಿ, ಎಲ್ಲಾ ತಾಲೂಕುಗಳು ಒಂದು ಅಲೊಪತಿ ಆಸ್ಪತ್ರೆಯನ್ನು ಹೊಂದಿದ್ದರೆ, ಎರಡು ತಾಲೂಕುಗಳಲ್ಲಿ ಹಾಸಿಗೆಗಳ ಸಂಖ್ಯೆ 50 ಮತ್ತು ಇನ್ನೆರಡು ತಾಲೂಕುಗಳಲ್ಲಿ ಸುಮಾರು ಇದರ ಅರ್ಧದಷ್ಟು ಅಂದರೆ 30 ಹಾಸಿಗೆಗಳಿದ್ದವು (ಕೋಷ್ಟಕ 5.10).

**ಕೋಷ್ಟಕ 5.10: ಆಸ್ಪತ್ರೆಗಳಲ್ಲಿ, ಪ್ರಾ.ಆ.ಕೇಂ ಮತ್ತು ಸಾ.ಆ.ಕೇಂ.ಗಳಲ್ಲಿ ಲಭ್ಯವಿರುವ ಹಾಸಿಗೆಗಳ ಸಂಖ್ಯೆ (2011–2012)**

| ತಾಲೂಕು/ಜಿಲ್ಲೆ | ಅಲ್ಲೋಪಥಿ ಆಸ್ಪತ್ರೆ | ಭಾರತೀಯ ವೈದ್ಯವ್ಯವಸ್ಥೆಯ ಆಸ್ಪತ್ರೆ | ಖಾಸಗಿ ಆಸ್ಪತ್ರೆ (ನರ್ಸಿಂಗ್ ಹೋಂ ಸೇರಿಸಿ) | ಪ್ರಾ.ಆ.ಕೇಂ | ಸಾ.ಆ.ಕೇಂ. |
|---|---|---|---|---|---|
| | ಹಾಸಿಗೆ | ಹಾಸಿಗೆ | ಹಾಸಿಗೆ | ಹಾಸಿಗೆ | ಹಾಸಿಗೆ |
| ದೇವನಹಳ್ಳಿ | 30 | 0 | 24 | 60 | 30 |
| ದೊಡ್ಡಬಳ್ಳಾಪುರ | 50 | 6 | 59 | 102 | -- |
| ಹೊಸಕೋಟೆ | 30 | 0 | 76 | 66 | -- |
| ನೆಲಮಂಗಲ | 50 | 0 | 53 | 63 | 30 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 160 | 6 | 212 | 291 | -- |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಭಾರತದ ನಿರೋಧಕ ಮತ್ತು ಪ್ರೋತ್ಸಾಹಕ ಕಾರ್ಯತಂತ್ರದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ (ಐ.ಒ.ಡಿ.ಎಸ್.) ಯೋಜನೆಯ ಪ್ರಮುಖ ಸ್ಥಾನವನ್ನು ಪರಿಗಣಿಸಿ ಅಂಗನವಾಡಿಗಳೂ ಸಮುದಾಯದ ಪ್ರಮುಖ ಆರೋಗ್ಯ ಸಂಸ್ಥೆಗಳಾಗಿವೆ. 2008 ಮತ್ತು 2011ರ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಅಂಗನವಾಡಿಗಳ ಸಂಖ್ಯೆಯಲ್ಲಿ ಸುಮಾರು 200 ರಷ್ಟು ಹೆಚ್ಚಳವನ್ನು ಕಂಡಿತು. ಇದರಲ್ಲಿ, ಅತಿಹೆಚ್ಚು ಹೊಸ ಅಂಗನವಾಡಿಗಳು ನೆಲಮಂಗಲದಲ್ಲಿದ್ದು, ನಂತರ ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ದೇವನಹಳ್ಳಿ ತಾಲೂಕುಗಳಲ್ಲಿವೆ. ಇದೇ ಅವಧಿಯಲ್ಲಿ ವ್ಯಾಪ್ತಿಗೊಳಗಾದ ಗ್ರಾಮಗಳ ಮತ್ತು ಫಲಾನುಭವಿಗಳ ಸಂಖ್ಯೆಯಲ್ಲಿಯೂ ಅನುಗುಣವಾದ ಹೆಚ್ಚಳವಿದ್ದಿತು. (ಕೋಷ್ಟಕ 5.11)

**ಕೋಷ್ಟಕ 5.11: ಅಂಗನವಾಡಿ ವ್ಯಾಪ್ತಿ ಮತ್ತು ಫಲಾನುಭವಿಗಳು (2008 ಮತ್ತು 2011)**

| ತಾಲೂಕು/ಜಿಲ್ಲೆ | 2008 | | | | 2011 | | | |
|---|---|---|---|---|---|---|---|---|
| | ಅಂಗನ ವಾಡಿಗಳ ಸಂಖ್ಯೆ | ವ್ಯಾಪ್ತಿಯಲ್ಲಿರುವ ಗ್ರಾಮಗಳ ಸಂಖ್ಯೆ | ವ್ಯಾಪ್ತಿಯಲ್ಲಿರುವ ಫಲಾನುಭವಿಗಳು | ಪ್ರತಿ ಅಂಗನವಾಡಿಗೆ ಫಲಾನುಭವಿಗಳು | ಅಂಗನ ವಾಡಿಗಳ ಸಂಖ್ಯೆ | ವ್ಯಾಪ್ತಿಯಲ್ಲಿರುವ ಗ್ರಾಮಗಳ ಸಂಖ್ಯೆ | ವ್ಯಾಪ್ತಿಯಲ್ಲಿರುವ ಫಲಾನುಭವಿಗಳು | ಪ್ರತಿ ಅಂಗನವಾಡಿಗೆ ಫಲಾನುಭವಿಗಳು |
| ದೇವನಹಳ್ಳಿ | 255 | 242 | 13,203 | 52 | 263 | 242 | 15,845 | 60 |
| ದೊಡ್ಡಬಳ್ಳಾಪುರ | 283 | 283 | 17,883 | 63 | 360 | 393 | 39,145 | 109 |
| ಹೊಸಕೋಟೆ | 289 | 236 | 15,589 | 54 | 301 | 236 | 23,546 | 78 |
| ನೆಲಮಂಗಲ | 201 | 194 | 11,250 | 56 | 283 | 291 | 16,850 | 60 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 1,028 | 955 | 57,925 | 56 | 1,207 | 1,162 | 95,386 | 69 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಅಂಗನವಾಡಿ ವ್ಯಾಪ್ತಿಗೆ ಬರುವ ಫಲಾನುಭವಿಗಳ ಅತಿ ಹೆಚ್ಚಳವು ದೊಡ್ಡಬಳ್ಳಾಪುರ ತಾಲೂಕಿನಲ್ಲಿದ್ದು (ಶೇ. 118.90), ನಂತರ ಹೊಸಕೋಟೆ (ಶೇ. 51.04), ನೆಲಮಂಗಲ (ಶೇ. 49.78) ಮತ್ತು ದೇವನಹಳ್ಳಿ ತಾಲೂಕುಗಳಲ್ಲಿವೆ (ಶೇ. 20.01). ಆದರೆ, ಅಂಗನವಾಡಿಗಳು ನೀಡುತ್ತಿರುವ ಸೇವೆಗಳ ಗುಣಮಟ್ಟದ ಬಗ್ಗೆಯೂ ಇದು ಪ್ರಶ್ನೆಗಳನ್ನು ಎಬ್ಬಿಸುತ್ತದೆ - ಫಲಾನುಭವಿಗಳ ಒಟ್ಟು ಸಂಖ್ಯೆಯಲ್ಲಿನ ಹೆಚ್ಚಳವು ಪ್ರತಿ ಅಂಗನವಾಡಿಯು ಸೇವೆ ಸಲ್ಲಿಸುವ ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಿದೆ. ಇದು, ಅವು ನೀಡುವ ಪೌಷ್ಟಿಕತೆಯ, ಶಾಲಾಪೂರ್ವದ ಮತ್ತು ಆರೋಗ್ಯ ಸಂಬಂಧಿತ ಸೇವೆಗಳ ಗುಣಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿವೆಯೇ ಎಂಬುದನ್ನು ಪರಿಶೀಲಿಸುವುದು ಬಹಳ ಮುಖ್ಯವಾಗಿದೆ.

## 5.6 ಹೆರಿಗೆ ಮುಂಚಿನ ಆರೈಕೆ ವ್ಯಾಪ್ತಿ ಮತ್ತು ಗರ್ಭಿಣಿಯರಲ್ಲಿ ರಕ್ತಹೀನತೆ

ಮೊದಲ ತ್ರೈಮಾಸಿಕದ ಅವಧಿಯಲ್ಲಿ ತಾಯಿಯು ಜರ್ಮನ್ ಮೀಸಲ್ಸ್ ಅಥವಾ ರುಬೆಲ್ಲಾದಂತಹ ರೋಗಗಳಿಗೆ ತುತ್ತಾದರೆ ಅಥವಾ ಅಪೌಷ್ಟಿಕತೆಯಿಂದ ಬಳಲಿದರೆ, ಇದು ಭ್ರೂಣಕ್ಕೆ ಖಾಯಂ ಆದ ಹಾನಿಯನ್ನುಂಟು ಮಾಡಬಹುದು; ಇದರಿಂದ ಭ್ರೂಣಕ್ಕೆ ಜನ್ಮದ ನಂತರ ಇಂದ್ರಿಯ ಹಾನಿ ಅಥವಾ ಕುಂಠಿತ ಬೆಳವಣಿಗೆ ಆಗಬಹುದು. ಇದು ಪ್ರಸವ ಪೂರ್ವದ ಆರೈಕೆಯ (ಪ್ರ.ಪೂ.ಆ.) ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ. 2007-08ರಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶೇ. 98.5 ರಷ್ಟು ಗರ್ಭಿಣಿಯರು ಯಾವುದೋ ಒಂದು ಸೌಲಭ್ಯದಲ್ಲಿ (DLHS-3) ಪ್ರಸವಪೂರ್ವ ಆರೈಕೆಯನ್ನು ಪಡೆದುದುದಾಗಿ ವರದಿ ಮಾಡಿದರು. ಅವರಲ್ಲಿ ಬಹಳಷ್ಟು ಮಂದಿ (ಶೇ. 52.9) ಸರ್ಕಾರಿ ಆರೋಗ್ಯ ಸೌಲಭ್ಯಗಳಲ್ಲಿ ಮತ್ತು ಕೆಲವು ಮಂದಿ (ಶೇ. 6.2) ರಾಜ್ಯವು ನೀಡುವ ಸಾಮುದಾಯಿಕ ಆರೋಗ್ಯ ಸೇವೆಗಳನ್ನು ಬಳಸಿಕೊಂಡಿದ್ದರು. ಉಳಿದವರು ಖಾಸಗಿ ಆರೋಗ್ಯ ಸೌಲಭ್ಯಗಳನ್ನು ಪಡೆದುಕೊಂಡರು (DLHS-3).

**ಕೋಷ್ಟಕ 5.12: ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ಬಳಸಿಕೊಳ್ಳಲಾದ ಪ್ರಸವ ಪೂರ್ವ ಆರೈಕೆ ಸೇವೆಗಳು (2013–2014)**

| ಕ್ರಮ ಸಂ. | ಬಳಸಿಕೊಳ್ಳಲಾದ ಪ್ರ.ಪೂ.ಆ. ಸೇವೆಗಳು | ಕರ್ನಾಟಕ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
|---|---|---|---|
| 1.1 | ಪ್ರ.ಪೂ.ಆ.ಗೆ ನೋಂದಾಯಿತರಾದ ಗರ್ಭಿಣಿಯರ ಒಟ್ಟು ಸಂಖ್ಯೆ | 118,268 | 1,266 |
| 1.1.1 | ಮೊದಲ ತ್ರೈಮಾಸಿಕದೊಳಗೆ ನೋಂದಾಯಿತರಾದ ಗರ್ಭಿಣಿಯರ ಸಂಖ್ಯೆ | 76,058 | 944 |
| 1.2 | ಜನನಿ ಸುರಕ್ಷಾ ಯೋಜನೆ (ಜ.ಸು.ಯೋ.)ಅಡಿ ನೋಂದಾಯಿತರಾದ ಗರ್ಭಿಣಿಯರ ಸಂಖ್ಯೆ | 57,989 | 958 |
| 1.3 | ಗರ್ಭಾವಸ್ಥೆಯಲ್ಲಿ 3 ಪ್ರ.ಪೂ.ಆ ಪರೀಕ್ಷೆಗಳನ್ನು ಪಡೆದುಕೊಂಡ ಗರ್ಭಿಣಿಯರ ಸಂಖ್ಯೆ | 119,666 | 3,614 |
| 1.4.1 | ಹಾಲಿ ಗರ್ಭಾವಸ್ಥೆಯಲ್ಲಿ ಟಟಿ1 ಪಡೆದುಕೊಂಡ ಗರ್ಭಿಣಿಯರ ಸಂಖ್ಯೆ | 93,435 | 1,797 |
| 1.4.2 | ಹಾಲಿ ಗರ್ಭಾವಸ್ಥೆಯಲ್ಲಿ ಟಟಿ2 ಅಥವಾ ಬೂಸ್ಟರ್ ಪಡೆದುಕೊಂಡ ಗರ್ಭಿಣಿಯರ ಸಂಖ್ಯೆ | 98,732 | 1,894 |
| 1.5.1 | ರಕ್ತಹೀನತೆಯಿಂದ ಬಳಲುವ, ಅಂದರೆ ಎಚ್ ಬಿ ಮಟ್ಟ<11 ಗರ್ಭಿಣಿಯರ ಸಂಖ್ಯೆ (ಪರೀಕ್ಷೆ ಮಾಡಿದ) | 77,879 | 1,603 |
| 1.5.2 | ಅತಿಯಾದ ರಕ್ತಹೀನತೆಯಿಂದ ಬಳಲುವ, ಅಂದರೆ ಎಚ್ ಬಿ ಮಟ್ಟ<7 ಗರ್ಭಿಣಿಯರ ಸಂಖ್ಯೆ (ಸಂಸ್ಥೆಯಲ್ಲಿ ಪರೀಕ್ಷೆ ಮಾಡಿದ) | 3,518 | 52 |

ಮೂಲ: ಮಾನವ ಅಭಿವೃದ್ಧಿ ವಿಭಾಗ, ಕರ್ನಾಟಕ ಸರ್ಕಾರ, 2013–2014 ಸಾಲಿಗೆ ಮತ್ತು ಏಪ್ರಿಲ್ ಮಾಸದ ವರೆಗೂ ತಾತ್ಕಾಲಿಕ ಅಂಕಿಗಳು

ರಾಜ್ಯದಲ್ಲಿ ಪ್ರ.ಪೂ.ಆ ಗೆ ನೋಂದಾಯಿತರಾದ ಗರ್ಭಿಣಿಯರ ಒಟ್ಟು ಸಂಖ್ಯೆಯನ್ನು ಕೋಷ್ಟಕ 5.12 ಸೂಚಿಸುತ್ತದೆ, ಸುಮಾರು ಶೇ. 75 ರಷ್ಟು ಜನ ನಿರ್ಣಾಯಕವಾದ ಮೊದಲ ತ್ರೈಮಾಸಿಕದಲ್ಲಿ ನೋಂದಾಯಿತರಾದರು; ಈ ಅವಧಿಯಲ್ಲಿ ಏಕ ಕೋಶದ ಭ್ರೂಣವು ಪೂರ್ಣ ರಚಿತ ಬಹು-ಕೋಶ ಜೀವಿಯಾಗಿ ಮಾರ್ಪಡುತ್ತದೆ, ನಂತರ ಕೇವಲ ಗಾತ್ರದಲ್ಲಿ ಬೆಳೆಯುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆದ ಅನುಗುಣವಾದ ಶೇಕಡಾವಾರು ಸುಮಾರು ಅಷ್ಟೇ ಇದ್ದಿತು. ಜಿಲ್ಲೆಯಲ್ಲಿ ಪ್ರ.ಪೂ.ಆ ಸೇವೆಗಳಿಗೆ ನೋಂದಾಯಿತರಾದ ಮಹಿಳೆಯರ ಮೂರರಷ್ಟು ಮಹಿಳೆಯರು 3 ಪ್ರ.ಪೂ.ಆ ಪರೀಕ್ಷೆಗಳನ್ನು ಪಡೆದುಕೊಂಡರು. ಇದು, ಸೂಕ್ತ ಪ್ರಮಾಣದಲ್ಲಿ, ರಾಜ್ಯದಲ್ಲಿ 3 ಪ್ರ.ಪೂ.ಆ ಪರೀಕ್ಷೆಗಳನ್ನು ಪಡೆದುಕೊಂಡ ಪ್ರ.ಪೂ.ಆ ಸೇವೆಗಳಿಗೆ ನೋಂದಾಯಿತರಾದ ಮಹಿಳೆಯರ ಶೇಕಡಾವಾರಿಗಿಂತ ಹೆಚ್ಚಾಗಿದೆ. ಪ್ರ.ಪೂ.ಆ ಗೆ ನೋಂದಾಯಿತರಾದ ಮಹಿಳೆಯರಿಗಿಂತ ಶೇ. 42 ಹೆಚ್ಚು ಮಹಿಳೆಯರು ಟೆಟನಸ್ ಟಾಕ್ಸಾಯ್ಡ್ ಚುಚ್ಚುಮದ್ದನ್ನು (TT1) ಮತ್ತು 50ಶೇ. ಹೆಚ್ಚು ಮಹಿಳೆಯರು ಬೂಸ್ಟರ್ ಶಾಟ್ (TT2)ಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪಡೆದುಕೊಂಡರು. ರಾಜ್ಯದಲ್ಲಿ ಅನುಗುಣವಾದ ಅಂಕಿಗಳು ಶೇ. 79 ಮತ್ತು ಶೇ. 83.5 (ಮತ್ತು ಅದಕ್ಕೂ ಅಧಿಕವಲ್ಲದ) ರಷ್ಟು ಪ್ರ.ಪೂ.ಆ ಸೇವೆಗಳಿಗೆ ನೋಂದಾಯಿತರಾದ ಮಹಿಳೆಯರ ಸಂಖ್ಯೆ. ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ಸಕ್ರಿಯ ಪ್ರ.ಪೂ.ಆ ಸೇವೆಗಳಿರುವುದನ್ನು ಸೂಚಿಸುತ್ತದೆ. ಭಾರತದಲ್ಲಿ ಮತ್ತು ಇತರ ಅಭಿವೃದ್ಧಿ ಶೀಲ ದೇಶಗಳಲ್ಲಿ ರಕ್ತಹೀನತೆಯು ಪ್ರಮುಖ ಪೌಷ್ಟಿಕಾಂಶದ ಕೊರತೆಯ ಸಮಸ್ಯೆಯಾಗಿದೆ. ಇದಕ್ಕೆ ಸಾಮಾನ್ಯವಾಗಿ ತುತ್ತಾಗುವ ವರ್ಗವೆಂದರೆ ಗರ್ಭಿಣಿಯರು ಮತ್ತು ಸಣ್ಣ ಮಕ್ಕಳು. ಕಬ್ಬಿಣ ಯುಕ್ತ ಆಹಾರವನ್ನು ಸರಿಯಾಗಿ ಸೇವಿಸದಿರುವುದು ಮತ್ತು ಧಾನ್ಯ ಆಧಾರಿತ ಆಹಾರದಿಂದ ಇರುವ ಕಬ್ಬಿಣ ಗ್ರಹಿಕೆಯಾಗದಿರುವುದರಿಂದ ಉಂಟಾಗುವ ಸಮಸ್ಯೆಗಳು (ಭಾರತದಲ್ಲಿ, ಪ್ರಮುಖವಾಗಿ ಬಡವರ್ಗಗಳಲ್ಲಿ ಸಾಮಾನ್ಯವಾಗಿರುವುದು), ಈ ದುರ್ಬಲ ವರ್ಗಗಳಲ್ಲಿ, ಕೆಲವು ಸ್ಥಳಗಳಲ್ಲಿ ಸುಮಾರು ಶೇ. 70 ರಷ್ಟು ವ್ಯಾಪನೆಯನ್ನು ವಿವರಿಸುತ್ತದೆ. ರಕ್ತಹೀನತೆಯಿಂದ ಬಳಲುವ ಮಹಿಳೆಯರು ರಕ್ತದ ನಾಶವನ್ನುಂಟುಮಾಡುವ ಹೆರಿಗೆ ಸಂಬಂಧಿ ಜಟಿಲತೆಗಳ ಹೆಚ್ಚು ಅಪಾಯವನ್ನು ಎದುರಿಸುತ್ತಾರೆ. ಅತಿಯಾದ ರಕ್ತಹೀನತೆಯು, ಮಕ್ಕಳಲ್ಲಿ ಕ್ರಿಯೆಯ ಪರಿಣಾಮಗಳಾದ ಆಯಾಸದಿಂದ ಕೆಲಸ ಮಾಡಲು ಕುಗ್ಗಿದ ಸಾಮರ್ಥ್ಯ, ಕುಂಠಿತಗೊಂಡ ರೋಗನಿರೋಧಕ ಶಕ್ತಿ ಮತ್ತು ಕುಂಠಿತ ಕಲಿಕಾ ಸಾಮರ್ಥ್ಯಗಳನ್ನುಂಟು ಮಾಡುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಹೊಸಕೋಟೆಯು ಗಾಬರಿಗೊಳಿಸುವ ಅತಿಯಾದ ರಕ್ತಹೀನತೆಯಿರುವ ಶೇ. 50 ರಷ್ಟು ಗರ್ಭಿಣಿಯರನ್ನು ಹೊಂದಿದ್ದು, ದೊಡ್ಡಬಳ್ಳಾಪುರವು ಕೇವಲ ಶೇ. 0.36 ಮತ್ತು ದೇವನಹಳ್ಳಿಯು ಶೇ. 1.87 ಹೊಂದಿದೆ. ನೆಲಮಂಗಲ ತಾಲೂಕು ಜಿಲ್ಲಾ ಸರಾಸರಿಯಾದ ಶೇ. 15 ರಷ್ಟನ್ನು ಹೊಂದಿದೆ. (ಕೋಷ್ಟಕ 5.13)

**ಕೋಷ್ಟಕ 5.13: ಅತಿಯಾದ ರಕ್ತಹೀನತೆಯಿಂದ ಬಳಲುವ ಗರ್ಭಿಣಿಯರು (2010–2011)**

| ತಾಲೂಕು/ಜಿಲ್ಲೆ | ಪರೀಕ್ಷೆ ಗೊಳಗಾದ ಗರ್ಭಿಣಿಯರು | ಅತಿರಕ್ತ ಹೀನತೆಯಿಂದ ಬಳಲುವ ಗರ್ಭಿಣಿಯರು | ಅತಿರಕ್ತ ಹೀನತೆಯಿಂದ ಬಳಲುವ ಗರ್ಭಿಣಿಯರ ಶೇಕಡಾವಾರು |
|---|---|---|---|
| ದೇವನಹಳ್ಳಿ | 3,849 | 72 | 1.87 |
| ದೊಡ್ಡಬಳ್ಳಾಪುರ | 4,972 | 18 | 0.36 |
| ಹೊಸಕೋಟೆ | 3,526 | 1,763 | 50.00 |
| ನೆಲಮಂಗಲ | 3,315 | 537 | 16.20 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 15,662 | 2,390 | 15.26 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆ

## 5.7 ಸಾಂಸ್ಥಿಕ ಹೆರಿಗೆ

ಸಾಂಸ್ಥಿಕ ಹೆರಿಗೆಯು, ಹೆರಿಗೆಯ ಸಮಯದಲ್ಲಿ ಮತ್ತು ಪ್ರಸವಾನಂತರದ ಜಟಿಲತೆಗಳನ್ನು ನಿರ್ವಹಿಸುವುದನ್ನು ಸುಲಭಮಾಡುತ್ತವೆ. ಮುಂಚೆಯೇ ಚರ್ಚಿಸಿದಂತೆ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲಗಳಲ್ಲಿ ನಿರ್ಬರವಿದೆ ಎಂಬುದನ್ನು ಪರಿಗಣಿಸಿದರೆ, ಇದನ್ನು ಸಾಧಿಸುವುದು ಸುಲಭವಲ್ಲ. ಆದರೂ, ಜಿಲ್ಲೆಯು, ಒಟ್ಟಾರೆಯಾಗಿ, 2001ರಲ್ಲಿ ಸರಾಸರಿ ಶೇ. 65 ರಷ್ಟು ಸಾಂಸ್ಥಿಕ ಹೆರಿಗೆಗಳಿಂದ 2011ರಲ್ಲಿ ಸುಮಾರು ಸರಾಸರಿ ಶೇ. 97 ರಷ್ಟು ಸಾಂಸ್ಥಿಕ ಹೆರಿಗಳವರೆಗೂ ಅದ್ಭುತ ಮುನ್ನಡೆ ಸಾಧಿಸಿದೆ. ಇದರ ಅರ್ಥವೆಂದರೆ, ಪ್ರತಿ ತಾಲೂಕು ಸುಮಾರು ಶೇ. 10 ರಿಂದ 40 ಅಂಕಿಗಳಷ್ಟು ಸುಧಾರಣೆಯನ್ನು ಸಾಧಿಸಿದೆ.

**ಕೋಷ್ಟಕ 5.14: ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆಗಳ ಸಂಖ್ಯೆ**

| ತಾಲೂಕು/ಜಿಲ್ಲೆ | 2001 | | | 2011 | | |
|---|---|---|---|---|---|---|
| | ಒಟ್ಟು ಹೆರಿಗೆಗಳ ಸಂಖ್ಯೆ | ಸಂಸ್ಥೆಗಳಲ್ಲಿ ಹೆರಿಗೆಗಳ ಸಂಖ್ಯೆ | ಸಾಂಸ್ಥಿಕ ಹೆರಿಗೆಗಳ ಶೇಕಡಾವಾರು | ಒಟ್ಟು ಹೆರಿಗೆಗಳ ಸಂಖ್ಯೆ | ಸಂಸ್ಥೆಗಳಲ್ಲಿ ಹೆರಿಗೆಗಳ ಸಂಖ್ಯೆ | ಸಾಂಸ್ಥಿಕ ಹೆರಿಗೆಗಳ ಶೇಕಡಾವಾರು |
| ದೇವನಹಳ್ಳಿ | 2,821 | 1,910 | 67.71 | 3,406 | 3,394 | 99.65 |
| ದೊಡ್ಡಬಳ್ಳಾಪುರ | 2,730 | 1,474 | 53.99 | 4,289 | 4,203 | 97.99 |
| ಹೊಸಕೋಟೆ | 2,516 | 2,012 | 79.97 | 3,173 | 2,901 | 91.43 |
| ನೆಲಮಂಗಲ | 2,570 | 1,542 | 60.00 | 3,582 | 3,510 | 98.00 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 10,637 | 6,938 | 65.23 | 14,450 | 14,008 | 96.94 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಕೋಷ್ಟಕ 5.15: ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ಸಾಂಸ್ಥಿಕ ಹೆರಿಗೆಗಳು (2013-2014)**

| ಕ್ರಮ ಸಂ. | ಸಾಂಸ್ಥಿಕ ಹೆರಿಗೆಯ ವಿವರಗಳು | ಕರ್ನಾಟಕ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
|---|---|---|---|
| 1.1.ಅ | ಮನೆಯಲ್ಲಿ ನಡೆಸಲಾದ ಮತ್ತು ತರಬೇತಿ ಪಡೆದ ವಿಶೇಷ ಹೆರಿಗೆ ಕಾರ್ಯಕರ್ತರು ಅಂದರೆ ವೈದ್ಯರು ಅಥವಾ ದಾದಿ), ನಿರ್ವಹಿಸಿದ ಹೆರಿಗೆಯ ಸಂಖ್ಯೆ | 599 | 2 |
| 1.1.ಬ | ಮನೆಯಲ್ಲಿ ನಡೆಸಲಾದ ಮತ್ತು ತರಬೇತಿ ಪಡೆಯದ ವಿಶೇಷ ಹೆರಿಗೆ ಕಾರ್ಯಕರ್ತರು ಅಂದರೆ ತರಬೇತಿ ಪಡೆದ ಕಾರ್ಯಕರ್ತರು ಅಥವಾ ಸಂಬಂಧಿಕರು ಇತ್ಯಾದಿ), ನಿರ್ವಹಿಸಿದ ಹೆರಿಗೆಯ ಸಂಖ್ಯೆ | 499 | 1 |
| 1.1.ಛ | ಮನೆಯಲ್ಲಿ ನಡೆಸಲಾದ ಮತ್ತು ತರಬೇತಿ ಪಡೆದ ಮತ್ತು ಪಡೆಯದ ಕಾರ್ಯಕರ್ತರು(ಅಂದರೆ 2.1.1.ಎ ಮತ್ತು 2.1.1.ಬಿ ಗಳ ಕೂಡಿಕೆ), ನಿರ್ವಹಿಸಿದ ಹೆರಿಗೆಯ ಒಟ್ಟು ಸಂಖ್ಯೆ | 1,098 | 3 |
| 1.2 | ಮನೆಯಲ್ಲಿ ನಡೆಸಲಾದ ಹೆರಿಗೆಗಳಿಗೆ ಹೆರಿಗೆ 24 ಘಂಟೆಗಳ ಒಳಗೆ ಭೇಟಿ ಮಾಡಲಾದ ನವಜಾತ ಶಿಶುಗಳ ಸಂಖ್ಯೆ | 796 | 1 |
| 2.1 | ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಸಲಾದ ಹೆರಿಗೆಗಳು | 50,999 | 377 |
| 2.2.1 | ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಸಲಾದ ಹೆರಿಗೆಗಳಲ್ಲಿ, ಹೆರಿಗೆಯಾದ 48 ಘಂಟೆಗಳಲ್ಲಿ ಬಿಡುಗಡೆಯಾದ ಮಹಿಳೆಯರ ಸಂಖ್ಯೆ | 18,065 | 189 |
| 3.1 | ಮಾನ್ಯತೆ ಪಡೆದ ಖಾಸಗಿ ಸಂಸ್ಥೆಗಳಲ್ಲಿ ನಡೆಸಲಾದ ಹೆರಿಗೆಗಳು | 20,307 | 319 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ (2013-14 ಸಾಲಿನ ತಾತ್ಕಾಲಿಕ ಅಂಕಿಗಳು)

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮತ್ತು ರಾಜ್ಯಕ್ಕೆ ಸಾಂಸ್ಥಿಕ ಹೆರಿಗೆಗಳ ನಿರ್ದಿಷ್ಟತೆಗಳನ್ನು ಕೋಷ್ಟಕ 5.15 ಸೂಚಿಸುತ್ತದೆ. ಕರ್ನಾಟಕದಲ್ಲಿ ಆಗುವ ಸಾಂಸ್ಥಿಕ ಹೆರಿಗೆಗಳ ಸುಮಾರು ಶೇ. 73 ರಷ್ಟು ಸಾರ್ವಜನಿಕ ಸಂಸ್ಥೆಗಳಲ್ಲಿ ಆಗುತ್ತಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇದು ಕೇವಲ ಶೇ. 54 ಇದೆ; ಇದು ಪ್ರಮಾಣಾನುಗುಣವಾಗಿ ಖಾಸಗಿ ಸೇವೆಗಳಿಗೆ ಹೆಚ್ಚಿನ ಆದ್ಯತೆಯನ್ನು ಸೂಚಿಸುತ್ತದೆ. ಇದಕ್ಕೆ ಕಾರಣ ಲಭ್ಯತೆ ಅಥವಾ ಗುಣಮಟ್ಟದ (ನೈಜ ಅಥವಾ ಊಹಿಸಿದ) ಅಂಶಗಳಿಗೆ ಸಂಬಂಧಿಸಿರಬಹುದು.

## 5.8 ಮಕ್ಕಳ ಪ್ರತಿರಕ್ಷಣೆ

ಭಾರತದಲ್ಲಿ ಪ್ರತಿರಕ್ಷಣೆಯ ಬಗ್ಗೆ ಸಾರ್ವಜನಿಕ ಆರೋಗ್ಯ ನೀತಿಯು, ಮಕ್ಕಳಿಗೆ ಲಸಿಕೆಗಳನ್ನು ಘೋಷಿತ ದಿನಗಳಲ್ಲಿ ಅವರ ಸಮುದಾಯಗಳಿಗೇ ಒಯ್ದು, ಒಂದು ಸರಳವಾದ ಪ್ರತಿರಕ್ಷಣಾ ದಿನಸೂಚಿ ಮತ್ತು ಕುಟುಂಬವು ಪಡೆಯುವ ದಾಖಲೆಗಳನ್ನು ಸ್ಥಾಪಿಸಿ, ಪರಿವೀಕ್ಷಣೆಯನ್ನು ಸುಲಭಗೊಳಿಸಿ, ಅನುಸರಣೆಯನ್ನು ಮಾಡುವಂತೆ ಖಚಿತಪಡಿಸಿಕೊಳ್ಳುತ್ತದೆ. ಲಸಿಕೆ ಮತ್ತು ಇತರ ಸಾಮಗ್ರಿಗಳನ್ನು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸಲಾಗುತ್ತದೆ; ಪ್ರತಿರಕ್ಷಣೆಯ ಸ್ಥಳೀಯ ಏರ್ಪಾಡುಗಳನ್ನು ಪ್ರಾ.ಆ.ಕೇಂ. ಸಿಬ್ಬಂದಿ ಮತ್ತು ಗ್ರಾಮ ಮಟ್ಟದ ಕಾರ್ಯಕರ್ತರು ಮಾಡುತ್ತಾರೆ. ಈ ತಂತ್ರದ ಲಾಭಗಳೆಂದರೆ, ಹೆಚ್ಚಾದ ವ್ಯಾಪ್ತಿ, ಚಿಕ್ಕದಾಗಿಸಿದ ಮತ್ತು ಬಲಗೊಳಿಸಿದ ಕೋಲ್ಡ್ ಚೇನ್ (ಲಸಿಕೆಯ ಪರಿಣಾಮಕಾರಿತ್ವಕ್ಕೆ ಬಹಳ ಅಗತ್ಯವಾದದ್ದು), ಲಸಿಕೆ ಪಡೆಯುವವರಿಗೆ ಕಡಿಮೆಯಾದ ಕ್ರಮನುಚ್ಛ, ರಾಷ್ಟ್ರೀಯ ಆಂದೋಲನಗಳಲ್ಲಿ ಖಾಸಗಿ ಆರೋಗ್ಯ ಸಂಸ್ಥೆಗಳ ತೊಡಗಿಸುವಿಕೆ ಮತ್ತು ಪ್ರಾ.ಆ.ಕೇಂ. ವ್ಯವಸ್ಥೆಯ ಬಲಪಡಿಸುವಿಕೆ. ಭಾರತ ಸರ್ಕಾರದ ಪ್ರತಿರಕ್ಷಣಾ ದಿನಸೂಚಿಯ ಪ್ರಕಾರ ಟ್ಯೂಬರ್ ಕ್ಯುಲೊಸಿಸ್ (BCG), ಡಿಫ್ಥೀರಿಯಾ, ಪೆರ್ಟುಸಿಸ್ (ನಾಯಿ ಕೆಮ್ಮು) ಮತ್ತು ಟೆಟನಸ್ (DPT), ಪೋಲಿಯೊ (OP - ಮೌಖಿಕ ಪೋಲಿಯೊ ಲಸಿಕೆ), ಮೀಸಲ್ಸ್, ಮಂಪ್ಸ್ ಮತ್ತು ರುಬೆಲ್ಲ (MMR) ಗಳಿಗೆ ಲಸಿಕೆಗಳನ್ನು ಸಾಮಾನ್ಯವಾಗಿ ಮಕ್ಕಳಿಗೆ ನೀಡಲಾಗುತ್ತದೆ. 2007-08 ರ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ಪೂರ್ಣವಾಗಿ ಲಸಿಕೆ ನೀಡಲಾದ ಮಕ್ಕಳ ಶೇಕಡಾವಾರು 90.3ಶೇ. ಇದ್ದಿತು (DLHS - 3).

**5.16: ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ಶಿಶು ಪ್ರತಿರಕ್ಷಣೆ (ಏಪ್ರಿಲ್ 2014ರ ವರೆಗೆ)**

| ವಿವರಗಳು | ಕರ್ನಾಟಕ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
|---|---|---|
| ಈ ಮಾಸದಲ್ಲಿ ಪೂರ್ಣವಾಗಿ ಪ್ರತಿರಕ್ಷಣೆ ಪಡೆದ (BCG+DPT123+OPV123+Measles) ಗಂಡು ಮಕ್ಕಳ (9 ರಿಂದ 11 ತಿಂಗಳು) ಒಟ್ಟು ಸಂಖ್ಯೆ | 46,001 | 757 |
| ಈ ಮಾಸದಲ್ಲಿ ಪೂರ್ಣವಾಗಿ ಪ್ರತಿರಕ್ಷಣೆ ಪಡೆದ (BCG+DPT123+OPV123+Measles) ಹೆಣ್ಣು ಮಕ್ಕಳ (9 ರಿಂದ 11 ತಿಂಗಳು) ಒಟ್ಟು ಸಂಖ್ಯೆ | 42,537 | 713 |
| ಈ ಮಾಸದಲ್ಲಿ ಪೂರ್ಣವಾಗಿ ಪ್ರತಿರಕ್ಷಣೆ ಪಡೆದ (BCG+DPT123+OPV123+Measles) ಮಕ್ಕಳ (9 ರಿಂದ 11 ತಿಂಗಳು) ಒಟ್ಟು ಸಂಖ್ಯೆ | 88,538 | 1,470 |
| DPT ಬೂಸ್ಟರ್ ಡೋಸ್ ಪಡೆದ ಶಿಶುಗಳ (16 ತಿಂಗಳಗಿಂತ ಹೆಚ್ಚು) ಸಂಖ್ಯೆ | 69,244 | 1,204 |
| OPV ಬೂಸ್ಟರ್ ಡೋಸ್ ಪಡೆದ ಶಿಶುಗಳ (16 ತಿಂಗಳಗಿಂತ ಹೆಚ್ಚು) ಸಂಖ್ಯೆ | 68,697 | 1,198 |
| ಮೀಸಲ್ಸ್, ಮಂಪ್ಸ್, ರುಬೆಲ್ಲ (MMR) ಲಸಿಕೆ ಪಡೆದ ಶಿಶುಗಳ (16 ತಿಂಗಳಗಿಂತ ಹೆಚ್ಚು) ಸಂಖ್ಯೆ | 8,408 | 266 |
| ಈ ಮಾಸದಲ್ಲಿ ಪೂರ್ಣವಾಗಿ ಪ್ರತಿರಕ್ಷಣೆ ಪಡೆದ (BCG+DPT123+OPV123+Measles ) ಗಂಡು ಮಕ್ಕಳ (12 ರಿಂದ 23 ತಿಂಗಳು) ಒಟ್ಟು ಸಂಖ್ಯೆ | 19,310 | 269 |
| ಈ ಮಾಸದಲ್ಲಿ ಪೂರ್ಣವಾಗಿ ಪ್ರತಿರಕ್ಷಣೆ ಪಡೆದ (BCG+DPT123+OPV123+Measles ) ಹೆಣ್ಣು ಮಕ್ಕಳ (12 ರಿಂದ 23 ತಿಂಗಳು) ಒಟ್ಟು ಸಂಖ್ಯೆ | 17,814 | 245 |
| ಈ ಮಾಸದಲ್ಲಿ ಪೂರ್ಣವಾಗಿ ಪ್ರತಿರಕ್ಷಣೆ ಪಡೆದ (BCG+DPT123+OPV123+Measles) ಮಕ್ಕಳ (12 ರಿಂದ 23 ತಿಂಗಳು) ಒಟ್ಟು ಸಂಖ್ಯೆ | 37,124 | 514 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ (2013-14 ಸಾಲಿನ ತಾತ್ಕಾಲಿಕ ಅಂಕಿಗಳು)

**ಕೋಷ್ಟಕ 5.17: ಶಿಶು ಪ್ರತಿರಕ್ಷಣೆ ಮತ್ತು ವಿಟಾಮಿನ್ ಎ ಪೂರೈಕೆ**

| ವಿವರಗಳು | DLHS -2: 2002-2004 | | DLHS -3: 2007-2008 | |
|---|---|---|---|---|
| | ಒಟ್ಟು | ಗ್ರಾಮೀಣ | ಒಟ್ಟು | ಗ್ರಾಮೀಣ |
| ಪೂರ್ಣ ಪ್ರತಿರಕ್ಷಣೆ (BCG, DPT, ಪೋಲಿಯೊ ಮತ್ತು ಮೀಸಲ್ಸ್ ನ 3 ಡೋಸ್) ಪಡೆದ ಮಕ್ಕಳು (12-23 ತಿಂಗಳು) (ಶೇ.) | 86.5 | 84.1 | 92.5 | 92.2 |
| BCG ಪಡೆದ ಮಕ್ಕಳು (12-23 ತಿಂಗಳು) (ಶೇ.) | 100 | 100 | 100 | 100 |
| ಪೋಲಿಯೊ ಲಸಿಕೆಯ 3 ಡೋಸ್ ಪಡೆದ ಮಕ್ಕಳು (12-23 ತಿಂಗಳು) (ಶೇ.) | 97.5 | 96.8 | 97.5 | 96.9 |
| DPT ಲಸಿಕೆಯ 3 ಡೋಸ್ ಪಡೆದ ಮಕ್ಕಳು (12-23 ತಿಂಗಳು) (ಶೇ.) | 96.5 | 96.8 | 95.8 | 94.8 |
| ಮೀಸಲ್ಸ್ ಲಸಿಕೆ ಪಡೆದ ಮಕ್ಕಳು (12-23 ತಿಂಗಳು) (ಶೇ.) | 87.6 | 84.1 | 91.8 | 91.3 |

ಮೂಲ: DLHS – 2 ಮತ್ತು DLHS – 3

ಪ್ರತಿರಕ್ಷಣೆಯ ವ್ಯಾಪ್ತಿಯ ವಿಷಯದಲ್ಲಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳು ಜಿಲ್ಲೆಯ ಸರಾಸರಿಯೊಂದಿಗೆ ಹೆಚ್ಚುಕಡಿಮೆ ಸಮನಾಗಿವೆ ಮತ್ತು 2007-08 ರಲ್ಲಿ ವ್ಯತ್ಯಾಸವು ಶೇ. 1 ಅಂಕಿಗಿಂತ ಹೆಚ್ಚಾಗಿಲ್ಲ ಎಂದು ಕೋಷ್ಟಕ 5.17 ಸೂಚಿಸುತ್ತದೆ. DLHS - 2 ಮತ್ತು DLHS - 3 ನಡುವಿನ ಅವಧಿಯಲ್ಲಿ ಮೀಸಲ್ಸ್ ವಿರುದ್ಧ ಪ್ರತಿರಕ್ಷಣೆಗೆ ಗ್ರಾಮೀಣ ಪ್ರದೇಶದಲ್ಲಿ ಉತ್ತಮ ವ್ಯಾಪ್ತಿಯು ಗಣನೀಯ ಸುಧಾರಣೆಯಾಗಿದೆ.

## 5.9 ಕಡಿಮೆ ತೂಕದ ಮಕ್ಕಳು ಮತ್ತು ಬಿಎಂಐ (ದೇಹ ರಾಶಿ ಸೂಚ್ಯಂಕ) ಅನುಪಾತ

ಆರಂಭದ ಆರೋಗ್ಯದ ಅಡಿಪಾಯ ಬಹಳ ಮುಖ್ಯ. ಮಕ್ಕಳ ಅಪೌಷ್ಟಿಕತೆ ರೋಗನಿರೋಧಕ ಶಕ್ತಿಯನ್ನು ಕುಂದಿಸುತ್ತದೆ ಮತ್ತು ಸೋಂಕುಗಳ ಅಪಾಯ ಹೆಚ್ಚುತ್ತದೆ. ಇದರಿಂದ ಅಪೌಷ್ಟಿಕತೆ ಮತ್ತಷ್ಟು ಹೆಚ್ಚುತ್ತದೆ. ಅಪೌಷ್ಟಿಕತೆಯನ್ನು ಸಾಮಾನ್ಯವಾಗಿ ಅಳೆಯುವುದು ಕಡಿಮೆ ತೂಕದಿಂದ (ವಯಸ್ಸು ಮತ್ತು ಎತ್ತರಗಳಿಗೆ ಸರಿಯಾದ ತೂಕವಿಲ್ಲದಿರುವುದು). ಭಾರತದಲ್ಲಿ ಅರ್ಧದಷ್ಟು ಮಕ್ಕಳ ಬೆಳವಣಿಗೆ ಕುಂಠಿತವಾಗಿದೆ ಮತ್ತು ತೂಕ ಕಡಿಮೆಯಿದ್ದಾರೆ. ಆದರೆ ಬಹುತೇಕ ಮಕ್ಕಳು ತಮ್ಮ ವಯಸ್ಸಿಗೆ ಸರಿಯಾದ ತೂಕ ಹೊಂದಿದ್ದಾರೆ ಮತ್ತು 5ನೇ ಒಂದು ಭಾಗ ದುರ್ಬಲರಾಗಿದ್ದಾರೆ. ಅಪೌಷ್ಟಿಕತೆಯನ್ನು ಅಳೆಯುವ 5 ಮಾನವ ಮಾಪಕಗಳು- ವಯಸ್ಸಿಗೆ ಸರಿಯಾದ ತೂಕ ಮತ್ತು ಎತ್ತರ, ವಯಸ್ಸಿಗೆ ಸರಿಯಾದ ಬಿಎಂಐ, ಮತ್ತು ಕಡಿಮೆ ಬಿಎಂಐ ಜೊತೆಗೆ ಶಕ್ತಿಹೀನತೆ ಮತ್ತು ಬೆಳವಣಿಗೆ ಕುಂಠಿತಗೊಳ್ಳುವುದು. ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೇಕ್ಷಣ-3 (NFHS-3, 2005-06) ದತ್ತಾಂಶವು ಶಾಲಾ-ಪೂರ್ವ ಮಕ್ಕಳ ವಯಸ್ಸು, ಲಿಂಗ, ಎತ್ತರ, ತೂಕ, ಶಿಶು ಮತ್ತು ಮಗುವಿನ ಆಹಾರ ಅಭ್ಯಾಸಗಳು ಮತ್ತು ಕಳೆದ 15 ದಿನಗಳಲ್ಲಿ ಸೋಂಕುಗಳಿಂದ ಉಂಟಾದ ರೋಗಲಕ್ಷಣಗಳು, ಇವುಗಳ ಬಗ್ಗೆ ಮಾಹಿತಿಗಳನ್ನು ಒದಗಿಸುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಬಿಎಂಐ ಹೆಚ್ಚು ಜನಪ್ರಿಯವಾಗಿದೆ. ಏಕೆಂದರೆ ಅದು ದೇಹದ ಕೊಬ್ಬಿನ ಮಟ್ಟಗಳ ಉತ್ತಮ ಸೂಚಕ. ಬಿಎಂಐ ಹೆಚ್ಚಿದ್ದರೆ ಅಥವಾ ಕಡಿಮೆಯಿದ್ದರೆ ಬಾಲ್ಯದಲ್ಲಿ ಮತ್ತು ನಂತರವೂ ಆರೋಗ್ಯ ಕೆಡುವ ಸಾಧ್ಯತೆಗಳು ಹೆಚ್ಚು. ಇದು ಲೆಕ್ಕ ಮಾಡಲು ಸುಲಭವೂ ಆದ್ದರಿಂದ ಜನಪ್ರಿಯ ಸರ್ವೇಕ್ಷಣಗಳಿಗೆ ಸೂಕ್ತ. ಆದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಈ ಮಾಹಿತಿ ಲಭ್ಯವಿಲ್ಲ. ಏಕೆಂದರೆ NFHS 3 ಅದನ್ನು ಹಿಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 8 ತಾಲೂಕುಗಳಿಗೂ ಸೇರಿ ಒಟ್ಟಿಗೆ ಕೋಷ್ಟಕ ಮಾಡಿದೆ ಮತ್ತು ಅದನ್ನೀಗ ಬಳಸಲು ಸಾಧ್ಯವಿಲ್ಲ.

## 5.10 ಹರಡಬಲ್ಲ ರೋಗಗಳು

ಭಾರತವು ಸೋಂಕು ರೋಗಗಳ ಒಂದು ಗುಂಪನ್ನೇ ಎದುರಿಸುತ್ತಿದೆ. ಪೋಲಿಯೋ, ಕುಷ್ಟ, ಮತ್ತು ಏಡ್ಸ್ ರೋಗಗಳ ವಿರುದ್ಧ ಯಶಸ್ವಿಯಾಗಿ ಹೋರಾಡಿದ್ದರೂ, ನಮ್ಮ ದೇಶ ಕ್ಷಯ, ಮಲೇರಿಯಾ ಮತ್ತು ಕಪ್ಪು ಜ್ವರಗಳಂತಹ ಸೋಂಕು ರೋಗಗಳಿಂದ ತೀವ್ರ ಅಪಾಯಗಳನ್ನು ಎದುರಿಸುತ್ತಿದೆ. ದೇಶದಲ್ಲಿ ಸಂಭವಿಸುವ ಕಾಯಿಲೆಗಳಲ್ಲಿ ಶೇ 30. ಕೊಡುಗೆ ಈ ಕಾಯಿಲೆಗಳದ್ದೇ. ಅತಿ ದೊಡ್ಡ ಸಂಖ್ಯೆಯ ಕ್ಷಯ ರೋಗಿಗಳಿರುವುದು ನಮ್ಮ ದೇಶದಲ್ಲೇ. ಕೆಲವರ ಅಂದಾಜುಗಳ ಪ್ರಕಾರ ಭಾರತದಲ್ಲಿ ಪ್ರತಿ 2 ನಿಮಿಷಗಳಿಗೊಮ್ಮೆ ಒಬ್ಬ ಕ್ಷಯದಿಂದ ಸಾಯುತ್ತಾನೆ. ವಯಸ್ಸಿನ ಲೆಕ್ಕವಿಲ್ಲದೆ ಶೇ. 40 ಭಾರತೀಯರಿಗೆ ಮಯೋಬ್ಯಾಕ್ಟೀರಿಯಾದ ಕ್ಷಯವಿದೆ. ಯಾವುದೇ ಕ್ಷಣದಲ್ಲೂ ಸುಮಾರು 85 ಲಕ್ಷ ಕ್ಷಯ ರೋಗಿಗಳಿದ್ದಾರೆ. ಕ್ಷಯದ ವಿರುದ್ಧ ಹೋರಾಡುವುದು ಬರಬರುತ್ತ ಕಠಿಣವಾಗುತ್ತಿದೆ. ಕಾರಣ, ಔಷಧಕ್ಕೆ ಬಗ್ಗದ ಕ್ಷಯ ಕ್ರಮೇಣ ಹೆಚ್ಚುತ್ತಿದೆ, ಹೊಸ ಹೊಸ ಸವಾಲುಗಳನ್ನು ಒಡ್ಡುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಜಗತ್ತಿನಲ್ಲಿ ಸುಮಾರು 45 ಲಕ್ಷ ಜನ ಬಹು-ಔಷಧಿ ನಿರೋಧಕತೆ ಬಗೆಯ (ಎಂಡಿಆರ್) ಕ್ಷಯಕ್ಕೆ ಬಲಿಯಾಗಿದ್ದಾರೆ. ಅದರಲ್ಲಿ ಹೆಚ್ಚಿನ ಜನರು ಚೀನಾ, ಭಾರತ ಮತ್ತು ರಷ್ಯಾದವರು. ಜನರು ಔಷಧಗಳನ್ನು ತೆಗೆದುಕೊಳ್ಳುವುದನ್ನು ಮಧ್ಯದಲ್ಲೆ ನಿಲ್ಲಿಸಿಬಿಟ್ಟರೆ ಬಹು ಔಷಧ ನಿರೋಧಕತೆ ಉಂಟಾಗುತ್ತದೆ. ಇದರಿಂದ ಮುಂದಿನ ಆರೋಗ್ಯ ಚಿಕಿತ್ಸೆಗಳು ಬಹಳ ಕಷ್ಟ ಮತ್ತು ಸಂಕೀರ್ಣಗೊಳ್ಳುವುದು.

ಇತರ ಅನೇಕ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಎಚ್ಐವಿ ಹರಡುವಿಕೆ ಕಡಿಮೆಯೇ. ಆದರೂ, ಇನ್ನೂ ಸುಮಾರು 30 ಲಕ್ಷ ಜನರು ಈ ವೈರಸ್‌ನೊಂದಿಗೇ ಬದುಕುತ್ತಿದ್ದಾರೆ. ಆ ಲೆಕ್ಕದಲ್ಲಿ ಭಾರತದ ಸ್ಥಾನ ಎರಡನೆಯದ್ದು. ಈ ಸೋಂಕು ಹೆಚ್ಚಾಗಿ ಲೈಂಗಿಕ ಕಾರ್ಯಕರ್ತರು ಮತ್ತು ಅವರ ಗಿರಾಕಿಗಳಲ್ಲಿ, ಪುರುಷ-ಪುರುಷ ಸಲಿಂಗಿಗಳಲ್ಲಿ, ಮೂರನೇ ಲಿಂಗದವರು, ಮತ್ತು ಸೂಜಿ ಮೂಲಕ ಮಾದಕ ದ್ರವ್ಯ ಚುಚ್ಚಿಕೊಳ್ಳುವವರಲ್ಲಿ ಕಂಡುಬರುತ್ತದೆ. ಎಚ್ಐವಿ ಸೋಂಕು ರೋಗನಿರೋಧಕ ವ್ಯವಸ್ಥೆಯನ್ನು ಮಾತ್ರವೇ ನಾಶಪಡಿಸುತ್ತದೆ. ಆದ್ದರಿಂದ ಈ ಸೋಂಕಿರುವವರು ಸಿಕ್ಕ ಸಿಕ್ಕ ಸೋಂಕುಗಳಿಗೆ ತುತ್ತಾಗಬಹುದು. ಪೂರ್ಣ ಪ್ರಮಾಣದ ಏಡ್ಸ್ ರೋಗಿಗಳು ಸಾಮಾನ್ಯವಾಗಿ ಸಾಯುವುದು ಕ್ಷಯ ಅಥವಾ ನ್ಯುಮೋನಿಯಾದಿಂದ.

ಮಲೇರಿಯಾ ಕೂಡ ಭಾರತದ ಸಾರ್ವಜನಿಕ ಆರೋಗ್ಯ ಸಮಸ್ಯೆಗಳಲ್ಲಿ ಮುಂಚೂಣಿಯಲ್ಲಿದೆ. ವಿಶ್ವ ಮಲೇರಿಯಾ ದಿನದಂದು (ಏಪ್ರಿಲ್ 25) ದಿ ಹಿಂದೂ ಹೀಗೆ ವರದಿ ಮಾಡಿತ್ತು; ಹೆಚ್ಚು ಹೆಚ್ಚು ಜನ, ಅದರಲ್ಲೂ ವಿಶೇಷವಾಗಿ ಅಪಾಯ-ಹೆಚ್ಚಿರುವ ಪ್ರದೇಶಗಳಲ್ಲಿ ಬದುಕುತ್ತಿರುವವರು, ದೀರ್ಘಕಾಲಿಕ ಕೀಟನಿರೋಧಿ ನೆಟ್‌ಗಳನ್ನು, ಕ್ಷಿಪ್ರ ರೋಗನಿದಾನ ಕಿಟ್‌ಗಳನ್ನು ಮತ್ತು ರೋಗ ಪತ್ತೆ ಮಾಡಲು ಪ್ರಯೋಗಾಲಯ ಸಲಕರಣೆಗಳನ್ನು, ಮತ್ತು ಆರ್ಟೆಮೈಸಿನಿನ್-ಆಧಾರಿತ ಚಿಕಿತ್ಸಾ ಸಂಯೋಜನೆಗಳನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುವಂತೆ ಮಾಡಲು ವಿಶ್ವ ಸಂಸ್ಥೆ ಹೆಚ್ಚು ಹಣ ಬೇಕೆಂದು ಕರೆ ನೀಡಿದೆ. ಮಲೇರಿಯಾಗೆ ತುತ್ತಾಗುವವರಲ್ಲಿ ಬುಡಕಟ್ಟು ಸಮುದಾಯಗಳು, ವಲಸಿಗರು, ಸಣ್ಣಪುಟ್ಟ ರೈತರು, ಮತ್ತು ಕೃಷಿ-ಅರಣ್ಯ, ಜಲಜನಕಶಕ್ತಿ ಅಣೆಕಟ್ಟುಗಳು, ರಸ್ತೆಗಳು, ನೀರಾವರಿ ಪ್ರಾಜೆಕ್ಟುಗಳು, ಗಣಿಗಾರಿಕೆ ಮತ್ತು ರಬ್ಬರ್ ತೋಟಗಳಲ್ಲಿ ಕೆಲಸ ಮಾಡುವವರೇ ಹೆಚ್ಚು.

ಡೆಂಘೀ ಕಾಯಿಲೆಯಲ್ಲೂ ಭಾರತ ಜಗತ್ತಿನಲ್ಲೇ ಮುಂದಿದೆ. ಡೆಂಘೀ ಜಗತ್ತಿನಲ್ಲೇ ಅತ್ಯಂತ ಕ್ಷಿಪ್ರವಾಗಿ ಹರಡುವ, ಸೊಳ್ಳೆ ಹೊತ್ತೊಯ್ಯುವ ವೈರಲ್ ರೋಗ. ಕಡು ಬಡವರನ್ನು ಅತಿಯಾಗಿ ಬಾಧಿಸುವ vector borne diseases (VBD) ಎಂದರೆ ಉದಾಹರಣೆಗೆ, ಜಪಾನೀ ಮಸ್ತಿಷ್ಕೋದ್ರೇಕ, ದುಗ್ಧಗ್ರಂಥಿಗಳ ಫೈಲೇರಿಯಾಸಿಸ್, ಮತ್ತು ಮರಳ-ಸೊಳ್ಳೆ ಹರಡುವ ಕಪ್ಪು ಜ್ವರ. ಇದಕ್ಕೆ ಕಾರಣ ಅವರು ವಾಸಿಸುವ ಕೊಳಕು ವಾತಾವರಣ. ಭಾರತದಲ್ಲಿ ವರ್ಷಕ್ಕೆ ಸುಮಾರು 250,000 ಜನ ವೈರಲ್ ಹೆಪಟೈಟಿಸ್ ನಿಂದ ಸಾಯುತ್ತಿದ್ದಾರೆ. ಹೆಪಟೈಟಿಸ್ ಎ ಮತ್ತು ಇ ಕಲುಷಿತ ಆಹಾರ ಅಥವಾ ನೀರಿನಿಂದ ಬರುತ್ತದೆ. ಸಾಮಾನ್ಯವಾಗಿ ಹೆಪಟೈಟಿಸ್ ಬಿ, ಸಿ ಮತ್ತು ಡಿ ಜನನ ಪೂರ್ವ ಸಮಯದಲ್ಲಿ ಸೋಂಕಿರುವ ದೇಹ ದ್ರವಗಳ ಸಂಪರ್ಕದಿಂದ ಬರುತ್ತದೆ. ಬಿ ಮತ್ತು ಸಿ ಬಗೆಗಳು ಕೋಟ್ಯಂತರ ಜನರಲ್ಲಿ ದೀರ್ಘಕಾಲಿಕ ಕಾಯಿಲೆಗಳನ್ನು ಉಂಟುಮಾಡುತ್ತವೆ. ಸಾಮಾನ್ಯವಾಗಿ ಅವೆರಡೂ ಒಟ್ಟಿಗೆ ಸೇರಿದಾಗ ಯಕೃತ್ತಿನ ಸಿರೋಸಿಸ್ ಗೆ ಕಾರಣವಾಗುತ್ತವೆ.

ಕೋಷ್ಟಕ 5.18, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2011ರಲ್ಲಿನ ಹರಡಬಲ್ಲ ಮತ್ತು ಹರಡದ ರೋಗಗಳ ಲಕ್ಷಣಗಳ ವ್ಯಾಪನೆಯ ಬಗ್ಗೆ ತಿಳಿಸುತ್ತದೆ. ಇದರ ಪ್ರಕಾರ ಹೊಸಕೋಟೆಯಲ್ಲಿ ಅತಿ ಹೆಚ್ಚಿದೆ (ಶೇ. 49.22), ನಂತರ ನೆಲಮಂಗಲ (ಶೇ. 44.10), ದೇವನಹಳ್ಳಿ (1ಶೇ. 7.12), ಮತ್ತು ದೊಡ್ಡಬಳ್ಳಾಪುರ (ಶೇ. 6.31). ಹರಡಬಲ್ಲ ರೋಗಗಳ ಇರುವಿಕೆ ವಿಷಯದಲ್ಲೂ ಈ ತಾಲೂಕುಗಳ ಕ್ರಮಾಂಕ ಹೀಗೆಯೇ ಇದೆ. ವಿಶೇಷವಾಗಿ, ಹೊಸಕೋಟೆ ಮತ್ತು ನೆಲಮಂಗಲಗಳಲ್ಲಿ ಸಾಂಕ್ರಾಮಿಕ ಕಾಯಿಲೆಗಳ ಪ್ರಕರಣಗಳು ಬಹಳ ಹೆಚ್ಚಾಗಿದೆ.

**ಕೋಷ್ಟಕ 5.18: ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳಿಂದ ಬಾಧಿತರಾದ ಜನರ ಸಂಖ್ಯೆ**

| ತಾಲೂಕು/ಜಿಲ್ಲೆ | 2001 | | | 2008 | | | 2011 | | |
|---|---|---|---|---|---|---|---|---|---|
| | ಸಾಂಕ್ರಾಮಿಕ ರೋಗ | ಸಾಂಕ್ರಾಮಿಕ ವಲ್ಲದ ರೋಗ | ಒಟ್ಟು | ಸಾಂಕ್ರಾಮಿಕ ರೋಗ | ಸಾಂಕ್ರಾಮಿಕ ವಲ್ಲದ ರೋಗ | ಒಟ್ಟು | ಸಾಂಕ್ರಾಮಿಕ ರೋಗ | ಸಾಂಕ್ರಾಮಿಕ ವಲ್ಲದ ರೋಗ | ಒಟ್ಟು |
| ದೇವನಹಳ್ಳಿ | 6,016 | 10,677 | 16,683 | 10,841 | 19,090 | 29,931 | 13,965 | 21,915 | 35,880 |
| ಶೇ. | 3.25 | 5.76 | 9 | 5.34 | 9.4 | 14.74 | 6.67 | 10.45 | 17.12 |
| ದೊಡ್ಡಬಳ್ಳಾಪುರ | 7,090 | 2,595 | 9,685 | 9,907 | 4,368 | 14,275 | 12,290 | 6,627 | 18,917 |
| ಶೇ. | 2.64 | 0.97 | 3.61 | 3.4 | 1.5 | 4.91 | 4.1 | 2.11 | 6.31 |
| ಹೊಸಕೋಟೆ | 38,157 | 19,083 | 57,240 | 59,911 | 27,732 | 87,643 | 97,059 | 36,238 | 133,297 |
| ಶೇ. | 17.15 | 8.58 | 25.73 | 23.17 | 10.72 | 33.89 | 35.84 | 13.38 | 49.22 |
| ನೆಲಮಂಗಲ | 42,636 | 21,318 | 63,954 | 51,514 | 25,757 | 77,271 | 62,000 | 31,000 | 93,000 |
| ಶೇ. | 24.38 | 12.19 | 36.57 | 25.54 | 12.77 | 38.31 | 29.4 | 14.7 | 44.1 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 93,899 | 53,663 | 147,562 | 132,173 | 76,947 | 209,120 | 185,314 | 95,780 | 281,094 |
| ಶೇ. | 11.03 | 6.31 | 17.34 | 13.86 | 8.07 | 21.92 | 18.7 | 9.67 | 28.37 |

ಸೂಚನೆ: 1. ಬಿಡಿ ರೋಗವಾರು ದತ್ತಾಂಶ ಲಭ್ಯವಿಲ್ಲ
2. ಪ್ರತಿಶತ = ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳಿಂದ ಬಾಧಿತರಾದ ಜನರ ಸಂಖ್ಯೆ / ಒಟ್ಟು ಜನಸಂಖ್ಯೆ * 100

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಕೋಷ್ಟಕ 5.19: ಕ್ಷಯ ರೋಗ ಪ್ರಕರಣಗಳ ಸಂಖ್ಯೆ (2010–11 ಮತ್ತು 2011–12).**

| ತಾಲೂಕು/ಜಿಲ್ಲೆ | ಗುರುತಿಸಲಾದ ಕ್ಷಯ ರೋಗಿಗಳ ಸಂಖ್ಯೆ | | | ಗುಣವಾದ ರೋಗಿಗಳು | | |
|---|---|---|---|---|---|---|
| | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ದೇವನಹಳ್ಳಿ | 149 | 69 | 218 | 103 | 55 | 158 |
| ದೊಡ್ಡಬಳ್ಳಾಪುರ | 293 | 129 | 422 | 197 | 87 | 284 |
| ಹೊಸಕೋಟೆ | 195 | 134 | 329 | 181 | 118 | 299 |
| ನೆಲಮಂಗಲ | 173 | 92 | 265 | 134 | 56 | 190 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 810 | 424 | 1,234 | 615 | 316 | 931 |

ಮೂಲ: ಕ್ಷಯ ನಿಯಂತ್ರಣ ಕಾರ್ಯಕ್ರಮ

ನಾಲ್ಕು ತಾಲೂಕುಗಳಲ್ಲಿ ಕ್ಷಯ ಸಮಸ್ಯೆ (ವಾಸ್ತವ ಸಂಖ್ಯೆಗಳಲ್ಲಿ) ಅತಿ ಹೆಚ್ಚಿರುವುದು ದೊಡ್ಡಬಳ್ಳಾಪುರದಲ್ಲಿ (ಕೋಷ್ಟಕ 5.19). ನಂತರ ಹೊಸಕೋಟೆ, ನೆಲಮಂಗಲ, ಮತ್ತು ದೇವನಹಳ್ಳಿ. ಒಂದೇ ಅವಧಿಗೆ ದೇವನಹಳ್ಳಿಯಲ್ಲಿ ದಾಖಲಾದ ಸಂಖ್ಯೆಗಿಂತ ದೊಡ್ಡಬಳ್ಳಾಪುರದಲ್ಲಿ ದುಪ್ಪಟ್ಟಿದೆ. ಎಲ್ಲ ತಾಲೂಕುಗಳಲ್ಲೂ ಪುರುಷ ಕ್ಷಯ ರೋಗಿಗಳ ಸಂಖ್ಯೆ ಹೆಚ್ಚು. ಚಿಕಿತ್ಸೆ ಮತ್ತು ಗುಣವಾಗುವ ವಿಷಯಗಳಲ್ಲೂ ಅವರೇ ಮೊದಲು. ಇಡೀ ಜಿಲ್ಲೆ ಕ್ಷಯ ಕಾಯಿಲೆ ವರದಿಯಾದವರಲ್ಲಿ ಶೇ. 75.45 ರೋಗಿಗಳನ್ನು ಯಶಸ್ವಿಯಾಗಿ ಗುಣಪಡಿಸಿದೆ. ಹಾಗೆ ಯಶಸ್ವಿಯಾದವರಲ್ಲಿ ಶೇ. 74.53 ಮಹಿಳೆಯರಿದ್ದರೆ ಶೇ. 75.93 ಪುರುಷರು. 2008ರಲ್ಲಿ ಎಚ್‌ಐವಿ ಪಾಸಿಟೀವ್ ಪ್ರಕರಣಗಳು ಅತಿ ಹೆಚ್ಚು ಇದ್ದದ್ದು ದೊಡ್ಡಬಳ್ಳಾಪುರದಲ್ಲಿ. ಆದರೆ 2011ರ ವೇಳೆಗೆ ಅತಿ ಹೆಚ್ಚು ಪ್ರಕರಣಗಳು ವರದಿಯಾಗಿದ್ದು ಹೊಸಕೋಟೆಯಿಂದ. ಇದೇ ಅವಧಿಯಲ್ಲಿ ದೊಡ್ಡಬಳ್ಳಾಪುರದಿಂದ ವರದಿಯಾಗುತ್ತಿದ್ದ ಪ್ರಕರಣಗಳು ಕಡಿಮೆಯಾದವು, ದೇವನಹಳ್ಳಿಯಲ್ಲಿ ಹೆಚ್ಚಾದವು. 2008ರಲ್ಲಿ ನಾಲ್ಕರಲ್ಲಿ ಎರಡು ತಾಲೂಕುಗಳಲ್ಲಿ ಎಚ್‌ಐವಿ ಪ್ರಕರಣಗಳು ಮಹಿಳೆಯರಲ್ಲಿ ಹೆಚ್ಚಾದವು. ಆದರೆ 2011ರಲ್ಲಿ ಸನ್ನಿವೇಶ ಬದಲಾಯಿತು, ನಾಲ್ಕರಲ್ಲಿ ಮೂರು ತಾಲೂಕುಗಳಲ್ಲಿ ಪುರುಷ ಮತ್ತು ಮಹಿಳೆ ಇಬ್ಬರಲ್ಲೂ ಎಚ್‌ಐವಿ ಪ್ರಕರಣಗಳು ಸಮನಾಗಿ ವರದಿಯಾದವು. ದಕ್ಷಿಣ ಏಷ್ಯಾದಲ್ಲಿ ಸಾಮಾನ್ಯವಾಗಿ ಮಹಿಳೆ ತನ್ನ ಜೊತೆಗಾರನಿಂದ ಎಚ್‌ಐವಿ ಪಡೆಯುತ್ತಾಳೆ. ಈ ಜೊತೆಗಾರ ಹಲವು ಜೊತೆಗಾರ್ತಿಯರನ್ನು ಹೊಂದಿರುತ್ತಾನೆ. ಅಂದರೆ, ಈ ತಾಲೂಕುಗಳಲ್ಲಿ ಒಂದೋ ಪುರುಷರು ಹೆಚ್ಚಾಗಿ ವಲಸೆ ಹೋಗಿದ್ದಾರೆ ಅಥವಾ ಮರಣಹೊಂದಿದ್ದಾರೆ. 2008-2011 ಅವಧಿಯಲ್ಲಿ ಹೊಸಕೋಟೆಯಲ್ಲಿ ಪುರುಷ ಮತ್ತು ಮಹಿಳೆಯರಲ್ಲಿ ಎಚ್‌ಐವಿ ಪ್ರಕರಣಗಳ ಸನ್ನಿವೇಶ ತಲೆಕೆಳಕಾಗಿದೆ (ಕೋಷ್ಟಕ 5.20). ಇದಕ್ಕೆ ಕಾರಣ ಬಹುಶಃ ಕಾಂಡೊಮ್ ಬಳಕೆಯ ಮತ್ತು ತಿಳಿವಳಿಕೆಯ ಹೆಚ್ಚಳ. ನಂತರ ನಡೆಸಿದ ರಡಾರ್ ವಿಶ್ಲೇಷಣೆ ಕೂಡ ಇದನ್ನೇ ಸೂಚಿಸುತ್ತದೆ.

**ಕೋಷ್ಟಕ 5.20: ಎಚ್‌ಐವಿ ಪಾಸಿಟಿವ್ ಪ್ರಕರಣಗಳ ಸಂಖ್ಯೆ (2008 ಮತ್ತು 2011)**

| ತಾಲೂಕು/ಜಿಲ್ಲೆ | 2008 | | | 2011 | | |
|---|---|---|---|---|---|---|
| | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ |
| ದೇವನಹಳ್ಳಿ | 35 | 18 | 17 | 56 | 31 | 25 |
| ಶೇ. | 0.02 | 0.01 | 0.01 | 0.03 | 0.01 | 0.01 |
| ದೊಡ್ಡಬಳ್ಳಾಪುರ | 107 | 35 | 72 | 97 | 46 | 51 |
| ಶೇ. | 0.04 | 0.01 | 0.02 | 0.03 | 0.02 | 0.02 |
| ಹೊಸಕೋಟೆ | 55 | 20 | 35 | 119 | 74 | 45 |
| ಶೇ. | 0.02 | 0.01 | 0.01 | 0.04 | 0.03 | 0.02 |
| ನೆಲಮಂಗಲ | 86 | 30 | 56 | 92 | 43 | 49 |
| ಶೇ. | 0.04 | 0.01 | 0.02 | 0.04 | 0.02 | 0.02 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆ | 283 | 103 | 180 | 364 | 194 | 170 |
| ಶೇ. | 0.03 | 0.01 | 0.02 | 0.04 | 0.02 | 0.02 |

ಸೂಚನೆ: ಪ್ರತಿಶತ(ಶೇ.) = ಒಟ್ಟು/ಪುರುಷ/ಮಹಿಳೆ ಎಚ್‌ಐವಿ ಪಾಸಿಟೀವ್ ಪ್ರಕರಣಗಳು / ಒಟ್ಟು ಜನಸಂಖ್ಯೆ * 100.
ಮೂಲ: ಜಿಲ್ಲಾ ಅಂಕಿ-ಅಂಶಗಳ ನೋಟ ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕೋಷ್ಟಕ 5.21 ಸೂಚಿಸುವಂತೆ 2008-2011 ಅವಧಿಯಲ್ಲಿ ಜಿಲ್ಲೆಯಲ್ಲಿ Anti Retroviral Therapy (ART) ಗೆ ನೋಂದಾಯಿಸಿಕೊಂಡವರ ಸಂಖ್ಯೆ ಶೇ. 10 ಅಂಕಗಳಷ್ಟು ಏರಿದೆ. ಮಹಿಳೆಯರ ಸಂಖ್ಯೆ ಶೇ. 30 ಅಂಕಗಳಷ್ಟು ಏರಿದ್ದರೆ, ಪುರುಷರ ಸಂಖ್ಯೆ ಶೇ. 10 ಅಂಕಗಳಷ್ಟು ಇಳಿದಿದೆ. ತಾಲೂಕುಗಳಲ್ಲಿ ದೊಡ್ಡಬಳ್ಳಾಪುರ ಚಿಕಿತ್ಸೆ ಪಡೆದವರ ಸಂಖ್ಯೆಯಲ್ಲಿ ಮೊದಲಿದೆ (ಶೇ. 90.72). 2008ರಲ್ಲಿ ದೇವನಹಳ್ಳಿ ಮೊದಲ ಸ್ಥಾನದಲ್ಲಿತ್ತು. ದೊಡ್ಡಬಳ್ಳಾಪುರದ ಸಂಖ್ಯೆ ಜಿಲ್ಲೆಯ ಸರಾಸರಿಯನ್ನು ಶೇ. 3 ಅಂಕಗಳಿಗಿಂತಲೂ ಹೆಚ್ಚು ಅಂಕಗಳಿಂದ ಮೀರಿಸಿದೆ. ಉಳಿದೆರಡು ತಾಲೂಕುಗಳಲ್ಲಿ 8 ಮತ್ತು ಶೇ. 13 ಅಂಕಗಳ ಹೆಚ್ಚಳ ಕಂಡಿದೆ.

**ಕೋಷ್ಟಕ 5.21: ಚಿಕಿತ್ಸೆಗೆ ನೋಂದಾಯಿಸಿಕೊಂಡ ಎಚ್ಐವಿ ಪ್ರಕರಣಗಳ ಪ್ರಮಾಣ ಶೇ.**

| ತಾಲೂಕು/ಜಿಲ್ಲೆ | 2008 | | | 2011 | | |
|---|---|---|---|---|---|---|
| | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ |
| ದೇವನಹಳ್ಳಿ | 80.00 | 88.89 | 70.59 | 76.79 | 67.74 | 88.00 |
| ದೊಡ್ಡಬಳ್ಳಾಪುರ | 71.96 | 91.43 | 62.50 | 90.72 | 91.30 | 90.20 |
| ಹೊಸಕೋಟೆ | 70.91 | 85.00 | 62.86 | 78.15 | 68.92 | 93.33 |
| ನೆಲಮಂಗಲ | 70.93 | 86.67 | 62.50 | 83.70 | 79.07 | 87.76 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 72.44 | 88.35 | 63.33 | 82.69 | 76.29 | 90.00 |

ಮೂಲ: ಆರೋಗ್ಯ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

## 5.11 ಆರೋಗ್ಯ ರಕ್ಷಣೆಯನ್ನು ಖಾತ್ರಿಪಡಿಸಲು ಜಿಲ್ಲಾ ಪ್ರತಿಕ್ರಿಯೆ

ಇತರ ಎಲ್ಲ ಜಿಲ್ಲೆಗಳಲ್ಲಿದ್ದಂತೆ ಈ ಜಿಲ್ಲೆಯಲ್ಲೂ ಆಸ್ಪತ್ರೆಗಳ ಮತ್ತು ಆರೋಗ್ಯ ಕೇಂದ್ರಗಳ ಜಾಲವಿರುವ ಒಂದು ಸಾರ್ವಜನಿಕ ಆರೋಗ್ಯ ರಕ್ಷಣಾ ಸೌಲಭ್ಯವಿದೆ. ಸಾರ್ವಜನಿಕ ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು ಸುಧಾರಿಸಲು ಅಥವಾ ಆರೋಗ್ಯ ರಕ್ಷಣೆಯನ್ನು ಪಡೆಯಲು ಸುಲಭವಾಗಿಸಲು ಕೇಂದ್ರ ಅಥವಾ ರಾಜ್ಯ ಸರ್ಕಾರ ಆರಂಭಿಸಿರುವ ಕೆಲವಾರು ಪ್ರಮುಖ ಆರೋಗ್ಯ ಯೋಜನೆಗಳು ಈ ಜಿಲ್ಲೆಯಲ್ಲಿದೆ. ಉದಾ: ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (NRHM) ಮತ್ತು ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನಾ (RSBY) ಮತ್ತು ಯಶಸ್ವಿನಿಯಂತಹ ಕೆಲವಾರು ಆರೋಗ್ಯ ವಿಮಾ ಯೋಜನೆಗಳು.

2005ರಲ್ಲಿ ಆರಂಭವಾದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (NRHM) ಗ್ರಾಮೀಣ ಜನರಿಗೆ, ವಿಶೇಷವಾಗಿ ದುರ್ಬಲ ವರ್ಗಗಳಿಗೆ ಸುಲಭವಾಗಿ, ಕೈಗೆಟಕುವಂತೆ ಮತ್ತು ಗುಣಮಟ್ಟದ ಆರೋಗ್ಯ ರಕ್ಷಣೆಯ ಸೌಲಭ್ಯವನ್ನು ಒದಗಿಸುವ ಉದ್ದೇಶ ಹೊಂದಿದೆ. ಅದಕ್ಕಾಗಿ ಕೆಲವಾರು ಮುಖ್ಯ ಲಕ್ಷಣಗಳನ್ನು ಹೊಂದಿದೆ-ನೋಡಿ nrhm.gov.in. ಅವುಗಳಲ್ಲಿ ಕೆಲವು: ಸಾರ್ವಜನಿಕ ಆರೋಗ್ಯ ಸರಬರಾಜು ವ್ಯವಸ್ಥೆ ಸಂಪೂರ್ಣವಾಗಿ ಕಾರ್ಯೋನ್ಮುಖವಾಗಬೇಕು ಮತ್ತು ಸಮುದಾಯಕ್ಕೆ ಉತ್ತರಿಸಬೇಕು, ಮಾನವ ಸಂಪನ್ಮೂಲಗಳ ನಿರ್ವಹಣೆ, ಸಮುದಾಯವನ್ನು ಒಳಗೊಳ್ಳುವುದು, ವಿಕೇಂದ್ರೀಕರಣ, ಕಟ್ಟುನಿಟ್ಟಾದ ಮೇಲ್ವಿಚಾರಣೆ ಮತ್ತು ಮಾನಕಗಳ ವಿರುದ್ಧ ಮೌಲ್ಯಮಾಪನ, ಗ್ರಾಮ ಮಟ್ಟದಿಂದ ಮೇಲಕ್ಕೆ ಆರೋಗ್ಯ ಮತ್ತು ಸಂಬಂಧಿತ ಕಾರ್ಯಕ್ರಮಗಳ ನ್ನು ಒಮ್ಮುಖವಾಗಿಸುವುದು, ನಾವೀನ್ಯಗಳು ಮತ್ತು ಹೊಂದಿಕೊಳ್ಳಬಲ್ಲ ಹಣಕಾಸು ಸೌಲಭ್ಯಗಳು ಮತ್ತು ಆರೋಗ್ಯ ಸೂಚಕಗಳನ್ನು ಸುಧಾರಿಸಲು ಮಧ್ಯಸ್ಥಿಕೆಗಳು. ಈಗಿರುವ ಗ್ರಾಮೀಣ ಆರೋಗ್ಯ ಮೂಲಭೂತ ಸೌಲಭ್ಯ ಮತ್ತು ಕಾರ್ಯನಿರ್ವಾಹಕರಿಗೆ ಸಂಬಂಧಿಸಿದಂತೆ ಗಟ್ಟಿಯಾದ ಸೇವಾ ಗ್ಯಾರಂಟಿಗಳನ್ನು ನೀಡುವುದರ ಜೊತೆಗೆ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಜನನೀ ಸುರಕ್ಷಾ ಯೋಜನೆ (ಜೆಎಸ್‌ವೈ) ಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಜೆಎಸ್‌ವೈ, ಒಂದು ನಗದು ವರ್ಗಾವಣೆ ಯೋಜನೆ. ಇದರಲ್ಲಿ ಬಿಪಿಎಲ್ ಮತ್ತು ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡ ವರ್ಗಗಳಿಗೆ ಸೇರಿದ ಮಹಿಳೆಯರು ಮೊದಲ ಎರಡು ಹೆರಿಗೆಗಳಿಗೆ ನಗದು ಪಡೆಯಲು ಅರ್ಹರಾಗುತ್ತಾರೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಜಾಲತಾಣವು ರಾಜ್ಯ ಹಾಗೂ ಜಿಲ್ಲಾ ನಿರ್ದಿಷ್ಟ ವರದಿಗಳನ್ನು ಒದಗಿಸುತ್ತದೆ. ಇವುಗಳನ್ನು ವಲಯ ಮೌಲ್ಯಮಾಪನ ತಂಡಗಳು (RET) ಸಿದ್ಧಪಡಿಸುತ್ತವೆ[15]. ಇವುಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಹೇಗೆ ಸಾಗುತ್ತಿದೆ ಎಂಬುದರ ಬಗ್ಗೆ ಕೆಲವು ಒಳನೋಟಗಳನ್ನು ಒದಗಿಸುತ್ತವೆ. 2011 ಏಪ್ರಿಲ್‌ನಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಬಗ್ಗೆ ಮುಖ್ಯ ಗಮನಿಕೆಗಳಲ್ಲಿ ಕೆಲವು ಹೀಗಿವೆ: ಜಿಲ್ಲೆಯಲ್ಲಿ, ಲೇಡಿ ಹೆಲ್ತ್ ವಿಸಿಟರ್ (ಎಲ್‌ಎಚ್‌ವಿ) ಹುದ್ದೆಗಳು ಮಂಜೂರಾದದ್ದು 24, ಭರ್ತಿಯಾದದ್ದು 7; ಬಹೂಪಯೋಗಿ ಆರೋಗ್ಯ ಕಾರ್ಯಕರ್ತರು (MPHW) (ಪುರುಷ) 107 ಹುದ್ದೆ ಮಂಜೂರಾಗಿದೆ 49 ಭರ್ತಿಯಾಗಿದೆ ಮತ್ತು ಮಹಿಳಾ MPHW 207 ಹುದ್ದೆ ಮಂಜೂರಾಗಿದೆ 18 ಭರ್ತಿಯಾಗಿದೆ.

2009-10ರಲ್ಲಿ ಜೆಎಸ್‌ವೈ ಗೆ ಜನನ ನಂತರ ಆರೈಕೆ (ಎಎನ್‌ಸಿ)ಗಾಗಿ 21,180 ಪ್ರಕರಣಗಳು ನೋಂದಾಯಿಸಲ್ಪಟ್ಟರೆ 2010 ಏಪ್ರಿಲ್-2011 ಫೆಬ್ರವರಿವರೆಗೆ 23,926 ಪ್ರಕರಣಗಳು. 2009-10ರಲ್ಲಿ 13,160 ಹೆರಿಗೆಗಳು ನಡೆದರೆ 2010 ಏಪ್ರಿಲ್-2011 ಫೆಬ್ರವರಿವರೆಗೆ 10,952. 2009-10ರಲ್ಲಿ 6,892 ಫಲಾನುಭವಿಗಳಿಗೆ ಜೆಎಸ್‌ವೈ ನಗದು ಪ್ರೋತ್ಸಾಹಧನ ನೀಡಲಾದರೆ 2010 ಏಪ್ರಿಲ್-2011 ಫೆಬ್ರವರಿವರೆಗೆ 6,558 ಫಲಾನುಭವಿಗಳಿಗೆ. ಜೆಎಸ್‌ವೈ ಫಲಾನುಭವಿಗಳ ರಿಜಿಸ್ಟರನ್ನು ಮುದ್ರಿಸಲಾಯಿತು. ಎಲ್ಲ ಫಲಾನುಭವಿಗಳಿಗೂ ಜೆಎಸ್‌ವೈ ಚೀಟಿಗಳನ್ನು ನೀಡಲಾಯಿತು. 35 ಜೆಎಸ್‌ವೈ ಫಲಾನುಭವಿಗಳನ್ನು ಆಯ್ಕೆಮಾಡಿ 27 ಜನರನ್ನು ಸ್ಯಾಂಪಲ್ ಪರಿಶೀಲನೆಗೆ ಒಳಪಡಿಸಲಾಯಿತು. ಎಲ್ಲ ಫಲಾನುಭವಿಗಳೂ ತಮಗೆ ನಗದು ಪ್ರೋತ್ಸಾಹ ಧನ ಸಕಾಲಕ್ಕೆ ಸಿಕ್ಕಿತು ಎಂದು ಹೇಳಿದ್ದಾರೆ. ಆಶಾ ಕಾರ್ಯಕರ್ತರು / ಎಎನ್‌ಎಂ ಹೆರಿಗೆಯ ನಂತರ ಅನುಸರಣಾ ಭೇಟಿಗಳನ್ನು ನೀಡಿದ್ದಾರೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಅಡಿಯಲ್ಲಿ ಎಲ್ಲ ಆರೋಗ್ಯ ಸೌಲಭ್ಯಗಳನ್ನು ಒಂದು ಖಚಿತ ಮೊತ್ತದ ಹಣದೊಂದಿಗೆ-ಸಂಯುಕ್ತ ಅನುದಾನ-ಒದಗಿಸಲಾಗುತ್ತದೆ. ಇದನ್ನು ತನ್ನ ವಿವೇಚನೆಯಲ್ಲಿ, ಆರೋಗ್ಯ ಸೇವೆಗಳ ಗುಣಮಟ್ಟವನ್ನು ಸುಧಾರಿಸಲು ಬಳಸಬಹುದು. ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಅಡಿಯಲ್ಲಿ ಆರೋಗ್ಯ ಸೇವೆಗಳಿಗೆ ವಿತರಿಸಬಲ್ಲ, ಮೂರು ಹೊಂದಿಕೊಳ್ಳಬಲ್ಲ ಗುಣವುಳ್ಳ ವಿಭಿನ್ನ ಬಗೆಯ ನಿಧಿಗಳಿವೆ. ಅವು, ಆರೋಗ್ಯ ರಕ್ಷಾ ಸಮಿತಿ (ಎಆರ್‌ಎಸ್) ಕಾರ್ಪಸ್ ಗ್ರ್ಯಾಂಟ್, ವಾರ್ಷಿಕ ನಿರ್ವಹಣಾ ಗ್ರ್ಯಾಂಟ್ (ಎಎಂಜಿ) ಮಯ್ಯು ಸಂಯುಕ್ತ ನಿಧಿಗಳು. ಮೂಲಭೂತ ಸೌಲಭ್ಯಗಳು, ರೋಗಿ ಕಲ್ಯಾಣ ಮತ್ತು ಇತರ ಸಾಂಪ್ರದಾಯಿಕ ನಿಧಿ ಒದಗಿಸುವುದರ ವ್ಯಾಪ್ತಿಯ ಆಚೆಗೆ ಇರುವ ಆರೋಗ್ಯ ಸೌಲಭ್ಯಗಳಿಗೆ ನಿಧಿ ಒದಗಿಸಲು ಹಳ್ಳಿ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳನ್ನು ಹಳ್ಳಿಯ ಮಟ್ಟದಲ್ಲಿ ಸ್ಥಾಪಿಸಲಾಗಿದೆ.

ರಾಜ್ಯ ಆರೋಗ್ಯ ವ್ಯವಸ್ಥೆಗಳ ಸಂಪನ್ಮೂಲ ಕೇಂದ್ರದ (SHSRC) ಜೊತೆಗೆ 2012 ರಲ್ಲಿ ನಡೆಸಿದ ಸಿಬಿಪಿಎಸ್ ಒಂದು ಅಧ್ಯಯನದ ಬೆಂಗಳೂರು ಗ್ರಾಮಾಂತರ ಜಿಲ್ಲೆ ಕೂಡ ಅಧ್ಯಯನದ ಒಂದು ಭಾಗವಾಗಿತ್ತು. ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ಸಂಯುಕ್ತ ನಿಧಿಯನ್ನು ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಉತ್ತೇಜನ ಸಿಗುತ್ತಿಲ್ಲ ಎಂದು ಅಧ್ಯಯನವು ಹೇಳಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಷಯದಲ್ಲಿ ಅದು ಮತ್ತಷ್ಟು ಸತ್ಯ. ಬಹುತೇಕ ಆರೋಗ್ಯ ಸೌಲಭ್ಯಗಳು ಸಂಯುಕ್ತ ನಿಧಿಗಳ ಅಡಿಯಲ್ಲಿ ಬಿಡುಗಡೆಯಾದ ನಿಧಿಗಳ ಇಬ್ಭಾಗೀಕರಣದ - ARS ಮತ್ತು AMG - ಬಗ್ಗೆ ತಿಳಿದಿರಲಿಲ್ಲ. ಬಹುಪಾಲು

[15] ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) website - http://nrhm.gov.in/

ಆರೋಗ್ಯ ಸೌಲಭ್ಯಗಳು ಕಾರ್ಯಾಚರಣೆ ಮಾರ್ಗದರ್ಶಿಕೆಗಳು 'ಅವಕಾಶವಿಲ್ಲ' ಎಂದ ವರ್ಗದ ಅಡಿಯಲ್ಲೇ ನಿಧಿಗಳನ್ನು ವ್ಯಯಿಸುತ್ತಿದ್ದವು. ಈ ಆರೋಗ್ಯ ಸೌಲಭ್ಯಗಳಲ್ಲಿ ತಲಾ ನಿಧಿ ಸ್ವೀಕಾರದಲ್ಲೂ ಬಹಳ ವ್ಯತ್ಯಯಗಳಿದ್ದವು ಎನ್ನುತ್ತದೆ ಈ ಅಧ್ಯಯನ[16]. ಮಾನ್ಯ ಮಾಡಿದ ಮಾನದಂಡಗಳ ಪ್ರಕಾರ, ಒಂದು ಸಾರ್ವಜನಿಕ ಆರೋಗ್ಯ ಸೌಲಭ್ಯ ಮಾನದಂಡಗಳ ಪ್ರಕಾರ ಒಂದು ಕಾಲಾವಧಿಗೆ ಒಂದು ಜನಸಂಖ್ಯೆಗೆ ಸೇವೆ ಒದಗಿಸಬೇಕು. ಆದರೆ ಈ ಜನಸಂಖ್ಯೆಗಳಲ್ಲಿ ಭಾರಿ ವ್ಯತ್ಯಾಸಗಳಿವೆ. ಆದ್ದರಿಂದ ಈ ಅಧ್ಯಯನವು ಆರೋಗ್ಯ ಸೌಲಭ್ಯವು ಸೇವೆ ಸಲ್ಲಿಸುವ ಜನಸಂಖ್ಯೆಯ ಮೇಲೆ ಸಂದರ್ಭಾತ್ಮಕ ಹಣಕಾಸು ಸೂತ್ರವನ್ನು ಮುಂದಿಡುತ್ತದೆ. ಇದರಿಂದ ನಿಧಿ ಹಂಚಿಕೆಯಲ್ಲಿ ತರ್ಕವಿರುತ್ತದೆ ಮತ್ತು ನ್ಯಾಯವಿರುತ್ತದೆ. ಈ ಬಗೆಯ ನಿಧಿ ಮರುಹಂಚಿಕೆಯಲ್ಲಿ ನಿಧಿಗಳು ಅಗತ್ಯಕ್ಕೆ ತಕ್ಕಂತೆ ಬಳಕೆಯಾಗುವುದರ ಸಾಧ್ಯತೆಗಳೂ ಹೆಚ್ಚುತ್ತವೆ ಮತ್ತು ಸಾರ್ವಜನಿಕ ಆರೋಗ್ಯ ಸೌಲಭ್ಯಗಳ ಸಾಮರ್ಥ್ಯವನ್ನೂ ಹೆಚ್ಚಿಸುತ್ತದೆ. ಉತ್ತಮ ಸಾಧನೆಯನ್ನು ಉತ್ತೇಜಿಸುವುದಿಲ್ಲ ಮತ್ತು ಕಳಪೆ ಸಾಧನೆಯನ್ನು ಉತ್ತೇಜಿಸುತ್ತದೆ. ಹೀಗೆ, ಬದಲಿ ನೀತಿಯನ್ನು ಅನುಷ್ಠಾನಗೊಳಿಸುವ ಮೂಲಕ ರಾಜ್ಯವು ಉಳಿದ ನಿಧಿಗಳನ್ನು ಸಮರ್ಥವಾಗಿ ಬಳಸಬಹುದಾಗಿದೆ.

ಆಶಾ ಕಾರ್ಯಕರ್ತರ ಸಂದರ್ಭದಲ್ಲಿ, ಜಿಲ್ಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಅಡಿಯಲ್ಲಿ 2011 ಮಾರ್ಚ್‌ವರೆಗೆ ಒಟ್ಟು 672 ಆಶಾಗಳನ್ನು ನೇಮಕಮಾಡಿಕೊಳ್ಳಲಾಗಿದೆ ಎಂದು RET ವರದಿ ಮಾಡಿದೆ. ಎಲ್ಲರಿಗೂ ತರಬೇತು ನೀಡಿ ಔಷಧದ ಕಿಟ್‌ಗಳನ್ನು ನೀಡಲಾಗಿದೆ. 2011-12ರಲ್ಲಿ 160 ಹೊಸ ಆಶಾಗಳನ್ನು ಸೇರಿಸಿಕೊಳ್ಳುವ ಪ್ರಸ್ತಾಪವಿದೆ. ಸಂದರ್ಶಿಸಿದ ಸ್ಯಾಂಪಲ್ ಸಂಸ್ಥೆಗಳಲ್ಲಿ 15 ಆಶಾಗಳನ್ನು ಸಂಪರ್ಕಿಸಲಾಯಿತು. ಮೇಲೆ ತಿಳಿಸಿದಂತೆ ಅವರಿಗೆಲ್ಲ ತರಬೇತು ಮತ್ತು ಔಷಧದ ಕಿಟ್ ನೀಡಲಾಗಿದೆ. ಸಾಧನೆ ಆಧಾರಿತ ಸಂಭಾವನೆಯನ್ನು ನಿಯಮಿತವಾಗಿ ನೀಡಲಾಗಿದೆ. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಅಡಿಯಲ್ಲಿ ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿಗಳ ಕುರಿತಾಗಿ: ಜಿಲ್ಲೆಯಲ್ಲಿರುವ 98 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ 951 ಕಂದಾಯ ಗ್ರಾಮಗಳಿಗೆ 763 ಗ್ರಾಮ ಆರೋಗ್ಯ ನೈರ್ಮಲ್ಯ ಸಮಿತಿಗಳನ್ನು ಸ್ಥಾಪಿಸಲಾಗಿದೆ.

ಜಿಲ್ಲೆಯಲ್ಲಿರುವ ಜಿಲ್ಲೆಯಲ್ಲಿರುವ 43 ಪ್ರಾ.ಆ.ಕೇಂ.ಗಳಲ್ಲಿ 17 ಪ್ರಾ.ಆ.ಕೇಂ.ಗಳನ್ನು 24ಥ7 ಗಂಟೆಗಳ ಆರೈಕೆ ನೀಡುವ ವ್ಯವಸ್ಥೆಗೆ ಗುರುತಿಸಲಾಗಿದೆ. ಈ 17 ಕೇಂದ್ರಗಳಲ್ಲಿ ಕೇವಲ 8ರಲ್ಲಿ ಮಾತ್ರ 2 ವೈದ್ಯಕೀಯ ಅಧಿಕಾರಿಗಳು ಇದ್ದಾರೆ, ಮತ್ತೆ 8ರಲ್ಲಿ 3 ಸ್ಟಾಫ್ ನರ್ಸುಗಳನ್ನು ನೇಮಿಸಲಾಗಿದೆ. ಗುತ್ತಿಗೆ ಸ್ಟಾಫ್ ನರ್ಸುಗಳ ಕೂಲಿದ ಹೊರತಾಗಿ ಈ ಕೇಂದ್ರಗಳಿಗೆ ಯಾವುದೇ ಪ್ರತ್ಯೇಕ ಬಜೆಟ್ ಬಿಡುಗಡೆಯಾಗಿಲ್ಲ. 2010-11 ಅವಧಿಯಲ್ಲಿ 24X7 ಗಂಟೆಗಳ ಸೇವೆ ಸಲ್ಲಿಸುತ್ತಿದ್ದ 17ರಲ್ಲಿ 7 ಪಿಎಚ್‌ಸಿ ಗಳು ತಿಂಗಳಿಗೆ ಕನಿಷ್ಠ 10 ಹೆರಿಗೆಗಳ ಗುರಿಯನ್ನು ಸಾಧಿಸಿರಲಿಲ್ಲ.

RET, ಭೌತಿಕ ಮೂಲಭೂತ ಸೌಲಭ್ಯ ಮತ್ತು ಸ್ಟಾಕ್ ಸ್ಥಿತಿಗತಿಗಳನ್ನೂ ಪರಿಶೀಲಿಸಿದೆ. ಕೆಲವು ಪಿಎಚ್‌ಸಿ ಗಳು ಸರ್ಕಾರದ ಕಟ್ಟಡಗಳಲ್ಲಿ ಕೆಲಸ ಮಾಡುತ್ತಿದ್ದರೆ ಉಳಿದವು ಇಲ್ಲ. ಲಭ್ಯವಿದ್ದ ವಸ್ತುಗಳು ಮತ್ತು ಸರಬರಾಜುಗಳಲ್ಲಿ ಭಾರಿ ವ್ಯತ್ಯಾಸಗಳಿದ್ದವು. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಅಡಿಯಲ್ಲಿ ನೀಡಲಾದ ಆರೋಗ್ಯ ಸೇವೆಗಳ ಬಗ್ಗೆ ಸಮುದಾಯದ ಸಂತೃಪ್ತಿ ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಲು ಯತ್ನಿಸಲಾಯಿತು. 1 ವರ್ಷ ವಯಸ್ಸಿನವರೆಗಿನ ಮಕ್ಕಳ 20 ತಾಯಂದಿರನ್ನು ಸಂದರ್ಶಿಸಲಾಯಿತು. ಎಎನ್‌ಎಂ ಗಳ ಬಗ್ಗೆ ಅವರಿಗಿರುವ ತಿಳಿವಳಿಕೆ ಮತ್ತು ಅವರು ಒದಗಿಸಿದ ಸೇವೆಗಳ ಬಗ್ಗೆ ಅಭಿಪ್ರಾಯಗಳನ್ನು ಕೇಳಲಾಯಿತು. ಸಂದರ್ಶಿಸಿದ 2 ಉಪ-ಕೇಂದ್ರಗಳಲ್ಲಿ ಪ್ರಸವ ನಂತರ ಆರೈಕೆ (ಪಿಎನ್‌ಸಿ) ಬಗ್ಗೆ ಅವರಲ್ಲಿ ಬಹುಜನರಿಗೆ ತೃಪ್ತಿಯಿತ್ತು. ಆದರೆ 15 (75ಶೇ.) ತಾಯಂದಿರಿಗೆ ARI ಅಪಾಯ ಸಂಕೇತಗಳ ಬಗ್ಗೆ ಏನೂ ತಿಳಿದಿರಲಿಲ್ಲ. 3 (15ಶೇ.) ತಾಯಂದಿರಿಗೆ ಗರ್ಭನಿರೋಧಕ ವಿಧಾನಗಳ ಅನುಕೂಲಗಳು ಮತ್ತು ಅಡ್ಡಪರಿಣಾಮಗಳ ಬಗ್ಗೆ ಯಾವುದೇ ತಿಳಿವಳಿಕೆಯಿರಲಿಲ್ಲ. 20ರಲ್ಲಿ 19 ಹೆರಿಗೆಗಳು ಸಾಂಸ್ಥಿಕವಾಗಿದ್ದವು. ಸಂದರ್ಶಿಸಿದ ಕೇಂದ್ರಗಳಲ್ಲಿ MPHW (M) ಒದಗಿಸುವ ಸೇವೆಗಳ ಬಗ್ಗೆ ಸಮುದಾಯ ತೃಪ್ತಿ ವ್ಯಕ್ತಪಡಿಸಿತು. MPHW (M) ಗಳು ತಮ್ಮ ಕೇಂದ್ರಸ್ಥಳಗಳಲ್ಲಿ ವಾಸಿಸುತ್ತಿಲ್ಲ ಎಂದು ಗ್ರಾಮಸ್ಥರು ಹೇಳಿದರು. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಬಗೆಗಿನ ಸರ್ವೇಕ್ಷಣದ ಭಾಗವಾಗಿ ಸಂದರ್ಶಿಸಿದ ಪಿಎಚ್‌ಸಿ ಗಳ ಸೇವೆಗಳ ಬಗ್ಗೆ ಸಾರ್ವಜನಿಕರು ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದರು. ಗ್ರಾಮದ ಮುಖಂಡರು, ಎಎನ್‌ಸಿ/ಪಿಎನ್‌ಸಿ ಫಲಾನುಭವಿಗಳು ಮತ್ತು ಇತರರು ಪಿಎಚ್‌ಸಿ ಗಳ ಒಟ್ಟಾರೆ ಕಾರ್ಯಗಳ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು.

ಮತ್ತೊಂದು ಪ್ರಮುಖ ಯೋಜನೆಯಾದ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ (RSBY)ಯನ್ನು ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಆರಂಭಿಸಿದೆ, ಬಡತನದ ರೇಖೆಯ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ ಆರೋಗ್ಯ ವಿಮಾ ರಕ್ಷಣೆ ಒದಗಿಸಲು (rsby.gov.in). ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನಾ ಉದ್ದೇಶ, ಆಸ್ಪತ್ರೀಕರಣವಾದಾಗ ಉಂಟಾಗುವ ಹಣಕಾಸು ಬಾಧ್ಯತೆಗಳ ವಿರುದ್ಧ ಬಿಪಿಎಲ್ ಕುಟುಂಬಗಳಿಗೆ ರಕ್ಷಣೆ ಒದಗಿಸುವುದು. ಏಕೆಂದರೆ ಇದೇ ಗ್ರಾಮೀಣ ಜನರ ಸಾಲಗಳನ್ನು ಹೆಚ್ಚಿಸುವುದು. ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನಾ ಅಡಿಯಲ್ಲಿ ಫಲಾನುಭವಿಗಳು 30,000/- ರೂಗಳವರೆಗೆ ಆಸ್ಪತ್ರೀಕರನ ವೆಚ್ಚಕ್ಕೆ ಅರ್ಹರಾಗುತ್ತಾರೆ. ಆಸ್ಪತ್ರೀಕರಣ ಅಗತ್ಯವಿರುವ ಬಹುಪಾಲು ಕಾಯಿಲೆಗಳು ಇದರ ಅಡಿಯಲ್ಲಿ ಬರುತ್ತವೆ. ಆಸ್ಪತ್ರೆಗಳಲ್ಲಿನ ಬಹಳಷ್ಟು ಆರೋಗ್ಯ ಮಧ್ಯಪ್ರವೇಶಗಳಿಗೆ ಸರ್ಕಾರ ಪ್ಯಾಕಿಜ್ ದರಗಳನ್ನೂ ನಿಗದಿಪಡಿಸಿದೆ. ಪೂರ್ವದಲ್ಲೇ ಇದ್ದ ಪರಿಸ್ಥಿತಿಗಳಿಗೆ ಕೂಡ ಯಾವುದೇ ವಯಸ್ಸಿನ ಮಿತಿಯಿಲ್ಲದೆ ರಕ್ಷಣೆ ನೀಡಲಾಗುತ್ತದೆ. ಈ ರಕ್ಷಣೆ ಕುಟುಂಬದ ಐವರು ಸದಸ್ಯರಿಗೆ ಸಿಗುತ್ತದೆ-ಕುಟುಂಬದ ಮುಖ್ಯಸ್ಥ, ಪತ್ನಿ ಮತ್ತು ಮೂವರು ಅವಲಂಬಿಗಳು. ಫಲಾನುಭವಿಗಳು ಕೇವಲ 30/- ರೂಗಳನ್ನು ನೋಂದಾವಣೆ ಶುಲ್ಕವೆಂದು ಪಾವತಿಸಿದರೆ ಸಾಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಮಾ ಸಂಸ್ಥೆಗೆ ಕಂತು ಪಾವತಿಸುತ್ತದೆ. ಈ ಸಂಸ್ಥೆಯನ್ನು ಒಂದು ಸ್ಪರ್ಧಾತ್ಮಕ ಸವಾಲಿನ ಮೂಲಕ ರಾಜ್ಯ ಸರ್ಕಾರವು ಆಯ್ಕೆ ಮಾಡುತ್ತದೆ.

**ಕೋಷ್ಟಕ 5.22: ಕೋಷ್ಟಕಯಲ್ಲಿರುವ ಆಸ್ಪತ್ರೆಗಳ ಸಂಖ್ಯೆ (2014 ಮೇ ಪ್ರಕಾರ)**

| ತಾಲೂಕು/ಜಿಲ್ಲೆ | ಸಾರ್ವಜನಿಕ | ಖಾಸಗಿ |
|---|---|---|
| ದೇವನಹಳ್ಳಿ | 2 | 2 |
| ದೊಡ್ಡಬಳ್ಳಾಪುರ | 2 | 4 |
| ಹೊಸಕೋಟೆ | 3 | 6 |
| ನೆಲಮಂಗಲ | 2 | 2 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 9 | 14 |

ಸೂಚನೆ: ಬೆಂಗಳೂರು ನಗರದ 5 ಆಸ್ಪತ್ರೆಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿಪಿಎಲ್ ಜನರಿಗೂ ಸೇವೆ ಸಲ್ಲಿಸುತ್ತವೆ. 1 ಕೃಷ್ಣರಾಜಪುರಂನಲ್ಲಿ. 1 ಕುಂದಲಹಳ್ಳಿಯಲ್ಲಿ. 1 ಯಲಹಂಕದಲ್ಲಿ. 1 ಬಿ.ಬಿ.ರಸ್ತೆಯಲ್ಲಿ. 1 ಹಳೆ ಮದ್ರಾಸ್ ರಸ್ತೆಯಲ್ಲಿ.

ಮೂಲ: 2014 ಮೇ 22 ರಂದು ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನಾ ಜಾಲತಾಣ ಸಂದರ್ಶಿಸಿ ಪಡೆದದ್ದು.

ಕೋಷ್ಟಕ 5.22 ಸೂಚಿಸುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅತಿ ಹೆಚ್ಚು ಮಾನ್ಯಮಾಡಿದ ಆಸ್ಪತ್ರೆಗಳಿರುವುದು ಹೊಸಕೋಟೆ ತಾಲೂಕಿನಲ್ಲಿ (9), ನಂತರ ದೊಡ್ಡಬಳ್ಳಾಪುರ (6) ಮತ್ತು ದೇವನಹಳ್ಳಿ ಹಾಗೂ ನೆಲಮಂಗಲ (ತಲಾ 4). ಆದರೆ ಜಿಲ್ಲೆಯ ಒಟ್ಟು ಸಂಖ್ಯೆ ಹಿಡಿದರೆ ಗ್ರಾಮೀಣ ಭಾಗಗಳಲ್ಲಿ 9 ಮತ್ತು ನಗರ ಭಾಗಗಳಲ್ಲಿ 19 ಆಸ್ಪತ್ರೆಗಳು ಕೋಷ್ಟಕಯಲ್ಲಿವೆ. ಇದರಲ್ಲಿ ಬೆಂಗಳೂರು ನಗರದಲ್ಲಿರುವ ಆದರೆ ಗ್ರಾಮಾಂತರದ ಅಂಚಿನಲ್ಲಿರುವ, ಇಲ್ಲಿನ ಬಿಪಿಎಲ್ ಜನರು ಹೋಗುವ 5 ಖಾಸಗಿ ಆಸ್ಪತ್ರೆಗಳೂ ಸೇರಿವೆ. 2011-12ರಲ್ಲಿ ಈ ಯೋಜನೆ 60.5 ಶೇ. ಕುಟುಂಬಗಳನ್ನು ನೋಂದಾಯಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ (ಕೋಷ್ಟಕ 5.23).

[16] ಈ ಅಧ್ಯಯನವನ್ನು ಕರ್ನಾಟಕ ರಾಜ್ಯದ ಎರಡು ಜಿಲ್ಲೆಗಳಲ್ಲಿ ನಡೆಸಲಾಯಿತು: ಉಡುಪಿ ಹಾಗೂ ಬೆಂಗಳೂರು ನಗರ. ಒಟ್ಟಾರೆ 46 ಆರೋಗ್ಯ ಸೌಕರ್ಯಗಳು ಒಳಗೊಂಡಿದ್ದವು ಮತ್ತು 92 ಪಾಲುದಾರರು ಅನಿರ್ಬಂಧಿತ ಅನುದಾನ ನಿರ್ವಹಿಸುವ ಬಗ್ಗೆ ದತ್ತಾಂಶ ಸಂಗ್ರಹಿಸಲಾಯಿತು. ಅನಿರ್ಬಂಧಿತ ಅನುದಾನದ ಪಡೆಯುವಿಕೆ ಮತ್ತು ಬಳಕೆಗೆ ಸಂಬಂಧಿಸಿದಂತೆ ಮೂರು ವರ್ಷಗಳಿಗೆ (2008-2009, 2009-2010, 2010-2011)ಸಂಗ್ರಹಿಸಿದ ದತ್ತಾಂಶವನ್ನಾಧರಿಸಿ ಸಮಾನತೆ ಹಾಗೂ ಕಾರ್ಯಕ್ಷಮತೆಗಳನ್ನು ಪರಿಣಾಮಕಾರಿಯಾಗಿ ಹೆಚ್ಚಿಸುವಂತಹ ಅನಿರ್ಬಂಧಿತ ಅನುದಾನದ ಪರ್ಯಾಯ ಮಾರ್ಗೋಪಾಯಗಳನ್ನು ಈ ಅಧ್ಯಯನ ಪ್ರಸ್ತಾಪಿಸುತ್ತದೆ http://www.cbps.in/wp-content/themes/cbps/pdf/RSBY%20-%20A%20study%20in%20Karnataka_CBPS_Jun-2013.pdf

**ಕೋಷ್ಟಕ 5.23: ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯ ತಾಲೂಕುವಾರು ನೋಂದಾವಣೆ ಅಂಕಿಗಳು**

| ತಾಲೂಕು/ಜಿಲ್ಲೆ | ಒಟ್ಟು ಬಿಪಿಎಲ್ ಕುಟುಂಬಗಳು | ನೋಂದಾವಣೆ ಆರಂಭದ ದಿನ | ನೋಂದಾವಣೆ ಕೊನೆಯ ದಿನ | ನೋಂದಾಯಿಸಿದವರ ಸಂಖ್ಯೆ | ಶೇ. |
|---|---|---|---|---|---|
| ದೇವನಹಳ್ಳಿ | 15,738 | 26-ನವೆಂಬರ್-2011 | 09- ಜನವರಿ -12 | 7,925 | 50.36 |
| ದೊಡ್ಡಬಳ್ಳಾಪುರ | 12,170 | 20 ಡಿಸೆಂಬರ್ -2011 | 31- ಜನವರಿ -12 | 6,013 | 49.41 |
| ಹೊಸಕೋಟೆ | 15,173 | 20-ಅಕ್ಟೋಬರ್-2011 | 24-ನವೆಂಬರ್ -11 | 8,480 | 55.89 |
| ನೆಲಮಂಗಲ | 6,523 | 21 ಜನವರಿ -2012 | 31- ಜನವರಿ -12 | 3,560 | 54.58 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 123,495 | | | 74,760 | 60.54 |

ಮೂಲ: ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನಾ-ಕರ್ನಾಟಕದಲ್ಲಿ ಒಂದು ಅಧ್ಯಯನ, ಸಿಬಿಪಿಎಸ್ (2013).

ಆದರೆ 2012ರಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನಾ ಕಾರ್ಯಗಳ ಬಗ್ಗೆ ಶಿವಮೊಗ್ಗ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ನಡೆಸಿದ ಸಿಬಿಪಿಎಸ್ ಅಧ್ಯಯನವು ಜಿಲ್ಲೆಯಲ್ಲಿ ಈ ಯೋಜನೆಯ ಸಾಧನೆಯನ್ನು ಸುಧಾರಿಸಲು ಬಹಳಷ್ಟು ಅವಕಾಶಗಳಿವೆ ಎಂದು ಬಹಿರಂಗ ಪಡಿಸಿತು[17]. ಜಿಲ್ಲೆಯಿಂದ ಆಯ್ದ ಬಿಪಿಎಲ್ ಕುಟುಂಬಗಳ ಬಗ್ಗೆ ನಡೆಸಿದ ಸರ್ವೇಕ್ಷಣದ ಮೇಲೆ ನಡೆಸಿದ ಅಧ್ಯಯನವು ಒಟ್ಟಾರೆ ಬಿಪಿಎಲ್ ಕುಟುಂಬಗಳಲ್ಲಿ ಕೇವಲ ಶೇ. 20 ರಷ್ಟು ಮಾತ್ರ ಯೋಜನೆಯ ಎಲ್ಲ ಮುಖ್ಯಾಂಶಗಳನ್ನೂ ಅರ್ಥಮಾಡಿಕೊಂಡಿವೆ ಎಂದು ತೋರಿಸಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಮಾದರಿಯಲ್ಲಿ ಯೋಜನೆಯನ್ನು ಯಶಸ್ವಿಯಾಗಿ ಬಳಸಿಕೊಂಡ ಒಂದೇ ಒಂದು ಪ್ರಕರಣವೂ ವರದಿಯಾಗಿಲ್ಲ. "ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ" (ಯಶಸ್ವಿನಿ ಯೋಜನೆ) - ಇದನ್ನು ರಾಜ್ಯ ಸರ್ಕಾರವು 2002 ನವೆಂಬರಿನಲ್ಲಿ ಕರ್ನಾಟಕದ ಸಹಕಾರಿ ರೈತರಿಗಾಗಿ ಪರಿಚಯಿಸಿತು. 2003 ಜೂನ್ 1ರಿಂದ ಅದು ಕಾರ್ಯಗತವಾಯಿತು (www.yeshasvivi.kar.nic.in/about.htm). ಈ "ಗ್ರಾಮೀಣ ಆರೋಗ್ಯ ರಕ್ಷಣಾ ಯೋಜನೆ" ಪರಿಕಲ್ಪನೆ, ಆಸ್ಪತ್ರೆ ಆಧಾರಿತ ರಕ್ಷಣೆ. ಇದನ್ನು ಬೆಂಗಳೂರಿನ ನಾರಾಯಣ ಹೃದಯಾಲಯ ಮತ್ತು ಕರ್ನಾಟಕ ಸರ್ಕಾರದ ಸಹಕಾರಿ ಇಲಾಖೆ, ಸಾರ್ವಜನಿಕ-ಖಾಸಗಿ ಪಾಲುದಾರಿಕೆಯಲ್ಲಿ ಆರಂಭಿಸಿತು. ಎಲ್ಲ ಗ್ರಾಮೀಣ ಸಹಕಾರಿ ಸಂಘದ ಸದಸ್ಯರು, ಸಹಕಾರಿ ಸಂಘಗಳ/ಬ್ಯಾಂಕುಗಳ ಜೊತೆ ಹಣಕಾಸಿನ ವ್ಯವಹಾರಗಳನ್ನು ಇರಿಸಿಕೊಂಡಿರುವ ಸ್ವ-ಸಹಾಯ ಗುಂಪುಗಳ / ಸ್ತ್ರೀ ಶಕ್ತಿ ಗುಂಪುಗಳ ಸದಸ್ಯರು, ನೇಕಾರ ಸಂಘಗಳ ಸದಸ್ಯರು, ಬೀಡಿ ಕಾರ್ಮಿಕರ ಮತ್ತು ಮೀನುಗಾರರ ಸಹಕಾರಿ ಸಂಘಗಳ ಸದಸ್ಯರು ಮತ್ತು ಅವರ ಕುಟುಂಬದವರು ಈ ಯೋಜನೆ ಅಡಿಯಲ್ಲಿ ಅರ್ಹರು. ಈ ಯೋಜನೆಯಲ್ಲಿ ಫಲಾನುಭವಿಗಳು ಪ್ರತಿ ವರ್ಷ ಸಣ್ಣ ಮೊತ್ತವನ್ನು ಕೊಡುಗೆಯಾಗಿ ನೀಡುತ್ತಾರೆ ಮತ್ತು ಆ ಅವಧಿಯಲ್ಲಿ ಅಗತ್ಯವಾಗುವ ಯಾವುದೇ ಚಿಕಿತ್ಸೆ/ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳುತ್ತಾರೆ. ಈ ಯೋಜನೆ ಕುರಿತಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಯಾವುದೇ ದತ್ತಾಂಶ ಲಭ್ಯವಿಲ್ಲ.

## 5.12 ಆರೋಗ್ಯ ಕ್ಷೇತ್ರದ ಮೇಲಿನ ತಲಾ ವೆಚ್ಚದ ವಿಶ್ಲೇಷಣೆ

ಜಿಲ್ಲೆಯಲ್ಲಿ ಆರೋಗ್ಯ ಕ್ಷೇತ್ರದ ಮೇಲಿನ ತಲಾ ವೆಚ್ಚ 2009-10 ಮತ್ತು 2011-12 ಅವಧಿಗಳಲ್ಲಿ ಹಣದುಬ್ಬರ-ಸರಿಹೊಂದಿಸಿದ ಬೆಲೆಗಳ ಲೆಕ್ಕದಲ್ಲಿ ಇಳಿಮುಖ ಪ್ರವೃತ್ತಿ ತೋರಿದೆ (ಕೋಷ್ಟಕ 5.24). ನಿಜ ಲೆಕ್ಕದಲ್ಲಿ ಜಿಲ್ಲೆಯಲ್ಲಿ ತಲಾ ವೆಚ್ಚ ಕಡಿಮೆಯಾಗಿರುವುದು 20.33ಶೇ. ನಷ್ಟಿದೆ. ಲಭ್ಯವಿರುವ ದತ್ತಾಂಶದ ಪ್ರಕಾರ ಒಟ್ಟು ಲೆಕ್ಕದಲ್ಲಿ ವೆಚ್ಚಗಳಲ್ಲಿ ಅತ್ಯಂತ ಹೆಚ್ಚಿನ ಇಳಿಮುಖ ಕಂಡಿರುವ ತಾಲೂಕು ದೊಡ್ಡಬಳ್ಳಾಪುರ. ಆದರೆ ಶೇ. ಲೆಕ್ಕದಲ್ಲಿ ಅತ್ಯಂತ ಹೆಚ್ಚಿನ ಇಳಿಮುಖ ನೆಲಮಂಗಲದಲ್ಲಾಗಿದೆ.

**ಕೋಷ್ಟಕ 5.24: ತಲಾ ಆರೋಗ್ಯ ವೆಚ್ಚ (ರೂಗಳಲ್ಲಿ) ಚಾಲ್ತಿ ದರಗಳಲ್ಲಿ**

| ತಾಲೂಕು/ಜಿಲ್ಲೆ | 2009-10 | 2010-11 | 2011-12 |
|---|---|---|---|
| ದೇವನಹಳ್ಳಿ | 169.00 | 166.65* | 189.96 |
| ದೊಡ್ಡಬಳ್ಳಾಪುರ | 190.12 | 162.48 | 212.49 |
| ಹೊಸಕೋಟೆ | 170.76 | 191.79 | 198.20 |
| ನೆಲಮಂಗಲ | 127.46 | 161.67 | - |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 167.03 | 171.20 | 158.60 |

ಸೂಚನೆ: 2010-11 (ದೇವನಹಳ್ಳಿ) = ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ + ಮಹಿಳಾ ಮತ್ತು ಮಕ್ಕಳ ಕಲ್ಯಾಣ + ಪೌಷ್ಟಿಕತೆ

ಮೂಲ: ವೆಚ್ಚದ ದತ್ತಾಂಶ - ಮುಖ್ಯ ಲೆಕ್ಕಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಕೋಷ್ಟಕ 5.25: ಹಣದುಬ್ಬರ ಸರಿಹೊಂದಿಸಿದ ತಲಾ ಆರೋಗ್ಯ ವೆಚ್ಚ (ರೂಗಳು) (2004-05 ಬೆಲೆಗಳಲ್ಲಿ)**

| ತಾಲೂಕು/ಜಿಲ್ಲೆ | 2009-2010 | 2010-2011 | 2011-2012 | 2009-10 ನಿಂದ 2011-12 ವರೆಗೆ ವೆಚ್ಚದಲ್ಲಿ ಆದ ಕುಸಿತ (ಶೇ.) |
|---|---|---|---|---|
| ದೇವನಹಳ್ಳಿ | 123.95 | 110.66* | 116.61 | 5.92 |
| ದೊಡ್ಡಬಳ್ಳಾಪುರ | 139.45 | 107.89 | 130.45 | 6.45 |
| ಹೊಸಕೋಟೆ | 125.25 | 127.36 | 121.67 | 2.85 |
| ನೆಲಮಂಗಲ | 93.49 | 107.35 | - | -- |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 122.51 | 113.68 | 97.36 | 20.33 |

*ಸೂಚನೆ: 2010-11 (ದೇವನಹಳ್ಳಿ) = ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ + ಮಹಿಳಾ ಮತ್ತು ಮಕ್ಕಳ ಕಲ್ಯಾಣ + ಪೌಷ್ಟಿಕತೆ

ಮೂಲ: ವೆಚ್ಚದ ದತ್ತಾಂಶ - ಮುಖ್ಯ ಲೆಕ್ಕಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

[17] CBPS (2013) [http://www.cbps.in/wp-content/themes/cbps/pdf/RSBY%20-%20A%20study%20in%20Karnataka_CBPS_Jun-2013.pdf]

ಚಿತ್ರ 5.1 ಆರೋಗ್ಯದ ರಡಾರ್ ವಿಶ್ಲೇಷಣೆ




ಎ: ಪೂರ್ಣ ಪ್ರಸವ ಪೂರ್ವ ಆರೈಕೆ ಸೇವೆಗಳನ್ನು ಪಡೆಯುತ್ತಿರುವ ಗರ್ಭಿಣಿಯರ ಪ್ರಮಾಣ; ಬಿ – ರಕ್ತಹೀನತೆಯಿರುವ ಗರ್ಭಿಣಿಯರು (ಪ್ರಸವ ಪೂರ್ವ ಆರೈಕೆ – ಸಹಜವಾದುದನ್ನು ಹೊರತುಪಡಿಸಿ); ಸಿ – ಸಾಂಸ್ಥಿಕ ಹೆರಿಗೆಗಳ ಪ್ರಮಾಣ; ಡಿ – ಪೂರ್ಣ ಪ್ರತಿರಕ್ಷಣೆ ಪಡೆದಿರುವ ಮಕ್ಕಳ ಪ್ರಮಾಣ; ಇ – ಕಡಿಮೆ ತೂಕದೊಂದಿಗೆ ಜನಿಸಿದ ಮಕ್ಕಳ ಪ್ರಮಾಣ; ಎಫ್– ಅಪೌಷ್ಟಿಕ ಮಕ್ಕಳ ಪ್ರಮಾಣ; ಜಿ – ಪ್ರಮುಖ ಸಾಕ್ರಾಮಿಕ ರೋಗಗಳಿಂದ ಬಳಲುವ ಜನರ ಪ್ರಮಾಣ; ಎಚ್ – ಯಾವುದೇ ಗರ್ಭನಿರೋಧಕದಿಂದ ರಕ್ಷಣೆ ಪಡೆಯುತ್ತಿರುವ ದಂಪತಿಗಳ ಶೇಕಡಾವಾರು; ಐ – NGP ಬಹುಮಾನಗಳಿಗೆ ಆರಿಸಿಕೊಳ್ಳಲಾದ ಗ್ರಾಮ ಪಂಚಾಯತಿಗಳ ಪ್ರಮಾಣ; ಜೆ – ಶೌಚಾಲಯದ ಸೌಲಭ್ಯವನ್ನು ಹೊಂದಿರುವ ಕುಟುಂಬಗಳ ಪ್ರಮಾಣ; ಕೆ–ಒಳಚರಂಡಿ ವ್ಯವಸ್ಥೆ (ತೆರೆದ ಹಾಗೂ ಮುಚ್ಚಿದ) ಹೊಂದಿರುವ ಕುಟುಂಬಗಳ ಪ್ರಮಾಣ; ಎಲ್ – ಸುರಕ್ಷಿತ ಕುಡಿಯುವ ನೀರನ್ನು ಹೊಂದಿರುವ ಕುಟುಂಬಗಳ ಶೇಕಡಾವಾರು.

ಟಿಪ್ಪಣಿ: ಈ ಸೂಚಕಕ್ಕೆ ಸಂಬಂಧಿಸಿದಂತೆ, ಬಿ, ಇ, ಎಫ್ ಮತ್ತು ಜಿ ಗಳು ನಕಾರಾತ್ಮಕ ಸೂಚಕಗಳಾಗಿದ್ದು, ತಾಲೂಕುಗಳು ಉತ್ತಮ ಸಾಧನೆ ಮಾಡಿವೆ ಎಂದು ತೋರಿಸಲು ಇವು ಗ್ರಾಫ್ ನಲ್ಲಿ 0.0 ಆಗಿರಬೇಕು ಮತ್ತು ಉಳಿದ ಸೂಚಕಗಳಿಗೆ, ಇದು ತದ್ವಿರುದ್ಧವಾಗಿರುತ್ತವೆ.

ದೇವನಹಳ್ಳಿ ತಾಲೂಕಿನ ರಡಾರ್ ನಕ್ಷೆ ಸೂಚಿಸುವುದೇನೆಂದರೆ, ಎಎನ್‌ಸಿ ಸೇವೆಗಳು ಮಹಿಳೆಯರಿಗೆ ಸಂಪೂರ್ಣವಾಗಿ ಸಿಗುವಂತೆ ಮಾಡುವಲ್ಲಿ ಅದು ಹೊಸಕೋಟೆಯ ಜೊತೆ ಮುಂಚೂಣಿಯಲ್ಲಿದೆ (ಎ). ದೇವನಹಳ್ಳಿ ಸಾಂಸ್ಥಿಕ ಹೆರಿಗೆಗಳ ವಿಷಯದಲ್ಲೂ (ಶೇ.) ಉತ್ತಮ ಸಾಧನೆ ಮಾಡಿದೆ (ಸಿ). ಮಕ್ಕಳಿಗೆ ಪೂರ್ತಿಯಾಗಿ ರೋಗನಿರೋಧಕ ಹಾಕಿಸಲಾಗಿದೆ (ಶೇ.) (ಡಿ). ನಂತರ ತಾಲೂಕು ಅತ್ಯುತ್ತಮ ಸಾಧನೆ ಮಾಡಿದ (8.00) ವಿಷಯಗಳೆಂದರೆ ಕುಟುಂಬಗಳಿಗೆ ಶೌಚಾಲಯ ವ್ಯವಸ್ಥೆ, ಚರಂಡಿ ಸೌಲಭ್ಯ ಮತ್ತು ಕುಡಿಯುವ ನೀರು (ಜೆ, ಕೆ ಮತ್ತು ಎಲ್). ಇಲ್ಲಿ ತೂಕ ಕಡಿಮೆ ಇರುವ ಮಕ್ಕಳು ಹುಟ್ಟುವ ಪ್ರಕರಣಗಳು ಕಡಿಮೆ (ಇ, 1.00). ಗರ್ಭಿಣಿಯರಲ್ಲಿ ರಕ್ತಹೀನತೆ ವರದಿಯಾಗಿರುವುದು ತುಸು ಹೆಚ್ಚಿದೆ (ಬಿ, 2.00). ಸಾಂಕ್ರಾಮಿಕ ರೋಗಗಳಿಂದ ಬಾಧಿತರಾದ ಜನರ ಪ್ರಮಾಣ (ಜಿ, ಸರಿ ಸುಮಾರು 0.00). ನಾಲ್ಕು ತಾಲೂಕುಗಳಲ್ಲಿ ನಿರ್ಮಲ ಗ್ರಾಮ ಅಭಿಯಾನ ಪುರಸ್ಕಾರಕ್ಕೆ ಆಯ್ಕೆಯಾದ ಗ್ರಾಮ ಪಂಚಾಯಿತಿಗಳ ಸಂಖ್ಯೆ (ಶೇ.) ವಿಷಯದಲ್ಲಿ ಈ ತಾಲೂಕೇ ಅತ್ಯುತ್ತಮ (1, 7.00). ಆದರೆ ಇನ್ನೂ ಸುಧಾರಿಸಲು ಅವಕಾಶಗಳಿವೆ. ಗರ್ಭನಿರೋಧಕ ವಿಧಾನ ಬಳಸಿ ರಕ್ಷಣೆ ಪಡೆಯುತ್ತಿರುವ ದಂಪತಿಗಳ ಪ್ರಮಾಣ ಕೂಡ ಕಡಿಮೆಯಿದೆ (ಎಚ್, 2.00).

ದೊಡ್ಡಬಳ್ಳಾಪುರದ ರೇಡಾರ್ ತೋರಿಸುವಂತೆ, ದೇವೆನಹಳ್ಳಿಯ ಜೊತೆ ಇದು, ಸಾಂಸ್ಥಿಕ ಹೆರಿಗೆ (ಸಿ) ಮತ್ತು ಪೂರ್ಣ ಪ್ರತಿರಕ್ಷಣೆ ಪಡೆದಿರುವ ಮಕ್ಕಳ ಶೇಕಡಾವಾರು (ಡಿ)ಯ ಅಂಶಗಳಲ್ಲಿ ಉತ್ತಮ ಸಾಧನೆ ಮಾಡಿದೆ. ತಾಲೂಕಿನ ನಂತರದ ಉತ್ತಮ ಸಾಧನೆಯೆಂದರೆ, ದೇವನಹಳ್ಳಿಯಂತೆ (ಆದರೆ 8.00ಕ್ಕಿಂತ ಕೊಂಚ ಕಡಿಮೆ ಅಂಕಿ), ಶೌಚಾಲಯ, ಒಳಚರಂಡಿ ಮತ್ತು ನೀರಿ ಸೌಲಭ್ಯಗಳಿರುವ ಕುಟುಂಬಗಳ

ಶೇಕಡಾವಾರು (ಜೆ, ಕೆ ಮತ್ತು ಎಲ್). ಕಡಿಮೆ ತೂಕದೊಂದಿಗೆ ಜನಿಸಿದ ಮಕ್ಕಳ ಕಡಿಮೆ ಪ್ರಮಾಣವಿದ್ದು (ಇ, 1.00), ರಕ್ತಹೀನತೆ ಇರುವ ಗರ್ಭಿಣಿಯರ ಶೇಕಡಾವಾರು ಹೆಚ್ಚಿದೆ (ಬಿ, 6.00). ಸಾಂಕ್ರಾಮಿಕ ರೋಗಗಳಿಂದ ಬಳಲುವ ಜನರ ಶೇಕಡಾವಾರು ಸುಮಾರು 0.00 ಇದೆ.

ನಾಲ್ಕು ತಾಲೂಕುಗಳಲ್ಲಿ, ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ಗ್ರಾಮ ಪಂಚಾಯತಿಗಳ ಸಂಖ್ಯೆಯಲ್ಲಿ ಮೂರನೇ ಉತ್ತಮ ಸಾಧನೆ ತೋರಿದ್ದು (ಐ, 5.00ಕ್ಕಿಂತ ಕೊಂಚ ಹೆಚ್ಚು), ಸುಧಾರಣೆಗೆ ಬಹಳಷ್ಟು ಅವಕಾಶವಿದೆ. ಪ್ರಸವ ಪೂರ್ವ ಆರೈಕೆ ಸೇವೆಗಳಿಗೆ ಮಹಿಳೆಯ ಪೂರ್ಣ ವ್ಯಾಪ್ತಿಯ ವಿಷಯದಲ್ಲಿ (ಎ), ಉಳಿದ ತಾಲೂಕುಗಳಂತೆ ದೊಡ್ಡಬಳ್ಳಾಪುರವು ಉತ್ತಮ ಸಾಧನೆ ನೀಡಿಲ್ಲ, ಆದರೂ ಅದು ಸುಮಾರು 9.50 ನ ಅಂಕಿಗಳನ್ನು ಪಡೆದಿದೆ. ದೇವನಹಳ್ಳಿ ಮತ್ತು ನೆಲಮಂಗಲ ತಾಲೂಕುಗಳಲ್ಲಿ, ಗರ್ಭನಿರೋಧಕಗಳ ಬಳಕೆಯಿಂದ ರಕ್ಷಣೆ ಪಡೆಯುತ್ತಿರುವ ದಂಪತಿಗಳ ಪ್ರಮಾಣ ಕೂಡ ಕಡಿಮೆಯಿದೆ (ಎಚ್, 2.00).

ಹೊಸಕೋಟೆ ತಾಲೂಕಿನ ರೇಡಾರ್ ನಕ್ಷೆ ಸೂಚಿಸುವಂತೆ, ದೇವನಹಳ್ಳಿ ತಾಲೂಕಿನ ಜೊತೆಗೆ, ಮಹಿಳೆಯರ ಪೂರ್ಣ ಪ್ರಸವ ಪೂರ್ವ ಆರೈಕೆ ಸೇವೆಗಳ ವ್ಯಾಪ್ತಿಯ ಅಂಶದಲ್ಲಿ ಉತ್ತಮ ಸಾಧನೆ ಮಾಡಿರುವ ತಾಲೂಕಾಗಿದೆ (ಎ). ಸಾಂಸ್ಥಿಕ ಹೆರಿಗೆಗಳ ಪ್ರಮಾಣದಲ್ಲಿ (ಸಿ) ಮತ್ತು ಪೂರ್ಣ ಪ್ರತಿರಕ್ಷಣೆ ಪಡೆದ ಮಕ್ಕಳ ಪ್ರಮಾಣದಲ್ಲಿ (ಡಿ), ನಾಲ್ಕು ತಾಲೂಕುಗಳಲ್ಲಿ ಇದೊಂದೇ ತಾಲೂಕು ಪೂರ್ಣ 10.00 ಅನ್ನು ಗಳಿಸಿಲ್ಲ, ಆದರೆ 9.00 ಕ್ಕಿಂತ ಹೆಚ್ಚಾಗಿದೆ. ತಾಲೂಕಿನ ನಂತರದ ಉತ್ತಮ ಸಾಧನೆಯೆಂದರೆ, ದೇವನಹಳ್ಳಿ ತಾಲೂಕಿನ ಜೊತೆ ಸಮನಾಗಿರುವುದೆಂದರೆ (8.00 ಅಂಕಿಯನ್ನು ಗಳಿಸಿ), ಶೌಚಾಲಯ ಮತ್ತು ನೀರಿನ ಸೌಲಭ್ಯವುಳ್ಳ ಕುಟುಂಬಗಳ ಸಂಖ್ಯೆಯದ್ದು (ಜೆ ಮತ್ತು ಎಲ್). ಒಳಚರಂಡಿಗೆ ಸಂಬಂಧಿಸಿದಂತೆ, ಹೊಸಕೋಟೆಯು ಉಳಿದ ಮೂರು ತಾಲೂಕುಗಳಿಗಿಂತ ಕೊಂಚ ಕಡಿಮೆ ಅಂಕಿ ಪಡೆದಿದೆ.

ಇದು ಕಡಿಮೆ ತೂಕದೊಂದಿಗೆ ಹುಟ್ಟಿದ ಮಕ್ಕಳ (ಇ, 1.00ಕ್ಕಿಂತ ಕಡಿಮೆ) ಸಂಖ್ಯೆಯಲ್ಲಿ ಕಡಿಮೆಯಿದ್ದು, ರಕ್ತಹೀನತೆ ಇರುವ ಗರ್ಭಿಣಿಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದೆ (ಬಿ, 6.00), ದೊಡ್ಡಬಳ್ಳಾಪುರದಂತೆ. ಸಾಂಕ್ರಾಮಿಕ ರೋಗದಿಂದ ಬಳಲುತ್ತಿರುವ ಜನರ ಪ್ರಮಾಣ (ಜಿ) ಸುಮಾರು 4.00 ಇದ್ದು, ಇದು ಎಲ್ಲಾ ತಾಲೂಕುಗಳಿಗಿಂತಲೂ ಹೆಚ್ಚಾಗಿದೆ. ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ಗ್ರಾಮ ಪಂಚಾಯತಿಗಳ ಸಂಖ್ಯೆಯಲ್ಲೂ ಇದು ಕಳಪೆ ಸಾಧನೆ ಮಾಡಿದ್ದು (4.00ಕ್ಕಿಂತ ಕೊಂಚ ಹೆಚ್ಚು), ಸುಧಾರಣೆಗೆ ಬಹಳ ಅವಕಾಶವಿದೆ. ಇತರ ಮೂರು ತಾಲೂಕುಗಳಿಗಿಂತ ಹೊಸಕೋಟೆ ತಾಲೂಕು ಉತ್ತಮವಾಗಿರುವ ಸೂಚಕವೆಂದರೆ ಗರ್ಭನಿರೋಧಕಗಳ ಬಳಕೆಯಿಂದ ರಕ್ಷಣೆ ಪಡೆಯುವ ದಂಪತಿಗಳ ಪ್ರಮಾಣದಲ್ಲಿ(ಎಚ್, 4.00) .

ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ತಾಲೂಕುಗಳ ಜೊತೆಗೆ, ನೆಲಮಂಗಲವು ಸಾಂಸ್ಥಿಕ ಹೆರಿಗೆಗಳ ಪ್ರಮಾಣದಲ್ಲಿ (ಸಿ) ಮತ್ತು ಪೂರ್ಣ ಪ್ರತಿರಕ್ಷಣೆ ಪಡೆದ ಮಕ್ಕಳ ಪ್ರಮಾಣದಲ್ಲಿ(ಡಿ) ಉತ್ತಮ ಸಾಧನೆ ಮಾಡಿದೆ. ಈ ತಾಲೂಕಿನ ನಂತರದ ಉತ್ತಮ ಸಾಧನೆಯೆಂದರೆ, ದೇವನಹಳ್ಳಿಗಿಂತ ಕಡಿಮೆ ಮತ್ತು ದೊಡ್ಡಬಳ್ಳಾಪುರ ತಾಲೂಕಿಗಿಂತ ಹೆಚ್ಚಿನ ಅಂಕಿ 9.00 ಪಡೆದಿರುವುದು, ಮಹಿಳೆಯರಿಗೆ ಪ್ರಸವ ಪೂರ್ವ ಆರೈಕೆ ಸೇವೆಗಳ ಪೂರ್ಣ ವ್ಯಾಪ್ತಿಯ (ಎ) ಬಗ್ಗೆ. ಕುಡಿಯುವ ನೀರು (ಎಲ್) ಮತ್ತು ಶೌಚಾಲಯ (ಜೆ) ಇರುವ ಕುಟುಂಬಗಳ ಪ್ರಮಾಣದಲ್ಲಿ ಅತ್ಯುತ್ತಮ ತಾಲೂಕಾಗಿದ್ದು, ಹೋಲಿಕೆಯಲ್ಲಿ ಒಳಚರಂಡಿ ಇರುವ ಕುಟುಂಬಗಳ ಸಂಖ್ಯೆಯು ಕೊಂಚ ಕಡಿಮೆಯಿದೆ (ಕೆ). ಕಡಿಮೆ ತೂಕದೊಂದಿಗೆ ಹುಟ್ಟಿದ ಮಕ್ಕಳ ಸಂಖ್ಯೆಯು ಕಡಿಮೆಯಿದ್ದು (ಇ, 1.00ಕ್ಕಿಂತ ಕಡಿಮೆ), ರಕ್ತಹೀನತೆಯಿಂದ ಬಳಲುವ ಗರ್ಭಿಣಿಯರ ಪ್ರಮಾಣದಲ್ಲಿ(ಬಿ, 3.00) ಎರಡನೇ ಸ್ಥಾನದಲ್ಲಿದೆ. ಸಾಂಕ್ರಾಮಿಕ ರೋಗಗಳಿಂದ ಬಳಲುವ ಜನರ ಶೇಕಡಾವಾರು 3.00ಕ್ಕಿಂತ ಹೆಚ್ಚಿಗೆಯಿದ್ದು, ಎಲ್ಲಾ ತಾಲೂಕುಗಳಲ್ಲಿಯೂ ಇದು ಎರಡನೇ ಕಳಪೆ ಸಾಧನೆಯಾಗಿದೆ. ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ಗ್ರಾಮ ಪಂಚಾಯತಿಗಳ ಸಂಖ್ಯೆಯಲ್ಲಿ (ಐ, 6.00) ಎರಡನೇ ಅತ್ಯುತ್ತಮ ಸಾಧನೆ ಮಾಡಿದೆ. ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲೂಕುಗಳ ಬಗ್ಗೆ, ಗರ್ಭನಿರೋಧಕಗಳ ಬಳಕೆಯಿಂದ ರಕ್ಷಣೆ ಪಡೆಯುವ ದಂಪತಿಗಳ ಪ್ರಮಾಣವೂ ಕಡಿಮೆಯಿದೆ (ಎಚ್, 2.00).

## 5.13 ತಾತ್ಪರ್ಯ

ಅಂತಿಮವಾಗಿ, ಆರೋಗ್ಯ ಮತ್ತು ಪೌಷ್ಟಿಕತೆಯ ಸೂಚಕಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ವಿಭಿನ್ನ ಚಿತ್ರಣವನ್ನು ನೀಡುತ್ತದೆ: ಕೆಲವು ಸೂಚಕಗಳಲ್ಲಿ ಉತ್ತಮ ಸಾಧನೆಯಿದ್ದರೆ, ಕೆಲವಲ್ಲಿ ಇಲ್ಲ. ಪ್ರಜನನ ಆರೋಗ್ಯಕ್ಕೆ ಸಂಬಂಧಿಸಿದ ಸೂಚಕಗಳು, ಅಂದರೆ ಸಾಂಸ್ಥಿಕ ಹೆರಿಗೆಗಳು, ಮಹಿಳೆಯರಿಗೆ ಪ್ರಸವ ಪೂರ್ವ ಆರೈಕೆ ಸೇವೆಗಳ ವ್ಯಾಪ್ತಿ, ಮತ್ತು ಪೂರ್ಣ ಪ್ರತಿರಕ್ಷಣೆಯನ್ನು ಪಡೆದುಕೊಂಡ ಮಕ್ಕಳ ಶೇಕಡಾವಾರು ಇವು ಉತ್ತಮವಾಗಿದೆ, ಆದರೆ ಜಿಲ್ಲೆಯಲ್ಲಿ ರಕ್ತಹೀನತೆ (ಅತಿಯಾದ)ಯಿಂದ ಬಳಲುವ ಗರ್ಭಿಣಿಯರ ಶೇಕಡಾವಾರು, ಕಡಿಮೆ ತೂಕದೊಂದಿಗೆ ಹುಟ್ಟಿದ ಮಕ್ಕಳ ಶೇಕಡಾವಾರು, ಮತ್ತು ತಾಯಂದಿರ ಮರಣ ಪ್ರಮಾಣವು ಬಹಳ ಹೆಚ್ಚಾಗಿದೆ. ಆಶ್ಚರ್ಯಕರವಾಗಿ, ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳಲ್ಲಿ ರಕ್ತಹೀನತೆ (ಅತಿಯಾದ) ಯಿಂದ ಬಳಲುವ ಗರ್ಭಿಣಿಯರ ಸಂಖ್ಯೆಯು ಬಹಳ ಹೆಚ್ಚಾಗಿದ್ದರೂ, ದೇವನಹಳ್ಳಿ (126) ಮತ್ತು ನೆಲಮಂಗಲ ತಾಲೂಕುಗಳಲ್ಲಿ(150) ತಾಯಂದಿರ ಮರಣ ಪ್ರಮಾಣ ಹೆಚ್ಚಾಗಿದೆ. ಈ ಅಂಕಿಗಳು ಸಾಂಸ್ಥಿಕ ಹೆರಿಗೆ ಮತ್ತು ಪ್ರಸವ ಪೂರ್ವ ಆರೈಕೆ ಸೇವೆಗಳಡಿಯಲ್ಲಿ ನೀಡಲಾಗುವ ಸೇವೆಗಳ ಗುಣಮಟ್ಟದ ಬಗ್ಗೆ ಪ್ರಶ್ನೆಯನ್ನು ಹುಟ್ಟಿಸುತ್ತವೆ. ಜೊತೆಗೆ, 18 ವರ್ಷದ ಒಳಗಿನ ಹುಡುಗಿಯರ ವಿವಾಹಗಳ ಸಂಖ್ಯೆಯು ಇಳಿಮುಖವಾಗಿದ್ದರೂ, ಈ ಸಂಖ್ಯೆಯು ಇನ್ನೂ ಹೆಚ್ಚಾಗಿಯೇ ಇದೆ.

ಅಂತೆಯೇ, ಕುಡಿಯುವ ನೀರು, ಶೌಚಾಲಯ ಮತ್ತು ಒಳಚರಂಡಿ ಸೌಲಭ್ಯಗಳಿರುವ ಕುಟುಂಬಗಳ ಸಂಖ್ಯೆಯು ಹೆಚ್ಚಾಗಿದ್ದರೂ, ಕೆಲವು ವರ್ಷಗಳಿಂದ ಸಾಂಕ್ರಾಮಿಕ ರೋಗದಿಂದ ಬಳಲುತ್ತಿರುವ ಜನರ ಸಂಖ್ಯೆಯು ಬಹಳವಾಗಿ ಹೆಚ್ಚುತ್ತಲೇ ಇದೆ. ಇದು ನಗರ ಸೇವೆಗಳ ಗುಣಮಟ್ಟ ಮತ್ತು ಶುದ್ಧ ಕುಡಿಯುವ ನೀರು ಮತ್ತು ಪರಿಸರದ ಲಭ್ಯತೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಜಿಲ್ಲೆಯಲ್ಲಿ ಗರ್ಭನಿರೋಧಕ ಬಳಕೆಯಿಂದ ರಕ್ಷಣೆ ಪಡೆಯುತ್ತಿರುವ ದಂಪತಿಗಳ ಪ್ರಮಾಣ ಒಟ್ಟಾರೆ ಕಡಿಮೆಯಿದೆ ಮತ್ತು ಇದು ಪರಿಹಾರ ಹುಡುಕಬೇಕಾದ ಮತ್ತೊಂದು ಕ್ಷೇತ್ರವಾಗಿದೆ.

# ಆದಾಯ, ಉದ್ಯೋಗ ಮತ್ತು ಬಡತನ







# 6. ಆದಾಯ, ಉದ್ಯೋಗ ಮತ್ತು ಬಡತನ

"ಒಂದು ಸಮುದಾಯದಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ಮತ್ತು ದುರ್ಬಲ ವ್ಯಕ್ತಿ ಕೂಡ ಅತ್ಯಂತ ಪ್ರಭಾವಿ ಮತ್ತು ಶಕ್ತಿಶಾಲಿ ವ್ಯಕ್ತಿಗಳು ಹೊಂದಿರುವಂತಹ ಅತ್ಯುನ್ನತ ನಾಗರಿಕ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳನ್ನು ಅನುಭವಿಸುವಂತಾದಾಗ ಮಾತ್ರ ಅದನ್ನು ಪ್ರಜಾಪ್ರಭುತ್ವವುಳ್ಳ ಸಮುದಾಯ ಎನ್ನಬಹುದು".

-ಎ ಫಿಲಿಪ್ ರ್‍ಯಾಂಡಾಲ್ಫ್
(ನಾಗರಿಕ ಹಕ್ಕುಗಳ ಕಾರ್ಯಕರ್ತ).

## 6.1. ಪ್ರಸ್ತಾವನೆ

ಈ ಅಧ್ಯಾಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಡತನ, ಆದಾಯ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಒಂದು ಸ್ಥೂಲನೋಟ ನೀಡಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಟ್ಟಾರೆ ಆದಾಯ, ಅದರ ಕಾರ್ಮಿಕ ವರ್ಗದ ಬಳಕೆ, ಆದಾಯ ಮತ್ತು ಬಳಕೆಯ ಹಂಚಿಕೆ, ಆದಾಯ ಬಡತನದ ವ್ಯಾಪ್ತಿ, ಆಸ್ತಿಗಳು ಮತ್ತು ಉದ್ಯೋಗಗಳಲ್ಲಿನ ಹಂಚಿಕೆ, ಮತ್ತು ಆದಾಯದ ಪ್ರವೃತ್ತಿಗಳು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಜಿಲ್ಲೆಯ ಆದಾಯ ಮತ್ತು ಬಡತನ ಮಟ್ಟಗಳು ಆರ್ಥಿಕ ಅಭಿವೃದ್ಧಿಯ ಮಟ್ಟ ಮತ್ತು ಅದರ ಹಂಚಿಕೆಯ ಬಗ್ಗೆ ತಿಳಿಸುತ್ತವೆ; ಉದ್ಯೋಗ ವಿವರಗಳು ವಿವಿಧ ಕ್ಷೇತ್ರಗಳು ಮತ್ತು ಜನಸಂಖ್ಯಾ ಸಮೂಹಗಳಲ್ಲಿನ ಕೆಲಸದ ನಮೂನೆಗಳ ಹಂಚಿಕೆಗಳನ್ನು ತೋರುತ್ತವೆ. ಬೆಂಗಳೂರು ನಗರದ ಪಕ್ಕದಲ್ಲೇ ಇರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯಂತಹ ಜಿಲ್ಲೆಯಲ್ಲಿ ಇವೆಲ್ಲ ಪರಸ್ಪರ ಸಂಬಂಧ ಹೊಂದಿರುತ್ತವೆ. ಇಲ್ಲಿ ಹೇಳಿರುವ ಬಹಳಷ್ಟು ವಿಷಯಗಳು ಪೂರ್ಣ ಚಿತ್ರಣವನ್ನು ನೀಡುತ್ತವೆ. ಬಹುಮಟ್ಟಿಗೆ ಅವು ನೇರವಾಗಿ ಅಂತರ್-ಸಂಪರ್ಕ ಹೊಂದಿವೆ. ಸಾಧ್ಯವಿದ್ದಲ್ಲೆಲ್ಲ ಇತ್ತೀಚಿನ ದತ್ತಾಂಶವನ್ನೇ ಬಳಸಲಾಗಿದೆ. ಕೆಲವೊಂದು ಸಂದರ್ಭಗಳಲ್ಲಿ ಪ್ರವೃತ್ತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ತಾರ್ಕಿಕ ತೀರ್ಮಾನಗಳಿಗೆ ಬರಲು (ಎನ್‌ಎಸ್‌ಎಸ್) ಸರ್ವೇಕ್ಷಣೆಗಳನ್ನು ಆಧರಿಸಿದ ಮುನ್ನಂದಾಜುಗಳನ್ನು ಬಳಸಲಾಗಿದೆ.

## 6.2. ಆದಾಯ

ಜಿಲ್ಲೆಯ ಆದಾಯದ ವಲಯವಾರು ಹಂಚಿಕೆಯು ತೋರುವಂತೆ, 2004-05ರಲ್ಲಿ ಪ್ರಾಥಮಿಕ ವಲಯದ ಪಾಲು ಶೇ. 15.67 ಇದ್ದದ್ದು 2008-09ರಲ್ಲಿ ಶೇ. 13.43 ಕ್ಕೆ ಇಳಿದಿದೆ. ದ್ವಿತೀಯ ವಲಯದ ಪಾಲು 2004-05ರಲ್ಲಿ ಶೇ. 35.65 ಇದ್ದದ್ದು 2008-09ರಲ್ಲಿ ಶೇ. 37 ಕ್ಕೆ ಏರಿದೆ. ಅಂತೆಯೇ ತೃತೀಯ ವಲಯದ ಪಾಲು 2004-05ರಲ್ಲಿ ಶೇ. 48.68 ಇದ್ದದ್ದು 2008-09ರಲ್ಲಿ ಶೇ. 49.56 ಕ್ಕೆ ಏರಿದೆ-ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿವ್ವಳ ಆಂತರಿಕ ಉತ್ಪನ್ನದ[18] ಸುಮಾರು ಅರ್ಧ ಭಾಗಕ್ಕೆ ಕಾರಣವಾಗಿದೆ. ಈ ಅವಧಿಯಲ್ಲಿನ ಬದಲಾವಣೆ ದ್ವಿತೀಯ ವಲಯಕ್ಕೆ ಸ್ವಲ್ಪ ದೊಡ್ಡದಾಗಿದೆ, ಉತ್ಪಾದನಾ ವಲಯವು ಸೇವಾ ವಲಯಕ್ಕಿಂತ ಹೆಚ್ಚು ವೇಗದಲ್ಲಿ ಬೆಳೆದಿದೆ ಎಂಬುದು ಕಂಡುಬರುತ್ತದೆ[20] ಆದರೆ ಜಿಲ್ಲೆಯ ಆದಾಯಕ್ಕೆ ಸೇವಾ ವಲಯದ ಕೊಡುಗೆ ಉತ್ಪಾದನಾ ವಲಯಕ್ಕಿಂತ, ಈಗಲೂ ಬಹಳಷ್ಟು ಹೆಚ್ಚೇ ಇದೆ.

**ಕೋಷ್ಟಕ 6.1: ನಿವ್ವಳ ಜಿಲ್ಲಾ ಉತ್ಪತ್ತಿಯ ವಲಯವಾರು ಪಾಲುಗಳು (2004–05 ಬೆಲೆಗಳಲ್ಲಿ)**

| ವಲಯ | 2004–05 | 2008–09 |
|---|---|---|
| ಪ್ರಾಥಮಿಕ | ಶೇ. 15.67 | ಶೇ. 13.43 |
| ದ್ವಿತೀಯ | ಶೇ. 35.65 | ಶೇ. 37.01 |
| ತೃತೀಯ | ಶೇ. 48.68 | ಶೇ. 49.56 |

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ

### 6.2.1. ಅಭಿವೃದ್ಧಿಯ ಪ್ರಮಾಣ ಮತ್ತು ಪ್ರಾದೇಶಿಕ ಅಸಮಾನತೆಗಳು

2004-05 ಮತ್ತು 2008-09ರ ನಡುವಿನ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆರ್ಥಿಕತೆ (ನಿವ್ವಳ ಆಂತರಿಕ ಉತ್ಪನ್ನ ಆಧಾರದ ಮೇಲೆ ಅಳೆದಂತೆ) ವಾರ್ಷಿಕವಾಗಿ ಶೇ. 9.5 ಪ್ರಮಾಣದಲ್ಲಿ ಬೆಳೆದಿದೆ, ಅಂದರೆ ಕರ್ನಾಟಕದ ದರ ಶೇ. 11.36 ಗಿಂತ ಕಡಿಮೆ. ಇದೇ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಸಾಧಿಸಿದ್ದ ತಲಾ ಅಭಿವೃದ್ಧಿ ಪ್ರಮಾಣ ಶೇ. 7.95 ಇದ್ದರೆ ಕರ್ನಾಟಕದ ತಲಾ ಅಭಿವೃದ್ಧಿ ಪ್ರಮಾಣ ಶೇ. 9.72. ಅಂದರೆ, ಇಡೀ ಕರ್ನಾಟಕದ ತಲಾ ಅಭಿವೃದ್ಧಿ ದರಕ್ಕಿಂತ ಬೆಂಗಳೂರು ಗ್ರಾಮಾಂತರದ ತಲಾ ಅಭಿವೃದ್ಧಿ ಪ್ರಮಾಣ ಹೆಚ್ಚಿದೆ ಎಂದಾಯಿತು. ಇದೇ ಅವಧಿಯಲ್ಲಿ ಕರ್ನಾಟಕದ ಒಟ್ಟು ನಿವ್ವಳ ಆಂತರಿಕ ಉತ್ಪನ್ನದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಮಾಣ ಸ್ವಲ್ಪ ಇಳಿಮುಖವಾಗಿದೆ, ಶೇ. 2.12 ನಿಂದ ಶೇ. 2.01 ಕ್ಕೆ ಇಳಿದಿದೆ; ಆದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಲಾ ನಿವ್ವಳ ಆಂತರಿಕ ಉತ್ಪನ್ನ ಕರ್ನಾಟಕದ ತಲಾ ನಿವ್ವಳ ಆಂತರಿಕ ಉತ್ಪನ್ನ(47,614 ರೂ.ಗಳು) ಕ್ಕೆ ಹೋಲಿಸಿದರೆ ಬಹಳ ಹೆಚ್ಚಿದೆ (59,878 ರೂ.ಗಳು). ಇಡೀ ರಾಜ್ಯದ ದರಕ್ಕಿಂತ ಈ ಜಿಲ್ಲೆಯ ಜನಸಂಖ್ಯಾ ಪ್ರಮಾಣ ಹೆಚ್ಚಿದೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು.

2004-05 ಮತ್ತು 2008-09ರ ನಡುವಿನ ಅವಧಿಯಲ್ಲಿ ಸದರಿ ಜಿಲ್ಲೆಯ ಉತ್ಪಾದನಾ ಮತ್ತು ಸೇವಾ ವಲಯಗಳ ವಾರ್ಷಿಕ ಅಭಿವೃದ್ಧಿ ದರಗಳು ಅನುಕ್ರಮವಾಗಿ ಶೇ. 10.81 ಮತ್ತು ಶೇ. 10.13 (ಕೋಷ್ಟಕ 6.2 ನೋಡಿ). ಆದರೆ ಪ್ರಾಥಮಿಕ ವಲಯದ ಅಭಿವೃದ್ಧಿ ದರ ವಾರ್ಷಿಕ ಶೇ. 4.56.

[18] ಆರ್ಥಿಕತೆಯ ಸ್ಥಿತಿಯನ್ನು ತಿಳಿಯಲು ನಿವ್ವಳ ಆಂತರಿಕ ಉತ್ಪನ್ನವನ್ನು ಒಟ್ಟು ಆಂತರಿಕ ಉತ್ಪನ್ನದ ಬದಲಿಗೆ ಬಳಸಲಾಗಿದೆ. ನಿವ್ವಳ ಆಂತರಿಕ ಉತ್ಪನ್ನವು ಒಟ್ಟು ಆಂತರಿಕ ಉತ್ಪನ್ನದಲ್ಲಿ ಒಂದು ಆರ್ಥಿಕತೆಯ ಮೂಲವಸ್ತುಗಳ ಮೇಲಿನ ಸವಕಳಿಯನ್ನು ಕಳೆಯುವ ಮೂಲಕ ದೊರೆಯುತ್ತದೆ. ಆದ್ದರಿಂದ ಆರ್ಥಿಕ ಬೆಳವಣಿಗೆಯನ್ನು ಮಾಪಿಸುವಲ್ಲಿ ಒಟ್ಟು ಆಂತರಿಕ ಉತ್ಪನ್ನಕ್ಕಿಂತ ನಿವ್ವಳ ಆಂತರಿಕ ಉತ್ಪನ್ನ ಹೆಚ್ಚು ಉತ್ತಮ ಎಂದು ಪರಿಗಣಿಸಲಾಗುತ್ತದೆ.

**ಕೋಷ್ಟಕ 6.2: ವಿವಿಧ ಮೂಲಗಳಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿವ್ವಳ ಆಂತರಿಕ ಉತ್ಪನ್ನ(2004-2005 ಬೆಲೆಗಳಲ್ಲಿ) ಲಕ್ಷ ರೂ.ಗಳಲ್ಲಿ**

| ಉದ್ಯಮ | ಪ್ರಾಥಮಿಕ | ದ್ವಿತೀಯ | ತೃತೀಯ | ಒಟ್ಟು ನಿವ್ವಳ ಆಂತರಿಕ ಉತ್ಪನ್ನ | ತಲಾ ನಿವ್ವಳ ಆಂತರಿಕ ಉತ್ಪನ್ನ (ರೂಗಳು) |
|---|---|---|---|---|---|
| 2004-05 | 49,245 | 112,021 | 152,952 | 314,218 | 35,272 |
| 2008-09 | 58,235 | 160,476 | 214,933 | 433,644 | 46,493 |
| ಅಭಿವೃದ್ಧಿ ದರ (ಶೇ.) | 4.56 | 10.81 | 10.13 | 9.50 | 7.95 |

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವೈಶಿಷ್ಟವೆಂದರೆ ಅಲ್ಲಿನ ಒಳ ತೀವ್ರ ಅಸಮಾನತೆಗಳು. 2008-09ರಲ್ಲಿ ದೊಡ್ಡಬಳ್ಳಾಪುರ ಜಿಲ್ಲೆಯ 'ನಿವ್ವಳ ಆಂತರಿಕ ಉತ್ಪನ್ನ' ಕ್ಕೆ ಶೇ. 35.7 ಕೊಡುಗೆ ನೀಡಿದರೆ ದೇವನಹಳ್ಳಿ ತಾಲೂಕಿನ ಪ್ರಮಾಣ ಅತ್ಯಲ್ಪವಾದ ಶೇ. 14.2. ಮತ್ತೊಂದು ಕಡೆ ನೆಲಮಂಗಲದ ಪ್ರಮಾಣ ಶೇ. 22.8 ಇದೆ ನೆಲಮಂಗಲದ ಜನಸಂಖ್ಯೆ ದೇವನಹಳ್ಳಿಗಿಂತ ಬಹಳ ಭಿನ್ನವಾಗೇನೂ ಇಲ್ಲ. ಹೊಸಕೋಟೆ ತಾಲೂಕಿನ ಪ್ರಮಾಣ ಪರಾವಗಿಲ್ಲ ಎನ್ನುವಂತಹ ಶೇ. 28.3 ಇದೆ. ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲೂಕುಗಳ ತಲಾ ನಿವ್ವಳ ಆಂತರಿಕ ಉತ್ಪನ್ನ ಜಿಲ್ಲೆಯ ಮತ್ತು ರಾಜ್ಯದ ತಲಾ ನಿವ್ವಳ ಆಂತರಿಕ ಉತ್ಪನ್ನಕ್ಕಿಂತ ಸಾಕಷ್ಟು ಹೆಚ್ಚಿದೆ.

**ಕೋಷ್ಟಕ 6.3: ನಿವ್ವಳ ತಾಲೂಕು ದೇಶೀ ಉತ್ಪನ್ನ (2004-05 ಬೆಲೆಗಳಲ್ಲಿ)**

| ತಾಲೂಕು/ಜಿಲ್ಲೆ/ರಾಜ್ಯ | ನಿವ್ವಳ ತಾಲೂಕು ಆಂತರಿಕ ಉತ್ಪನ್ನ (ಲಕ್ಷ ರೂ.ಗಳಲ್ಲಿ) | | ತಲಾ ನಿವ್ವಳ ಆಂತರಿಕ ಉತ್ಪನ್ನ (ರೂ.ಗಳು) | | ನಿವ್ವಳ ಆಂತರಿಕ ಉತ್ಪನ್ನದಲ್ಲಿ ಪಾಲು (ಶೇ) | |
|---|---|---|---|---|---|---|
| | 2004-05 | 2008-09 | 2004-05 | 2008-09 | 2004-05 | 2008-09 |
| ದೇವನಹಳ್ಳಿ | 46,506 | 61,497 | 23,971 | 30,275 | 14.80 | 14.18 |
| ದೊಡ್ಡಬಳ್ಳಾಪುರ | 102,498 | 150,395 | 36,488 | 51,136 | 32.62 | 34.68 |
| ಹೊಸಕೋಟೆ | 92,903 | 122,881 | 39,898 | 50,403 | 29.57 | 28.34 |
| ನೆಲಮಂಗಲ | 72,311 | 98,870 | 39,498 | 51,582 | 23.01 | 22.80 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 314,218 | 433,644 | 35,272 | 46,493 | 2.12* | 2.01* |
| ಕರ್ನಾಟಕ | 14,830,913 | 21,567,745 | 26,806 | 37,233 | | |

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ

* ರಾಜ್ಯದಲ್ಲಿ ಜಿಲ್ಲೆಯ ಪಾಲು

## 6.3. ಕಾರ್ಮಿಕರ ಉತ್ಪಾದಕತೆ

ಕಾರ್ಮಿಕರ ಉತ್ಪಾದಕತೆ, ಮಾನವ ಅಭಿವೃದ್ಧಿಯನ್ನು ಗುರುತಿಸಲು ಒಂದು ಮುಖ್ಯ ಸಾಧನ. ಹಾಗಾಗಿ ಮಾನವ ಅಭಿವೃದ್ಧಿ ಚರ್ಚೆಗಳಲ್ಲಿ ಅದು ಕಡ್ಡಾಯವಾದ ಭಾಗವಾಗಿರಬೇಕು. ಇದನ್ನು ತಲಾ ಕಾರ್ಮಿಕರ ಒಟ್ಟು ಆಂತರಿಕ ಉತ್ಪತ್ತಿ ಎಂದು ಅಳೆಯಲಾಗುತ್ತದೆ. 2008-09 ವರ್ಷಕ್ಕೆ 4 ತಾಲೂಕುಗಳ ಕಾರ್ಮಿಕ ಉತ್ಪಾದಕತೆ ಮುನ್ನಂದಾಜುಗಳನ್ನು ನೋಡಿದರೆ ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲೂಕುಗಳ ಕಾರ್ಮಿಕರ ಉತ್ಪಾದಕತೆ ಸರಿಸುಮಾರು ಒಂದೇ ಎಂಬುದನ್ನು ತೋರಿಸುತ್ತದೆ (ಕೋಷ್ಟಕ 6.4). ಆದರೆ 2004-05 ಮತ್ತು 2008-09 ನಡುವಿನ ಅವಧಿಯಲ್ಲಿ ದೊಡ್ಡಬಳ್ಳಾಪುರ (ಶೇ. 9.58)ತಾಲೂಕಿನ ಕಾರ್ಮಿಕರ ಉತ್ಪಾದಕತೆ ಹೊಸಕೋಟೆ (ಶೇ. 5.94) ಮತ್ತು ನೆಲಮಂಗಲ (ಶೇ. 6.78) ತಾಲೂಕುಗಳಿಗಿಂತ ಹೆಚ್ಚಿದೆ. 2008-09ರಲ್ಲಿ ದೇವನಹಳ್ಳಿ ತಾಲೂಕಿನ ಕಾರ್ಮಿಕರ ಉತ್ಪಾದಕತೆ ಬಹಳ ಕಡಿಮೆ ಇದ್ದರೂ ಅದರ ಅಭಿವೃದ್ಧಿ ದರ ನೆಲಮಂಗಲದಷ್ಟೇ ಇತ್ತು. ಒಟ್ಟಾರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಾರ್ಮಿಕರ ಉತ್ಪಾದಕತೆ ಕರ್ನಾಟಕದ ಕಾರ್ಮಿಕರ ಉತ್ಪಾದಕತೆ ಪ್ರಮಾಣಕ್ಕಿಂತ ಬಹಳಷ್ಟು ಉತ್ತಮವಾಗಿದೆ, ಆದರೆ 2004-05 ಮತ್ತು 2008-09 ನಡುವಿನ ಅವಧಿಯಲ್ಲಿ ಕರ್ನಾಟಕದ ಕಾರ್ಮಿಕರ ಉತ್ಪಾದಕತೆ ದರ ಬೆಂಗಳೂರು ಗ್ರಾಮಾಂತರ ಜಿಲ್ಲೆಗಿಂತ ಹೆಚ್ಚಿದೆ.

**ಕೋಷ್ಟಕ 6.4: ತಲಾ ಕಾರ್ಮಿಕರ ನಿವ್ವಳ ಆಂತರಿಕ ಉತ್ಪನ್ನದ ಅಂದಾಜು (2004-05 ಬೆಲೆಗಳಲ್ಲಿ)**

| ತಾಲೂಕು/ಜಿಲ್ಲೆ/ರಾಜ್ಯ | 2004-05 (ರೂಗಳು) | 2008-09 (ರೂಗಳು) | ಬೆಳವಣಿಗೆ ದರ (ಶೇ./ ಪ್ರತಿ ವರ್ಷ) |
|---|---|---|---|
| ದೇವನಹಳ್ಳಿ | 55,678 | 70,611 | 6.70 |
| ದೊಡ್ಡಬಳ್ಳಾಪುರ | 89,862 | 124,299 | 9.58 |
| ಹೊಸಕೋಟೆ | 100,224 | 124,036 | 5.94 |
| ನೆಲಮಂಗಲ | 101,918 | 129,574 | 6.78 |
| ಬೆಂಗಳೂರು ಗ್ರಾಮೀಣ | 87,358 | 113,542 | 7.49 |
| ಕರ್ನಾಟಕ | 66,904 | 90,431 | 8.79 |

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ

## 6.4. ಕೂಲಿ ಪ್ರವೃತ್ತಿಗಳು

ವಿವಿಧ ವಲಯಗಳಲ್ಲಿನ ಕೂಲಿಗಳಲ್ಲಿ ಬಹಳ ವ್ಯತ್ಯಾಸಗಳಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆರ್ಥಿಕತೆಯಲ್ಲಿ ಪ್ರಾಥಮಿಕ ವಲಯದ ಪಾತ್ರ ಇಳಿಮುಖವಾಗುತ್ತಿದ್ದರೂ ಬಹುಪಾಲು ಕಾರ್ಮಿಕಪಡೆ-ಸುಮಾರು ಶೇ 71 ರಷ್ಟು-ಕೃಷಿಯಲ್ಲಿ ನಿರತವಾಗಿದೆ. ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ವಲಯದ ಸರಾಸರಿ ವಾರದ ಕೂಲಿಗಳು (513.7 ರೂ.ಗಳು) ಕೃಷಿಯೇತರ ವಲಯದಕ್ಕಿಂತ (927.4 ರೂ.ಗಳು) ಬಹಳಷ್ಟು ಕಡಿಮೆಯಿದೆ. ಒಟ್ಟಾರೆ, ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ವಲಯದ ಸರಾಸರಿ ವಾರದ ಕೂಲಿಗಳು ಕರ್ನಾಟಕದ್ದಕ್ಕೆ ಹೋಲಿಸಿದರೆ ಹೆಚ್ಚೇ ಇವೆ. ಇದು ನಗರದ ಪ್ರದೇಶಗಳ ವಿಷಯದಲ್ಲಿ ವಿರುದ್ಧವಾಗಿದೆ. ನಗರ ಕರ್ನಾಟಕದಲ್ಲಿ ಕೂಲಿಗಳು (1842.4 ರೂ.ಗಳು) ಬೆಂಗಳೂರು ಗ್ರಾಮಾಂತರದ ನಗರ ಪ್ರದೇಶಗಳಿಗಿಂತ (1494.2 ರೂ.ಗಳು) ಹೆಚ್ಚೇ ಇದೆ.

**ಕೋಷ್ಟಕ 6.5: ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿನ ವಲಯವಾರು ವಾರದ ಸರಾಸರಿ ಕೂಲಿಗಳ ಮುನ್ನಂದಾಜುಗಳು (ರೂಗಳು):**

| ವಲಯ | ಗ್ರಾಮೀಣ | | | ನಗರ | | |
|---|---|---|---|---|---|---|
| | ಪುರುಷ | ಮಹಿಳೆ | ವ್ಯಕ್ತಿಗಳು | ಪುರುಷ | ಮಹಿಳೆ | ವ್ಯಕ್ತಿಗಳು |
| | ಬೆಂಗಳೂರು ಗ್ರಾಮಾಂತರ ಜಿಲ್ಲೆ | | | | | |
| ಕೃಷಿ | ಮಹಿಳೆ | ವ್ಯಕ್ತಿಗಳು | 513.70 | 660.00 | 521.64 | 528.26 |
| ಉತ್ಪಾದನೆ | 923.39 | 854.34 | 919.58 | 1,402.76 | – | 1,402.76 |
| ಇತರ | 1,156.62 | 549.22 | 935.31 | 1,739.44 | 960.13 | 1,633.13 |
| ಕೃಷಿಯೇತರ | 1,040.01 | 701.78 | 927.45 | 1,571.10 | 960.13 | 1,517.95 |
| ಎಲ್ಲ | 820.14 | 416.03 | 632.93 | 1,635.44 | 770.24 | 1,494.16 |
| | ಕರ್ನಾಟಕ | | | | | |
| ಕೃಷಿ | 535.75 | 340.42 | 452.39 | 559.35 | 344.78 | 459.52 |
| ಉತ್ಪಾದನೆ | 859.83 | 630.09 | 812.3 | 1,763.36 | 766.47 | 1,518.89 |
| ಇತರ | 1,066.23 | 739.49 | 981.46 | 2,106.76 | 1724.91 | 2,028.57 |
| ಕೃಷಿಯೇತರ | 963.03 | 684.79 | 896.88 | 1,935.06 | 1245.69 | 1,773.73 |
| ಎಲ್ಲ | 688.85 | 404.97 | 580.68 | 1,982.37 | 1,365.41 | 1,842.49 |

ಸೂಚನೆ: ಕೃಷಿಯೇತರ ಅಂಕಿಗಳನ್ನು ಲೆಕ್ಕ ಮಾಡುವಾಗ ಉತ್ಪಾದನೆ ಮತ್ತು ಇತರ ಗಳ ತೂಕಮಾಡಿದ ಲೆಕ್ಕದ ಸರಾಸರಿ ತೆಗೆದುಕೊಳ್ಳಲಾಗುತ್ತದೆ.

ಮೂಲ: ರಾಷ್ಟ್ರೀಯ ಮಾದರಿ ಸರ್ವೇಕ್ಷಣ 66ನೇ ಸುತ್ತಿನ ದತ್ತಾಂಶ (2009-10)

ಎಲ್ಲ ವಲಯಗಳು ಮತ್ತು ಪ್ರದೇಶಗಳಲ್ಲಿ ಲಿಂಗವಾರು-ಕೂಲಿ ಅಂತರ ಬಹಳವಿದೆ (ಕೋಷ್ಟಕ 6.5 ಮತ್ತು 6.6). ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಹಿಳೆಯರಿಗೆ ಕೊಡುವ ಕೂಲಿ ಸರಿಸುಮಾರು ಪುರುಷರ ಕೂಲಿಯ ಅರ್ಧದಷ್ಟಿರುತ್ತದೆ. ನಗರ ಪ್ರದೇಶಗಳಲ್ಲಿ ಪುರುಷರ ಕೂಲಿ ಮಹಿಳೆಯರ ಕೂಲಿಯ ಸುಮಾರು ಶೇ. 112 ನಷ್ಟು ಹೆಚ್ಚಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಕೂಲಿ ಸರಾಸರಿ ಕೂಲಿಗಿಂತ ಉತ್ತಮವಾಗಿರುತ್ತದೆ. ಆದರೆ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಕೂಲಿಯು ಜಿಲ್ಲೆಯ ಸರಾಸರಿಗಿಂತ ಬಹಳ ಕಡಿಮೆ ಇರುತ್ತದೆ.

**ಕೋಷ್ಟಕ 6.6: ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿನ ಸಾಮಾಜಿಕ ವರ್ಗವಾರು ವಾರದ ಸರಾಸರಿ ಕೂಲಿಗಳ ಮುನ್ನಂದಾಜುಗಳು (ರೂ.ಗಳು): (2009-10)**

| ಸಾಮಾಜಿಕ ಸ್ಥಾನ | ಗ್ರಾಮೀಣ | | | ನಗರ | | |
|---|---|---|---|---|---|---|
| | ಪುರುಷ | ಮಹಿಳೆ | ವ್ಯಕ್ತಿಗಳು | ಪುರುಷ | ಮಹಿಳೆ | ವ್ಯಕ್ತಿಗಳು |
| | ಬೆಂಗಳೂರು ಗ್ರಾಮಾಂತರ ಜಿಲ್ಲೆ | | | | | |
| ಪರಿಶಿಷ್ಟ ಜಾತಿ. | 733.77 | 529.12 | 650.53 | 809.32 | – | 809.32 |
| ಪರಿಶಿಷ್ಟ ಪಂಗಡ | – | – | – | 600.00 | 500.00 | 550.00 |
| ಇತರೆ ಹಿಂದುಳಿದ ವರ್ಗ | 708.39 | 364.01 | 530.19 | 2,167.32 | 655.01 | 1,862.90 |
| ಇತರ | 1,682.18 | 921.8 | 1,561.16 | 1,829.13 | 953.75 | 1,575.03 |
| ಎಲ್ಲ | 820.14 | 416.03 | 632.93 | 1,635.44 | 770.24 | 1,494.16 |
| | ಕರ್ನಾಟಕ | | | | | |
| ಪರಿಶಿಷ್ಟ ಜಾತಿ. | 639.78 | 358.87 | 524.51 | 1,100.41 | 754.89 | 992.00 |
| ಪರಿಶಿಷ್ಟ ಪಂಗಡ | 726.31 | 528.66 | 656.47 | 1,083.36 | 386.87 | 830.48 |
| ಇತರೆ ಹಿಂದುಳಿದ ವರ್ಗ | 682.44 | 415.20 | 577.57 | 1,873.79 | 1,145.34 | 1,739.39 |
| ಇತರ | 756.32 | 409.99 | 645.94 | 2,589.73 | 2,220.13 | 2,505.98 |
| ಎಲ್ಲ | 688.85 | 404.97 | 580.68 | 1,982.37 | 1,365.41 | 1,842.49 |

ಮೂಲ: ರಾಷ್ಟ್ರೀಯ ಮಾದರಿ ಸರ್ವೇಕ್ಷಣ 66ನೇ ಸುತ್ತಿನ ದತ್ತಾಂಶ (2009-10)

## 6.5. ಕೃಷಿ ಹಿಡುವಳಿ

ಕೋಷ್ಟಕ 6.7 ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಕೃಷಿ ಭೂಮಿ ಹಿಡುವಳಿಯ ವಿವರಗಳನ್ನು ತೋರಿಸುತ್ತದೆ. ಮಾಲಿಕತ್ವದ ಸಂಖ್ಯೆ ಮತ್ತು ವಿಸ್ತಾರಗಳಲ್ಲಿ ಬಹಳಷ್ಟು ಅಸಮಾನತೆಗಳಿವೆ. ದತ್ತಾಂಶದ ವಿಶ್ಲೇಷಣೆಯ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಒಟ್ಟಾಗಿ ಕೇವಲ ಶೇ. 12 ರಷ್ಟು ಭೂಮಿಯ ಮಾಲಿಕತ್ವ ಹೊಂದಿದ್ದಾರೆ. ಪುರುಷರು ಶೇ. 81 ರಷ್ಟು ಹಿಡುವಳಿಗಳನ್ನು ಹೊಂದಿದ್ದಾರೆ. ಈ ತಾರತಮ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳಲ್ಲೂ ಕಂಡುಬರುತ್ತದೆ.

**ಕೋಷ್ಟಕ 6.7: ಕೃಷಿ ಭೂಮಿ ಹಿಡುವಳಿಗಳು–ಬೆಂಗಳೂರು ಗ್ರಾಮಾಂತರ ಜಿಲ್ಲೆ (2010–11)**

| ಭೂಮಿ ಹಿಡುವಳಿ ಸ್ಥಾನಮಾನ | ಪರಿಶಿಷ್ಟ ಜಾತಿ. | | ಪರಿಶಿಷ್ಟ ಪಂಗಡ | | ಒಟ್ಟು | | ಒಟ್ಟು ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ. ಶೇ. | ಒಟ್ಟು ಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಶೇ. |
|---|---|---|---|---|---|---|---|---|
| | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | | |
| ಅತಿಸಣ್ಣ ಕೃಷಿ ಭೂಮಿ ಹಿಡುವಳಿದಾರ (< 1 ಹೆ.) | 12,521 | 3094 | 3712 | 874 | 105,067 | 25,664 | 11.94 | 3.51 |
| | (80.2) | (19.8) | (80.9) | (19.1) | (80.3) | (19.7) | | |
| ಸಣ್ಣ ಕೃಷಿ ಭೂಮಿ ಹಿಡುವಳಿದಾರ (1–2 ಹೆ.) | 2,510 | 533 | 919 | 188 | 25,575 | 5,517 | 9.78 | 3.56 |
| | (82.5) | (17.5) | (83.1) | (16.9) | (82.2) | (17.8) | | |
| ಅರೆ–ಮಧ್ಯಮ ಕೃಷಿ ಭೂಮಿ ಹಿಡುವಳಿದಾರ (2–4 ಹೆ.) | 683 | 126 | 339 | 57 | 11,031 | 2,058 | 6.18 | 3.02 |
| | (84.4) | (15.6) | (85.6) | (14.4) | (84.2) | (15.8) | | |
| ಮಧ್ಯಮ ಕೃಷಿ ಭೂಮಿ ಹಿಡುವಳಿದಾರ (4–10 ಹೆ.) | 115 | 20 | 75 | 9 | 3071 | 508 | 3.77 | 2.35 |
| | (85.2) | (14.8) | (89.3) | (10.7) | (85.8) | (14.2) | | |
| ಭಾರಿ ಕೃಷಿ ಭೂಮಿ ಹಿಡುವಳಿದಾರ (> 10 ಹೆ.) | 3 | 0 | 2 | 1 | 276 | 42 | 0.94 | 0.94 |
| | (100) | (0) | (66.7) | (33.3) | (86.5) | (13.5) | | |
| ಒಟ್ಟು ಹಿಡುವಳಿದಾರರು | 15,832 | 3,773 | 5,047 | 1,129 | 145,020 | 33,789 | 10.96 | 3.45 |
| | (80.8) | (19.2) | (81.7) | (18.3) | (81.1) | (18.9) | | |

ಸೂಚನೆಗಳು: ಭೂಮಿ ಹಿಡುವಳಿಗಳನ್ನು ಅತಿ ಹತ್ತಿರದ ಪೂರ್ಣಸಂಖ್ಯೆಯಲ್ಲಿ ಹೇಳಲಾಗಿದೆ: 2. ಕಂಸದಗಲ್ಲಿರುವ ಅಂಕಿಗಳು ಶೇ.ಗಳು.
ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ–ಅಂಶಗಳ ನೋಟ: 2011 –12

ಕೃಷಿ ಭೂಮಿಯ ಬಹುದೊಡ್ಡ ಪ್ರಮಾಣವನ್ನು ಏಕದಳ ಧಾನ್ಯ, ಕಾಳು ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯಲು ಬಳಸಲಾಗುತ್ತಿದೆ. 2010-11ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೃಷಿ ಭೂಮಿಯ ಸುಮಾರು 3/4 ಭಾಗದಲ್ಲಿ ಈ ಬೆಳೆಗಳನ್ನು ಬೆಳೆಯಲಾಗಿದೆ (ಕೋಷ್ಟಕ 6.8). ಇದು ಈ ಜಿಲ್ಲೆಯ ಬಗ್ಗೆ ಒಂದು ಕುತೂಹಲಕಾರಿ ಅಂಶವನ್ನು ಮುಂದಿಡುತ್ತದೆ: ಶೇ.75 ನಷ್ಟು ಕಾರ್ಮಿಕರು ಕೃಷಿಯಲ್ಲಿ ತೊಡಗಿಕೊಂಡಿದ್ದರೂ ಕೃಷಿಯ ಮೇಲೆ ಆರ್ಥಿಕ ಅವಲಂಬನೆ ಇಳಿಮುಖವಾಗುತ್ತಿದೆ. ವಾಣಿಜ್ಯ ಬೆಳೆಗಳು ಒಟ್ಟು ಕೃಷಿ ಭೂಮಿಯ 1/4 ಭಾಗವನ್ನು ವ್ಯಾಪಿಸಿದ್ದರೂ ಹಣ್ಣುಗಳು ಮತ್ತು ವಿಶೇಷವಾಗಿ ತರಕಾರಿಗಳು ವಾಣಿಜ್ಯ ಬೆಳೆಗಳ ಬಹುಭಾಗವನ್ನು ಆಕ್ರಮಿಸಿವೆ. ಈ ಬಗೆಯ ಬದಲಾವಣೆಗೆ ಕಾರಣ, ಬೆಂಗಳೂರು ನಗರದ ಸಾಮೀಪ್ಯ, ನಗರದಿಂದ ತರಕಾರಿಗಳು-ಹಣ್ಣುಗಳಿಗೆ ಭಾರಿ ಬೇಡಿಕೆಯಿದ್ದು ಲಾಭದಾಯಕವಾಗಿದೆ. ನಗರದ ಕುರಿತ ಅಧ್ಯಾಯದಲ್ಲಿ ಇಂತಹ ಕೆಲವಾರು ವಿಷಯಗಳ ಕುರಿತು ಹೆಚ್ಚಿನ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ 6.8: ಬೆಳೆಗಳು–ವಿಸ್ತೀರ್ಣ ಹೆಕ್ಟೇರುಗಳಲ್ಲಿ: ಬೆಂಗಳೂರು ಗ್ರಾಮಾಂತರ ಜಿಲ್ಲೆ (2010–11)**

| ತಾಲೂಕು/ಜಿಲ್ಲೆ | ವರ್ಷ | ಆಹಾರ ಧಾನ್ಯಗಳು | | ಹಣ್ಣುಗಳು | ತರಕಾರಿಗಳು | ಎಣ್ಣೆ ಬೀಜಗಳು | ಕಬ್ಬು | ಒಟ್ಟು |
|---|---|---|---|---|---|---|---|---|
| | | ಏಕದಳ ಧಾನ್ಯಗಳು ಮತ್ತು ಸಣ್ಣ ಕಾಳುಗಳು | ದ್ವಿದಳ ಧಾನ್ಯಗಳು | | | | | |
| ದೇವನಹಳ್ಳಿ | 2005 | 9,819 | 1,197 | 2,168 | 1,302 | 286 | 3 | 14,775 |
| | | (66.40) | (8.10) | (14.60) | (8.81) | (1.90) | (0.02) | |
| | 2011 | 8,769 | 1,498 | 2,028 | 1,068 | 389 | 2 | 13,754 |
| | | (63.70) | (10.80) | (14.70) | (7.70) | (2.80) | (0.00) | |
| ದೊಡ್ಡಬಳ್ಳಾಪುರ | 2005 | 26,445 | 6,761 | 2,070 | 379 | 1,838 | 272 | 37,765 |
| | | (70.00) | (17.90) | (5.40) | (1.00) | (4.80) | (0.70) | |
| | 2011 | 23,006 | 1,807 | 2,833 | 1,675 | 522 | 0 | 29,843 |
| | | (77.00) | (6.00) | (9.40) | (5.60) | (1.70) | (0.00) | |
| ಹೊಸಕೋಟೆ | 2005 | 14,289 | 2,939 | 4,172 | 3,469 | 613 | 10 | 25,492 |
| | | (56.00) | (11.50) | (16.30) | (13.60) | (2.40) | (0.00) | |
| | 2011 | 12,195 | 2,181 | 4,075 | 4,087 | 632 | 0 | 23,170 |
| | | (52.60) | (9.40) | (17.50) | (17.60) | (2.70) | (0.00) | |
| ನೆಲಮಂಗಲ | 2005 | 17,358 | 3,040 | 1,516 | 686 | 708 | 7 | 23,315 |
| | | (74.40) | (13.00) | (6.50) | (2.90) | (3.00) | (0.00) | |
| | 2011 | 15,189 | 1,726 | 1,650 | 553 | 201 | 2 | 19,321 |
| | | (78.60) | (8.90) | (8.50) | (2.80) | (1.00) | (0.00) | |
| ಬೆಂಗಳೂರು ಗ್ರಾಮೀಣ | 2005 | 67,911 | 13,937 | 9,926 | 5,836 | 3,445 | 292 | 101,347 |
| | | (67.00) | (13.70) | (9.70) | (5.70) | (3.40) | (0.20) | |
| | 2011 | 59,159 | 7,212 | 10,586 | 7,383 | 1,744 | 4 | 86,088 |
| | | (68.70) | (8.30) | (12.30) | (8.50) | (2.00) | (0.00) | |

ಸೂಚನೆ: ಕಂಸಗಲ್ಲಿರುವ ಅಂಕಿಗಳು ಶೇ.ಗಳು.

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ–ಅಂಶಗಳ ನೋಟ: 2011 –12

## 6.6 ಜಾನುವಾರು ಮತ್ತು ಕೋಳಿ ಸಾಕಣೆ

2003-04 ಮತ್ತು 2007-08ರ ನಡುವಿನ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಾನುವಾರು ಸಂಖ್ಯೆ ಶೇ.37ರಷ್ಟು ಬೆಳೆದಿದೆ. ಮೇಲೆ ಹೇಳಿದ 4 ತಾಲೂಕುಗಳ ಜಾನುವಾರು ಸಂಖ್ಯೆಗಳಲ್ಲಿ ಹೆಚ್ಚು ಅಂತರವಿಲ್ಲ (ಕೋಷ್ಟಕ 6.9). ಕುತೂಹಲಕಾರಿ ಎಂದರೆ ಇದೇ ಅವಧಿಯಲ್ಲಿ ಕೋಳಿ ಸಾಕಾಣೆ ಭಾರಿ ಕಡಿಮೆಯಾಗಿದೆ. ಭಾರತದಲ್ಲಿ ಕೋಳಿ ಸಾಕಾಣೆ ಉದ್ಯಮದ ಕಾನೂನು ಚೌಕಟ್ಟು ಹಾಗೂ ಮಾನಕಗಳು ಬಹಳವೇನೂ ವಿಕಸನಗೊಂಡಿಲ್ಲ ಮತ್ತು ಪರಿಸರೀಯ ಮಾರ್ಗದರ್ಶಕಗಳೂ ಅಷ್ಟೇನೂ ಸ್ಪಷ್ಟವಾಗಿಲ್ಲ. ಆದಾಗಿಯೂ ಕೋಳಿ ಸಾಕಣೆಗೆ ಉಳಿಗಾಲವಿಲ್ಲದಿರುವುದಕ್ಕೆ ಜನಸಂಖ್ಯೆ-ಭೂಮಿಗಾಗಿ ಇರುವ ಅತಿ ಬೇಡಿಕೆಗಳೇ ಕಾರಣವಾಗಿದೆ. ಇದರ ಜೊತೆಗೆ ಅತಿಯಾದ ಔದ್ಯೋಗೀಕರಣ ಮತ್ತು ಭೂ ಸ್ವಾಧೀನಗಳು ಬೆಂಗಳೂರು ಗ್ರಾಮಾಂತರದಲ್ಲಿ ಕೋಳಿ ಸಾಕಾಣೆ ನಾಶಕ್ಕೆ (ಮುಂದೆ 'ನಗರ ಸಮಸ್ಯೆಗಳು' ಅಧ್ಯಾಯದಲ್ಲಿ ಮತ್ತಷ್ಟು ವಿವರವಾಗಿ ಚರ್ಚಿಸಲಾಗಿದೆ) ಮುಖ್ಯ ಕಾರಣಗಳಿರಬಹುದು.

**ಕೋಷ್ಟಕ 6.9: ಜಾನುವಾರು ಮತ್ತು ಕೋಳೀ ಸಾಕಣೆ**

| ತಾಲೂಕು/ಜಿಲ್ಲೆ | ವರ್ಷ | ಜಾನುವಾರು | ಪೌಲ್ಟ್ರಿ |
|---|---|---|---|
| ದೇವನಹಳ್ಳಿ | 2003 | 105,761 | 1,299,507 |
| | ಶೇ. | 24.47 | 36.69 |
| | 2007 | 163,830 | 71,592 |
| | ಶೇ. | 27.72 | 29.62 |
| ದೊಡ್ಡಬಳ್ಳಾಪುರ | 2003 | 140,641 | 342,910 |
| | ಶೇ. | 32.54 | 9.68 |
| | 2007 | 188,438 | 72,542 |
| | ಶೇ. | 31.88 | 30.02 |
| ಹೊಸಕೋಟೆ | 2003 | 99,900 | 1,633,510 |
| | ಶೇ. | 23.11 | 46.12 |
| | 2007 | 132,643 | 58,202 |
| | ಶೇ. | 22.44 | 24.08 |
| ನೆಲಮಂಗಲ | 2003 | 85,913 | 266,206 |
| | ಶೇ. | 19.88 | 7.52 |
| | 2007 | 106,184 | 39,342 |
| | ಶೇ. | 17.96 | 16.28 |
| ಬೆಂಗಳೂರು ಗ್ರಾಮೀಣ | 2003 | 432,215 | 3,542,133 |
| | ಶೇ. | 100.00 | 100.00 |
| | 2007 | 591,095 | 241,678 |
| | ಶೇ. | 100.00 | 100.00 |

ಸೂಚನೆ: ಶೇ.ಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅನುಪಾತವನ್ನು ತೋರುತ್ತವೆ
ಮೂಲ: ಜಾನುವಾರು ಜನಗಣತಿ 2003 ಮತ್ತು 2007

## 6.7 ಆದಾಯ ಹರಣ[19]

ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ ನಡೆಸಿದ ಸರ್ವೇಕ್ಷಣಗಳ ಬಡತನದ ಮುನ್ನಂದಾಜುಗಳ ಆಧಾರದ ಮೇಲೆ ಮಾಡಿದ ಮನೆ ವೆಚ್ಚಗಳು ಮನೆಗಳಲ್ಲಿನ ದ್ರವ್ಯದ ಬಡತನವನ್ನು ಸೂಚಿಸುತ್ತವೆ. ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆಯ ಸರ್ವೇಕ್ಷಣಗಳು ವಿವಿಧ ಗೃಹಬಳಕೆ ವಸ್ತುಗಳ ಬಳಕೆ ಮತ್ತು ಅವುಗಳ ಮೇಲೆ ಮಾಡಿದ ವೆಚ್ಚಗಳ ವಿವರಗಳನ್ನು ತೋರಿಸುತ್ತವೆ ಮತ್ತು ಸಾಮಾನ್ಯವಾಗಿ ಇವುಗಳನ್ನು ಆದಾಯ ಹಂಚಿಕೆಗೆ ಪ್ರಾತಿನಿಧಿಕವಾಗಿ ಬಳಸಲಾಗುತ್ತವೆ. ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ ಸರ್ವೇಕ್ಷಣಗಳ ಆಧಾರದ ಮೇಲೆ ಮುನ್ನಂದಾಜುಗಳು ತೋರುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶೇ. 10.41 ಜನ ಇನ್ನೂ ಬಡತನ ರೇಖೆಯ ಕೆಳಗಿದ್ದಾರೆ. ಆದರೆ ಶೇ. 29.27 ರಷ್ಟು ಬಡವರನ್ನು ಹೊಂದಿರುವ ಕರ್ನಾಟಕದ್ದಕ್ಕಿಂತ ಇಲ್ಲಿನ ಚಿತ್ರಣ ಉತ್ತಮವಾಗಿದೆ (ಕೋಷ್ಟಕ 10). ಗ್ರಾಮೀಣ ಪ್ರದೇಶಗಳಲ್ಲಿ ಈ ಹೋಲಿಕೆ ಇನ್ನೂ ದಟ್ಟವಾಗಿದೆ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಶೇ. 5.64 ಇದ್ದರೆ, ಗ್ರಾಮೀಣ ಕರ್ನಾಟಕ ಶೇ. 31.65 ಇದೆ. ಈ ಅಂಕಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಶೇ. 26.1 ಇದ್ದರೆ, ಕರ್ನಾಟಕಕ್ಕೆ ಶೇ. 25 ಇದೆ. ಗಿನಿ ಗುಣಾಂಕವನ್ನು ಬಳಸಿ ಆದಾಯ ಅಸಮಾನತೆಗಳನ್ನು ನಿರ್ಣಯಿಸಿದಾಗ ಆದಾಯ ಅಸಮಾನತೆಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗಿಂತ (0.15) ನಗರ ಪ್ರದೇಶಗಳಲ್ಲಿ ಹೆಚ್ಚು ಎಂಬುದು ಕಂಡುಬರುತ್ತದೆ. ಒಟ್ಟಾರೆ ಕರ್ನಾಟಕಕ್ಕೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆದಾಯ ಅಸಮಾನತೆಗಳು ಕಡಿಮೆ ಇದೆ.

**ಕೋಷ್ಟಕ 6.10: ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ಬಡತನದ ಪ್ರಕರಣಗಳು (2009-10)**

| ಜಿಲ್ಲೆ/ರಾಜ್ಯ | ಗ್ರಾಮೀಣ | | ನಗರ | | ಒಟ್ಟು | |
|---|---|---|---|---|---|---|
| | ವ್ಯಕ್ತಿಗಳ ಸಂಖ್ಯೆ | ಅನುಪಾತ (ಶೇ.) | ವ್ಯಕ್ತಿಗಳ ಸಂಖ್ಯೆ | ಅನುಪಾತ (ಶೇ.) | ವ್ಯಕ್ತಿಗಳ ಸಂಖ್ಯೆ | ಅನುಪಾತ (ಶೇ.) |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 70,625 | 5.64 | 99,252 | 26.09 | 169,877 | 10.41 |
| ಕರ್ನಾಟಕ | 10,296,734 | 31.65 | 4,525,247 | 25.00 | 14,821,981 | 29.27 |

ಮೂಲ: ರಾಷ್ಟ್ರೀಯ ಮಾದರಿ ಸರ್ವೇಕ್ಷಣ 66ನೇ ಸುತ್ತಿನ ದತ್ತಾಂಶ (2009-10)

[19] ಬಿಪಿಎಲ್ ಕುಟುಂಬ ಮಾಹಿತಿ ಇಲ್ಲದ ಕಾರಣ ಅದನ್ನು ಚರ್ಚಿಸಿಲ್ಲ

### 6.7.1 ಸಾಮಾಜಿಕ ವರ್ಗವಾರು ಬಡತನ ಮತ್ತು ಜೀವನದ ಮಟ್ಟಗಳು

ಈ ವಿಭಾಗವು ಸಾಮಾಜಿಕ ಸಮೂಹಗಳವಾರು ಬಡತನದ ವ್ಯಾಪ್ತಿಯ ಒಂದು ಸ್ಥೂಲ ಚಿತ್ರಣವನ್ನು ನೀಡುತ್ತದೆ (ಕೋಷ್ಟಕ 6.11). ಗ್ರಾಮೀಣ ಭಾಗಗಳಲ್ಲಿ ಸುಮಾರು ಶೇ 17 ರಷ್ಟು ಪರಿಶಿಷ್ಟ ಜಾತಿ ಕುಟುಂಬಗಳು ಇದ್ದರೆ ಅದರಲ್ಲಿ ಕೇವಲ ಶೇ. 2ರಷ್ಟು ಬಡತನ ರೇಖೆಯ ಕೆಳಗೆ ಇದ್ದಾರೆ. ಗ್ರಾಮೀಣ ಭಾಗಗಳಲ್ಲಿ ಪರಿಶಿಷ್ಟ ಪಂಗಡ ಕುಟುಂಬಗಳು ಕೇವಲ ಶೇ. 0.85 ಮತ್ತು ಇವರೆಲ್ಲ ಬಡವರು. ಆದರೆ ಕರ್ನಾಟಕಕ್ಕೆ ಈ ಸಂಖ್ಯೆಗಳು ವಿಪರೀತ ಹೆಚ್ಚಿವೆ. ಪರಿಶಿಷ್ಟ ಜಾತಿ ಕುಟುಂಬಗಳು ಒಟ್ಟು ಗ್ರಾಮೀಣ ಜನಸಂಖ್ಯೆಯ ಸುಮಾರು ಶೇ.21 ರಷ್ಟು ಇದೆ ಮತ್ತು ಇದರಲ್ಲಿ ಸುಮಾರು ಶೇ. 40 ಬಡವರು. ಗ್ರಾಮೀಣ ಜನಸಂಖ್ಯೆಯ ಕೇವಲ ಶೇ. 8 ರಷ್ಟುಮಾತ್ರ ಪರಿಶಿಷ್ಟ ಪಂಗಡ ಮತ್ತು ಇವರಲ್ಲಿ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಭಾಗ ಬಡತನದ ರೇಖೆಯ ಕೆಳಗಿದ್ದಾರೆ.

**ಕೋಷ್ಟಕ 6.11: ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ಸಾಮಾಜಿಕ ವರ್ಗವಾರು ಜೀವನ, ಅಸಮಾನತೆ ಮತ್ತು ಬಡತನ: (2009-10)**

| ವರ್ಗಗಳು | ಒಟ್ಟು ಜನಸಂಖ್ಯೆಯಲ್ಲಿನ ಪಾಲು (ಶೇ.) | ಸರಾಸರಿ ತಲಾ ಬಳಕೆ (ರೂ/ ತಿಂಗಳು) | ಬಡ ಜನರ ಸಂಖ್ಯೆ (ಶೇ.) | ಗಿನಿ ಅನುಪಾತ | ಒಟ್ಟು ಜನಸಂಖ್ಯೆಯ ಪಾಲು (ಶೇ.) | ಸರಾಸರಿ ತಲಾ ಬಳಕೆ (ರೂ/ ತಿಂಗಳು) | ಬಡ ಜನರ ಸಂಖ್ಯೆ (ಶೇ.) | ಗಿನಿ ಅನುಪಾತ |
|---|---|---|---|---|---|---|---|---|
| | ಗ್ರಾಮೀಣ (ಬೆಂಗಳೂರು ಗ್ರಾಮಾಂತರ) | | | | ನಗರ (ಬೆಂಗಳೂರು ಗ್ರಾಮಾಂತರ) | | | |
| ಪರಿಶಿಷ್ಟ ಜಾತಿ. | 16.72 | 1,018.73 | 2.01 | – | 14.49 | 684.12 | 75.11 | – |
| ಪರಿಶಿಷ್ಟ ಪಂಗಡ | 0.85 | 515.98 | 100.00 | – | 0.07 | 724.75 | 100.00 | – |
| ಓಬಿಸಿ | 63.69 | 970.23 | 6.61 | 0.14 | 54.52 | 1,579.73 | 19.23 | 0.28 |
| ಇತರ | 18.74 | 1,332.74 | 1.33 | – | 30.91 | 1,774.34 | 15.03 | 0.24 |
| ಎಲ್ಲ | 100 | 1,020.66 | 5.64 | 0.15 | 100 | 1,494.83 | 26.09 | 0.30 |
| | ಗ್ರಾಮೀಣ (ಕರ್ನಾಟಕ) | | | | ನಗರ (ಕರ್ನಾಟಕ) | | | |
| ಪರಿಶಿಷ್ಟ ಜಾತಿ. | 21.44 | 808.47 | 40.21 | 0.25 | 10.78 | 1,580.94 | 33.68 | 0.38 |
| ಪರಿಶಿಷ್ಟ ಪಂಗಡ | 8.00 | 799.59 | 52.09 | 0.26 | 5.02 | 1,214.62 | 56.79 | 0.28 |
| ಓಬಿಸಿ | 45.64 | 927.99 | 26.04 | 0.24 | 46.61 | 2,356.35 | 22.55 | 0.42 |
| ಇತರ | 24.92 | 1,042.59 | 28.01 | 0.27 | 37.60 | 2,884.22 | 21.31 | 0.44 |
| ಎಲ್ಲ | 100 | 922.07 | 31.65 | 0.26 | 100 | 2,425.99 | 25.00 | 0.44 |

ಸೂಚನೆ: ಗ್ರಾಮೀಣ ಬಡತನ ರೇಖೆ 629.4 ರೂಗಳು ಮತ್ತು ನಗರ ಬಡತನ ರೇಖೆ 908 ರೂಗಳು. ಈ ರೇಖೆಗಳನ್ನು ಕರ್ನಾಟಕ ಯೋಜನಾ ಆಯೋಗದ ಮುನ್ನಂದಾಜುಗಳಿಂದ ತೆಗೆದುಕೊಳ್ಳಲಾಗಿದೆ. ಇದನ್ನು http://planningcommission.nic.in/news/press_pov1903.pdf ನಿಂದ ತೆಗೆದುಕೊಳ್ಳಲಾಗಿದೆ.

ಮೂಲ: ರಾಷ್ಟ್ರೀಯ ಮಾದರಿ ಸರ್ವೇಕ್ಷಣದ 66ನೇ ಸುತ್ತಿನ ದತ್ತಾಂಶ (2009-10):

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಪ್ರದೇಶಗಳಲ್ಲಿನ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಪ್ರಮಾಣ ಗ್ರಾಮೀಣ ಪ್ರದೇಶಗಳಲ್ಲಿನ ಜನಸಂಖ್ಯೆಯಲ್ಲಿನ ಪರಿಶಿಷ್ಟ ಜಾತಿ ಪ್ರಮಾಣಕ್ಕೆ ಸಮನಾಗಿಯೇ ಇದೆ.ಆದರೆ ಪರಿಶಿಷ್ಟ ಜಾತಿಗೆ ಸೇರಿದ ಬಡ ಕುಟುಂಬಗಳ ಪ್ರಮಾಣ ಮಾತ್ರ ಬಹಳ ಹೆಚ್ಚಿದೆ: ನಗರ ಪ್ರದೇಶಗಳಲ್ಲಿ ಶೇ. 75 ರಷ್ಟು ಇದೆ. ನಗರ ಕರ್ನಾಟಕದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ 11 ರಷ್ಟು ಪರಿಶಿಷ್ಟ ಜಾತಿಗಳಾದರೆ ಅದರಲ್ಲಿ ಸುಮಾರು ಶೇ. 34 ರಷ್ಟು ಪ್ರಮಾಣ ಬಡತನದ ರೇಖೆಯ ಕೆಳಗಿದ್ದಾರೆ. ಮತ್ತೊಂದೆಡೆ ಪರಿಶಿಷ್ಟ ಪಂಗಡಗಳ ಸಂಖ್ಯೆ ಶೇ. 5 ರಷ್ಟು ಇದ್ದು ಅದರಲ್ಲಿ ಶೇ. 57 ರಷ್ಟು ಬಡವರು ಇದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಳಿದ ಸಾಮಾಜಿಕ ಸಮೂಹಗಳಲ್ಲಿ ಇತರ ಹಿಂದುಳಿದ ವರ್ಗಗಳು ಗ್ರಾಮೀಣ ಪ್ರದೇಶಗಳ ಶೇ. 64ರಷ್ಟು ಇದ್ದು ಅದರಲ್ಲಿ ಕೇವಲ ಶೇ. 7ರಷ್ಟು ಮಾತ್ರ ಬಡತನ ರೇಖೆಯ ಕೆಳಗಿದ್ದಾರೆ. ಇಲ್ಲಿನ ನಗರ ಪ್ರದೇಶಗಳಲ್ಲಿ ಇತರ ಹಿಂದುಳಿದ ವರ್ಗಗಳ ಪ್ರಮಾಣ ಸುಮಾರು ಶೇ. 55 ರಷ್ಟು ಇದ್ದು ಅದರಲ್ಲಿ ಶೇ. 19 ರಷ್ಟು ಬಡವರು ಇದ್ದಾರೆ.ಇದು ಗ್ರಾಮೀಣ ಭಾಗಗಳಲ್ಲಿನ ಪ್ರಮಾಣದ ಸುಮಾರು ಮೂರು ಪಟ್ಟು ಆಗುತ್ತದೆ.

## 6.8 ಉದ್ಯೋಗ

ಮಾನವನ ಅಭಿವೃದ್ಧಿ ಹಾಗೂ ಯೋಗಕ್ಷೇಮಕ್ಕೆ ಉದ್ಯೋಗದ ಸ್ಥಿತಿಗತಿಗಳು ಬಹಳ ಮುಖ್ಯ. ಒಂದು ನೀತಿರಚನೆಯ ದೃಷ್ಟಿಕೋಣದಿಂದ ನೋಡಿದರೆ, ವಿವಿಧ ಉದ್ಯೋಗಾವಕಾಶಗಳ ಮಹತ್ವವನ್ನು ನಿರ್ಣಯಿಸಲು ಕಾರ್ಯಪಡೆಯ ಹಂಚಿಕೆಯ ಒಂದು ಸ್ಥೂಲಚಿತ್ರಣ ಕೂಡ ಮುಖ್ಯವಾಗುತ್ತದೆ.

### 6.8.1 ದುಡಿಮೆ ಸಹಭಾಗಿತ್ವ ಪ್ರಮಾಣ

2002ರಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣ53ಶೇ. ಇದ್ದದ್ದು 2011ರಲ್ಲಿ ಶೇ. 52ಗೆ ಇಳಿದಿದೆ. ಆದರೆ ಕಾರ್ಯಪಡೆಯ ಸಂಖ್ಯೆ 2001ರಲ್ಲಿ 4 ಲಕ್ಷದಿಂದ 2011ರಲ್ಲಿ 4.6 ಲಕ್ಷಕ್ಕೆ ಏರಿದೆ (ವರ್ಷಕ್ಕೆ ಶೇ.1.61). ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ನೆಲಮಂಗಲಗಳಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣಗಳಲ್ಲಿ ಅಷ್ಟೇನೂ ಬದಲಾವಣೆ ಆಗಿರದಿದ್ದರೂ ಹೊಸಕೋಟೆಯಲ್ಲಿ ಮಾತ್ರ ಸುಮಾರು ಶೇ. 2.8 ರಷ್ಟು ಇಳಿಮುಖವಾಗಿದೆ. ನಗರ ಭಾಗಗಳಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣಗಳು ಏರಿದ್ದರೆ ಗ್ರಾಮೀಣ ಭಾಗಗಳಲ್ಲಿ ಇಳಿಮುಖವಾಗಿದೆ.

**ಕೋಷ್ಟಕ 6.12: ದುಡಿಮೆ ಸಹಭಾಗಿತ್ವ ಪ್ರಮಾಣ (2001 ಮತ್ತು 2011)**

| ತಾಲೂಕು/ಜಿಲ್ಲೆ/ರಾಜ್ಯ | 2001 | | | 2011 | | |
|---|---|---|---|---|---|---|
| | ನಗರ | ಗ್ರಾಮೀಣ | ವ್ಯಕ್ತಿಗಳು | ನಗರ | ಗ್ರಾಮೀಣ | ವ್ಯಕ್ತಿಗಳು |
| ದೇವನಹಳ್ಳಿ | 44.86 | 58.58 | 54.69 | 46.03 | 56.95 | 53.69 |
| ದೊಡ್ಡಬಳ್ಳಾಪುರ | 45.23 | 58.40 | 54.59 | 47.40 | 58.50 | 54.76 |
| ಹೊಸಕೋಟೆ | 42.01 | 54.69 | 52.62 | 43.75 | 51.55 | 49.92 |
| ನೆಲಮಂಗಲ | 39.56 | 52.51 | 50.63 | 43.96 | 50.72 | 49.19 |
| ಬೆಂಗಳೂರು ಗ್ರಾಮೀಣ | 43.77 | 56.05 | 53.28 | 45.70 | 54.38 | 52.03 |
| ಕರ್ನಾಟಕ | 40.77 | 57.18 | 51.53 | 44.66 | 56.15 | 51.68 |

ಮೂಲ: 2001 ಮತ್ತು 2011 ಜನಗಣತಿ

### 6.8.2. ಸಾಮಾಜಿಕ ವರ್ಗವಾರು ದುಡಿಮೆ ಸಹಭಾಗಿತ್ವ ಪ್ರಮಾಣ

2011ರ ಜನಗಣತಿಯು, ಪರಿಶಿಷ್ಟ ಜಾತಿಮತ್ತು ಪರಿಶಿಷ್ಟ ಪಂಗಡ ಕಾರ್ಮಿಕರ ಚಟುವಟಿಕೆಗಳ ಸ್ಥೂಲ ವರ್ಗೀಕರಣದ ಬಗ್ಗೆ ದತ್ತಾಂಶ ನೀಡುತ್ತದೆ. ಈ ಜನಗಣತಿ ಪ್ರಕಾರ ಒಟ್ಟು ಕಾರ್ಮಿಕರ (ಮುಖ್ಯ ಮತ್ತು ಅತಿ ಸಣ್ಣ) ಶೇ. 22.2 ರಷ್ಟು ಪ್ರಮಾಣ ಪರಿಶಿಷ್ಟ ಜಾತಿ ಮತ್ತು ಶೇ. 5.69 ರಷ್ಟು ಪ್ರಮಾಣ ಪರಿಶಿಷ್ಟ ಪಂಗಡಕ್ಕೆ ಸೇರಿರುತ್ತಾರೆಂದು ತಿಳಿಯುತ್ತದೆ. ಒಟ್ಟು ಕೃಷಿಕರಲ್ಲಿ ಸರಿಸುಮಾರು ಶೇ. 15.6 ರಷ್ಟು ಪರಿಶಿಷ್ಟ ಜಾತಿ ಮತ್ತು ಶೇ. 5.7 ರಷ್ಟು ಪರಿಶಿಷ್ಟ ಪಂಗಡದವರು ಇದ್ದಾರೆ. ಪರಿಶಿಷ್ಟ ಜಾತಿ ಕೃಷಿ ಕಾರ್ಮಿಕರ ಪ್ರಮಾಣ ಶೇ. 42.9 ಇದ್ದು ಪರಿಶಿಷ್ಟ ಪಂಗಡದವರು ಶೇ. 8.5 ಇದ್ದಾರೆ (ಕೋಷ್ಟಕ 6.13). ಇದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕಾರ್ಮಿಕರು ಪ್ರಧಾನವಾಗಿ ಕೃಷಿ ವಲಯದಲ್ಲಿ ಕಂಡುಬರುತ್ತಾರೆಂಬುದು ತಿಳಿಯುತ್ತದೆ. ಅಲ್ಲಿ ಅವರು ಹೆಚ್ಚಾಗಿ ಕೆಳ-ಸ್ತರದ ಕೆಲಸಗಳನ್ನು ಮಾಡುತ್ತಾರೆ.

**ಕೋಷ್ಟಕ 6.13: ಸಾಮಾಜಿಕ ವರ್ಗವಾರು ಕಾರ್ಮಿಕರ ವರ್ಗೀಕರಣ (2011)**

| ಕಾರ್ಮಿಕರ ವರ್ಗಗಳು | ಕಾರ್ಮಿಕರ ಸಂಖ್ಯೆ | | | | | | | | | ಒಟ್ಟು ಕಾರ್ಮಿಕರಲ್ಲಿ ಪರಿಶಿಷ್ಟ ಜಾತಿ. ಶೇ. | ಒಟ್ಟು ಕಾರ್ಮಿಕರಲ್ಲಿ ಪರಿಶಿಷ್ಟ ಪಂಗಡ ಶೇ. |
|---|---|---|---|---|---|---|---|---|---|---|---|
| | ಪರಿಶಿಷ್ಟ ಜಾತಿ. | | | ಪರಿಶಿಷ್ಟ ಪಂಗಡ | | | ಒಟ್ಟು | | | | |
| | ಪುರುಷ | ಮಹಿಳೆ | ವ್ಯಕ್ತಿಗಳು | ಪುರುಷ | ಮಹಿಳೆ | ವ್ಯಕ್ತಿಗಳು | ಪುರುಷ | ಮಹಿಳೆ | ವ್ಯಕ್ತಿಗಳು | | |
| ಕೃಷಿಕರು | 14,157 | 5,754 | 19,911 | 5,142 | 2194 | 7,336 | 92,771 | 34,999 | 127,770 | 15.58 | 5.74 |
| | (71.10) | (28.90) | | (70.09) | (29.91) | | (72.61) | (27.39) | | | |
| ಕೃಷಿ ಕೂಲಿಕಾರರು | 17,975 | 18,128 | 36,103 | 3,570 | 3610 | 7,180 | 40,018 | 44,090 | 84,108 | 42.92 | 8.54 |
| | (49.79) | (50.21) | | (49.72) | (50.28) | | (47.58) | (52.42) | | | |
| HH ಉದ್ಯಮಗಳಲ್ಲಿನ ಗೃಹ ಕಾರ್ಮಿಕರು | 1,632 | 1,195 | 2,827 | 316 | 265 | 581 | 12,111 | 7,346 | 19,457 | 14.53 | 2.99 |
| | (57.73) | (42.27) | | (54.39) | (45.61) | | (62.24) | (37.76) | | | |
| ಇತರೆ ಕಾರ್ಮಿಕರು | 30,628 | 12,619 | 43,247 | 7,633 | 3,431 | 11,064 | 170,599 | 57,957 | 228,556 | 18.92 | 4.84 |
| | (70.82) | (29.18) | | (68.99) | (31.01) | | (74.64) | (25.36) | | | |
| ಒಟ್ಟು | 64,392 | 37,696 | 102,088 | 16,661 | 9,500 | 26,161 | 315,499 | 144,392 | 459,891 | 22.20 | 5.69 |
| | (63.07) | (36.93) | | (63.69) | (36.31) | | (68.60) | (31.40) | | | |

ಸೂಚನೆ: ಶೇ.ಗಳನ್ನು ಕಂಸದಲ್ಲಿ ನೀಡಲಾಗಿದೆ.
ಮೂಲ: 2011ಜನಗಣತಿ

### 6.8.3. ಮಹಿಳಾ ಕಾರ್ಮಿಕರ ದುಡಿಮೆ ಸಹಭಾಗಿತ್ವ ಪ್ರಮಾಣ

2001-2011 ನಡುವಿನ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಹಿಳಾ ಕಾರ್ಮಿಕರ ದುಡಿಮೆ ಸಹಭಾಗಿತ್ವ ಪ್ರಮಾಣದ ಶೇ.4 ರಷ್ಟು ಇಳಿದಿದೆ (ಕೋಷ್ಟಕ 6.14). ಇದು ಭಾರತದುದ್ದಗಲಕ್ಕೂ ಇರುವ ಪ್ರವೃತ್ತಿಯಂತೆಯೇ ಇದೆ. ನೆಫ್ ಮತ್ತು ಇತರರು (2012), ಓಲ್ಸನ್ ಮತ್ತು ಮೆಹತಾ (2006), ಲಹೋಟಿ ಮತ್ತು ಸ್ವಾಮಿನಾಥನ್ (2013), ಲಾಸನ್ ಮತ್ತು ಪೀಎಟರ್ಸ್ (2013), ಮತ್ತು ಪಟೇಲ್ (2012) ಈ ಪ್ರವೃತ್ತಿಗೆ ವಿವಿಧ ಕಾರಣಗಳನ್ನು ನೀಡಿದ್ದಾರೆ. ಅವುಗಳೆಂದರೆ, ಮಹಿಳೆಯರ ಶಿಕ್ಷಣ, ಆದಾಯ ಪ್ರಭಾವ (ಮನೆಯ ಆದಾಯ ಹೆಚ್ಚಿದಂತೆ ಮಹಿಳೆಯರು ಕೃಷಿ ಚಟುವಟಿಕೆಗಳಿಂದ ಹಿಂದೆ ಸರಿಯುತ್ತಾರೆ), ಪುರುಷರ ಶಿಕ್ಷಣ ಹೆಚ್ಚುತ್ತಿರುವುದು (ಮನೆಯ ಆದಾಯ ಹೆಚ್ಚುತ್ತದೆ), ಮತ್ತು ಉದ್ಯೋಗಾವಕಾಶಗಳ ಕೊರತೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಕುರಿತು ನಿರ್ದಿಷ್ಟ ಅಧ್ಯಯನಗಳನ್ನು ಮಾಡಿಲ್ಲದಿರುವುದರಿಂದ ಇದರಲ್ಲಿ ಯಾವುದು ಸರಿಯಾದ ಅಥವಾ ಮುಖ್ಯ ಕಾರಣ ಎಂದು ನಿರ್ಧರಿಸುವುದು ಕಷ್ಟ.

ಮಹಿಳಾ ಕಾರ್ಮಿಕರ ದುಡಿಮೆ ಸಹಭಾಗಿತ್ವ ಪ್ರಮಾಣದ ಬಗ್ಗೆ ಇನ್ನೂ ಸೂಕ್ಷ್ಮವಾದ ಅಧ್ಯಯನ ಮಾಡಿದಾಗ (ಸಾಮಾನ್ಯ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಲ್ಲಿ) ಪರಿಶಿಷ್ಟ ಜಾತಿ ಮಹಿಳೆಯರ ಭಾಗವಹಿಸುವಿಕೆ ಶೇ. 36.93

ಹಾಗೂ ಪರಿಶಿಷ್ಟ ಪಂಗಡ ಶೇ. 36.31 ಇದ್ದು ಎಲ್ಲ ಸಮೂಹಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಇರುವ ಶೇ.31 ಕ್ಕಿಂತ ಹೆಚ್ಚಿದೆ ಎಂಬುದು ತಿಳಿದುಬರುತ್ತದೆ. ಆದರೆ ವಿಭಿನ್ನ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳಾ ಕಾರ್ಮಿಕರ ಸಂಯೋಜನೆಯನ್ನು ತೆಗೆದುಕೊಂಡಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಎಲ್ಲ ಸಮೂಹಗಳಲ್ಲೂ ಒಂದೇ ಬಗೆಯ ಪ್ರವೃತ್ತಿ ಕಂಡುಬರುತ್ತದೆ. ಒಟ್ಟು ಕೃಷಿಕರಲ್ಲಿ ಮಹಿಳಾ ಕಾರ್ಮಿಕರ ಅನುಪಾತ ಸುಮಾರು ಶೇ.27.4 ರಷ್ಟಿದೆ. ಪರಿಶಿಷ್ಟ ಜಾತಿ(ಶೇ. 28.9) ಮತ್ತು ಪರಿಶಿಷ್ಟ ಪಂಗಡ (ಶೇ. 29.9)ಮಹಿಳೆಯರು ಕೂಡ ಇದೇ ಬಗೆಯ ಪ್ರವೃತ್ತಿಯನ್ನು ತೋರುತ್ತದೆ. ಒಟ್ಟು ಕೃಷಿ ಕಾರ್ಮಿಕರಲ್ಲಿ ಶೇ.52.4 ಮಹಿಳೆಯರು ಮತ್ತು ಗೃಹೋದ್ಯಮಗಳಲ್ಲಿನ ಒಟ್ಟು ಕಾರ್ಮಿಕರಲ್ಲಿ ಸುಮಾರು ಶೇ. 37.8 ಮಹಿಳೆಯರು ಇದ್ದಾರೆ. ಅಂತೆಯೇ ಒಟ್ಟಾರೆ ಕೃಷಿ ಕೂಲಿಕಾರರಲ್ಲಿ ಶೇ. 50 ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮಹಿಳೆಯರು ಇದ್ದಾರೆ. ಸುಮಾರು ಶೇ. 42 ಪರಿಶಿಷ್ಟ ಜಾತಿಮಹಿಳೆಯರು ಮತ್ತು ಶೇ.54 ಪರಿಶಿಷ್ಟ ಪಂಗಡಮಹಿಳೆಯರು ಗೃಹೋದ್ಯಮಗಳಲ್ಲಿ ಕೆಲಸ ಮಾಡುತ್ತಾರೆ. ಕೃಷಿ ವಲಯದಲ್ಲಿ ಹಾಗೂ ಗೃಹೋದ್ಯಮಗಳಲ್ಲಿ ಮಹಿಳೆಯರು ಕೆಳಮಟ್ಟದ ಕೌಶಲಗಳನ್ನು ಬೇಡುವ ದೈಹಿಕ ಶ್ರಮದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. 'ಇತರ ಕಾರ್ಮಿಕರಲ್ಲಿ' ಮಹಿಳೆಯರ ಪಾಲು ಸುಮಾರು ಶೇ.25 ಇದೆ. ಇಲ್ಲಿ ತೃತೀಯ ಹಾಗೂ ಉತ್ಪಾದನಾ ವಲಯಗಳಲ್ಲಿ ಕೌಶಲಪೂರ್ಣ ಕಾರ್ಮಿಕರ ಅಗತ್ಯವಿರುತ್ತದೆ. ಒಟ್ಟು ಪರಿಶಿಷ್ಟ ಜಾತಿಮತ್ತು ಪರಿಶಿಷ್ಟ ಪಂಗಡ ಕಾರ್ಮಿಕರಲ್ಲಿ ಮಹಿಳೆಯರ ಪಾಲು ಸುಮಾರು ಶೇ. 38 ಇದ್ದು ಒಟ್ಟಾರೆ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣ ಸುಮಾರು ಶೇ. 31-ಕ್ಕಿಂತ ಗಣನೀಯವಾಗಿ ಹೆಚ್ಚಿದೆ. ಅಂತೆಯೇ 'ಇತರ ಕಾರ್ಮಿಕರ ವರ್ಗ'ದಲ್ಲಿನ ಒಟ್ಟಾರೆ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣ ಇರುವುದಕ್ಕಿಂತ ಒಟ್ಟಾರೆ ಇದೇ ವರ್ಗದಲ್ಲಿರುವ ಒಟ್ಟಾರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣ ಗಣನೀಯವಾಗಿ ಹೆಚ್ಚಿದೆ.

**ಕೋಷ್ಟಕ 6.14: ಲಿಂಗಾಧಾರಿತ ದುಡಿಮೆ ಸಹಭಾಗಿತ್ವ ಪ್ರಮಾಣ (2001 ಮತ್ತು 2011)**

| ತಾಲೂಕು/ಜಿಲ್ಲೆ/ ರಾಜ್ಯ | 2001 | | | 2011 | | |
|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ದೇವನಹಳ್ಳಿ | 68.91 | 39.65 | 54.69 | 69.45 | 36.94 | 53.69 |
| ದೊಡ್ಡಬಳ್ಳಾಪುರ | 69.72 | 38.71 | 54.59 | 70.08 | 38.64 | 54.76 |
| ಹೊಸಕೋಟೆ | 67.92 | 36.19 | 52.62 | 69.29 | 29.08 | 49.92 |
| ನೆಲಮಂಗಲ | 65.68 | 34.88 | 50.63 | 68.76 | 28.88 | 49.19 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 68.24 | 37.46 | 53.28 | 69.45 | 33.61 | 52.03 |
| ಕರ್ನಾಟಕ | 65.65 | 36.95 | 51.53 | 66.94 | 36.04 | 51.68 |

ಮೂಲ: 2001 ಮತ್ತು 2011 ಜನಗಣತಿಗಳು

## 6.9 ಬಾಲ ಕಾರ್ಮಿಕರು

ಬಾಲ ಕಾರ್ಮಿಕರ ಬಗ್ಗೆ ವಿಶ್ವಸನೀಯ ಅಂಕಿಅಂಶಗಳು ಇಲ್ಲ. ರಾಷ್ಟ್ರೀಯ ಮಾದರಿ ಸರ್ವೇಕ್ಷಣಗಳ ಮುನ್ನಂದಾಜುಗಳನ್ನು ಬಳಸಿಕೊಳ್ಳಲು ಪ್ರಯತ್ನಿಸಿದರೂ ಅವುಗಳಲ್ಲಿನ ಗಮನಿಕೆಗಳ ಸಂಖ್ಯೆ ಕಡಿಮೆ ಇದ್ದುದರಿಂದ ಅವುಗಳನ್ನು ತಿರುಚಲಾಗಿದೆ ಮತ್ತು ನಂಬಲರ್ಹವಲ್ಲ.

## 6.10 ಉದ್ಯೋಗದ ಸಂರಚನೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಒಟ್ಟು ಕಾರ್ಮಿಕ ಪಡೆಯಲ್ಲಿ ಮುಖ್ಯ ಮತ್ತು ಅತಿಸಣ್ಣ ಕಾರ್ಮಿಕರ[20] ಅನುಪಾತ 2001-2011 ಅವಧಿಯಲ್ಲಿ ಸರಿಸುಮಾರು ಏಕಪ್ರಕಾರವಾಗಿಯೇ ಇದೆ.

**ಕೋಷ್ಟಕ 6.15: ಮುಖ್ಯ ಮತ್ತು ಅತಿ ಸಣ್ಣ ಕಾರ್ಮಿಕರು (2001 ಮತ್ತು 2011)**

| ತಾಲೂಕು/ಜಿಲ್ಲೆ/ರಾಜ್ಯ | 2001 | | | 2011 | | |
|---|---|---|---|---|---|---|
| | ಮುಖ್ಯ | ಅತಿ ಸಣ್ಣ | ಒಟ್ಟು | ಮುಖ್ಯ | ಅತಿ ಸಣ್ಣ | ಒಟ್ಟು |
| ದೇವನಹಳ್ಳಿ | 74,971 | 13,562 | 88,533 | 84,621 | 15,572 | 100,193 |
| | (84.68) | (15.32) | (100.00) | (84.46) | (15.54) | (100.00) |
| ದೊಡ್ಡಬಳ್ಳಾಪುರ | 105,989 | 21,854 | 127,843 | 121,448 | 25,813 | 147,261 |
| | (82.91) | (17.09) | (100.00) | (82.47) | (17.53) | (100.00) |
| ಹೊಸಕೋಟೆ | 86,136 | 15,618 | 101,754 | 103,913 | 15,779 | 119,692 |
| | (84.65) | (15.35) | (100.00) | (86.82) | (13.18) | (100.00) |
| ನೆಲಮಂಗಲ | 64,511 | 13,567 | 78,078 | 80,007 | 12,738 | 92,745 |
| | (82.62) | (17.38) | (100.00) | (86.27) | (13.73) | (100 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 331,607 | 64,601 | 396,208 | 389,989 | 69,902 | 459,891 |
| | (83.70) | (16.30) | (100.00) | (84.80) | (15.20) | (100.00) |
| ಕರ್ನಾಟಕ | 19,364,759 | 4,170,032 | 23,534,791 | 23,397,181 | 4,475,416 | 27,872,597 |
| | (82.28) | (17.72) | (100.00) | (83.94) | (16.06) | (100.00) |

ಸೂಚನೆ: ಕಂಸಗಳಲ್ಲಿ ಶೇ. ನೀಡಲಾಗಿದೆ

ಮೂಲ: ಜನಗಣತಿ 2001 ಮತ್ತು 2011

[20] ಮುಖ್ಯ ಕಾರ್ಮಿಕರೆಂದರೆ ಒಂದು ವರ್ಷದಲ್ಲಿ 6 ತಿಂಗಳು ಅಥವಾ ಅದಕ್ಕೂ ಹೆಚ್ಚು ಕಾಲ ಕೆಲಸ ಮಾಡಿದವರು ಮತ್ತು ಅತಿ ಸಣ್ಣ ಮುಖ್ಯ ಕಾರ್ಮಿಕರೆಂದರೆ 6 ತಿಂಗಳಗಿಂತ ಕಡಿಮೆ ಅವಧಿ ಕೆಲಸ ಮಾಡಿದವರು

ಒಟ್ಟು ಕಾರ್ಮಿಕರ ಸಂಖ್ಯೆಯಲ್ಲಿ ಅಮುಖ್ಯ ಕಾರ್ಮಿಕರ ಪ್ರಮಾಣ 2001ರಲ್ಲಿ ಶೇ. 16.3 ಇದ್ದರೆ 2011ರಲ್ಲಿ ಶೇ. 15.2 ಇದೆ. ಮತ್ತೊಂದೆಡೆ ಮುಖ್ಯ ಕಾರ್ಮಿಕರ ಸಂಖ್ಯೆ 2001ರಲ್ಲಿ ಶೇ.83.7 ಇದ್ದರೆ 2011ರಲ್ಲಿ ಶೇ.84.8 ಇದೆ. ಜಿಲ್ಲೆಯ 4 ತಾಲೂಕುಗಳಲ್ಲೂ ಇದೇ ಪ್ರವೃತ್ತಿ ಕಂಡುಬರುತ್ತದೆ (ಕೋಷ್ಟಕ 6.15).

## 6.10.1 ಉದ್ಯೋಗಗಳ ಕ್ಷೇತ್ರವಾರು ಸಂರಚನೆ

ಗ್ರಾಮೀಣ ಭಾಗಗಳಲ್ಲಿ ಈಗಲೂ ಕೃಷಿ ಪ್ರಧಾನ ಉದ್ಯೋಗ ಮೂಲವಾಗಿದೆ. ಈ ಜಿಲ್ಲೆಯ ಗ್ರಾಮೀಣ ಕಾರ್ಮಿಕರಲ್ಲಿ ಕೃಷಿಯಲ್ಲಿ ನಿರತರಾದವರ (ಪಶು ಸಂಗೋಪನೆ, ಅರಣ್ಯ ಮತ್ತು ಮರದ ದಿಮ್ಮಿಗಳು ಹಾಗೂ ಮೀನುಗಾರಿಕೆ ಕೆಲಸಗಳೂ ಸೇರಿದಂತೆ) ಪ್ರಮಾಣ ಸುಮಾರು ಶೇ.71.84 ರಷ್ಟು ಇದೆ. ಆದರೆ ಕರ್ನಾಟಕ ರಾಜ್ಯದ ಪ್ರಮಾಣ ಶೇ.74.95 ರಷ್ಟು ಇದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ, ಉದ್ಯೋಗ ಮೂಲವಾಗಿ ಉತ್ಪಾದನಾ ವಲಯದ ಪಾಲು ಶೇ. 6.21 ರಷ್ಟು ಇದ್ದರೆ, ಅಲ್ಲಿನ ನಗರ ಭಾಗಗಳಲ್ಲಿ ಅದು ಶೇ.36.98 ರಷ್ಟು ಇದೆ. ಇಡೀ ಜಿಲ್ಲೆಯನ್ನೇ ಒಟ್ಟಿಗೆ ಪರಿಗಣಿಸಿದರೆ ಕೃಷಿ ಹಾಗೂ ಉತ್ಪಾದನಾ ವಲಯಗಳಲ್ಲಿ ಕಾರ್ಮಿಕರ ಪ್ರಮಾಣ ಅನುಕ್ರಮವಾಗಿ ಶೇ. 60.69 ಮತ್ತು ಶೇ. 10.24ರಷ್ಟಿದೆ (ಕೋಷ್ಟಕ 6.16).

**ಕೋಷ್ಟಕ 6.16: ಕ್ಷೇತ್ರವಾರು ಕಾರ್ಮಿಕರ ಹಂಚಿಕೆ –ಸಾಮಾನ್ಯ ಸ್ಥಿತಿಗತಿ (ಮುಖ್ಯ ಮತ್ತು ಉಪ ಕಸುಬುಗಳಲ್ಲಿ) (ಶೇ.)(2009–10)**

| ಜಿಲ್ಲೆ/ರಾಜ್ಯ | ಗ್ರಾಮೀಣ | | | ನಗರ | | | ಒಟ್ಟು | | |
|---|---|---|---|---|---|---|---|---|---|
| | ಕೃಷಿ | ತಯಾರಿಕೆ | ಕೃಷಿಯೇತರ | ಕೃಷಿ | ತಯಾರಿಕೆ | ಕೃಷಿಯೇತರ | ಕೃಷಿ | ತಯಾರಿಕೆ | ಕೃಷಿಯೇತರ |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 71.84 | 6.21 | 28.16 | 11.58 | 36.98 | 88.42 | 60.69 | 11.90 | 39.31 |
| ಕರ್ನಾಟಕ | 74.95 | 5.93 | 25.05 | 8.97 | 20.33 | 91.03 | 55.18 | 10.24 | 44.82 |

ಮೂಲ: ರಾಷ್ಟ್ರೀಯ ಮಾದರಿ ಸರ್ವೇಕ್ಷಣದ 66ನೇ ಸುತ್ತಿನ ದತ್ತಾಂಶ (2009–10)

## 6.11 ನಿರುದ್ಯೋಗ

ಸಾಮಾನ್ಯವಾಗಿ ನಿರುದ್ಯೋಗದ ವಿಸ್ತಾರವನ್ನು ವಿವಿಧ ದೃಷ್ಟಿಕೋನಗಳಿಂದ ಪರಿಶೀಲಿಸಲಾಗುತ್ತದೆ: (1) ಸಾಮಾನ್ಯ ಸ್ಥಿತಿಗತಿ; (2) ಹಾಲಿ ವಾರದ ಸ್ಥಿತಿಗತಿ; ಮತ್ತು (3) ಹಾಲಿ ದೈನಂದಿನ ಸ್ಥಿತಿಗತಿ. ಕೋಷ್ಟಕ 6.17ರಲ್ಲಿ 2009-10 ವರ್ಷಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಾಗೂ ಕರ್ನಾಟಕದ ನಿರುದ್ಯೋಗದ ಅಂದಾಜುಗಳನ್ನು ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ನೀಡಲಾಗಿದೆ. ಸಾಮಾನ್ಯ ಸ್ಥಿತಿಗತಿಯ ದೃಷ್ಟಿಕೋನದ ಅಂದಾಜು ದೀರ್ಘಕಾಲಿಕ ನಿರುದ್ಯೋಗದ ಪ್ರಮಾಣವನ್ನು ಸೂಚಿಸುತ್ತದೆ. ಈ ಸಾಮಾನ್ಯ ಸ್ಥಿತಿಗತಿ ಅಂದಾಜನ್ನು ಅಧೀನ-ಸ್ಥಿತಿಯಲ್ಲಿರುವ ಕಾರ್ಮಿಕರಿಗೆ ಸರಿಹೊಂದಿಸಿದಾಗ ಅದನ್ನು 'ಸರಿಹೊಂದಿಸಿದ ಸಾಮಾನ್ಯ ಸ್ಥಿತಿಗತಿ' ಎಂದು ಕರೆಯಲಾಗುತ್ತದೆ. ಹಾಲಿ ವಾರದ ಸ್ಥಿತಿಗತಿ ಅಂದಾಜುಗಳು ಹಾಲಿ ನಿರುದ್ಯೋಗ ಪ್ರಮಾಣವನ್ನು ತೋರಿಸುತ್ತದೆ. ಹಾಲಿ ದೈನಂದಿನ ಸ್ಥಿತಿಗತಿ ಪ್ರಮಾಣವು ದೀರ್ಘಕಾಲಿಕ ನಿರುದ್ಯೋಗ, ತಾತ್ಕಾಲಿಕ ನಿರುದ್ಯೋಗ ಮತ್ತು ಕಡಿಮೆ-ಉದ್ಯೋಗವನ್ನು ತೋರಿಸುತ್ತದೆ. ಈ ಎಲ್ಲ ಪ್ರಮಾಣಗಳಲ್ಲಿ ಅತ್ಯಂತ ಹಿಡಿತದ ಮತ್ತು ಸಮಗ್ರವಾದ ಪ್ರಮಾಣವೆಂದರೆ ಹಾಲಿ ದೈನಂದಿನ ಸ್ಥಿತಿಗತಿ. ಇದು ಒಂದು ದಿನದ ನಿರುದ್ಯೋಗದ ಸರಾಸರಿ ಮಟ್ಟ. ಈ ಪ್ರಮಾಣದಿಂದ ನೋಡಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮೀಣ ಭಾಗಗಳ ನಿರುದ್ಯೋಗ ಪ್ರಮಾಣ (6.16) ಕರ್ನಾಟಕದ ಪ್ರಮಾಣ(7.68) ಕ್ಕಿಂತ ಕಡಿಮೆ ಇದೆ (ಕೋಷ್ಟಕ 6.16). ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪುರುಷರಿಗಿಂತ (5.19) ಮಹಿಳೆಯರಲ್ಲಿ (7.55) ನಿರುದ್ಯೋಗ ಪ್ರಮಾಣ ಹೆಚ್ಚಿದೆ. ಇದು ಇಡೀ ಗ್ರಾಮೀಣ ಕರ್ನಾಟಕದಲ್ಲಿರುವ ಪ್ರವೃತ್ತಿಗಿಂತ ಭಿನ್ನವಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಪುರುಷರಿಗಿಂತ (17.5) ಮಹಿಳೆಯರಲ್ಲಿ (4.67) ನಿರುದ್ಯೋಗ ಪ್ರಮಾಣ ಬಹಳಷ್ಟು ಹೆಚ್ಚಿದೆ. ಒಟ್ಟಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗ್ರಾಮೀಣ ಭಾಗಗಳಿಗಿಂತ ನಗರ ಭಾಗಗಗಳಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಿದೆ. ಆದರೆ ಉಳಿದ ಕರ್ನಾಟಕದ ನಗರ ಭಾಗಗಳಿಗೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಉತ್ತಮ ಸ್ಥಿತಿಯಲ್ಲಿದೆ.

**ಕೋಷ್ಟಕ 6.17: ಬೆಂಗಳೂರು ಗ್ರಾಮಾಂತರ ಮತ್ತು ಕರ್ನಾಟಕದಲ್ಲಿ ನಿರುದ್ಯೋಗ ಪ್ರಮಾಣಗಳು (2009–10)**

| ಸ್ಥಿತಿಗತಿ | ನಿರುದ್ಯೋಗ ಪ್ರಮಾಣಗಳು | | | | | |
|---|---|---|---|---|---|---|
| | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| | ಗ್ರಾಮೀಣ (ಬೆಂಗಳೂರು ಗ್ರಾಮಾಂತರ) | | | ನಗರ (ಬೆಂಗಳೂರು ಗ್ರಾಮಾಂತರ) | | |
| ಸಾಮಾನ್ಯ ಸ್ಥಿತಿಗತಿ | 3.47 | 0.21 | 2.22 | – | – | – |
| ಸರಿಹೊಂದಿಸಿದ ಸಾಮಾನ್ಯ ಸ್ಥಿತಿಗತಿ | 3.47 | 0.21 | 2.22 | – | – | – |
| ಹಾಲಿ ವಾರದ | 3.59 | 0.20 | 2.20 | – | – | – |
| ಹಾಲಿ ದೈನಂದಿನ | 5.19 | 7.55 | 6.16 | 4.67 | 17.50 | 7.37 |
| | ಗ್ರಾಮೀಣ (ಕರ್ನಾಟಕ) | | | ನಗರ (ಕರ್ನಾಟಕ) | | |
| ಸಾಮಾನ್ಯ ಸ್ಥಿತಿಗತಿ | 0.65 | 0.50 | 0.59 | 2.58 | 4.26 | 2.94 |
| ಸರಿಹೊಂದಿಸಿದ ಸಾಮಾನ್ಯ ಸ್ಥಿತಿಗತಿ | 0.59 | 0.48 | 0.55 | 2.48 | 4.16 | 2.84 |
| ಹಾಲಿ ವಾರದ | 1.58 | 1.70 | 1.62 | 4.50 | 7.33 | 5.11 |
| ಹಾಲಿ ದೈನಂದಿನ | 8.22 | 6.72 | 7.68 | 10.37 | 10.48 | 10.40 |

ಮೂಲ: ರಾಷ್ಟ್ರೀಯ ಮಾದರಿ ಸರ್ವೇಕ್ಷಣದ 66ನೇ ಸುತ್ತಿನ ದತ್ತಾಂಶ (2009–10)

## 6.12. ಕಾರ್ಯನೀತಿ ಪ್ರತಿಕ್ರಿಯೆಗಳು

ರಾಜ್ಯ ಸರ್ಕಾರವು ಜನರಿಗಾಗುವ ನಷ್ಟಗಳ ಪರಿಸ್ಥಿತಿ ಸುಧಾರಿಸಲು ಮತ್ತು ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ವಿವಿಧ ಕಾರ್ಯನೀತಿಗಳನ್ನು ರಚಿಸಿ ಪ್ರಯತ್ನಿಸುತ್ತಿದೆ. ಈ ಕಾರ್ಯನೀತಿಗಳು ಬಡತನವನ್ನು ಎರಡು ಮಾರ್ಗಗಳಲ್ಲಿ ಕಡಿಮೆ ಮಾಡಲು ನೋಡುತ್ತಿದೆ: ಆಸ್ತಿ ದತ್ತಿಕೊಡುವುದು ಮತ್ತು ಉದ್ಯೋಗ ಉತ್ಪತ್ತಿ. ಈ ಶೀರ್ಷಿಕೆಗಳ ಅಡಿಯಲ್ಲಿ ಬರುವ ಮುಖ್ಯ ಯೋಜನೆಗಳೆಂದರೆ ಸಂಪೂರ್ಣ ಗ್ರಾಮೀಣ್ ರೋಜ್‌ಗಾರ್ ಯೋಜನಾ (ಎಸ್‌ಜಿಆರ್‌ವೈ), ಸ್ವರ್ಣಜಯಂತಿ ಗ್ರಾಮ್ ಸ್ವರೋಜ್‌ಗಾರ್ ಯೋಜನಾ (ಎಸ್‌ಜಿಎಸ್‌ವೈ), ಸ್ತ್ರೀ ಶಕ್ತಿ, ಸ್ವಾವಲಂಬನಾ ಮತ್ತು ಮಹಾತ್ಮ ಗಾಂಧೀ ರಾಷ್ಟ್ರೀಯ ಉದ್ಯೋಗ ಖಾತ್ರಿ ಅಧಿನಿಯಮ (ರಾ.ಗ್ರಾ.ಉ.ಖಾ.). ಈ ನೀತಿರಚನೆಗಳನ್ನು ಕೇಂದ್ರ ಹಾಗೂ ರಾಜ್ಯ ಮಟ್ಟಗಳಿಗಾಗಿ ರಚಿಸಲಾಗಿದೆ: ಆದರೂ ಅವು ಜಿಲ್ಲಾ ಮಟ್ಟದಲ್ಲೂ ಅಪೇಕ್ಷಿತ ಫಲಿತಾಂಶಗಳನ್ನು ನೀಡುವ ನಿರೀಕ್ಷೆಯಿದೆ. ಈ ನೀತಿರಚನೆಗಳು ಜನರಿಗೆ ಉದ್ಯೋಗಾವಕಾಶಗಳನ್ನು ಉತ್ಪತ್ತಿ ಮಾಡುವಲ್ಲಿ ಕೊಡುಗೆ ಇತ್ತಿವೆ. 2011ರಲ್ಲಿ ಬೆಂಗಳೂರು ಗ್ರಾಮಾಂತರದಲ್ಲಿ ರಾ.ಗ್ರಾ.ಉ.ಖಾ. ಯೋಜನೆಯ ಅಡಿಯಲ್ಲಿ ಸುಮಾರು 819085 ಲಕ್ಷ ಮಾನವದಿನಗಳನ್ನು ಉತ್ಪತ್ತಿಮಾಡಲಾಗಿದೆ (ಕೋಷ್ಟಕ 6.18). ಈ ಯೋಜನೆಯ ಪ್ರಗತಿಯನ್ನು ಕೋಷ್ಟಕ 6.19ರಲ್ಲಿ ನೀಡಲಾಗಿದೆ.

**ಕೋಷ್ಟಕ 6.18: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮ.ಗಾ.ರಾ.ಗ್ರಾ.ಉಖಾ. ಯೋ ಅಡಿಯಲ್ಲಿ ಉತ್ಪತ್ತಿಯಾದ ಮಾನವದಿನಗಳು (ಲಕ್ಷಗಳಲ್ಲಿ) (2011)**

| ತಾಲೂಕು/ಜಿಲ್ಲೆ | ಪುರುಷ | ಮಹಿಳೆ | ಒಟ್ಟು |
|---|---|---|---|
| ದೇವನಹಳ್ಳಿ | 109,770 | 91,013 | 200,483 |
| ದೊಡ್ಡಬಳ್ಳಾಪುರ | 109,777 | 97,649 | 207,426 |
| ಹೊಸಕೋಟೆ | 177,234 | 144,810 | 322,044 |
| ನೆಲಮಂಗಲ | 49,463 | 39,669 | 89,132 |
| ಬೆಂಗಳೂರು ಗ್ರಾಮೀಣ | 445,944 | 373,141 | 819,085 |

ಮೂಲ: ಬೆಂಗಳೂರು ಜಿಲ್ಲೆಯ ಅಂಕಿ-ಅಂಶ ನೋಟ 2011 -12

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2011ರಲ್ಲಿ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (ಎಸ್‌ಜಿಆರ್‌ವೈ) ಅಡಿಯಲ್ಲಿ ಸುಮಾರು 7110 ಮಾನವ ದಿನಗಳನ್ನು ಉತ್ಪಾದಿಸಲಾಗಿದೆ (ಕೋಷ್ಟಕ 6.20).

**ಕೋಷ್ಟಕ 6.19: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮ.ಗಾ.ರಾ.ಗ್ರಾ.ಉ ಖಾ.ಯೋ.ಯ ಪ್ರಗತಿ (2011)**

| ತಾಲೂಕು/ಜಿಲ್ಲೆ | ನೀಡಿದ ಕೆಲಸದ ಚೀಟಿಗಳ ಸಂಖ್ಯೆ | ಉದ್ಯೋಗ ಬೇಡಿದ ಮನೆಗಳ ಸಂಖ್ಯೆ | ಒಉಓಖಇಉಖ ಅಡಿಯಲ್ಲಿ ಕೆಲಸ ಮಾಡಿದ ವ್ಯಕ್ತಿಗಳ/ ಮನೆಗಳಸಂಖ್ಯೆ | 100 ದಿನ ಕೆಲಸ ಸಿಕ್ಕಿದ ಕುಟುಂಬಗಳ ಸಂಖ್ಯೆ |
|---|---|---|---|---|
| ದೇವನಹಳ್ಳಿ | 17,417 | 3,661 | 3,662 | 453 |
| ದೊಡ್ಡಬಳ್ಳಾಪುರ | 18,248 | 4,301 | 1,298 | 25 |
| ಹೊಸಕೋಟೆ | 22,657 | 6,163 | 6,125 | 62 |
| ನೆಲಮಂಗಲ | 19,018 | 1,849 | 1,816 | 80 |
| ಬೆಂಗಳೂರು ಗ್ರಾಮೀಣ | 77,340 | 15,974 | 15,901 | 620 |

ಮೂಲ: ಬೆಂಗಳೂರು ಜಿಲ್ಲೆಯ ಅಂಕಿ-ಅಂಶ ನೋಟ 2011 -12

**ಕೋಷ್ಟಕ 6.20: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (ಎಸ್‌ಜಿಆರ್‌ವೈ)- (2005 ಮತ್ತು 2011)**

| ಜಿಲ್ಲೆ | 2005 | 2011 | | |
|---|---|---|---|---|
| | ಸಮೂಹಗಳ ಸಂಖ್ಯೆ | ಸ್ವಯಂ-ಉದ್ಯೋಗ (ಸಣ್ಣ ವಾಣಿಜ್ಯೋದ್ಯಮಗಳು + ತರಬೇತು) | ಕೂಲಿ ಉದ್ಯೋಗ (ವ್ಯಕ್ತಿ-ದಿನಗಳು) | ಸಮೂಹಗಳ ಸಂಖ್ಯೆ |
| ಬೆಂಗಳೂರು ಗ್ರಾಮಾಂತರ | 54 | 80 | 7,110 | 87 |

ಮೂಲ: ಬೆಂಗಳೂರು ಜಿಲ್ಲೆಯ ಅಂಕಿ-ಅಂಶ ನೋಟ 2011 -12

## 6.13 ತಾತ್ಪರ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆದಾಯ, ಬಡತನ ಮತ್ತು ಉದ್ಯೋಗಗಳ ಅಂಕಿ-ಅಂಶಗಳನ್ನು ಪರಿಶೀಲಿಸಿದಾಗ ಹಲವಾರು ಕುತೂಹಲಕಾರಿ ಮತ್ತು ಅಮೂಲ್ಯವಾದ ಮಾಹಿತಿ ಸಿಗುತ್ತದೆ. ಕೆಲವು ಮಹತ್ವದ ಅಂಶಗಳೆಂದರೆ:

ಎ) ಕರ್ನಾಟಕದ ನಿವ್ವಳ ಆಂತರಿಕ ಉತ್ಪನ್ನಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೊಡುಗೆ ಕೇವಲ ಶೇ. 2 ರಷ್ಟಿದೆ. ಆದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಲಾ ನಿವ್ವಳ ಆಂತರಿಕ ಉತ್ಪನ್ನ ಕರ್ನಾಟಕದಕ್ಕಿಂತ ಬಹಳ ಹೆಚ್ಚಿದೆ. ಬೆಂಗಳೂರು ನಗರಕ್ಕೆ ಸಮೀಪವಿರುವುದೇ ಇದಕ್ಕೆ ಕಾರಣವಿರಬಹುದು. ಜಿಲ್ಲೆಯ ಜನರು ಬೆಂಗಳೂರು ನಗರದಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳನ್ನು ಬಳಸಿಕೊಳ್ಳುತ್ತಿದ್ದಾರೆ.

ಬಿ) ಪ್ರಾದೇಶಿಕ ಅಸಮಾನತೆಗಳು ಬಹಳಷ್ಟಿವೆ. ದೇವನಹಳ್ಳಿ ತಾಲೂಕು ಅತ್ಯಂತ ಬಡ ತಾಲೂಕಾದರೆ ನೆಲಮಂಗಲ ಅತ್ಯಂತ ಶ್ರೀಮಂತ ತಾಲೂಕಾಗಿದೆ (ತಲಾ ನಿವ್ವಳ ಆಂತರಿಕ ಉತ್ಪನ್ನ ಆಧಾರದ ಮೇಲೆ).

ಸಿ) ಈ ಜಿಲ್ಲೆಯಲ್ಲಿ ಆಸ್ತಿ ಮಾಲಿಕತ್ವ, ಆದಾಯ ಮತ್ತು ಬಳಕೆಗಳ ವಿಷಯದಲ್ಲೂ ಅಸಮಾನತೆಗಳಿವೆ. ಆದರೆ, ಒಟ್ಟಾರೆ ಕರ್ನಾಟಕಕ್ಕೆ ಹೋಲಿಸಿದರೆ ಈ ಅಸಮಾನತೆಗಳು ಬಹಳ ಕಡಿಮೆ.

ಡಿ) ಕೃಷಿ ಮತ್ತು ಗೃಹ ಕೈಗಾರಿಕೆಗಳಲ್ಲಿ, ಗಳಿಕೆ ಕಡಿಮೆ ಇರುವ ಕೆಲಸಗಳಲ್ಲಿ ಹೆಚ್ಚು ಮಹಿಳೆಯರೇ ದುಡಿಯುತ್ತಿದ್ದಾರೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರಿಗೆ ಕೂಲಿ ದರಗಳು ಕಡಿಮೆ ಇದೆ.

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ನಿರುದ್ಯೋಗ ಪ್ರಮಾಣ ಕಡಿಮೆ ಇದೆ. ಇದಕ್ಕೆ ಕಾರಣ ಕೃಷಿ ವಲಯ. ನಗರ ಪ್ರದೇಶಗಳಲ್ಲಿ ನಿರುದ್ಯೋಗ ಪ್ರಮಾಣವು ಇನ್ನೂ ಹೆಚ್ಚಿಗೆ ಇದೆ. ಆದರೂ ಇಡೀ ಕರ್ನಾಟಕಕ್ಕಿಂತ ಕಡಿಮೆ ಇದೆ. ಈ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಮಹಿಳೆಯರ ನಿರುದ್ಯೋಗ ಬಹಳ ಹೆಚ್ಚಿದೆ.

# ಜೀವನಮಟ್ಟ







# 7. ಜೀವನಮಟ್ಟ

"ಪ್ರಪಂಚದಲ್ಲಿ ಮಾನವನ ಅಗತ್ಯಕ್ಕೆ ಸಾಕಷ್ಟಿದೆ, ಆದರೆ ಅವನ ದುರಾಸೆಗೆ ಸಾಕಾಗುವಷ್ಟಿಲ್ಲ".
- ಮಹಾತ್ಮ ಗಾಂಧಿ

## 7.1 ಪ್ರಸ್ತಾವನೆ

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಆರ್ಟಿಕಲ್ 25(1) ಹೀಗೆ ಹೇಳುತ್ತದೆ – ತಮ್ಮ ಮತ್ತು ತಮ್ಮ ಕುಟುಂಬದ ಆರೋಗ್ಯ ಮತ್ತು ಹಿತಾಸಕ್ತಿಗೆ ಅಗತ್ಯವಿರುವ ಜೀವನದ ಗುಣಮಟ್ಟವನ್ನು ಪಡೆಯಲು ಎಲ್ಲರಿಗೂ ಹಕ್ಕಿದೆ, ಇದು ಆಹಾರ, ವಸ್ತ್ರ, ವಸತಿ ಮತ್ತು ವೈದ್ಯಕೀಯ ಆರೈಕೆ ಮತ್ತು ಅಗತ್ಯ ಸಾಮಾಜಿಕ ಸೇವೆಗಳನ್ನು, ಮತ್ತು ನಿರುದ್ಯೋಗ, ಅನಾರೋಗ್ಯ, ಅಂಗವಿಕಲತೆ ಅಥವಾ ತಮ್ಮ ನಿಯಂತ್ರಣದಲ್ಲಿರದ ಸ್ಥಿತಿಗಳಲ್ಲಿ ತಮ್ಮ ಜೀವನೋಪಾಯವನ್ನು ಕಳೆದುಕೊಂಡ ಸಂದರ್ಭದಲ್ಲಿ ಸುರಕ್ಷತೆಯನ್ನು ಪಡೆಯುವ ಹಕ್ಕುಗಳನ್ನೂ ಒಳಗೊಂಡಿದೆ. ತಮ್ಮ ಆದಾಯ, ಸಾಮಾಜಿಕ ಸ್ಥಾನಮಾನ, ಉದ್ಯೋಗಾವಕಾಶಗಳು, ಶೈಕ್ಷಣಿಕ ಮಟ್ಟ ಮತ್ತು ಕಾರ್ಮಿಕ ಉತ್ಪಾದಕತೆಯನ್ನು ಸುಧಾರಿಸುವಂತಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅನುವಾಗುವಂತೆ ಜನರಿಗೆ ತಕ್ಕುದಾದ ಜೀವನವದ ಗುಣಮಟ್ಟವನ್ನು ಒದಗಿಸುವುದು ಬಹಳ ಮುಖ್ಯವಾಗಿದೆ. ಇವು ಮಾನವ ಅಭಿವೃದ್ಧಿಯ ಲಕ್ಷಣಗಳು ಮತ್ತು ಉನ್ನತ ಮಟ್ಟದ ಮಾನವ ಅಭಿವೃದ್ಧಿಯನ್ನು ಖಚಿತಪಡಿಸಲು ಉಚಿತವಾದ ಜೀವನದ ಗುಣಮಟ್ಟವು ಮೆಟ್ಟಿಲಾಗಿದೆ.

## 7.2 ವಸತಿ

ಆಶ್ರಯವು ಒಂದು ಪ್ರಾಥಮಿಕ ಅವಶ್ಯಕತೆ. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಆರ್ಟಿಕಲ್ 25(1) ಒಬ್ಬ ವ್ಯಕ್ತಿ ಮತ್ತು ಅವರ ಕುಟುಂಬದ ಆರೋಗ್ಯ ಮತ್ತು ಯೋಗಕ್ಷೇಮವನ್ನು ಖಚಿತಪಡಿಸಲು ಆಶ್ರಯವನ್ನು ಒಂದು ಅಗತ್ಯ ಮಾನವ ಹಕ್ಕಾಗಿ ಗುರುತಿಸಿದೆ. ಆದರೆ, ವಾಸ್ತವವಾಗಿ, ಒಡೆತನವಿಲ್ಲದ, ಕಟ್ಟಡ ಸಾಮಗ್ರಿಯ ಬೆಲೆಯಲ್ಲಿ ಹೆಚ್ಚಳ ಮತ್ತು ಪರ್ಯಾಪ್ತ ಭೂಮಿಯ ಅಭಾವಗಳ ಕಾರಣಗಳಿಂದಾಗಿ ಬಡವರು ತೀವ್ರವಾದ ನಿರ್ಬಂಧಗಳನ್ನು ಅನುಭವಿಸುತ್ತಾರೆ. ಸರಿಯಾದ ಆಶ್ರಯದ ಅಭಾವವು, ವ್ಯಕ್ತಿಯ ಆರೋಗ್ಯ, ಶಿಕ್ಷಣ, ಉದ್ಯೋಗಾವಕಾಶಗಳು ಮತ್ತು ಕಾರ್ಮಿಕ ಉತ್ಪಾದಕತೆಯ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ, ರಾಜ್ಯವು ಹಸ್ತಕ್ಷೇಪ ಮಾಡುವುದು ಅನಿವಾರ್ಯವಾಗಿದ್ದು, ಭೂಮಿಯನ್ನು ನಿಗದಿ ಮಾಡುವ, ಹಣಕಾಸಿನ ನೆರವಿನ, ಜ್ಞಾನದ ವರ್ಗಾವಣೆಯ ಮತ್ತು ಇತರ ಸಹಾಯಕ ಸೇವೆಗಳ ಮೂಲಕ ಕಡಿಮೆ ಆದಾಯದ ವರ್ಗಕ್ಕೆ ಸೂಕ್ತವಾದ ಆಶ್ರಯವನ್ನು ನೀಡುವಂತೆ ಖಚಿತಪಡಿಸಿಕೊಳ್ಳಬೇಕು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಭಾಗದಲ್ಲಿ, 2011ರಲ್ಲಿ, ಶಾಶ್ವತ ಮನೆಗಳಲ್ಲಿ ವಾಸಿಸುವ ಕುಟುಂಬಗಳ ಸಂಖ್ಯೆ ಮತ್ತು ಪ್ರಮಾಣದ ವಿವರವನ್ನು ಕೋಷ್ಟಕ 7.1 ನೀಡುತ್ತದೆ. ಎಲ್ಲಾ ಋತುಗಳನ್ನು-ನಿರೋಧಿಸುವ, ಕೈತಯಾರಿಕೆಯ ಹೆಂಚುಗಳ, ಯಂತ್ರ ನಿರ್ಮಿತ ಹೆಂಚುಗಳ, ಸುಟ್ಟ ಇಟ್ಟಿಗೆ. ಕಲ್ಲು, ಸುಣ್ಣದ ಲೋಹದ ಹಲಗೆ ಅಥವಾ ಕಾಂಕ್ರೀಟ್ ನ ತಾರಸಿಗಳು, ಮರ, ಗಾರೆಯಿಂದ ತುಂಬಿದ ಕಲ್ಲಿ, ಲೋಹದ ಹಲಗೆ, ಸುಟ್ಟ ಇಟ್ಟಿಗೆ ಅಥವಾ ಕಾಂಕ್ರೀಟ್ ನಿಂದ ಮಾಡಿದ ಗೋಡೆಗಳುಳ್ಳ ಮನೆಗಳನ್ನು ಶಾಶ್ವತ ಮನೆಗಳೆನ್ನಲಾಗುತ್ತದೆ. ಈ ನಿರೂಪಣೆಯಡಿ, ದೊಡ್ಡಬಳ್ಳಾಪುರ ಮತ್ತು ನೆಲಮಂಗಲಗಳ ಶೇ. 73 ಕುಟುಂಬಗಳು, ದೇವನಹಳ್ಳಿಯಲ್ಲಿ ಶೇ. 68 ಮತ್ತು ಹೊಸಕೋಟೆಯ ಶೇ. 68 ಕುಟುಂಬಗಳು ಶಾಶ್ವತ ಮನೆಗಳಲ್ಲಿ ವಾಸಿಸುತ್ತಾರೆ.

**ಕೋಷ್ಟಕ 7.1: ಶಾಶ್ವತ ಮನೆಗಳ ವಿವರ (2011)**

| ಜಿಲ್ಲೆ/ತಾಲುಕು | ವಸತಿ/ವಸತಿಯ–ಜೊತೆಗೆ–ಇತರ–ಬಳಕೆಯ ಕುಟುಂಬಗಳ ಒಟ್ಟು ಸಂಖ್ಯೆ | ಶಾಶ್ವತ ಮನೆಗಳುಳ್ಳ ಕುಟುಂಬಗಳ ಸಂಖ್ಯೆ | ಶಾಶ್ವತ ಮನೆಗಳುಳ್ಳ ಕುಟುಂಬಗಳ ಶೇಕಡಾವಾರು |
|---|---|---|---|
| ದೇವನಹಳ್ಳಿ | 45,070 | 31,099 | 69 |
| ದೊಡ್ಡಬಳ್ಳಾಪುರ | 70,464 | 51,407 | 73 |
| ಹೊಸಕೋಟೆ | 59,236 | 40,328 | 68 |
| ನೆಲಮಂಗಲ | 49,975 | 36,525 | 73 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 224,745 | 159,359 | 71 |

ಮೂಲ: ಜನಗಣತಿ 2011

ಇದಕ್ಕೆ ವಿರುದ್ಧವಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆದ ಶೇ. 13 ರಷ್ಟು ಕುಟುಂಬಗಳು ಯಾವುದೇ ನಿವೇಶನವನ್ನು ತಮ್ಮ ಒಡೆತನದಲ್ಲಿ ಹೊಂದಿರುವುದಿಲ್ಲ. ನೆಲಮಂಗಲದಲ್ಲಿ ಈ ಸಮಸ್ಯೆಯು ತೀವ್ರವಾಗಿದ್ದು, ಒಟ್ಟು ಕುಟುಂಬಗಳ ಶೇ. 24 ರಷ್ಟು ಕುಟುಂಬಗಳು ಯಾವುದೇ ನಿವೇಶನವನ್ನೇ ಹೊಂದಿರುವುದಿಲ್ಲ. ಒಟ್ಟು ಕುಟುಂಬಗಳಿಗೆ ಹೋಲಿಸಿದಂತೆ, ನಿವೇಶನ ರಹಿತ ಕುಟುಂಬಗಳಲ್ಲಿ ಎರಡನೇ ಹೆಚ್ಚು ಪ್ರಮಾಣವಿರುವುದು ಹೊಸಕೋಟೆಯಲ್ಲಿ. ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರಗಳಲ್ಲಿ ಒಟ್ಟು ಕುಟುಂಬಗಳಿಗೆ ಹೋಲಿಸಿದಂತೆ ನಿವೇಶನ ರಹಿತ ಕುಟುಂಬಗಳ ಶೇಕಡಾವಾರು ಶೇ. 10 ರಿಂತ ಕಡಿಮೆ ಇದೆ.

ರಾಜನೀತಿಯ ಪ್ರತಿಕ್ರಿಯೆಯಾಗಿ, ಆಶ್ರಯ ಯೋಜನೆಯಡಿ ನಿವೇಶನ ರಹಿತವೆಂತ ಗುರುತಿಸಲಾದ ಕುಟುಂಬಗಳಿಗೆ ನಿವೇಶನ ನೀಡಲು ರಾಜ್ಯವು ಮಧ್ಯಪ್ರವೇಶಿಸಿತು. 2011ರಲ್ಲಿ, ರಾಜ್ಯವು ಬೆಂಗಳೂರು ಗ್ರಾಮಂತರದಲ್ಲಿ 28925 ಕುಟುಂಬಗಳನ್ನು ವಸತಿ ನಿವೇಶನ ರಹಿತ ಕುಟುಂಬಗಳೆಂದು ಗುರುತಿಸಿತು. ಗುರುತಿಸಲಾದ ಕುಟುಂಬಗಳಲ್ಲಿ ಶೇ. 42 ನೆಲಮಂಗಲದಲ್ಲಿ ಮತ್ತು ಶೇ. 29 ರಷ್ಟು ಹೊಸಕೋಟೆ ತಾಲುಕುಗಳಲ್ಲಿ ನೆಲೆಸಿದ್ದವು. ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರಗಳಲ್ಲಿ, ವಸತಿ ನಿವೇಶನ ರಹಿತ ಕುಟುಂಬಗಳೆಂದು ಗುರುತಿಸಲಾದ ಕುಟುಂಬಗಳ ಶೇಕಡಾವಾರು ಸುಮಾರು 13 ರಿಂದ ಶೇ. 14 ರಷ್ಟಿದ್ದವು.

**ಕೋಷ್ಟಕ 7.2: ನಿವೇಶನ ರಹಿತ ಕುಟುಂಬಗಳು (2011)**

| ಜಿಲ್ಲೆ/ತಾಲುಕು | ನಿವೇಶನ ರಹಿತ ಕುಟುಂಬಗಳು | ಒಟ್ಟು ಕುಟುಂಬಗಳು | ಶೇಕಡಾವಾರು |
|---|---|---|---|
| ದೇವನಹಳ್ಳಿ | 4,005 | 45,070 | 9 |
| ದೊಡ್ಡಬಳ್ಳಾಪುರ | 4,084 | 70,464 | 6 |
| ಹೊಸಕೋಟೆ | 8,649 | 59,236 | 15 |
| ನೆಲಮಂಗಲ | 12,187 | 49,975 | 24 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 289,25 | 224,745 | 13 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಆದರೆ, ನೆಲಮಂಗಲ ಮತ್ತು ಹೊಸಕೋಟೆ ತಾಲುಕುಗಳಲ್ಲಿ ಕೆಲವೇ ಕುಟುಂಬಗಳಿಗೆ ನಿವೇಶನ ನೀಡಲು ಸಾಧ್ಯವಾಯಿತು. ನೆಲಮಂಗಲದಲ್ಲಿ, ಕೇವಲ 66 ಕುಟುಂಬಗಳಿಗೆ ರಾಜ್ಯವು ವಸತಿ ನಿವೇಶನಗಳನ್ನು ನೀಡಲು ಸಾಧ್ಯವಾಗಿದ್ದು, ಇದು ವಸತಿ ನಿವೇಶನ ರಹಿತ ಕುಟುಂಬಗಳೆಂದು ಗುರುತಿಸಲಾದ ಕುಟುಂಬಗಳಲ್ಲಿ ಕೇವಲ ಶೇ. 0.54 ಮಾತ್ರವಾಗಿದೆ. ಮತ್ತು ಹೊಸಕೋಟೆಯಲ್ಲಿ, ಕೇವಲ 36 ಕುಟುಂಬಗಳಿಗೆ ರಾಜ್ಯವು ವಸತಿ ನಿವೇಶನಗಳನ್ನು ನೀಡಲು ಸಾಧ್ಯವಾಗಿದ್ದು, ಇದು ವಸತಿ ನಿವೇಶನ ರಹಿತ ಕುಟುಂಬಗಳೆಂದು ಗುರುತಿಸಲಾದ ಕುಟುಂಬಗಳಲ್ಲಿ ಕೇವಲ ಶೇ. 0.42 ಮಾತ್ರವಾಗಿದೆ. ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಲುಕುಗಳಲ್ಲಿ, ಗುರುತಿಸಲಾದ ಯಾವ ಕುಟುಂಬಗಳಿಗೂ ವಸತಿ ನಿವೇಶನಗಳನ್ನು ನೀಡಲಾಗಿಲ್ಲ. ಈ ಎಲ್ಲಾ ನಾಲ್ಕು ತಾಲುಕುಗಳಲ್ಲಿಯೂ ವಸತಿ ನಿವೇಶನಗಳ ಅಭಾವವೇ ನಿವೇಶನಗಳನ್ನು ನೀಡಲಾಗದ್ದಕ್ಕೆ ಕಾರಣವೆಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧಿಕಾರಿಗಳ ಹೇಳಿದರು.

ಇದರ ಜೊತೆಗೆ, ರಾಜ್ಯವು, ಇಂದಿರಾ ಆವಾಸ್ ಯೋಜನೆ, ಬಸವ ವಸಂತಿ ಯೋಜನೆ, ವಿಶೇಷ ಔದ್ಯೋಗಿಕ ಪಂಗಡಗಳ ವಸತಿ ಯೋಜನೆ, ಅಂಬೇಡ್ಕರ್ ವಸತಿ ಯೋಜನೆಗಳಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಸತಿಹೀನ ಕುಟುಂಬಗಳಿಗೆ ಮನೆಗಳನ್ನು ನಿರ್ಮಿಸಿದೆ. ಈ ಯೋಜನೆಗಳಡಿಯಲ್ಲಿ ವಸತಿಹೀನ ಕುಟುಂಬಗಳಿಗೆ ನಿರ್ಮಿಸಲಾದ ಮನೆಗಳ ಸಂಖ್ಯೆಯ ವಿವರಗಳನ್ನು ಕೋಷ್ಟಕ 7.3ರಲ್ಲಿ ನೀಡಲಾಗಿದೆ.

**ಕೋಷ್ಟಕ 7.3: ವಸತಿಹೀನ ಕುಟುಂಬಗಳಿಗೆ ನಿರ್ಮಿಸಲಾದ ಮನೆಗಳು (2011)**

| ತಾಲುಕು/ಜಿಲ್ಲೆ | ವಿವಿಧ ಯೋಜನೆಗಳಡಿಯಲ್ಲಿ ವಸತಿಹೀನ ಕುಟುಂಬಗಳಿಗೆ ನಿರ್ಮಿಸಲಾದ ಮನೆಗಳ ಸಂಖ್ಯೆ | ವಸತಿಹೀನ ಎಂದು ಗುರುತಿಸಲಾದ ಕುಟುಂಬಗಳ ಸಂಖ್ಯೆ | ವಿವಿಧ ಯೋಜನೆಗಳಡಿಯಲ್ಲಿ ವ್ಯಾಪ್ತವಾದ ವಸತಿಹೀನ ಕುಟುಂಬಗಳ ಶೇಕಡಾವಾರು |
|---|---|---|---|
| ದೇವನಹಳ್ಳಿ | 187 | 450 | 41.56 |
| ದೊಡ್ಡಬಳ್ಳಾಪುರ | 415 | 524 | 79.20 |
| ಹೊಸಕೋಟೆ | 187 | 286 | 65.38 |
| ನೆಲಮಂಗಲ | 308 | 395 | 77.97 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 1,097 | 1,655 | 66.28 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲಾ ಪಂಚಾಯತಿ

ಒಟ್ಟು, 2011ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1655 ಕುಟುಂಬಗಳನ್ನು ವಸತಿಹೀನವೆಂದು ಗುರುತಿಸಲಾಯಿತು. 1655 ಕುಟುಂಬಗಳಲ್ಲಿ, ದೊಡ್ಡಬಳ್ಳಾಪುರದಲ್ಲಿ 524. ದೇವನಹಳ್ಳಿಯಲ್ಲಿ 450, ನೆಲಮಂಗಲದಲ್ಲಿ 395 ಮತ್ತು ಹೊಸಕೋಟೆಯಲ್ಲಿ 286 ಕುಟುಂಬಗಳನ್ನು ವಸತಿಹೀನವೆಂತು ಗುರುತಿಸಲಾಯಿತು. ನಂತರ, ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ವಸತಿಹೀನವೆಂದು ಗುರುತಿಸಲಾದ 1655 ಕುಟುಂಬಗಳಲ್ಲಿ ರಾಜ್ಯವು 1097 ಮನೆಗಳನ್ನು ನಿರ್ಮಿಸಲು ಸಾಧ್ಯವಾಯಿತು. ಬೇರೆ ಪದಗಳಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಸತಿಹೀನವೆಂದು ಗುರುತಿಸಲಾದ ಕುಟುಂಬಗಳಲ್ಲಿ ಶೇ.66 ಕುಟುಂಬಕ್ಕೆ ರಾಜ್ಯವು ಮನೆಗಳನ್ನು ಒದಗಿಸಲು ಸಾಧ್ಯವಯಿತು. ವಸತಿಹೀನವೆಂದು ಗುರುತಿಸಲಾದ ಕುಟುಂಬಗಳಲ್ಲಿ ಸುಮಾರು ಶೇ. 79 ರಷ್ಟಕ್ಕೆ ಕೇಂದ್ರ ಮತ್ತು ರಾಜ್ಯದ ಆಯೋಜಿತ ಯೋಜನೆಗಳಡಿಯಲ್ಲಿ ಮನೆಗಳನ್ನು ನೀಡಲಾಯಿತು. ಮತ್ತೊಂದೆಡೆ, ಜಿಲ್ಲೆಯಲ್ಲಿ ವಸತಿಹೀನ ವೆಂದು ಗುರುತಿಸಲಾದ ಕುಟುಂಬಗಳಿಗೆ ವಸತಿಯನ್ನು ನೀಡುವಲ್ಲಿ ಶೇಕಡಾವಾರು ಲೆಕ್ಕದಲ್ಲಿ ದೇವನಹಳ್ಳಿಯು ಅತಿ ಕೆಟ್ಟ ಸಾಧನೆ ತೋರಿಸಿದೆ. ವಸತಿಹೀನವೆಂದು ಗುರುತಿಸಲಾದ ಕುಟುಂಬಗಳಲ್ಲಿ ಕೇವಲ ಶೇ. 42 ರಷ್ಟಕ್ಕೆ ಮಾತ್ರ ವಸತಿಯನ್ನು ನೀಡಲಾಗಿದೆ.

ಅಂತಿಮವಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ಬಹಳಷ್ಟು ಕುಟುಂಬಗಳು ಶಾಶ್ವತ ಮನೆಗಳನ್ನು ಹೊಂದಿವೆ. ಆದರೆ, ಪ್ರಾಥಮಿಕ ಅಗತ್ಯವಾದ ಆಶ್ರಯವನ್ನು ಹೊಂದುವಲ್ಲಿ ಸರ್ಕಾರದ ನೆರವಿನ ಅವಶ್ಯಕತೆಯಿರುವ ಒಟ್ಟು ಕುಟುಂಬಗಳಲ್ಲಿ ಸಣ್ಣ ಪ್ರಮಾಣವು ಉಳಿದುಕೊಂಡಿದೆ. ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರಗಳಿಗೆ ಹೋಲಿಸಿದಂತೆ ನೆಲಮಂಗಲ ಮತ್ತು ಹೊಸಕೋಟೆಯಲ್ಲಿ ನಿವೇಶನರಹಿತ ಕುಟುಂಬಗಳ ಶೇಕಡಾವಾರು ಹೆಚ್ಚಿದೆ. ಆದರೆ, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರಗಳಲ್ಲಿ ನಿವೇಶನರಹಿತ ಕುಟುಂಬಗಳಿಗೆ ನೀಡಲು ಲಭ್ಯವಿರುವ ನಿವೇಶನಗಳು ಸಿಗುವುದು ಕಷ್ಟವಾಗಿದೆ.

## 7.3 ಆಸ್ತಿ ಸ್ಥಾನಮಾನ

ಕುಟುಂಬಗಳ ಜೀವನಮಟ್ಟದ ಮೇಲೆ ಅದರ ಆಸ್ತಿ ಸ್ಥಿತಿಗತಿಯು ನೇರವಾದ ಮತ್ತು ಧನಾತ್ಮಕ ಸಂಬಂಧ ಹೊಂದಿರುತ್ತದೆ. ಟೆಲಿವಿಶನ್, ಗಣಕಯಂತ್ರ, ದ್ವಿಚಕ್ರ ವಾಹನ ಮತ್ತು ದೊಡ್ಡ ವಾಹನಗಳಂತಹ ಆಸ್ತಿಗಳನ್ನು ಹೊಂದಿರುವುದು, ಮಾಹಿತಿಯ, ಮನರಂಜನೆ ಮತ್ತು ಅವಕಾಶಗಳ ಲಭ್ಯತೆಗೆ ಸಹಾಯಕವಾಗಿದ್ದು, ಇದರಿಂದ ಅವರ ಒಟ್ಟಾರೆ ಯೋಗಕ್ಷೇಮಕ್ಕೆ ಕೊಡುಗೆ ನೀಡುತ್ತದೆ. ಈ ವಿಭಾಗದಲ್ಲಿ, ಕುಟುಂಬಗಳ ಆಸ್ತಿ ಸ್ಥಿತಿಯನ್ನು ಅದರ ಟೆಲಿವಿಶನ್, ಗಣಕಯಂತ್ರ ಅಥವಾ ಲ್ಯಾಪ್ ಟಾಪ್, ದ್ವಿಚಕ್ರ ವಾಹನ ಮತ್ತು ದೊಡ್ಡ ವಾಹನದ ಒಡೆತನ ಮತ್ತು ಬ್ಯಾಂಕಿಂಗ್ ಸೇವೆಗಳ ಪಡೆಯುವಿಕೆಯಿಂದ ಅಳೆಯಲಾಗುತ್ತದೆ.

ಬ್ಯಾಂಕಿಂಗ್ ಸೇವೆಗಳನ್ನು ಪಡೆದುಕೊಳ್ಳುವುದು, ಕುಟುಂಬಗಳ ಹಣಕಾಸಿನ ನಿರ್ವಹಣೆಗೆ ನೆರವಾಗುತ್ತದೆ. ಬ್ಯಾಂಕ್ ಸೇವೆಗಳನ್ನು ಪಡೆಯುವುದರಿಂದ, ಸಾಂಪ್ರಕಾಯಿಕ ಕ್ಷೇತ್ರದಲ್ಲಿ ಲಭ್ಯವಿರುವ ವಿತ್ತೀಯ ಸೇವೆಗಳು ಮತ್ತು ಉಪಕರಣಗಳನ್ನು ಬಳಸುವುದರಿಂದ ಕುಟುಂಬಗಳಿಗೆ ಲಾಭವಾಗುತ್ತದೆ. ಇದರ ಜೊತೆಗೆ, ಕುಟುಂಬಗಳು ತಮ್ಮ ಆದಾಯವನ್ನು ಕೂಡಿಡುವುದಕ್ಕೆ ಮತ್ತು ದೀರ್ಘಾವಧಿಯ ಹೂಡಿಕೆ ಮಾಡುವುದರಿಂದ ತಮ್ಮ ಸಂಪತ್ತನ್ನು ಬೆಳೆಸಿಕೊಳ್ಳಲು ಸಾಧ್ಯವಾಗುವುದು.

### 7.3.1 ದೂರದರ್ಶನ ಪೆಟ್ಟಿಗೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಮತ್ತು ಕರ್ನಾಟಕದಲ್ಲಿ 2011ರಲ್ಲಿ ಟೆಲಿವಿಶನ್ ಹೊಂದಿರುವ ಕುಟುಂಬಗಳ ವಿವರಗಳನ್ನು ಕೋಷ್ಟಕ 7.4 ನೀಡುತ್ತದೆ. ಸಾಮಾನ್ಯವಾಗಿ, 2001ರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕ ಎರಡರಲ್ಲೂ ಟೆಲಿವಿಶನ್ ಹೊಂದಿರುವ ಕುಟುಂಬಗಳ ಸಂಖ್ಯೆಯು ಹೆಚ್ಚಾಗಿದೆ. ಬೆಂಗಳೂರು ಗ್ರಾಮಾಂತರ ಗ್ರಾಮೀಣ ಕುಟುಂಬಗಳ ಶೇ. 20 ಅಂಕಿ ಹೆಚ್ಚಳಕ್ಕೆ ಹೋಲಿಸಿದಂತೆ ಕರ್ನಾಟಕದ ಗ್ರಾಮೀಣ ಕುಟುಂಬಗಳು ಶೇ. 25 ಅಂಕಿಗಳ ಹೆಚ್ಚಳವನ್ನು ಕಂಡಿದೆ. ಆದರೆ, ಖಚಿತ ಅಂಕಿಗಳಲ್ಲಿ, ಟೆಲಿವಿಶನ್ ಉಳ್ಳ ಗ್ರಾಮೀಣ ಕುಟುಂಬಗಳು ಶೇ. 66 ಇದ್ದು, 2011ರಲ್ಲಿ ಕರ್ನಾಟಕದಲ್ಲಿ ಟೆಲಿವಿಶನ್ ಉಳ್ಳ ಕುಟುಂಬಗಳ ಸಂಖ್ಯೆಯು ಶೇ. 46 ಇದ್ದಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, 2001ನಿಂದ ಟೆಲಿವಿಶನ್ ಹೊಂದಿರುವ ಗ್ರಾಮೀಣ ಕುಟುಂಬಗಳ ಸಂಖ್ಯೆಯು ಸರಾಸರಿ ಶೇ. 20 ಅಂಕಿಗಳ ಹೆಚ್ಚಳವಾಗಿದೆ; ಹೆಚ್ಚಳವು ನಗರ ಪ್ರದೇಶಗಳಲ್ಲಿರುವಷ್ಟು ಇಲ್ಲ. ದೇವನಹಳ್ಳಿ ತಾಲೂಕಿನಲ್ಲಿ ಟೆಲಿವಿಶನ್ ಹೊಂದಿರುವ ನಗರದ ಕುಟುಂಬಗಳಲ್ಲಿ ಅತಿ ಹೆಚ್ಚು ಹೆಚ್ಚಳವಾದ ಶೇ. 16 ರಷ್ಟು ಕಂಡಿದ್ದರೆ, ನೆಲಮಂಗಲ ತಾಲೂಕು ಅತಿ ಕಡಿಮೆ ಹೆಚ್ಚಳವಾದ ಶೇ. 8 ರಷ್ಟು ಕಂಡಿತು. ನೆಲಮಂಗಲದಲ್ಲಿ ಆಗಲೇ ಟೆಲಿವಿಶನ್ ಹೊಂದಿದ್ದ ಕುಟುಂಬದ ಶೇಕಡಾವಾರಿದ್ದು, ಕಡಿಮೆ ಹೆಚ್ಚಳಕ್ಕೆ ಇದು ಕಾರಣವಾಗಿದೆ. 2001ರಲ್ಲಿ, ನೆಲಮಂಗಲದಲ್ಲಿ ಟೆಲಿವಿಶನ್ ಹೊಂದಿದ್ದ ನಗರ ಕುಟುಂಬಗಳ ಸಂಖ್ಯೆಯು ಶೇ. 77 ರಷ್ಟಿದ್ದು, 2011ರಲ್ಲಿ ಇದು ಶೇ. 85 ಕ್ಕೆ ಏರಿದೆ.

**ಕೋಷ್ಟಕ 7.4: ಟೆಲಿವಿಶನ್ ಹೊಂದಿರುವ ಕುಟುಂಬಗಳ ವಿವರಗಳು (2011 ಮತ್ತು 2012)**

| ತಾಲೂಕು/ಜಿಲ್ಲೆ/ರಾಜ್ಯ | ಒಟ್ಟು ಗ್ರಾಮೀಣ/ನಗರ | 2011ರಲ್ಲಿ ಒಟ್ಟು ಕುಟುಂಬಗಳು | 2011ರಲ್ಲಿ ಟೆಲಿವಿಶನ್ ಉಳ್ಳ ಕುಟುಂಬಗಳು | 2011ರಲ್ಲಿ ಟೆಲಿವಿಶನ್ ಉಳ್ಳ ಕುಟುಂಬಗಳ ಶೇಕಡಾವಾರು | 2001ರಲ್ಲಿ ಟೆಲಿವಿಶನ್ ಉಳ್ಳ ಕುಟುಂಬಗಳ ಶೇಕಡಾವಾರು | 2011 ಮತ್ತು 2001 ನಡುವಿನ ವ್ಯತ್ಯಾಸ |
|---|---|---|---|---|---|---|
| ದೇವನಹಳ್ಳಿ | ಒಟ್ಟು | 45,070 | 32,860 | 72.91 | 51.88 | 21.02 |
| | ಗ್ರಾಮೀಣ | 31,177 | 22,173 | 71.12 | 47.92 | 23.19 |
| | ನಗರ | 13,893 | 10,687 | 76.92 | 61.32 | 15.60 |
| ದೊಡ್ಡಬಳ್ಳಾಪುರ | ಒಟ್ಟು | 70,464 | 45,210 | 64.16 | 44.76 | 19.40 |
| | ಗ್ರಾಮೀಣ | 46,488 | 26,913 | 57.89 | 37.13 | 20.75 |
| | ನಗರ | 23,976 | 18,297 | 76.31 | 63.19 | 13.12 |
| ಹೊಸಕೋಟೆ | ಒಟ್ಟು | 59,236 | 44,127 | 74.49 | 57.22 | 17.27 |
| | ಗ್ರಾಮೀಣ | 46,145 | 32,995 | 71.50 | 53.65 | 17.85 |
| | ನಗರ | 13,091 | 11,132 | 85.04 | 73.95 | 11.08 |
| ನೆಲಮಂಗಲ | ಒಟ್ಟು | 49,975 | 34,770 | 69.57 | 49.41 | 20.16 |
| | ಗ್ರಾಮೀಣ | 38,588 | 25,137 | 65.14 | 44.77 | 20.37 |
| | ನಗರ | 11,387 | 9,633 | 84.60 | 76.87 | 7.73 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 224,745 | 156,967 | 69.84 | 50.32 | 19.51 |
| | ಗ್ರಾಮೀಣ | 162,398 | 107,218 | 66.02 | 45.41 | 20.61 |
| | ನಗರ | 62,347 | 49,749 | 79.79 | 66.52 | 13.27 |
| ಕರ್ನಾಟಕ | ಒಟ್ಟು | 13,179,911 | 7,911,490 | 60.03 | 36.97 | 23.05 |
| | ಗ್ರಾಮೀಣ | 7,864,196 | 3,640,301 | 46.29 | 21.22 | 25.06 |
| | ನಗರ | 5,315,715 | 4,271,189 | 80.35 | 66.52 | 13.82 |

ಮೂಲ: ಜನಗಣತಿ 2011 ಮತ್ತು 2001

ಒಟ್ಟಾರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕ ಎರಡರಲ್ಲೂ ಟೆಲಿವಿಶನ್ ಹೊಂದಿರುವ ಕುಟುಂಬಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಆದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಗ್ರಾಮಾಂತರ ಮತ್ತು ನಗರ ಕುಟುಂಬಗಳ ಒಡೆತನದಲ್ಲಿನ ವ್ಯತ್ಯಾಸವನ್ನು 2001ರಲ್ಲಿ ಶೇ. 5 ಅಂಕಿಗಳಿಂದ 2011ರಲ್ಲಿ ಶೇ. 3 ಅಂಕಿಗಳಿಗೆ ಇಳಿಸುವಲ್ಲಿ ಯಶಸ್ವಿಯಾಗಿದೆ. ಮತ್ತೊಂದೆಡೆ, ಇಡೀ ಅವಧಿಯಲ್ಲಿ ಕರ್ನಾಟಕದಲ್ಲಿ ಒಟ್ಟಾರೆ ಗ್ರಾಮೀಣ ಮತ್ತು ನಗರದ ಕುಟುಂಬಗಳಲ್ಲಿನ ವ್ಯತ್ಯಾಸವು ಸ್ಥಿರವಾಗಿ ಶೇ. 40 ಅಂಕಿಗಳಲ್ಲಿ ನಿಂತಿದೆ.

## 7.3.2 ಗಣಕಯಂತ್ರ ಅಥವಾ ಲ್ಯಾಪ್ ಟಾಪ್

ಮನೆಗಳಲ್ಲಿ ಗಣಕಯಂತ್ರ ಮತ್ತು ನಂತರ ಲ್ಯಾಪ್ ಟಾಪ್‌ಗಳ ಆಗಮನವು, ಜನರು ಜೀವನವನ್ನು ನಡೆಸುವ ರೀತಿಯನ್ನೇ ಕ್ರಾಂತಿಕಾರಿ ರೀತಿಯಲ್ಲಿ ಬದಲಿಸಿದೆ. ಗಣಕಯಂತ್ರದ ಕಾರ್ಯಾರ್ಥಕ ಬಳಕೆಯು ಒಬ್ಬ ವ್ಯಕ್ತಿಯ ವೈಯಕ್ತಿಕ ಮತ್ತು ವೃತ್ತೀಯ ಪ್ರದೇಶವನ್ನು ಹಾದುಹೋಗುತ್ತದೆ. ವೈಯಕ್ತಿಕ ಸ್ಥಳದಲ್ಲಿ, ಅದು ವ್ಯಕ್ತಿಯ ಮತ್ತು ಇಡೀ ಸಮಾಜದ ಜೀವನಶೈಲಿಯನ್ನು ಸುಧಾರಿಸಲು ಬಳಕೆಯಾಗಿದೆ. ಮತ್ತು ವೃತ್ತಿಪರ ಸ್ಥಳದಲ್ಲಿ, ಒಬ್ಬ ವ್ಯಕ್ತಿಯ ಉದ್ಯೋಗಾರ್ಹತೆಯನ್ನು ಸುಧಾರಿಸಲು ಗಣಕಯಂತ್ರ ಕೌಶಲ್ಯಗಳು ಮತ್ತು ತಂತ್ರಾಂಶದ ಜ್ಞಾನವು ಅವಶ್ಯಕವಾದ ಅಂಶವೆಂದು ಪರಿಗಣಿಸಲಾಗಿದೆ; ಮೇಲಾಗಿ, ವ್ಯಕ್ತಿಯ ವಿತ್ತಜೀವನದಲ್ಲಿ ಉತ್ಪಾದಕತೆಯ ಮೇಲೆ ಗಣನೀಯವಾಗಿ ಪರಿಣಾಮ ಬೀರುತ್ತದೆ. ಗಣಕಯಂತ್ರ ಕೌಶಲ್ಯಕ್ಕೆ ಮತ್ತು ದೈನಂದಿನ ಜೀವನದ ಮೇಲೆ ಅದರ ಪರಿಣಾಮವನ್ನು ಗಮನಿಸಿ, ಆಧುನಿಕ ಸಮಾಜದಲ್ಲಿ ಒಬ್ಬ ವ್ಯಕ್ತಿಯು ಆರಾಮ ಜೀವನವನ್ನು ನಡೆಸಲು ಅವರ ಬಲವನ್ನು ಹೆಚ್ಚಿಸಲು ಗಣಕಯಂತ್ರದ ಒಡೆತನವನ್ನು ಪ್ರಮುಖ ಕಾರಣವೆಂದು ಪರಿಗಣಿಸಲಾಗಿದೆ.

ಕೋಷ್ಟಕ 7.5 2011ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ಗಣಕಯಂತ್ರ ಹೊಂದಿರುವ ಕುಟುಂಬಗಳ ವಿವರಗಳನ್ನು ನೀಡುತ್ತದೆ. ಜಿಲ್ಲೆ ಮತ್ತು ರಾಜ್ಯ ಮಟ್ಟಗಳಲ್ಲಿ ಗ್ರಾಮೀಣ ಮತ್ತು ನಗರ ಕುಟುಂಬಗಳಲ್ಲಿ ಗಣಕಯಂತ್ರಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆಯಲ್ಲಿ ಅಗಾಧವಾದ ಪ್ರಾದೇಶಿಕ ಅಸಮಾನತೆ ಇದೆ. 2011ರಲ್ಲಿ, ಗಣಕಯಂತ್ರವನ್ನು ಹೊಂದಿರುವ ಕುಟುಂಬಗಳ ಸಂಖ್ಯೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶೇ. 13 ಮತ್ತು ಕರ್ನಾಟಕದಲ್ಲಿ ಶೇ. 24. ಮತ್ತೊಂದೆಡೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಕರ್ನಾಟಕದಲ್ಲಿ, ಎರಡೂ ಕಡೆ, ಗಣಕಯಂತ್ರವನ್ನು ಹೊಂದಿರುವ ಗ್ರಾಮೀಣ ಕುಟುಂಬಗಳ ಸಂಖ್ಯೆಯು ಕೇವಲ ಶೇ. 6 ರಷ್ಟಿದೆ.

**ಕೋಷ್ಟಕ 7.5: ಗಣಕಯಂತ್ರ ಅಥವಾ ಲ್ಯಾಪ್‌ಟಾಪ್ ಹೊಂದಿರುವ ಕುಟುಂಬಗಳ ವಿವರಗಳು(2011)**

| ತಾಲೂಕು/ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | 2011ರಲ್ಲಿ ಒಟ್ಟು ಕುಟುಂಬಗಳು | ಗಣಕಯಂತ್ರ ಹೊಂದಿರುವ ಕುಟುಂಬಗಳು | ಗಣಕಯಂತ್ರ ಹೊಂದಿರುವ ಕುಟುಂಬಗಳ ಶೇಕಡಾವಾರು |
|---|---|---|---|---|
| ದೇವನಹಳ್ಳಿ | ಒಟ್ಟು | 45,070 | 3,658 | 8.12 |
| | ಗ್ರಾಮೀಣ | 31,177 | 2,290 | 7.35 |
| | ನಗರ | 13,893 | 1,368 | 9.85 |
| ದೊಡ್ಡಬಳ್ಳಾಪುರ | ಒಟ್ಟು | 70,464 | 4,800 | 6.81 |
| | ಗ್ರಾಮೀಣ | 46,488 | 1,662 | 3.58 |
| | ನಗರ | 23,976 | 3,138 | 13.09 |
| ಹೊಸಕೋಟೆ | ಒಟ್ಟು | 59,236 | 4,429 | 7.48 |
| | ಗ್ರಾಮೀಣ | 46,145 | 2,619 | 5.68 |
| | ನಗರ | 13,091 | 1,810 | 13.83 |
| ನೆಲಮಂಗಲ | ಒಟ್ಟು | 49,975 | 4,179 | 8.36 |
| | ಗ್ರಾಮೀಣ | 38,588 | 2,346 | 6.08 |
| | ನಗರ | 11,387 | 1,833 | 16.10 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 224,745 | 17,066 | 7.59 |
| | ಗ್ರಾಮೀಣ | 162,398 | 8,917 | 5.49 |
| | ನಗರ | 62,347 | 8,149 | 13.07 |
| ಕರ್ನಾಟಕ | ಒಟ್ಟು | 13,179,911 | 1,692,253 | 12.84 |
| | ಗ್ರಾಮೀಣ | 7,864,196 | 438,087 | 5.57 |
| | ನಗರ | 5,315,715 | 1,254,166 | 23.59 |

ಮೂಲ: ಜನಗಣತಿ 2011

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲದಲ್ಲಿ ಗಣಕಯಂತ್ರವನ್ನು ಹೊಂದಿರುವ ಗ್ರಾಮೀಣ ಮತ್ತು ನಗರದ ಕುಟುಂಬಗಳ ನಡುವಿನ ವ್ಯತ್ಯಾಸವು ಸುಮಾರು ಶೇ. 10 ಇದೆ. ಈ ಮೂರು ತಾಲೂಕುಗಳಲ್ಲಿ, 2011ರಲ್ಲಿ ಗಣಕಯಂತ್ರವನ್ನು ಹೊಂದಿರುವ ನಗರದ ಕುಟುಂಬಗಳ ಸರಾಸರಿ ಶೇಕಡಾವಾರು ಸುಮಾರು ಶೇ. 14 ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇದು ಸುಮಾರು ಶೇ. 7 ಇದೆ. ಇದಕ್ಕೆ ವಿರುದ್ಧವಾಗಿ, ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ಬಹಳ ಕಡಿಮೆ ಅಂತರವಿರುವ ತಾಲೊಕೆಂದರೆ ದೇವನಹಳ್ಳಿ ಮಾತ್ರ. ಜಿಲ್ಲೆಯ ಬೇರೆ ಮೂರು ತಾಲೂಕುಗಳಿಗೆ ಹೋಲಿಸಿದರೆ, ಇದು ಗಣಕಯಂತ್ರಗಳನ್ನು ಹೊಂದಿರುವ ಗ್ರಾಮೀಣ ಕುಟುಂಬಗಳ ಗಣನೀಯವಾದ ಹೆಚ್ಚು ಶೇಕಡಾವರನ್ನು ಹೊಂದಿದೆ. ಆದರೆ, ಜಿಲ್ಲೆ ಇತರ ಮೂರು ತಾಲೂಕುಗಳಿಗೆ ಹೋಲಿಸಿದರೆ, ನಗರ ಪ್ರದೇಶಗಳಲ್ಲಿ ಗಣಕಯಂತ್ರವನ್ನು ಹೊಂದಿರುವ ಕುಟುಂಬಗಳ ಶೇಕಡಾವಾರು ಅತಿ ಕಡಿಮೆಯಿದೆ.

### 7.3.3 ದ್ವಿಚಕ್ರ ವಾಹನ

2011 ಮತ್ತು 2001ರಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಮತ್ತು ಕರ್ನಾಟಕದಲ್ಲಿ ದ್ವಿಚಕ್ರ ವಾಹನಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆಯ ವಿವರಗಳನ್ನು ಕೋಷ್ಟಕ 7.6 ನೀಡುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, 2011 ರಲ್ಲಿ, ಗ್ರಾಮೀಣ ಪ್ರದೇಶದಲ್ಲಿ 73513 ಕುಟುಂಬಗಳು ಮತ್ತು ನಗರ ಪ್ರದೇಶದಲ್ಲಿ 20395 ಕುಟುಂಬಗಳು ಸ್ವಿಚಕ್ರ ವಾಹನಗಳನ್ನು ಹೊಂದಿದ್ದರೆ, ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 2870746 ಕುಟುಂಬಗಳು ಮತ್ತು ನಗರ ಪ್ರದೇಶಗಳಲ್ಲಿ 1594623 ಕುಟುಂಬಗಳಿವೆ. ಆದ್ದರಿಂದ, 2011ರಲ್ಲಿ, ಕರ್ನಾಟಕ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಎರಡರಲ್ಲೂ, ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳ ಕುಟುಂಬಗಳು ಹೆಚ್ಚಾಗಿ ದ್ವಿಚಕ್ರ ವಾಹನಗಳನ್ನು ಹೊಂದಿರುವುದು ಸ್ಪಷ್ಟವಾಗಿದೆ.

**ಕೋಷ್ಟಕ 7.6: ಬೈಸಿಕಲ್ ಹೊಂದಿರುವ ಕುಟುಂಬಗಳ ವಿವರ (2011 ಮತ್ತು 2001)**

| ತಾಲೂಕು/ಜಿಲ್ಲೆ/ರಾಜ್ಯ | ಒಟ್ಟು ಗ್ರಾಮೀಣ/ನಗರ | 2011ರಲ್ಲಿ ಒಟ್ಟು ಕುಟುಂಬಗಳು | 2001ರಲ್ಲಿ ಬೈಸಿಕಲ್ ಉಳ್ಳ ಕುಟುಂಬಗಳು | 2011ರಲ್ಲಿ ಬೈಸಿಕಲ್ ಉಳ್ಳ ಕುಟುಂಬಗಳ ಶೇಕಡಾವಾರು | 2001ರಲ್ಲಿ ಬೈಸಿಕಲ್ ಉಳ್ಳ ಕುಟುಂಬಗಳ ಶೇಕಡಾವಾರು | 2011 ಮತ್ತು 2001 ನಡುವಿನ ವ್ಯತ್ಯಾಸ |
|---|---|---|---|---|---|---|
| ದೇವನಹಳ್ಳಿ | ಒಟ್ಟು | 45,070 | 21,862 | 48.51 | 46.66 | 1.85 |
| | ಗ್ರಾಮೀಣ | 31,177 | 16,531 | 53.02 | 50.83 | 2.20 |
| | ನಗರ | 13,893 | 5,331 | 38.37 | 36.72 | 1.66 |
| ದೊಡ್ಡಬಳ್ಳಾಪುರ | ಒಟ್ಟು | 70,464 | 28,380 | 40.28 | 36.41 | 3.87 |
| | ಗ್ರಾಮೀಣ | 46,488 | 20,159 | 43.36 | 37.67 | 5.70 |
| | ನಗರ | 23,976 | 8,221 | 34.29 | 33.36 | 0.93 |

| ತಾಲೂಕು/ಜಿಲ್ಲೆ/ ರಾಜ್ಯ | ಒಟ್ಟು ಗ್ರಾಮೀಣ/ನಗರ | 2011ರಲ್ಲಿ ಒಟ್ಟು ಕುಟುಂಬಗಳು | 2001ರಲ್ಲಿ ಬೈಸಿಕಲ್ ಉಳ್ಳ ಕುಟುಂಬಗಳು | 2011ರಲ್ಲಿ ಬೈಸಿಕಲ್ ಉಳ್ಳ ಕುಟುಂಬಗಳ ಶೇಕಡಾವಾರು | 2001ರಲ್ಲಿ ಬೈಸಿಕಲ್ ಉಳ್ಳ ಕುಟುಂಬಗಳ ಶೇಕಡಾವಾರು | 2011 ಮತ್ತು 2001 ನಡುವಿನ ವ್ಯತ್ಯಾಸ |
|---|---|---|---|---|---|---|
| ಹೊಸಕೋಟೆ | ಒಟ್ಟು | 59,236 | 27,592 | 46.58 | 50.72 | -4.14 |
| | ಗ್ರಾಮೀಣ | 46,145 | 23,457 | 50.83 | 53.62 | -2.79 |
| | ನಗರ | 13,091 | 4,135 | 31.59 | 37.13 | -5.54 |
| ನೆಲಮಂಗಲ | ಒಟ್ಟು | 49,975 | 16,074 | 32.16 | 32.91 | -0.74 |
| | ಗ್ರಾಮೀಣ | 38,588 | 13,366 | 34.64 | 35.12 | -0.48 |
| | ನಗರ | 11,387 | 2,708 | 23.78 | 19.80 | 3.98 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 224,745 | 93,908 | 41.78 | 41.34 | 0.44 |
| | ಗ್ರಾಮೀಣ | 162,398 | 73,513 | 45.27 | 43.82 | 1.44 |
| | ನಗರ | 62,347 | 20,395 | 32.71 | 33.15 | -0.44 |
| ಕರ್ನಾಟಕ | ಒಟ್ಟು | 13,179,911 | 4,465,369 | 33.88 | 30.14 | 3.74 |
| | ಗ್ರಾಮೀಣ | 7,864,196 | 2,870,746 | 36.50 | 27.85 | 8.66 |
| | ನಗರ | 5,315,715 | 1,594,623 | 30.00 | 34.45 | -4.45 |

ಮೂಲ: ಜನಗಣತಿ 2011 ಮತ್ತು 2001

ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲೂಕುಗಳಲ್ಲಿ, ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿಯೂ ಬೈಸಿಕಲ್ ಗಳ ಒಡೆತನದಲ್ಲಿ ಸಣ್ಣ ಹೆಚ್ಚಳವನ್ನು ಕಂಡಿವೆ. ಹೊಸಕೋಟೆಯಲ್ಲಿ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬೈಸಿಕಲ್‌ಗಳ ಒಡೆತನದಲ್ಲಿ ಅನುಕ್ರಮವಾಗಿ ಶೇ. 3 ಮತ್ತು ಶೇ. 6 ರಷ್ಟು ಇಳಿತವನ್ನು ಕಂಡಿದೆ.

ಕೋಷ್ಟಕ 7.7ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ 2011 ಮತ್ತು 2001ರಲ್ಲಿ, ಸ್ಕೂಟರ್/ಮೋಟಾರ್ ಸೈಕಲ್/ಮೊಪೆಡ್ ಅನ್ನು ಹೊಂದಿರುವ ಕುಟುಂಬಗಳ ವಿವರಗಳನ್ನು ನೀಡುತ್ತದೆ. ಬೈಸಿಕಲ್‌ಗಳ ಒಡೆತನದಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಗರದ ಕುಟುಂಬಗಳಿಗಿಂತ ಗ್ರಾಮೀಣ ಕುಟುಂಬಗಳಲ್ಲಿ ಮೋಟಾರ್ ದ್ವಿಚಕ್ರ ವಾಹನಗಳ ಒಡೆತನವು ಹೆಚ್ಚಾಗಿದೆ. ಆದರೆ ಒಟ್ಟಾರೆ ಕರ್ನಾಟಕದಲ್ಲಿ ಈ ಪರಿಸ್ಥಿತಿಯು ಭಿನ್ನವಾಗಿದ್ದು, 2011ರಲ್ಲಿ ನಗರದ ಕುಟುಂಬಗಳು ಹೆಚ್ಚು ಮೋಟಾರ್ ದ್ವಿಚಕ್ರವಾಹನಗಳನ್ನು ಹೊಂದಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ನಾಲ್ಕು ತಾಲೂಕುಗಳಲ್ಲಿ ಮೋಟಾರ್ ದ್ವಿಚಕ್ರವಾಹನಗಳನ್ನು ಹೊಂದಿರುವ ಕುಟುಂಬಗಳ ಶೇಕಡಾವಾರು ಹೆಚ್ಚಾಗಿದೆ. ಜಿಲ್ಲೆಯ ದೇವನಹಳ್ಳಿ ತಾಲೂಕಿನಲ್ಲಿ ಕುಟುಂಬ ವಾಹನಗಳ ಒಡೆತನದ ಪ್ರಮಾಣದಲ್ಲಿ ಅತಿ ಹೆಚ್ಚಳವಾಗಿದ್ದು, ಇದಕ್ಕೆ ಪ್ರಮುಖ ಕಾರಣವೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಮೋಟಾರ್ ವಾಹನಗಳ ಒಡೆತನದಲ್ಲಿ ಅಗಾಧ ಹೆಚ್ಚಳವಾಗಿರುವುದು. 2011ರಲ್ಲಿ ಮೋಟಾರ್ ವಾಹನಗಳನ್ನು ಹೊಂದಿರುವ ಗ್ರಾಮೀಣ ಕುಟುಂಬಗಳ ಸಂಖ್ಯೆ 40ಶೇ.ರಷ್ಟಿದ್ದು, ಇದು ನಗರದ ಕುಟುಂಬಗಳ ಒಡೆತನದ ಸಂಖ್ಯೆಗಿಂತ ಶೇ. 10 ಅಂಕಿಗಳಷ್ಟು ಹೆಚ್ಚಾಗಿದ್ದಿತು.

**ಕೋಷ್ಟಕ 7.7: ಮೋಟಾರು ದ್ವಿಚಕ್ರವಾಹನಗಳನ್ನು ಹೊಂದಿರುವ ಕುಟುಂಬಗಳ ವಿವರ (2011 ಮತ್ತು 2001)**

| ತಾಲೂಕು/ ಜಿಲ್ಲೆ/ರಾಜ್ಯ | ಒಟ್ಟು ಗ್ರಾಮೀಣ/ನಗರ | 2011ರಲ್ಲಿ ಒಟ್ಟು ಕುಟುಂಬಗಳು | 2011ರಲ್ಲಿ ಸ್ಕೂಟರ್/ ಮೋಟಾರ್ ಸೈಕಲ್/ ಮೊಪೆಡ್ ವಾಹನ ಉಳ್ಳ ಕುಟುಂಬಗಳು | 2011ರಲ್ಲಿ ಸ್ಕೂಟರ್/ ಮೋಟಾರ್ ಸೈಕಲ್/ ಮೊಪೆಡ್ ವಾಹನ ಉಳ್ಳ ಕುಟುಂಬಗಳ ಶೇಕಡಾವಾರು | 2001ರಲ್ಲಿ ಸ್ಕೂಟರ್/ ಮೋಟಾರ್ ಸೈಕಲ್/ ಮೊಪೆಡ್ ವಾಹನ ಉಳ್ಳ ಕುಟುಂಬಗಳ ಶೇಕಡಾವಾರು | 2011 ಮತ್ತು 2001 ನಡುವಿನ ವ್ಯತ್ಯಾಸ |
|---|---|---|---|---|---|---|
| ದೇವನಹಳ್ಳಿ | ಒಟ್ಟು | 45,070 | 16,509 | 36.63 | 16.33 | 20.30 |
| | ಗ್ರಾಮೀಣ | 31,177 | 12,438 | 39.89 | 16.55 | 23.35 |
| | ನಗರ | 13,893 | 4,071 | 29.30 | 15.82 | 13.48 |
| ದೊಡ್ಡಬಳ್ಳಾಪುರ | ಒಟ್ಟು | 70,464 | 17,350 | 24.62 | 12.21 | 12.41 |
| | ಗ್ರಾಮೀಣ | 46,488 | 11,128 | 23.94 | 10.37 | 13.57 |
| | ನಗರ | 23,976 | 6,222 | 25.95 | 16.68 | 9.27 |
| ಹೊಸಕೋಟೆ | ಒಟ್ಟು | 59,236 | 21,897 | 36.97 | 18.98 | 17.99 |
| | ಗ್ರಾಮೀಣ | 46,145 | 17,191 | 37.25 | 18.26 | 19.00 |
| | ನಗರ | 13,091 | 4,706 | 35.95 | 22.36 | 13.59 |
| ನೆಲಮಂಗಲ | ಒಟ್ಟು | 49,975 | 13,249 | 26.51 | 11.51 | 15.00 |
| | ಗ್ರಾಮೀಣ | 38,588 | 9,143 | 23.69 | 10.01 | 13.69 |
| | ನಗರ | 11,387 | 4,106 | 36.06 | 20.40 | 15.66 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 224,745 | 69,005 | 30.70 | 14.60 | 16.11 |
| | ಗ್ರಾಮೀಣ | 162,398 | 49,900 | 30.73 | 13.56 | 17.17 |
| | ನಗರ | 62,347 | 19,105 | 30.64 | 18.00 | 12.64 |
| ಕರ್ನಾಟಕ | ಒಟ್ಟು | 3,179,911 | 3,374,302 | 25.60 | 14.44 | 11.16 |
| | ಗ್ರಾಮೀಣ | 7,864,196 | 1,325,907 | 16.86 | 7.29 | 9.57 |
| | ನಗರ | 5,315,715 | 2,048,395 | 38.53 | 27.88 | 10.66 |

ಮೂಲ: ಜನಗಣತಿ 2011 ಮತ್ತು 2001

ಇದೇ ಪ್ರಮಾಣಗಳನ್ನು ಹೊಂದಿರುವ ಮತ್ತೊಂದು ತಾಲೂಕೆಂದರೆ ಹೊಸಕೋಟೆ, ಆದರೆ ಇಲ್ಲಿ ಗ್ರಾಮೀಣ ಮತ್ತು ನಗರದ ಕುಟುಂಬಗಳ ಒಡೆತನದ ನಡುವೆ ವ್ಯತ್ಯಾಸವು ಕೇವಲ 2ಶೇ.ರಷ್ಟಿದೆ. ನೆಲಮಂಗಲದಲ್ಲಿ ಪರಿಸ್ಥಿತಿಯು ಭಿನ್ನವಾಗಿದ್ದು, ಮೋಟಾರ್ ವಾಹನಗಳ ಒಡೆತನದಲ್ಲಿ ಗ್ರಾಮೀಣ ಕುಟುಂಬಗಳಿಗಿಂತ ನಗರದ ಕುಟುಂಬಗಳಲ್ಲಿ ಹೆಚ್ಚಾಗಿದೆ. ಒಟ್ಟಾರೆ, ಕರ್ನಾಟಕಕ್ಕಿಂತ ಬೆಂಗಳೂರು ಗ್ರಾಮಾಂತರ ಜಿಲ್ಲೆದ ಸಾಧನೆ ಉತ್ತಮವಾಗಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮೋಟಾರು ವಾಹನಗಳ ಒಡೆತನ (ಶೇ. 30) ಕರ್ನಾಟಕಕ್ಕಿಂತ (ಶೇ. 26) ಹೆಚ್ಚಾಗಿದೆ. ಹಾಗೂ, ಜಿಲ್ಲೆಯಲ್ಲಿ ಮೋಟಾರ್ ವಾಹನಗಳ ಒಡೆತನದಲ್ಲಿ ಗ್ರಾಮೀಣ ಮತ್ತು ನಗರ ಕ್ಷೇತ್ರಗಳ ನಡುವಿನ ಅಂತರವು ಈ ಅವಧಿಯಲ್ಲಿ ಕಡಿಮೆಯಾಗಿದೆ.

## 7.3.4 ನಾಲ್ಕು-ಚಕ್ರ ವಾಹನಗಳು

ಕೋಷ್ಟಕ 7.8 2011 ಮತ್ತು 2001ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಕುಟುಂಬಗಳ ವಿವರಗಳನ್ನು ನೀಡುತ್ತದೆ. ನಾಲ್ಕು ತಾಲೂಕುಗಳಲ್ಲಿ, ದೇವನಹಳ್ಳಿಯು ಗ್ರಾಮೀಣ ಮತ್ತು ನಗರ ಕ್ಷೇತ್ರ ಎರಡರಲ್ಲಿಯೂ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವನ್ನು ಕಂಡಿದೆ. ನೆಲಮಂಗಲ ಮತ್ತು ಹೊಸಕೋಟೆಗಳಲ್ಲಿ, ಗ್ರಾಮೀಣ ಕುಟುಂಬಗಳಿಗಿಂತ ನಗರದ ಕುಟುಂಬಗಳಲ್ಲಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಕುಟುಂಬಗಳಲ್ಲಿ ಗಣನೀಯವಾಗಿ ಹೆಚ್ಚಳವನ್ನು ಕಂಡಿದೆ. ಒಟ್ಟಾರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಕುಟುಂಬಗಳಲ್ಲಿ ನಾಲ್ಕು ಚಕ್ರದ ವಾಹನಗಳ ಒಡೆತನವು ಹೆಚ್ಚಿದೆ. 2001 ರಿಂದ 2011 ರ ವರೆಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಗರದ ಕುಟುಂಬಗಳಲ್ಲಿ ಶೇ. 3 ರಷ್ಟು ಹೆಚ್ಚಾಗಿದ್ದು, ಇದೇ ಅವಧಿಯಲ್ಲಿ ಗ್ರಾಮೀಣ ಕುಟುಂಬಗಳ ನಾಲ್ಕು ಚಕ್ರದ ವಾಹನಗಳನ್ನು ಒಡೆತನವು ಶೇ. 2 ಅಂಕಿಗಳಷ್ಟು ಹೆಚ್ಚಾಗಿದೆ.

**ಕೋಷ್ಟಕ 7.8: ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಕುಟುಂಬಗಳ ವಿವರಗಳು (2011 ಮತ್ತು 2001)**

| ತಾಲೂಕು/ ಜಿಲ್ಲೆ/ರಾಜ್ಯ | ಒಟ್ಟು ಗ್ರಾಮೀಣ/ ನಗರ | 2011ರಲ್ಲಿ ಒಟ್ಟು ಕುಟುಂಬಗಳು | 2011ರಲ್ಲಿ ನಾಲ್ಕು ಚಕ್ರದ ವಾಹನ ಉಳ್ಳ ಕುಟುಂಬಗಳು | 2011ರಲ್ಲಿ ನಾಲ್ಕು ಚಕ್ರದ ವಾಹನ ಉಳ್ಳ ಕುಟುಂಬಗಳ ಶೇಕಡಾವಾರು | 2001ರಲ್ಲಿ ನಾಲ್ಕು ಚಕ್ರದ ವಾಹನ ಉಳ್ಳ ಕುಟುಂಬಗಳ ಶೇಕಡಾವಾರು | 2011 ಮತ್ತು 2001 ನಡುವಿನ ವ್ಯತ್ಯಾಸ |
|---|---|---|---|---|---|---|
| ದೇವನಹಳ್ಳಿ | ಒಟ್ಟು | 45,070 | 3,017 | 6.69 | 2.61 | 4.09 |
| | ಗ್ರಾಮೀಣ | 31,177 | 2,105 | 6.75 | 2.27 | 4.48 |
| | ನಗರ | 13,893 | 912 | 6.56 | 3.40 | 3.16 |
| ದೊಡ್ಡಬಳ್ಳಾಪುರ | ಒಟ್ಟು | 70,464 | 1,882 | 2.67 | 1.63 | 1.04 |
| | ಗ್ರಾಮೀಣ | 46,488 | 988 | 2.13 | 1.11 | 1.01 |
| | ನಗರ | 23,976 | 894 | 3.73 | 2.88 | 0.85 |
| ಹೊಸಕೋಟೆ | ಒಟ್ಟು | 59,236 | 3,253 | 5.49 | 2.25 | 3.24 |
| | ಗ್ರಾಮೀಣ | 46,145 | 2,194 | 4.75 | 1.93 | 2.82 |
| | ನಗರ | 13,091 | 1,059 | 8.09 | 3.74 | 4.35 |
| ನೆಲಮಂಗಲ | ಒಟ್ಟು | 49,975 | 2,237 | 4.48 | 2.02 | 2.46 |
| | ಗ್ರಾಮೀಣ | 38,588 | 1,140 | 2.95 | 1.63 | 1.33 |
| | ನಗರ | 11,387 | 1,097 | 9.63 | 4.31 | 5.32 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 224,745 | 0,389 | 4.62 | 2.07 | 2.55 |
| | ಗ್ರಾಮೀಣ | 162,398 | 6,427 | 3.96 | 1.68 | 2.28 |
| | ನಗರ | 62,347 | 3,962 | 6.35 | 3.37 | 2.99 |
| ಕರ್ನಾಟಕ | ಒಟ್ಟು | 13,179,911 | 833,478 | 6.32 | 3.07 | 3.26 |
| | ಗ್ರಾಮೀಣ | 7,864,196 | 200,131 | 2.54 | 1.36 | 1.19 |
| | ನಗರ | 5,315,715 | 633,347 | 11.91 | 6.27 | 5.65 |

ಮೂಲ: ಜನಗಣತಿ 2011 ಮತ್ತು 2001

ನಾಲ್ಕೂ ತಾಲೂಕುಗಳಲ್ಲಿ ನೆಲಮಂಗಲ ಮತ್ತು ಹೊಸಕೋಟೆಗಳಲ್ಲಿ ಗ್ರಾಮೀಣ ಮತ್ತು ನಗರದ ಕುಟುಂಬಗಳ ನಾಲ್ಕು ಚಕ್ರದ ವಾಹನಗಳ ಒಡೆತನದಲ್ಲಿ ಅತಿ ಹೆಚ್ಚು ಅಂತರವಿದೆ. 2011ರಲ್ಲಿ, ಗ್ರಾಮೀಣ ಮತ್ತು ನಗರದ ಕುಟುಂಬಗಳ ಒಡೆತನದಲ್ಲಿ ಅಂತರವು ಹೊಸಕೋಟೆಯಲ್ಲಿ ಶೇ. 5 ಇದ್ದರೆ, ನೆಲಮಂಗಲದಲ್ಲಿ ಶೇ. 7 ಇದ್ದು, 2001ರಲ್ಲಿದ್ದ ಅಂತರಕ್ಕಿಂತ ಹೆಚ್ಚಾಗಿದೆ (ಶೇ. 2 ಮತ್ತು ಶೇ. 3 ಅಂಕಿಗಳು ಅನುಕ್ರಮವಾಗಿ). ಹೀಗಿದ್ದರೂ, ದೇವನಹಳ್ಳಿ ತಾಲೂಕುನಲ್ಲಿ ಗ್ರಾಮೀಣ ಕುಟುಂಬಗಳಲ್ಲಿ ನಾಲ್ಕು ಚಕ್ರದ ವಾಹನಗಳ ಒಡೆತನವು ಗಣನೀಯವಾಗಿ ಹೆಚ್ಚಿರುವುದರಿಂದ, ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರದ ಕ್ಷೇತ್ರಗಳ ನಡುವೆ ಅಂತರವು ಕೇವಲ ಶೇ. 3 ಅಂಕಿಗಳಿವೆ.

## 7.3.5 ಬ್ಯಾಂಕ್ ಸೇವೆಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ನಾಲ್ಕು ತಾಲೂಕುಗಳಲ್ಲಿ ಮತ್ತು ಕರ್ನಾಟಕದಲ್ಲಿ, 2011ರಲ್ಲಿ ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡಿದ್ದ ಕುಟುಂಬಗಳ ವಿವರಗಳನ್ನು ಕೋಷ್ಟಕ 7.9ರಲ್ಲಿ ನೀಡಲಾಗಿದೆ. ಒಟ್ಟಾರೆ, 2001ರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕ ಎರಡರಲ್ಲಿಯೂ ಬ್ಯಾಂಕ್ ಸೇವೆಗಳನ್ನು ಬಳಸಿಕೊಂಡಂತಹ ಕುಟುಂಬಗಳಲ್ಲಿನ ಶೇಕಡಾವಾರು ಹೆಚ್ಚಳವು ಒಂದೇ ರೀತಿಯದ್ದಾಗಿದ್ದಿತು. ಆದರೆ, ಒಟ್ಟು ಕರ್ನಾಟಕದ ಶೇ. 15 ಅಂಕಿಗಳಿಗೆ ಹೋಲಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಗರ ಕುಟುಂಬಗಳು ಅಧಿಕ ಹೆಚ್ಚಳವಾದ ಶೇ. 23 ಅಂಕಿಗಳನ್ನು ಸಾಧಿಸಿದೆ.

**ಕೋಷ್ಟಕ 7.9: ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡ ಕುಟುಂಬಗಳ ವಿವರ (2011 ಮತ್ತು 2001)**

| ತಾಲೂಕು/ ಜಿಲ್ಲೆ/ರಾಜ್ಯ | ಒಟ್ಟು ಗ್ರಾಮೀಣ/ನಗರ | 2011ರಲ್ಲಿ ಒಟ್ಟು ಕುಟುಂಬಗಳು | 2011ರಲ್ಲಿ ಬ್ಯಾಂಕ್ ಸೇವೆಗಳನ್ನು ಬಳಸಿಕೊಂಡ ಕುಟುಂಬಗಳು | 2011ರಲ್ಲಿ ಬ್ಯಾಂಕ್ ಸೇವೆಗಳನ್ನು ಬಳಸಿಕೊಂಡ ಕುಟುಂಬಗಳ ಶೇಕಡಾವಾರು | 2001ರಲ್ಲಿ ಬ್ಯಾಂಕ್ ಸೇವೆಗಳನ್ನು ಬಳಸಿಕೊಂಡ ಕುಟುಂಬಗಳ ಶೇಕಡಾವಾರು | 2011 ಮತ್ತು 2001 ನಡುವಿನ ವ್ಯತ್ಯಾಸ |
|---|---|---|---|---|---|---|
| ದೇವನಹಳ್ಳಿ | ಒಟ್ಟು | 45,070 | 24,362 | 54.05 | 32.56 | 21.50 |
| | ಗ್ರಾಮೀಣ | 31,177 | 17,805 | 57.11 | 33.56 | 23.55 |
| | ನಗರ | 13,893 | 6,557 | 47.20 | 30.16 | 17.04 |
| ದೊಡ್ಡಬಳ್ಳಾಪುರ | ಒಟ್ಟು | 70,464 | 31,004 | 44.00 | 23.72 | 20.28 |
| | ಗ್ರಾಮೀಣ | 46,488 | 20,831 | 44.81 | 25.47 | 19.34 |
| | ನಗರ | 23,976 | 10,173 | 42.43 | 19.49 | 22.94 |
| ಹೊಸಕೋಟೆ | ಒಟ್ಟು | 59,236 | 30,453 | 51.41 | 29.64 | 21.77 |
| | ಗ್ರಾಮೀಣ | 46,145 | 21,960 | 47.59 | 27.67 | 19.92 |
| | ನಗರ | 13,091 | 8,493 | 64.88 | 38.86 | 26.02 |
| ನೆಲಮಂಗಲ | ಒಟ್ಟು | 49,975 | 24,811 | 49.65 | 28.10 | 21.54 |
| | ಗ್ರಾಮೀಣ | 38,588 | 17,330 | 44.91 | 25.51 | 19.40 |
| | ನಗರ | 11,387 | 7,481 | 65.70 | 43.49 | 22.21 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 224,745 | 10,630 | 49.22 | 27.98 | 21.25 |
| | ಗ್ರಾಮೀಣ | 162,398 | 77,926 | 47.98 | 27.62 | 20.36 |
| | ನಗರ | 62,347 | 32,704 | 52.45 | 29.14 | 23.31 |
| ಕರ್ನಾಟಕ | ಒಟ್ಟು | 13,179,911 | 8,054,677 | 61.11 | 39.99 | 21.12 |
| | ಗ್ರಾಮೀಣ | 7,864,196 | 4,633,762 | 58.92 | 35.21 | 23.71 |
| | ನಗರ | 5,315,715 | 3,420,915 | 64.35 | 48.96 | 15.39 |

ಮೂಲ: ಜನಗಣತಿ 2011 ಮತ್ತು 2001

ಬೆಂಗಾಳೂರು ಗ್ರಾಮಾಂತರ ಜಿಲ್ಲೆಯಲ್ಲಿ, 2011ರಲ್ಲಿ, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರದ ಗ್ರಾಮೀಣ ಕುಟುಂಬಗಳು, ನಗರದ ಕುಟುಂಬಗಳಿಗಿಂತ ಹೆಚ್ಚಾಗಿ ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡಿವೆ. 2001ರಲ್ಲಿ, ದೇವನಹಳ್ಳಿಯಲ್ಲಿ ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡ ಗ್ರಾಮೀಣ ಮತ್ತು ನಗರದ ಕುಟುಂಬಗಳ ನಡುವಿನ ಅಂತರವು ಸುಮಾರು 2ಶೇ. ಅಂಕಿಗಳಿದ್ದರೆ, 2011ರಲ್ಲಿ ಅದು ಶೇ. 10 ಅಂಕಿಗಳಿಗೆ ಏರಿದೆ. ಆದ್ದರಿಂದ, ಕಾಲಕ್ರಮದಲ್ಲಿ ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡ ಗ್ರಾಮೀಣ ಮತ್ತು ನಗರದ ಕುಟುಂಬಗಳ ನಡುವಿನ ಅಂತರವು ಗಣನೀಯವಾಗಿ ಹೆಚ್ಚಿದೆ.

ನೆಲಮಂಗಲ ಮತ್ತು ಹೊಸಕೋಟೆಗಳಲ್ಲಿ ಸ್ಥಿತಿಯು ಇದಕ್ಕೆ ವಿರುದ್ಧವಾಗಿದ್ದು, 2001ರಿಂದ ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡ ನಗರದ ಕುಟುಂಬಗಳ ಸಂಖ್ಯೆಯು ಗಣನೀಯವಾಗಿ ಹೆಚ್ಚಿದೆ. 2011ರಲ್ಲಿ, ನೆಲಮಂಗಲ ಮತ್ತು ಹೊಸಕೋಟೆಗಳಲ್ಲಿ ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡ ನಗರದ ಕುಟುಂಬಗಳು ಅನುಕ್ರಮವಾಗಿ ಶೇ. 66 ಮತ್ತು ಶೇ. 65 ಇದ್ದಿತು. ಇದಕ್ಕೆ ಹೋಲಿಸಿದಂತೆ, ನೆಲಮಂಗಲ ಮತ್ತು ಹೊಸಕೋಟೆಗಳಲ್ಲಿ ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡ ಗ್ರಾಮೀಣ ಕುಟುಂಬಗಳ ಪ್ರಮಾಣವು ಅನುಕ್ರಮವಾಗಿ ಕೇವಲ ಶೇ. 45 ಮತ್ತು ಶೇ. 48 ಇದ್ದವು. ಈ ಎರಡೂ ತಾಲೂಕುಗಳಲ್ಲಿ ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡ ನಗರದ ಮತ್ತು ಗ್ರಾಮೀಣ ಕುಟುಂಬಗಳ ನಡುವಿನ ಅಂತರವು 2001ರಲ್ಲಿ 10ಶೇ. ಅಂಕಿಗಳಿದ್ದು, ಇದು 2011 ರಲ್ಲಿ ಶೇ. 18 ಅಂಕಿಗಳಿಗೆ ಏರಿದೆ.

ದೊಡ್ಡಬಳ್ಳಾಪುರದಲ್ಲಿ, 2001 ಮತ್ತು 2011 ರ ಅವಧಿಯಲ್ಲಿ ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡ ಕುಟುಂಬಗಳ ಸಂಖ್ಯೆಯು ಶೇ. 20 ಅಂಕಿಗಳಷ್ಟು ಏರಿಕೆಯಾಗಿದೆ. ಇದೇ ಸಮಯದಲ್ಲಿ, ಬ್ಯಾಂಕ್ ಸೇವೆಗಳನ್ನು ಪಡೆದುಕೊಂಡ ನಗರದ ಮತ್ತು ಗ್ರಾಮೀಣ ಕುಟುಂಬಗಳ ನಡುವಿನ ಅಂತರವು 2001ರಲ್ಲಿ ಶೇ. 6 ಇದ್ದದ್ದು, ಇದು 2011 ರಲ್ಲಿ ಶೇ. 2 ಕ್ಕೆ ಇಳಿದಿದೆ.

## 7.4 ಕುಡಿಯುವ ನೀರು

### 7.4.1 ಕುಡಿಯುವ ನೀರಿನ ಲಭ್ಯತೆ

ಕುಡಿಯುವ ನೀರಿನ ಲಭ್ಯತೆಯು ಜೀವನದ ಗುಣಮಟ್ಟಕ್ಕೆ ಒಂದು ಮುಖ್ಯವಾದ ಸೂಚಕ. ಕುಡಿಯುವ ನೀರಿನ ಮೂಲವು ಮನೆಗೆ ಹತ್ತಿರವಿರುವುದು ಕುಟುಂಬದ ಮಹಿಳೆಯರ ಮತ್ತು ಮಕ್ಕಳ ಮೇಲೆ ಬಹಳ ಪರಿಣಾಮ ಬೀರುತ್ತದೆ. ಏಕೆಂದರೆ ಸಾಮಾನ್ಯವಾಗಿ ನೀರನ್ನು ತರುವ ಜಾವಾಬ್ದಾರಿಯನ್ನು ಮಹಿಳೆಯರು ಮತ್ತು ಮಕ್ಕಳಿಗೆ ವಹಿಸಲಾಗುತ್ತದೆ. ಹಾಗಾಗಿ, ನೀರಿನ ಮೂಲವು ಮನೆಯ ಹತ್ತಿರವಿದ್ದರೆ, ಮಹಿಳೆಯರ ಮತ್ತು ಮಕ್ಕಳ ಸಮಯ ಮತ್ತು ಶಕ್ತಿ ಎರಡನ್ನೂ ಉಳಿಸುತ್ತದೆ. ಈ ರೀತಿ ಉಳಿಸಿದ ಸಮಯವನ್ನು ಉತ್ಪಾದಕ ಅಥವಾ ಆರಾಮದ ಚಟುವಟಿಕೆಗಳಿಗೆ ಬಳಸಬಹುದು. ಆದ್ದರಿಂದ, ಕುಡಿವ ನೀರಿನ ಮೂಲವು ಮನೆಗೆ ಹತ್ತಿರವಿರುವುದರಿಂದ ಮಹಿಳೆಯರ ಮತ್ತು ಮಕ್ಕಳ ಜೀವನ ಮಟ್ಟವನ್ನು ಅಗಾಧ ಪ್ರಮಾಣದಲ್ಲಿ ಸುಧಾರಿಸಬಲ್ಲದು.

2011 ಜನಗಣತಿಯ ಪ್ರಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕುಟುಂಬಗಳಲ್ಲಿ ಶೇ. 54.5 ರಷ್ಟು ಕುಟುಂಬಗಳ ಮನೆಯ ಒಳಯೇ ನೀರಿನ ಲಭ್ಯತೆಯಿದ್ದು, ಶೇ. 26.4 ರಷ್ಟು ಮನೆಗಳು ನೀರಿನ ಮೂಲವನ್ನು ಮನೆಯ ಆವರಣದಲ್ಲೇ ಹೊಂದಿದ್ದು, ಶೇ. 19.1 ರಷ್ಟು ಮನೆಗಳು ಮನೆಯ ಹೊರಗೆ ಹೊಂದಿವೆ. 2001ರ ಜನಗಣತಿಗೆ ಹೋಲಿಸಿದಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮನೆಯ ಆವರಣದೊಳಗಿರುವ ನೀರಿನ ಮೂಲದಲ್ಲಿ ಶೇ. 2 ಅಂಕಿಗಳಷ್ಟು ಹೆಚ್ಚಾಗಿದ್ದು, ಮನೆಯ ಆಚೆಗಿರುವ ಮನೆಗಳಲ್ಲಿ ಶೇ. 1 ಕಡಿತವಾಗಿದೆ. ಒಟ್ಟುಗೂಡಿಸದ ದತ್ತಾಂಶದ ಪ್ರಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ಶೇ. 59.6 ರಷ್ಟು ಗ್ರಾಮೀಣ ಕುಟುಂಬಗಳಿಗೆ ಮತ್ತು ಶೇ. 41.4 ರಷ್ಟು ನಗರದ ಕುಟುಂಬಗಳಿಗೆ ಮನೆಯ ಆವರಣದ ಒಳ ಕುಡಿಯುವ ನೀರಿನ ಮೂಲವಿದೆ. ಆದರೆ, ಆವರಣದ ಒಳಗೆ ನೀರಿನ ಮೂಲವಿರುವ ಗ್ರಾಮೀಣ ಮತ್ತು ನಗರದ ಕುಟುಂಬಗಳ ನಡುವಿನ ಅಂತರವು ಶೇ. 18 ಅಂಕಿಗಳಿದೆ. ಮನೆಯ ಆವರಣದಲ್ಲಿ ನೀರಿನ ಮೂಲವಿರುವ ಗ್ರಾಮೀಣ ಕುಟುಂಬಗಳ ಸಂಖ್ಯೆಯಲ್ಲಿ ಶೇ. 8 ಅಂಕಿಗಳಷ್ಟು ಹೆಚ್ಚಳವಾಗಿದೆ. ಮನೆಯ ಆವರಣದಲ್ಲಿ ನೀರಿನ ಮೂಲವಿರುವ ನಗರದ ಕುಟುಂಬಗಳ ಸಂಖ್ಯೆಯು 2001ರಲ್ಲಿ 16226 ಇದ್ದು, 2011ರಲ್ಲಿ 24626 ಆಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರ ಕುಟುಂಬಗಳು ಎರಡರಲ್ಲೂ ಕುಡಿಯುವ ನೀರಿನ ಮೂಲದಲ್ಲಿ ಇಂತಹುದೇ ಮಾದರಿಯು ಕಂಡುಬಂದಿದೆ.

ಆದರೆ, ಈ ಮಾದರಿಯು ಇಡೀ ಕರ್ನಾಟಕಕ್ಕೆ ಅನ್ವಯಿಸುವುದಿಲ್ಲ. ಮನೆಯ ಆವರಣದಲ್ಲಿ ನೀರಿನ ಮೂಲವಿರುವ ನಗರದ ಕುಟುಂಬಗಳ ಪ್ರಮಾಣವು ರಾಜ್ಯದಲ್ಲಿ ಗಣನೀಯವಾಗಿ ಹೆಚ್ಚಾಗಿದ್ದು, ಸುಮಾರು ಶೇ. 70, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೇವಲ ಶೇ. 40 ರಷ್ಟು ನಗರದ ಕುಟುಂಬಗಳಿವೆ. ಮನೆಯ ಆವರಣದಲ್ಲಿ ನೀರಿನ ಮೂಲವಿರುವ ಗ್ರಾಮೀಣ ಕುಟುಂಬಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದ ನಡುವೆ ಇರುವ ಅಂತರ ಕೇವಲು ಸುಮಾರು ಶೇ. 5 ರಷ್ಟು ಮಾತ್ರ.

**ಚಿತ್ರ 7.1: ಕುಡಿಯುವ ನೀರಿನ ಲಭ್ಯತೆ ಇರುವ ಕುಟುಂಬಗಳ ಶೇಕಡಾವಾರು (2001 ಮತ್ತು 2011)**







ಮೂಲ: ಜನಗಣತಿ 2011 ಮತ್ತು 2001

**ಕೋಷ್ಟಕ 7.10: ಕುಡಿಯುವ ನೀರಿನ ಮೂಲಗಳು**

| ತಾಲೂಕು/ಜಿಲ್ಲೆ/ರಾಜ್ಯ | ಒಟ್ಟು ಗ್ರಾಮೀಣ/ನಗರ | 2011 | | | | | |
|---|---|---|---|---|---|---|---|
| | | ಒಟ್ಟು | ನಲ್ಲಿ | ಬಾವಿ | ಕೈ ಪಂಪು | ನಳಕೆ ಬಾವಿ | ಇತರೆ |
| ದೇವನಹಳ್ಳಿ | ಒಟ್ಟು | 45,070 | 33,982 | 310 | 372 | 9,568 | 838 |
| | ಶೇ. | | 75.40 | 0.69 | 0.83 | 21.23 | 1.86 |
| | ಗ್ರಾಮೀಣ | 31,177 | 22,579 | 256 | 344 | 7,780 | 218 |
| | ಶೇ. | | 72.42 | 0.82 | 1.10 | 24.95 | 0.70 |
| | ನಗರ | 13,893 | 11,403 | 54 | 28 | 1,788 | 620 |
| | ಶೇ. | | 82.08 | 0.39 | 0.20 | 12.87 | 4.46 |
| ದೊಡ್ಡಬಳ್ಳಾಪುರ | ಒಟ್ಟು | 70,464 | 42,733 | 284 | 429 | 22,698 | 4,320 |
| | ಶೇ. | | 60.65 | 0.40 | 0.61 | 32.21 | 6.13 |
| | ಗ್ರಾಮೀಣ | 46,488 | 23,547 | 204 | 362 | 22,215 | 160 |
| | ಶೇ. | | 50.65 | 0.44 | 0.78 | 47.79 | 0.34 |
| | ನಗರ | 23,976 | 19,186 | 80 | 67 | 483 | 4,160 |
| | ಶೇ. | | 80.02 | 0.33 | 0.28 | 2.01 | 17.35 |
| ಹೊಸಕೋಟೆ | ಒಟ್ಟು | 59,236 | 38,295 | 502 | 686 | 17,336 | 2,417 |
| | ಶೇ. | | 64.65 | 0.85 | 1.16 | 29.27 | 4.08 |
| | ಗ್ರಾಮೀಣ | 46,145 | 29,298 | 460 | 622 | 14,827 | 938 |
| | ಶೇ. | | 63.49 | 1.00 | 1.35 | 32.13 | 2.03 |
| | ನಗರ | 13,091 | 8,997 | 42 | 64 | 2,509 | 1,479 |
| | ಶೇ. | | 68.73 | 0.32 | 0.49 | 19.17 | 11.30 |

**ಕೋಷ್ಟಕ 7.10: ಕುಡಿಯುವ ನೀರಿನ ಮೂಲಗಳು**

| | | | | | | | |
|---|---|---|---|---|---|---|---|
| ನೆಲಮಂಗಲ | ಒಟ್ಟು | 49,975 | 35,152 | 270 | 821 | 13,408 | 324 |
| | ಶೇ. | | 70.34 | 0.54 | 1.64 | 26.83 | 0.65 |
| | ಗ್ರಾಮೀಣ | 38,588 | 25,215 | 258 | 791 | 12,105 | 219 |
| | ಶೇ. | | 65.34 | 0.67 | 2.05 | 31.37 | 0.57 |
| | ನಗರ | 11,387 | 9,937 | 12 | 30 | 1,303 | 105 |
| | ಶೇ. | | 87.27 | 0.11 | 0.26 | 11.44 | 0.92 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 224,745 | 150,162 | 1,366 | 2,308 | 63,010 | 7,899 |
| | ಶೇ. | | 66.81 | 0.61 | 1.03 | 28.04 | 3.51 |
| | ಗ್ರಾಮೀಣ | 162,398 | 100,639 | 1,178 | 2,119 | 56,927 | 1,535 |
| | ಶೇ. | | 61.97 | 0.73 | 1.30 | 35.05 | 0.95 |
| | ನಗರ | 62,347 | 49,523 | 188 | 189 | 6,083 | 6,364 |
| | ಶೇ. | | 79.43 | 0.30 | 0.30 | 9.76 | 10.21 |
| ಕರ್ನಾಟಕ | ಒಟ್ಟು | 13,179,911 | 8,706,964 | 1,182,990 | 729,630 | 2,101,712 | 458,615 |
| | ಶೇ. | | 66.06 | 8.98 | 5.54 | 15.95 | 3.48 |
| | ಗ್ರಾಮೀಣ | 7,864,196 | 4,432,115 | 935,263 | 662,370 | 1,539,109 | 295,339 |
| | ಶೇ. | | 56.36 | 11.89 | 8.42 | 19.57 | 3.76 |
| | ನಗರ | 5,315,715 | 4,274,849 | 247,727 | 67,260 | 562,603 | 163,276 |
| | ಶೇ. | | 80.42 | 4.66 | 1.27 | 10.58 | 3.07 |

ಮೂಲ: ಜನಗಣತಿ 2011

ಕುಡಿಯುವ ನೀರಿನ ಪ್ರಮುಖ ಮೂಲಗಳೆಂದರೆ ನಲ್ಲಿ, ಕೈ ಪಂಪು, ನಳಕೆ ಬಾವಿಗಳು, ಬಾವಿಗಳು ಮತ್ತು ಕೆರೆ, ಕಾಲುವೆ, ಹೊಳೆ ಮತ್ತು ಕಾರಂಜಿಗಳು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶೇ. 79 ರಷ್ಟು ನಗರದ ಕುಟುಂಬಗಳಿಗೆ ನಲ್ಲಿಯು ಬಹಳ ಮುಖ್ಯ ನೀರಿನ ಮೂಲವಾಗಿದ್ದು, ಶೇ. 62 ರಷ್ಟು ಗ್ರಾಮೀಣ ಕುಟುಂಬಗಳಿಗೆ ಪ್ರಮುಖವಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಮತ್ತೊಂದು ಪ್ರಮುಖ ಮೂಲವೆಂದರೆ ನಳಕೆ ಬಾವಿ. 2011, ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ಸುಮಾರು ಶೇ. 35 ರಷ್ಟು ಗ್ರಾಮೀಣ ಕುಟುಂಬಗಳು ನಳಕೆ ಬಾವಿಗಳಿಂದ ನೀರನ್ನು ಬಳಸುವುದಾಗಿ ವರದಿ ಮಾಡಿದ್ದು, ಇದಕ್ಕೆ ವಿರುದ್ಧವಾಗಿ ಕೇವಲ ಶೇ. 9 ರಷ್ಟು ನಗರದ ಕುಟುಂಬಗಳು ನಳಕೆ ಬಾವಿಯನ್ನು ಬಳಸುತ್ತಿದ್ದವು. ಈ ಮಾದರಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆದ ಎಲ್ಲಾ ನಾಲ್ಕು ತಾಲೂಕುಗಳಿಗೂ ಅನ್ವಯಿಸುತ್ತದೆ.

## 7.4.2 ನೀರು ಸರಬರಾಜಿನ ಗುಣಮಟ್ಟ

**ಕೋಷ್ಟಕ 7.11: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೀರಿನ ಮಾಲಿನ್ಯ (2012-13)**

| ತಾಲೂಕು/ಜಿಲ್ಲೆ | ಕಲುಷಿತ ನೀರಿನಿಂದ ಪೀಡಿತ ಜನಸಂಖ್ಯೆ | ಪೀಡಿತ ಜನಸಂಖ್ಯೆಯಲ್ಲಿ 2010-11ರಿಂದ ಶೇಕಡಾವಾರು ಬದಲಾವಣೆ | ಇದರಿಂದ ಬಾಧಿತರು | | | |
|---|---|---|---|---|---|---|
| | | | ಫ್ಲೋರೈಡ್ | ಕಬ್ಬಿಣ | ಲವಣಯ್ತ | ನೈಟ್ರೇಟ್ |
| ದೇವನಹಳ್ಳಿ | 727 | -99.86 | 0 | 727 | 0 | 0 |
| ದೊಡ್ಡಬಳ್ಳಪುರ | 534 | -99.96 | 298 | 236 | 0 | 0 |
| ಹೊಸಕೋಟೆ | 4,098 | -99.85 | 0 | 368 | 418 | 3,312 |
| ನೆಲಮಂಗಲ | 5,373 | -99.54 | 1,161 | 421 | 2,482 | 1,309 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 10,732 | -99.81 | 1,459 | 1,752 | 2,900 | 4,621 |

ಟಿಪ್ಪಣಿ:

1. ಆರ್ಸೆನಿಕ್ ಒಳಗೊಂಡಂತೆ ಯಾವುದೇ ಮಾಲಿನ್ಯವುಳ್ಳ ಮನೆಗಳನ್ನು ಆರ್ಸೆನಿಕ್ ಕಾಲಂ ಆಡಿ ಗಣಿಸಲಾಗಿದೆ
2. ಫ್ಲೋರೈಡ್ ಒಳಗೊಂಡಂತೆ ಯಾವುದೇ ಮಾಲಿನ್ಯದಿಂದ ಪೀಡಿತ ಆದರೆ ಆರ್ಸೆನಿಕ್ ಇಲ್ಲದ ಮನೆಗಳನ್ನು ಫ್ಲೋರೈಡ್ ಕಾಲಂ ಅಡಿ ಗುಣಿಸಲಾಗಿದೆ
3. ಕಬ್ಬಿಣ ಒಳಗೊಂಡಂತೆ ಯಾವುದೇ ಮಾಲಿನ್ಯದಿಂದ ಪೀಡಿತ ಆದರೆ ಆರ್ಸೆನಿಕ್ ಇಲ್ಲದ ಮನೆಗಳನ್ನು ಕಬ್ಬಿಣ  ಕಾಲಂ ಅಡಿ ಗುಣಿಸಲಾಗಿದೆ
4. ಲವಣತ್ವ ಒಳಗೊಂಡಂತೆ ಯಾವುದೇ ಮಾಲಿನ್ಯದಿಂದ ಪೀಡಿತ ಆದರೆ ಆರ್ಸೆನಿಕ್ ಇಲ್ಲದ ಮನೆಗಳನ್ನು ಲವಣತ್ವ ಕಾಲಂ ಅಡಿ ಗುಣಿಸಲಾಗಿದೆ
5. ಕೇವಲ ನೈಟ್ರೇಟ್ ಮಾಲಿನ್ಯದಿಂದ ಪೀಡಿತ ಮನೆಗಳನ್ನು ನೈಟ್ರೇಟ್ ಕಾಲಂ ಅಡಿ ಗುಣಿಸಲಾಗಿದೆ

ಮೂಲ: ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಮಿಶನ್ ನ ಜಾಲತಾಣ

ನೀರಿನ ಮಾಲಿನ್ಯವು ನೀರಿನ ಲಭ್ಯತೆಗೆ ಸಂಬಂಧಿಸಿದ ಒಂದು ಪ್ರಮುಖವಾದ ಅಂಶ; ಉತ್ತಮ ಆರೋಗ್ಯಕ್ಕೆ ಶುದ್ಧ ಕುಡಿಯುವ ನೀರೇ ನಿಜವಾದ ಅವಶ್ಯಕತೆ. ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಜಿಲ್ಲೆಯು ಉತ್ತಮವಾದ ಸಾಧನೆ ಮಾಡಿದೆ ಆದರೆ ಇನ್ನೂ ಕೆಲವು ಅಂಶಗಳನ್ನು ಪರಿಹರಿಸಬೇಕಿದೆ. ಪ್ರಮುಖ ನೀರಿನ ಗುಣಮಟ್ಟದ ಸಮಸ್ಯೆಯಿಂದ 10732ಕ್ಕೂ ಹೆಚ್ಚು ಜನರು ಪೀಡಿತರಾಗಿದ್ದಾರೆ: ಹೆಚ್ಚು ಫ್ಲೋರೈಡ್-1459; ಕಬ್ಬಿಣ-1752;ಲವಣತ್ವ-2900 ಮತ್ತು ನೈಟ್ರೇಟ್-4621 2012-13 ರಲ್ಲಿ. ಪೀಡಿತ ಜನಸಂಖ್ಯೆಯಲ್ಲಿ ಆಗಿರುವ 81ಶೇ.ರಷ್ಟು ಕಡಿತಕ್ಕೆ ಕಾರಣ ನೈಟ್ರೇಟ್ ಮಾಲಿನ್ಯದಿಂದ ಪೀಡಿತ ಜನರಲ್ಲಿನ ಗಣನೀಯವಾದ ಕಡಿತವೇ ಆಗಿದೆ. 2010-11ರಲ್ಲಿ 41961 ಜನರು ನೈಟ್ರೇಟ್ ಮಾಲಿನ್ಯದಿಂದ ಪೀಡಿತರಾಗಿದ್ದು, 2012-13ರಲ್ಲಿ ಇದನ್ನು ಗಣನೀಯವಾಗಿ 4621 ಜನರಿಗೆ ಇಳಿಸಲಾಯಿತು. ಮೇಲಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ನಾಲ್ಕು ತಾಲೂಕುಗಳು, 2010-11 ಗೆ ಹೋಲಿಸಿದಂತೆ, 2013-14ನಲ್ಲಿ ಕಲುಷಿತ ನೀರಿನಿಂದ ಪೀಡಿತರಾದ ಜನಸಖ್ಯೆಯಲ್ಲಿ ಶೇ. 99 ರಷ್ಟು ಇಳಿಕೆಯನ್ನು ಕಂಡಿವೆ.

## 7.5 ನೈರ್ಮಲ್ಯ

ಸಮುದಾಯಗಳ ಆರೋಗ್ಯ ಸ್ಥಿತಿಯಲ್ಲಿ ನೈರ್ಮಲ್ಯವು ಪ್ರಮುಖ ಪಾತ್ರ ವಹಿಸಿದ್ದು, ಇದು ಮಾನವ ಅಭಿವೃದ್ಧಿಯ ಪ್ರಮಿತಿಗಳ ಮೇಲೆ ಪರಿಣಾಮ ಬೀರುತ್ತದೆ. ಇದನ್ನು ಕಂಡುಕೊಂಡ ಕರ್ನಾಟಕ ಸರ್ಕಾರವು, 2005ನಲ್ಲಿ ಸಂಪೂರ್ಣ ನೈರ್ಮಲ್ಯದ ಆಂದೋಲನವನ್ನು ಆರಂಭಿಸಿದ್ದು, ಜನರ ನೈರ್ಮಲ್ಯತೆಯ ಸ್ಥಿತಿಯನ್ನು ಸುಧಾರಿಸಲು ಶೌಚಾಲಯಗಳ ಬಳಕೆಯನ್ನು ಉತ್ತೇಜಿಸಿತು. ತೆರೆದ ಬಹಿರ್ದೆಶೆಯ ಅಭ್ಯಾಸದಿಂದ ಮಕ್ಕಳ ಆರೋಗ್ಯಕ್ಕೆ ತೊಂದರೆಯಾಗುತ್ತಿದ್ದು, ಅವರು ಶಾಲೆಗಳಿಗೆ ಗೈರುಹಾಜರಾಗುತ್ತಿದ್ದುದರಿಂದ, ಮತ್ತು ಇದರಿಂದ ಅವರ ಶಿಕ್ಷಣಕ್ಕೆ ಧಕ್ಕೆಯಾಗುವುದರಿಂದ, ಈ ಯೋಜನೆಯು ಅವರಿಗೆ ವಿಶೇಷ ಪರಿಣಾಮ ಬೀರುತ್ತದೆ. ಸಂಪೂರ್ಣ ನೈರ್ಮಲ್ಯದ ಆಂದೋಲನದ ಜೊತೆಗೆ, ಕರ್ನಾಟಕ ಸರ್ಕಾರವು ಗ್ರಾಮ ಪಂಚಾಯತಿಗಳು ತೆರೆದ ಬಹಿರ್ದೆಶೆಯ ಸಮಸ್ಯೆಯನ್ನು ದೃಢವಾಗಿ ಪರಿಹರಿಸುವಂತೆ ಉತ್ತೇಜಿಸಲು ಗ್ರಾಮ ಪಂಚಾಯತಿಗಳಿಗೆ ನಿರ್ಮಲ ಗ್ರಾಮ ಪುರಸ್ಕಾರ (NGP) ಅಡಿಯಲ್ಲಿ ಬಹುಮಾನಗಳನ್ನು ನೀಡಲು ಆರಂಭಿಸಿತು.

ಸಂಪೂರ್ಣ ನೈರ್ಮಲ್ಯತೆಯ ಆಂದೋಲನ ಮತ್ತು NGP ಬಹುಮಾನದ ಪ್ರಸ್ತಾವನೆದಿಂದಾಗಿ ಈ ಅವಧಿಯಲ್ಲೊ ಮನೆಗಳಲ್ಲಿ ಶೌಚಾಲಯದ ಲಭ್ಯತೆಯ ಮೇಲೆ ಗಣನೀಯವಾದ ಪರಿಣಾಮ ಬೀರಿತು. 2001 ಮತ್ತು 2011ರಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಮತ್ತು ಕರ್ನಾಟಕದಲ್ಲಿ ಮನೆಗಳಲ್ಲಿ ಶೌಚಾಲಯದ ಲಭ್ಯತೆಯಲ್ಲಿ ಆಗಿರುವ ಗಣನೀಯ ಸುಧಾರಣೆಯ ವಿವರಗಳನ್ನು ಕೋಷ್ಟಕ 7.12ರಲ್ಲಿ ನೀಡಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ನರ್ಮಲ್ಯವನ್ನು ಸುಧಾರಿಸುವ ಈ ಯೋಜನೆಯ ಪ್ರಮುಖ ಫಲಾನುಭವಿಗಳು ಎಂದರೆ ಗ್ರಾಮೀಣ ಕುಟುಂಬಗಳು. ದೇವನಹಳ್ಳಿಯಲ್ಲಿ, ಮನೆಯಲ್ಲಿ ಶೌಚಾಲಯದ ಲಭ್ಯತೆಯಿದ್ದ ಗ್ರಾಮೀಣ ಕುಟುಂಬಗಳ ಸಂಖ್ಯೆಯು 2001ರಲ್ಲಿ 20835 ಇದ್ದು, 2011ರಲ್ಲಿ ಇದು 37369ಗೆ ಏರಿದೆ. ಇದೇ ಅವಧಿಯಲ್ಲಿ ಇದು 23ಶೇ. ಅಂಕಿಗಳ ಏರಿಕೆಯನ್ನು ಕಂಡಿದೆ. ಇದರಂತೆ, ದೇವನಹಳ್ಳಿಯ ನಗರದ ಕುಟುಂಬಗಳು ಮನೆಯಲ್ಲಿ ಶೌಚಾಲಯದ ಲಭ್ಯತೆ ಇರುವ ಕುಟುಂಬಗಳಲ್ಲಿ 12ಶೇ. ಗಳಷ್ಟು ಏರಿಕೆಯನ್ನು ಕಂಡಿದೆ, ಇದೇ ಅವಧಿಯಲ್ಲಿ. ಹೊಸಕೋಟೆಯಲ್ಲಿ, ಮನೆಯಲ್ಲಿ ಶೌಚಾಲಯ ಲಭ್ಯವಿದ್ದ ಗ್ರಾಮೀಣ ಕುಟುಂಬಗಳಲ್ಲಿ 16ಶೇ.ರಷ್ಟು ಹೆಚ್ಚಳವಾಗಿದ್ದು, ನಗರ ಕುಟುಂಬಗಳಲ್ಲಿ 9ಶೇ. ರಷ್ಟು ಹೆಚ್ಚಳವಾಗಿದೆ. ದೊಡ್ಡಬಳ್ಳಾಪುರದಲ್ಲಿ ಸ್ಥಿತಿಯು ಇದಕ್ಕೆ ವಿರುದ್ಧವಾಗಿದ್ದು, ನಗರ ಕ್ಷೇತ್ರದಲ್ಲಿ ಗಣನೀಯ ಸುಧಾರಣೆಯಾಗಿದೆ. ಮನೆಯಲ್ಲಿ ಶೌಚಾಲಯದ ಲಭ್ಯತೆಯಿರುವ ಕುಟುಂಬಗಳಲ್ಲಿ 2001ರಲ್ಲಿ 79.05ಶೇ. ಇದ್ದು, 2011ರಲ್ಲಿ ಇದು 90.67ಶೇ.ಗೆ ಏರಿಕೆಯಾಗಿದೆ.

**ಕೋಷ್ಟಕ 7.12: ಶೌಚಾಲಯದ ಸೌಲಭ್ಯಗಳು – 2011 ಮತ್ತು 2001**

| ತಾಲೂಕು/ಜಿಲ್ಲೆ/ರಾಜ್ಯ | ಒಟ್ಟು ಗ್ರಾಮೀಣ/ ನಗರ | 2011 | | | 2001 | | |
|---|---|---|---|---|---|---|---|
| | | ಕುಟುಂಬಗಳ ಒಟ್ಟು ಸಂಖ್ಯೆ | ಮನೆಯಲ್ಲಿ ಶೌಚಾಲಯ | ಮನೆಯಲ್ಲಿ ಶೌಚಾಲಯವಿಲ್ಲ | ಒಟ್ಟು ಕುಟುಂಬಗಳು | ಕುಟುಂಬಗಳ ಒಟ್ಟು ಸಂಖ್ಯೆ | ಮನೆಯಲ್ಲಿ ಶೌಚಾಲಯ |
| ದೇವನಹಳ್ಳಿ | ಒಟ್ಟು | 45,070 | 37,369 | 7,701 | 35,299 | 20,835 | 14,464 |
| | ಶೇ. | | 82.91 | 17.09 | | 59.02 | 40.98 |
| | ಗ್ರಾಮೀಣ | 31,177 | 25,492 | 5,685 | 24,865 | 13,218 | 11,647 |
| | ಶೇ. | | 81.77 | 18.23 | | 53.16 | 46.84 |
| | ನಗರ | 13,893 | 11,877 | 2,016 | 10,434 | 7,617 | 2,817 |
| | ಶೇ. | | 85.49 | 14.51 | | 73.00 | 27.00 |
| ದೊಡ್ಡಬಳ್ಳಾಪುರ | ಒಟ್ಟು | 70,464 | 53,602 | 16,862 | 55,131 | 37,506 | 17,625 |
| | ಶೇ. | | 76.07 | 23.93 | | 68.03 | 31.97 |
| | ಗ್ರಾಮೀಣ | 46,488 | 31,862 | 14,626 | 39,002 | 24,756 | 14,246 |
| | ಶೇ. | | 68.54 | 31.46 | | 63.47 | 36.53 |
| | ನಗರ | 23,976 | 21,740 | 2,236 | 16,129 | 12,750 | 3,379 |
| | ಶೇ. | | 90.67 | 9.33 | | 79.05 | 20.95 |
| ಹೊಸಕೋಟೆ | ಒಟ್ಟು | 59,236 | 46,412 | 12,824 | 41,296 | 25,923 | 15,373 |
| | ಶೇ. | | 78.35 | 21.65 | | 62.77 | 37.23 |
| | ಗ್ರಾಮೀಣ | 46,145 | 34,074 | 12,071 | 34,029 | 19,682 | 14,347 |
| | ಶೇ. | | 73.84 | 26.16 | | 57.84 | 42.16 |
| | ನಗರ | 13,091 | 12,338 | 753 | 7,267 | 6,241 | 1,026 |
| | ಶೇ. | | 94.25 | 5.75 | | 85.88 | 14.12 |

| ತಾಲೂಕು/ಜಿಲ್ಲೆ/ರಾಜ್ಯ | ಒಟ್ಟು ಗ್ರಾಮೀಣ/ ನಗರ | 2011 | | | 2001 | | |
|---|---|---|---|---|---|---|---|
| | | ಕುಟುಂಬಗಳ ಒಟ್ಟು ಸಂಖ್ಯೆ | ಮನೆಯಲ್ಲಿ ಶೌಚಾಲಯ | ಮನೆಯಲ್ಲಿ ಶೌಚಾಲಯವಿಲ್ಲ | ಒಟ್ಟು ಕುಟುಂಬಗಳು | ಕುಟುಂಬಗಳ ಒಟ್ಟು ಸಂಖ್ಯೆ | ಮನೆಯಲ್ಲಿ ಶೌಚಾಲಯ |
| ನೆಲಮಂಗಲ | ಒಟ್ಟು | 49,975 | 42,206 | 7,769 | 35,951 | 28,032 | 7,919 |
| | ಶೇ. | | 84.45 | 15.55 | | 77.97 | 22.03 |
| | ಗ್ರಾಮೀಣ | 38,588 | 31,215 | 7,373 | 30,754 | 23,153 | 7,601 |
| | ಶೇ. | | 80.89 | 19.11 | | 75.28 | 24.72 |
| | ನಗರ | 11,387 | 10,991 | 396 | 5,197 | 4,879 | 318 |
| | ಶೇ. | | 96.52 | 3.48 | | 93.88 | 6.12 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 224,745 | 179,589 | 45,156 | 167,677 | 112,296 | 55,381 |
| | ಶೇ. | | 79.91 | 20.09 | | 66.97 | 33.03 |
| | ಗ್ರಾಮೀಣ | 162,398 | 122,643 | 39,755 | 128,650 | 80,809 | 47,841 |
| | ಶೇ. | | 75.52 | 24.48 | | 62.81 | 37.19 |
| | ನಗರ | 62,347 | 56,946 | 5,401 | 39,027 | 31,487 | 7,540 |
| | ಶೇ. | | 91.34 | 8.66 | | 80.68 | 19.32 |
| ಕರ್ನಾಟಕ | ಒಟ್ಟು | 13,179,911 | 6,749,396 | 6,430,515 | 10,232,133 | 6,023,650 | 4,208,483 |
| | ಶೇ. | | 51.21 | 48.79 | | 58.87 | 41.13 |
| | ಗ್ರಾಮೀಣ | 7,864,196 | 2,234,534 | 5,629,662 | 6,675,173 | 3,208,448 | 3,466,725 |
| | ಶೇ. | | 28.41 | 71.59 | | 48.07 | 51.93 |
| | ನಗರ | 5,315,715 | 4,514,862 | 800,853 | 3,556,960 | 2,815,202 | 741,758 |
| | ಶೇ. | | 84.93 | 15.07 | | 79.15 | 20.85 |

ಮೂಲ: ಜನಗಣತಿ 2011 ಮತ್ತು 2001

## 7.6 ವಿದ್ಯುತ್ ಸಂಪರ್ಕ

ಮಾನವ ಅಭಿವೃದ್ಧಿಗೆ ವಿದ್ಯುಚ್ಛಕ್ತಿಯ ಬಳಕೆಯು ಬಹಳ ನಿರ್ಣಾಯಕವಾಗಿದೆ, ಏಕೆಂದರೆ ಎಲ್ಲಾ ಗೃಹೋಪಯೋಗಿ ಉಪಕರಣಗಳನ್ನು, ಬೇಸಾಯದ, ಔದ್ಯಮಿಕ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಇದೇ ಶಕ್ತಿಯ ಮೂಲವಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಿದ್ಯುಚ್ಛಕ್ತಿ ಉತ್ಪಾದಿಸಲು ಬೇಕಿರುವ ನೈಸರ್ಗಿಕ ಸಂಪನ್ಮೂಳ ಮಿತವಾದ ಲಭ್ಯತೆಯನ್ನು ಪರಿಗಣಿಸಿ, ವಿದ್ಯುತ್ ಸಂಪರ್ಕ ಲಭ್ಯತೆಯ ಸಮಸ್ಯೆಯನ್ನು ಸಾರ್ವಜನಿಕವಾಗಿ, ಅಂತಾರಾಷ್ಟ್ರೀಯ ಮತ್ತು ಉನ್ನತ ಸರ್ಕಾರಿ ಮಟ್ಟದಲ್ಲಿ ಹೆಚ್ಚಾಗಿ ಚರ್ಚಿಸಲಾಗುತ್ತಿದೆ. ಈ ಸಮಸ್ಯೆಯು ಭಾರತದಲ್ಲಿ ತೀವ್ರವಾಗಿದೆ ಏಕೆಂದರೆ ಇಲ್ಲಿ ವಿದ್ಯುಚ್ಛಕ್ತಿ ಉತ್ಪಾದಿಸಲು ಕಲ್ಲಿದ್ದಲು ಪ್ರಮುಖವಾದ ಶಕ್ತಿಯ ಮೂಲವಾಗಿದೆ. ಇದರ ಜೊತೆಗೆ, ವಿದ್ಯುಚ್ಛಕ್ತಿ ಬಳಕೆಯ ಪರಿವೀಕ್ಷಣೆಯ ಕೊರತೆ, ವಿದ್ಯುಚ್ಛಕ್ತಿ ಕಳ್ಳತನ ಮತ್ತು ಪ್ರಸರಣದಲ್ಲಿ ವಿದ್ಯುಚ್ಛಕ್ತಿಯ ನಷ್ಟವು ವಿದ್ಯುಚ್ಛಕ್ತಿಯ ದರದಲ್ಲಿ ಏರಿಕೆಯನ್ನುಂಟುಮಾಡಿದೆ. ಇದರ ಕಾರಣವಾಗಿ, ಭಾರತದಲ್ಲಿ ಮುಖ್ಯವಾಗಿ ಬಡ ಕುಟುಂಬಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಲ್ಲಿ ನೇರ ಪರಿಣಮ ಬೀರುತ್ತಿದೆ.

2011 ಜನಗಣತಿಯ ಪ್ರಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ 95 ರಷ್ಟು ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಪೂರೈಕೆಯಾಗುತ್ತಿದ್ದು, ಕರ್ನಾಟಕದಲ್ಲಿ ಈ ಸಂಖ್ಯೆಯು ಶೇ.90 ರಷ್ಟಿದೆ. ಮತ್ತು 2001ರಲ್ಲಿ, ಶೇ. 89 ಮತ್ತು ಶೇ.79 ರಷ್ಟು ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಪೂರೈಕೆಯಾಗಿತ್ತಿದ್ದಿತು, ಅನುಕ್ರಮವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ. 2011ರಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲೂಕುಗಳಲ್ಲಿ ವಿದ್ಯುತ್ ಸಂಪರ್ಕ ಪೂರೈಸಲಾಗುತ್ತಿದ್ದ ಕುಟುಂಬಗಳ ಸಂಖ್ಯೆಯು 94ರಿಂದ 96ಶೇ. ರಷ್ಟಿದೆ. ಮೇಲಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆದಲ್ಲಿ ವಿದ್ಯುತ್ ಸಂಪರ್ಕ ಲಭ್ಯವಿರುವ ಗ್ರಾಮೀಣ ಮತ್ತು ನಗರದ ಕುಟುಂಬಗಳ ನಡುವಿನ ಅಂತರವು ಸಣ್ಣದಾಗಿದೆ, ಸುಮಾರು ಶೇ. 054ರಷ್ಟು, ಆದರೆ ಕರ್ನಾಟಕದಲ್ಲಿ ಈ ಅಂತರವು ಶೇ.10 ರಷ್ಟಿದೆ. ಆದರೆ, ಕರ್ನಾಟಕದಲ್ಲಿ ಈ ಅವಧಿಯಲ್ಲಿ ಗ್ರಾಮೀಣ ಮತ್ತು ನಗರದ ಕುಟುಂಬಗಳ ನಡುವಿನ ಅಂತರವು ಹಣನೀಯವಾಗಿ ಕಡಿಮೆಯಾಗಿದೆ, ಅಂದರೆ ಸುಮಾರು 15 ಅಂಕಿಗಳಷ್ಟು.

ಮೇಲಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕ ಎರಡರಲ್ಲೂ, 2001ರಿಂದ 2001ರ ವರೆಗೂ ಬೆಳಕಿನ ಕಾರಣಕ್ಕಾಗಿ ಸೀಮೀಣ್ಣೆಯನ್ನು ಬಳಸುತ್ತಿದ್ದ ಕುಟುಂಬಗಳ ಸಂಖ್ಯೆಯು ಕಡಿಮೆಯಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ದೀಪಕ್ಕಾಗಿ ಸೀಮೀಣ್ಣೆ ಬಳಸುತ್ತಿದ್ದ ಗ್ರಾಮೀಣ ಕುಟುಂಬಗಳ ಸಂಖ್ಯೆಯು ಶೇ. 6 ರಷ್ಟು ಕಡಿಮೆಯಾಗಿದ್ದರೆ, ನಗರ ಕ್ಷೇತ್ರವು ಶೇ. 4 ರಷ್ಟು ಕಡಿತವನ್ನು ಕಂಡಿದೆ. ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಸೀಮೀಣ್ಣೆ ಬಳಸುತ್ತಿದ್ದ ಗ್ರಾಮೀಣ ಕುಟುಂಬಗಳ ಸಂಖ್ಯೆಯು ಶೇ. 15 ರಷ್ಟು ಕಡಿತವನ್ನು ಕಂಡಿದೆ. ಇದರ ಜೊತೆಗೆ, ಇತರ ಮೂಲಗಳಾದ ಸೌರ ವಿದ್ಯುತ್ ಸಂಪರ್ಕ, ಇತರ ಮೂಲಗಳು ಇದೇ ಅವಧಿಯಲ್ಲಿ ಸ್ಥಿರವಾಗಿದೆ ಅಥವಾ ಸಣ್ಣ ಪ್ರಮಾಣದಲ್ಲಿ ಕಡಿಮೆಯಾಗಿವೆ.

ಆದ್ದರಿಂದ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ದೀಪಕ್ಕೆ ವಿದ್ಯುಚ್ಛಕ್ತಿ ಬಳಕೆಸುತ್ತಿರುವ ಕುಟುಂಬಗಳ ಸಂಖ್ಯೆಯಲ್ಲಿನ ಹೆಚ್ಚಳ ಮತ್ತು ಕುಟುಂಬಗಳಿಂದ ಕಡಿಮೆಯಾದ ಸೀಮೆ ಎಣ್ಣೆಯ ಮತ್ತು ಇತರ ಮೂಲಗಳ ಬಳಕೆಯು, ರಾಜ್ಯದ ಎಲ್ಲಾ ಕುಟುಂಬಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ನಿಟ್ಟಿನಲ್ಲಿ ಪ್ರಾಜ್ಞ ನಡೆಯನ್ನು ಸೂಚಿಸುತ್ತದೆ.

## 7.7 ಅಡುಗೆ ಇಂಧನ

ಪ್ರಮುಖವಾಗಿ ಭಾರತದಲ್ಲಿ, ಅಡುಗೆ ಅನಿಲ, ವಿದ್ಯುಚ್ಛಕ್ತಿ ಮತ್ತು ಜೈವಿಕಾನಿಲ ಗಳಂತಹ ಸ್ವಚ್ಛ ಅಡುಗೆ ಇಂಧನಗಳ ಬಳಕೆಯು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಬೃಹತ್ ಪರಿಣಾಮವನ್ನು ಬೀರುತ್ತವೆ. ಇದಕ್ಕೆ ಮುಖ್ಯ ಕಾರಣ, ಭಾರತದಲ್ಲಿ ಕುಟುಂಬದ ಮಹಿಳೆಯರು ನಿರ್ವಹಿಸುವ ಪಾತ್ರ ಮತ್ತು ಕರ್ತವ್ಯಗಳು. ಬಹಳಷ್ಟು

ಕುಟುಂಬಗಳಲ್ಲಿ, ಅಡುಗೆಯ ಜವಾಬ್ದಾರಿಯನ್ನು ಮಹಿಳೆಯರಿಗೆ ವಹಿಸಲಾಗುತ್ತದೆ ಮತ್ತು ಮಕ್ಕಳು, ಬಾಲ್ಯದಲ್ಲಿ, ತಮ್ಮ ತಾಯಂದಿರ ಸುತ್ತವೇ ಇರುತ್ತಾರೆ. ಇದನ್ನು ಪರಿಗಣಿಸಿ, ಸಾಂಪ್ರದಾಯಿಕ ಅಡುಗೆ ಇಂಧನವು ಹೊರಸೂಸುವ ಅಪಾಯಕಾರಿ ಹೊಗೆಯು ಕುಟುಂಬದ ಮಹಿಳೆಯರು ಮತ್ತು ಸಣ್ಣ ಮಕ್ಕಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಆರೋಗ್ಯದ ಮೇಲಿನ ಈ ವ್ಯತಿರಿಕ್ತ ಪರಿಣಾಮವು, ಕುಟುಂಬದ ಹಿರಿಯ ಮಹಿಳೆಯರ ಶ್ರಮಿಕ ಉತ್ಪಾದಕತೆ ಮತ್ತು ಮಕ್ಕಳ ಶಿಕ್ಷಣಿಕ ಸಾಧನೆಯ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ, ಕುಟುಂಬಗಳಿಂದ ಸ್ವಚ್ಛ ಅಡುಗೆ ಇಂಧನದ ಬಳಕೆಯು ಮಹಿಳೆಯರ ಮತ್ತು ಮಕ್ಕಳ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರಮುಖವಾದ ಅಡುಗೆ ಇಂಧನವೆಂದರೆ ಸೌದೆ. 2011ರಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಅನುಕ್ರಮವಾಗಿ 69ಶೇ. ಮತ್ತು ಶೇ. 82 ರಷ್ಟು ಕುಟುಂಬಗಳು ಅಡುಗೆಗೆ ಸೌದೆಯನ್ನು ಬಳಸುತ್ತಾರೆ. ನಗರ ಪ್ರದೇಶದಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕ ಎರಡರಲ್ಲಿಯೂ ಪ್ರಧಾನ ಅಡುಗೆ ಇಂಧನವೆಂದರೆ ಐಕಉ. 2011ರಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ಅಡುಗೆ ಇಂಧನವಾಗಿ ಐಕಉ ಯನ್ನು ಬಳಸುತ್ತಿದ್ದ ನಗರದ ಕುಟುಂಬಗಳ ಸಂಖ್ಯೆಯು ಅನುಕ್ರಮವಾಗಿ ಶೇ. 62 ಮತ್ತು ಶೇ. 64ಇದ್ದಿತು.

2001ರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ನಾಲ್ಕು ತಾಲೂಕುಗಳಲ್ಲಿಯೂ ಸ್ವಚ್ಛ ಅಡುಗೆ ಇಂಧನದ ಬಳಕೆಯು ಗಣನೀಯವಾಗಿ ಹೆಚ್ಚಿದೆ. ದೇವನಹಳ್ಳಿಯಲ್ಲಿ, ಸ್ವಚ್ಛ ಅಡುಗೆ ಇಂಧನವನ್ನು ಬಳಸುತ್ತಿದ್ದ ಕುಟುಂಬಗಳು 2001ರಲ್ಲಿ 14ಶೇ.ರಷ್ಟಿದ್ದು, 2011ರಲ್ಲಿ ಶೇ.35 ಕ್ಕೆ ಏರಿದೆ. ದೇವನಹಳ್ಳಿಯ ಗ್ರಾಮೀಣ ಭಾಗದಲ್ಲಿ, ಸ್ವಚ್ಛ ಅಡುಗೆ ಇಂಧನವನ್ನು ಬಳಸುತ್ತಿದ್ದ ಕುಟುಂಬಗಳು 2001ರಲ್ಲಿ ಶೇ.8 ರಷ್ಟಿದ್ದು, 2011ರಲ್ಲಿ ಶೇ 28.ಕ್ಕೆ ಏರಿದೆ. ಸ್ವಚ್ಛ ಅಡುಗೆ ಇಂಧನದ ಬಳಕೆಯನ್ನು ಆರಂಭಿಸಿದ ಕುಟುಂಬಗಳ ಸಂಖ್ಯೆಯಲ್ಲಿ ನಂತರ ಹೆಚ್ಚಿನ ಸ್ಥಾನವನ್ನು ನೆಲಮಂಗಲ ತಾಲೂಕು ಪಡೆಯುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ, ಸ್ವಚ್ಛ ಅಡುಗೆ ಇಂಧನವನ್ನು ಬಳಸುತ್ತಿದ್ದ ಕುಟುಂಬಗಳು 2001ರಲ್ಲಿ ಶೇ.7 ರಷ್ಟಿದ್ದು, 2011ರಲ್ಲಿ ಶೇ 30.ಕ್ಕೆ ಏರಿದೆ. ಮತ್ತು ನಗರದ ಪ್ರದೇಶಗಳಲ್ಲಿ, ಸ್ವಚ್ಛ ಅಡುಗೆ ಇಂಧನವನ್ನು ಬಳಸುತ್ತಿದ್ದ ಕುಟುಂಬಗಳು 2001ರಲ್ಲಿ ಶೇ.44 ರಷ್ಟಿದ್ದು, 2011ರಲ್ಲಿ ಶೇ.76 ಕ್ಕೆ ಏರಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆದ ಇತರ ಎರಡು ತಾಲೂಕುಗಳಲ್ಲಿಯೂ ಇದೇ ಮಾದರಿಯನ್ನು ಕಾಣಬಹುದು.

ಆದ್ದರಿಂದ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಸ್ವಚ್ಛ ಅಡುಗೆ ಇಂಧನದೆಡೆಗೆ ಚಲನೆಯು ಗಣನೀಯವಾಗಿದೆ. ಆದರೆ, ಜಿಲ್ಲೆ ಮತ್ತು ರಾಜ್ಯ ಎರಡರಲ್ಲಿಯೂ, ಗ್ರಾಮೀಣ ಭಾಗಗಳಲ್ಲಿ ಸ್ವಚ್ಛ ಅಡುಗೆ ಇಂಧನವನ್ನು ಬಳಸುವ ಕುಟುಂಬಗಳು ಅಧಿಕ ಸಂಖ್ಯೆಯಲ್ಲಿಲ್ಲ. ಮೇಲಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೇವಲ ಶೇ.62 ರಷ್ಟು ಕುಟುಂಬಗಳು ಸ್ವಚ್ಛ ಅಡುಗೆ ಇಂಧನವನ್ನು ಬಳಸುತ್ತಿವೆ. ಗಾಮೀಣ ಮತ್ತು ನಗರ ಪ್ರದೇಶ ಎರಡರಲ್ಲಿಯೂ ಎಲ್ಲಾ ಕುಟುಂಬಗಳು ಸ್ವಚ್ಛ ಅಡುಗೆ ಇಂಧನವನ್ನು ಬಳಸುವಂಯೆ ಮಾಡಲು ಹೆಚ್ಚಿನ ಶ್ರಮದ ಅಗತ್ಯವಿದೆ. ಸ್ವಚ್ಛ ಅಡುಗೆ ಇಂಧನದ ಬಳಕೆಯು ಕುಟುಂಬದ ಮಹಿಳೆ ಮತ್ತು ಮಕ್ಕಳ ಆರೋಗ್ಯ ಸ್ಥಿತಿಯ ಮೇಲೆ ಧನಾತ್ಮಕವಾದ ಪರಿಣಾಮ ಬೀರುತ್ತದೆ.

## 7.8 ರಡಾರ್ ಪರಿಶೀಲನೆ

ರಡಾರ್ ನಕ್ಷೆ ಸೂಚಿಸುವಂತೆ ದೇವನಹಳ್ಳಿ ತಾಲೂಕು ಜಿಲ್ಲೆಯಲ್ಲಿ ಟೆಲಿವಿಶನ್ ಹೊಂದಿರುವ ಅತಿಹೆಚ್ಚು ಕುಟುಂಬಗಳನ್ನು ಹೊಂದಿದೆ(ಶೇ.72.91) . ಇದರ ಜೊತೆಗೆ, ಅದು ಜಿಲ್ಲೆಯಲ್ಲಿ ಅತ್ಯುತ್ತಮ ಆಸ್ತಿ ಸ್ಥಿತಿ ಇರುವ ತಾಲೂಕು. ಜಿಲ್ಲೆಯಲ್ಲಿ ಅತಿ ಹೆಚ್ಚು ಬೈಸಿಕಲ್‌ಗಳನ್ನು ಹೊಂದಿರುವ (ಶೇ.48.51), ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ( 6.69) ಮತ್ತು ಬ್ಯಾಂಕ್ ಸೇವೆಗಳನ್ನು ಬಳಸಿರುವ (ಶೇ.54.05) ತಾಲೊಕಾಗಿದೆ. ಇದನ್ನು ಗಣಕಯಂತ್ರವನ್ನು ಹೊಂದಿರುವ ಕುಟುಂಬಗಳ ವಿಷಯದಲ್ಲಿ ನೆಲಮಂಗಲ ತಾಲೂಕಿನ ನಂತರ ಎರಡನೆಯ ಸ್ಥಾನದಲ್ಲಿ (ಶೇ.8.12) ಇಡಲಾಗಿದ್ದು, ಸಣ್ಣ ಪ್ರಮಾಣವಾದ ಶೇ. 0.24 ರಷ್ಟು ಹಿಂದಿದೆ. ಇದು ಮೋಟಾರ್ ದ್ವಿಚಕ್ರ ವಾಹನಗಳ ಒಡೆತನದ ಕುಟುಂಬಗಳಂತೆ ಇದ್ದು, ದೇವನಹಳ್ಳಿಯು ಎರಡನೆಯ ಸ್ಥಾನದಲ್ಲಿದ್ದು, ಹೊಸಕೋಟೆ ತಾಲೂಕಿಗಿಂತ ಶೇ. 0.34 ರಷ್ಟು ಹಿಂದಿದೆ. ಶಾಶ್ವತ ಮನೆಗಳ ಮತ್ತು ಅಡುಗೆ ಇಂಧನದ ಒಡೆನತವಿರುವ ಕುಟುಂಬಗಳ ಶೇಕಡಾವಾರಿನಲ್ಲಿ ಅತಿ ಕೆಟ್ಟ ಸ್ಥಾನದಲ್ಲಿರುವ ತಾಲೊಕಾಗಿದ್ದು, ಮೂರನೆಯ ಸ್ಥಾನವನ್ನು ಪಡೆದಿದೆ.

ಹೊಸಕೋಟೆ ತಾಲೂಕಿನ ರಡರ್ ಸೂಚಿಸುವಂತೆ, ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕ ಹೊಂದಿರುವ ಅತಿ ಹೆಚ್ಚು ಕುಟುಂಬಗಳನ್ನು ಹೊಂದಿದೆ (ಶೇ.96.62). ಆದರೆ, ಜಿಲ್ಲೆಯ ತಾಲೂಕುಗಳಲ್ಲಿ ವಿದ್ಯುತ್ ಸಂಪರ್ಕವು ಶೇ.94 ರಿಂದ ಶೇ. 97 ರವರೆಗೆ ಇದೆ ಎಂಬುದನ್ನು ಗಮನಿಸಬೇಕು. ಆದ್ದರಿಂದ, ಜೀವನದ ಗುಣಮಟ್ಟದ ಸೂಚಕದಲ್ಲಿ ಹೊಸಕೋಟೆ ಮತ್ತು ಇತರ ತಾಲೂಕುಗಳ ನಡುವಿನ ಅಂತರವು ಸಣ್ಣದಾಗಿದೆ. ಇದು ಕುಟುಂಬದ ಒಡೆತನದಲ್ಲಿ ಎರಡನೆಯ ಸ್ಥಾನದಲ್ಲಿದೆ – ಟೆಲಿವಿಶನ್ (ಶೇ.74.49), ಬೈಸಿಕಲ್ (ಶೇ.46.58), ನಾಲ್ಕು ಚಕ್ರ (ಶೇ.5.49), ಮತ್ತು ಬ್ಯಾಂಕ್ ಸೇವೆಗಳು (ಶೇ 51.41.). ಜೀವನದ ಗುಣಮಟ್ಟದ ಸೂಚಕಗಳಾದ ಶೌಚಾಲಯದ ಸೌಲಭ್ಯ (ಶೇ. 78.35) ಮತ್ತು ಸ್ವಚ್ಛ ಅಡುಗೆ ಇಂಧನ (ಶೇ.37.18) ಗಳ ವಿಷಯದಲ್ಲಿ ಇದನ್ನು ಮೂರನೆಯ ಸ್ಥಾನದಲ್ಲಿ ಇರಿಸಲಾಗಿದೆ. ಸುರಕ್ಷಿತ ಕುಡಿಯುವ ನೀರಿನ ವಿಷಯದಲ್ಲಿ, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸೌಲಭ್ಯವಿರುವ ಕುಟುಂಬಗಳ ಸಂಖ್ಯೆಯಲ್ಲಿ ಅತಿ ಕಡಿಮೆ ಶೇಕಡಾವಾರು ಇರುವ ತಾಲೂಕಾಗಿದ್ದು, ಈ ಕ್ಷೇತ್ರದಲ್ಲಿ ಸುಧಾರಣೆಗೆ ಅವಕಾಶವಿದೆ ಎಂದು ಸೂಚಿಸುತ್ತದೆ.

ಚಿತ್ರ 7.2: ತಾಲೂಕುವಾರು ಜೀವನಮಟ್ಟದ ಸೂಚಕಗಳು (2011)












ಎ. ಶಾಶ್ವತ ಮನೆಗಳಿರುವ ಕುಟುಂಬಗಳ ಶೇಕಡಾವಾರು. **ಬಿ.** ಟೆಲಿವಿಶನ್ ಹೊಂದಿರುವ ಕುಟುಂಬಗಳ ಶೇಕಡಾವಾರು **ಸಿ.** ಗಣಕಯಂತ್ರ ಹೊಂದಿರುವ ಕುಟುಂಬಗಳ ಶೇಕಡಾವಾರು. **ಡಿ.** ಬೈಸಿಕಲ್ ಹೊಂದಿರುವ ಕುಟುಂಬಗಳ ಶೇ.ವಾರು. ಇ. ಮೋಟಾರ್ ದ್ವಿಚಕ್ರ ವಾಹನಗಳನ್ನು (ಸ್ಕೂಟರ್/ಮೊಪೆಡ್/ಮೋಟಾರ್ ಸೈಕಲ್) ಹೊಂದಿರುವ ಕುಟುಂಬಗಳ ಶೇಕಡಾವಾರು; **ಎಫ್.** ನಾಲ್ಕು-ಚಕ್ರಗಳನ್ನು (ಕಾರ್/ಜೀಪ್/ವ್ಯಾನ್) ಹೊಂದಿರುವ ಕುಟುಂಬಗಳ ಶೇಕಡಾವಾರು; **ಜಿ.** ಬ್ಯಾಂಕ್ ಸೇವೆಯನ್ನು ಬಳಸಿರುವ ಕುಟುಂಬಗಳ ಶೇಕಡಾವಾರು; **ಎಚ್.** ಸುರಕ್ಷಿತ ಕುಡಿಯುವ ನೀರಿನ ಲಭ್ಯತೆಯಿರುವ ಕುಟುಂಬಗಳ ಶೇಕಡಾವಾರು; **ಐ.** ತನ್ನ ಆವರಣದಲ್ಲಿ ಶೌಚಾಲಯದ ಸೌಲಭ್ಯವಿರುವ ಕುಟುಂಬಗಳ ಶೇಕಡಾವಾರು; **ಜೆ.** ವಿದ್ಯುತ್ ಸಂಪರ್ಕ ಸಂಪರ್ಕ ಇರುವ ಕುಟುಂಬಗಳ ಶೇಕಡಾವಾರು; **ಕೆ.** ಸ್ವಚ್ಛ ಅಡುಗೆ ಇಂಧನದ ಲಭ್ಯತೆ ಇರುವ ಕುಟುಂಬಗಳ ಶೇಕಡಾವಾರು.

ಮೂಲ: ಜನಗಣತಿ 2011

ಜಿಲ್ಲೆಯಲ್ಲಿ ಶಾಶ್ವತ ಮನೆಗಳು ಮತ್ತು ಸುರಕ್ಷಿತ ಕುಡಿಯುವ ನೀರಿನ ಲಭ್ಯತೆ ಹೊಂದಿರುವ ವಿಷಯದಲ್ಲಿ ದೊಡ್ಡಬಳ್ಳಾಪುರ ತಾಲೂಕು ಉತ್ತಮ ಸಾಧನೆ ನೀಡಿದ್ದು, ಇದನ್ನು ಮೂರನೆಯ ಸ್ಥಾನದಲ್ಲಿ ಇರಿಸಲಾಗಿದೆ. ಜೀವನದ ಗುಣಮಟ್ಟದ ಮತ್ತೆಲ್ಲಾ ಸೂಚಕಗಳಲ್ಲಿಯೂ ಇದು ಅತಿ ಕಡಿಮೆ ಸಾಧನೆಯನ್ನು ಮಾಡಿದೆ. ಹೆಚ್ಚು ಗಮನದ ಅಗತ್ಯವಿರುವ ಸೂಚಕಗಳೆಂದರೆ: ಕುಟುಂಬದ ಆಸ್ತಿ ಸ್ಥಿತಿ, ಸ್ವಚ್ಛ ಅಡುಗೆ ಇಂಧನ ಮತ್ತು ಶೌಚಾಲಯದ ಸೌಲಭ್ಯ. ಜೀವನದ ಗುಣಮಟ್ಟದ ಪ್ರತಿಯೊಂದು ಸೂಚಕಗಳಲ್ಲಿಯೂ ಅತ್ಯುನ್ನತ ಸಾಧನೆ ಮಾಡಿರುವ ತಾಲೂಕುನ ಮೌಲ್ಯಕ್ಕಿಂತ ಸರಾಸರಿಯಾಗಿ 7ಶೇ. ರಷ್ಟು ದೊಡ್ಡಬಳ್ಳಾಪುರ ತಾಲೂಕು ಹಿಂದೆ ಬಿದ್ದಿದೆ. ಆದ್ದರಿಂದ, ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಜೀವನದ ಗುಣಮಟ್ಟವನ್ನು ಸುಧಾರಿಸಲು ಹೆಚ್ಚು ಗಮನ ಮತ್ತು ಮಧ್ಯಸ್ಥಿಕೆಯ ಅವಶ್ಯಕತೆಯಿದೆ.

## 7.9 ತಾತ್ಪರ್ಯ

ಆಸ್ತಿ ಸ್ಥಿತಿ, ಸುರಕ್ಷಿತ ಕುಡಿಯುವ ನೀರು, ಶೌಚಾಲಯದ ಸೌಲಭ್ಯ ಮತ್ತು ವಿದ್ಯುತ್ ಸಂಪರ್ಕಗಳ ವಿಷಯಗಳಲ್ಲಿ ಮಾಪನ ಮಾಡಿರುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ನಾಲ್ಕು ತಾಲೂಕುಗಳು ಜೀವನದ ಗುಣಮಟ್ಟದಲ್ಲಿ ಒಂದು ದಶಕದ ಅವಧಿಯಲ್ಲಿ ಸುಧಾರಣೆಯಾಗಿರುವುದನ್ನು ವರದಿ ಮಾಡಿವೆ. ಪ್ರಮುಖವಾಗಿ ಆಸ್ತಿ ಸ್ಥಿತಿ, ವಿದ್ಯುತ್ ಸಂಪರ್ಕ, ಮತ್ತು ಸ್ವಚ್ಛ ಅಡುಗೆ ಇಂಧನಕ್ಕೆ ಸಂಬಂಧಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಕರ್ನಾಟಕಕ್ಕಿಂತ ಉತ್ತಮ ಸಾಧನೆ ಮಾಡಿದೆ. ಈ ಸಾಧನೆಗೆ ಎರಡು ಕಾರಣಗಳನ್ನು ನೀಡಬಹುದು: ಮೊದಲು, ಆಸ್ತಿ, ಶಾಶ್ವತ ಮನೆಗಳು ಮತ್ತು ಜೀವನದ ಗುಣಮಟ್ಟಕ್ಕೆ ಅಗತ್ಯವಾದ ಸೂಚಕಗಳಲ್ಲಿನ ಲಭ್ಯತೆಯಿರುವ ಕುಟುಂಬಗಳಲ್ಲಿ ಹೆಚ್ಚಳವನ್ನು ಕಂಡಿದೆ. ಎರಡನೆಯದಾಗಿ, ರಾಜ್ಯದ ಇತರ ಭಾಗಗಳಿಗೆ ಹೋಲಿಸಿದಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ಜೀವನದ ಗುಣಮಟ್ಟದ ಸೂಚಕಗಳಲ್ಲಿ ಅಂತರವು ಈ ಅವಧಿಯಲ್ಲಿ ಗಣನೀಯವಾಗಿ ಕಡಿಮೆಯಾಗಿದೆ. ಬೆಂಗಳೂರು ನಗರಕ್ಕೆ ಹತ್ತಿರವಾಗಿರುವುದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶೀಘ್ರ ನಗರೀಕರಣದ ಕಾರಣವಾಗಿರಬಹುದು. ಶೀಘ್ರ ನಗರಣದ ಋಣಾತ್ಮಕ ಫಲಗಳೂ ಇರುತ್ತವೆ: ಅಗ್ಗವಾದ ದರಗಳಲ್ಲಿ ನಿವೇಶನಗಳು ಲಭ್ಯವಿಲ್ಲದ ಕಾರಣದಿಂದಾಗಿ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರಗಳಲ್ಲಿ ನಿರ್ವಸತಿಕರಿಗೆ ಗೃಹ ನಿವೇಶನಗಳನ್ನು ನೀಡುವುದು ಸಾಧ್ಯವಾಗಿಲ್ಲ. ಇದರ ಬಗ್ಗೆ ಗಮನಹರಿಸಿ, ಪರ್ಯಾಯ ಪರಿಹಾರವನ್ನು ಹುಡುಕಬೇಕಿದೆ.

## ಕಿರುಕ್ಷೇತ್ರ ಅಧ್ಯಯನ 2

## ಎರಡು ಗ್ರಾಮ ಪಂಚಾಯತಿಗಳಲ್ಲಿ ಸಂಪೂರ್ಣ ನೈರ್ಮಲ್ಯದ ಅನುಷ್ಠಾನ

### 2.1 ಪ್ರಸ್ತಾವನೆ

ಬಯಲು ಶೌಚಾಲಯ ಭಾರತದಲ್ಲಿ ಬಹಳ ಸಾಮಾನ್ಯವಾಗಿದೆ, ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ. 2011 ಜನಗಣತಿಯ ಪ್ರಕಾರ, ಭಾರತದಲ್ಲಿ ಅರ್ಧಕ್ಕಿಂತ ಕಡಿಮೆ (46.9ಶೇ.) ಕುಟುಂಬಳಲ್ಲಿ ತಮ್ಮ ಮನೆಯ ಆವರಣದಲ್ಲಿ ಶೌಚಾಲಯದ ಸೌಲಭ್ಯವಿದೆ. ಈ ಪರಿಸ್ಥಿತಿಯು ಗ್ರಾಮೀಣ ಭಾಗಗಳಲ್ಲಿ ಇನ್ನೂ ಕೆಟ್ಟದಾಗಿದ್ದು, 30.7ಶೇ. ರಷ್ಟು ಕುಟುಂಬಗಳಿಗೆ ಮಾತ್ರ ತಮ್ಮ ಮನೆಯ ಆವರಣದಲ್ಲಿ ಶೌಚಾಲಯದ ಸೌಲಭ್ಯವಿದೆ. UNICEF ಮತ್ತು ಆರೋಗ್ಯ ಸಂಸ್ಥೆ 2012ರ ಪ್ರಕಾರ, ಸುಧಾರಿತ ನೈರ್ಮಲ್ಯ ಇಲ್ಲದಂತಹ ಜಗತ್ತಿನ 2.5 ಶತಕೋಟಿ ಜನರಲ್ಲಿ ಒಂದನೇ ಮೂರರಷ್ಟು ಜನ ಭಾರತದಲ್ಲಿ ವಾಸಿಸುತ್ತಾರೆ.

ಜಗತ್ತಿನಾದ್ಯಂತ ಶಿಶು ಮತ್ತು ಮಕ್ಕಳ ಆರೋಗ್ಯದ ಮೇಲೆ ನೈರ್ಮಲ್ಯದ ಪರಿಣಾಮವು ಅಗಾಧವಾಗಿದೆ. ಪ್ರತಿ ವರ್ಷವೂ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ 10 ದಶಲಕ್ಷ ಮಕ್ಕಳು ಸಾಯುತ್ತಾರೆ - ಇವರಲ್ಲಿ 2.4 ದಶಲಕ್ಷ ಮಕ್ಕಳು ಭಾರತದಲ್ಲಿ ಮತ್ತು ಇದರಲ್ಲಿ 1/5 ರಷ್ಟು ಮಕ್ಕಳು ಅತಿಸಾರದಿಂದ ಸಾಯುತ್ತಾರೆಂದು ಬ್ಲ್ಯಾಕ್ ಮತ್ತು ಇತರರು ಅಂದಾಜು ಮಾಡುತ್ತಾರೆ (2003). ಭಾರತದಲ್ಲಿ ಪ್ರತಿ ವರ್ಷ 450000 ಮಕ್ಕಳು ಅತಿಸಾರದಿಂದಾಗಿ ಸಾಯುತ್ತಾರೆಂದು ಮಾನವ ಅಭಿವೃದ್ಧಿ ವರದಿ 2006 ಹೇಳುತ್ತದೆ. ಬದುಕುಳಿಯುವ ಮಕ್ಕಳ ಆರೋಗ್ಯ ಮತ್ತು ಮಾನವ ಬಂಡವಾಳದ ಮೇಲೆ ಸಣ್ಣ ವಯಸ್ಸಿನಲ್ಲಾಗುವ ಅನಾರೋಗ್ಯವು ಜೀವನಪರ್ಯಂತ ಪರಿಣಮ ಬೀರುತ್ತದೆ (ಅಲ್ಮಂಡ್ ಮತ್ತು ಕರ್‍ರಿ, 2011). ಇದಕ್ಕೆ ಸಂಬಂಧಿಸಿದ ಆರೋಗ್ಯ ಅಪಾಯಗಳ ಹೊರತಾಗಿ, ಹಲವಾರು ಅಧ್ಯಯನಗಳು ನೈರ್ಮಲ್ಯದ ಅಭಾವದ ಸಾಮಾಜಿಕ ಅಪಾಯಗಳಾದ, ಮಹಿಳೆಯರ ಮೇಲೆ ಹಲ್ಲೆ ಮತ್ತು ಅತ್ಯಾಚಾರ, ಶಾಲೆಗಳಿಗೆ ಹಾಜರಾಗದಿರುವುದು ಮತ್ತು ಜೀವನೋಪಾಯದ ಮೇಲೆ ಪರಿಣಾಮಗಳನ್ನು ದಾಖಲಿಸಿವೆ.

ಭಾರತದಲ್ಲಿ, 1980ರ ಜಾಗತಿಕ ಜಲ ದಶಕದ ಸಂದರ್ಭದಲ್ಲಿ 1986ರಲ್ಲಿ ಆರಂಭವಾದ ಕೇಂದ್ರೀಯ ಗ್ರಾಮೀಣ ನೈರ್ಮಲ್ಯ ಅಭಿಯಾನ ಕಾರ್ಯಕ್ರಮದ (ಅಖಖಕ) ಮೂಲಕ ಗ್ರಾಮೀಣ ನೈರ್ಮಲ್ಯತೆಯು ಗಮನಕ್ಕೆ ಬಂದಿತು. 1999 ರಲ್ಲಿ ಭಾರತ ಸರ್ಕಾರವು ನೈರ್ಮಲ್ಯತೆಯ ತನ್ನ ಪ್ರಮುಖ ಕಾರ್ಯಕ್ರಮವಾದ ಸಂಪೂರ್ಣ ನೈರ್ಮಲ್ಯ ಆಂದೋಲನ (ಸಂಪೂರ್ಣ ನೈರ್ಮಲ್ಯ ಆಂದೋಲನ)ವನ್ನು ಆರಂಭಿಸಿತು. ಟಿ ಎಸ್ ಸಿಯು ಸಹಭಾಗಿತ್ವದ ಮತ್ತು ಬೇಡಿಕೆ ಆಧಾರಿತ ಮಾರ್ಗವನ್ನು ಅನುಸರಿಸಿ, ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯತೆಯ ಕ್ಷೇತ್ರದ ಬೇಡಿಕೆಗಳನ್ನು ಪೂರೈಸಲು IEC ಚಟುವಟಿಕೆಗಳು ಮತ್ತು ಪೂರೈಕೆ ಸರಪಳಿಯನ್ನು (ಗ್ರಾಮೀಣ ನೈರ್ಮಲ್ಯತೆ ಮಳಿಗೆ) ಅಭಿವೃದ್ಧಿಪಡಿಸುವಲ್ಲಿ ವಿಶೇಷ ಗಮನ ಹರಿಸಿತು. ಅಗತ್ಯವಿರುವ ಕುಟುಂಬಗಳಿಗೆ ಶೌಚಾಲಯದ ರಚನೆ ಮತ್ತು ಬಳಕೆಯ ನಂತರ ಟಿ ಎಸ್ ಸಿ ಅವರಿಗೆ ಸಣ್ಣ ಮೊತ್ತದ ನಗದು ಉತ್ತೇಜಕ ಬಹುಮಾನವನ್ನು ನೀಡಿತು. ಆದರೆ, ಸಮುದಾಯ ಮಟ್ಟದ ಸಾಧನೆಗಳನ್ನು ಉತ್ತೇಜಿಸಲು - ಸಂಪೂರ್ಣ ನಿರ್ಮಲೀಕೃತ ಮತ್ತು ಬಯಲು ಶೌಚಾಲಯ ಮುಕ್ತ ಗ್ರಾಮ ಪಂಚಾಯತಿ ಬ್ಲಾಕ್, ಜಿಲ್ಲೆ, ಮತ್ತು ರಾಜ್ಯಕ್ಕೆ ಅನುವುಮಾಡಿಕೊಡಲು ಉತ್ತೇಜನ ಸಹಿತವಾದ ನಿರ್ಮಲ ಗ್ರಾಮ ಪುರಸ್ಕಾರ (ಗ್ರಾಮ ಪಂಚಾಯತಿ) ಅನ್ನು 2003ರಲ್ಲಿ ಆರಂಭಿಸಿತು. 2012ರಲ್ಲಿ ಟಿ ಎಸ್ ಸಿ ಅನ್ನು ನಿರ್ಮಲ ಭಾರತ ಅಭಿಯಾನ (NBA)ಆಗಿ ಪುನಾರಚಿಸಲಾಗಿದ್ದು, ಇದನ್ನು MGNREGA ಜೊತೆಗೆ ಜೋಡಣೆ ಮಾಡಿ, ಪ್ರತಿ ಕುಟುಂಬಕ್ಕೂ ರೂ. 9100 ಗಳ ಒಟ್ಟು ಉತ್ತೇಜನ ನೀಡಲಾಯಿತು. ಜೊತೆಗೆ, ಫಲಾನುಭವಿಗಳ ಪಟ್ಟಿಯು, ಸಣ್ಣ ಮತ್ತು ಅತಿಸಣ್ಣ ರೈತರು, ಮಹಿಳೆಯರು ಮುಖ್ಯಸ್ಥೆಯರಾಗಿರುವ ಕುಟುಂಬಗಳು ಇತ್ಯಾದಿ ಯಂತಹ ವಿಶಾಲ ಶ್ರೇಣಿಯ ಗ್ರಾಮೀಣ ಕುಟುಂಬಗಳನ್ನು ಒಳಗೊಂಡಿತು (ಚೌಕ ಅ2.1 ಅನ್ನು ನೋಡಿ). MDWS ಪ್ರಕಾರ,[21] 1 ಏಪ್ರಿಲ್ 1999 ರಿಂದ ಮಾರ್ಚ್ 2014 ರ ವರೆಗೂ ನೈರ್ಮಲ್ಯತೆಯ ಮೇಲೆ ಸರ್ಕಾರದ ಒಟ್ಟೂ ವೆಚ್ಚ ರೂ 1434050 ಲಕ್ಷಗಳಾಗಿದ್ದು, ಇದರಲ್ಲಿ ಶೇ.70.4 ರಷ್ಟು ಕೇಂದ್ರ ಸರ್ಕಾರದ ವೆಚ್ಚ ಮತ್ತು ಉಳಿದ ಶೇ.29.6 ರಾಜ್ಯ ಸರ್ಕಾರದ ವೆಚ್ಚವಾಗಿತ್ತು.

ಕರ್ನಾಟಕದಲ್ಲಿ, 51.2ಶೇ.ರಷ್ಟು ಕುಟುಂಬಗಳಿಗೆ ತಮ್ಮ ಆವರಣದಲ್ಲಿ ಶೌಚಾಲಯ ಸೌಲಭ್ಯವಿದ್ದು, ರಾಷ್ಟ್ರೀಯ ಸಾಧನೆಗಿಂತ ಕೊಂಚ ಉತ್ತಮವಾಗಿದೆ. ಆದರೆ, ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ನೈರ್ಮಲ್ಯದ ವಿಷಯದಲ್ಲಿ ಗಣನೀಯವಾದ ಅಸಮಾನತೆಯಿದ್ದು, ನಗರದ ಕುಟುಂಬಗಳಲ್ಲಿ 84.9ಶೇ.ರಷ್ಟು ಕುಟುಂಬಗಳಿಗೆ ತಮ್ಮ ಆವರಣದಲ್ಲಿ ಶೌಚಾಲಯವಿದ್ದು, ಗ್ರಾಮೀಣ ಪ್ರದೇಶದ 28.4ಶೇ.ರಷ್ಟು ಕುಟುಂಬಗಳಲ್ಲಿ ಮಾತ್ರ ಶೌಚಾಲಯವಿದೆ (2011 ಜನಗಣತಿ). ಕುಡಿಯುವ ನೀರು ಮತ್ತು ನೈರ್ಮಲ್ಯದ ಮಂತ್ರಾಲಯ (MDWS) ನೀಡಿದ ಮಾಹಿತಿಯ ಪ್ರಕಾರ, ರಾಷ್ಟ್ರೀಯ ಸಂಖ್ಯೆಯಾದ 76.46ಶೇ.ಗೆ ಹೋಲಿಸಿದಂತೆ, ಗ್ರಾಮೀಣ ಕರ್ನಾಟಕದ 82.64ಶೇ. ರಷ್ಟು ಕುಟುಂಬಗಳಿಗೆ ಮನೆಯ ಆವರಣದಲ್ಲಿಯೇ ಶೌಚಾಲಯವಿದೆ. ಇದರಂತೆ, ರಾಜ್ಯದ ಎಲ್ಲಾ ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯವಿದ್ದು, ರಾಷ್ಟ್ರೀಯ ಅಂಕಿಗಳು ಶಾಲೆಗಳಿಗೆ 97.11ಶೇ. ಮತ್ತು ಅಂಗನವಾಡಿಗಳಿಗೆ 87.6ಶೇ. ಇವೆ. ಆದರೆ, ರಾಜ್ಯವು ಕೇವಲ 79.1ಶೇ.ರಷ್ಟು ಮಾತ್ರ ನೈರ್ಮಲ್ಯತೆಯ ಸಂಕೀರ್ಣಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿದ್ದು, ರಾಷ್ಟ್ರೀಯ ಸಾಧನೆಯು 82ಶೇ.ರಷ್ಟಿದೆ. ಒಂದು ಜಿಲ್ಲೆ, ಆರು ಬ್ಲಾಕ್ ಗಳು ಮತ್ತು 1069 ಗ್ರಾಪಂ ಗಳು ನಿರ್ಮಲ್ ಗ್ರಾಮ್ ಪುರಸ್ಕಾರ್[22] ಗ್ರಾಮ ಪಂಚಾಯತಿ ಗಳನ್ನು ಪಡೆದುಕೊಂಡಿವೆ. 1999ರಲ್ಲಿ ಟಿ ಸಿ ಎಸ್ ಆರಂಭವಾದಾಗಿನಿಂದ ಮಾರ್ಚ್ 2014ರವರೆಗೂ, ಕರ್ನಾಟಕವು 4851831 ಮನೆ ಶೌಚಾಲಯಗಳನ್ನೂ, ಶಾಲೆಗಳಲ್ಲಿ 44313 ಶೌಚಾಲಯಗಳನ್ನೂ ಮತ್ತು ಅಂಗನವಾಡಿಗಳಲ್ಲಿ 29587 ಶೌಚಾಲಯಗಳನ್ನೂ ನಿರ್ಮಿಸಿದೆ. MDWS ಪ್ರಕಾರ, ರಾಜ್ಯದಲ್ಲಿ ಏಪ್ರಿಲ್ 1999 ನಿಂದ ಮಾರ್ಚ್ 2014ವರೆಗೂ ನೈರ್ಮಲ್ಯದ ಮೇಲೆ ಸರ್ಕಾರದ ಒಟ್ಟು ವೆಚ್ಚವು ರೂ 40644.92 ಲಕ್ಷಗಳು, ಮತ್ತು ಇದರಲ್ಲಿ ಸುಮಾರು 68ಶೇ.ರಷ್ಟು ಕೇಂದ್ರ ಸರ್ಕಾರದ ವೆಚ್ಚ ಮತ್ತು 32ಶೇ.ರಷ್ಟು ರಾಜ್ಯ ಸರ್ಕಾರದ ವೆಚ್ಚವಾಗಿದೆ.

### 2.2 ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಂಪೂರ್ಣ ನೈರ್ಮಲ್ಯತೆಯ ಆಂದೋಲನ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂದಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆದ ಡಾ॥ ಮಂಜುಳಾ ನಾಯಕ್ ಅವರ ನೇತೃತ್ವದಲ್ಲಿ ಟಿ ಎಸ್ ಸಿ ಯು 2008-2009ರ ವರ್ಷದಲ್ಲಿ ಜಿಲ್ಲೆಯಲ್ಲಿ ಹೆಚ್ಚು ವೇಗವನ್ನು ಪಡೆಯಿತು. ಡಾ॥ ನಯಕ್ ಅವರು ನೈರ್ಮಲ್ಯತೆಯನ್ನು ಆಡಳಿತದ ಪ್ರಮುಖ ಆದ್ಯತೆಯನ್ನಾಗಿ ಪರಿಗಣಿಸಿ, ತಮ್ಮ ಪ್ರದೇಶಗಳಲ್ಲಿ ಈ ಆಂದೋಲನಕ್ಕೆ ಉತ್ತೇಜನ ನೀಡುವಂತೆ ತಮ್ಮ ಸಿಬ್ಬಂದಿಯ ಮೇಲೆ ಒತ್ತಡ ಹೇರಿದರು. ಈ ಶ್ರಮದ ಫಲವಾಗಿ, ಹಲವಾರು ಗ್ರಾಪಂ ಗಳಲ್ಲಿ ಟಿ ಎಸ್ ಸಿ ಗುರಿಗಳ ಸಾಧನೆಯಾಯಿತು, ಏಕೆಂದರೆ, 2009ರಲ್ಲಿ ಮಾತ್ರವೇ 40 ಗ್ರಾಮ ಪಂಚಾಯತಿಗಳು ಗ್ರಾ.ಪಂ ಪಟ್ಟವನ್ನು ಪಡೆದಿದ್ದವು. ಕುಡಿಯುವ ನೀರು ಮತ್ತು ನೈರ್ಮಲ್ಯದ ಮಂತ್ರಾಲಯ ಪ್ರಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ 98 ಗ್ರಾಮ ಪಂಚಾಯತಿಗಳಲ್ಲಿ, 54 ಗ್ರಾಮ ಪಂಚಾಯತಿಗಳು ಮಾರ್ಚ್ 2012ರ ವೇಳೆಗೆ ಗ್ರಾ.ಪಂ ಪುರಸ್ಕಾರ ಪಡೆದಿದ್ದವು.

ಜಿಲ್ಲಾಡಳಿತವು ನೈರ್ಮಲ್ಯತೆಯನ್ನು ಉತ್ತೇಜಿಸಲು ಬಳಸಿಕೊಂಡ ಕಾರ್ಯತಂತ್ರಗಳು ಹೀಗಿದ್ದವು: 1. ಕಾರ್ಯಕ್ರಮದ ವಿವಿಧ ಘಟ್ಟಗಳಿಗೆ ಗ್ರಾಮ ಪಂಚಾಯತಿಗಳನ್ನು ಆರಿಸಿಕೊಳ್ಳಲು ಗ್ರಾಮ ಪಂಚಾಯತಿಗಳ ಪ್ರಾಥಮಿಕ ನಿರ್ಧಾರಣೆ[23] 2. ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳು, ವಾಟರ್ ಮನ್ ಮತ್ತು ಸ್ವಸಹಾಯ ಸಂಘ ಸದಸ್ಯರಂತಹ ಪ್ರಮುಖ ಪಾಲುದಾರರ ತರಬೇತಿ 3.ಗ್ರಾಮ ಪಂಚಾಯತಿ ಮಟ್ಟದಲ್ಲಿ, ಗ್ರಾಮ ಪಂಚಾಯತಿ ಸದಸ್ಯರು, ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತರು, ಸ್ಥಳೀಯ ಆರೋಗ್ಯ ಕಾರ್ಯಕರ್ತರು, ಸ್ವಸಹಾಯ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು, ಪ.ಜಾ/ಪ.ಪಂ.ದ ಗಣ್ಯರನ್ನು ಒಳಗೊಂಡ ಕಾರ್ಯಪಡೆಯ ಸೃಷ್ಟಿ 4. IEC ಚಟುವಟಿಕೆಗಳಿಗೆ NGO ಗಳನ್ನು

[21] ಕುಡಿಯುವ ನೀರು ಮತ್ತು ನೈರ್ಮಲ್ಯ ಮಂತ್ರಾಲಯ ಭಾರತ ಸರ್ಕಾರ, ಏಪ್ರಿಲ್ 17, 2014 ರಲ್ಲಿ ಇದ್ದಂತೆ

[22] ನಿರ್ಮಲ್ ಗ್ರಾಮ್ ಪುರಸ್ಕಾರ್ ಎನ್ನುವುದು ಪ್ರಶಸ್ತಿ ಆಧಾರಿತ ಪ್ರೋತ್ಸಾಹನಾ ಯೋಜನೆಯಾಗಿದ್ದು, ಇದನ್ನು ಸಂಪೂರ್ಣ ಸ್ವಚ್ಛವಾಗಿರುವ್ವ ಹಾಗೂ ತೆರೆದ ಬಯಲಿನಲ್ಲಿ ಶೌಚ ಹೋಗುವುದರಿಂದ ಮುಕ್ತವಾದ ಗ್ರಾಮ ಪಂಚಾಯತಿ, ಬ್ಲಾಕ್, ಜಿಲ್ಲೆ ಮತ್ತು ರಾಜ್ಯಗಳಿಗೆ ನೀಡಲಾಗುತ್ತದೆ 2003 ಅಕ್ಟೋಬರ್‌ನಲ್ಲಿ ಆರಂಭಿಸಲಾಯಿತು

[23] ನಾಲ್ಕು ವರ್ಷಗಳ ಆವರ್ತನದಲ್ಲಿ ನಡೆಸಲು ಟಿ ಎಸ್ ಸಿ ಆರಂಭಿಸಲಾಯಿತು, 2012 ರಲ್ಲಿ ಕೊನೆಯ ಹಂತ ಪೂರ್ಣಗೊಂಡಿತು.

ತೊಡಗಿಸಿಕೊಳ್ಳುವುದು 5. ಸ್ಥಳೀಯ ಮುದ್ರಣ ಮಾಧ್ಯಮ, ಗೋಡೆ ಚಿತ್ರಕಲೆ, ಬೀದಿ ನಾಟಕ, ಚಲನಚಿತ್ರಗಳು, ಒಡ್ಡಿಕೆಯ ಭೇಟಿಗಳು, ನಿಯತ ಸಭೆಗಳು, ಸಂಗೀತ ಕಾರ್ಯಕ್ರಮಗಳು, ಮೆರವಣಿಗೆ,ದಾದಿಯರು, ಸ್ವಸಹಾಯ ಸಂಘದ ಸದಸ್ಯರು, ಅಂಗನವಾಡಿ ಕಾರ್ಯಕರ್ತರು ಮತ್ತು ಶಿಕ್ಷಕರಿಂದ ಮನೆಮನೆಗೂ ಭೇಟಿ, ಮತ್ತು ಕಾರ್ಯಪಡೆ ಸಮಿತಿ ಸದಸ್ಯರಿಂದ ಅನುಸರಣೆಯ ಮೂಲಕ ಖಇಅ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು 6. ಶಾಲೆಗಳಲ್ಲಿ ನೈರ್ಮಲ್ಯತೆಯ ಪ್ರಾಮುಖ್ಯತೆಯ ಬಗ್ಗೆ ವಿಶೇಷ ಅಧ್ಯಾಯವನ್ನು ಸೇರಿಸುವುದು, ಮತ್ತು ನಾಟಕ, ಪ್ರಬಂಧ ಸ್ಪರ್ಧೆಗಳ ಮೂಲಕ ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯದ ಬಳಕೆಯನ್ನು ಹೆಚ್ಚಿಸುವುದು 7. ಶೌಚಾಲಯಗಳ ನಿರ್ಮಾಣಕ್ಕೆ ಸ್ಥಳೀಯ ಬ್ಯಾಂಕ್ ಗಳ ಮೂಲಕ ಸಾಲಸೌಲಭ್ಯ 8. ಶೌಚಾಲಯಗಳ ನಿರ್ಮಾಣಕ್ಕೆ ಗ್ರಾಮ ಪಂಚಾಯತಿ ಗಳಿಂದ ಅಗತ್ಯ ಕಚ್ಚಾವಸ್ತುಗಳ ಪೂರೈಕೆ 9. ಸಾಮಾಜಿಕ ನಿಯಂತ್ರಣ ತಂತ್ರಗಳಾದಂತಹ ಸಾಂಪ್ರದಾಯಿಕ ತೆರೆದ ಬಹಿರ್ದಶೆಯ ಸ್ಥಳಗಳಲ್ಲಿ ಗಸ್ತು ಹೊಡೆಯುವುದು, ತೆರೆದ ಬಹಿರ್ದೆಶೆ ಮಾಡಿದವರಿಗೆ ದಂಡವನ್ನು ಹೇರಿ, ಅವರನ್ನು ಸಾರ್ವಜನಿಕವಾಗಿ ಅವಮಾನಿಸುವುದು, ಕುಟುಂಬಗಳಿಗೆ ಮುದ್ರಿತ ಸೂಚನೆಗಳನ್ನು ನೀಡುವುದು, ಶೌಚಾಲಯವನ್ನು ನಿರ್ಮಿಸದಿದ್ದಲ್ಲಿ ವಿದ್ಯುತ್ ಸಂಪರ್ಕ, ದಿನಸಿ, ನೀರು ಸರಬರಾಜು ಮತ್ತು ಇತರ ಸರ್ಕಾರಿ ಸೌಲಭ್ಯಗಳನ್ನು ನಿಲ್ಲಿಸುವ ಬೆದರಿಕೆ ಹಾಕುವುದು, ಮತ್ತು ತೆರೆದ ಬಹಿರ್ದೆಶೆಗೆ ಹೋಗುವ ಮಹಿಳೆಯರ ಮೇಲೆ ಅತ್ಯಾಚಾರ ಅಥವಾ ಕೊಲೆಯ ಮಾಧ್ಯಮ ಕಥೆಗಳಂತಹ ಭಯೋತ್ಪಾದಕ ತಂತ್ರಗಳನ್ನು ಬಳಸುವುದು, ಇತ್ಯಾದಿ. ಈ ಕಾರ್ಯತಂತ್ರವು ಹಲವಾರು ಗ್ರಾಮ ಪಂಚಾಯತಿಗಳಲ್ಲಿ ಸಂಪೂರ್ಣ ನೈರ್ಮಲ್ಯದ ಗುರಿಗಳನ್ನು ಸಾಧಿಸುವಲ್ಲಿ ಬಹಳ ಪರಿಣಾಮಕಾರಿಯಾಗಿದೆ, ಏಕೆಂದರೆ 2009ರಲ್ಲಿ ಮಾತ್ರ 40 ಗ್ರಾಮ ಪಂಚಾಯತಿಗಳು ಗ್ರಾಮ ಪಂಚಾಯತಿ ಸ್ಥಾನವನ್ನು ಪಡೆದವು.

## 2.3 ಕರ್ನಾಟಕದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎರಡು ಗ್ರಾಮ ಪಂಚಾಯತಿಗಳ ಅಧ್ಯಯನ

ಮಾನವ ಅಭಿವೃದ್ಧಿ ವರದಿಯ ಸಣ್ಣ ಪ್ರದೇಶದ ಅಧ್ಯಯನದಡಿಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎರಡು ಗ್ರಾಮ ಪಂಚಯಿತಿಗಳನ್ನು ಆರಿಸಿಕೊಳ್ಳಲಾಯಿತು. ಈ ಅಧ್ಯಯನದ ಉದ್ದೇಶವೆಂದರೆ, ಆಯ್ದ ಗ್ರಾಮ ಪಂಚಾಯತಿಗಳ ಟಿಎಸ್‌ಸಿ ಅಡಿ ಗುರಿಗಳನ್ನು ಸಾಧಿಸಲು ಬಳಸಿಕೊಳ್ಳಲಾದ ಬಹು-ಕವಲುಗಳ ಮಾರ್ಗವನ್ನು ಅರ್ಥಮಾಡಿಕೊಳ್ಳಲು ಮತ್ತು ಜನರ ಅಭಿವೃದ್ಧಿ ಮತ್ತು ಹಿತರಕ್ಷಣೆಯ ಮೇಲೆ ಆದ ಒಟ್ಟು ಪರಿಣಾಮವನ್ನು ತಿಳಿಯುವುದು.

ದೇವನಹಳ್ಳಿ ತಾಲೂಕಿನ ಅಣ್ಣೀಶ್ವರ ಗ್ರಾಮ ಪಂಚಾಯತಿ ಮತ್ತು ದೊಡ್ಡಬಳ್ಳಾಪುರ ತಾಲೂಕಿನ ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯತಿಗಳಲ್ಲಿ ಅಧ್ಯಯನಕ್ಕೆ ಆಯ್ದುಕೊಳ್ಳಲಾಯಿತು. ಎರಡೂ ಗ್ರಾಮ ಪಂಚಾಯತಿಗಳು[24] 2009ರಲ್ಲಿ ಗ್ರಾಮ ಪಂಚಾಯತಿ ಪುರಸ್ಕಾರವನ್ನು ಪಡೆದಿದ್ದವು. ವಿವಿಧ ಮೂಲಗಳಿಂದ ಸಂಗ್ರಹಿಸಲಾದ ದತ್ತಾಂಶದೊಂದಿಗೆ, ಜಿಲ್ಲಾ ಮಟ್ಟದಲ್ಲಿ ಕ್ಷೇತ್ರ ಪರಿಣಿತರು ಮತ್ತು ಸರ್ಕಾರಿ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಲಾಯಿತು. ಗ್ರಾಮ ಪಂಚಾಯತಿ ಮಟ್ಟದಲ್ಲಿ, ಗ್ರಾಮ ಪಂಚಾಯತಿ ಸದಸ್ಯರು, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತರು ಮತ್ತು ಫಲಾನುಭವಿಗಳೊಂದಿಗೆ ಸಂದರ್ಶನವನ್ನು ನಡೆಸಲಾಯಿತು.

### 2.3.1 ಆಯ್ದುಕೊಳ್ಳಲಾದ ಗ್ರಾಮ ಪಂಚಾಯತಿಗಳ ಪರಿಚಯ

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನನಿಲ್ದಾಣದ ಬಳಿ ಇರುವಂತಹ ಅಣ್ಣೀಶ್ವರ ಗ್ರಾಮ ಪಂಚಾಯತಿ ಯ ಒಟ್ಟು ಜನಸಂಖ್ಯೆಯು 1511 ಇದ್ದು, ಇದರಲ್ಲಿ 777 (ಶೇ..51.4) ಗಂಡಸರು ಮತ್ತು ಉಳಿದ 734(ಶೇ.49.6) ಮಹಿಳೆಯರಿದ್ದಾರೆ[25]. ಪಂಚಾಯತಿ ರಾಜ್ ಮಂತ್ರಾಲಯದ ಪ್ರಕಾರ (MoPR), ಈ ಗ್ರಾಮ ಪಂಚಾಯತಿ ಯಲ್ಲಿ 13 ಗ್ರಾಮಗಳಿವೆ.[26] ಒಟ್ಟು ಜನಸಂಖ್ಯೆಯಲ್ಲಿ ಸುಮಾರು 25.3ಶೇ.ರಷ್ಟು ಪ.ಜಾ ಮತ್ತು 8.8ಶೇ.ರಷ್ಟು ಪ.ಪಂ. ಗಳಿದ್ದಾರೆ. ಗ್ರಾಮ ಪಂಚಾಯತಿ ಯ ಒಟ್ಟು ಅನಕ್ಷರಸ್ಥರ ಜನಸಂಖೆಯು ಸುಮಾರು 61.2ಶೇ.ರಷ್ಟಿದೆ. ಪುರುಷರ ಜನಸಂಖ್ಯೆಯಲ್ಲಿ, ಸುಮಾರು ಶೇ.68.7 ರಷ್ಟು ಪುರುಷರ ಅಕ್ಷರಸ್ತರು ಮತ್ತು ಮಹಿಳೆಯರಲ್ಲಿ ಶೇ. 53.3 ರಷ್ಟು ಅಕ್ಷರಸ್ತರಿದ್ದಾರೆ (2011 ಜನಗಣತಿ). ಗ್ರಾಮ ಪಂಚಾಯತಿ ಯಲ್ಲಿ ಟಿಎಸ್‌ಸಿ ಕಾರ್ಯಕ್ರಮವು 2005ರಲ್ಲಿ ಆರಂಭವಾಗುವ ಮುನ್ನ, ಕೇವಲ ಶೇ.30 ರಷ್ಟು ಮನೆಗಳಲ್ಲಿ ಮನೆಯ ಆವರಣದಲ್ಲಿ ಶೌಚಾಲಯದ ಸೌಲಭ್ಯವಿದ್ದಿತು. 7943ಯ ಒಟ್ಟು ಜನಸಂಖ್ಯೆಯಿರುವ ಬಾಶೆಟ್ಟಿಹಳ್ಳಿಯನ್ನು 2011 ಜನಗಣತಿಯಲ್ಲಿ ಪಟ್ಟಣವೆಂದು ವರ್ಗೀಕರಿಸಲಾಗಿದೆ.[27] MoPR ಪ್ರಕಾರ, ಈ ಪಟ್ಟಣದಲ್ಲಿ 14 ವಾಸ ಪ್ರದೇಶಗಳಿವೆ. ಬಾಶೆಟ್ಟಿಹಳ್ಳಿಯ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ. 58 ಪುರುಷರು ಮತ್ತು ಉಳಿದ ಶೇ. 42 ರಷ್ಟು ಮಹಿಳೆಯರಿದ್ದಾರೆ. ಜನಸಂಖ್ಯೆಯ ಶೇ. 14.8 ರಷ್ಟು ಪ.ಜಾ ಗಳಿದ್ದಾರೆ ಮತ್ತು ಶೇ. 8.6ರಷ್ಟು ಪ.ಪಂ. ಗಳ ಸಮುದಾಯವಿದೆ. ಪಟ್ಟಣದ ಒಟ್ಟು ಪುರುಷ ಅಕ್ಷರಸ್ತ ಜನಸಂಖ್ಯೆಯು ಶೇ.85.9 ರಷ್ಟು ಮತ್ತು ಮಹಿಳೆಯರದ್ದು ಶೇ. 75.7 (2011 ಜನಗಣತಿ). ಇದು ಕೈಗಾರಿಕಾ ವಲಯದಲ್ಲಿದ್ದು, ಗಣನೀಯ ಪ್ರಮಾಣದಲ್ಲಿ ವಲಸೆ ಕಾರ್ಮಿಕರನ್ನು ಸೆಳೆಯುತ್ತದೆ. ಗ್ರಾಮ ಪಂಚಾಯತಿ ಸದಸ್ಯರೊಂದಿಗೆ ನಮ್ಮ ಚರ್ಚೆಯ ಪ್ರಕಾರ, ಇಲ್ಲಿನ ಕುಟುಂಬಗಳ ತಲಾ ಆದಾಯವು ರೂ 3000 ದಿಂದ ರೂ 100000 ಗಳಷ್ಟಿದೆ. 2008-09ರಲ್ಲಿ ಟಿಎಸ್‌ಸಿ ಆರಂಭಿಸಲಾಗಿದ್ದು (ಆಗ ಗ್ರಾಮ ಪಂಚಾಯತಿ), ಆ ಸಮಯದಲ್ಲಿ 2445 ಕುಟುಂಬಗಳಲ್ಲಿ ಕೇವಲ 1140 ಕುಟುಂಬಗಳು ಶೌಚಾಲಯವನ್ನು ಹೊಂದಿದ್ದವು.

### 2.3.2 ಆಂದೋಲನದಲ್ಲಿ ಕೈಗೊಳ್ಳಲಾದ ಪ್ರಮುಖ ಚಟುವಟಿಕೆಗಳು

#### 1. IEC ಚಟುವಟಿಕೆಗಳು:

ಜನರನ್ನು ಸುರಕ್ಷಿತ ನೈರ್ಮಲ್ಯತೆಯ ಅಭ್ಯಾಸಗಳಿಗೆ ಸಜ್ಜುಗೊಳಿಸಲು ಎರಡೂ ಗ್ರಾಮ ಪಂಚಾಯತಿ ಗಳೂ ವಿವಿಧ IEC ಚಟುವಟಿಕೆಗಳನ್ನು ಅಳವಡಿಸಿಕೊಂಡಿವೆ. ಬಾಶೆಟ್ಟಿಹಳ್ಳಿಯಲ್ಲಿ, ಜನರಲ್ಲಿ ಜಾಗೃತಿ ಮೂಡಿಸಲು ಬೀದಿ ನಾಟಕ, ನೈರ್ಮಲ್ಯತೆಯ ಮೆರವಣಿಗೆ, ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದವು. ಇದರ ಜೊತೆಗೆ, ತೆರೆದ ಬಹಿದಶೆಯನ್ನು ತಡೆಯಲು ಸಾಮಾಜಿಕ ನಿಯಂತ್ರಣ ತಂತ್ರಗಳಾದಂತಹ, ಸಾಂಪ್ರದಾಯಿಕ ತೆರೆದ ಬಹಿರ್ದಶೆಯ ಸ್ಥಳಗಳಲ್ಲಿ ಗಸ್ತು ತಿರುಗುವುದು, ತೆರೆದ ಬಹಿರ್ದಶೆ ಮಾಡಿದವರಿಗೆ ದಂಡ ವಿಧಿಸುವುದು ಮತ್ತು ಶೌಚಾಲಯವನ್ನು ನಿರ್ಮಿಸುವ ಪರಿಶ್ರಮ ಕೈಗೊಳ್ಳದಿದ್ದಲ್ಲಿ ವಿದ್ಯುತ್ ಸಂಪರ್ಕ, ದಿನಸಿ, ನೀರು ಸರಬರಾಜು ಮತ್ತು ಇತರ ಸರ್ಕಾರಿ ಸೌಲಭ್ಯಗಳನ್ನು ನಿಲ್ಲಿಸುವ ಬೆದರಿಕೆ ಒಡ್ಡುವುದು, ಇವುಗಳನ್ನು ಅಳವಡಿಸಿಕೊಳ್ಳಲಾಗಿದೆ.

ಗ್ರಾಮ ಪಂಚಾಯತಿ ಯಲ್ಲಿ ಸುರಕ್ಷಿತ ನೈರ್ಮಲ್ಯದ ಸಂದೇಶವನ್ನು ಸಾರಲು ಅಣ್ಣೀಶ್ವರ ಶಾಲೆಯ ವೇದಿಕೆಯನ್ನು ಬಳಸಿಕೊಂಡಿತು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ಶಾಲಾ ಸಭೆಯಲ್ಲಿ ನಿಯತವಾಗಿ ಸುರಕ್ಷಿತ ನೈರ್ಮಲ್ಯ ಮತ್ತು ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡುತ್ತಿದ್ದರು. ಮಕ್ಕಳಲ್ಲಿ ಪ್ರಮುಖ ಸಂದರ್ಭಗಳಲ್ಲಿ ಕೈತೊಳೆಯುವ ಅಭ್ಯಾಸವನ್ನು ಉತ್ತೇಜಿಸಲು ಶಾಲೆಗಳಲ್ಲಿ ಜಾಗತಿಕ ಕೈ ತೊಳೆಯುವ ದಿನವನ್ನು ಆಚರಿಸಲಾಯಿತು. ಇದರ ಜೊತೆಗೆ, ಸ್ವಚ್ಛತಾ ಉತ್ಸವ ವನ್ನು ಆಚರಿಸಿ (ಸ್ವಚ್ಛತೆಯ ಹಬ್ಬ) ಇದರಲ್ಲಿ ಶಾಲಾ ಮಕ್ಕಳು ನೈರ್ಮಲ್ಯತೆಯ ಪ್ರಾಮುಖ್ಯತೆಯನ್ನು ಸಾರಿದರು. ಶಾಲೆಯಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಸಮಿತಿಯನ್ನು ರಚಿಸಿ, ಶಾಲೆಯಲ್ಲಿ ನೈರ್ಮಲ್ಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಮತ್ತು ಶಾಲೆಯಲ್ಲಿ ವಿದ್ಯಾರ್ಥಿಗಳ ಸ್ವಚ್ಛತೆಯನ್ನು ಪರಿವೀಕ್ಷಿಸುವ ಜವಾಬ್ದಾರಿ ಈ ಸಮಿತಿಯದಾಗಿತ್ತು. ಶಾಲೆಗಳ ಹೊರತಾಗಿ, SHG ಗುಂಪುಗಳ ಸದಸ್ಯರು, ಅಂಗನವಾಡಿ ಶಿಕ್ಷಕರು ಮತ್ತು ಆಶಾ ಕಾರ್ಯಕರ್ತರು ಜಾಗೃತಿ ಮೂಡಿಸುವಲ್ಲಿ ತೊಡಗಿದ್ದರು. ಮಾಜಿ PDO ಪ್ರಕಾರ, ಜಾಗೃತಿ ಕಾರ್ಯಕ್ರಮದ ನಂತರ, ಹಲವಾರು ಕುಟುಂಬಗಳು ಶೌಚಾಲಯವನ್ನು ನಿರ್ಮಿಸತೊಡಗಿದವು.

[24] ಭಾರತ ಸರ್ಕಾರದಿಂದ ನಿರ್ಮಲ್ ಗ್ರಾಮ್ ಪುರಸ್ಕಾರ ಪಡೆದಿರುವ ಗ್ರಾ.ಪಂ.ಗಳು
[25] http://www.censusindia.gov.in/pca/final_pca.aspx
[26] http://lgdirectory.gov.in/rptConsolidateVillageGramPanchayat.do?OWASP_CSRFTOKEN=PMNH-1V40-0W1J-NIK9-5TEC-14ZD-7SBW-UHVL
[27] ಟಿ ಎಸ್ ಸಿ, ಗ್ರಾಮೀಣ ಪ್ರದೇಶಗಳಿಗೆ(ಗ್ರಾ.ಪಂ.) ಮಾತ್ರ ಅನ್ವಯವಾಗುತ್ತದೆ. 2011 ಜನಗಣತಿಗೆ ಮುನ್ನ, ಬಾಶೆಟ್ಟಿಹಳ್ಳಿ ಗ್ರಾಮ ಪಂಚಾಯತಿಯಾಗಿತ್ತು. ಹಾಗಾಗಿ ಟಿ ಎಸ್ ಸಿ ಕಾರ್ಯಕ್ರಮದ ಲಾಭಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು.

## ಬಿ.. ಶೌಚಾಲಯಗಳ ನಿರ್ಮಾಣ

### ಬಿ.1 ಕುಟುಂಬಗಳ ಶೌಚಾಲಯ:

ಆರಿಸಲಾದ ಎರಡೂ ಗ್ರಾಮ ಪಂಚಾಯತಿಗಳಲ್ಲಿ ನೈರ್ಮಲ್ಯದ ಆಂದೋಲನವನ್ನು 2008-09ರಲ್ಲಿ ಆರಂಭಿಸಲಾಯಿತು.[28] ಆ ಸಮಯದಲ್ಲಿ ಟಿಎಸ್‌ಸಿ ಕಾರ್ಯಕ್ರಮವು ದೇಶಾದ್ಯಂತ ಜಾರಿಯಲ್ಲಿತ್ತು. ಕಾರ್ಯಕ್ರಮದ ಪ್ರಕಾರ, ಅಗತ್ಯವಿರುವ ಕುಟುಂಬಗಳು ಮಾತ್ರ ಶೌಚಾಲಯವನ್ನು ನಿರ್ಮಿಸಲು ಉತ್ತೇಜಕವನ್ನು ಪಡೆಯಬಹುದಾಗಿತ್ತು. ಆದರೆ, ಬಾಶೇಟ್ಟಿಹಳ್ಳಿಯಲ್ಲಿ, ನಗದು ವರ್ಗಾವಣೆಯ ಬದಲು, ಗ್ರಾಮ ಪಂಚಾಯತಿ ಯು ಅಗತ್ಯವಿರುವ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಿಸಲು ಬೇಕಾದ ನಿರ್ಮಾಣ ವಸ್ತುಗಳನ್ನು ನೀಡಿತು. ಪ್ರತಿ ಕುಟುಂಬಕ್ಕೂ 3 ರಿಂಗ್, 2 ಸಿಮೆಂಟ್ ಚೀಲಗಳು, 60 ಇಟ್ಟಿಗೆಗಳು, ಮರಳು, ಕಲ್ಲುಗಳು ಮತ್ತು ಜಿಂಕ್ ಹಲಗೆಗಳನ್ನು ನೀಡಲಾಯಿತು. IAY ಮತ್ತು ಇತರ ಸರ್ಕಾರಿ ಯೋಜನೆಗಳಡಿ ಮನೆಗಳನ್ನು ನಿರ್ಮಿಸಲಾದ ಸಂದರ್ಭದಲ್ಲಿ, ಶೌಚಾಲಯವನ್ನು ನಿರ್ಮಿಸಲು ಉತ್ತೇಜಕ ಮೊತ್ತವನ್ನು ನೀಡಲಾಯಿತು. ಶೌಚಾಲಯಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ಕಾರ್ಯಪಡೆಗೆ ವಹಿಸಲಾಯಿತು. ಸ್ಥಳದ ಅಭಾವವಿದ್ದ ಸಂದರ್ಭದಲ್ಲಿ, ಶೌಚಾಲಯವನ್ನು ಸಾರ್ವಜನಿಕ ಸ್ಥಳದಲ್ಲಿ ನಿರ್ಮಿಸಿ, ಅದರ ಬೀಗದ ಕೈಗಳನ್ನು ಕುಟುಂಬಗಳಿಗೆ ನೀಡಲಾಯಿತು.

ಅಣ್ಣೇಶ್ವರದಲ್ಲಿ ಅರ್ಹ ಕುಟುಂಬಗಳಿಗೆ ಉತ್ತೇಜಕವನ್ನು ನೀಡಲು ಟಿಎಸ್‌ಸಿ ಮಾರ್ಗಸೂಚಿಗಳನ್ನು ಅನುಸರಿಸಲಾಯಿತು, ಏಕೆಂದರೆ ಶೌಚಾಲಯದ ನಿರ್ಮಾಣ ಮತ್ತು ಬಳಕೆಯ ತಾರ್ಕಣೆಯ ನಂತರವೇ ಅರ್ಹ ಕುಟುಂಬಗಳು ಉತ್ತೇಜಕವನ್ನು ಪಡೆದುಕೊಂಡಿದ್ದವು.

**ಕೋಷ್ಟಕ 2.1–ಅ: ಟಿಎಸ್‌ಸಿ ಅಡಿ ನಿರ್ಮಿಸಲಾದ ಶೌಚಾಲಯಗಳ ಒಟ್ಟು ಸಂಖ್ಯೆ**

| ಗ್ರಾಮ ಪಂಚಾಯತಿ | ಒಟ್ಟು ಕುಟುಂಬಗಳು | ಗ್ರಾಮ ಪಂಚಾಯತಿಗಳಲ್ಲಿ ಟಿಸಿಎಸ್ ಆರಂಭಿಸುವ ಮುನ್ನ ಶೌಚಾಲಯಗಳಿದ್ದ ಗ್ರಾಮ ಪಂಚಾಯತಿಗಳು | ಟಿಸಿಎಸ್ ಅಡಿ ನಿರ್ಮಿಸಲಾದ ಶೌಚಾಲಯಗಳು¹ |
|---|---|---|---|
| ಅಣ್ಣೇಶ್ವರ | 1555 | 251 (2005-06) | 1376 (394 APL+ 982 BPL) |
| ಬಾಶೇಟ್ಟಿಹಳ್ಳಿ | 2445 | 1140 (2008-09) | 1338 (531 APL + 807 BPL) |

ಮೂಲ: ಕುಡಿಯುವ ನೀರು ಮತ್ತು ನೈರ್ಮಲ್ಯತೆಯ ಮಂತ್ರಾಲಯ, ಭಾರತ ಸರ್ಕಾರ ಮತ್ತು ಅಣ್ಣೇಶ್ವರ ಮತ್ತು ಬಾಶೇಟ್ಟಿಹಳ್ಳಿಯ ಗ್ರಾಮ ಪಂಚಾಯತ್ ಕಛೇರಿ

### ಬಿ. 2 ಸಾಂಸ್ಥಿಕ ಶೌಚಾಲಯಗಳು

ಅಣ್ಣೇಶ್ವರ ಮತ್ತು ಬಾಶೇಟ್ಟಿಹಳ್ಳಿಯ ಗ್ರಾಮ ಪಂಚಾಯತಿ ಗಳ ಎಲ್ಲಾ ಶಾಲೆಗಳೂ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯಗಳಿವೆ. ಶೌಚಾಲಯಕ್ಕೆ ನೀರನ್ನು ಗ್ರಾಮ ಪಂಚಾಯತಿಯ ಪೈಪ್-ಲೈನ್ ಸಂಪರ್ಕದ ಮೂಲಕ ನೀಡಲಾಗುತ್ತಿದೆ. ಆದರೆ, ಈ ಶೌಚಾಲಯಗಳ ನಿರ್ವಹಣೆಯ ಸಮಸ್ಯೆಯನ್ನು ಇನ್ನೂ ಈ ಶಾಲೆಗಳು ಬಗೆಹರಿಸಬೇಕಿದೆ.

ಬಾಶೇಟ್ಟಿಹಳ್ಳಿಯಲ್ಲಿ ಟಿಎಸ್‌ಸಿ ಕಾರ್ಯಕ್ರಮದಡಿ ಎರಡು ಸಾಮುದಾಯಿಕ ಶೌಚಾಲಯಗಳನ್ನು ನಿರ್ಮಿಸಲಾಯಿತು - ಒಂದು ಪ್ರಯಾಣಿಕರು ಸುಲಭವಾಗಿ ತಲುಪಬಲ್ಲಂತೆ ಬಸ್ ನಿಲ್ದಾಣದ ಬಳಿ ಮತ್ತು ಇನ್ನೊಂದು ಬ್ಯಾಂಕ್ ವೃತ್ತದಲ್ಲಿ (ಗ್ರಾಮ ಪಂಚಾಯತಿ ಯ ಮಾರುಕಟ್ಟೆ ಪ್ರದೇಶ). ಇದರಂತೆ, ಅಣ್ಣೇಶ್ವರದಲ್ಲಿ ಎರಡು ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಯಿತು, ಒಂದು ಅಣ್ಣೇಶ್ವರ ಗ್ರಾಮದಲ್ಲಿ ಮತ್ತೊಂದು ದೊಡಸನ್ನೆ ಗ್ರಾಮದಲ್ಲಿ. ಈ ಶೌಚಾಲಯಗಳ ನಿರ್ವಹಣೆಗಾಗಿ ಎರಡೂ ಗ್ರಾಮ ಪಂಚಾಯತಿಗಳು ಝಾಡಮಾಲಿಗಳನ್ನು ನೇಮಿಸಿವೆ.

**ಕೋಷ್ಟಕ 2.2–ಅ : ನಿರ್ಮಿಸಲಾದ ಶಾಲಾ ಹಾಗೂ ಅಂಗನವಾಡಿ ಶೌಚಾಲಯಗಳ ಸಂಖ್ಯೆ**

| ಗ್ರಾಮ ಪಂಚಾಯತಿ | ನಿರ್ಮಿಸಲಾದ ಶಾಲಾ ಶೌಚಾಲಯಗಲ ಸಂಖ್ಯೆ | ನಿರ್ಮಿಸಲಾದ ಅಂಗನವಾಡಿ ಶೌಚಾಲಯಗಳ ಸಂಖ್ಯೆ |
|---|---|---|
| ಅಣ್ಣೇಶ್ವರ | 10 | 5 |
| ಬಾಶೇಟ್ಟಿಹಳ್ಳಿ | 12 | 2 |

ಮೂಲ: ಕುಡಿಯುವ ನೀರು ಮತ್ತು ನೈರ್ಮಲ್ಯತೆಯ ಮಂತ್ರಾಲಯ (MDWS), ಭಾರತ ಸರ್ಕಾರ ಮತ್ತು ಅಣ್ಣೇಶ್ವರ ಮತ್ತು ಬಾಶೇಟ್ಟಿಹಳ್ಳಿಯ ಗ್ರಾಮ ಪಂಚಾಯತ್ ಕಛೇರಿ

### ಸಿ. ಗ್ರಾಮ ಪಂಚಾಯತಿ ಮೂಲಕ ಪಡೆಯಲಾದ ನಗದು ಉತ್ತೇಜಕದ ಬಳಕೆ

ನಿರ್ಮಲ ಗ್ರಾಮ್ ಪುರ್ಸಕಾರ ಯೋಜನೆಯಡಿ ಅಣ್ಣೇಶ್ವರ ಗ್ರಾಮ ಪಂಚಾಯತಿ ಯು ರೂ 1 ಲಕ್ಷದ ಮತ್ತು ಬಾಶೇಟ್ಟಿಹಳ್ಳಿ ಗ್ರಾಮ ಪಂಚಾಯತಿ ಯು ರೂ 2 ಲಕ್ಷಗಳ ನಗದು ಬಹುಮಾನವನ್ನು ಪಡೆದವು.[29] ಬಾಶೇಟ್ಟಿಹಳ್ಳಿ ಗ್ರಾಮ ಪಂಚಾಯತಿ ಯು ಘನ ತ್ಯಾಜ್ಯ ಸಂಸ್ಕರಣಾ ಘಟಕವನ್ನು ನಿರ್ಮಿಸಲು ಈ ನಗದು ಬಹುಮಾನವನ್ನು ಬಳಸಿಕೊಂಡವು; ಇಲ್ಲಿ ಮನೆಗಳಿಂದ ಸಂಗ್ರಹಿಸಲಾಗುವ ತ್ಯಾಜ್ಯವನ್ನು ವಿಂಗಡಿಸಲಾಗುತ್ತದೆ. ಜೈವಿಕ ತ್ಯಾಜ್ಯವನ್ನು ಗೊಬ್ಬರದ ಉತ್ಪಾದನೆಗೆ ಬಳಸಿದರೆ, ಕೊಳೆಯದ ತ್ಯಾಜ್ಯವನ್ನು ಹಾರಾಜು ಹಾಕಲಾಗುತ್ತದೆ. ಗೊಬ್ಬರದ ಗುಂಡಿಯ ನಿರ್ವಹಣೆಯು ತಾಲುಕು ಪಂಚಾಯತಿನ ಜವಬ್ದಾರಿಯಾಗಿರುತ್ತದೆ. ಇದರ ಜೊತೆಗೆ, ಇದನ್ನು ಸುಡುವುದರ ಮೂಲಕ ವಿದ್ಯುತ್ ಅನ್ನು ಉತ್ಪಾದಿಸಲು ಗ್ರಾಮ ಪಂಚಾಯತಿ  ಮತ್ತು ಕೇರಳ ಸರ್ಕಾರದ ನಡುವೆ MoU ಅನ್ನು ಮಾಡಿಕೊಳ್ಳಲಾಗಿದೆ. ಗ್ರಾಮ ಪಂಚಾಯತಿ ಯಲ್ಲಿ ಒಳಚರಂಡಿಯ ನಿರ್ವಹಣೆಗಾಗಿ ಜನರಿಂದ ಹಣವನ್ನೂ ಸಂಗ್ರಹಿಸಲಾಯಿತು.

ಅಣ್ಣೇಶ್ವರದಲ್ಲಿ, ಘನ ಮತ್ತು ದ್ರವ್ಯ ತ್ಯಾಜ್ಯ ನಿರ್ವಹಣೆಯಡಿ (SLWM) ಚಟುವಟಿಕೆಗಳನ್ನು ಆರಂಭಿಸಲು ಪ್ರತು ಕುಟುಂಬವೂ ರೂ 120/- ಅನ್ನು ಕೊಡುಗೆಯಾಗಿ ನೀಡಿ, ಇದರಡಿ ಗ್ರಾಮದಲ್ಲಿ ಒಳಚರಂಡಿಯನ್ನು ಅಳವಡಿಸಲಾಯಿತು. ಮೇಲಾಗಿ, ಗ್ರಾಮಸ್ಥರಿಗೆ ವಿವಿಧ ಬಣ್ಣಗಳ ತ್ಯಾಜಯದ ಬುಟ್ಟಿಗಳನ್ನು ವಿತರಿಸಿ, ಇವುಗಳಲ್ಲಿ ಕೊಳೆವ ತ್ಯಾಜ್ಯ (ಹಸಿರು) ಮತ್ತು ಕೊಳೆಯದ ತ್ಯಾಜ್ಯವನ್ನು (ಕೆಂಪು) ವಿಂಗಡಿಸಲಾಯಿತು. ವೆರ್ಮಿ-ಕಾಂಪೋಸ್ಟ್ ವಿಧಾನದಲ್ಲಿ ಗೊಬ್ಬರವನ್ನು ಉತ್ಪಾದಿಸಲು ಕೊಳೆಯುವ ತ್ಯಾಜ್ಯವನ್ನು ಬಳಸಿಕೊಳ್ಳಲಾಯಿತು. ಗ್ರಾಮಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಗ್ರಾಮ ಪಂಚಾಯತಿ ಯು ಐದು ಝಾಡಮಾಲಿಗಳನ್ನೂ ನೇಮಿಸಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಬೆಂಬಲದಿಂದ, ಗ್ರಾಮ ಪಂಚಾಯತಿಯು ಗ್ರಾಮದ ಎಲ್ಲಾ ಜನರ ಆರೋಗ್ಯ ಮೌಲ್ಯಮಾಪನವನ್ನು ನಡೆಸಿದ್ದು, ಅವರಿಗೆ ಆರೋಗ್ಯ ವರದಿ ಕಾರ್ಡ್ ಅನ್ನು ನೀಡಿದೆ. ಟಿಸಿಎಸ್ ಕಾರ್ಯಕ್ರಮದ ಅನುಷ್ಠಾನದ ನಂತರ ನೀರಿನ ಮೂಲಕ ಹರಡುವ ರೋಗಗಳಾದ ಜ್ವರ ಮತ್ತು ಚಿಕನ್ ಗುನ್ಯಾ ದಂತಹ ರೋಗಗಳ ಪ್ರಕರಣಗಳು ಕಡಿಮೆಯಾಗಿವೆ ಎಂದು ಗ್ರಾಮ ಪಂಚಾಯತಿ ಸದಸ್ಯರು ವರದಿ ಮಾಡಿದರು.

### 2.3.3 ಆರಿಸಲಾದ ಗ್ರಾಮ ಪಂಚಾಯತಿಗಳಲ್ಲಿ ಬಯಲು ಶೌಚಾಲಯ ಮುಕ್ತವನ್ನಾಗಿಸಲು ಕೊಡುಗೆಯಾದ ಕಾರಣಗಳು

ಎ. ಕ್ರಿಯಾಶೀಲ ಪಂಚಾಯತ್ ಮತ್ತು ಸ್ಥಳೀಯ ಕಾರ್ಯಪಡೆಯ ಬೆಂಬಲ: ಕಾರ್ಯಪಡೆಯ ಸಹಾಯದಿಂದ ಗ್ರಾಮ ಪಂಚಾಯತಿಗಳ ದೃಢಸಂಕಲ್ಪದಿಂದ, ಗ್ರಾಮ ಪಂಚಾಯತಿ ಗಳು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲು ನಿಖರವಾದ ವಿಧಾನಗಳನ್ನು ಬಳಸಿದವು. ODF ಗ್ರಾಮವೆಂದು ಖಚಿತಪಡಿಸಿಕೊಳ್ಳಲು ಅವರು ಕೇವಲ ಶೌಚಾಲಯಗಳ ನಿರ್ಮಾಣವನ್ನು ಮಾತ್ರವಲ್ಲದೆ, ಅದರ ಬಳಕೆಯನ್ನೂ

[28] ಮೇಲೆ ತಿಳಿಸಿರುವ ಹಾಗೆ ಬಶೆಟ್ಟಿಹಳ್ಳಿಯಲ್ಲಿ ಆಂದೋಲನವನ್ನು 2005 ರಲ್ಲಿ ಆರಂಭಿಸಲಾಯಿತು, ಆದರೆ ಅದು ಗುರಿಯನ್ನು ಸಾಧಿಸಿಲ್ಲ. 2008 ರಲ್ಲಿ ಮತ್ತೆ ಆರಂಭವಾಯಿತು.

[29] ನಿ.ಗ್ರಾ.ಪು. ಯೋಜನೆ ಅಡಿ ನಗದು ಪ್ರೋತ್ಸಾಹನ ಹಣ ಪಡೆಯಲು ಮಾನದಂಡವು ಗ್ರಾ.ಪ ಯ ಒಟ್ಟು ಜನಸಂಖ್ಯೆಯನ್ನು ಆಧರಿಸಿದೆ. (http://tnrd.gov.in/schemes/tsc.html)



. ಛಿಜಜಿಚಿಛಿಜಿಜ

ಖಚಿತಪಡಿಸಿಕೊಂಡವು. ಜೊತೆಗೆ, ಈ ಕಾರ್ಯಕ್ಕೆ ಸ್ಥಳೀಯ ಅಧಿಕಾರಿಗಳೂ ಮತ್ತು ಸಮುದಾಯದ ಕಾರ್ಯನಿರ್ವಾಹಕರೂ ಕೂಡ ಅಗತ್ಯವಾದ ಬೆಂಬಲವನ್ನು ನೀಡಿದ್ದಾರೆ.

ಜಿ. ಬೆಂಗಳೂರು ನಗರಕ್ಕೆ ಗ್ರಾಮ ಪಂಚಾಯತಿ ಗಳು ಹತ್ತಿರವಿರುವುದೂ ಮತ್ತು ತಮ್ಮ ತಾಲೂಕು ಕೇಂದ್ರಗಳಿಗೂ ಹತ್ತಿರವಿರುವುದು ಈ ಕಾರ್ಯಕ್ರಮದ ಯಶಸ್ಸಿಗೆ ಮುಖ್ಯ ಕಾರಣವಾಗಿದೆ. ಬಹಿರ್ದೆಶೆಗೆ ತೆರೆದ ಸ್ಥಳಗಳ ಅಭಾವ, ನಾಗರಿಕ ಜೀವನಶಿಲಿಗೆ ಒಡ್ಡುವಿಕೆ, ಒಟ್ಟು ಆದಾಯದಲ್ಲೆ ವರ್ಧನೆ ಮತ್ತು ಹತ್ತಿರದ ಮಾರುಕಟ್ಟೆಗಳಲ್ಲಿ ಅಗತ್ಯವಿರುವ ನೈರ್ಮ್ಲಲ್ಯದ ವಸ್ತುಗಳ ಲಭ್ಯತೆಯು ಕುಟುಂಬಗಳು ತಮ್ಮ ಸ್ವಂತ ಶೌಚಾಲಯಗಳನ್ನು ನಿರ್ಮಿಸಿಕೊಳ್ಳುವಂತೆ ಉತ್ತೇಜಿಸಲು ಪ್ರಮುಖ ಪಾತ್ರ ವಹಿಸಿದ್ದವು.

## 2.3.4 ಸಮುದಾಯದ ಆರೋಗ್ಯದ ಮೇಲೆ ಟಿಎಸ್‌ಸಿನ ಪರಿಣಾಮ

ಎ. ಈ ಗ್ರಾಮ ಪಂಚಾಯತಿಗಳಲ್ಲಿ ಟಿಎಸ್‌ಸಿನ ಬಗ್ಗೆ ನಡೆಸಲಾದ ತೀವ್ರವಾದ ಜಾಗೃತಿ ಆಂದೋಲನವು ಸಮುದಾಯದಲ್ಲಿ ನೈರ್ಮಲ್ಯ ಮತ್ತು ಆರೋಗ್ಯದ ಬಗ್ಗೆ ಹೆಚ್ಚಿದ ತಿಳಿವಳಿಕೆಯನ್ನು ಉಂಟುಮಾಡಿದೆ. ತೆರೆದ ಬಹಿರ್ದೆಶೆಯ ಹಾನಿಕಾರಕ ಪರಿಣಾಮಗಳ ಬಗ್ಗೆ ಈಗ ಹೆಚ್ಚಿದ ತಿಳಿವಳಿಕೆಯಿದ್ದು, ಉತ್ತಮ ನೈರ್ಮಲ್ಯದ ಸೌಲಭ್ಯಗಳಿಗೆ ಬೇಡಿಕೆಯನ್ನು ಹೆಚ್ಚಿಸಿದೆ. ಮೇಲಾಗಿ, ಸಮುದಾಯದ ತೊಡಗುವಿಕೆಯಿಂದ ತೆರೆದ ಬಹಿರ್ದೆಶೆಯ ಅಭ್ಯಾಸದ ವಿರುದ್ಧ ಬಲವಾದ ಅಡ್ಡಿಯಾಗಿದೆ.

ಬಿ. ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯವನ್ನು ಒಳಗೊಂಡ ತೀವ್ರವಾದ ಮತ್ತು ತೊಡಗಿಸುವ ಜಾಗೃತಿ ಆಂದೋಲನವು ಕಾರ್ಯಕ್ರಮದ ಯಶಸ್ಸಿಗೆ ಮುಖ್ಯ ಕಾರಣವಾಗಿದೆ. ಈ ಆಂದೋಲನದ ಅವಧಿಯಲ್ಲಿ ಈ ಎರಡು ಸಹಭಾಗಿಗಳ ನಡುವೆ ಏರ್ಪಟ್ಟ ಸಂಬಂಧವು ಇನ್ನೂ ಬಲವಾಗಿ, ಅವರ ನಡುವೆ ಸಹಕ್ರಿಯೆಯ ಮತ್ತು ಚಲನಶೀಲ ಸಂಬಂಧವಾಗಿದ್ದು, ಗ್ರಾಮದಲ್ಲಿ ಇತರ ಉಪಕ್ರಮಗಳ ಮೇಲೆಯೂ ಪರಿಣಾಮ ಬೀರಿದೆ ಎಂದು ಗ್ರಾಮ ಪಂಚಾಯತಿ ಸದಸ್ಯರ ಜೊತೆ ನಮ್ಮ ಚರ್ಚೆಯಿಂದ ತಿಳಿದುಬಂದಿತು.

ಸಿ. ಶಾಲಾ ಶಿಕ್ಷಕರೊಡನೆ ನಮ್ಮ ಚರ್ಚೆಯ ಪ್ರಕಾರ, ಗ್ರಾಮ ಪಂಚಾಯತಿ ಯಲ್ಲಿ ಕಡಿಮೆಯಾದ ರೋಗಗಳ ಪ್ರಕರಣಗಳ ಕಾರಣದಿಂದಾಗಿ ಗೈರುಹಾಜರಿಯೂ ಕಡಿಮೆಯಾಗಿದೆ. ಜೊತೆಗೆ, ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯವಿರುವುದರಿಂದ, ಹುಡುಗಿಯರು ವಯಸ್ಸಿಗೆ ಬಂದಾಗ ಅವರ ಶಾಲೆ ತೊರೆಯುವಿಕೆಯ ಪ್ರಕರಣಗಳೂ ಕಡಿಮೆಯಾಗಿವೆ.

ಡಿ. ಗ್ರಾಮ ಪಂಚಾಯತಿ ಗಳಲ್ಲಿ ಶೌಚಾಲಯಗಳ ಬಳಕೆಯಿಂದ ಅಲ್ಲಿನ ಹುಡುಗಿ/ಮಹಿಳೆಯರಿಗೆ ತೆರೆದ ಬಹಿರ್ದೆಶೆಯಿಂದ ಆಗುವ ಸಂಭಾವ್ಯ ಅಪಾಯಗಳನ್ನು ಕಡಿಮೆ ಮಾಡುವ ಮೂಲಕ ಗ್ರಾಮ ಪಂಚಾಯತಿ ಅಲ್ಲಿ ಸುರಕ್ಷತೆ ಮತ್ತು ರಕ್ಷಣೆಯನ್ನು ಸುಧಾರಿಸಿದೆ. ಈ ಮಾಹಿತಿಯು KCCI ಅಧ್ಯಯನದೊಂದಿಗೆಯೂ[30] ತಾಳೆಯಾಗಿದ್ದು, ಶೌಚಾಲಯದ ಬಳಕೆಯು ಕೇವಲ ಭಯದಿಂದ ಮುಕ್ತಿಗೆ ಮಾತ್ರ ಸೀಮಿತವಾಗಿರದೆ, ಜೀವನದ ಗುಣಮಟ್ಟವನ್ನೂ ಸುಧಾರಿಸಿದೆ ಎಂದು ಇದು ವಾದಿಸುತ್ತದೆ (ಜೋಶಿ, ಫ಼ೊಲ್ಕ್ಹಾಟ್, ಚಟರ್ಜೀ, ಮತ್ತು ಕುಮಾರ್, 2010). ಮಹಿಳೆಯರ ಗುಂಪಿನೊಂದಿಗೆ ನಮ್ಮ ಚರ್ಚೆಯಿಂದ ತಿಳಿದುಬಂದದ್ದೇನೆಂದರೆ, ಮನೆಯ ಒಳಗಿನ ಶೌಚಾಲಯವು ಅವರಿಗೆ ಅನುಕೂಲ, ಸುರಕ್ಷತೆ ಮತ್ತು ಸಮಯದ ವಿಷಯಗಳಲ್ಲಿ ಲಾಭದಾಯಕವಾಗಿದೆ ಎಂದು. ಜೊತೆಗೆ, ತ್ಯಾಜ್ಯ ನೀರಿನ ವಿಲೇವಾರಿ ಮತ್ತು ತೆರೆದ ಬಹಿರ್ದೆಶೆಗೆ ಸ್ಥಳಗಳ ಬಗ್ಗೆ ಆಗುವ ಜಗಳ ಅಥವಾ ವಾದಗಳ ಪ್ರಕರಣಗಳನ್ನೂ ಬಗೆಹರಿಸಿದೆ.

ಇ. SLWMವು ತ್ಯಾಜ್ಯದ ವಿಂಗಡಣೆ, ಪುರನ್ಬಳಕೆ ಮತ್ತು ಪುನರಾವೃತ್ತಿಯ ಅಭ್ಯಾಸಗಳನ್ನು ಆರಂಭಿಸಿದ್ದು, ಇದು ಸ್ವಚ್ಛ ವಾತಾವರಣಕ್ಕೂ ಕೊಡುಗೆ ನೀಡಿದೆ. SLWM ಕೆಲವು ಗ್ರಾಮಸ್ಥರಿಗೆ ಜೀವನೋಪಾಯವನ್ನು ಮತ್ತು ಸ್ಥಳೀಯ ರೈತರಿಗೆ ಗೊಬ್ಬರವನ್ನೂ ನೀಡಿದೆ.

## 2.4 ಪ್ರಮುಖ ಸಮಸ್ಯೆಗಳು

ಅಣ್ಣೇಶ್ವರ ಮತ್ತು ಬಾಶೇಟ್ಟಿಹಳ್ಳಿಯು ಸಂಪೂರ್ಣ ನೈರ್ಮಲ್ಯತೆಯ ಆಂದೋಲನದ ಯಶಸ್ವೀ ಅನುಷ್ಠಾನಕ್ಕೆ ಮಾದರಿ ಹಳ್ಳಿಗಳಾಗಬಹುದು. ಆದರೆ, ಇಂತಹ ಪ್ರತಿರೂಪಣೆಯಲ್ಲಿ ಉದ್ಭವಿಸಬಹುದಾದ ಕೆಲವು ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕಿದೆ. ಸಾಮಾಜಿಕ ಜಾಗೃತಿ ಮತ್ತು ತಿಳಿವಳಿಯೆ ಸೃಷ್ಟಿಯು ಈ ಪ್ರಕ್ರಿಯೆಗೆ ಸಹಾಯ ಮಾಡಿತಾದರೂ, ಈ ಸಮಯದಲ್ಲಿ ಸಾಮಾಜಿಕ ನಿಯಂತ್ರಣಾ ತಂತ್ರಗಳನ್ನು ಅಳವಡಿಸುವುದು ಕೆಲವು ಕ್ಲಿಷ್ಟಕರ ಪ್ರಶ್ನೆಗಳನ್ನು ಸೃಷ್ಟಿಸುತ್ತದೆ. ಮೇಲಾಗಿ, ಸಾರ್ವಜನಿಕ ವಿತರಣೆಯ ದಿನಸಿ, ಸಾರ್ವಜನಿಕ ಅವಮಾನ, ಇತ್ಯಾದಿಗಳನ್ನು ದಬ್ಬಾಳಿಕೆಯೆಂದು ತಿಳಿದು, ಇದು ಜನತೆಯನ್ನು ಯೋಜನೆಯ ವಿರುದ್ಧ ಕ್ರುದ್ಧರನ್ನಾಗಿಸಬಹುದು. ಇನ್ನೊಂದು ಅಸಕ್ತಿದಾಯಕ ಉಪಕ್ರಮವೆಂದರೆ, ಫಲಾನುಭವಿಗಳಿಗೆ ವಿತರಿಸಲು ಅಧಿಕಾರಿಗಳು ಅಗತ್ಯ ವಸ್ತುಗಳನ್ನು ಕೊಳ್ಳುವುದು. ಇಂತಹ ಅಭ್ಯಾಸವು ಬೃಹತ್ ಪ್ರಮಾಣದ ಆರ್ಥಿಕತೆ ಮತ್ತು ಉತ್ತಮ ಉಪಕರಣಗಳ ನಿರ್ವಹಣೆಯ ಲಾಭಗಳನ್ನು ತರುವುದಾದರೂ, ಇದು ಸಂಭಾವ್ಯ ಮೋಸ ಮತ್ತು ದುರುಪಯೋಗಗಳಿಗೂ ದಾರಿ ಮಾಡಿಕೊಡುತ್ತದೆ, ಮತ್ತು ಈ ಮಾರ್ಗವನ್ನು ಅನುಸರಿಸಿದರೆ, ಇದಕ್ಕೆ ಸರಿಯಾದ ಸುರಕ್ಷತೆಗಳನ್ನು ಮಾಡಬೇಕು. ಇದರಂತೆಯೇ, ಗ್ರಾಮ ಪಂಚಾಯತಿ ಗಳು ಪಡೆಯುವ ಬಹುಮಾನದ ಹಣವನ್ನು ಬಳಸುವಲ್ಲಿ ಕಟ್ಟುನಿಟ್ಟಾದ ನಿಯಮ ಮತ್ತು ನೀತಿಗಳನ್ನು ಅಳವಡಿಸಿ, ಅವುಗಳ ಸರಿಯಾದ ಉಪಯೋಗವಾಗುವುದನ್ನು ಖಚಿತಪಡಿಸಿಕೊಳ್ಳಬೇಕು.

## 2.5 ತಾತ್ಪರ್ಯ

ಅಧಿಕಾರಿಗಳ, ಚುನಾಯಿತ ಪ್ರತಿನಿಧಿಗಳ ಮತ್ತು ಸಮುದಾಯದ ಸಹಯೋಗದ ಶ್ರಮದಿಂದಾಗಿ ಈ ಎರಡು ಗ್ರಾಮ ಪಂಚಾಯತಿಗಳಲ್ಲಿ ಟಿ ಎಸ್ ಸಿ ಅನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲಾಗಿದೆ. ಹೀಗೆ, ಅಧಿಕಾರಿಗಳು ಅಗತ್ಯವಾದ ಶಕ್ತಿಯನ್ನು ನೀಡಿದರೆ, ಚುನಾಯಿತ ಪ್ರತಿನಿಧಿಗಳು ಮತ್ತು ಸಮುದಾಯವು ಈ ಉಪಕ್ರಮವನ್ನು ಗಂಭೀರವಾಗಿ ಪರಿಗಣಿಸಿ ಅವು ಸಮರ್ಪಕವಾಗಿ ಕಾರ್ಯಗತಗೊಳಿಸಿದರು. ಇದರ ಪರಿಣಾಮವಾಗಿ ಪ್ರತಿ ಮನೆಯಲ್ಲಿಯೂ ಶೌಚಾಲಯದ ನಿರ್ಮಾಣ ಮತ್ತು ಅದರ ಬಳಕೆ ಮಾತ್ರವಲ್ಲದೆ, ಆರೋಗ್ಯ, ನೈರ್ಮಲ್ಯ ಮತ್ತು ತ್ಯಾಜ್ಯ ವಿಲೇವಾರಿಯ ಬಗ್ಗೆ ಹೆಚ್ಚಿನ ಜಾಗೃತಿಯನ್ನೂ ಮೂಡಿಸಿತಲ್ಲದೆ, ಸಮುದಾಯದ ಒಟ್ಟಾರೆ ಜೀವನದ ಸ್ಥಿತಿಯನ್ನು ಸುಧಾರಿಸುದೆ. ಶಾಲೆಗಳಲ್ಲಿ ಉತ್ತಮ ಶೌಚಾಲಯದ ಸೌಲಭ್ಯಗಳು ಗೈರುಹಾಜರಿ ಮತ್ತು ಹರೆಯದ ಹುಡುಗಿಯರ ತೊರೆಯುವಿಕೆಯನ್ನು ಕಡಿಮೆ ಮಾಡಿ, ಸಮುದಾಯದ ಮಕ್ಕಳಿಗೆ ಶಿಕ್ಷಣದ ಲಾಭವನ್ನೂ ಸುಧಾರಿಸಿದೆ. ಇದರ ಜೊತೆಗೆ, ಸುರಕ್ಷತೆ ಮತ್ತು ಉತ್ತಮ ನೈರ್ಮಲ್ಯದ ಸೌಲಭ್ಯಗಳ ಬಳಕೆಗೆ ಕೊಡುಗೆ ನೀಡಿ, ಸಮುದಾಯಕ್ಕೆ ಆರೋಗ್ಯಕರ ಜೀವನದ ಸ್ಥಿತಿಯನ್ನು ನೀಡಿದೆ.

[30] ಅಧ್ಯಯನವು ಸಂಪೂರ್ಣ ಸ್ವಚ್ಛತೆ ಆಂದೋಲನದ ಕುಟುಂಬಗಳ ನಡವಳಿಕೆ ನಿರ್ಧಾರಕಗಳನ್ನು ಹಾಗೂ ವಿನ್ಯಾಸಗಳನ್ನು ಗಮನಿಸಿತು : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ಅಧ್ಯಯನ (2010).



# ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ







# 8: ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ

"ನಾನು ಒಂದು ಸಮುದಾಯದ ಪ್ರಗತಿಯನ್ನು ಮಹಿಳೆಯರ ಪ್ರಗತಿಯ ಮಾನದಂಡದಿಂದ ಅಳೆಯುತ್ತೇನೆ".

- ಡಾ. ಬಿ.ಆರ್. ಅಂಬೇಡ್ಕರ್
(ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರು ಮತ್ತು
ಭಾರತದ ಪ್ರಥಮ ಕಾನೂನು ಮತ್ತು ನ್ಯಾಯ ಮಂತ್ರಿಗಳು).

## 8.1. ಪ್ರಸ್ತಾವನೆ-ಲಿಂಗ ಸಂಬಂಧಗಳ ಪರಿಭಾವನೆ

ಲಿಂಗದ ಭೂತಗನ್ನಡಿಯ ಮೂಲಕ ಮಾನವ ಅಭಿವೃದ್ಧಿಯನ್ನು ವಿಶ್ಲೇಷಿಸುವ ಪ್ರಯತ್ನಗಳನ್ನು ಪ್ರಥಮ ಬಾರಿಗೆ ಅಳವಡಿಸಿಕೊಂಡಿದ್ದು 1990ರ ದಶದಕದ ಮಧ್ಯದಲ್ಲಿ. 'ಸೆಕ್ಸ್'(ಲೈಂಗಿಕತೆ) ಪದ ದೈಹಿಕವಾಗಿ ಪುರುಷನೋ ಅಥವಾ ಮಹಿಳೆಯೋ ಎಂಬುದನ್ನು ಸೂಚಿಸಿದರೆ 'ಜೆಂಡರ್'(ಲಿಂಗ) ಪದವು ಹೆಚ್ಚು ಸುಸಂಸ್ಕೃತವಾದದ್ದು ಮತ್ತು ದೈಹಿಕ ಪುರುಷ ಅಥವಾ ಮಹಿಳೆಯ ನಡವಳಿಕೆಯನ್ನು ಮತ್ತು ಅವರ ನಡುವಿನ ಸಂಬಂಧಗಳನ್ನೂ ಒಳಗೊಳ್ಳುತ್ತದೆ.

ಕಳೆದ ಎರಡು ದಶಕಗಳಲ್ಲಿ ಸ್ತ್ರೀ ಪರ ವಿಮರ್ಶಕರು ಈ ಲಿಂಗ ಎಂಬ ಆಯಾಮ ಮತ್ತು ಅದರ ವ್ಯಾಪ್ತಿಗಳನ್ನು ಪುನರ್-ವಿವರಿಸಬೇಕು ಎಂದು ಕರೆ ಕೊಟ್ಟಿದ್ದಾರಲ್ಲದೆ ಕೆಲವೊಮ್ಮೆ ಯಶಸ್ವಿಯೂ ಆಗಿದ್ದಾರೆ. ಲಿಂಗ ಎಂದರೆ ಕೇವಲ ಪುರುಷ ಅಥವಾ ಮಹಿಳೆ ಎಂಬುದನ್ನು ಸೂಚಿಸುವುದಲ್ಲ, ಅವರ ನಡುವಣ ಸಂಬಂಧವೂ ಸೇರುತ್ತದೆ. ಈ ಕಾರಣಕ್ಕಾಗಿಯೇ ಅದು ಎಲ್ಲ ಸಾಮಾಜಿಕ ವ್ಯವಸ್ಥೆಗಳು ಮತ್ತು ಅಂತರಕ್ರಿಯೆಗಳ ಮೇಲೂ ಪ್ರಭಾವ ಬೀರುತ್ತದೆ. ಈ ಅಧ್ಯಾಯದಲ್ಲಿ ನಾವು 'ಲಿಂಗಾಧಾರಿತ ಅಭಿವೃದ್ಧಿ'ಯನ್ನು ಮಾನವ ಅಭಿವೃದ್ಧಿ ವರದಿ ಜೊತೆಗೆ ನೋಡುವಾಗ ಬರುವ ಪ್ರಮುಖ ಲಿಂಗಾಧಾರಿತ ಸೂಚಕಗಳು, ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ, ಲಿಂಗ ಸಂಬಂಧಿ ಸಬಲೀಕರಣ ಮಾಪನ ಮತ್ತು ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕಗಳ ಬಗ್ಗೆ ಮತ್ತೊಮ್ಮೆ ಚರ್ಚೆಗಳು ಮತ್ತು ಸವಾಲುಗಳನ್ನು ಮಾಡುತ್ತದೆ. ಅದರಲ್ಲೂ ವಿಶೇಷವಾಗಿ ಜಾಗತಿಕ ದಕ್ಷಿಣದ ಗ್ರಾಮೀಣ ಮಹಿಳೆಯರ ಕುರಿತಂತೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯಲ್ಲಿ ಅಭಿವೃದ್ಧಿ, ಲಿಂಗಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ದತ್ತಾಂಶ ಮತ್ತು ಅದಕ್ಕೆ ಸಂಬಂಧಿಸಿದಂತೆ ಇರುವ ಅಂತರಗಳನ್ನು ಹೇಗೆ ಪರಿಶೀಲಿಸಲಾಗುತ್ತದೆ ಎಂಬುದನ್ನು ಈ ಚರ್ಚೆಗಳು ತಿಳಿಸಿಕೊಡುತ್ತವೆ. ಲಿಂಗಾಧಾರಿತ ಅಭಿವೃದ್ಧಿ ಮಾಡಲು ಹೇಗೆ ಡಿಮಾನವ ಅಭಿವೃದ್ಧಿ ವರದಿ (ಉಳಿದವುಗಳ ಜೊತೆಗೆ) ಒಂದು ಹೆಚ್ಚು ಆಳವಾದ ಮತ್ತು ಹೆಚ್ಚು ಆತ್ಮವಿಮರ್ಶೆಯ ನೀತಿಯನ್ನಾಗಿ ಬಳಸಬಹುದು ಎಂಬುದರ ದರ ಬಗ್ಗೆ ಕೆಲವಾರು ಸಲಹೆಗಳನ್ನು ಈ ಅಧ್ಯಾಯವು ನಿರ್ಣಯಿಸುತ್ತದೆ.

## 8.2 ಅಪಾಯಕಾರಿ ಅಭಿವೃದ್ಧಿಯನ್ನು ತಪ್ಪಿಸಲು ಜೆಂಡ-ರಿಂಗ್ ಅಭಿವೃದ್ಧಿ - ಸೂಚಕಗಳು ಒಡ್ಡುವ ಸಮಸ್ಯೆಗಳು ಮತ್ತು ಸವಾಲುಗಳು

ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ ಮತ್ತು ಲಿಂಗ ಸಂಬಂಧಿ ಸಬಲೀಕರಣ ಮಾಪನಗಳನ್ನು ಮಾನವ ಅಭಿವೃದ್ಧಿ ಸೂಚಕದ ಭಾಗವಾಗಿ ಪ್ರಥಮ ಬಾರಿಗೆ ಪರಿಚಯಿಸಿದ್ದು 1995ರಲ್ಲಿ. ಆ ಸಮಯದಲ್ಲಿ ಸ್ತ್ರೀ, ಲಿಂಗ, ಮತ್ತು ಅಭಿವೃದ್ಧಿಯ ಸುತ್ತಲ ವಿಷಯಗಳು ಮುಖ್ಯವಾಗಿದ್ದವು. ಇದಕ್ಕೆ ಕಾರಣ ಅದೇ ವರ್ಷ ಬೀಜಿಂಗ್‌ನಲ್ಲಿ ನಡೆದ ಮಹಿಳೆಯರ ಮೇಲಿನ ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಕೋಪನ್‌ಹೇಗನ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾಜಿಕ ಶೃಂಗ ಸಮ್ಮೇಳನ (Hirway & Mahadevia, 1996; Raghuram & Manorama, 1995). ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ, ಲಿಂಗ-ಸರಿಹೊಂದಿಸಿದ ಮಾನವ ಅಭಿವೃದ್ಧಿ ಸೂಚ್ಯಂಕ ಆಗಿದ್ದರೆ, ಲಿಂಗ ಸಂಬಂಧಿ ಸಬಲೀಕರಣ ಮಾಪನ ಮಹಿಳೆಯರು ರಾಜಕೀಯ ಮತ್ತು ಆರ್ಥಿಕ ಪರಿಧಿಗಳಲ್ಲಿ ಆಕ್ರಮಿಸಿದ ಅವಕಾಶಗಳ ಬಗ್ಗೆ ಗಮನ ಹರಿಸಿತು. ಇತ್ತೀಚೆಗೆ ಸಬಲೀಕರಣ, ಆರ್ಥಿಕ ಚಟುವಟಿಕೆ ಮತ್ತು ಸಂತಾನೋತ್ಪತ್ತಿ ಆರೋಗ್ಯ, ಇತ್ಯಾದಿಗಳನ್ನು ಸೆರೆಹಿಡಿಯಲು ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವನ್ನು ರಚಿಸಲಾಯಿತು ಈ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವನ್ನು ತನ್ನ ಮಾನವ ಅಭಿವೃದ್ಧಿ ವರದಿ, 2010ರಲ್ಲಿ ಯುಎನ್‌ಡಿಪಿ ಅಧಿಕೃತವಾಗಿ ಅಳವಡಿಸಿಕೊಂಡಿತು. ಈ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕದ 3 ಆಯಾಮಗಳಿವೆ ಎಂದು ಭಾವಿಸಲಾಗಿದೆ: ಸಂತಾನೋತ್ಪತ್ತಿ ಆರೋಗ್ಯ, ಸಬಲೀಕರಣ ಮತ್ತು ದುಡಿಮೆ ಮಾರುಕಟ್ಟೆಯ ಭಾಗವಹಿಸುವಿಕೆ. ಇವುಗಳ ಜೊತೆಯಲ್ಲಿ ಸ್ತ್ರೀ ಮತ್ತು ಪುರುಷರ ಸಾಧನೆಗಳ ನಡುವಿನ ಅಂತರಗಳನ್ನೂ ಪರಿಗಣಿಸಲಾಗುತ್ತದೆ. ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಈ ಆಯಾಮಗಳನ್ನು ಚಲನಶೀಲ ಆಯಾಮಗಳನ್ನಾಗಿ ವಿವರಿಸಲು ಅವಕಾಶ ಮಾಡಿಕೊಡುತ್ತದೆ.

ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕವು ಸಮಾಜಗಳಲ್ಲಿ ಸ್ತ್ರೀಯ ಸಾಧನೆಗಳನ್ನು ಅಳೆಯುವಾಗ ಇವುಗಳನ್ನು ಪರಿಗಣಿಸಿತು: ಅವರ ದೀರ್ಘಕಾಲ ಬಾಳುವ ಸಾಮರ್ಥ್ಯ, ಓದಲು-ಬರೆಯಲು ಇರುವ ಸಾಮರ್ಥ್ಯ, ಹಣ ಗಳಿಸಿ ವಸ್ತುಗಳನ್ನು ಮತ್ತು ಸೇವೆಗಳನ್ನು ಪಡೆದುಕೊಳ್ಳುವ ಸಾಮರ್ಥ್ಯ-ಪುರುಷರ ವಿಷಯದಲ್ಲೂ ಇವುಗಳನ್ನೇ ಅಳೆಯಲಾಗಿತ್ತು. ಈ ಮೂಲಕ ಸ್ತ್ರೀ ಮತ್ತು ಪುರುಷರ ಸಾಧನೆಗಳ ನಡುವಣ ಅಂತರವನ್ನು ಗುರುತಿಸುವ ಪ್ರಯತ್ನ ಮಾಡಲಾಗಿತ್ತು. ಇದಕ್ಕಾಗಿ ಹೆಚ್ಚಿನ ಅಸಮಾನತೆಯನ್ನು ದಾಖಲಿಸಲು ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಕೆಳಕ್ಕೆ ಇಳಿಸಲಾಗಿತ್ತು. ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ ವಿರುದ್ಧ ಇರುವ ಪಾರಾಗಲಾರದಂತಹ ಒಂದು ಟೀಕೆ ಎಂದರೆ, ಅದರಲ್ಲೂ ವಿಶೇಷವಾಗಿ ದಕ್ಷಿಣ ದೇಶಗಳ ಬಡ, ಗ್ರಾಮೀಣ ಸ್ತ್ರೀಯರ ಸಂಬಂಧವಾಗಿ, ಅವರ ಯೋಗಕ್ಷೇಮದ ಬಗ್ಗೆ ಅಳೆಯುವಾಗ ಅವರ ನಿಜವಾದ ಬದುಕುಗಳಿಗೆ ಹತ್ತಿರವಾದ ಅಂಶಗಳನ್ನು ತೆಗೆದುಕೊಳ್ಳುತ್ತಿಲ್ಲ (Hirway & Mahadevia, 1996; Kelkar, 2005). ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕದ ಎರಡು ಅಂಶಗಳು ಆದಾಯ ಮತ್ತು ಶಿಕ್ಷಣಕ್ಕೆ ಮೂರನೇ ಒಂದು ತೂಕ ನೀಡಿವೆ, ಅಂದರೆ ಸೀಮಿತಗೊಳಿಸಿವೆ. ಇದರ ಜೊತೆಗೆ ತಲಾ ಜಿಡಿಪಿ(ಅಂದರೆ ಆದಾಯ)ಯ ಸಾಮಾನ್ಯವಾದ ಹಿನ್ನಡೆಗಳೆಂದರೆ ಅದನ್ನು ಯುದ್ಧ ಅಥವಾ ದುರಂತ ಪರಿಹಾರಗಳ ಮೇಲಿನ ವೆಚ್ಚಕ್ಕೆ ನೇರ ಅನುಪಾತದಲ್ಲಿ ನೋಡುವುದು; ಅಥವಾ ಮದ್ಯ, ತಂಬಾಕು ಮತ್ತು ಔಷಧಗಳ ಮಾರಾಟದ (ಇದರಿಂದ ಅವುಗಳ ಸೇವನೆಯೂ ಹೆಚ್ಚಿದೆ); ಅಥವಾ ತತ್ಸಂಬಂಧ ಪರಿಸರ ನಾಶವಾದರೂ ಹೆಚ್ಚಾದ ಕೈಗಾರಿಕಾ ಉತ್ಪಾದನೆ; ಹಣಕಾಸು ಗಳಿಕೆ ಮತ್ತು ಸಾಂಪ್ರದಾಯಿಕ ಆರ್ಥಿಕತೆಯಲ್ಲಿ ಭಾಗವಹಿಸುವಿಕೆಯ ಮೇಲೆ ಗಮನವನ್ನು ಕೇಂದ್ರೀಕರಿಸುವ ಮೂಲಕ ಆದಾಯದ ಅಳತೆ ಇವುಗಳಲ್ಲಿ ವಿಫಲವಾಗಿದೆ: (ಎ) ಹೀಗೆ ಬಹಳ ಸಂಕುಚಿತವಾಗಿ ವಿವರಿಸಿದ ಆದಾಯದ ಅಭಿವೃದ್ಧಿಯ ಜೊತೆಯಲ್ಲೇ ಬರುವ ಬಾಹ್ಯ ನಕಾರಾತ್ಮಕತೆಗಳನ್ನು ಭರಿಸಬೇಕಾದ ಸ್ತ್ರೀಯರನ್ನು, ಅದರಲ್ಲೂ ಕಡೆಗಣಿಸಲ್ಪಟ್ಟ ಸ್ತ್ರೀಯರನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ವಿಷಯದಲ್ಲಿ (ಬಿ) ಬಹುತೇಕ ಸ್ತ್ರೀಯರು ಮಾಡುವ ಅನೌಪಚಾರಿಕ ಮತ್ತು ಅಸಂಘಟಿತ ಕೆಲಸಗಳ ವಾಸ್ತವತೆಯನ್ನು ಸೆರೆಹಿಡಿಯುವುದು.

ದಕ್ಷಿಣ ಏಷ್ಯಾದಲ್ಲಿನ ಬಹುಪಾಲು ಸ್ತ್ರೀಯರು ಕೃಷಿ ಕಾರ್ಮಿಕರು. ಅವರ ಸಂಖ್ಯೆ ಪ್ರಬಲ ಕೃಷಿಕರಾದ ಪುರುಷರ ಸಂಖ್ಯೆಗಿಂತ ಸ್ವಲ್ಪ ಹೆಚ್ಚೇ ಇದೆ (ಕೇಲ್ಕರ್, 2005). ಅಂತೆಯೇ, ಕೃಷಿಯೇತರ ವಲಯದಲ್ಲೂ 90ಶೇ. ಮಹಿಳೆಯರಿದ್ದಾರೆ (ಅದೇ ಗ್ರಂಥ). ಈ ಪ್ರದೇಶದಲ್ಲಿ ಮಹಿಳೆಯರು ಆರ್ಥಿಕತೆಯಲ್ಲಿ ಭಾಗವಹಿಸುವುದನ್ನು ಸ್ವಯಂ ವರದಿಗಳ ಮೂಲಕ ಸೆರೆಹಿಡಿಯುವ ಪ್ರಯತ್ನ ಮಾಡಲಾಗಿದೆ, ಉದಾ: 'ಕುಟುಂಬದಲ್ಲಿ ಕೆಲಸ ಮಾಡುವವರು' (ಗಳಿಕೆ ಇಲ್ಲದ ಅರೈಕೆ ಕೆಲಸವನ್ನು ಮಹಿಳೆಯರು ಕೆಲಸ ಎಂದು ವರದಿ ಮಾಡಿಪ್ರಮಾಣು), 'ಸ್ವಂತ-ಲೆಕ್ಕದ ಕಾರ್ಮಿಕರು', (ದಿನಗೂಲಿಗಳು,

ಗೃಹಾಧಾರಿತ ಕೆಲಸ ಉದಾ: ಹೊಲಿಗೆ ಅಥವಾ ಸಣ್ಣಪುಟ್ಟ ಕೆಲಸಗಳು). ಅಥವಾ 'ಕೂಲಿ ಮತ್ತು ಸಂಬಳದ ಕಾರ್ಮಿಕರು'; ಇವೆಲ್ಲ ಗುರುತಿಸಬೇಕಾದ 'ಕೂಲಿ ಮತ್ತು ಸಂಬಳದ ಕಾರ್ಮಿಕರು'; ಇದು ಅಭಿವೃದ್ಧಿಯನ್ನು ಲಿಂಗಾಧಾರಿತ ಅಭಿವೃದ್ಧಿಯನ್ನು ಆಗಿಸಲು ಪ್ರಯತ್ನಿಸುವಾಗ ತಿಳಿದಿರಬೇಕಾದ ಕುತೂಹಲಕಾರಿ ವಿಷಯಗಳನ್ನು ಹೊರಗೆ ಹಾಕಿದೆ. ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ ಮಹಿಳೆಯ ಸ್ಥಿತಿಗತಿ ಸುಧಾರಿಸುವುದು ಎಂದರೆ ಅವರು ಸ್ವತಂತ್ರವಾಗಿ ಆದಾಯ ಗಳಿಸುವವರಾಗಿರುವುದು ಎಂದು ಊಹಿಸಿದರೂ ಅದು ಬಹುತೇಕ ಗ್ರಾಮೀಣ ಬಡ ಮಹಿಳೆಯರು ಮನೆಯ ಒಳಗೆ ಹೊರಗೆ ದುಡಿಯಬೇಕಾದ ಪರಿಸ್ಥಿತಿಯ ಬಗ್ಗೆ ಕುರುಡಾಗಿದೆ; ಇದರ ಜೊತೆಗೆ ಕೂಲಿಗಳಲ್ಲಿ ಇರುವ ಲಿಂಗ ತಾರತಮ್ಯಕ್ಕೂ. ಪರ್ಯಾಯವಾಗಿ ಮಹಿಳೆಯರು ಮನೆಯ ಯೋಗಕ್ಷೇಮವನ್ನು ನೋಡಿಕೊಳ್ಳುವ ಪಾತ್ರವನ್ನು (ವಲಸಿಗರಲ್ಲಿ ಇದ್ದಂತೆ) ಸಂಪೂರ್ಣವಾಗಿ ಬಿಟ್ಟು ಗಳಿಸುವ ಕಡೆಯೇ ಗಮನ ಕೊಟ್ಟರೆ ಆಗ ಅವರ ಒಳಿತು ಅನುಮಾನಾಸ್ಪದವಾಗುತ್ತದೆ. ಮನೆಗೆಲಸದಲ್ಲಿ ಸಹಾಯಕರಾಗಿ ಹೋಗುವ ಅನೇಕ ವಲಸಿಗ ಮಹಿಳೆಯರು ಅಲ್ಲಿನ ಕುಟುಂಬಗಳು/ಮಕ್ಕಳನ್ನು ನೋಡಿಕೊಳ್ಳುತ್ತ ತಮ್ಮ ಕುಟುಂಬ/ಮಕ್ಕಳನ್ನೇ ನಿರ್ಲಕ್ಷಿಸಬೇಕಾಗುತ್ತದೆ (ಕೆಲ್ಕರ್, 2005). ವಲಸೆ ಎಂಬುದು ಒಂದು ಪಲಾಯನವಾದವೇ ವರದಕ್ಷಿಣೆ ಬೇಡಿಕೆಗಳನ್ನು ಈಡೇರಿಸಲು ಆಗದೆ ಅವಮಾನ, ಹಿಂಸೆ, ನಿಷಿದ್ಧ ರಕ್ತ ಸಂಬಂಧಿಗಳೊಡನೆ ಲೈಂಗಿಕ ಕ್ರಿಯೆ, ಅತ್ಯಾಚಾರ, 'ಮರ್ಯಾದೆಗೆಟ್ಟ/ಅಪಾಯಕಾರಿ ಲೈಂಗಿಕ ಕಾರ್ಯದಲ್ಲಿ ತೊಡಗಿಕೊಳ್ಳಬೇಕಾಗುವುದು ಅಥವಾ ವಿಪರೀತ ಸಾಲದ ಹೊರೆ ಮತ್ತು ಬಡತನ, ಇವುಗಳಿಂದ ತಪ್ಪಿಸಿಕೊಳ್ಳುವುದು- ಹೊರತು ಮಹಿಳೆಯರನ್ನು ಮುಕ್ತಗೊಳಿಸುವುದಿಲ್ಲ ಅಥವಾ ಸಬಲಗೊಳಿಸುವುದಿಲ್ಲ (ಅದೇ ಗ್ರಂಥ).

ಮಹಿಳೆಯರ ಶಿಕ್ಷಣ ಅವರ ಸಬಲೀಕರಣಕ್ಕೆ ಒಂದು ಸಾಧನ ಎಂದರೂ-ಅದು ಅವರು ಹೆಚ್ಚು ಅರ್ಥಪೂರ್ಣವಾಗಿ (ಸಿದ್ಧಾಂತದಲ್ಲಿ) ಸಾಮಾಜಿಕ-ರಾಜಕೀಯ ಮತ್ತು ಆರ್ಥಿಕ ರಚನೆಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತದೆ ಎಂದು ಹೇಳಿದರೂ-ಅದಕ್ಕೆ ಸೀಮಿತ ಮೌಲ್ಯವಿದೆ. ಏಕೆಂದರೆ ಅದು ಪುರುಷರನ್ನು ಬದಲಿಸಿ ಮನೆಯ ಆರೈಕೆಯ ಕಡೆಗೆ ಸಹಾಯಮಾಡುವಂತೆ ಮಾಡುವುದಿಲ್ಲ, ಮಹಿಳೆಯರ ಪಯಣದಲ್ಲಿ ಸಹಾಯಮಾಡುವಂತೆ ಮಾಡುವುದಿಲ್ಲ (Hirway & Mahadevia, 1996). ಇದೇ ವಾದವನ್ನು ಹಿಡಿದು ಲಿಂಗ ಸಂಬಂಧಿ ಸಬಲೀಕರಣ ಮಾಪನವನ್ನು ಕೂಡ ಟೀಕಿಸಲಾಗಿದೆ. ಅದು ಮಹಿಳೆಯರು ಆರ್ಥಿಕ ಮತ್ತು ರಾಜಕೀಯ ಅಂಗಗಳಲ್ಲಿ ಭಾಗವಹಿಸುವುಪ್ರಮಾಣ ಬಗ್ಗೆ ನೋಡುತ್ತದೆಯೇ ಹೊರತು ಅವರ ನಿಜವಾದ ಶಕ್ತಿ ಅಥವಾ ಮಾಧ್ಯಮಗಳ ಬಗ್ಗೆ ಆಲೋಚಿಸುವುದಿಲ್ಲ (Acharya & Ghimire, 2005).

ಈ ಟೀಕೆಗಳಲ್ಲೆಲ್ಲ ಒಂದು ಸಾಮಾನ್ಯ ಸಂಗತಿ ಎಂದರೆ 'ಪುರುಷರೊಡನೆ ಸಮಾನತೆ' ಮಾತ್ರವೇ ಸಾಲದು, ಅದಕ್ಕಿಂತ ಆಚೆಗೆ ಹೋಗಿ ಇನ್ನೂ ಅರ್ಥಪೂರ್ಣವಾದ ಲಿಂಗ-ಅಭಿವೃದ್ಧಿ ಆಗಬೇಕು ಎಂಬುದು. ಹೀಗೆ ಹೇಳಿದಾಕ್ಷಣ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಖಾತ್ರಿಯಾಗಿಸಬಾರದು ಒದಗಿಸಬಾರದು ಎಂದಲ್ಲ, ಆದರೆ ಅಭಿವೃದ್ಧಿ ನೀತಿ ನಿರೂಪಕರಿಗೆ ಮತ್ತು ಅನುಷ್ಠಾನಕ್ಕೆ ತರುವವರಿಗೆ ಇದೊಂದು ಎಚ್ಚರಿಕೆ-ಯಾವುದೋ ಕೆಲವು ಸಾಮಾಜಿಕ ವಲಯಗಳಲ್ಲಿ ಪುರುಷರಿಗೆ ಸಮಾನವಾಗಿಬಿಟ್ಟರೆ ಪಿತೃಪ್ರಧಾನವಾದ ಸಾಮಾಜಿಕ ರಚನೆಗಳು ಮತ್ತು ಸಾಂಪ್ರದಾಯಿಕ ಲಿಂಗ ಸಂಬಂಧಗಳಲ್ಲಿರುವ ಲಿಂಗ ತಾರತಮ್ಯಗಳು ತಮ್ಮಷ್ಟಕ್ಕೆ ತಾವೇ ಮಾಯವಾಗಿಬಿಡುವುದಿಲ್ಲ. ಸಂಪನ್ಮೂಲಗಳ ಲಭ್ಯತೆ ಖಂಡಿತವಾಗಿ ಮುಖ್ಯವೇ ಆದರೂ, ಪುರುಷರ ಸಾಧನೆಗಳ ಜೊತೆ ಹೋಲಿಸಿ ನೋಡುವಾಗ -ಅಭಿವೃದ್ಧಿಯನ್ನು ಅಂಕಿಗಳಲ್ಲಿ ನೋಡಿ ಸೂಚಕಗಳಲ್ಲಿ ಸೆರೆಹಿಡಿಯುವಾಗ- ಲಿಂಗ-ಅಭಿವೃದ್ಧಿಯ ಪರವಾಗಿ ಅಧಿಕೃತವಾಗಿ ಮಾತನಾಡಲು ಅಷ್ಟೇ ಸಾಲುವುದಿಲ್ಲ (Kodoth & Eapen, 2005).

ಮಹಿಳೆಯರ ಕರ್ತೃತ್ವವನ್ನು ಹೆಚ್ಚಿಸುವುದಕ್ಕೆ ಅನೇಕ ವಿಷಯಗಳಲ್ಲಿ ಕ್ರಿಯೆಯಲ್ಲಿ ತೊಡಗಿಕೊಳ್ಳುವುದರ ಅಗತ್ಯವಿದೆ - ವಿಶೇಷವಾಗಿ ಪುರುಷರು ಮಹಿಳೆಯರ ಮೇಲೆ ನಡೆಸುವ ಹಿಂಸೆಯನ್ನು ತಡೆಯುವುದು ಅಥವಾ ಉತ್ತಮ ಪೌಷ್ಟಿಕಾಂಶ ಮತ್ತು ಆರೋಗ್ಯ ರಕ್ಷಣೆ ಹೆಣ್ಣು ಮಕ್ಕಳಿಗೆ ಸಿಗಲು ಅಡ್ಡಿಯಾಗುವ ಸಾಂಪ್ರದಾಯಿಕ ತಾರತಮ್ಯಗಳನ್ನು ಬದಲಿಸುವುದು. ಇದು ಲಿಂಗ-ಅಭಿವೃದ್ಧಿ ಗಮನಿಸಲು ವಿಫಲವಾದ ಒಂದು ಅತ್ಯಂತ ಮೂಲ ಅಗತ್ಯವೊಂದನ್ನು ತೋರಿಸಿಕೊಡುತ್ತದೆ: ಲಿಂಗ-ಅಭಿವೃದ್ಧಿಯಲ್ಲಿ ಪುರುಷರ ಪಾತ್ರ (ರಚನಾತ್ಮಕ ಅಥವಾ ಇನ್ನಾವುದೇ). ಡಿಮಾನವ ಅಭಿವೃದ್ಧಿ ವರದಿ ನಂತಹ ಪ್ರಕ್ರಿಯೆಗಳು ಬಳಸಿಕೊಂಡ ಸ್ಥಳೀಯತೆ ಲಿಂಗ-ಸಂವೇದಿ ಎಂದು ಹೇಳಿಕೊಳ್ಳುವ ನೀತಿಯ ಸೂತ್ರಗಳನ್ನು ವಿಮರ್ಶಾತ್ಮಕವಾಗಿ ವಿವೇಚಿಸುತ್ತವೆ. ಇಂತಹ ಆತ್ಮವಿಮರ್ಶೆ ರಹಿತವಾದ 'ಲಿಂಗ-ಸಂವೇದಿ' ನೀತಿಗಳು ಸುಮ್ಮನೆ 'ಲಿಂಗ ಆದರ್ಶಗಳನ್ನು' ಸಾರುತ್ತವೆ (ಕುಮಾರ್, 2002). ಇದರಲ್ಲಿ ಮುಖ್ಯವಾದವು ಮಹಿಳೆಯರ ಬಗ್ಗೆ ತಿಳಿವಳಿಕೆ ಮತ್ತು ಪಿತೃ ಪ್ರಧಾನ ನೆಲೆಗಳಿಂದ ಮಹಿಳೆಯರು ಏನು ಮಾಡಬೇಕೆಂಬುದನ್ನು ನಿರ್ಧರಿಸುವುದು (ಜೈನ್, 2007). ನಿಜ ಜೀವನದಲ್ಲಿ ಈ ವಿಧಾನವು ಮಹಿಳೆಯರನ್ನು ಉದಾರ ಚೌಕಟ್ಟನ್ನು ಹೊಂದಿರುವ ಮಾನವ ಹಕ್ಕುಗಳು, ಅಥವಾ ಜೀವನವಿಡೀ ಆರೋಗ್ಯ ರಕ್ಷಣೆ ಇತ್ಯಾದಿಗಳ ಬದಲಾಗಿ ಮಾತೃತ್ವಕ್ಕೆ ಮತ್ತು ಸಂತಾನೋತ್ಪತ್ತಿ ಆರೋಗ್ಯಕ್ಕೆ ಸೀಮಿತಗೊಳಿಸುತ್ತವೆ (ಕುಮಾರ್, 2002). ಜಾಗತಿಕ ದಕ್ಷಿಣದಲ್ಲಿ ಮಹಿಳೆ ಮತ್ತು ಮದುವೆ-ಮಕ್ಕಳನ್ನು ಹೆರುವುದು ಇವೆಲ್ಲ ನಿಜ ಜೀವನದ ಸತ್ಯಗಳಾದರೂ ಜೊತೆಯಲ್ಲೇ ಲಿಂಗ-ಅಭಿವೃದ್ಧಿ, ಪಿತೃ ಪ್ರಧಾನ ರಚನೆಗಳನ್ನು ಮತ್ತು ಅಧಿಕಾರ ಸಂಬಂಧಗಳನ್ನು ಬದಲಿಸುವ ಬಗ್ಗೆ ದೃಷ್ಟಿ ಹರಿಯಿಸುತ್ತದೆ. ಇದರಿಂದಾಗಿ, ಉದಾಹರಣೆಗೆ ಮಹಿಳೆಯರಿಗೆ ಭೂಮಿಯ ಮತ್ತು ಉತ್ತರಾಧಿಕಾರದ ಹಕ್ಕು; ಅಥವಾ ಅಭಿವೃದ್ಧಿ ನೀತಿಯ ವ್ಯಾಪ್ತಿಯ ಒಳಗೆ ಬರುವುದು, ಬರಿಯ ಔಪಚಾರಿಕವಾದ ರಾಜಕೀಯ ಸಂಸ್ಥೆಗಳಲ್ಲಿ ಬದಲಾವಣೆಗಳನ್ನು ತರುವುದಲ್ಲ ಆದರೆ ನಡವಳಿಕೆ ಮತ್ತು ನಡವಳಿಕೆ ಸಂಹಿತೆ ಮೂಲಕ ಶಕ್ತಿಶಾಲಿ ಅನೌಪಚಾರಿಕವಾದ ಸಮುದಾಯ, ಜಾತಿ, ಕುಟುಂಬ, ಮದುವೆ, ಇತ್ಯಾದಿ ದೈನಂದಿನ ಜೀವನವನ್ನು ಮುನ್ನಡೆಸುವ ಸಂಸ್ಥೆಗಳಲ್ಲಿ ಬದಲಾವಣೆಗಳನ್ನು ತಂದು ಅಸಮಾನತೆ ಮತ್ತು ಅಡಿಯಾಳುತನದಲ್ಲಿ ಹೆಣಗುತ್ತಿರುವ ಮಹಿಳೆಯರನ್ನು 'ಸಹಜ' ಸ್ಥಿತಿಗೆ ತರುವ ಅಗತ್ಯ, ಇತ್ಯಾದಿ ಪ್ರಶ್ನೆಗಳನ್ನು ಜೀವಂತವಾಗಿರಿಸಬೇಕಾಗಿದೆ (ಜೈನ್, 2007; ಕೆಲ್ಕರ್, 2005). ಲಿಂಗ-ಸಂವೇದಿ ನೀತಿ ಸೋಗಿನಲ್ಲಿ 'ಲಿಂಗ ಆದರ್ಶಗಳು' ಹೇಗೆ ಕೆಲಸ ನಡೆಸುತ್ತವೆ ಎಂಬುದಕ್ಕೆ ಲಿಂಗ ಸಂಬಂಧಿತ ಅಸಮಾನತೆ ಸೂಚಕ (ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ-ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ) ಒಂದು ಸ್ಪಷ್ಟ ನಿದರ್ಶನ.

**ಕೋಷ್ಟಕ 8.1: ಜಾಗತಿಕವಾಗಿ ಮತ್ತು ಕರ್ನಾಟಕದ ಮಾನವ ಅಭಿವೃದ್ಧಿ ವರದಿಗಳಲ್ಲಿ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ**

| ಆಯಾಮಗಳು | ಜಾಗತಿಕ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಸೂಚಕಗಳು | ಕರ್ನಾಟಕ ಡಿಮಾನವ ಅಭಿವೃದ್ಧಿ ವರದಿ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಸೂಚಕಗಳು |
|---|---|---|
| ಸಂತಾನೋತ್ಪತ್ತಿ ಆರೋಗ್ಯ | ತಾಯಂದಿರ ಮರಣ ಪ್ರಮಾಣ | ತಾಯಂದಿರ ಮರಣ ಪ್ರಮಾಣ |
| | ಹದಿಹರೆಯದವರಲ್ಲಿ ಫಲವಂತಿಕೆ ಪ್ರಮಾಣ (ಎಎಫ್‌ಆರ್) | ಸಾಂಸ್ಥಿಕ ಪ್ರಸವಗಳ ಪಾಲು |
| | | ರಕ್ತಹೀನತೆಯುಳ್ಳ ಗರ್ಭಿಣಿ ಸ್ತ್ರೀಯರ ಪಾಲು |
| ಸಬಲೀಕರಣ | ಪ್ರತಿ ಲಿಂಗದವರೂ ಸ್ಥಳೀಯ ಸಂಸತ್ತಿನಲ್ಲಿ ಹೊಂದಿರುವ ಸ್ಥಾನಗಳು | ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದ ಸ್ತ್ರೀಯರ ಮತ್ತು ಪುರುಷ ಪ್ರತಿನಿಧಿಗಳ ಪಾಲು |
| | ದ್ವಿತೀಯ ಅಥವಾ ಉನ್ನತಶಿಕ್ಷಣ ಪಡೆಯುವುದು | 0–6 ವರ್ಷಗಳ ವಯೋಮಿತಿಯಲ್ಲಿರುವ ಮಕ್ಕಳಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳ ಪಾಲು |
| | | ಸಾಕ್ಷರತೆಯಲ್ಲಿ ಸ್ತ್ರೀ ಮತ್ತು ಪುರುಷರ ಪಾಲು |

| ಆಯಾಮಗಳು | ಜಾಗತಿಕ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಸೂಚಕಗಳು | ಕರ್ನಾಟಕ ಡಿಮಾನವ ಅಭಿವೃದ್ಧಿ ವರದಿ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಸೂಚಕಗಳು |
|---|---|---|
| ಕಾರ್ಮಿಕ ಮಾರುಕಟ್ಟೆ | ಪ್ರತಿ ಲಿಂಗದವರೂ ಕಾರ್ಮಿಕ ಮಾರುಕಟ್ಟೆಯಲ್ಲಿ ಭಾಗವಹಿಸುವ ಪ್ರಮಾಣ | ಸ್ತ್ರೀ ಮತ್ತು ಪುರುಷರು ಕೆಲಸದಲ್ಲಿ ಭಾಗಿಯಾಗುವ ಪ್ರಮಾಣ |
| | | ಕೃಷಿಯೇತರ ಕ್ಷೇತ್ರದಲ್ಲಿ ಸ್ತ್ರೀ ಮತ್ತು ಪುರುಷ ಕಾರ್ಮಿಕರ ಪಾಲು |
| | | ಸ್ತ್ರೀ ಮತ್ತು ಪುರುಷರ ಕೃಷಿ ಕೂಲಿ ಪ್ರಮಾಣ |

ಮೂಲ: ಯುಎನ್‌ಡಿಪಿ ಮಾನವ ಅಭಿವೃದ್ಧಿ ವರದಿ ತರಬೇತಿ ಕೈಪಿಡಿ

ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕದ ಆರೋಗ್ಯ ಒಳ-ಅಂಶ ವಿಶೇಷವಾಗಿ ಸ್ತ್ರೀಯರ ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆಯೇ ನೋಡುತ್ತದೆ. ಜಾಗತಿಕ ಮಟ್ಟದಲ್ಲಿ ಈ ಒಳ-ಅಂಶಕ್ಕೆ ಸಂಬಂಧಿಸಿದ ಸೂಚಕಗಳೆಂದರೆ ಮಾತೃತ್ವ ಮರಣ ಪ್ರಮಾಣ ಮತ್ತು ಹದಿಹರೆಯದವರಲ್ಲಿ ಫಲವಂತಿಕೆ ಪ್ರಮಾಣ. ತಾಯಂದಿರ ಮರಣ ಪ್ರಮಾಣ ಕಡಿಮೆ ಇದ್ದರೆ ಗರ್ಭಿಣಿಯರಿಗೆ ಗುಣಮಟ್ಟದ ಆರೋಗ್ಯ ಸೇವೆಗಳು ಲಭಿಸುತ್ತಿವೆ ಎಂದು ಅರ್ಥ. ಎಎಫ್‌ಆರ್ ಹೆಚ್ಚಿದ್ದರೆ, ಅಂದರೆ ಬೇಗ ಮಕ್ಕಳನ್ನು ಹೆರುವುದು ತಾಯಂದಿರಿಗೆ ಮತ್ತು ಶಿಶುಗಳಿಗೆ ಆರೋಗ್ಯ ಅಪಾಯಗಳನ್ನು ಜೊತೆಗೆ ಉನ್ನತ ಶಿಕ್ಷಣ ಸಿಗದಿರುವ ಅಪಾಯವನ್ನೂ ಸೂಚಿಸುತ್ತದೆ. ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕಗಳು ಯುಎನ್‌ಡಿಪಿ ಪತ್ರಗಳು ಹೇಳಿರುವಂತೆ ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ ಗಮನ ಹರಿಯಿಸುತ್ತದೆ. ಸಂತಾನೋತ್ಪತ್ತಿ ಆರೋಗ್ಯ ಕಳಪೆಯಾಗಿರುವುದು ಲಿಂಗ ಸಂಬಂಧಿತ ಅಸಮಾನತೆಯಿಂದ ಆಗುವ ನಷ್ಟಕ್ಕೆ ಅತಿ ಹೆಚ್ಚು ಕಾರಣವಾಗುತ್ತದೆ. ಇದು ಎಲ್ಲ ಪ್ರದೇಶಗಳಲ್ಲೂ ಹೌದು.  ಜಿಲ್ಲೆಯ ಸಂದರ್ಭದಲ್ಲಿ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕದ ಈ ಆಯಾಮ ತಾಯಂದಿರ ಮರಣ ಪ್ರಮಾಣ, ಸಾಂಸ್ಥಿಕ ಪ್ರಸವಗಳ ಸಂಖ್ಯೆ, ಮತ್ತು ರಕ್ತಹೀನತೆಯುಳ್ಳ ಗರ್ಭಿಣಿಯರ ಪಾಲು, ಇವುಗಳನ್ನು ಪರಿಶೀಲಿಸುತ್ತದೆ. ಇವು ಮೂರಕ್ಕೂ ಸೂಚಕದಲ್ಲಿ ಸಮಾನ ತೂಕ ನೀಡಲಾಗಿದೆ. ಯುಎನ್‌ಡಿಪಿ ತರ್ಕ ಬೇರೆಯೇ ಇದ್ದರೂ ಈ ಸೂಚಕದ ಗಮನ ಸಂತಾನೋತ್ಪತ್ತಿ ಆರೋಗ್ಯದ ಮೇಲಿದೆ. ಇದು ಸ್ತ್ರೀಯ ಆರೋಗ್ಯವನ್ನು ಆಕೆ ಮಗು ಹೆರುವುದಕ್ಕೆ ಮಾತ್ರ ಸೀಮಿತಗೊಳಿಸುತ್ತದೆ. ಅದರ ಹೊರತಾಗಿ ಜೀವನ ಚಕ್ರದ ಇತರ ಪ್ರಮುಖ ಸಮಯಗಳಲ್ಲಿ ಆಕೆಗೆ ಬೇರೆ ಆರೋಗ್ಯ ರಕ್ಷಣೆಯನ್ನು ಒದಗಿಸುವುದಿಲ್ಲ. ಸೂಚಕದ ಸಬಲೀಕರಣದ ಅಂಶವು ಇವುಗಳನ್ನು ಪರಿಶೀಲಿಸುತ್ತದೆ: ಮಗು ಲಿಂಗ ಅನುಪಾತ; ಮಹಿಳೆ ಮತ್ತು ಪುರುಷರ ಸಾಕ್ಷರತಾ ಪ್ರಮಾಣಗಳು ಮತ್ತು ಜಿಲ್ಲೆಯ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳ ಪಾಲು. ಮಗು ಲಿಂಗ ಅನುಪಾತವನ್ನು 0-6 ವಯಸ್ಸಿನ 1000 ಗಂಡು ಮಕ್ಕಳಿಗೆ ಇರುವ ಹೆಣ್ಣು ಮಕ್ಕಳ ಸಂಖ್ಯೆಯ ಮೇಲೆ ಲೆಕ್ಕಮಾಡಲಾಗುತ್ತದೆ. ಇದೊಂದು ಗಣನೀಯವಾದ ಸೂಚಕ, ಹೆಣ್ಣು ಭ್ರೂಣ ಹತ್ಯೆ ಮತ್ತು ಶಿಶುಹತ್ಯೆ ಪದ್ಧತಿಗಳನ್ನು ಗಮನದಲ್ಲಿಟ್ಟುಕೊಂಡಾಗ. ಮಹಿಳೆ ಮತ್ತು ಪುರುಷರ ಸಾಕ್ಷರತಾ ಪ್ರಮಾಣಗಳು ಬಹುಶಃ ಒಂದು ಪ್ರಮುಖ ಅಂಶ. ಇದನ್ನು 7 ವರ್ಷದ ಮೇಲಿನವರಿಗೆ ಮಾತ್ರ ಲೆಕ್ಕ ಮಾಡಲಾಗುತ್ತದೆ. ಈ ಒಳ-ಅಂಶದ ಮೂರನೇ ಸೂಚಕವು ಸರ್ಕಾರದ ವಿವಿಧ ಹಂತಗಳಿಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳ ಪಾಲನ್ನು ನೋಡುತ್ತದೆ-ಮಾನವ ಅಭಿವೃದ್ಧಿ ವರದಿ, ಗ್ರಾಮ ಪಂಚಾಯತಿಗಳು. ತಾಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿ. ಮೊದಲ ಹೆಜ್ಜೆಯಾಗಿ ಪ್ರಾತಿನಿಧ್ಯ ಮುಖ್ಯವಾದರೂ ಅದರಿಂದ ಮಹಿಳೆಯರಿಗೆ ಕರ್ತೃತ್ವ ಸಿಗುವುದು ಖಚಿತವಲ್ಲ.

ಈ ಒಳ-ಅಂಶದ ಮೂರನೇ ಪ್ರಧಾನ ಅಂಶ ಉದ್ಯೋಗಕ್ಕೆ ಸಂಬಂಧಿಸಿದೆ. ಇದು ಪುರುಷ ಮತ್ತು ಮಹಿಳಾ ಕಾರ್ಮಿಕರು ಕೆಲಸದಲ್ಲಿ ಭಾಗವಹಿಸುವ ಪ್ರಮಾಣಗಳು, ಸರಾಸರಿ ಕೂಲಿ ಪ್ರಮಾಣಗಳು ಮತ್ತು ಕೃಷಿಯೇತರ ಕ್ಷೇತ್ರದಲ್ಲಿ ಭಾಗವಹಿಸುವಿಕೆಯನ್ನು ಹೋಲಿಸುತ್ತದೆ. ಈ ಸೂಚಕಗಳನ್ನು ಮಹಿಳೆಯರ ಉದ್ಯೋಗದ ಪ್ರಾತಿನಿಧ್ಯ ಎಂಬಂತೆ ನೋಡಲಾಗುತ್ತಿದೆ ಮತ್ತು ಮತ್ತು ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ ನ ಆದಾಯ ಅಂಶಕ್ಕಿಂತ ಸ್ವಲ್ಪ ಸುಧಾರಿಸಿದೆ.  ಏಕೆಂದರೆ ಇದರಲ್ಲಿ ಮಹಿಳೆಯರು ಕೆಲಸದಲ್ಲಿ ಭಾಗವಹಿಸುವುದನ್ನು ಪ್ರತಿನಿಧಿಸಲಾಗುತ್ತದೆ. ಹೇಗೆಂದರೆ, ಇಲ್ಲಿ ಕೂಲಿ ಪ್ರಮಾಣಗಳಲ್ಲಿನ ಲಿಂಗ ತಾರತಮ್ಯವನ್ನು ಪರಿಗಣಿಸಲಾಗುತ್ತದೆ. ಆದರೂ ಇದು ಕೃಷಿ ಮತ್ತು ಔಪಚಾರಿಕ ಕ್ಷೇತ್ರಗಳಲ್ಲಿನ ಕೆಲಸಗಳಲ್ಲಿ ಭಾಗವಹಿಸುವುದನ್ನು ಅಲಕ್ಷಿಸುತ್ತದೆ, ವಾಸ್ತವವಾಗಿ ಇವುಗಳಲ್ಲೇ ಮಹಿಳೆಯರು ಭಾಗವಹಿಸುವುದು ಅಧಿಕ. ಈ ಚರ್ಚೆಯ ಬೆಳಕಿನಲ್ಲಿ ಮುಂದಿನ ಅಧ್ಯಾಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವಾರು ಮುಖ್ಯ ಅಂಕಿಗಳು ಮತ್ತು ಸೂಚಕಗಳನ್ನು ಪರಿಶೀಲಿಸೋಣ.

## 8.3. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ

ಯುಎನ್‌ಡಿಪಿ ಪ್ರಕಾರ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ 'ಲಿಂಗ ಸಂಬಂಧಿತ ಅಸಮಾನತೆಯಿಂದ ಸಾಧನೆ ನಷ್ಟ'ವನ್ನು ಮೂರು ಆಯಾಮಗಳನ್ನು ಬಳಸಿ ಚಿತ್ರಿಸುತ್ತದೆ. ರಾಷ್ಟ್ರೀಯ ತಂಡಗಳಿಗೆ ಜಾಗತಿಕ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಪದ್ಧತಿಗಳನ್ನು ಅಳವಡಿಸಿಕೊಂಡು ರಾಷ್ಟ್ರೀಯ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಸೃಷ್ಟಿಸಲು ಪ್ರೋತ್ಸಾಹಿಸಲಾಗುತ್ತಿದೆ. ಅಂತಾರಾಷ್ಟ್ರೀಯ ಹೋಲಿಕೆಗಳಿಗೆ ಲಭ್ಯವಿರದ ಅಥವಾ ಅವರವರ ದೇಶಕ್ಕೆ ನಿರ್ದಿಷ್ಟವಾದ ಇತರ ಸೂಚಕಗಳನ್ನೂ ಬಳಸಲು ಅವುಗಳನ್ನು ಆಗ್ರಹಿಸಲಾಗುತ್ತಿದೆ. ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಶ್ರೇಣಿಯ ಮೌಲ್ಯ 0-1 ರವರೆಗೆ. 0 = 0 ಅಸಮಾನತೆ. ಅಂದರೆ, ಮಹಿಳೆಯರು ಹೆಚ್ಚುಕಡಿಮೆ ಪುರುಷರಿಗೆ ಸಮಾನರು. 1 = 100ಶೇ. ಅಸಮಾನತೆ.

ಈಗಾಗಲೇ ಚರ್ಚಿಸಿದಂತೆ ಜಿಲ್ಲೆಯಲ್ಲಿ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಸಂತಾನೋತ್ಪತ್ತಿ ಆರೋಗ್ಯದ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ - ತಾಯಂದಿರ ಮರಣ ಪ್ರಮಾಣಗಳ ಮೂರು ಅಂಶಗಳನ್ನು, ಸಾಂಸ್ಥಿಕ ಹೆರಿಗೆಗಳ ಸಂಖ್ಯೆಯನ್ನು ಮತ್ತು ರಕ್ತಹೀನತೆಯುಳ್ಳ ಗರ್ಭಿಣಿಯರ ಪಾಲು. ಇವುಗಳಲ್ಲಿ ಕೊನೆಯದನ್ನು ಮಾಪನ ಮಾಡುವುದು ಕಷ್ಟ. ನಾಲ್ಕೂ ತಾಲೂಕುಗಳಲ್ಲಿ ಸಾಂಸ್ಥಿಕ ಹೆರಿಗೆ ಅನುಪಾತ ಹೆಚ್ಚು ಕಡಿಮೆ ಸಮನಾಗಿದೆ. ನಾಲ್ಕರಲ್ಲಿ ಹೊಸಕೋಟೆ ತಾಲೂಕು ಅತ್ಯಂತ ಕನಿಷ್ಠ (ಆದರೆ ಬೆಚ್ಚುವಷ್ಟು ಕಡಿಮೆಯಲ್ಲ). ಭಾರದತ ಗುರಿ, 2015ರ ವೇಳೆಗೆ ತಾಯಂದಿರ ಮರಣ ಪ್ರಮಾಣ ಅನ್ನು  109 / 1 ಲಕ್ಷ ಜೀವ ಜನನಗಳಿಗೆ ತರುವುದು. ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಗುರಿಯಿಂದ ಸ್ವಲ್ಪವೇ ದೂರವಿದೆ. ನೆಲಮಂಗಲದ ತಾಯಂದಿರ ಮರಣ ಪ್ರಮಾಣ ಬಹಳ ಹೆಚ್ಚಿದೆ,ಅಂದರೆ 150 ಇದ್ದರೆ, ದೇವನಹಳ್ಳಿ ತಾಲೂಕು 126 ಹೊಂದಿದೆ. ಇದರಿಂದ ಒಟ್ಟಾರೆ ಜಿಲ್ಲೆಯ ಸಾಧನೆಗೂ ಹಿನ್ನಡೆ. ಉಳಿದ ಎರಡು ತಾಲೂಕುಗಳು ರಾಷ್ಟ್ರೀಯ ಮಟ್ಟದ ಸಾಧನೆ ಮಾಡಿವೆ.

ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕದಲ್ಲಿನ ಸಬಲೀಕರಣ ಆಯಾಮದ ಅಡಿಯಲ್ಲಿನ ಸೂಚಕಗಳು 0-6 ವಯೋಮಿತಿಯಲ್ಲಿರುವ ಮಕ್ಕಳ ಸಂಖ್ಯೆಗಳನ್ನು, ಮಹಿಳೆಯರ ಮತ್ತು ಪುರುಷರ ಸಾಕ್ಷರತಾ ಪ್ರಮಾಣಗಳನ್ನು ಮತ್ತು, ಮಹಿಳೆಯರು ಮತ್ತು ಪುರುಷರು ತೆರೆದುಕೊಂಡಿರುವ ಪ್ರಾತಿನಿಧಿಕ ರಾಜಕೀಯ ಅವಕಾಶಗಳನ್ನು ಹೋಲಿಸುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಈ ಮೂರೂ ಅಂಶಗಳ ಬಗ್ಗೆ ವಿಶೇಷ ಪ್ರಯತ್ನಗಳನ್ನು ಮಾಡುತ್ತಿವೆ. ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಈ ಅಂಶಗಳನ್ನು ಬಹಳ ನಿಕಟವಾಗಿ ಸ್ಥಳೀಯ ಆಡಳಿತದ ರಚನೆಗಳಿಗೆ ಹೆಣೆಯಲಾಗಿದೆ. ಸಾಕ್ಷರತಾ ಪ್ರಮಾಣಗಳು, ಎಷ್ಟು ಜನ ಮಹಿಳೆಯರು ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಸಾಧ್ಯವಾಗಿದೆ ಎಂಬುದನ್ನು ಸೂಚಿಸುತ್ತವೆ.

**ಕೋಷ್ಟಕ 8.2: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ (2011).**

| ತಾಲೂಕು | ದೇವನಹಳ್ಳಿ | ದೊಡ್ಡಬಳ್ಳಾಪುರ | ಹೊಸಕೋಟೆ | ನೆಲಮಂಗಲ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
|---|---|---|---|---|---|
| ತಾಯಂದಿರ ಮರಣ ಪ್ರಮಾಣ | 126.00 | 101.00 | 102.00 | 150.00 | 119.75 |
| ಸಾಂಸ್ಥಿಕ ಹೆರಿಗೆಗಳ ಶೇ. (ID) | 99.65 | 97.99 | 91.43 | 98.00 | 96.94 |
| ಗರ್ಭಿಣಿಯರಲ್ಲಿ ರಕ್ತಹೀನತೆ ಶೇ. | 21.63 | 57.06 | 63.25 | 27.21 | 42.29 |
| ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳ ಪಾಲು ಶೇ. | 46.06 | 45.92 | 43.51 | 43.42 | 44.76 |
| ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದ ಪುರುಷ ಪ್ರತಿನಿಧಿಗಳ ಪಾಲು ಶೇ. | 53.94 | 54.08 | 56.49 | 56.58 | 55.24 |
| 0–6 ವಯಸ್ಸಿನ ಜನಸಂಖ್ಯೆಯಲ್ಲಿ (ಹೆಣ್ಣು ಮಕ್ಕಳು) ಪಾಲು ಶೇ. | 49.24 | 48.91 | 48.20 | 48.61 | 48.71 |
| 0–6 ವಯಸ್ಸಿನ ಜನಸಂಖ್ಯೆಯಲ್ಲಿ ಪುರುಷ (ಗಂಡು ಮಕ್ಕಳು) ಪಾಲು ಶೇ. | 50.76 | 51.09 | 51.80 | 51.39 | 51.29 |
| ಮಹಿಳಾ ಸಾಕ್ಷರತಾ ಪ್ರಮಾಣ | 69.24 | 70.44 | 71.01 | 71.79 | 70.63 |
| ಪುರುಷರ ಸಾಕ್ಷರತಾ ಪ್ರಮಾಣ | 83.84 | 85.18 | 84.45 | 85.76 | 84.82 |
| ಮಹಿಳೆ ಕೆಲಸದಲ್ಲಿ ಭಾಗವಹಿಸುವ ಪ್ರಮಾಣ | 36.94 | 38.64 | 29.08 | 28.88 | 33.61 |
| ಪುರುಷ ಕೆಲಸದಲ್ಲಿ ಭಾಗವಹಿಸುವ ಪ್ರಮಾಣ | 69.45 | 70.08 | 69.29 | 68.76 | 69.45 |
| ಒಟ್ಟು ಮಹಿಳಾ ಕಾರ್ಮಿಕರಲ್ಲಿ ಕೃಷಿಯೇತರ ಕಾರ್ಮಿಕರು ಶೇ. | 41.00 | 43.09 | 46.02 | 53.56 | 45.23 |
| ಒಟ್ಟು ಮಹಿಳಾ ಕಾರ್ಮಿಕರಲ್ಲಿ ಕೃಷಿಯೇತರ ಕಾರ್ಮಿಕರು ಶೇ. | 50.31 | 59.13 | 58.09 | 63.58 | 57.91 |
| ಮಹಿಳೆಯ ಕೂಲಿ ದರ | 150.00 | 135.00 | 200.00 | 175.00 | 175.00 |
| ಪುರುಷನ ಕೂಲಿ ದರ | 250.00 | 200.00 | 300.00 | 300.00 | 275.00 |
| GII | 0.071 | 0.076 | 0.092 | 0.085 | 0.083 |
| **ಸ್ಥಾನ (ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ)** | 1 | 2 | 4 | 3 | |

ಮೂಲ: ಸಿಬಿಪಿಎಸ್ ಸಂಕಲನ ಆರೋಗ್ಯ ಇಲಾಖೆ ಮತ್ತು ಜನಗಣತಿ ಆಧರಿಸಿ

ಮಹಿಳಾ ಸಾಕ್ಷರತಾ ಪ್ರಮಾಣ ಹೆಚ್ಚಿದ್ದರೆ ಮಹಿಳೆಯರಿಗೆ ಉನ್ನತ ಶಿಕ್ಷಣ/ಸಾಂಪ್ರದಾಯಿಕ ಉದ್ಯೋಗಗಳು ಲಭಿಸುವ ಅವಕಾಶಗಳಿವೆ ಎಂದು ಅರ್ಥವಾಗುತ್ತದೆ. ಮತ್ತೂ, ಸುಶಿಕ್ಷಿತ ಮಹಿಳೆಯರ ಫಲವಂತಿಕೆ ಪ್ರಮಾಣಗಳು ಜಾಗತಿಕವಾಗಿ ಕಡಿಮೆಯಾಗುವ ನಿರೀಕ್ಷೆಯಿದೆ. ಅಖಿಲ ಭಾರತದಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರ ಸರಾಸರಿಗೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳ ಅತಿ ಹೆಚ್ಚು ಪ್ರಮಾಣ (ಶೇ.44.76) ದಾಖಲಿಸಿದೆ. ಸಾಂಸ್ಥಿಕಗೊಳಿಸಿದ ನಿರ್ಣಯ-ತೆಗೆದುಕೊಳ್ಳುವ ಕಣವಾಗಿ ರಾಜಕೀಯದಲ್ಲಿ ಯಾವಾಗಲೂ ಪುರುಷರದ್ದೇ ಮೇಲುಗೈ. ಇದರಿಂದಾಗಿ ಮಹಿಳೆಯರು ಭಾಗವಹಿಸುವುದು ಕಷ್ಟ. ಆದ್ದರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಈ ಐತಿಹಾಸಿಕ ಪೂರ್ವಾಗ್ರಹವನ್ನು ಮೆಟ್ಟಿನಿಲ್ಲಲು ಮತ್ತು ಕನಿಷ್ಠ ಭಾವನಾತ್ಮಕವಾಗಿಯಾದರೂ ರಾಷ್ಟ್ರ ರಾಜಕಾರಣದಲ್ಲಿ ಭಾಗವಹಿಸಲು ಅಗತ್ಯವಾದ ವಾತಾವರಣವನ್ನು ಒದಗಿಸುತ್ತದೆ ಎಂಬುದು ಗಮನಾರ್ಹ (8.8 ಅಧ್ಯಾಯದಲ್ಲಿ ಹೆಚ್ಚು ವಿವರವಾಗಿ ಚರ್ಚಿಸಲಾಗಿದೆ). ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ನಲ್ಲಿ ಉದ್ಯೋಗದ ಒಳ-ಅಂಶದಲ್ಲಿ ಇರುವ ಸೂಚಕಗಳು: ಕೆಲಸದಲ್ಲಿ ಭಾಗವಹಿಸುವ ಪ್ರಮಾಣಗಳು (ಅಮುಖ್ಯ ಮತ್ತು ಮುಖ್ಯ ಶ್ರಮದಲ್ಲಿ ನಿರತರಾಗಿರುವ ಮಹಿಳೆಯರು ಮತ್ತು ಪುರುಷರು), ಕೃಷಿಯೇತರ ಕ್ಷೇತ್ರದಲ್ಲಿ ನಿರತರಾದ ಜನಸಂಖ್ಯೆಯ ಪ್ರಮಾಣ. ಮತ್ತು ಎರಡೂ ಲಿಂಗಗಳವರ ಸರಾಸರಿ ಕೂಲಿ ಪ್ರಮಾಣಗಳು. ಈ ಸೂಚಕದ ನೆಲೆಯಲ್ಲಿ ಎರಡೂ ಲಿಂಗಗಳ ನಡುವೆ ಭಾರಿ ಅಂತರವಿದೆ; ಜಿಲ್ಲೆಯಲ್ಲಿ ಮಹಿಳೆಯರ ಸರಾಸರಿ 0.42 ಇದ್ದರೆ ಪುರುಷರದ್ದು 0.63. ಮಹಿಳೆಯರು ಕೆಲಸದಲ್ಲಿ ಭಾಗವಹಿಸುವ ಪ್ರಮಾಣ ಕೇವಲ ಪುರುಷರ ಮೂರನೇ ಎರಡರಷ್ಟಿದೆ. ಮತ್ತೂ ನೆಲಮಂಗಲದಲ್ಲಿ ಎರಡೂ ಲಿಂಗಗಳ ಕೆಲಸದಲ್ಲಿ ಭಾಗವಹಿಸುವ ಪ್ರಮಾಣಗಳ ನಡುವಿನ ಅಂತರ ಸರಿಸುಮಾರು ಶೇ 30 ರಷ್ಟಿದೆ.

ಜಿಲ್ಲೆಯಲ್ಲಿ, ಪುರುಷರಿಗಿಂತ ಮಹಿಳೆಯರಿಗೆ ಕಡಿಮೆ ಕೂಲಿ ನೀಡಲಾಗುತ್ತದೆ. ಎಲ್ಲ ತಾಲೂಕುಗಳಲ್ಲೂ ಮಹಿಳೆಯರಿಗೆ ಕೊಡುವ ಸರಾಸರಿ ಕೂಲಿ ಸುಮಾರು, ಪುರುಷರ ಕೂಲಿದ 2/3 ರಷ್ಟಿರುತ್ತದೆ. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಮಹಿಳೆಯರ ಕೂಲಿ ಪುರುಷರ ಶೇ 75.ರಷ್ಟು ಕೂಲಿಯಷ್ಟಿರುತ್ತದೆ ಮತ್ತು ಕುಟುಂಬದ ಒಟ್ಟು ಆದಾಯದ ಕಾಲು ಭಾಗ ಮಾತ್ರ. ಇದಕ್ಕೆ ಕಾರಣ ಮಹಿಳೆಯರು ಹೆಚ್ಚಾಗಿ ಅನೌಪಚಾರಿಕ ಕ್ಷೇತ್ರಗಳಲ್ಲಿ ನಿರತರಾಗಿರುವುದು, ಇವು ಕಾರ್ಮಿಕ ಕಾನೂನುಗಳ ಅಡಿಯಲ್ಲಿ ಬರುವುದಿಲ್ಲ. ಹಾಗಾಗಿ ಶೋಷಣೆ ನಡೆಯುತ್ತದೆ. ಜಿಲ್ಲೆಯ ಒಟ್ಟಾರೆ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ 1ಕ್ಕಿಂತ ಎಗೇ ಹತ್ತಿರವಿದೆ. ಅಂದರೆ, ಕೆಲಸದಲ್ಲಿ ಭಾಗವಹಿಸುವ ಸಂಖ್ಯೆ ಮತ್ತು ಕೂಲಿಗಳು ಕಡಿಮೆ ಇದ್ದಾಗ್ಯೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಇತರ ಅಂಶಗಳಲ್ಲಿ ಲಿಂಗ ಸಮಾನತೆ ಸಾಧಿಸುವಲ್ಲಿ ಪರವಾಗಿಲ್ಲವಾಗಿದೆ. ಆದರೂ ಪುರುಷರೊಂದಿಗಿನ ಸಮಾನತೆಯ 'ಆಚೆಗೆ ಹೋಗಬೇಕಿರುವ' ಅಗತ್ಯವಿರುವದರಿಂದ ಅಭಿವೃದ್ಧಿ ಪ್ರಕ್ರಿಯೆಗಳಿಂದ ನೆರವುಪಡೆಯುವ ಲಿಂಗ ಸಬಲೀಕರಣವನ್ನು ಚಿತ್ರಿಸಲು ಇನ್ನೂ ಕೆಲವಾರು ಸಂಗತಿಗಳು ಮತ್ತು ಅಂಕಿಅಂಶಗಳನ್ನೂ ಬಳಸಿಕೊಳ್ಳಬೇಕಿದೆ.

**ಕೋಷ್ಟಕ 8.3: ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕದ ವೈಯಕ್ತಿಕ ಅಂಶಗಳ ಸೂಚಕಗಳು**

| ವೈಯಕ್ತಿಕ ಸೂಚಕಗಳು | ದೇವನಹಳ್ಳಿ | ದೊಡ್ಡಬಳ್ಳಾಪುರ | ಹೊಸಕೋಟೆ | ನೆಲಮಂಗಲ |
|---|---|---|---|---|
| ಮಹಿಳೆಯ ಆರೋಗ್ಯ ಸೂಚಕ | 0.40 | 0.35 | 0.32 | 0.36 |
| ಪುರುಷನ ಆರೋಗ್ಯ ಸೂಚಕ | 1.00 | 1.00 | 1.00 | 1.00 |
| ಮಹಿಳೆಯ ಸಬಲೀಕರಣ | 0.54 | 0.54 | 0.53 | 0.53 |
| ಪುರುಷನ ಸಬಲೀಕರಣ | 0.61 | 0.62 | 0.63 | 0.63 |
| ಮಹಿಳೆಯ ಶ್ರಮದ ಮಾರುಕಟ್ಟೆ | 0.38 | 0.31 | 0.51 | 0.47 |
| ಪುರುಷನ ಶ್ರಮದ ಮಾರುಕಟ್ಟೆ | 0.59 | 0.41 | 0.74 | 0.76 |

ಮೂಲ: ಸಿಬಿಪಿಎಸ್ ಸಂಕಲನ ಆರೋಗ್ಯ ಇಲಾಖೆ ಮತ್ತು ಜನಗಣತಿ ಆಧರಿಸಿ

## 8.4 . ಮಹಿಳೆಯರ ಕೆಲಸದ ಕಡೆಗಣಿಸುವಿಕೆ

ಮಹಿಳೆಯರು, ಅದರಲ್ಲೂ ಬಡ ಗ್ರಾಮೀಣ ಮಹಿಳೆಯರು ಮತ್ತು ಹೆಣ್ಣುಮಕ್ಕಳು ಮಾಡುವ 'ಆರೈಕೆ ಕೆಲಸ' (ಸ್ವಚ್ಛಗೊಳಿಸುವುದು, ಅಡುಗೆ, ಕುಟುಂಬದ ಪೀಳಿಗೆಗಳ ಆರೈಕೆ, ನೀರು ಸೌದೆ ತರುವುದು, ಇತ್ಯಾದಿ.) ಅವರ ಇಡೀ ಸಮಯ ಮತ್ತು ಶಕ್ತಿಯನ್ನು ವ್ಯಯಿಸುತ್ತದೆ. ಇದರ ಜೊತೆಗೆ ಅವರು ಹೊರಗೆ ದುಡಿದಿದ್ದರೆ ಅಥವಾ ಕಲಿತಿದ್ದರೆ ಬರುತ್ತಿದ್ದ ಇತರ ಅವಕಾಶಗಳ ನಷ್ಟದ ವೆಚ್ಚ (ಅಪಾರ್ಚುನಿಟಿ ಕಾಸ್ಟ್), ಎಲ್ಲವನ್ನೂ ಮುಖ್ಯವಾಗಿ ಪರಿಗಣಿಸಬೇಕು, ಮಹಿಳೆಯರ ಯೋಗಕ್ಷೇಮವನ್ನು ನಿರ್ಧರಿಸಲು. ಇಲ್ಲಿ ನೀರಿನ ಸೌಲಭ್ಯತೆ ಇತ್ಯಾದಿಗಳನ್ನೂ ಗಮನಿಸಬೇಕು. ಕೋಷ್ಟಕ 3, ಇಡೀ ರಾಜ್ಯಕ್ಕೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮನೆಗಳಿಗೆ ನೀರು ಸಿಗುವುದು ಕಷ್ಟ ಎಂದು ತಿಳಿಸುತ್ತದೆ. ಈ ಜಿಲ್ಲೆಯ ಒಳಗೂ ಗ್ರಾಮೀಣ-ನಗರ ಭಾಗಗಳ ನಡುವಣ ಅಂತರ ಸುಮಾರು ಶೇ 50 ರಷ್ಟು ಸ್ತ್ರೀಯರೇ ಯಜಮಾನರಾಗಿರುವ ಕುಟುಂಬಗಳಲ್ಲಿ ಸುರಕ್ಷಿತ ಕುಡಿಯುವ ನೀರು ಸಿಗುವುದು ಮತ್ತಷ್ಟು ಕಷ್ಟ. ಎಲ್ಲ ತಾಲೂಕುಗಳ ಗ್ರಾಮೀಣ ಭಾಗಗಳಲ್ಲಿ ಕೇವಲ ಸುಮಾರು 1/5 ಭಾಗದಷ್ಟು ಮನೆಗಳಿಗೆ ಮಾತ್ರ ಕುಡಿಯಲು ಯೋಗ್ಯವಾದ ನೀರು ಸಿಗುತ್ತದೆ.

**ಕೋಷ್ಟಕ 8.4: ಮನೆ ಆವರಣದಲ್ಲೇ ಕುಡಿಯುವ ನೀರಿನ ಲಭ್ಯತೆ (2011–12).**

| ತಾಲೂಕು/ಜಿಲ್ಲೆ/ರಾಜ್ಯ | ಎಲ್ಲ ಕುಟುಂಬಗಳು | | | ಸ್ತ್ರೀ ಯಾಜಮಾನ್ಯದ ಕುಟುಂಬಗಳು | | |
|---|---|---|---|---|---|---|
| | ಒಟ್ಟು | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ |
| ದೇವನಹಳ್ಳಿ | 25.24 | 21.96 | 32.59 | 22.20 | 19.91 | 26.71 |
| ದೊಡ್ಡಬಳ್ಳಾಪುರ | 20.23 | 17.81 | 24.92 | 15.31 | 14.06 | 18.66 |
| ಹೊಸಕೋಟೆ | 30.17 | 25.11 | 48.02 | 23.37 | 18.81 | 42.67 |
| ನೆಲಮಂಗಲ | 31.67 | 20.71 | 68.82 | 22.35 | 15.55 | 58.64 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 26.40 | 21.37 | 39.50 | 20.15 | 16.53 | 31.80 |
| ಕರ್ನಾಟಕ | 44.46 | 26.60 | 70.87 | 39.37 | 25.58 | 64.18 |

ಮೂಲ: ಜಿಲ್ಲೆಯ ಪಕ್ಷಿನೋಟ 2011–12

ಮನೆಯಲ್ಲಿ ಸ್ವಚ್ಛವಾದ ಅಡುಗೆ ಇಂಧನವಿದ್ದರೆ ಉರುವಲು ಅಥವಾ ಬೆರಣಿಯಂತಹ ಕಡಿಮೆ ಸಾಮರ್ಥ್ಯದ ಮತ್ತು ಹೊಗೆಯುಗುಳುವ ಘನ ಇಂಧನಗಳನ್ನು ದೂರವಿಡಬಹುದು. ಜೊತೆಗೆ ಅವುಗಳನ್ನು ಸಂಗ್ರಹಿಸುವ ಸಮಯವೂ ಉಳಿತಾಯವಾಗುತ್ತದೆ. ಬಳಸುವ ಅಡುಗೆ ಇಂಧನದ ಪ್ರಮಾಣ ಮತ್ತು ಬಗೆ (ಘನ, ದ್ರವ, ಅಥವಾ ಅನಿಲ) ಕುಟುಂಬ ವ್ಯಯಿಸಲು ಇರಿಸಿಕೊಂಡ ಹಣದ ಪ್ರತಿನಿಧಿಯಾಗುತ್ತದೆ. ಕರ್ನಾಟಕವನ್ನು ಇಡಿಯಾಗಿ ಪರಿಗಣಿಸಿದಾಗ 1/3 ಮನೆಗಳಲ್ಲಿ ಸ್ವಚ್ಛವಾದ ಅಡುಗೆ ಇಂಧನದ ಸೌಲಭ್ಯವಿದೆ. ಆದರೆ ಇದು ಗ್ರಾಮೀಣ ಭಾಗಗಳಲ್ಲಿ 12.02ಶೇ. ಆದರೆ ನಗರ ಭಾಗಗಳಲ್ಲಿ 65.34ಶೇ.. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಸರಾಸರಿ ಇಡೀ ರಾಜ್ಯದ ಸರಾಸರಿಗಿಂತ ಉತ್ತಮವಾಗಿದೆ, 35+ಶೇ. ಜಿಲ್ಲೆಯ ಗ್ರಾಮೀಣ (ಶೇ.25) ಮತ್ತು ನಗರಗಳ ನಡುವಿನ ಅಂತರ (ಶೇ.62) ಹೆಚ್ಚೇ ಇದ್ದರೂ (ಸರಿಸುಮಾರು ಶೇ.40) ರಾಜ್ಯಕ್ಕೆ ಹೋಲಿಸಿದಾಗ ಸ್ವಲ್ಪ ಕಡಿಮೆಯೇ ಇದೆ. ತಾಲೂಕುಗಳಲ್ಲಿ ನೆಲಮಂಗಲದಲ್ಲಿ ಶೇ 40.ಕ್ಕೂ ಹೆಚ್ಚು ಮನೆಗಳಿಗೆ ಸ್ವಚ್ಛ ಅಡುಗೆ ಇಂಧನ ಲಭ್ಯವಿದೆ ಮತ್ತು ಗ್ರಾಮೀಣ ಮತ್ತು ನಗರಗಳ ನಡುವಿನ ಅಂತರ ಸುಮಾರು ಶೇ.. 40 ರಷ್ಟು. ಗ್ರಾಮೀಣ ದೊಡ್ಡಬಳ್ಳಾಪುರ ಈ ವಿಷಯದಲ್ಲಿ ಬಹಳ ಹಿಂದಿದೆ. 1/5 ಭಾಗಕ್ಕಿಂತ ಕಡಿಮೆ ಮನೆಗಳಿಗೆ ಸ್ವಚ್ಛ ಅಡುಗೆ ಇಂಧನ ಸಿಗುತ್ತಿದೆ. ಅದೇ ಅಲ್ಲಿನ ನಗರ ಭಾಗಗಳಲ್ಲಿ ಸುಮಾರು ಶೇ. 60 ರಷ್ಟು ಮನೆಗಳಿಗೆ ಈ ಸೌಲಭ್ಯವಿದೆ.

**ಕೋಷ್ಟಕ 8.5: ಅಡುಗೆಮನೆಯಲ್ಲಿ ಸ್ವಚ್ಛ ಅಡುಗೆ ಇಂಧನದ ಲಭ್ಯತೆ (ಎಲ್‌ಪಿಜಿ, ಬಯೋಗ್ಯಾಸ್ ಅಥವಾ ವಿದ್ಯುತ್ ಸಂಪರ್ಕ) (2011–12)**

| ತಾಲೂಕು/ಜಿಲ್ಲೆ/ರಾಜ್ಯ | ಎಲ್ಲ ಕುಟುಂಬಗಳು | | | ಸ್ತ್ರೀ ಯಾಜಮಾನ್ಯದ ಕುಟುಂಬಗಳು | | |
|---|---|---|---|---|---|---|
| | ಒಟ್ಟು | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ |
| ದೇವನಹಳ್ಳಿ | 34.65 | 27.71 | 50.24 | 27.15 | 21.85 | 37.60 |
| ದೊಡ್ಡಬಳ್ಳಾಪುರ | 32.21 | 18.44 | 58.92 | 21.70 | 12.75 | 45.68 |
| ಹೊಸಕೋಟೆ | 37.18 | 27.86 | 70.02 | 26.97 | 20.15 | 55.80 |
| ನೆಲಮಂಗಲ | 40.09 | 29.48 | 76.08 | 27.28 | 20.80 | 61.87 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 35.76 | 25.52 | 62.45 | 25.30 | 18.22 | 48.03 |
| ಕರ್ನಾಟಕ | 33.52 | 12.02 | 65.34 | 24.90 | 9.38 | 52.81 |

ಮೂಲ: ಜಿಲ್ಲೆಯ ಪಕ್ಷಿನೋಟ 2011–12

ಸುರಕ್ಷಿತವಾದ ಮತ್ತು ನಿರಂತರ ನೀರು, ವಿದ್ಯುತ್ ಸಂಪರ್ಕ ಅಥವಾ ವ್ಯವಸ್ಥಿತವಾದ ಶೌಚಾಲಯ ಸೌಲಭ್ಯಗಳು ಮನೆಯಲ್ಲಿದ್ದರೆ ಅಂತಹ ಮನೆಯನ್ನು ಮಾನವ ಹಕ್ಕುಗಳಾದ ನೀರು ಮತ್ತು ನೈರ್ಮಲ್ಯಗಳಿಗೆ ಇರುವ ಬದ್ಧತೆಯ ಪ್ರತಿನಿಧಿ ಎಂದು ತೆಗೆದುಕೊಳ್ಳಬಹುದು (Water and Sanitation-WASH); ಮತ್ತು ಇದನ್ನು ತಡೆಗಟ್ಟುವ ಮತ್ತು ಸಮುದಾಯದ ಆರೋಗ್ಯ ರಕ್ಷಣೆಗೆ ನೀಡಿರುವ ಆದ್ಯತೆ ಎಂದೂ ಪರಿಗಣಿಸಬಹುದು (ಸಾಂಕ್ರಾಮಿಕ ರೋಗಗಳನ್ನು ಹರಡದಂತೆ ಮಾಡುವ ಮೂಲಕ). ಇದು ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮಬೀರುತ್ತದೆ. ಮನೆಯ ಆವರಣದಲ್ಲೇ ಶೌಚಾಲಯ ಇರುವ ವಿಷಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಡೀ ರಾಜ್ಯಕ್ಕಿಂತ ಉತ್ತಮ, ಕೆಳಗಿನ ಕೋಷ್ಟಕವನ್ನು ನೋಡಿ. ಜಿಲ್ಲೆಯಲ್ಲಿನ ಸರಿಸುಮಾರು ಶೇ. 80 ರಷ್ಟು ಮನೆಗಳಲ್ಲಿ ಶೌಚಾಲಯವಿದೆ, ಆದರೆ ಅವು ಕೆಲಸ ಮಾಡುತ್ತಿವೆಯೋ ಇಲ್ಲವೋ ಎಂಬುದರ ಮಾಹಿತಿ ಲಭ್ಯವಿಲ್ಲ. ಜಿಲ್ಲೆಯ ಗ್ರಾಮೀಣ ಮತ್ತು ನಗರ ಭಾಗಗಳ ನಡುವಿನ ಅಂತರ ಶೇ. <20 ಅಂಕಗಳು. ಈ ವಿಚಾರದಲ್ಲಿ ನೆಲಮಂಗಲದ ಸ್ಥಿತಿ ಉತ್ತಮವಾಗಿದೆ, ಸುಮಾರು ಶೇ. 85 ರಷ್ಟು ಮನೆಗಳಲ್ಲಿ ಕಕ್ಕಸಿದೆ, ಮತ್ತು ಗ್ರಾಮೀಣ ಮತ್ತು ನಗರ ಭಾಗಗಳ ನಡುವಿನ ಅಂತರ ಸುಮಾರು ಶೇ. 15 ರಷ್ಟಿದೆ.

**ಕೋಷ್ಟಕ 8.6: ಮನೆಯ ಆವರಣದಲ್ಲೇ ಶೌಚಾಲಯದ ಸೌಲಭ್ಯವಿರುವ ಮನೆಗಳು (2011–12)**

| ತಾಲೂಕು/ಜಿಲ್ಲೆ/ರಾಜ್ಯ | ಎಲ್ಲ ಕುಟುಂಬಗಳು | | | ಸ್ತ್ರೀ ಯಾಜಮಾನ್ಯದ ಕುಟುಂಬಗಳು | | |
|---|---|---|---|---|---|---|
| | ಒಟ್ಟು | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ |
| ದೇವನಹಳ್ಳಿ | 82.91 | 81.77 | 85.49 | 76.79 | 77.10 | 76.17 |
| ದೊಡ್ಡಬಳ್ಳಾಪುರ | 76.07 | 68.54 | 90.67 | 67.47 | 61.03 | 84.71 |
| ಹೊಸಕೋಟೆ | 78.35 | 73.84 | 94.25 | 69.41 | 64.39 | 90.63 |
| ನೆಲಮಂಗಲ | 84.45 | 80.89 | 96.52 | 77.74 | 74.46 | 95.23 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆ | 79.91 | 75.52 | 91.34 | 72.29 | 68.25 | 85.25 |
| ಕರ್ನಾಟಕ | 51.21 | 28.41 | 84.93 | 45.49 | 27.53 | 77.80 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪಕ್ಷಿನೋಟ 2011–12

ಸುರಕ್ಷಿತವಾದ ಮತ್ತು ನಿರಂತರ ನೀರು, ವಿದ್ಯುತ್ ಸಂಪರ್ಕ ಅಥವಾ ವ್ಯವಸ್ಥಿತವಾದ ಶೌಚಾಲಯ ಸೌಲಭ್ಯಗಳಿಲ್ಲದಿದ್ದರೆ ಮನೆಯಲ್ಲಿ ಇರುವವರಿಗೆಲ್ಲ, ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ, ಬಹಳ ತೊಂದರೆ. ಈ ವಿಚಾರದಲ್ಲಿ ಇಡೀ ರಾಜ್ಯಕ್ಕೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಪರವಾಗಿಲ್ಲ. ಕೋಷ್ಟಕ 8.7 ಸೂಚಿಸುವಂತೆ ಅಂತಹ ಮನೆಗಳ ಸಂಖ್ಯೆ ಶೇ. 3 ರಷ್ಟು ಇದೆ ನಾಲ್ಕು ತಾಲೂಕುಗಳಲ್ಲಿ ದೊಡ್ಡಬಳ್ಳಾಪುರದಲ್ಲಿ ಇಂತಹ ಮನೆಗಳ ಸಂಖ್ಯೆ ಸ್ವಲ್ಪ ಹೆಚ್ಚಿದೆ, ಗ್ರಾಮೀಣ ಭಾಗಗಳಲ್ಲಿ ಶೇ.. 4 ರಷ್ಟು ಮಹಿಳೆಯರ ಯಾಜಮಾನ್ಯದ ಮನೆಗಳಲ್ಲಿ ಇಂತಹ ಅನಾನುಕೂಲತೆಗಳು ಸ್ವಲ್ಪ ಹೆಚ್ಚು, ದೊಡ್ಡಬಳ್ಳಾಪುರದ ಗ್ರಾಮೀಣ ಭಾಗಗಳಲ್ಲಿ ಶೇ..6 ರಷ್ಟಿದೆ.

**ಕೋಷ್ಟಕ 8.7: ಮನೆಯ ಆವರಣದಲ್ಲೇ ನೀರು, ವಿದ್ಯುತ್ ಸಂಪರ್ಕ ಮತ್ತು ಶೌಚಾಲಯದ ಸೌಲಭ್ಯಗಳಿಲ್ಲದಿರುವುದು (2011–12)**

| ತಾಲೂಕು/ಜಿಲ್ಲೆ/ರಾಜ್ಯ | ಎಲ್ಲ ಕುಟುಂಬಗಳು | | | ಸ್ತ್ರೀ ಯಾಜಮಾನ್ಯದ ಕುಟುಂಬಗಳು | | |
|---|---|---|---|---|---|---|
| | ಒಟ್ಟು | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ |
| ದೇವನಹಳ್ಳಿ | 3.24 | 3.44 | 2.79 | 5.09 | 4.64 | 5.98 |
| ದೊಡ್ಡಬಳ್ಳಾಪುರ | 3.40 | 4.10 | 2.05 | 5.89 | 6.62 | 3.95 |
| ಹೊಸಕೋಟೆ | 1.78 | 1.99 | 1.08 | 3.73 | 4.09 | 2.24 |
| ನೆಲಮಂಗಲ | 2.11 | 2.29 | 1.53 | 3.39 | 3.62 | 2.18 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 2.66 | 2.94 | 1.92 | 4.63 | 4.86 | 3.90 |
| ಕರ್ನಾಟಕ | 7.14 | 10.46 | 2.23 | 9.55 | 12.72 | 3.85 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪಕ್ಷಿನೋಟ 2011–12

ಮಹಿಳೆಯರು ಕೆಲಸದಲ್ಲಿ ಭಾಗವಹಿಸುವ ಸಂಖ್ಯೆಯತ್ತ ಗಮನ ಹರಿಸಿದರೆ, ಕೃಷಿ ಕೆಲಸಗಳಲ್ಲಿ ಮಹಿಳೆಯರ ಸಂಖ್ಯೆ, ಹೆಚ್ಚು ಕಡಿಮೆ ಪುರುಷರ ಸಂಖ್ಯೆಯಷ್ಟೇ, ಕೆಲವು ತಾಲೂಕುಗಳಲ್ಲಿ ಶೇ. 4 ಕ್ಕಿಂತ ಕಡಿಮೆ ಇದ್ದರೆ ಕೆಲವೆಡೆ ಶೇ. 10 ಕ್ಕಿಂತ ಹೆಚ್ಚಾಗಿದೆ. 2001-2011 ಅವಧಿಯಲ್ಲಿ ಮಹಿಳಾ ಕೃಷಿ ಕಾರ್ಮಿಕರ ಸಂಖ್ಯೆ ಶೇ. 45 ರಿಂದ 47ಶೇ. ಕ್ಕೆಏರಿದೆ. ಅಂತೆಯೇ ಈ ವಿಚಾರದಲ್ಲಿ ಪುರುಷರ ಸಂಖ್ಯೆ 55 ರಿಂದ 53 ಕ್ಕೆ ಇಳಿದಿದೆ. ಇದು ಮಹಿಳೆಯರ ಸಬಲೀಕರಣ ಹೌದೋ ಅಲ್ಲವೋ ಎಂಬುದನ್ನು ತಿಳಿಯಲು ಈ ಅಂಕಿಗಳನ್ನು ಮಹಿಳೆಯರು ಮಾಡುವ ಆರೈಕೆ ಕೆಲಸ ಅಥವಾ ಇನ್ಯಾವುದಾದರೂ ಕೆಲಸದ ಅವಕಾಶಗಳ ನಷ್ಟದ ವೆಚ್ಚದ ಜೊತೆಗೆ ಹೋಲಿಸಿ ನೋಡಬೇಕು. ಆದರೂ ಈ ಮೊದಲೇ ಹೇಳಿದಂತೆ ಮಾನವ ಅಭಿವೃದ್ಧಿ ವರದಿಯಂತಹ ಪ್ರಕ್ರಿಯೆಗಳು ಬಳಸಿಕೊಂಡ ಸ್ಥಳೀಯತೆ ಈ ಆಯಾಮಗಳನ್ನು ಸೆರೆಹಿಡಿಯಲು ಹೆಚ್ಚಿನ ಅವಕಾಶವನ್ನು ಹೊಂದಿವೆ ಮತ್ತು 'ಲಿಂಗ-ಅಭಿವೃದ್ಧಿ' ಸಂಬಂಧಿತ ಸೂಚಕಗಳನ್ನು ಚಿಂತನೆಗೆ ಒಡ್ಡುತ್ತವೆ ಮತ್ತು ವಿಮರ್ಶಾತ್ಮಕವಾಗಿ ಕ್ರಮಬದ್ಧವಾಗಿ ಮರು-ಪ್ರತಿಪಾದಿಸುತ್ತವೆ.

**ಕೋಷ್ಟಕ 8.8: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಲಿಂಗವಾರು ಕೃಷಿ ಕಾರ್ಮಿಕರ ಪ್ರಮಾಣ**

| ತಾಲೂಕು/ಜಿಲ್ಲೆ/ರಾಜ್ಯ | 2001 | | 2011 | |
|---|---|---|---|---|
| | ಮಹಿಳೆ | ಪುರುಷ | ಮಹಿಳೆ | ಪುರುಷ |
| ದೇವನಹಳ್ಳಿ | 55.68 | 44.32 | 53.97 | 46.03 |
| ದೊಡ್ಡಬಳ್ಳಾಪುರ | 49.04 | 50.96 | 46.80 | 53.20 |
| ಹೊಸಕೋಟೆ | 57.16 | 42.84 | 57.35 | 42.65 |
| ನೆಲಮಂಗಲ | 48.35 | 51.65 | 52.77 | 47.23 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 54.94 | 45.06 | 52.78 | 47.22 |
| ಕರ್ನಾಟಕ | 51.84 | 48.16 | 50.96 | 49.04 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ–ಅಂಶಗಳ ನೋಟ 2001–2002 ಚಿಟಿಜ 2011–2012

ಸಣ್ಣ ಮತ್ತು ಗೃಹೋದ್ಯಮಗಳಲ್ಲಿ ಮಹಿಳೆಯರ ಉಪಸ್ಥಿತಿ ಹೆಚ್ಚು ಕಡಿಮೆ ಪುರುಷರದಷ್ಟೇ ಇದೆ ಎಂದು ಈ ಕೆಳಗಿನ ಕೋಷ್ಟಕ ತೋರಿಸುತ್ತದೆ. ಕುತೂಹಲಕಾರಿಯೆಂದರೆ, 2001ರಲ್ಲಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಪುರುಷರ ಸಂಖ್ಯೆಯ ವಿಚಾರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆದ ಸರಾಸರಿ ರಾಜ್ಯ ಸರಾಸರಿಗಿಂತ ಉತ್ತಮವಾಗಿದೆ. ಆದರೆ ಮಹಿಳೆಯರ ವಿಷಯದಲ್ಲಿ ಹಾಗಿಲ್ಲ. 2011ರಲ್ಲಿ ಈ ಅಂತರ ಮತ್ತಷ್ಟು ಹಿಗ್ಗಿದೆ. ಸಣ್ಣ ಗಾತ್ರದ ಉದ್ಯಮಗಳಲ್ಲಿ ಭಾಗವಹಿಸಲು ಸ್ವಲ್ಪ ಮಟ್ಟಿನ ಕೌಶಲ, ಹೂಡಿಕೆ ಬೇಕಿದೆಯೆಂ ಪ್ರಮಾಣ ಜಿಲ್ಲೆಯಲ್ಲಿ ಈ ಕ್ಷೇತ್ರದಲ್ಲಿ ಮಹಿಳೆಯರು ಭಾಗವಹಿಸುತ್ತಿರುವುಪ್ರಮಾಣ ಬಗ್ಗೆ ಹೆಚ್ಚು ಗಮನವಿಟ್ಟು ಕಾರಣಗಳನ್ನು ಪರಿಶೀಲಿಸಬೇಕು.

**ಕೋಷ್ಟಕ 8.9: ಲಿಂಗ ಮತ್ತು ಗೃಹೋದ್ಯಮಗಳು**

| ತಾಲೂಕು/ಜಿಲ್ಲೆ/ರಾಜ್ಯ | 2001 | | 2011 | |
|---|---|---|---|---|
| | ಮಹಿಳೆ | ಪುರುಷ | ಮಹಿಳೆ | ಪುರುಷ |
| ದೇವನಹಳ್ಳಿ | 60.99 | 39.01 | 57.29 | 42.71 |
| ದೊಡ್ಡಬಳ್ಳಾಪುರ | 75.68 | 24.32 | 73.71 | 26.29 |
| ಹೊಸಕೋಟೆ | 66.05 | 33.95 | 69.44 | 30.56 |
| ನೆಲಮಂಗಲ | 55.10 | 44.90 | 70.33 | 29.67 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 59.62 | 40.38 | 70.17 | 29.83 |
| ಕರ್ನಾಟಕ | 46.36 | 53.64 | 50.80 | 49.20 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ-ಅಂಶಗಳ ನೋಟ 2001-02 ಮತ್ತು 2011-12

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕ ಮಹಿಳೆಯರ ಸಂಖ್ಯೆ ಹೆಚ್ಚು ಕಡಿಮೆ ಪುರುಷ ಕಾರ್ಮಿಕರ ಸಂಖ್ಯೆಯಷ್ಟೇ ಇದೆ ಅಥವಾ ಗೃಹೋದ್ಯಮಗಳಲ್ಲಿ ಮಹಿಳೆಯರು ಭಾಗವಹಿಸುತ್ತಿರುವ ಸಂಖ್ಯೆ ರಾಜ್ಯದ ಸರಾಸರಿಗಿಂತ ಮತ್ತು ಪುರುಷರಿಗೆ ಹೋಲಿಸಿದರೆ ಕಡಿಮೆ ಇದೆ ಎಂದು ಅಥವಾ ಅಮುಖ್ಯ ಕಾರ್ಮಿಕರಾಗಿ (ವರ್ಷದಲ್ಲಿ 6 ತಿಂಗಳಿಗಿಂತ ಕಡಿಮೆ ಅವಧಿ ಕೆಲಸ ಸಿಗುವಂತಹ) ದುಡಿಯುವ ಮಹಿಳೆಯರ ಸಂಖ್ಯೆ ಗಣನೀಯವಾಗಿದೆ, ಎಂದೆಲ್ಲ ಸಂಖ್ಯೆಗಳು ಸೂಚಿಸುತ್ತಿದ್ದರೂ 2001ರಿಂದ 2011 ಅವಧಿಯಲ್ಲಿ ಈ ಪ್ರವೃತ್ತಿ ಇಳಿಮುಖವಾಗಿದೆ ಎಂದು ತೋರಿಸುತ್ತದೆ. ಇದೇ ದಶಕದಲ್ಲಿ ವಿವಿಧ ತಾಲೂಕುಗಳಲ್ಲಿ ಪುರುಷ ಅಮುಖ್ಯ ಕಾರ್ಮಿಕರ ಸಂಖ್ಯೆ 10-20ಶೇ. ಅಂಕಗಳಷ್ಟು ಹೆಚ್ಚಿರುವುದು ಹೆಚ್ಚು ಕೆಲಸಗಳು ಔಪಚಾರಿಕವಾಗಿವೆ ಎಂಬುದನ್ನು ತೋರಿಸುತ್ತದೆ.

**ಕೋಷ್ಟಕ 8.10: ಲಿಂಗ ಮತ್ತು ಅಮುಖ್ಯ ಕಾರ್ಮಿಕರು**

| ತಾಲೂಕು/ಜಿಲ್ಲೆ/ರಾಜ್ಯ | 2001 | | 2011 | |
|---|---|---|---|---|
| | ಮಹಿಳೆ | ಪುರುಷ | ಮಹಿಳೆ | ಪುರುಷ |
| ದೇವನಹಳ್ಳಿ | 32.28 | 67.72 | 44.35 | 55.65 |
| ದೊಡ್ಡಬಳ್ಳಾಪುರ | 28.80 | 71.20 | 42.03 | 57.97 |
| ಹೊಸಕೋಟೆ | 32.03 | 67.97 | 54.99 | 45.01 |
| ನೆಲಮಂಗಲ | 39.12 | 60.88 | 52.21 | 47.79 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 32.48 | 67.52 | 47.33 | 52.67 |
| ಕರ್ನಾಟಕ | 32.10 | 67.90 | 42.91 | 57.09 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ–ಅಂಶಗಳ ನೋಟ 2001–02 ಮತ್ತು 2011–12

## 8.5 ಸಾಕ್ಷರತೆ ಮತ್ತು ನೋಂದಾವಣಿಯ ವಿನ್ಯಾಸಗಳು

ಒಂದು ನಿರ್ದಿಷ್ಟ ಪ್ರದೇಶದಲ್ಲಿ ಅಥವಾ ರಾಷ್ಟ್ರದಲ್ಲಿ ಓದಲು ಬರೆಯಲು ಬರುವ ವಯಸ್ಕರ ಸಂಖ್ಯೆಯು, ನಿರೀಕ್ಷಿತ ಜೀವಿತಾವಧಿ, ಶಿಕ್ಷಣ ಮತ್ತು ಬದುಕಿನ ಮಟ್ಟದ ಜೊತೆಗೆ ಮಾನವ ಅಭಿವೃದ್ಧಿ ಸೂಚಕ (ಮಾನವ ಅಭಿವೃದ್ಧಿ ಸೂಚ್ಯಂಕ) ಮಾಪನದ ಒಂದು ಅಂಶವಾಗಿದೆ. ಸೂಚಕವು ವಯಸ್ಕ ಜನರಲ್ಲಿ ಸುಪ್ತವಾಗಿರುವ ತರಬೇತು ಅರ್ಹತೆ ಮತ್ತು ಇತರ ಕೌಶಲಗಳನ್ನು ಪಡೆದುಕೊಳ್ಳಲು ಒಂದು ಪ್ರತಿನಿಧಿಯಾಗಿ ಕೆಲಸ ಮಾಡುತ್ತದೆ, ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಹೊಂದಿಕೊಳ್ಳಲು ನೆರವಾಗುವಂತೆ. ವಯಸ್ಕರು ಮಾಹಿತಿಯನ್ನು ಸಂಕೀರ್ಣ ರೀತಿಗಳಲ್ಲಿ ಬಳಸಿಕೊಳ್ಳತ್ತಾರೆ ಮತ್ತು ತಮ್ಮ ಕೌಶಲಗಳನ್ನು ಮತ್ತು ಸಾಮರ್ಥ್ಯಗಳನ್ನು ತಾವು ಪಡೆದುಕೊಂಡ ಸಾಕ್ಷರತೆಯಿಂದ ವೃದ್ಧಿಸಿಕೊಳ್ಳುತ್ತಾರೆ ಎಂಬ ನಿರೀಕ್ಷೆಯಿದೆ. ವಯಸ್ಕರ ಶಿಕ್ಷಣದಲ್ಲಿ ಲಿಂಗ ಸಂಬಂಧಿ ಅಂತರ, ಮತ್ತು ಅದರೊಳಗೆ ಗ್ರಾಮೀಣ-ನಗರ ಅಂತರಗಳು ಕಳವಳಕ್ಕೆ ಕಾರಣವಾಗುತ್ತವೆ. ಎಲ್ಲ 4 ತಾಲೂಕುಗಳಲ್ಲೂ ಈ ಲಿಂಗ ಅಂತರಗಳು, 2001ರಲ್ಲಿ, ಸುಮಾರು ಶೇ. 10 ರಷ್ಟು , ಮತ್ತು 2011ರ ವೇಳೆಗೆ ಈ ಅಂತರ ಸ್ವಲ್ಪವೇ ಪ್ರಮಾಣದಿಂದ, ಶೇ. 7-8 ರಷ್ಟಕ್ಕೆ ಇಳಿದಿದೆ. ನಾಲ್ಕೂ ತಾಲೂಕುಗಳಲ್ಲಿ ಗ್ರಾಮೀಣ ಭಾಗಗಳಲ್ಲಿ ಗ್ರಾಮೀಣ-ನಗರ ಅಂತರಗಳು 2001ರಲ್ಲಿ 1ಶೇ. 0-12 ರಷ್ಟಿದ್ದರೆ, ನಗರ ಭಾಗಗಳಲ್ಲಿ ಶೇ. 6-8 ರಷ್ಟಿತ್ತು. 2011ರ ವೇಳೆಗೆ ಗ್ರಾಮೀಣ ಭಾಗಗಳಲ್ಲಿ ಈ ಅಂತರ ಶೇ. 6-8 ರಷ್ಟಿದ್ದರೆ, ನಗರ ಭಾಗಗಳಲ್ಲಿ ಸಾಕ್ಷರಸ್ಥ ಪುರುಷ ಹಾಗೂ ಮಹಿಳೆ ಇಬ್ಬರ ಸಂಖ್ಯೆಗಳೂ ಏರಿದ್ದರೂ ಇಬ್ಬರ ನಡುವಣ ಅಂತರ ಮಾತ್ರ ಹೆಚ್ಚು ಕಡಿಮೆ ಅಷ್ಟೇ ಇದೆ.

**ಕೋಷ್ಟಕ 8.11: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಯಸ್ಕರ ಸಾಕ್ಷರತೆ**

| ತಾಲೂಕು/ಜಿಲ್ಲೆ/ರಾಜ್ಯ | 2001 | | | 2011 | | |
|---|---|---|---|---|---|---|
| | ಒಟ್ಟು | ಮಹಿಳೆ | ಪುರುಷ | ಒಟ್ಟು | ಮಹಿಳೆ | ಪುರುಷ |
| ದೇವನಹಳ್ಳಿ | 68.17 | 77.63 | 58.16 | 76.76 | 83.84 | 69.24 |
| ದೊಡ್ಡಬಳ್ಳಾಪುರ | 69.14 | 78.98 | 58.80 | 78.00 | 85.18 | 70.44 |
| ಹೊಸಕೋಟೆ | 69.18 | 78.20 | 59.51 | 77.98 | 84.45 | 71.01 |
| ನೆಲಮಂಗಲ | 72.30 | 81.42 | 62.75 | 78.91 | 85.76 | 71.79 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 74.84 | 82.21 | 66.98 | 77.93 | 84.82 | 70.63 |
| ಕರ್ನಾಟಕ | 66.64 | 76.10 | 56.87 | 75.36 | 82.47 | 68.08 |
| ಗ್ರಾಮೀಣ ಜನಸಂಖ್ಯೆ | | | | | | |
| ದೇವನಹಳ್ಳಿ | 65.99 | 76.40 | 55.02 | 75.02 | 82.89 | 66.58 |
| ದೊಡ್ಡಬಳ್ಳಾಪುರ | 65.90 | 77.14 | 54.16 | 74.07 | 82.71 | 65.07 |
| ಹೊಸಕೋಟೆ | 67.32 | 77.08 | 56.85 | 75.79 | 83.11 | 67.89 |
| ನೆಲಮಂಗಲ | 69.90 | 79.75 | 59.66 | 75.81 | 83.59 | 67.70 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 63.23 | 73.77 | 52.35 | 75.16 | 83.06 | 66.80 |
| ಕರ್ನಾಟಕ | 59.33 | 70.45 | 48.01 | 68.73 | 77.61 | 59.71 |
| ನಗರ ಜನಸಂಖ್ಯೆ | | | | | | |
| ದೇವನಹಳ್ಳಿ | 73.66 | 80.72 | 66.14 | 80.84 | 86.10 | 75.37 |
| ದೊಡ್ಡಬಳ್ಳಾಪುರ | 77.10 | 83.44 | 70.34 | 85.74 | 89.98 | 81.19 |
| ಹೊಸಕೋಟೆ | 78.71 | 83.91 | 73.11 | 86.22 | 89.58 | 82.68 |
| ನೆಲಮಂಗಲ | 86.43 | 91.06 | 81.41 | 89.52 | 93.26 | 85.68 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 84.02 | 88.68 | 78.91 | 85.37 | 89.57 | 80.95 |
| ಕರ್ನಾಟಕ | 80.58 | 86.66 | 74.12 | 85.78 | 90.04 | 81.36 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ-ಅಂಶಗಳ ನೋಟ 2001-2002 ಮತ್ತು 2011-2012

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಪ್ರಾಥಮಿಕ ಹಂತದಲ್ಲಿ ಶಾಲಾ ನೋಂದಾವಣಿಯ ಸಮಯದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲಾಗಿದೆ. ಆದರೆ ಕೋಷ್ಟಕ 8.12 ರಲ್ಲಿ ವಯಸ್ಕರ ಶಿಕ್ಷಣದಲ್ಲಿ ಶೇ. 15 ರಷ್ಟು ಅಂತರವಿದೆಯೆಂಬುದನ್ನು ತೋರಿಸುತ್ತಿದೆ. ಈ ಮೊದಲೇ ಹೇಳಿದಂತೆ, ಪುರುಷರು ಬದಲಾಗುವಚಿತಹ ಶಿಕ್ಷಣ ಸಿಗದಿದ್ದರೆ ಮಹಿಳೆಯರ ಶಿಕ್ಷಣಕ್ಕೆ ಸೀಮಿತ ಮೌಲ್ಯ ಮಾತ್ರವಿರುತ್ತದೆ. ಈ ಒಂದು ಅಂಶವನ್ನು ಡಿಮಾನವ ಅಭಿವೃದ್ಧಿ ವರದಿ ಜಿಲ್ಲಾ ಶಿಕ್ಷಣ ಅಧಿಕಾರಿಗಳ ಜೊತೆ ಸೂಕ್ತ ಜಾಲಬಂಧ ಏರ್ಪಡಿಸಿಕೊಂಡು ಸೂಕ್ತ ಪ್ರೋತ್ಸಾಹಗಳನ್ನು ನೀಡುವ ಮೂಲಕ ಸನಿಹದ ಭವಿಷ್ಯದಲ್ಲೇ ಪರಿಹರಿಸಬಹುದೇನೋ. ಪುರುಷರನ್ನು 'ಬದಲಿಸುವ ಶಿಕ್ಷಣ'ದ ಒಂದು ಸೂಚಕ ಕೋಷ್ಟಕಯಲ್ಲಿ ಲಿಂಗ-ತಿಳುವಳಿಕೆಯ ಮೇಲೆ ಗಮನ ಹರಿಯುಸುವ ಜೀವನಾವಶ್ಯಕ ಕೌಶಲಗಳನ್ನು ರೂಪಿಸುವುದು, ವಿಮರ್ಶಾತ್ಮಕ ಮಾಧ್ಯಮ ಅಧ್ಯಯನಗಳು, ಸಂತಾನೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯ, ಭಾವನಾತ್ಮಕ ಬುದ್ಧಿಮತ್ತೆ, ಬುದ್ಧಿ ಕೌಶಲಗಳು (ಸಾಫ್ಟ್ ಸ್ಕಿಲ್ಸ್) ಮತ್ತು ಸಂಘರ್ಷ ಪರಿಹಾರ ಮಾರ್ಗೋಪಾಯಗಳು ಸೇರಬಹುದು.

**ಕೋಷ್ಟಕ 8.12: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಾಕ್ಷರತೆ ಮತ್ತು ಮೂಲ ಶಿಕ್ಷಣ**

| ವಿವರಗಳು | ಒಟ್ಟು | ಗ್ರಾಮೀಣ |
|---|---|---|
| ಒಟ್ಟು ಸಾಕ್ಷರ ಜನಸಂಖ್ಯೆ ಶೇ. (7+ ವಯಸ್ಸು) | 71.1 | 68.3 |
| ಒಟ್ಟು ಸಾಕ್ಷರರಲ್ಲಿ ಪುರುಷರ ಸಂಖ್ಯೆ ಶೇ. (7+ ವಯಸ್ಸು) | 78.3 | 76.5 |
| ಒಟ್ಟು ಸಾಕ್ಷರರಲ್ಲಿ ಮಹಿಳೆಯರ ಸಂಖ್ಯೆ ಶೇ. (7+ ವಯಸ್ಸು) | 63.5 | 59.7 |
| ಶಾಲೆಗೆ ಹೋಗುವ ಹೆಣ್ಣುಮಕ್ಕಳ ಸಂಖ್ಯೆ ಶೇ. (6-11 ವಯಸ್ಸು) | 100.0 | 100.0 |
| ಶಾಲೆಗೆ ಹೋಗುವ ಗಂಡುಮಕ್ಕಳ ಸಂಖ್ಯೆ ಶೇ. (6-11 ವಯಸ್ಸು) | 100.0 | 100.0 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ-ಅಂಶಗಳ ನೋಟ 2001-2002 /2011-2012

## 8.6 ಮಹಿಳೆಯರ ವಿರುದ್ಧ ದೌರ್ಜನ್ಯ

ಮಹಿಳೆಯರನ್ನು ಸುಮ್ಮನೆ ಬಲಿಪಶುಗಳು ಅಥವಾ ತೊಳಲಾಡುವವರು ಎಂದು ಬಿಂಬಿಸದೆ ಲಿಂಗ ಮತ್ತು ಅಭಿವೃದ್ಧಿ ವಿಷಯದಲ್ಲಿ ಪುರುಷರಿಗೆ ಪ್ರಾಮುಖ್ಯತೆ ಮತ್ತು ಸಕ್ರಿಯವಾಗಿ ಭಾಗವಹಿಸಲು ಅವಕಾಶ ನೀಡಿದರೆ ಹೆಚ್ಚಿನ ಅಭಿವೃದ್ಧಿಯಾಗುವ ಅವಕಾಶಗಳಿರುತ್ತವೆ. ಲಿಂಗ ಮತ್ತು ಅಭಿವೃದ್ಧಿ ಸೂಚಕಗಳಲ್ಲಿ ಒಂದು ಭಾರಿ ಲೋಪವಿದೆ, ಅದೇ ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಪುರುಷರ ಪಾತ್ರವನ್ನು ಕಡೆಗಾಣಿಸಿರುವುದು. ಮಹಿಳೆಯರು ಹಿಂಸೆಯನ್ನು ಅನುಭವಿಸುವ ವಿಷಯದಲ್ಲೂ ಇದು ಬಹು ಮುಖ್ಯವಾಗುತ್ತದೆ. ಆದರೆ ಪ್ರಸ್ತುತ ಲಿಂಗ ಸಬಲೀಕರಣ ಪ್ರಯತ್ನಗಳಲ್ಲಿ ಇದನ್ನು ಕಡೆಗಾಣಿಸಲಾಗಿದೆ.

ಮಹಿಳೆಯರ ವಿರುದ್ಧದ ಅಪರಾಧದ ಪ್ರಕರಣಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರ, ಅಪಹರಣ, ಮತ್ತು ಮನೆಯಲ್ಲಿ ಹಿಂಸೆ ಮತ್ತು ವರದಕ್ಷಿಣೆ ಕಿರುಕುಳ ಪ್ರಕರಣಗಳು ಹೆಚ್ಚಾಗಿದ್ದವು. ಈ ಮಾಹಿತಿ

ರಾಷ್ಟ್ರೀಯ ಮಟ್ಟದ ಅಂಕಿಅಂಶಗಳಿಗಿಂತ ಭಿನ್ನವಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಶೇ. 43.8 ರಷ್ಟು ಪ್ರಕರಣಗಳು ಹೆಂಡತಿಯ ಮೇಲೆ ಗಂಡನ/ಬಂಧುಗಳ ಹಿಂಸಾ ಪ್ರಕರಣಗಳೇ ಆಗಿವೆ. 2002-2012 ಅವಧಿಯಲ್ಲಿ ಎಲ್ಲ ಬಗೆಯ ಅಪರಾಧಗಳ ಒಟ್ಟು ಸಂಖ್ಯೆ ಹೆಚ್ಚಿದೆಯೆಂದು ಈ ಕೆಳಗಿನ ಕೋಷ್ಟಕ ಸೂಚಿಸುತ್ತದೆ. ದೇವನಹಳ್ಳಿ 2002ರಲ್ಲಿ ಒಂದೂ ಅತ್ಯಾಚಾರದ ಪ್ರಕರಣವನ್ನು ವರದಿ ಮಾಡಿರಲಿಲ್ಲ, ಆದರೆ 2012ರಲ್ಲಿ ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ತಾಲೂಕುಗಳು ಗರಿಷ್ಠ 6 ಅತ್ಯಾಚಾರ ಪ್ರಕರಣಗಳನ್ನು ವರದಿಮಾಡಿವೆ. ಹೊಸಕೋಟೆ ತಾಲೂಕು 2007ಕ್ಕಿಂತ 2012ರಲ್ಲಿ ಕಡಿಮೆ ಅತ್ಯಾಚಾರ ಪ್ರಕರಣಗಳನ್ನು ವರದಿಮಾಡಿದೆ. ಜಿಲ್ಲೆಯಲ್ಲಿ (ಒಟ್ಟಾರೆ ಸಂಖ್ಯೆ) ಉಗ್ರ ಲೈಂಗಿಕ ಅಪರಾಧ 2002ರಿಂದ ದ್ವಿಗುಣಗೊಂಡಿದೆ. 2012ರಲ್ಲಿ ದೊಡ್ಡಬಳ್ಳಾಪುರ ಅತಿ ಹೆಚ್ಚು ಸಂಖ್ಯೆಯ ಅಪಹರಣಗಳನ್ನು ವರದಿಮಾಡಿದ್ದರೆ, ನೆಲಮಂಗಲ ಅತ್ಯಂತ ಕಡಿಮೆ ಸಂಖ್ಯೆ ವರದಿಮಾಡಿದೆ. ಗಮನಾರ್ಹವೆಂದರೆ ಹೊಸಕೋಟೆ 2007ಕ್ಕಿಂತ ಕಡಿಮೆ ಅಪಹರಣಗಳ ವರದಿ ಮಾಡಿದೆ. 2012ರಲ್ಲಿ ಎಲ್ಲ ತಾಲೂಕುಗಳಲ್ಲಿ 2 ಅಥವಾ 3 ವರದಕ್ಷಿಣೆ ಕಿರುಕುಳ ವರದಿಯಾಗಿತ್ತು.

**ಕೋಷ್ಟಕ 8.13: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅಪರಾಧ ವಿಭಾಗ ದಾಖಲಿಸಿದ್ದ ಪ್ರಕರಣಗಳು**

| ಅತ್ಯಾಚಾರ | 2002 | 2007 | 2012 |
|---|---|---|---|
| ದೇವನಹಳ್ಳಿ | 0 | 0 | 6 |
| ದೊಡ್ಡಬಳ್ಳಾಪುರ | 3 | 1 | 6 |
| ಹೊಸಕೋಟೆ | 4 | 6 | 4 |
| ನೆಲಮಂಗಲ | 1 | 1 | 2 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 8 | 8 | 18 |
| ಮಹಿಳೆ/ಹುಡುಗಿಯರ ಅಪಹರಣ | | | |
| ದೇವನಹಳ್ಳಿ | 0 | 1 | 4 |
| ದೊಡ್ಡಬಳ್ಳಾಪುರ | 2 | 4 | 7 |
| ಹೊಸಕೋಟೆ | 7 | 5 | 3 |
| ನೆಲಮಂಗಲ | 0 | 2 | 2 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 9 | 12 | 16 |
| ವರದಕ್ಷಿಣೆ ಕಿರುಕುಳ | | | |
| ದೇವನಹಳ್ಳಿ | 1 | 1 | 3 |
| ದೊಡ್ಡಬಳ್ಳಾಪುರ | 5 | 1 | 3 |
| ಹೊಸಕೋಟೆ | 1 | 3 | 2 |
| ನೆಲಮಂಗಲ | 4 | 0 | 2 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 11 | 5 | 10 |

ಮೂಲ: ಪೊಲೀಸ್ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಈ ಜಿಲ್ಲೆಯಲ್ಲಿ 2012ರಲ್ಲಿ 173 ಪ್ರಕರಣಗಳು ದಾಖಲಾಗಿದ್ದವು ಮತ್ತು 161ಕ್ಕೆ ಆರೋಪಕೋಷ್ಟಕ (93ಶೇ.) ಸಲ್ಲಿಕೆಯಾಗಿದ್ದವು. ಆದರೆ ಶಿಕ್ಷೆಗೆ ಗುರಿಯಾದವರ ಸಂಖ್ಯೆ ಮಾತ್ರ ತೀರಾ ಅಲ್ಪ (ದಾಖಲಾಗಿದ್ದ ಪ್ರಕರಣಗಳಲ್ಲಿ <2ಶೇ.). ಉಳಿದ ಮೂರು ತಾಲೂಕುಗಳಿಗೆ ಹೋಲಿಸಿದರೆ ದೇವನಹಳ್ಳಿಯಲ್ಲಿ ಗಣನೀಯವಾಗಿ ಕಡಿಮೆ ಪ್ರಕರಣಗಳು ದಾಖಲಾಗಿದ್ದವು. ಉಳಿದ 3 ತಾಲೂಕುಗಳಲ್ಲಿ 2012ರಲ್ಲಿ 50-56 ಪ್ರಕರಣಗಳು ದಾಖಲಾಗಿದ್ದವು. ಹೊಸಕೋಟೆಯಲ್ಲಿ ದಾಖಲಾಗಿದ್ದ 56 ಪ್ರಕರಣಗಳಲ್ಲಿ 54 ಕ್ಕೆ ಆರೋಪಕೋಷ್ಟಕ ಸಲ್ಲಿಕೆಯಾಗಿತ್ತು (96ಶೇ.) ಮತ್ತು ಅತಿ ಹೆಚ್ಚು ಪ್ರಕರಣಗಳನ್ನು ದಾಖಲಿಸುವಲ್ಲಿ ಈ ತಾಲೂಕೇ ಅತ್ಯುತ್ತಮವಾಗಿತ್ತು (ದೊಡ್ಡಬಳ್ಳಾಪುರ 89ಶೇ., ನೆಲಮಂಗಲ 92ಶೇ.). ದೇವನಹಳ್ಳಿಯಲ್ಲಿ 100ಶೇ. ಪ್ರಕರಣಗಳಿಗೆ ಆರೋಪಕೋಷ್ಟಕ ಸಲ್ಲಿಸಲಾಗಿದ್ದರೂ ಯಾವುದೇ ಪ್ರಕರಣದಲ್ಲಿ ಶಿಕ್ಷೆಯಾಗಿರಲಿಲ್ಲ. 2007 ಮತ್ತು 2002 ಅವಧಿಗಳಲ್ಲಿ ಶಿಕ್ಷೆಗೆ ಗುರಿಯಾದವರ ಸಂಖ್ಯೆ ಎಲ್ಲ ತಾಲೂಕುಗಳಲ್ಲೂ ಒಂದೇ ಸಮನಾಗಿದ್ದರೆ 2012ರಲ್ಲಿ ಹೊಸಕೋಟೆಯಲ್ಲಿ ಮಾತ್ರ ಏನಾಪ್ರಮಾಣೂ ಶಿಕ್ಷೆಯಾಗಿದ್ದು ಕಂಡುಬರುತ್ತದೆ.

**ಕೋಷ್ಟಕ 8.14: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದಾಖಲಿಸಿದ್ದ, ಆರೋಪಕ್ಕೊಳಗಾಗಿದ್ದ ಮತ್ತು ಶಿಕ್ಷೆಯಾದ ಪ್ರಕರಣಗಳು**

| ತಾಲೂಕು/ಜಿಲ್ಲೆ | ಮಹಿಳೆಯರ ವಿರುದ್ಧ ದೌರ್ಜನ್ಯದ ಒಟ್ಟು ದಾಖಲಾದ ಪ್ರಕರಣಗಳು | | |
|---|---|---|---|
| | 2002 | 2007 | 2012 |
| ದೇವನಹಳ್ಳಿ | 5 | 6 | 12 |
| ದೊಡ್ಡಬಳ್ಳಾಪುರ | 38 | 25 | 55 |
| ಹೊಸಕೋಟೆ | 23 | 42 | 56 |
| ನೆಲಮಂಗಲ | 25 | 20 | 50 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 91 | 93 | 173 |
| | ಆರೋಪ ಕೋಷ್ಟಕಯಾದ ಒಟ್ಟು ಪ್ರಕರಣಗಳು | | |
| ದೇವನಹಳ್ಳಿ | 5 | 6 | 12 |
| ದೊಡ್ಡಬಳ್ಳಾಪುರ | 35 | 23 | 49 |
| ಹೊಸಕೋಟೆ | 20 | 39 | 54 |
| ನೆಲಮಂಗಲ | 21 | 16 | 46 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 81 | 84 | 161 |
| | ಶಿಕ್ಷೆಯಾದ ಒಟ್ಟು ಪ್ರಕರಣಗಳು | | |
| ದೇವನಹಳ್ಳಿ | 0 | 0 | 0 |
| ದೊಡ್ಡಬಳ್ಳಾಪುರ | 2 | 1 | 0 |
| ಹೊಸಕೋಟೆ | 1 | 2 | 3 |
| ನೆಲಮಂಗಲ | 1 | 1 | 0 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 4 | 4 | 3 |

ಮೂಲ: ಪೊಲೀಸ್ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

## 8.7. ಮಹಿಳೆಯರ ಮೇಲೆ ಪ್ರಭಾವ ಬೀರುವ ಸಮುದಾಯದ ಧೋರಣೆಗಳು ಮತ್ತು ಸಾಮಾಜಿಕ ಪೂರ್ವಾಗ್ರಹಗಳು

2007-08ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದ್ದ 20-24 ವಯೋಮಿತಿಯ ಹೆಣ್ಣುಮಕ್ಕಳಲ್ಲಿ 36.3ಶೇ. 18 ವರ್ಷಗಳಿಗೆ ಮುಂಚೆಯೇ ಮದುವೆಯಾಗಿತ್ತು ಎಂದು ವರದಿಯಾಗಿದೆ. ಅದೇ ವರ್ಷದಲ್ಲಿ ಜಿಲ್ಲೆಯಲ್ಲಿ ನಡೆದ ಮದುವೆಗಳಲ್ಲಿ ಶೇ. 14.6 ರಷ್ಟು ಮದುವೆಗಳಲ್ಲಿ ವಧುವಿನ ವಯಸ್ಸು ಕಾನೂನು ಸಮ್ಮತಿಸಿರುವ 18 ವರ್ಷಗಳಿಗೂ ಕಡಿಮೆಯಿತ್ತು (ಅದೇ ಗ್ರಂಥ). ಅವರ ಶಿಕ್ಷಣ ಮಟ್ಟಗಳು / ಅರಿವಿನ ಮಟ್ಟಗಳು ಕಡಿಮೆಯಿದ್ದಾಗ, ಜೊತೆಗೆ ತಮ್ಮ ಸಂತಾನೋತ್ಪತ್ತಿಯ ಆರೋಗ್ಯ ವಿಚಾರಗಳಲ್ಲಿ ಅವರಿಗೆ ಧ್ವನಿ ಎತ್ತಲು ಅವಕಾಶ ಕಡಿಮೆಯಿದ್ದಾಗ ಸಾಮಾಜಿಕ ಧೋರಣೆಗಳು ಮತ್ತು ಗಂಡು ಸಂತಾನದ ಅಪೇಕ್ಷೆ ಮಹಿಳೆಯರನ್ನು ಬೇಗ ಮಕ್ಕಳನ್ನು ಹೆರುವ, ಪಾಲಿಸುವ ವರ್ತುಲದಲ್ಲಿ ಸಿಲುಕಿಸಿಬಿಡುತ್ತದೆ.

ಪುರುಷರು ಭಾಗವಹಿಸಬೇಕಾದ ಅಭಿವೃದ್ಧಿಯ ಮತ್ತೊಂದು ಮುಖ್ಯ ಲಿಂಗ ಸಂಬಂಧಿ ಕ್ಷೇತ್ರವೆಂದರೆ ಸಂತಾನೋತ್ಪತ್ತಿ ಆರೋಗ್ಯ. ವಿಪರ್ಯಾಸವೆಂದರೆ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಒಂದು ಇಡೀ ಒಳ-ಅಂಶವನ್ನು ಈ ವಿಷಯಕ್ಕೆ ಮೀಸಲಿಟ್ಟರೂ ಅದರಲ್ಲಿ ಪುರುಷರ ಪಾತ್ರವನ್ನು ಸಂಪೂರ್ಣವಾಗಿ ಕಡೆಗಾಣಿಸಲಾಗಿದೆ. ಇಲ್ಲಿ ಕೆಳಗೆ ನೀಡಿರುವ ಕೋಷ್ಟಕ ತೋರಿಸುವಂತೆ ಪುರುಷರ ಸಂತಾನ ಹರಣ ಪದ್ಧತಿ ತಡೆಗಟ್ಟುವಲ್ಲಿ ಕಾಂಡೋಮುಗಳ ಬಳಕೆಯ ಹೆಚ್ಚುವರಿ ಲಾಭಗಳ ಬಗ್ಗೆ ತಿಳಿಸುವುದರ ಉದ್ದೇಶ ಸಂತಾನೋತ್ಪತ್ತಿ ಆರೋಗ್ಯವನ್ನು ಪರಿಶೀಲನೆಗೆ ತರುವುದೇ ಆಗಿದೆಯಾದರೂ ಅದರ ಸ್ಪಷ್ಟ ಉದ್ದೇಶ, ಅಭಿವೃದ್ಧಿಯಲ್ಲಿ ಲಿಂಗದ ಪಾತ್ರವನ್ನು ಮುಖ್ಯವಾಹಿನಿಗೆ ತರುವುದಾಗಿದೆ.

**ಕೋಷ್ಟಕ 8.15: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮದುವೆ ಮತ್ತು ಫಲವಂತಿಕೆ (2004 ರಿಂದ 2007-08 ಜನವರಿಯವರೆಗೆ)**

| | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಬೆಂಗಳೂರು ಗ್ರಾಮಾಂತರ ಜಿಲ್ಲೆ-ಗ್ರಾಮೀಣ |
|---|---|---|
| 18 ವರ್ಷಗಳು ಮುಗಿಯುವ ಮುನ್ನ ಮದುವೆಯಾಗುವ ಹುಡುಗಿಯರ ಶೇ.ವಾರು | 14.8 | 16.1 |
| ಆರ್ಡರ್ 3 ಮತ್ತು ಹೆಚ್ಚಿಗೆ ಜನನಗಳ ಶೇ. | 11.4 | 11.2 |
| ಜನನ ಸಮಯದಲ್ಲಿ ಲಿಂಗ ಅನುಪಾತ | 110 | 114 |
| ಆರ್ಡರ್ 2 ಮತ್ತು ಹೆಚ್ಚಿಗೆ ಜನನಗಳನ್ನು ವರದಿ ಮಾಡಿದ 20-24 ವಯೋಮಿತಿಯ ಮಹಿಳೆಯರು ಶೇ. | 55.6 | 55.1 |
| ಒಟ್ಟು ಜನನಗಳಲ್ಲಿ 15-19 ವರ್ಷದ ಮಹಿಳೆಯರು ಜನ್ಮ ನೀಡಿರುವುದು ಶೇ. | 18.0 | 21.0 |
| **ಕುಟುಂಬ ಯೋಜನೆ (ಪ್ರಸ್ತುತ ಮದುವೆಯಾಗಿರುವ 15-49 ವರ್ಷದ ಮಹಿಳೆಯರು** | | |
| ಸದ್ಯ ಬಳಸುತ್ತಿರುವುದು: | | |
| ಯಾವುದೇ ವಿಧಾನ (ಶೇ.) | 66.1 | 68.0 |
| ಯಾವುದೇ ಆಧುನಿಕ ವಿಧಾನ (ಶೇ.) | 66.1 | 68.0 |
| ಮಹಿಳೆಯರ ಸಂತಾನಹರಣ (ಶೇ.) | 62.9 | 66.2 |
| ಪುರುಷರ ಸಂತಾನಹರಣ (ಶೇ.) | 0.0 | 0.0 |
| IUD (ಶೇ.) | 1.9 | 1.4 |
| ಗುಳಿಗೆಗಳು (ಶೇ.) | 0.2 | 0.3 |
| ಕಾಂಡೋಮ್ (ಶೇ.) | 1.1 | 0.1 |
| **ಅಪೂರಿತ ಕುಟುಂಬ ಯೋಜನೆಯ ಅವಶ್ಯಕತೆ** | | |
| (ಶೇ.) ಒಟ್ಟು ಅಪೂರಿತ ಅವಶ್ಯಕತೆ | 10.7 | 9.7 |
| (ಶೇ.) ಅಂತರಕ್ಕೆ | 6.0 | 6.5 |
| (ಶೇ.) ಸೀಮಿತಗೊಳಿಸುವುದಕ್ಕೆ | 4.7 | 3.2 |

**ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ-ಅಂಶಗಳ ನೋಟ 2001-2002 ಮತ್ತು 2011-2012**

ಮಹಿಳೆಯರಿಗೆ ಭೂಮಿ ಮತ್ತು ಉತ್ತರಾಧಿಕಾರದ ಬಗ್ಗೆ ಇರುವ ಹಕ್ಕುಗಳ ಬಗ್ಗೆ ಎತ್ತಿರುವ ಪ್ರಶ್ನೆಗಳನ್ನು ಜೀವಂತವಾಗಿರಿಸುವುದು; ಅಥವಾ ಸೂಚಕಗಳ ವ್ಯಾಪ್ತಿಯಲ್ಲಿ ಸೇರಿಸುವುದು-ಸುಮ್ಮನೆ ರಾಜಕೀಯ ಸಂಸ್ಥೆಗಳಲ್ಲಿ ಔಪಚಾರಿಕವಾಗಿ ಸೇರಿಸಿದರೆ ಅಥವಾ ಸದಸ್ಯತ್ವ ನೀಡಿದರೆ ಸಾಲದು, ಅಲ್ಲಿನ ಪ್ರಕ್ರಿಯೆಗಳು ಮತ್ತು ನಿರ್ಣಯಗಳಲ್ಲಿ ಸಾಕಷ್ಟು ಬದಲಾವಣೆಗಳು ಆಗಬೇಕು-ಲಿಂಗ ಅಗತ್ಯಗಳ ಮಾರ್ಗೋಪಾಯಗಳಿಗೆ ಬದ್ಧವಾಗಿರುವ ಪ್ರಮಾಣದಲ್ಲಿ ಮತ್ತು ಅನುಷಂಗಿಕ ಬದಲಾವಣೆಗಳಿಗೆ ಬಹಳ ಮುಖ್ಯ. ಕೋಷ್ಟಕ 8.16ಯಲ್ಲಿ ಆಸ್ತಿ ಮಾಲೀಕತ್ವವನ್ನು ಲಿಂಗವಾರಾಗಿ ಪ್ರತ್ಯೇಕಿಸಲಾಗಿದೆ. ಇದು ಲಿಂಗ-ಸಂವೇದನ ರಾಹಿತ್ಯಕ್ಕೆ ಮತ್ತು ದತ್ತಾಂಶವನ್ನು ಸಂಗ್ರಹಿಸುವಾಗ ಏನು ಮಾಡಬಾರದು ಎಂಬುದಕ್ಕೆ ಒಂದು ಉದಾಹರಣೆ.

**ಕೋಷ್ಟಕ 8.16: ಸ್ವಂತ ಮನೆಯಿರುವ ಕುಟುಂಬಗಳು**

| ಜಿಲ್ಲೆ/ರಾಜ್ಯ | ಒಟ್ಟು ಕುಟುಂಬಗಳು | | | ಸ್ತ್ರೀ ಯಾಜಮಾನ್ಯದ ಕುಟುಂಬಗಳು | | |
|---|---|---|---|---|---|---|
| | ಒಟ್ಟು | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 163,974 | 134,685 | 29,289 | 24,247 | 20,236 | 4,011 |
| **ಶೇ.** | 72.96 | 82.94 | 46.98 | 79.53 | 87.04 | 55.41 |
| ಕರ್ನಾಟಕ | 9,786,047 | 7,072,156 | 2,713,891 | 1,569,395 | 1,143,111 | 426,284 |
| **ಶೇ.** | 74.25 | 89.93 | 51.05 | 79.87 | 90.51 | 60.72 |

**ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ-ಅಂಶಗಳ ನೋಟ 2001-2002 ಮತ್ತು 2011-2012**

ಕಡೆಯದಾಗಿ ಹೇಳುತ್ತಿದ್ದರೂ ಅಮುಖ್ಯವಲ್ಲ, ಮಹಿಳೆಯ ಆರೋಗ್ಯದ ಕುರಿತಾದ ಲಿಂಗ-ಸಂವೇದಿ ಸೂತ್ರಗಳು ಗಂಡು-ಹೆಣ್ಣು ನಡುವಿನ ಅಂತರಕ್ರಿಯೆಗಳನ್ನು, ಅದು ಕಟ್ಟುನಿಟ್ಟಾದ 'ಸಾಂಸ್ಕೃತಿಕವಾಗಿ ಸರಿಯಾಗಿರುವ' ಹೊರತು, ಅನುಮೋದಿಸದ ಸಾಮಾಜಿಕ ಕಟ್ಟುಪಾಡುಗಳನ್ನು ಎದುರಿಸಬೇಕಾಗುತ್ತದೆ. ಆರೋಗ್ಯ ಸೇವೆಗಳನ್ನು ಒದಗಿಸುವಾಗ ಈ ಬಗೆಯ ರಚನಾ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಆರೋಗ್ಯ ಕೇಂದ್ರಗಳು ಹತ್ತಿರವಿರುವುದು, ಕೈಯಿಂದ ಬಹಳಷ್ಟು ಸ್ವಂತ ಹಣ ವೆಚ್ಚವಾಗುವ ಖಾಸಗಿ ಸೇವೆಗಳ ವಿರುದ್ಧ ಸಾರ್ವಜನಿಕ ಹಣಕಾಸು ಬೆಂಬಲವಿರುವ ಆರೋಗ್ಯ ಸೇವೆಗಳ ಲಭ್ಯತೆ, ಮತ್ತು ಮಹಿಳೆಯರನ್ನು ಉಪಚರಿಸಲು ಮಹಿಳಾ ಸಿಬ್ಬಂದಿಯ ಉಪಸ್ಥಿತಿ, ಎಲ್ಲವೂ ಅಭಿವೃದ್ಧಿಯ ಒಂದು ಅಂಶವಾಗಿ ಮಹಿಳೆಯ ಆರೋಗ್ಯಕ್ಕೆ ಬದ್ಧತೆ ಇರಬೇಕೆಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ಗಮನಾರ್ಹವಾಗುತ್ತವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂದರ್ಭದಲ್ಲಿ ಕಾಳಜಿಯ ವಿಷಯವೆಂದರೆ, 50ಶೇ. ಗಿಂತ ಕಡಿಮೆ ಸಂಖ್ಯೆಯ ಪಿಎಚ್‌ಸಿ ಗಳು ಮಾತ್ರ ಮಹಿಳಾ ವೈದ್ಯಾಧಿಕಾರಿಯನ್ನು ಹೊಂದಿವೆ ಮತ್ತು ಈ ವೈದ್ಯಾಧಿಕಾರಿಗಳ ತರಬೇತಿ ಬಗ್ಗೆ ಆದ್ಯತೆ ನೀಡಿದಂತಿಲ್ಲ.

**ಕೋಷ್ಟಕ 8.17: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ (2007–08) ಆರೋಗ್ಯ ಸೌಲಭ್ಯಗಳ ಅವಕಾಶಗಳು**

| ಸೂಚಕಗಳು | ಸಂಖ್ಯೆ |
|---|---|
| ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ) | **26** |
| ಮಾನವ ಸಂಪನ್ಮೂಲ: | |
| ಮಹಿಳಾ ವೈದ್ಯಕೀಯ ಅಧಿಕಾರಿಯನ್ನು ಹೊಂದಿರುವ ಪಿಎಚ್‌ಸಿ (LMO) | 11 |
| ಲ್ಯಾಬೊರೇಟರಿ ಟೆಕ್ನಿಷಿಯನ್ ಇರುವ ಪಿಎಚ್‌ಸಿ | 14 |
| ಕಳೆದ ವರ್ಷ ಪಿಎಚ್‌ಸಿ ತಮ್ಮಲ್ಲೇ ಯಾವುದಾದರೂ ತರಬೇತಿ ಕಾರ್ಯಕ್ರಮ ಆಯೋಜಿಸಿತ್ತೇ | 24 |
| ಕಳೆದ 5 ವರ್ಷಗಳಲ್ಲಿ 12 ದಿನಗಳ ಸಮಗ್ರ ಕೌಶಲ ಅಭಿವೃದ್ಧಿ ತರಬೇತು ಪಡೆದಿರುವ ಕನಿಷ್ಠ ಒಬ್ಬ ಒಔ ಇರುವ ಪಿಎಚ್‌ಸಿ | 8 |
| ಕಳೆದ 5 ವರ್ಷಗಳಲ್ಲಿ IMNCI ತರಬೇತು ಪಡೆದಿರುವ ಕನಿಷ್ಠ ಒಬ್ಬ MO ಇರುವ ಪಿಎಚ್‌ಸಿ | 4 |
| ಉಪ–ಕೇಂದ್ರ | **36** |
| ಮೂಲಭೂತ ಸೌಲಭ್ಯ: | |
| ಸರ್ಕಾರಿ ಕಟ್ಟಡದಲ್ಲಿರುವ ಉಪ–ಕೇಂದ್ರ | 13 |
| ಸಂವಹನ ಸೌಲಭ್ಯವಿರುವ ಉಪ–ಕೇಂದ್ರ | 1 |
| ಪ್ರತ್ಯೇಕ ಹೆರಿಗೆ ಕೋಣೆಯಿರುವ ಉಪ–ಕೇಂದ್ರ | 18 |
| ಉಪ–ಕೇಂದ್ರವಿರುವ ಹಳ್ಳಿಯಲ್ಲೇ ANM ವಾಸಿಸುವುದು | 4 |
| ANM ಗೆ ಸ್ಟಾಫ್ ಕ್ವಾರ್ಟರ್ಸ್ ಇರುವ ಉಪ–ಕೇಂದ್ರ | 10 |
| ನಿಯಮಿತವಾಗಿ ನೀರು ಸರಬರಾಜಿರುವ ಉಪ–ಕೇಂದ್ರ | 25 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಂಕಿ–ಅಂಶಗಳ ನೋಟ 2001–2002 ಮತ್ತು 2011–2012

## 8.8: ರಾಜಕೀಯದಲ್ಲಿ ಭಾಗವಹಿಸುವ ಪ್ರವೃತ್ತಿಗಳು

73ನೇ ಸಾಂವಿಧಾನಿಕ ತಿದ್ದುಪಡಿ ಭಾರತದಲ್ಲಿನ ಪ್ರಜಾಪ್ರಭುತ್ವದ ವಿಕೇಂದ್ರೀಕರಣದಲ್ಲಿ ಒಂದು ಮೈಲಿಗಲ್ಲು. ಈ ವಿಧೇಯಕವನ್ನು 1992ರ ಡಿಸೆಂಬರಿನಲ್ಲಿ ಜಾರಿಗೊಳಿಸಲಾಯಿತು. ಇದರ ಪ್ರಕಾರ 3-ಹಂತದ ಪಂಚಾಯತುಗಳು, ಅಥವಾ ಭಾರತದ ಹಳ್ಳಿಗಳು, ಬ್ಲಾಕುಗಳು ಮತ್ತು ಜಿಲ್ಲೆಗಳನ್ನು ಬೆಸೆಯುವ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿನ ಒಟ್ಟು ಸ್ಥಾನಗಳಲ್ಲಿ 1/3ರಷ್ಟನ್ನು ಮಹಿಳೆಯರಿಗೆ ಕಡ್ಡಾಯವಾಗಿ ಮೀಸಲಿಡಬೇಕು. ಇದರಲ್ಲಿ ಆಯಾ ಹಳ್ಳಿಗಳಲ್ಲಿರುವ ದಲಿತರು ಮತ್ತು ಆದಿವಾಸಿಗಳ ಸಂಖ್ಯೆಗೆ ಅನುಗುಣವಾಗಿ ಅವರ ಮಹಿಳೆಯರಿಗೂ ಸ್ಥಾನಗಳನ್ನು ಮೀಸಲಿಡಬೇಕೆಂದು ಆದೇಶಿಸಲಾಯಿತು. ಇದೇ ಸಮಯಕ್ಕೆ ಪರಿಷತ್ತಿನ ಮೂರೂ ಹಂತಗಳ ಅಧ್ಯಕ್ಷ ಸ್ಥಾನಗಳಲ್ಲಿ 1/3 ಭಾಗವನ್ನು ಮಹಿಳೆಯರಿಗೆ ಮೀಸಲಿಡಲಾಯಿತು. ಗ್ರಾಮ ಪಂಚಾಯತಿಗಳಲ್ಲಿ ಆದರೆ ಮಧ್ಯಸ್ತರದ ಮತ್ತು ಜಿಲ್ಲಾ ಮಟ್ಟಗಳಲ್ಲಿ ಅವರನ್ನು ಪರೋಕ್ಷವಾಗಿ ಆಯ್ಕೆ ಮಾಡಲಾಗುವುದು. ಈ ತಿದ್ದುಪಡಿ 1993 ಏಪ್ರಿಲ್ 23ರಿಂದ ಜಾರಿಗೆ ಬಂದಿತು.

ಪಂಚಾಯತಿ ರಾಜ್ ವ್ಯವಸ್ಥೆಯಲ್ಲಿ ಸ್ಥಳೀಯ ಪರಿಷತ್ತುಗಳಿಗೆ ನೇರವಾಗಿ ಆಯ್ಕೆಯಾದ ಜನರೇ ಸಾರ್ವಜನಿಕರ ಒಳಿತಿಗಾಗಿ ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ಆದ್ದರಿಂದ ಮಹಿಳೆಯರಿಗೆ ಮೀಸಲಾತಿ ಸಿಕ್ಕಿದರೆ ಮಹಿಳಾ-ಪರ ಸೇವೆಗಳು ಖಚಿತವಾಗಿ ಮಹಿಳೆಯರಿಗೆ ತಲುಪುತ್ತದೆ ಎಂಬ ಉದ್ದೇಶವಿದೆ. "ಸೇವೆಗಳನ್ನು ತಲುಪಿಸುವುದು', ಎಂದರೆ ಸಂವಿಧಾನದ 11ನೇ ಷೆಡ್ಯೂಲಿನಲ್ಲಿ (ರಾಜ್ಯಗಳು ಅಗತ್ಯಗಳಿಗೆ ಅನುಗುಣವಾಗಿ ತಿದ್ದಿವೆ) ಕೋಷ್ಟಕಮಾಡಿರುವ ಕಾರ್ಯಗಳು. ಇದರಲ್ಲಿ ಅನೇಕವನ್ನು ಕಾಲ ಕಾಲಕ್ಕೆ ಘೋಷಿಸುವ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಬೆಸೆಯಲಾಗಿದೆ. ಇವು ನಿಜಕ್ಕೂ ಮಹಿಳೆಯರ ಅಗತ್ಯಗಳಿಗೆ ಸ್ಪಂದಿಸುತ್ತವೆಯೇ, ದೀರ್ಘಕಾಲ ಬಾಳುತ್ತವೆಯೇ, ಊರ್ಜಿತವಾಗುತ್ತವೆಯೇ, ಮತ್ತು ಯಾರು ಈ ನಿರ್ಣಯಗಳನ್ನು ಮಾಡುತ್ತಾರೆ, ಇತ್ಯಾದಿ ದೊಡ್ಡ ಪ್ರಶ್ನೆಗಳು ಹಾಗೇ ಉಳಿದಿವೆ. ಅಂತೆಯೇ, ರಾಜ್ಯ ಮತ್ತು ಕೇಂದ್ರ ಶಾಸನಸಭೆಗಳು ಕಾರ್ಯನೀತಿಗಳನ್ನು ಮಾಡಬೇಕಿರುವ ಸಂದರ್ಭಗಳವೆ ಮತ್ತು ಜಿಲ್ಲೆಗಳು ಹಾಗೂ ಗ್ರಾಮಗಳು ಅವುಗಳನ್ನು ಅಂಗೀಕರಿಸಿ ಅನುಷ್ಠಾನ ಮಾಡಬೇಕಿರುತ್ತದೆ.

1996ರ ಚುನಾವಣೆಗಳಲ್ಲಿ ರಾಷ್ಟ್ರಾದ್ಯಂತ ಈ ಅಧಿನಿಯಮವು 10 ಲಕ್ಷಕ್ಕೂ ಹೆಚ್ಚು ಮಹಿಳೆಯರನ್ನು ಅಂದರೆ ಸಂಸ್ಥೆಗಳ ಸದಸ್ಯರು ಮತ್ತು ಅಧ್ಯಕ್ಷರನ್ನಾಗಿಸಿತು. ಇದು ಶಾಸನದ ಕಡ್ಡಾಯಕ್ಕಿಂತ ಹೆಚ್ಚೇ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 43ಶೇ. ಪ್ರಾತಿನಿಧ್ಯ ಸಿಕ್ಕಂತಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಇದೇ ಪ್ರವೃತ್ತಿ ಇದೆ. ನಗರ ಭಾಗಗಳಿಗಿಂತಲೂ ಗ್ರಾಮೀಣ ಭಾಗಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚು.

**ಕೋಷ್ಟಕ 8.18: ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳು (ಪಂಚಾಯತ್ ರಾಜ್ ಸಂಸ್ಥೆ ಗಳು) 2011–12**

| ತಾಲೂಕು/ಜಿಲ್ಲೆ | ಮಹಿಳಾ ಪ್ರತಿನಿಧಿಗಳ ಶೇ. | | | |
|---|---|---|---|---|
| | ಜಿಲ್ಲಾ ಪಂಚಾಯಿತಿ | ತಾಲ್ಲೂಕು ಪಂಚಾಯಿತಿ | ಗ್ರಾಮ ಪಂಚಾಯಿತಿ | ಒಟ್ಟು |
| ದೇವನಹಳ್ಳಿ | 50.00 | 57.14 | 46.49 | 46.94 |
| ದೊಡ್ಡಬಳ್ಳಾಪುರ | 60.00 | 55.00 | 45.86 | 46.35 |
| ಹೊಸಕೋಟೆ | 80.00 | 57.89 | 42.77 | 43.71 |
| ನೆಲಮಂಗಲ | 25.00 | 60.00 | 43.20 | 43.70 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 55.56 | 57.35 | 44.55 | 45.17 |

ಮೂಲ: ಜಿಲ್ಲಾ ಅಂಕಿ-ಅಂಶಗಳ ನೋಟ 2011-12

**ಕೋಷ್ಟಕ 8.19: ಸ್ಥಳೀಯ ನಗರ ಸಂಸ್ಥೆಗಳಿಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳು (ನಗರ ಸ್ಥಳೀಯ ಸಂಸ್ಥೆ ಗಳು) 2011–12**

| ತಾಲೂಕು/ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ ಗಳಲ್ಲಿನ ಒಟ್ಟು ಸದಸ್ಯರು | ನಗರ ಸ್ಥಳೀಯ ಸಂಸ್ಥೆ ಗಳಲ್ಲಿನ ಒಟ್ಟು ಮಹಿಳಾ ಸದಸ್ಯರು | ಶೇ. |
|---|---|---|---|
| ದೇವನಹಳ್ಳಿ | 23 | 9 | 39.13 |
| ವಿಜಯಪುರ | 23 | 9 | 39.13 |
| ದೊಡ್ಡಬಳ್ಳಾಪುರ | 31 | 12 | 38.71 |
| ಹೊಸಕೋಟೆ | 23 | 9 | 39.13 |
| ನೆಲಮಂಗಲ | 23 | 9 | 39.13 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 123 | 48 | 39.02 |

ಮೂಲ: ಜಿಲ್ಲಾ ಅಂಕಿ-ಅಂಶಗಳ ನೋಟ 2011-12

ಕೋಷ್ಟಕ 8.18 ಸೂಚಿಸುವಂತೆ ನೆಲಮಂಗಲ ಹೊರತುಪಡಿಸಿದರೆ ಉಳಿದ ಎಲ್ಲ ತಾಲೂಕುಗಳಲ್ಲಿ ಸ್ಥಳೀಯ ಆಡಳಿತದಲ್ಲಿ ಮಹಿಳಾ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಪ್ರವೃತ್ತಿ ಕಡಿಮೆ. ಆದಾಗ್ಯೂ, ಗ್ರಾಮ ಪಂಚಾಯತಿಗಳು 73ನೇ ತಿದ್ದುಪಡಿಯ ಆದೇಶವನ್ನು ಪಾಲಿಸುತ್ತಿವೆ. ಉಳಿದ 3 ತಾಲೂಕುಗಳಿಗೆ ಹೋಲಿಸಿದರೆ ಹಿಂದುಳಿದಿರುವ ಹೊಸಕೋಟೆಯಲ್ಲಿ ಅಚ್ಚರಿಯೆನಿಸುವಂತೆ ಜಿಲ್ಲಾ ಪಂಚಾಯತಿಯಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಬಹಳ ಹೆಚ್ಚಿದೆ. ಕೋಷ್ಟಕ 8.19ರಲ್ಲಿ ಸೂಚಿಸಿರುವಂತೆ ಗ್ರಾಮೀಣ ಭಾಗಗಳಿಗೆ ಹೋಲಿಸಿದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆದ ನಗರ ಭಾಗಗಳು ಮಹಿಳೆಯರನ್ನು ಅಧಿಕಾರಕ್ಕೆ ತರುವಲ್ಲಿ ಅಷ್ಟೇನೂ ತವಕದಲ್ಲಿಲ್ಲ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರಾತಿನಿಧ್ಯ ಕುರಿತಂತೆ ಹೆಚ್ಚು ಕಡಿಮೆ ನಾಲ್ಕೂ ತಾಲೂಕುಗಳು ಸಮನಾದ ಸ್ಥಿತಿಯಲ್ಲಿವೆ. ದೊಡ್ಡಬಳ್ಳಾಪುರ ಇತರ 3 ತಾಲೂಕುಗಳಿಗಿಂತ ಸ್ವಲ್ಪ ಕಡಿಮೆ ಪ್ರಾತಿನಿಧ್ಯ ಕೊಟ್ಟಿದೆ.

## 8.9. ಸ್ತ್ರೀಯರ ಗುಂಪುಗಳು ಮತ್ತು ಸ್ವ-ಸಹಾಯ ಗುಂಪುಗಳ ಪಾತ್ರ

ಸಾಲವನ್ನು ಬಡವರಿಗೆ ಅದೂ ಅತಿ ಕಡಿಮೆ ವ್ಯವಹಾರ ವೆಚ್ಚಗಳಲ್ಲಿ ಸಿಗುವಂತೆ ಮಾಡಿದ ಸ್ವ-ಸಹಾಯಗಳನ್ನು ಕ್ರಾಂತಿಕಾರಿ ಬೆಳವಣಿಗೆ ಎಂದು ವ್ಯಾಪಕವಾಗಿ ಪ್ರಶಂಸಿಸುತ್ತಾರೆ. ಬಡವರಿಗೆ ಮತ್ತು ಅಸಹಾಯ ಮಹಿಳೆಯರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಕೊಡುವುದನ್ನು ಕುಟುಂಬಕ್ಕೆ ಮಾಡುವ ಒಳಿತು (ಸ್ಥಳೀಯ ಸಾರಾಯಿ ಅಂಗಡಿ ಇದಕ್ಕೆ ತದ್ವಿರುದ್ಧ) ಎಂದು ವಿಶೇಷವಾಗಿ ಪ್ರಶಂಸಿಸಲಾಗುತ್ತಿದೆ. ಇದನ್ನು ದಾಖಲಿಸಲ್ಪಟ್ಟಿರುವ ಅಹಮದಾಬಾದಿನ SEWA ಮತ್ತು ಬಾಂಗ್ಲಾದೇಶದ ಗ್ರಾಮೀಣ ಬ್ಯಾಂಕುಗಳ ಅನುಭವಗಳು ಸೂಚಿಸುತ್ತವೆ.

2014 ಜನವರಿ 10ರ ಹಿಂದೂ ಪತ್ರಿಕೆ ಹೇಳಿರುವಂತೆ ಬೆಂಗಳೂರಿನ ನಬಾರ್ಡ್ ಅಧಿಕಾರಿಗಳ ಪ್ರಕಾರ ರಾಜ್ಯದಲ್ಲಿ 8.11 ಲಕ್ಷ ಎಸ್‌ಎಚ್‌ಜಿ ಗಳಿವೆ, ಇವು 1.13 ಕೋಟಿ ಕುಟುಂಬಗಳನ್ನು ಒಳಗೊಂಡಿದೆ 2012-13ರಲ್ಲಿ ಎಸ್‌ಎಚ್‌ಜಿ ಗಳಿಗೆ ವಿತರಿಸಿದ ಒಟ್ಟು ಬ್ಯಾಂಕ್ ಸಾಲ 2,110.92 ಕೋಟಿ ರೂಗಳು, ಅದರಲ್ಲಿ ವಾಣಿಜ್ಯ ಬ್ಯಾಂಕುಗಳ ಪಾಲು 59ಶೇ., ಹೊಂದಿದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು 16ಶೇ. ಮತ್ತು ಸಹಕಾರಿ ಬ್ಯಾಂಕುಗಳು 25ಶೇ..

ದಕ್ಷಿಣ ಕನ್ನಡ ಜಿಲ್ಲೆಯಲ್ಲದೆ 70ಕ್ಕೂ ಹೆಚ್ಚು ಎಸ್‌ಎಚ್‌ಜಿಗಳನ್ನು ಹೊಂದಿರುವ ಜಿಲ್ಲೆಗಳು: ಚಿಕ್ಕಮಗಳೂರು (94), ಶಿವಮೊಗ್ಗ (93), ಗುಲಬರ್ಗ (85), ಧಾರವಾಡ (83), ಬೀದರ್ (82), ಉತ್ತರಕನ್ನಡ (82), ಕೊಡಗು (81), ಮೈಸೂರು (80), ಚಿತ್ರದುರ್ಗ (73), ಮಂಡ್ಯ (72), ಮತ್ತು ಉಡುಪಿ (70). 50 ಮತ್ತು ಅದಕ್ಕಿಂತ ಹೆಚ್ಚು ಎಸ್‌ಎಚ್‌ಜಿ ಗಳನ್ನು ಹೊಂದಿರುವ ಜಿಲ್ಲೆಗಳು: ದಾವಣಗೆರೆ ಮತ್ತು ಗದಗ (ತಲಾ 66), ಹಾಸನ (63), ಚಾಮರಾಜನಗರ (62), ತುಮಕೂರು (61), ಕೋಲಾರ (58), ಬಳ್ಳಾರಿ (57), ರಾಯಚೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ (ತಲಾ 55) ಮತ್ತು ಬೆಂಗಳೂರು ನಗರ (50). ಕೋಷ್ಟಕ 8.20 ಸೂಚಿಸುವಂತೆ ಒಟ್ಟಾರೆ ಸಂಖ್ಯೆ ನೋಡಿದಾಗ ಹೊಸಕೋಟೆಯಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಎಸ್‌ಎಚ್‌ಜಿ ಗಳಲ್ಲಿ ಭಾಗವಹಿಸುತ್ತಿದ್ದಾರೆ ಮತ್ತು ಅಂತೆಯೇ ಎಸ್‌ಎಚ್‌ಜಿ ಗಳ ಮೂಲಕ ಆಗುತ್ತಿರುವ ಉಳಿತಾಯವೂ ಹೆಚ್ಚಿದೆ. ಇದೇ ಸೂಚಕಗಳನ್ನು ನೋಡಿದಾಗ ನೆಲಮಂಗಲ ಇತರ ಎಲ್ಲ ತಾಲೂಕುಗಳಿಗಿಂತ ಹಿಂದುಳಿದಿದೆ.

**ಕೋಷ್ಟಕ 8.20: ಸ್ತ್ರೀಯರ ಎಸ್‌ಎಚ್‌ಜಿ ಮತ್ತು ಅವರ ಉಳಿತಾಯಗಳು–ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯಲ್ಲಿ (2011–12)**

| ತಾಲೂಕು/ಜಿಲ್ಲೆ | ಎಸ್‌ಎಚ್‌ಜಿ ಗಳ ಸಂಖ್ಯೆ | ಸದಸ್ಯರ ಸಂಖ್ಯೆ | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಇತರೆ | ಉಳಿತಾಯ ಲಕ್ಷ ರೂಗಳಲ್ಲಿ |
|---|---|---|---|---|---|---|
| ದೇವನಹಳ್ಳಿ | 850 | 14,450 | 3,180 | 1,744 | 9,526 | 71.70 |
| ದೊಡ್ಡಬಳ್ಳಾಪುರ | 764 | 14,838 | 4,238 | 618 | 9,982 | 104.64 |
| ಹೊಸಕೋಟೆ | 964 | 16,132 | 4,492 | 644 | 10,996 | 207.42 |
| ನೆಲಮಂಗಲ | 787 | 11,910 | 1,075 | 126 | 10,709 | 60.10 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 3,365 | 57,330 | 12,985 | 3,132 | 41,213 | 443.86 |

ಮೂಲ: ಜಿಲ್ಲಾ ಅಂಕಿ-ಅಂಶಗಳ ನೋಟ 2011-12

## 8.10 ತಾತ್ಪರ್ಯ

ಬೆಂಗಳೂರು ಗ್ರಾಮಾಂತರ ಜಿಲೆಯ ಮಹಿಳೆಯರು ರಾಜಕೀಯ, ಶಿಕ್ಷಣ ಕ್ಷೇತ್ರಗಳನ್ನು ಪ್ರವೇಶಿಸುತ್ತಿದ್ದಾರೆ, ಕಾರ್ಯಪಡೆಗಳ ಭಾಗವಾಗುತ್ತಿದ್ದಾರೆ, ಇತ್ಯಾದಿ. ಆಪ್ರಮಾಣೂ ಅವರ ಭಾಗವಹಿಸುವಿಕೆಯ ಗುಣಮಟ್ಟ ಮತ್ತು ಈ ಅವಕಾಶಗಳ ಲಭ್ಯತೆಯ ಬಗ್ಗೆ ಇನ್ನಷ್ಟು ಪರಿಶೀಲನೆಗಳಾದರೆ ಇವು ನಿಜಕ್ಕೂ ಸ್ತ್ರೀ ಸಬಲೀಕರಣದ ಪ್ರತೀಕಗಳೋ ಅಥವಾ ನಾವು ಹಾಗೆ ಸುಮ್ಮನೆ ಊಹಿಸುತ್ತಿದ್ದೇವೆಯೋ ಎಂಬುದು ಅರ್ಥವಾಗುತ್ತದೆ. The Women and Men in India Report, 2012 ಪ್ರಕಾರ 15-19 ವರ್ಷಗಳ ವಯೋಮಿತಿಯಲ್ಲಿರುವ ಗ್ರಾಮೀಣ ಭಾಗಗಳ 23.4ಶೇ. ಸ್ತ್ರೀಯರು ಯಾವುದೇ ನಿರ್ಣಯಗಳನ್ನು ಕೈಗೊಳ್ಳುವುಪ್ರಮಾಣಲ್ಲಿ ಭಾಗಿಯಾಗಿರುವುದಿಲ್ಲ. ಆದರೆ ನಗರ ಭಾಗಗಳಲ್ಲಿ ಈ ಸಂಖ್ಯೆ ಕೇವಲ ಶೇ. 13.9 ರಷ್ಟು ಇದೆ.

ಕೆಲಸ ಮತ್ತು ಆದಾಯ ಅಥವಾ ಆರೋಗ್ಯವನ್ನು ಅಭಿವೃದ್ಧಿಯ ಜೊತೆ ಅಧ್ಯಯನ ಮಾಡುವಾಗ ಸ್ತ್ರೀಯರಿಗೆ ಹೆಚ್ಚು ಸಮಾನತೆ ಒದಗಿಸುವ ಪರಿಸರ ಸೃಷ್ಟಿಸುವ ಅಗತ್ಯವಿದೆ. ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಕ್ಕೆ ಮಾತ್ರ ಸೀಮಿತವಲ್ಲ, ಬಹುಪಾಲು ವಿಶ್ವವ್ಯಾಪಿ ಅಗತ್ಯ. ಆದರೆ ಈ ಅಗತ್ಯವನ್ನು ಪೂರೈಸಲು ಏನು ಮಾಡಬೇಕು ಎಂಬುದನ್ನು ಒತ್ತಿ ಹೇಳುವ ಅಗತ್ಯವಿದೆ. ಅವುಗಳಲ್ಲಿ ಕೆಲವು:

ಎ) ರಚನೆಗಳಲ್ಲಿನ ಅಡೆತಡೆಗಳನ್ನು ಕಡಿಮೆ ಮಾಡುವುದು. ಇದರಿಂದ ಸ್ತ್ರೀಯರು ಕೆಲಸ ಮತ್ತು ಆದಾಯಗಳ ವಿಷಯಗಳಲ್ಲಿ ಸಬಲರಾಗುತ್ತಾರೆ, ಮತ್ತು ಲಿಂಗ-ಸಂವೇದಿ ಆರೋಗ್ಯ ರಕ್ಷಣೆ ಒದಗಿಸುವುದು.

ಬಿ) ಗಳಿಕೆ ಇಲ್ಲದ ಕೆಲಸದ ಪ್ರಮಾಣ ಗುರುತಿಸುವುದು

ಸಿ) ಆಯ್ಕೆಗಳನ್ನು ವಿಸ್ತಾರಗೊಳಿಸುವಂತಹ ಹೊಸ ತರಬೇತಿ ಮಾದರಿಗಳನ್ನು ಮತ್ತು ಶಿಕ್ಷಣ ವ್ಯವಸ್ಥೆಗಳನ್ನು ಅಭಿವೃದ್ಧಿಗೊಳಿಸುವುದು. ಉದಾ: ಐಟಿಐ ಕೋರ್ಸುಗಳಲ್ಲಿ ಅಸಂಪ್ರದಾಯಿಕ ಲಿಂಗಧಾರಿತ ಕೌಶಲಗಳ (ಹೊಲಿಗೆ ಮತ್ತು ಉಪ್ಪಿನಕಾಯಿ ಹಾಕುವುದಕ್ಕಿಂತ ಬೇರೆಯದಾದ) ಕೋರ್ಸನ್ನು ಸೇರಿಸಿಕೊಳ್ಳುವುದು ಮತ್ತು ಅದನ್ನು ಪ್ರಚಾರ ಮಾಡುವುದು.

ಡಿ) ಅಸಂಘಟಿತ ಕ್ಷೇತ್ರಗಳಲ್ಲಿರುವವರಿಗೆ ಸಾಮಾಜಿಕ ರಕ್ಷಣೆ, ಲಾಭಗಳು ಮತ್ತು ಭದ್ರತೆಗಳನ್ನು ಒದಗಿಸುವುದು (ಅಂತಾರಾಷ್ಟ್ರೀಯ ಕಾರ್ಮಿಕ ಕಚೇರಿ, 2010).

ಲಿಂಗ ಸಮಾನತೆಯ ಪರಿಕಲ್ಪನೆಯತ್ತ ಬದಲಾಗುವುದು ಎಂದರೆ ಪುರುಷರ ವೈಶಿಷ್ಟ್ಯಗಳಲ್ಲಿ, ಆಲೋಚನೆಗಳಲ್ಲಿಯೂ ಬದಲಾವಣೆಗಳ ಅಗತ್ಯವಿದೆ ಎಂದರ್ಥ. ಜೊತೆಗೆ ಲಿಂಗ-ಸಂವೇದಿ ಅಭಿವೃದ್ಧಿ ಸೂಚಕಗಳು ಇವುಗಳನ್ನು ಸೆರೆಹಿಡಿಯಲು ಮತ್ತಷ್ಟು ಸೂಕ್ಷ್ಮವಾಗಬೇಕಿವೆ. ಇದನ್ನೇ ಈ ಅಧ್ಯಾಯದ ಉದ್ದಕ್ಕೂ ಪ್ರತಿಪಾದಿಸಿರುವುದು.



# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಾನಮಾನ






# ೯. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಾನಮಾನ

"ಸತ್ಯ ಸತ್ಯವೇ, ಅದು ನಿಮ್ಮ ಇಷ್ಟಾನಿಷ್ಟಗಳ ಪ್ರಕಾರ ಬದಲಾಗುವುದಿಲ್ಲ"

– ಜವಾಹರಲಾಲ್ ನೆಹರು

(ಭಾರತದ ಪ್ರಥಮ ಪ್ರಧಾನಿ)

## ೯.1. ಪ್ರಸ್ತಾವನೆ

ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ದಲಿತರು ಮತ್ತು ಆದಿವಾಸಿಗಳಿಗೆ, ಅಧಿಕೃತವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂದು ಕರೆಯಲಾಗುತ್ತದೆ, ದೇಶವು ಅಳವಡಿಸಿಕೊಂಡಿರುವ ಧನಾತ್ಮಕ ಕಾರ್ಯನೀತಿಗಳ ಭಾಗವಾಗಿ ಇವರಿಗೆ ವಿಶೇಷ ಸ್ಥಾನಮಾನ ನೀಡಲಾಗಿದೆ. ಪಾವಿತ್ರ್ಯ ಮತ್ತು ಕೊಳಕಿನ ಹೆಸರಿನಲ್ಲಿ ದಲಿತರನ್ನು ಅಸ್ಪೃಶ್ಯರೆಂದು ದೂರವಿಡಲಾಗಿತ್ತು. ಹಾಗಾಗಿ ಅವರಿಗೆ ಅನೇಕ ಸಂಪನ್ಮೂಲಗಳು ಮತ್ತು ಅವಕಾಶಗಳು ಲಭ್ಯವಿರಲಿಲ್ಲ. ಆದಿವಾಸಿಗಳು ಬಹುಮಟ್ಟಿಗೆ ಮುಖ್ಯವಾಹಿನಿಯಿಂದ ದೂರವಿದ್ದರು. ಹಾಗಾಗಿ ಅವರಿಗೂ ಅವಕಾಶಗಳು ಸಿಗುತ್ತಿರಲಿಲ್ಲ ಮತ್ತು ಅವರು ಆಧುನಿಕ ಅಭಿವೃದ್ಧಿಯಿಂದ ದೂರವೇ ಉಳಿದಿದ್ದರು. ಇವುಗಳು ಅಧಿಕೃತ ವರ್ಗಗಳೇ ಹೊರತು ಸಾಮಾಜಿಕ ವರ್ಗಗಳಲ್ಲ ಎನ್ನುವುದು ಮುಖ್ಯ. ಈ ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡ ವರ್ಗಗಳಲ್ಲೂ ಬಹಳಷ್ಟು ಅಂತರಗಳುಳ್ಳ ಹಲವಾರು ಜಾತಿಗಳು ಮತ್ತು ಪಂಗಡಗಳು ಇವೆ. ಬುಡಕಟ್ಟು ಜನರನ್ನು ಸೇರಿಸಿಕೊಳ್ಳಬೇಕೋ ಬೇಡವೋ ಎಂಬ ಬಗ್ಗೆ ಚರ್ಚೆ ನಡೆಯುತ್ತಿದ್ದರೂ, ಪ್ರಸಕ್ತ ವಿಶ್ಲೇಷಣೆ ದೇಶವು ಅಳವಡಿಸಿಕೊಂಡಿರುವ ಮತ್ತು ಮಾನವ ಅಭಿವೃದ್ಧಿ ವರದಿಯ ಮಾರ್ಗೋಪಾಯದಲ್ಲಿ ಅಂತರ್ಗತವಾಗಿರುವ ಅಭಿವೃದ್ಧಿಯ ಪಥವನ್ನು ಅನುಸರಿಸುತ್ತದೆ

ಸ್ವಾತಂತ್ರ್ಯ ಪೂರ್ವ ಅವಧಿಯಲ್ಲಿ ಭಾರತೀಯ ಸರ್ಕಾರದ ಅಧಿನಿಯಮ 1935 ನೊಂದಿಗೆ ಪರಿಶಿಷ್ಟ ಜಾತಿ (ಪರಿಶಿಷ್ಟ ಜಾತಿ.) ಎಂದು ಸೂಚಿಸುವ ಕೆಲಸ ಆರಂಭವಾಯಿತು. ಸ್ವಾತಂತ್ರ್ಯದ ನಂತರ ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡ ಎರಡೂ ವರ್ಗಗಳನ್ನು ಭಾರತ ಸಂವಿಧಾನದ ವಿಧಿ(ಅನುಚ್ಛೇದ) 341 ಮತ್ತು 342 ಅಡಿಯಲ್ಲಿ ಸೂಚಿಸಲಾಯಿತು. ಈ ಕುರಿತಾದ ಆದೇಶವನ್ನು ಜಾರಿಗೊಳಿಸಿದ್ದು 1950 ರಲ್ಲಿಯಾದರೂ ನಂತರ ತಿದ್ದುಪಡಿಗಳನ್ನು ಮಾಡಿ ಅಧಿಸೂಚನೆಯ ಪ್ರಕ್ರಿಯೆಯ ಸಮಯದಲ್ಲಿ ಬಿಟ್ಟುಹೋಗಿದ್ದ ಜಾತಿಗಳು ಮತ್ತು ಪಂಗಡಗಳನ್ನು ಸೇರಿಸಲಾಯಿತು. ಕರ್ನಾಟಕದಲ್ಲಿ 101 ಜಾತಿಗಳು ಪರಿಶಿಷ್ಟ ಜಾತಿ. ಅಡಿಯಲ್ಲಿ ಬರುತ್ತವೆ ಮತ್ತು ಪರಿಶಿಷ್ಟ ಪಂಗಡ ಅಡಿಯಲ್ಲಿ ಸುಮಾರು 50 ಪ್ರಮುಖ ಪಂಗಡಗಳಿವೆ-ಇದರಲ್ಲಿ 2 ಆದಿಮ ಪಂಗಡಗಳೂ ಇವೆ. ಅನುಚ್ಛೇದ 341 ಮತ್ತು 342 ಅಲ್ಲದೆ ಅನುಚ್ಛೇದ 46, 15(4), 15(5), 16(4), 16(4ಎ), 16(4ಬಿ), 275(1) ಮೊದಲ ಭಾಗ ಮತ್ತು 164(1) ಭಾಗ ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡಗಳಿಗೆ ಇರುವ ಅಭಿವೃದ್ಧಿಯ ಪ್ರತಿಕೂಲಗಳನ್ನು ನಿವಾರಿಸಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ನ್ಯಾಯ ಒದಗಿಸಬೇಕೆಂದು ರಾಜ್ಯ ಸರ್ಕಾರಗಳನ್ನು ಕಡ್ಡಾಯಪಡಿಸಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಹಾಕಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡಗಳ ಮೇಲ್ವಿಚಾರಣೆಗಾಗಿ ಪ್ರತ್ಯೇಕ ಇಲಾಖೆಗಳನ್ನು ಸೃಷ್ಟಿಸಿವೆ. ಕೇಂದ್ರ ಸರ್ಕಾರ 1974ರಲ್ಲಿ ರಚಿಸಿದ ಗಿರಿಜನ ಉಪಯೋಜನೆ ಮತ್ತು 1978ರಲ್ಲಿ ರಚಿಸಿದ ವಿಶೇಷ ಘಟಕ ಯೋಜನೆ ಅನುಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗಳ ಕಲ್ಯಾಣಕ್ಕಾಗಿ ಬೇಕಾಗುವ ವೆಚ್ಚಗಳನ್ನು ಹೊಂದಿಸುವಲ್ಲಿ ಒಂದು ಮಹತ್ತ್ವದ ಹೆಜ್ಜೆಯಾಗಿದೆ. ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಒಂದು ಕೇಂದ್ರೀಕೃತ ಮಾರ್ಗೋಪಾಯ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಸಾಮಾಜಿಕವಾಗಿ ಮುಂದುವರಿದ ಸಮಾಜ ವರ್ಗಗಳ ನಡುವಣ ಅಂತರವನ್ನು ಕಡಿಮೆ ಮಾಡುವುದು ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಒಂದು ಮುಖ್ಯವಾದ ಮತ್ತು ಅತ್ಯಾವಶ್ಯಕವಾದ ಹೆಜ್ಜೆ ಎಂದು ಮನಗಾಣಲಾಗಿದೆ. ಹಾಗಾಗಿ ದೇಶದ ನ್ಯಾಯಸಮ್ಮತವಾದ ಪ್ರಗತಿಯ ಸಲುವಾಗಿ ಶೈಕ್ಷಣಿಕ, ಆರೋಗ್ಯ, ಜೀವನೋಪಾಯಕ್ಕೆ ಮತ್ತು ಆದಾಯಗಳ ಸ್ಥಿತಿಗತಿಗಳ ವಿಷಯಗಳಲ್ಲಿ ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡ ಗಳ ಹಾಗೂ ಉಳಿದ ಜನರ ನಡುವಣ ಹೋಲಿಕೆಯನ್ನು ಮಾಡುವುದು ಒಂದು ಮಹತ್ತ್ವದ ಕ್ರಮವಾಗಿದೆ. ಈ ಅಧ್ಯಾಯವು ವಿವಿಧ ಸಾಮಾಜಿಕ ಗುಂಪುಗಳ ಸೂಚಕಗಳನ್ನು ತುಲನಾತ್ಮಕವಾಗಿ ಪ್ರಸ್ತುತಪಡಿಸುವ ಪ್ರಯತ್ನ ಮಾಡುತ್ತದೆ.

### ರಾಷ್ಟ್ರೀಯ ಮತ್ತು ರಾಜ್ಯ ಮಟ್ಟಗಳಲ್ಲಿ ಸಚಿವಾಲಯಗಳ ಕಾರ್ಯಗಳು

**ಭಾರತ ಸರ್ಕಾರ**

1999ರಲ್ಲಿ ಪರಿಶಿಷ್ಟ ಪಂಗಡ (ಪಂಗಡಗಳ ಕಲ್ಯಾಣ ಸಚಿವಾಲಯ) ಮತ್ತು ಪರಿಶಿಷ್ಟ ಜಾತಿ. (ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ) ಗಳಿಗಾಗಿ ಎರಡು ಪ್ರತ್ಯೇಕ ಸಚಿವಾಲಯಗಳನ್ನು ತೆರೆಯಲಾಯಿತು. ಈ ಸಚಿವಾಲಯಗಳು ಆ ವರ್ಗಗಳ ನಾಗರಿಕ ಹಕ್ಕುಗಳ ರಕ್ಷಣೆ, ದೌರ್ಜನ್ಯಗಳ ತಡೆ ಮತ್ತು ಆ ವರ್ಗಗಳಿಗೆಂದೇ ಮೀಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಗಳಿಗೆ ಮಧ್ಯವರ್ತಿ ಸಂಸ್ಥೆಗಳಾಗಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ರಾಷ್ಟ್ರೀಯ ಆಯೋಗ 2004 ಫೆಬ್ರವರಿಯಲ್ಲಿ ಜಾರಿಗೆ ಬರುವಂತೆ ಪರಿಶಿಷ್ಟ ಜಾತಿಗಳಿಗಾಗಿ ರಾಷ್ಟ್ರೀಯ ಆಯೋಗ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ರಾಷ್ಟ್ರೀಯ ಆಯೋಗ (ಎಂದು ಎರಡಾಗಿ. ಪರಿಶಿಷ್ಟ ಜಾತಿ ಒಳ ಯೋಜನೆ ಮಾರ್ಗೋಪಾಯವನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಡಿಯಲ್ಲಿ ಪರಿಶಿಷ್ಟ ಜಾತಿ ಇಲಾಖೆ ಅನುಷ್ಠಾನಗೊಳಿಸುತ್ತದೆ. ಇದಕ್ಕಾಗಿ ರಾಜ್ಯಗಳಲ್ಲಿ/ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ಘಟಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಸಚಿವಾಲಯವು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಸಚಿವಾಲಯವು ಪರಿಶಿಷ್ಟ ಜಾತಿಗೆ ವಿಶೇಷ ಅನುದಾನ ನೀಡುತ್ತದೆ. ಇದನ್ನು ಪರಿಶಿಷ್ಟ ಜಾತಿ ಜನಸಂಖ್ಯೆ, ಹಿಂದುಳಿಯುವಿಕೆ, ಇತ್ಯಾದಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಮತ್ತು ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಆದಾಯ ಉತ್ಪತ್ತಿಮಾಡುವ ಚಟುವಟಿಕೆಗಳಿಗೆ ಸಾಲ ಒದಗಿಸುತ್ತದೆ. ಕೇಂದ್ರ ಸರ್ಕಾರದ ಖರ್ಚಿನ ಆಯವ್ಯಯ ವಿವರಗಳ ಹೇಳಿಕೆ 21 ಮತ್ತು 21ಎ ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡ ಗೆಂದೇ ಇರುವ ಪ್ರತ್ಯೇಕ ವೆಚ್ಚಗಳ ವಿವರಗಳನ್ನು ನೀಡುತ್ತದೆ.

**ಕರ್ನಾಟಕ ಸರ್ಕಾರ**

1999ರಲ್ಲಿ ಸಮಾಜ ಕಲ್ಯಾಣ ಇಲಾಖೆಯನ್ನು ಮರು ಸಂಘಟಿಸಲಾಯಿತು. ಅದರಲ್ಲಿ ಕೇವಲ ಪರಿಶಿಷ್ಟ ಜಾತಿ ಮೇಲೆ ಮಾತ್ರ ಕೇಂದ್ರೀಕರಿಸಲಾಗಿತ್ತು. ಆಗ ರಾಜ್ಯದ ಪರಿಶಿಷ್ಟ ಪಂಗಡಗಳ ಕಲ್ಯಾಣ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ ಪಂಗಡಗಳ ಕಲ್ಯಾಣ ಇಲಾಖೆಯನ್ನು ಸೃಷ್ಟಿಸಲಾಯಿತು, ಸಮಾಜ ಕಲ್ಯಾಣ ಇಲಾಖೆ ಶಿಕ್ಷಣ, ಪರಿಶಿಷ್ಟ ಜಾತಿಗಳ ಉದ್ಯೋಗ, ಸಾಮಾಜಿಕ ಏಳಿಗೆ ಮೂಲಭೂತಸೌಲಭ್ಯ, ನಿವಾಸಗಳು, ಇತ್ಯಾದಿ ವಿಷಯಗಳ ಬಗ್ಗೆ ಗಮನವನ್ನು ಕೇಂದ್ರೀಕರಿಸುತ್ತದೆ. ಶಿಕ್ಷಣವೆಂದರೆ ಇದರಲ್ಲಿ ವಸತಿಶಾಲೆಗಳು, ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿವೇತನಗಳು, ಪುಸ್ತಕ ನಿಧಿ ಸೌಲಭ್ಯ, ಮತ್ತು ಉದ್ಯೋಗ ತರಬೇತಿಗಳೂ ಸೇರುತ್ತವೆ. ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕಾಗಿ ಇರುವ ಯೋಜನೆಗಳನ್ನು ಈ ಇಲಾಖೆಯು ಮೇಲ್ವಿಚಾರಿಸುತ್ತದೆ. ಪರಿಶಿಷ್ಟ ಜಾತಿಗಳ ವಾಣಿಜ್ಯೋದ್ಯಮ ಚಟುವಟಿಕೆಗಳಿಗೂ ಇಲಾಖೆಯು ಹಣಕಾಸು ನೆರವು ನೀಡಿ ಪ್ರೋತ್ಸಾಹಿಸುತ್ತದೆ. ಪಂಗಡಗಳ ಕಲ್ಯಾಣ ಇಲಾಖೆಯು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲುಗಳನ್ನು, ವಸತಿಶಾಲೆಗಳನ್ನು ನಡೆಸುತ್ತದೆ, ಶುಲ್ಕ ಮತ್ತು ಪ್ರತಿಭಾಕೂಲಿ ನೀಡುತ್ತದೆ, ಮತ್ತು ಪುಸ್ತಕ ನಿಧಿ ಸೌಲಭ್ಯ ಮತ್ತು ತರಬೇತುಗಳನ್ನು ನಡೆಸುತ್ತದೆ. ಪರಿಶಿಷ್ಟ ಪಂಗಡ ಗಳ ವಾಣಿಜ್ಯೋದ್ಯಮ ಚಟುವಟಿಕೆಗಳಿಗೂ ಈ ಇಲಾಖೆಯು ಹಣಕಾಸು ನೆರವು ನೀಡಿ ಪ್ರೋತ್ಸಾಹಿಸುತ್ತದೆ.

## 9.2. ಜನಸಂಖ್ಯೆ ಗಾತ್ರ ಮತ್ತು ಪಾಲು

2001-2011ರ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟಾರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆ 2.3 ಲಕ್ಷದಿಂದ 26.7ಲಕ್ಷಕ್ಕೆ ಏರಿದ್ದರೆ ಇಡೀ ಕರ್ನಾಟಕದಲ್ಲಿ 120.27 ಲಕ್ಷದಿಂದ 147.23 ಲಕ್ಷಕ್ಕೆ ಏರಿದೆ. (ಕೋಷ್ಟಕ 9.1). ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ. ಜನಸಂಖ್ಯೆಯಲ್ಲಿನ ಹೆಚ್ಚಳ 'ಇತರ ವರ್ಗದವರ ಹೆಚ್ಚಳಕ್ಕಿಂತ ಕಡಿಮೆ ಇದೆ. ಆದರೆ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದವರ ಸಂಖ್ಯೆ 'ಇತರ' ವರ್ಗದವರ ಹೆಚ್ಚಳಕ್ಕಿಂತ ಹೆಚ್ಚಿದೆ. ಇದರ ಅರ್ಥ, ಈ ದಶಕದಲ್ಲಿ ಪರಿಶಿಷ್ಟ ಜಾತಿ. ಗಳ ಪಾಲು ಕಡಿಮೆಯಾಗಿದೆ ಪರಿಶಿಷ್ಟ ಪಂಗಡಗಳ ಪಾಲು ಹೆಚ್ಚಾಗಿದೆ. ಆದರೆ ಈ ಬದಲಾವಣೆ ಅತ್ಯಲ್ಪವಾಗಿದೆ. ಹೊಸಕೋಟೆ ತಾಲೂಕಿನಲ್ಲಿ ಪರಿಶಿಷ್ಟ ಜಾತಿ. ಜನಸಂಖ್ಯೆ ಬೆಳವಣಿಗೆ ದರ ಅತಿ ಹೆಚ್ಚಿದ್ದರೆ ನೆಲಮಂಗಲದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಬೆಳವಣಿಗೆ ದರ ಅತಿ ಹೆಚ್ಚಿದೆ. 2001 ಮತ್ತು 2011 ಎರಡೂ ವರ್ಷಗಳಲ್ಲಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ. ಜನಸಂಖ್ಯೆ ಪಾಲು ರಾಜ್ಯ ಸರಾಸರಿಗಿಂತ ಹೆಚ್ಚಿದ್ದರೆ, ಪರಿಶಿಷ್ಟ ಪಂಗಡ ಜನಸಂಖ್ಯೆಯ ಪಾಲು ಕಡಿಮೆಯಿದೆ (ಕೋಷ್ಟಕ 9.2). ಎಲ್ಲ ತಾಲೂಕುಗಳಲ್ಲಿ ಪರಿಶಿಷ್ಟ ಜಾತಿ. ಜನಸಂಖ್ಯೆ ಇಳಿಮುಖವಾಗಿದೆ ಮತ್ತು ದೇವನಹಳ್ಳಿ ಬಿಟ್ಟರೆ ಎಲ್ಲ ತಾಲೂಕುಗಳಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆಯ ಪಾಲು ಏರಿಕೆ ಕಂಡಿದೆ. ಜಿಲ್ಲೆಯಲ್ಲಿ 'ಇತರ' ಸಂಖ್ಯೆ ರಾಜ್ಯ ಸರಾಸರಿಗಿಂತೆ ಹೆಚ್ಚಿನ ಪ್ರಮಾಣದಲ್ಲಿ ಏರಿದೆ; ಇದಕ್ಕೆ ಒಂದು ಕಾರಣ ಏನಿರಬಹುದೆಂದರೆ ರಾಜ್ಯದ ಮತ್ತು ದೇಶದ ಇತರ ಭಾಗಗಳಿಂದ ಬೆಂಗಳೂರು ನಗರಕ್ಕೆ ಸಮೀಪವಿರುವ ಈ ಜಿಲ್ಲೆಗೆ ವಲಸೆ ಬಂದಿರಬಹುದು.

**ಕೋಷ್ಟಕ 9.1: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಾಮಾಜಿಕ ವರ್ಗವಾರು ಜನಸಂಖ್ಯೆ**

| ತಾಲೂಕು | 2001 | | | | 2011 | | | |
|---|---|---|---|---|---|---|---|---|
| | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಇತರರು | ಒಟ್ಟು | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಇತರರು | ಒಟ್ಟು |
| ದೇವನಹಳ್ಳಿ | 43,288 | 18,093 | 123,945 | 185,326 | 49,517 | 20,385 | 139,720 | 209,622 |
| ದೊಡ್ಡಬಳ್ಳಾಪುರ | 54,728 | 11,609 | 201,995 | 268,332 | 60,773 | 14,259 | 224,562 | 299,594 |
| ಹೊಸಕೋಟೆ | 48,766 | 7,658 | 166,006 | 222,430 | 57,882 | 9,753 | 203,183 | 270,818 |
| ನೆಲಮಂಗಲ | 39,820 | 6,310 | 128,750 | 174,880 | 45,528 | 8,506 | 156,855 | 210,889 |
| ಬೆಂಗಳೂರು ಗ್ರಾಮಾಂತರ | 186,602 | 43,670 | 620,696 | 850,968 | 213,700 | 52,903 | 724,320 | 990,923 |
| ಕರ್ನಾಟಕ | 8,563,930 | 3,463,986 | 40,822,646 | 52,850,562 | 10,474,992 | 4,248,987 | 46,371,318 | 61,095,297 |

ಮೂಲ; ಭಾರತದ ಜನಗಣತಿ

**ಚಿತ್ರ 9.1: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಾಮಾಜಿಕ ಸಮೂಹಗಳವಾರು ಜನಸಂಖ್ಯೆ ಬೆಳವಣಿಗೆ ಪ್ರಮಾಣ (ಶೇಕಡಾವರುವಿನಲ್ಲಿ) (ಅವಧಿ 2001–2011)**




ಮೂಲ: ಭಾರತದ ಜನಗಣತಿ

**ಕೋಷ್ಟಕ 9.2: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2001–2011 ದಶಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನ ಸಂಖ್ಯೆ ಪಾಲಿನಲ್ಲಿ  ಬದಲಾವಣೆ**

| ತಾಲೂಕು | 2001 | | | 2011 | | | ಬದಲಾವಣೆ | | |
|---|---|---|---|---|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು |
| ದೇವನಹಳ್ಳಿ | 23.36 | 9.76 | 66.88 | 23.62 | 9.72 | 66.65 | 0.26 | –0.04 | –0.23 |
| ದೊಡ್ಡಬಳ್ಳಾಪುರ | 20.40 | 4.33 | 75.28 | 20.29 | 4.76 | 74.96 | –0.11 | 0.43 | –0.32 |
| ಹೊಸಕೋಟೆ | 21.92 | 3.44 | 74.63 | 21.37 | 3.60 | 75.03 | –0.55 | 0.16 | 0.39 |
| ನೆಲಮಂಗಲ | 22.77 | 3.61 | 73.62 | 21.59 | 4.03 | 74.38 | –1.18 | 0.43 | 0.76 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 21.93 | 5.13 | 72.94 | 21.57 | 5.34 | 73.10 | –0.36 | 0.21 | 0.16 |
| ಕರ್ನಾಟಕ | 16.20 | 6.55 | 77.24 | 17.15 | 6.95 | 75.90 | 0.94 | 0.40 | –1.34 |

ಮೂಲ: ಭಾರತದ ಜನಗಣತಿ

ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯ ಲಿಂಗ ಅನುಪಾತವು ಇತರ ವರ್ಗಕ್ಕೆ ಹೋಲಿಸಿದಾಗ ಉತ್ತಮವಾಗಿದೆ (ಕೋಷ್ಟಕ 9.3). ಪರಿಶಿಷ್ಟ ಜಾತಿಗಳ ಲಿಂಗ ಅನುಪಾತ 2001ರಲ್ಲಿ 971 ಇದ್ದದ್ದು 2011ರಲ್ಲಿ 989ಕ್ಕೆ ಏರಿದ್ದರೆ ಇತರ ವರ್ಗದ್ದು ಇಳಿದಿದೆ. 2001-2011 ಅವಧಿಯಲ್ಲಿ ಜಿಲ್ಲೆಯಲ್ಲಿನ ಎಲ್ಲ ತಾಲೂಕುಗಳಲ್ಲೂ ಪರಿಶಿಷ್ಟ ಜಾತಿಯ ಲಿಂಗ ಅನುಪಾತ ಗಣನೀಯವಾದ ಸುಧಾರಣೆ ಕಂಡಿದೆ, ಹೊಸಕೋಟೆ ತಾಲೂಕಿನಲ್ಲಿ ಬದಲಾವಣೆ ಪ್ರಮಾಣ ಅತಿ ಹೆಚ್ಚಿದೆ. ಇದಕ್ಕೆ ಪ್ರತಿಯಾಗಿ 2001-2011 ಅವಧಿಯಲ್ಲಿ ಜಿಲ್ಲೆಯಲ್ಲಿ ದೇವನಹಳ್ಳಿ ಹೊರತಾಗಿ ಎಲ್ಲ ತಾಲೂಕುಗಳಲ್ಲೂ ಪರಿಶಿಷ್ಟ ಪಂಗಡದ ಲಿಂಗ ಅನುಪಾತ ಇಳಿಮುಖವಾಗಿದೆ. ಇದಕ್ಕೆ ಕಾರಣ, ಬಹುಶಃ ಪರಿಶಿಷ್ಟ ಪಂಗಡದ ವಲಸಿಗರು ತಮ್ಮ ಕುಟುಂಬಗಳನ್ನು ತಮ್ಮ ಹುಟ್ಟೂರಿನಲ್ಲಿ ಬಿಟ್ಟು ಒಬ್ಬರೇ ಈ ಜಿಲ್ಲೆಗೆ ಬಂದಿರಬಹುದು.

**ಕೋಷ್ಟಕ 9.3: 2001–2011 ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಲಿಂಗ ಅನುಪಾತದಲ್ಲಿನ ಬದಲಾವಣೆ**

| ತಾಲೂಕು/ಜಿಲ್ಲೆ/ರಾಜ್ಯ | 2001 | | | 2011 | | | ಬದಲಾವಣೆ | | |
|---|---|---|---|---|---|---|---|---|---|
| | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಇತರರು | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಇತರರು | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಇತರರು |
| ದೇವನಹಳ್ಳಿ | 968 | 949 | 936 | 983 | 961 | 928 | 15 | 12 | -8 |
| ದೊಡ್ಡಬಳ್ಳಾಪುರ | 975 | 951 | 944 | 995 | 938 | 941 | 19 | -14 | -3 |
| ಹೊಸಕೋಟೆ | 959 | 949 | 922 | 988 | 941 | 914 | 29 | -8 | -8 |
| ನೆಲಮಂಗಲ | 982 | 983 | 945 | 991 | 946 | 954 | 9 | -37 | 9 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 971 | 955 | 937 | 989 | 949 | 934 | 19 | -6 | -3 |
| ಕರ್ನಾಟಕ | 973 | 972 | 962 | 990 | 990 | 968 | 16 | 18 | 5 |

ಮೂಲ: ಭಾರತದ ಜನಗಣತಿ

## 9.3. ಸಾಕ್ಷರತೆ ಮತ್ತು ಶಿಕ್ಷಣ

ಶಿಕ್ಷಣಕ್ಕೆ ಅವಕಾಶಗಳನ್ನು ವೃದ್ಧಿಸುವ ಮತ್ತು ಅಂತರ್ಗತ ಬದಲಾವಣೆಗಳನ್ನು ಮಾಡುವ ಅಪಾರ ಸಾಮರ್ಥ್ಯವಿದ್ದು, ತುಲನಾತ್ಮಕವಾಗಿ ಹಿಂದುಳಿದ ವರ್ಗಗಳ ಏಳಿಗೆಗೆ ಇದೊಂದು ಅತ್ಯಂತ ಪರಿಣಾಮಕಾರಿ ಸಾಧನ ಎಂದು ನೋಡಲಾಗುತ್ತದೆ. ಆದ್ದರಿಂದಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪರವಾದ ಕಾರ್ಯನೀತಿಗಳನ್ನು ರಚಿಸುವಾಗ ಶಿಕ್ಷಣವನ್ನು ದೊಡ್ಡ ಪ್ರಮಾಣದಲ್ಲಿ ಅಳವಡಿಸಿಕೊಳ್ಳಲಾಗುತ್ತದೆ. ಈ ಮಧ್ಯಸ್ಥಿಕೆಯಲ್ಲಿ ಸಾಮಾನ್ಯವಾಗಿ ವಿವಿಧ ಪ್ರತಿಭಾಕೂಟಗಳು ಮತ್ತು ವರ್ಗಾವಣೆಗಳನ್ನು (ನಗದು-ನಗದೇತರ), ಉನ್ನತ ವ್ಯಾಸಂಗದ ಸಂಸ್ಥೆಗಳಲ್ಲಿ ಮೀಸಲಾತಿ, ರಾಜ್ಯ ಸರ್ಕಾರದಿಂದ ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡಗಳಿಗೆ ಉಚಿತ ಶಿಕ್ಷಣ ಮತ್ತು ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗಾಗಿ ವಸತಿಶಾಲೆಗಳನ್ನು ತೆರೆಯುವುದು, ಇತ್ಯಾದಿಗಳು ಸೇರಿರುತ್ತವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ಯೋಜನೆಗಳನ್ನು ಮತ್ತು ಸವಲತ್ತುಗಳನ್ನು ಪಡೆದುಕೊಂಡಿದೆ. ಜಿಲ್ಲೆಯ ಶಿಕ್ಷಣ ಸಂಬಂಧಿತ ಸೂಚಕಗಳನ್ನು ಪರಿಶೀಲಿಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯಾ ಸಮೂಹಗಳಲ್ಲಿ ಸುಧಾರಣೆಗಳು ಆಗಿದ್ದರೂ ಅಂತರ-ಸಮೂಹ ವ್ಯತ್ಯಾಸಗಳು ಇನ್ನೂ ವ್ಯಾಪಕವಾಗಿವೆ.

ಹೆಚ್ಚು ಮಾಹಿತಿಯನ್ನು ಲಭ್ಯವಾಗಿಸುವ ಮತ್ತು ಗಣನೀಯವಾದ ಅಂತರ-ಪೀಳಿಗೆ ಪ್ರಭಾವಗಳನ್ನು ಉಂಟುಮಾಡುವ ಸಾಮರ್ಥ್ಯವುಳ್ಳ ಸಾಕ್ಷರತೆಯು ಒಂದು ಮುಖ್ಯವಾದ ಸೂಚಕ. ಜಿಲ್ಲೆಯ ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡ ವರ್ಗಗಳೂ ಸೇರಿದಂತೆ ಎಲ್ಲ ವರ್ಗಗಳ ಸಾಕ್ಷರತಾ ಪ್ರಮಾಣ ರಾಜ್ಯದ ಸರಾಸರಿಗಿಂತ ಹೆಚ್ಚಿತ್ತು. ಎಲ್ಲ ತಾಲೂಕುಗಳಲ್ಲಿ ಮತ್ತು ಇಡೀ ಜಿಲ್ಲೆಯಲ್ಲಿ 'ಇತರರ' ಸಾಕ್ಷರತಾ ಪ್ರಮಾಣ ಅತ್ಯಂತ ಹೆಚ್ಚಿದೆ ಮತ್ತು ಪರಿಶಿಷ್ಟ ಜಾತಿ. ಸಾಕ್ಷರತಾ ಪ್ರಮಾಣಗಳು ಅತ್ಯಂತ ಕಡಿಮೆ ಇದೆ. ಅಂದರೆ, ಎಲ್ಲ ತಾಲೂಕುಗಳಲ್ಲಿ ಪರಿಶಿಷ್ಟ ಜಾತಿ ಸಾಕ್ಷರತಾ ಪ್ರಮಾಣಗಳು ಪರಿಶಿಷ್ಟ ಪಂಗಡ ಸಾಕ್ಷರತಾ ಪ್ರಮಾಣಗಳಿಗಿಂತ ಕಡಿಮೆ ಇದೆ, ಆದರೆ ರಾಜ್ಯದ ಸರಾಸರಿ ತೆಗೆದುಕೊಂಡಾಗ ಈ ಪರಿಸ್ಥಿತಿ ತದ್ವಿರುದ್ಧವಾಗಿದೆ. ಸಾಕ್ಷರತಾ ದರಗಳಲ್ಲಿ ಪರಿಶಿಷ್ಟ ಜಾತಿ. ಮತ್ತು ಇತರ ವರ್ಗಗಳ ನಡುವಿನ ವ್ಯತ್ಯಾಸ ಅತ್ಯಂತ ಹೆಚ್ಚಿರುವುದು ದೇವನಹಳ್ಳಿ ತಾಲೂಕಿನಲ್ಲಾದರೆ ಅತ್ಯಂತ ಕಡಿಮೆ ಇರುವುದು ನೆಲಮಂಗಲ ತಾಲೂಕಿನಲ್ಲಿ. ನಾಲ್ಕೂ ತಾಲೂಕುಗಳಲ್ಲಿ ಎಲ್ಲ ವರ್ಗಗಳ ಸಾಕ್ಷರತಾ ಪ್ರಮಾಣ ಅತ್ಯಂತ ಹೆಚ್ಚಿರುವುದು ನೆಲಮಂಗಲ ತಾಲೂಕಿನಲ್ಲಿ.

**ಕೋಷ್ಟಕ 9.4: ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡ ಸಾಕ್ಷರತಾ ದರ (2011)**

| ತಾಲೂಕು/ಜಿಲ್ಲೆ/ರಾಜ್ಯ | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|
| ದೇವನಹಳ್ಳಿ | 66.43 | 70.68 | 81.26 | 76.76 |
| ದೊಡ್ಡಬಳ್ಳಾಪುರ | 67.81 | 72.19 | 81.09 | 78.00 |
| ಹೊಸಕೋಟೆ | 69.31 | 70.37 | 80.80 | 77.98 |
| ನೆಲಮಂಗಲ | 71.27 | 75.38 | 81.31 | 78.91 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 68.64 | 71.79 | 81.09 | 77.93 |
| ಕರ್ನಾಟಕ | 65.33 | 62.08 | 78.78 | 75.36 |

ಮೂಲ: ಭಾರತದ ಜನಗಣತಿ

**ಕೋಷ್ಟಕ 9.5: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಒಟ್ಟು ದಾಖಲಾತಿ ಮತ್ತು ಒಟ್ಟು ದಾಖಲಾತಿ ಪ್ರಮಾಣ (2007-08 ಮತ್ತು 2011-12)**

| ಸಾಮಾಜಿಕ ವರ್ಗ | ವರ್ಗ | 2007-2008 | | | 2011-2012 | | |
|---|---|---|---|---|---|---|---|
| | | ದಾಖಲಾತಿ | ಜನಸಂಖ್ಯೆ | ಒ.ದಾ.ಪ್ರ. | ದಾಖಲಾತಿ | ಜನಸಂಖ್ಯೆ | ಒ.ದಾ.ಪ್ರ. |
| ಪರಿಶಿಷ್ಟ ಜಾತಿ. | ಪ್ರಾಥಮಿಕ | 19,960 | 18,486 | 107.97 | 17,805 | 18,565 | 95.91 |
| | ಹಿರಿಯ ಪ್ರಾಥಮಿಕ | 9,045 | 12,102 | 74.74 | 11,068 | 15,215 | 72.74 |
| | ಒಟ್ಟು | 29,005 | 30,588 | 94.82 | 28,873 | 33,780 | 85.47 |
| ಪರಿಶಿಷ್ಟ ಪಂಗಡ | ಪ್ರಾಥಮಿಕ | 4,817 | 5,048 | 95.42 | 4,815 | 5,022 | 95.88 |
| | ಹಿರಿಯ ಪ್ರಾಥಮಿಕ | 2,153 | 3,195 | 67.39 | 2,309 | 4,528 | 50.99 |
| | ಒಟ್ಟು | 6,970 | 8,243 | 84.56 | 7,124 | 9,550 | 74.6 |
| ಇತರರು | ಪ್ರಾಥಮಿಕ | 54,978 | 56,003 | 98.17 | 50,634 | 53,176 | 95.22 |
| | ಹಿರಿಯ ಪ್ರಾಥಮಿಕ | 24,137 | 33,452 | 72.15 | 31,637 | 25,442 | 124.35 |
| | ಒಟ್ಟು | 79,115 | 89,456 | 88.44 | 82,271 | 78,618 | 104.65 |

ಮೂಲ: DISE ದತ್ತಾಂಶ (ನೋಂದಾವಣಿ) ಮತ್ತು ಶಿಕ್ಷಣ ಇಲಾಖೆ ದತ್ತಾಂಶ (ಜನಸಂಖ್ಯೆ ಅಂದಾಜುಗಳು)

ಜಿಲ್ಲೆಯ 2007-08 ಮತ್ತು 2011-12, ಈ 2 ವರ್ಷಗಳ ಕಾಲದ ಒಟ್ಟಾರೆ ದಾಖಲಾತಿ ಪ್ರಮಾಣವನ್ನು ವಿಶ್ಲೇಷಿಸಲಾಯಿತು. ಆಗ ಬಂದ ಪ್ರವೃತ್ತಿಗಳು ಅಂತರ್ಬೋಧೆಗೆ ವ್ಯತಿರಿಕ್ತವಾಗಿವೆ ಮತ್ತು ಮತ್ತಷ್ಟು ಪರೀಕ್ಷೆಗಳ ಅಗತ್ಯವಿದೆ. ಈ ಅವಧಿಯಲ್ಲಿ ಒಟ್ಟಾರೆ ಲಿಂಗ ಸಂಬಂಧಿ ಅಸಮಾನತೆ ಪ್ರಮಾಣ ಉತ್ತಮಗೊಂಡಿದ್ದರೂ 2011-12ರಲ್ಲಿ ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಲಿಂಗ ಸಂಬಂಧಿ ಅಸಮಾನತೆ ಪ್ರಮಾಣಗಳು ಇಳಿಮುಖವಾಗಿವೆ, ಪ್ರಾಥಮಿಕ ಹಂತದ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಲ್ಲಿ ಇದು ಅತ್ಯಂತ ಹೆಚ್ಚಾಗಿದೆ. ಪ್ರಾಥಮಿಕ ಹಂತದಲ್ಲಿ 'ಇತರ' ವರ್ಗದಲ್ಲೂ ಕೂಡ ಇಳಿತ ಕಂಡಿದೆ, ಆದರೆ ಅವರ ಲಿಂಗ ಸಂಬಂಧಿ ಅಸಮಾನತೆ ಪ್ರಮಾಣ ಹಿರಿಯ ಪ್ರಾಥಮಿಕ ಹಂತದಲ್ಲಿ ಏರಿಕೆ ಕಂಡಿದೆ. ಇಡೀ ಎಲಿಮೆಂಟರಿ (1-8 ತರಗತಿಗಳು) ಹಂತದ ಲಿಂಗ ಸಂಬಂಧಿ ಅಸಮಾನತೆ ಪ್ರಮಾಣ ತೆಗೆದುಕೊಂಡರೆ 2007-08ರಲ್ಲಿ 'ಇತರ ವರ್ಗಗಳಿಗಿಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ಲಿಂಗ ಸಂಬಂಧಿ ಅಸಮಾನತೆ ಪ್ರಮಾಣ ಹೆಚ್ಚಿತ್ತು, ಆದರೆ 2011-12ರಲ್ಲಿ ಇದು ತಲೆಕೆಳಗಾಗಿತ್ತು.

**ಕೋಷ್ಟಕ 9.6: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತಂದದ್ದು**

| ವಯೋಮಾನ (ವರ್ಷಗಳಲ್ಲಿ) | ಸಾಮಾಜಿಕ ವರ್ಗ | 2007-2008 | | | 2011-2012 | | |
|---|---|---|---|---|---|---|---|
| | | ಶಾಲೆಯಿಂದ ಹೊರಗುಳಿದ ಮಕ್ಕಳು | ಶಾಲೆಯಿಂದ ಹೊರಗುಳಿದ ಮಕ್ಕಳು-ಮು | ಶಾಲೆಯಿಂದ ಹೊರಗುಳಿದ ಮಕ್ಕಳು-ಮುಖ್ಯವಾಹಿನಿಗೆ ಬಂದದ್ದು (ಶೇ.) | ಶಾಲೆಯಿಂದ ಹೊರಗುಳಿದ ಮಕ್ಕಳು | ಶಾಲೆಯಿಂದ ಹೊರಗುಳಿದ ಮಕ್ಕಳು-ಮು | ಶಾಲೆಯಿಂದ ಹೊರಗುಳಿದ ಮಕ್ಕಳು-ಮು (ಶೇ.) |
| 6-10 | ಇತರರು | 175 | 151 | 86.29 | 206 | 195 | 94.66 |
| | ಪರಿಶಿಷ್ಟ ಜಾತಿ. | 73 | 63 | 86.30 | 93 | 81 | 87.10 |
| | ಪರಿಶಿಷ್ಟ ಪಂಗಡ | 28 | 23 | 82.14 | 10 | 9 | 90.00 |
| | ಒಟ್ಟು | 276 | 237 | 85.87 | 309 | 285 | 92.23 |
| 11-13 | ಇತರರು | 73 | 60 | 82.19 | 32 | 43 | 134.38 |
| | ಪರಿಶಿಷ್ಟ ಜಾತಿ. | 40 | 32 | 80.00 | 17 | 17 | 100.00 |
| | ಪರಿಶಿಷ್ಟ ಪಂಗಡ | 17 | 14 | 82.35 | 3 | 3 | 100.00 |
| | ಒಟ್ಟು | 130 | 106 | 81.54 | 52 | 63 | 121.15 |

ಮೂಲ: ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಜಿಲ್ಲೆಯಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳು ಮತ್ತು ಅವರನ್ನು ಮುಖ್ಯ ವಾಹಿನಿಗೆ ತಂದ ಮಕ್ಕಳ ಸಂಖ್ಯೆಗಳನ್ನು ವಿಶ್ಲೇಷಿಸಿ ನೋಡಲಾಯಿತು. 2007-08ಕ್ಕೆ ಹೋಲಿಸಿದರೆ 2011-12ರಲ್ಲಿ ಮುಖ್ಯ ವಾಹಿನಿಗೆ ತಂದ ಮಕ್ಕಳ ಶೇ. ಉತ್ತಮಗೊಂಡಿದೆ. ಇತರ ವರ್ಗದಲ್ಲಿ ಮುಖ್ಯ ವಾಹಿನಿಗೆ ತಂದ 11-13 ವಯೋಮಾನದ ಮಕ್ಕಳ ಸಂಖ್ಯೆ 100ಶೇ. ಗೂ ಹೆಚ್ಚಿತ್ತು. ಇದಕ್ಕೆ ಕಾರಣ ಹಂಗಾಮಿ ಕೆಲಸಗಳನ್ನು ಅರಸುತ್ತ ವಲಸೆ ಬಂದವರ, ವಿಶೇಷವಾಗಿ ಮನೆ ಕಟ್ಟುವ ಕೆಲಸದವರ, ಮಕ್ಕಳು ಶಾಲೆಗೆ ಸೇರಿರುವುದು ಇರಬಹುದು. ಆದ್ದರಿಂದ ಅವರು ಶಾಲೆಯಿಂದ ಹೊರಗಿರುವ ಮಕ್ಕಳ ಆರಂಭಿಕ ಕೋಷ್ಟಕಯಲ್ಲಿ ಇರಲಿಲ್ಲ.

## 9.4. ಭೂ ಮಾಲಿಕತ್ವ ಮತ್ತು ಪರಭಾರೆ

ಆರ್ಥಿಕ ಸಬಲೀಕರಣ ಕಡೆಗಾಣಿಸಲ್ಪಟ್ಟವರ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನ ಬದಲಿಸುವಲ್ಲಿ ಮಹತ್ತ್ವದ ಪಾತ್ರ ವಹಿಸುತ್ತದೆ. ಕರ್ನಾಟಕದ ಗುಲಬರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ[31] ನಡೆಸಿದ ಅಧ್ಯಯನವೊಂದರಲ್ಲಿ ಶೇ. 92.8 ಪರಿಶಿಷ್ಟ ಜಾತಿ ಮತ್ತು ಶೇ. 95 ರಷ್ಟು ಪರಿಶಿಷ್ಟ ಪಂಗಡದವರು ಆರ್ಥಿಕ ಸಬಲೀಕರಣ ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಪಡಿಸಿವೆ ಎಂದು ಹೇಳಿದ್ದಾರೆ. ಈ ಹಿಂದೆ ಕೃಷಿ ಪ್ರಧಾನ ಆರ್ಥಿಕತೆಯಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಭೂಮಿ ಮಾಲಿಕತ್ವ ಇಲ್ಲದಿರುವಿಕೆಯನ್ನು ಸೂಚಿಸುತ್ತಿತ್ತು. ಆಧುನಿಕ ದಿನಗಳಲ್ಲಿ ಬೆಂಗಳೂರಿನಂತಹ

[31] 20/1/2014 ರಂದು http://shodhganga.inflibnet.ac.in/bitstream/10603/8483/15/15_chapter%205.pdf ನಿಂದ ಪಡೆದುಕೊಳ್ಳಲಾಗಿದೆ

ಮಹಾ ನಗರದ ಸುತ್ತ ಇರುವ ಜಿಲ್ಲೆಯಲ್ಲಿ ಭೂಮಿ ಬೆಲೆಗಳು ಗಗನಕ್ಕೇರಿರುವಾಗ ಭೂ ಮಾಲಿಕತ್ವ ಎಂದರೆ ಬೇರೆಯೇ ಬಗೆಯ ಶಕ್ತಿ ಮತ್ತು ನಿಯಂತ್ರಣವನ್ನು ಸೂಚಿಸುತ್ತದೆ. ಪರಿಶಿಷ್ಟ ಪಂಗಡದಲ್ಲಿ ಭೂ ಮಾಲಿಕತ್ವ ಬೇರೆಯೇ ರೀತಿಯನ್ನು ಬಿಂಬಿಸುತ್ತದೆ. ಕೆಲವು ಭಾಗಗಳಲ್ಲಿ ಸಾಂಪ್ರದಾಯಿಕ ಬುಡಕಟ್ಟು ಸಮಾಜಗಳಲ್ಲಿ ಭೂ ಮಾಲಿಕತ್ವ ಇರಲೇ ಇಲ್ಲ. ಅವರು ಅರಣ್ಯೋತ್ಪನ್ನಗಳ ಮೇಲೆ ಅತಿಯಾಗಿ ಅವಲಂಬಿಸಿದ್ದರು. ಆದರೆ ಕೆಲವು ಪ್ರದೇಶಗಳಲ್ಲಿ ಅವರು ಅತಿಸಣ್ಣ ಅಥವಾ ಸಣ್ಣ ಕೃಷಿಕರಾಗಿದ್ದರು. ಆದರೆ ಅವರಿಗೆ ಕೂಡ ಭೂ ಮಾಲಿಕತ್ವ ಮಹತ್ವವನ್ನು ಹೊಂದಿತ್ತು. ಗ್ರಾಮೀಣ ಸಮುದಾಯಗಳಲ್ಲಿ ಭೂಮಿ ಇಲ್ಲವೆಂದರೆ ಸಾಲ ಸಿಗುವುದಿಲ್ಲ ಎನ್ನುವಂತಹ ಸ್ಥಿತಿ ಇದೆ. ಇದರಿಂದ ಕೈಗಡ ಸಾಲಕ್ಕೆ ಹೆಚ್ಚಿನ ಬಡ್ಡಿ ಕಟ್ಟಬೇಕಾಗುತ್ತದೆ. ಆದ್ದರಿಂದ ಭೂಮಾಲಿಕತ್ವ ಇಲ್ಲದ ಕುಟುಂಬಗಳು ಹೆಚ್ಚು ದುರ್ಬಲವಾಗುವ ಸಾಧ್ಯತೆ ಇದೆ.

ಸರ್ಕಾರವು ತಾನು ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡಕ್ಕೆ ಕೊಟ್ಟ ಭೂಮಿಗಳನ್ನು ವರ್ಗಾಯಿಸುವುದರ ಬಗ್ಗೆ ನಿಯಂತ್ರಣ ಹೇರಿದೆ[32] (ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ (ನಿರ್ದಿಷ್ಟ ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ 1978, ರಾಜ್ಯದಲ್ಲಿ ಸರ್ಕಾರವು ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡಗಳ ಕೊಟ್ಟ ಭೂಮಿಗಳನ್ನು ವರ್ಗಾಯಿಸುವುದನ್ನು ನಿಷೇಧಿಸುತ್ತದೆ. ಈ ಅಧಿನಿಯಮದ ಉದ್ದೇಶ ಸಂವಿಧಾನದ 46ನೇ ಅನುಚ್ಛೇದದಲ್ಲಿ ಇರುವ ರಾಜ್ಯ ನೀತಿಯ ನಿರ್ದೇಶನ ತತ್ವಗಳನ್ನು ಜಾರಿಗೆ ತರುವುದು). ಈ ಅನುದಾನದ ಭೂಮಿಗಳನ್ನು ಮಾರಲು/ಕೊಳ್ಳಲು ಅಥವಾ ಕೊಡುಗೆಯಾಗಿ ಕೊಡಲು ರಾಜ್ಯ ಸರ್ಕಾರದ ಪೂರ್ವ ಅನುಮತಿಯ ಅಗತ್ಯವಿದೆ. ಈ ಅಧಿನಿಯಮದ ಪ್ರಕಾರ ಮತ್ತೊಬ್ಬ ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡಕ್ಕೆ ಕೂಡ ಮಾರುವಂತಿಲ್ಲ. ಆದರೆ ಸರ್ಕಾರ ಅನುದಾನವಾಗಿ ನೀಡಿರದ ಭೂಮಿಗಳಿಗೆ ಈ ಅಧಿನಿಯಮ ಅನ್ವಯವಾಗುವುದಿಲ್ಲ. ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡ ಕುಟುಂಬಗಳ ಆರ್ಥಿಕ ಸೇರ್ಪಡೆಯನ್ನು ಸುಧಾರಿಸಲು ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿವೆ. ಈ ಎರಡು ಗುಂಪುಗಳಿಗೆ ಮ.ಗಾಂ.ರಾ.ಗ್ರಾ.ಉ.ಖಾ.ಯೋ. ವಿಶೇಷ ನೀರಾವರಿ ಸೌಲಭ್ಯಗಳಂತಹ ಸಂಪನ್ಮೂಲಗಳ ವೃದ್ಧಿಗೆ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜಮೀನುಗಳ ಉತ್ಪಾದಕತೆಯನ್ನು ಹೆಚ್ಚಿಸಲು ಅಗತ್ಯವಾದ ಸುಧಾರಣೆಗಳನ್ನು ಮಾಡಲು ಅವಕಾಶವಾಗುತ್ತದೆ. ಜೊತೆಗೆ ಅವರ ಸ್ವಂತ ಜಮೀನಿನಲ್ಲಿ ಕೆಲಸ ಮಾಡಿ ಅದಕ್ಕೆ ಕೂಲಿ ಪಡೆಯುವ ಅವಕಾಶವೂ ಇದೆ.

ಭೂಮಾಲಿಕತ್ವರಹಿತರ ಬಗ್ಗೆ ದತ್ತಾಂಶ ಇಲ್ಲದಿರುವುದರಿಂದ ಭೂ ಹಿಡುವಳಿ ಸಂಖ್ಯೆ ಮತ್ತು ವಿಸ್ತೀರ್ಣ ಎರಡು ಬಹು ಮುಖ್ಯ ಪರಿಮಿತಿಗಳಾಗುತ್ತವೆ. ಭೂ ಹಿಡುವಳಿ ಸಂಖ್ಯೆ ಹೆಚ್ಚಾದರೆ ಅದು ಪರಿಸ್ಥಿತಿ ಉತ್ತಮವಾಯಿತೆಂದೇನೂ ಅಲ್ಲ. ಅದು, ವಿಭಾಗಗೊಂಡಿದ್ದರಿಂದ ಆಗಿರಬಹುದು. ಭೂ ಹಿಡುವಳಿ ವಿಸ್ತೀರ್ಣದಲ್ಲಿ ಬದಲಾವಣೆಯು ಸ್ವಾಧೀನದಲ್ಲಿರುವ ಸಂಪನ್ಮೂಲದ ಸ್ಥಿತಿಯನ್ನು ಸೂಚಿಸುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನಸಂಖ್ಯೆಗಳ ದೃಷ್ಟಿಯಿಂದ ನೋಡಿದಾಗ ಈ ಎರಡೂ ಸೂಚಕಗಳ ವಿಷಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪರಿಸ್ಥಿತಿ ಅಷ್ಟು ಆಶಾದಾಯಕವಾಗಿಲ್ಲ. 2005-06 ರಿಂದ 2010-11 ಅವಧಿಯಲ್ಲಿ ಹೊಸಕೋಟೆ ಮತ್ತು ನೆಲಮಂಗಲ ತಾಲೂಕುಗಳಲ್ಲಿ ಪರಿಶಿಷ್ಟ ಜಾತಿಯವರ ಭೂ ಹಿಡುವಳಿ ಸಂಖ್ಯೆ ಹೆಚ್ಚಾಗಿದೆ. ಆದರೆ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲೂಕುಗಳಲ್ಲಿ ಇದು ಕಡಿಮೆಯಾಗಿದೆ. ದೇವನಹಳ್ಳಿ ತಾಲೂಕನ್ನು ಹೊರತುಪಡಿಸಿ ಉಳಿದೆಲ್ಲ ತಾಲೂಕುಗಳಲ್ಲಿ ಪರಿಶಿಷ್ಟ ಪಂಗಡದವರ ಭೂ ಹಿಡುವಳಿ ಸಂಖ್ಯೆ ಕಡಿಮೆಯಾಗಿದೆ. ಆದರೆ ಎಲ್ಲ ತಾಲೂಕುಗಳಲ್ಲೂ ಇತರ ವರ್ಗದವರ ಭೂ ಹಿಡುವಳಿ ಸಂಖ್ಯೆ ಹೆಚ್ಚಿದೆ. ಪರಿಶಿಷ್ಟ ಜಾತಿ. ಯವರ ಭೂ ಹಿಡುವಳಿ ವಿಸ್ತೀರ್ಣ ನೆಲಮಂಗಲ ತಾಲೂಕನ್ನು ಹೊರತುಪಡಿಸಿ, ಎಲ್ಲ ತಾಲೂಕುಗಳಲ್ಲೂ ಕಡಿಮೆಯಾಗಿದೆ. ಪರಿಶಿಷ್ಟ ಪಂಗಡಗಳ ಭೂ ಹಿಡುವಳಿ ವಿಸ್ತೀರ್ಣ ದೇವನಹಳ್ಳಿ ತಾಲೂಕನ್ನು ಹೊರತುಪಡಿಸಿ. ಎಲ್ಲ ತಾಲೂಕುಗಳಲ್ಲೂ ಕಡಿಮೆಯಾಗಿದೆ,

ದೇವನಹಳ್ಳಿ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯ ಭೂ ಹಿಡುವಳಿ ಸಂಖ್ಯೆ 600 ಅಂದರೆ 880 ಹೆಕ್ಟೇರುಗಳಷ್ಟು ಕಡಿಮೆಯಾಗಿದೆ. ದೊಡ್ಡಬಳ್ಳಾಪುರ ತಾಲೂಕಿನಲ್ಲಿ 285 ಹೆಕ್ಟೇರುಗಳಷ್ಟು ಕಡಿಮೆಯಾಗಿದೆ. ಹೊಸಕೋಟೆ ತಾಲೂಕಿನಲ್ಲಿ ಈ ಸಂಖ್ಯೆ ಹೆಚ್ಚಾಗಿದೆಯಾದರೂ ಭೂ ವಿಸ್ತೀರ್ಣ 1500 ಹೆಕ್ಟೇರುಗಳಷ್ಟು ಕಡಿಮೆಯಾಗಿದೆ, ನೆಲಮಂಗಲ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯವರ ಭೂ ಹಿಡುವಳಿ ಸಂಖ್ಯೆ ಹೆಚ್ಚಿದೆ ಮತ್ತು ಭೂ ವಿಸ್ತೀರ್ಣದಲ್ಲೂ 28 ಹೆಕ್ಟೇರುಗಳಷ್ಟು ಅತ್ಯಲ್ಪ ಹೆಚ್ಚಳ ಆಗಿದೆ.

**ಕೋಷ್ಟಕ 9.7: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಭೂ ಹಿಡುವಳಿ ಸಂಖ್ಯೆ ಮತ್ತು ವಿಸ್ತೀರ್ಣ**

| ವರ್ಷ | ತಾಲೂಕು/ಜಿಲ್ಲೆ | ಹಿಡುವಳಿಗಳ ಸಂಖ್ಯೆ | | | | ವಿಸ್ತೀರ್ಣ(ಹೆಕ್ಟೇರುಗಳು) | | | |
|---|---|---|---|---|---|---|---|---|---|
| | | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಇತರರು | ಒಟ್ಟು | ಪರಿಶಿಷ್ಟ ಜಾತಿ. | ಪರಿಶಿಷ್ಟ ಪಂಗಡ | ಇತರರು | ಒಟ್ಟು |
| 2005-2006 | ದೇವನಹಳ್ಳಿ | 4,100 | 2,056 | 21,330 | 27,511 | 2,959 | 1,891 | 24,633 | 29,542 |
| | ದೊಡ್ಡಬಳ್ಳಾಪುರ | 6,588 | 2,040 | 38,952 | 47,653 | 5,288 | 2,049 | 42,722 | 50,161 |
| | ಹೊಸಕೋಟೆ | 4,316 | 747 | 33,534 | 38,628 | 4,338 | 602 | 37,536 | 42,563 |
| | ನೆಲಮಂಗಲ | 4,464 | 925 | 27,798 | 33,213 | 3,468 | 905 | 33,764 | 38,217 |
| | ಬೆಂಗಳೂರು ಗ್ರಾಮಾಂತರ ಜಿಲ್ಲೆ | 19,468 | 5,768 | 121,614 | 147,005 | 16,053 | 5,447 | 138,655 | 160,483 |
| 2010-2011 | ದೇವನಹಳ್ಳಿ | 3,466 | 2,795 | 28,072 | 34,350 | 2,080 | 1,963 | 24,101 | 28,160 |
| | ದೊಡ್ಡಬಳ್ಳಾಪುರ | 6,564 | 1,929 | 46,199 | 54,698 | 5,005 | 1,858 | 44,638 | 51,541 |
| | ಹೊಸಕೋಟೆ | 4,591 | 620 | 43,161 | 48,402 | 2,812 | 387 | 32,882 | 36,103 |
| | ನೆಲಮಂಗಲ | 4,984 | 832 | 35,596 | 41,417 | 3,496 | 689 | 32,041 | 36,230 |
| | ಬೆಂಗಳೂರು ಗ್ರಾಮಾಂತರ ಜಿಲ್ಲೆ | 19,605 | 6,176 | 153,028 | 178,867 | 13,393 | 4,897 | 133,662 | 152,034 |
| ಬದಲಾವಣೆ | | | | | | -2,660 | -550 | -4,993 | -8,449 |
| ಶೇ. ಬದಲಾವಣೆ | | | | | | -16.57 | -10.10 | -3.60 | -5.26 |

ಮೂಲ: ಜಿಲ್ಲಾ ಅಂಕಿ-ಅಂಶಗಳ ನೋಟ : 2008-09 ಮತ್ತು 2011-12

[32] ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಭೂಮಿಯ ವರ್ಗಾವಣೆಯ ನಿಷೇಧ) ಕಾಯಿದೆ, 1978 ಪ್ರಕಾರ, ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿಗಳಿಗೆ ಸರ್ಕಾರ ನೀಡಿರುವ ಭೂಮಿಯ ವರ್ಗಾವಣೆಯನ್ನು ನಿಷೇಧಿಸಲಾಗಿದೆ. ಸಂವಿಧಾನದ ಪರಿಚ್ಛೇದ 46 ರಲ್ಲಿ ಒಳಗೊಂಡಿರುವ ರಾಜ್ಯ ನೀತಿಯ ನಿರ್ದೇಶನಾತ್ಮಕ ತತ್ವಗಳನ್ನು ಅನುಷ್ಠಾನಗೊಳಿಸುವುದು ಈ ಕಾಯಿದೆಯ ಉದ್ದೇಶವಾಗಿದೆ

ದೇವನಹಳ್ಳಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಭೂ ಹಿಡುವಳಿ ಸಂಖ್ಯೆ ಮತ್ತು ವಿಸ್ತೀರ್ಣಎರಡೂ ಹೆಚ್ಚಿವೆ, ಆದರೆ ಉಳಿದ 3 ತಾಲೂಕುಗಳಲ್ಲಿ ಈ ಎರಡೂ ಕಡಿಮೆಯಾಗಿವೆ. ಹೊಸಕೋಟೆ ಮತ್ತು ನೆಲಮಂಗಲ ತಾಲೂಕುಗಳಲ್ಲಿ ಸುಮಾರು 200 ಹೆಕ್ಟೇರುಗಳಷ್ಟು ವಿಸ್ತೀರ್ಣ ಕಡಿಮೆಯಾಗಿದ್ದರೆ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಸುಮಾರು 150 ಹೆಕ್ಟೇರುಗಳಷ್ಟು ವಿಸ್ತೀರ್ಣ ಕಡಿಮೆಯಾಗಿದೆ. ಒಟ್ಟಾರೆ ಕಡಿಮೆಯಾದ ಭೂ ಹಿಡುವಳಿ ವಿಸ್ತೀರ್ಣ 8449 ಹೆಕ್ಟೇರುಗಳು. ಅದರಲ್ಲಿ 3210 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದೆ, ಅಂದರೆ ಕೃಷಿಯೇತರ ಚಟುವಟಿಕೆಗಳಿಗೆ ಪರಿವರ್ತಿಸಿದ ಒಟ್ಟು ಭೂಮಿಯ ಸುಮಾರು ಶೇ. 40 ರಷ್ಟು ಪರಿಶಿಷ್ಟ ಜಾತಿಗೆ ಸೇರಿದ್ದಾಗಿದೆ. ನಂತರದ ಸ್ಥಾನದಲ್ಲಿ ಪರಿಶಿಷ್ಟ ಪಂಗಡ ಮತ್ತು ಇತರ ವರ್ಗದವರ ಭೂ ಹಿಡುವಳಿ ಪರಿವರಿತವಾಗಿದೆ. ಹೊಸಕೋಟೆ ತಾಲೂಕಿನಲ್ಲಿ ಭೂ ಹಿಡುವಳಿ ವಿಸ್ತೀರ್ಣ ಹೆಚ್ಚಿನ ಪ್ರಮಾಣದಲ್ಲಿ ಇಳಿಕೆಯಾಗಿದೆ. ಅಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಭೂವಿಸ್ತೀರ್ಣ ಶೇ. 35 ರಷ್ಟು ಕಡಿಮೆಯಾಗಿದೆ. ದೇವನಹಳ್ಳಿ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯ ಭೂವಿಸ್ತೀರ್ಣ ಅತಿ ಕಡಿಮೆಯಾಗಿದ್ದರೆ ನೆಲಮಂಗಲ ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಭೂವಿಸ್ತೀರ್ಣ ಕಡಿಮೆಯಾಗಿದೆ.

ಪರಿಶಿಷ್ಟ ಪಂಗಡ ಮತ್ತು ಇತರ ವರ್ಗಗಳಿಗೆ ಹೋಲಿಸಿದರೆ ಪರಿಶಿಷ್ಟ ಜಾತಿಗೆ ಸೇರಿದ 4 ಹೆಕ್ಟೇರು ಮತ್ತು ಹೆಚ್ಚಿನ ಅಳತೆಯ ಭೂಮಿಯೇ ಹೆಚ್ಚು ಹೋಗಿರುವುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಲ್ಲಿ 1-2 ಹೆಕ್ಟೇರ್ ವಿಸ್ತೀರ್ಣದ ಭೂಮಿಯ ಸ್ವಾಧೀನ ಕಡಿಮೆಯಾಗಿದೆ. ಇದೇ ಅವಧಿಯಲ್ಲಿ ಇತರ ವರ್ಗದವರ ಭೂವಿಸ್ತೀರ್ಣದಲ್ಲಿ ಶೇ. 6 ರಷ್ಟು ಏರಿಕೆ ದಾಖಲಿಸಿದೆ. ಪರಿಶಿಷ್ಟ ಜಾತಿಯ ಒಂದು ಹೆಕ್ಟೇರಿಗಿಂತ ಕಡಿಮೆ ವಿಸ್ತೀರ್ಣದ ಭೂಮಿ ಸ್ವಲ್ಪ ಕಡಿಮೆಯಾಗಿದ್ದರೆ ಇತರ ವರ್ಗದಲ್ಲಿ ಅದು ಸರಿಸುಮಾರು ಶೇ. 25 ರಷ್ಟು ಹೆಚ್ಚಾಗಿದೆ. ದೇವನಹಳ್ಳಿ ಮತ್ತು ಹೊಸಕೋಟೆ ತಾಲೂಕುಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಭೂಹಿಡುವಳಿ ಗಣನೀಯವಾಗಿ ಕಡಿಮೆಯಾಗಿವೆ. ಆದರೆ ಇತರ ವರ್ಗದಲ್ಲಿ ಅದೇ ಅಳತೆಯ ಭೂಹಿಡುವಳಿ ಶೇ. 25 ರಷ್ಟು ಹೆಚ್ಚಿದೆ. ಅಂದರೆ, ಪರಿಶಿಷ್ಟ ಜಾತಿಯವರ ಭೂಹಿಡುವಳಿಗಳನ್ನು ಇತರವರ್ಗದವರು ರಿಯಲ್ ಎಸ್ಟೇಟ್ ಉದ್ದೇಶಗಳಿಗಾಗಿ ಸಣ್ಣ ಸಣ್ಣ ಪ್ರಮಾಣದಲ್ಲಿ ಕೊಂಡಿರಬಹುದು.

ದೇವನಹಳ್ಳಿ ತಾಲೂಕಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣ ಮತ್ತು ದೊಡ್ಡಬಳ್ಳಾಪುರದ 'ಆ್ಯಪರಲ್ ಪಾರ್ಕ್" ಭೂ ಬಳಕೆಯನ್ನು ಗಣನೀಯವಾಗಿ ಬದಲಿಸಿವೆ. ಬೆಂಗಳೂರಿನ ಸಾಮೀಪ್ಯ, ರಿಯಲ್ ಎಸ್ಟೇಟಿನ ಅವಿರತ ಚಟುವಟಿಕೆಗಳಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನರು ಲಾಭವನ್ನು ಪಡೆದಿದ್ದಾರೆ ನಿಜ, ಆದರೆ ಅವರಿಗೆ ಪ್ರದೇಶದ ಅಭಿವೃದ್ಧಿಯ ಬಗ್ಗೆ, ಭೂಮಿಯ ಬೆಲೆಯ ಬಗ್ಗೆ ಸಾಕಷ್ಟು ತಿಳುವಳಿಕೆಯಿಲ್ಲ. ಅವರು ರಿಯಲ್ ಎಸ್ಟೇಟ್ ಉದ್ಯಮದ ಸುಲಭ ತುತ್ತುಗಳಾಗುತ್ತಾರೆ. ಭೂಮಿಯಂತಹ ಆಸ್ತಿಯನ್ನು ಕಳೆದುಕೊಂಡರೆ ಮತ್ತು ಅವರು ವೃತ್ತಿ ಬದಲಾವಣೆಗಳಿಗೆ ಸನ್ನದ್ಧರಾಗಿಲ್ಲದಿದ್ದರೆ ಹಿಂದೆಂದಿಗಿಂತಲೂ ಹೆಚ್ಚು ದುರ್ಬಲರಾಗುತ್ತಾರೆ. ಎಲ್ಲ ವರ್ಗಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ ಜಿಲ್ಲೆಯಲ್ಲಿನ ಒಟ್ಟು ಭೂ ಹಿಡುವಳಿಯಲ್ಲಿನ ಇಳಿತ ಗಮನಿಸಿದಾಗ ಸರ್ಕಾರ ಕೈಗಾರಿಕೆ ಅಥವಾ ಇತರ ಉದ್ದೇಶಗಳಿಗಾಗಿ ಭೂ ಸ್ವಾಧೀನ ಮಾಡಿಕೊಂಡಿರುವುದೂ ಕಾಣುತ್ತದೆ. ರಿಯಲ್ ಎಸ್ಟೇಟ್ ವಲಯದ ಒತ್ತಡಗಳಿಗೆ ಮಣಿದು ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ (ನಿರ್ದಿಷ್ಟ ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ 1978 ರ ಉಲ್ಲಂಘನೆಗಳಾಗಿರುವ ಸಾಧ್ಯತೆಗಳನ್ನೂ ತಳ್ಳಿಹಾಕುವಂತಿಲ್ಲ.

**ಕೋಷ್ಟಕ 9.8: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2005-06 ರಿಂದ 2010-11 ರ ಅವಧಿಯಲ್ಲಿ ತಾಲೂಕುವಾರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಭೂ ಹಿಡುವಳಿಯ ವಿಸ್ತೀರ್ಣದಲ್ಲಿನ ಬದಲಾವಣೆಗಳು.**

| ತಾಲೂಕು/ಜಿಲ್ಲೆ | ಪರಿಶಿಷ್ಟ ಜಾತಿ. (ಶೇ.) | ಪರಿಶಿಷ್ಟ ಪಂಗಡ (ಶೇ.) | ಇತರರು (ಶೇ.) |
|---|---|---|---|
| ದೇವನಹಳ್ಳಿ | -29.71 | 3.81 | -2.16 |
| ದೊಡ್ಡಬಳ್ಳಾಪುರ | -5.35 | -9.32 | 4.48 |
| ಹೊಸಕೋಟೆ | -35.18 | -35.71 | -12.40 |
| ನೆಲಮಂಗಲ | 0.81 | -23.87 | -5.10 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | -16.57 | -10.10 | -3.60 |

ಮೂಲ: ಜಿಲ್ಲಾ ಅಂಕಿ-ಅಂಶಗಳ ನೋಟ : 2005-06 ಮತ್ತು 2010-11

**ಕೋಷ್ಟಕ 9.9: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2005-06 ರಿಂದ 2010-11 ರ ಅವಧಿಯಲ್ಲಿ ಮಾಲಿಕತ್ವವಾರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಭೂ ಹಿಡುವಳಿಯ ವಿಸ್ತೀರ್ಣದಲ್ಲಿನ ಬದಲಾವಣೆಗಳು.**

| ಹಿಡುವಳಿ ವಿಸ್ತೀರ್ಣ | ಪರಿಶಿಷ್ಟ ಜಾತಿ (ಶೇ.) | ಪರಿಶಿಷ್ಟ ಪಂಗಡ (ಶೇ.) | ಇತರರು (ಶೇ.) |
|---|---|---|---|
| < 1 ಹೆಕ್ಟೇರು | -0.69 | 3.52 | 24.89 |
| 1-2 ಹೆ. | -10.30 | -10.83 | 5.96 |
| 2-4 ಹೆ. | -30.44 | -14.83 | -8.92 |
| 4-10 ಹೆ. | -54.80 | -33.48 | -32.13 |
| > 10 ಹೆ | -91.63 | -41.೩8 | -44.40 |
| ಬೆಂಗಳೂರು ಗ್ರಾಮಾಂತರ | -16.57 | -10.10 | -3.60 |

ಮೂಲ: ಜಿಲ್ಲಾ ಅಂಕಿ-ಅಂಶಗಳ ನೋಟ : 2005-06 ಮತ್ತು 2010-11

## 9.5 ದುಡಿಮೆ ಸಹಭಾಗಿತ್ವ ಪ್ರಮಾಣ

ದುಡಿಮೆ ಸಹಭಾಗಿತ್ವ ಪ್ರಮಾಣವು ಒಂದು ಪ್ರಮುಖ ಸೂಚಕವಾಗಿದ್ದು, ಉದ್ಯೋಗಗಳಲ್ಲಿ ಕಾರ್ಮಿಕರ ತೊಡಗುವಿಕೆಯನ್ನು ಸೂಚಿಸುತ್ತದೆ. ಜಿಲ್ಲೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಪುರುಷರ ದುಡಿಮೆ ಸಹಭಾಗಿತ್ವ ಪ್ರಮಾಣವು ಇತರ ವರ್ಗಗಳಿಗಿಂತ ಕಡಿಮೆಯಿದ್ದು, ರಾಜ್ಯದ ಸರಾಸರಿಗೆ ಹೋಲಿಸಿದಂತೆ ಇದು ಹೆಚ್ಚಾಗಿದ್ದಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಗಳಲ್ಲಿ ಮಹಿಳಾ ಕಾರ್ಮಿಕ ಸಹಭಾಗಿತ್ವವು ಜಿಲ್ಲೆಯಲ್ಲಿ ಇತರ ವರ್ಗಗಳಿಗಿಂತ ಹೆಚ್ಚಾಗಿದ್ದಿತು. ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಎಲ್ಲಾ ವರ್ಗಗಳ ಒಟ್ಟು ಮಹಿಳಾ ದುಡಿಮೆ ಸಹಭಾಗಿತ್ವ ಪ್ರಮಾಣ ರಾಜ್ಯ ಸರಾಸರಿಗಿಂತ ಹೆಚ್ಚಾಗಿದ್ದಿತು. ಆದರೆ, ಆದಾಯ, ಬಡತನ ಮತ್ತು ಉದ್ಯೋಗದ ಅಧ್ಯಾಯದಲ್ಲಿ ಚರ್ಚಿಸಿರುವಂತೆ, ಜಿಲ್ಲೆಯಲ್ಲಿ 2001 ಮತ್ತು 2011 ಅವಧಿಯಲ್ಲಿ ಮಹಿಳಾ ದುಡಿಮೆ ಸಹಭಾಗಿತ್ವ ಪ್ರಮಾಣವು ಕಡಿಮೆಯಾಗಿದೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಹಿಳಾ ಕಾರ್ಮಿಕರು ಕೆಳ ಹಂತದ ಕೃಷಿ ಕೂಲಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ.

ಕಾರ್ಮಿಕರಲ್ಲಿ, ಕುಂಟೆ ಅಥವಾ ಬೇಸಾಯ ಕೂಲಿಯಾಗಿ ಕೃಷಿದಲ್ಲಿ ತೊಡಗಿರುವ ವ್ಯಕ್ತಿಗಳ ಪ್ರಮಾಣ ಇತರ ವರ್ಗಗಳಿಗೆ ಹೋಲಿಸಿದಂತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಹೆಚ್ಚಿತ್ತು. ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಕೃಷಿದಲ್ಲಿ ತೊಡಗಿಕೊಂಡಿರುವ ಕಾರ್ಮಿಕರಲ್ಲಿ ಅತಿ ಹೆಚ್ಚು ಪರಿಶಿಷ್ಟ ಜಾತಿಯವರಿದ್ದರು ಮತ್ತು ದೇವನಹಳ್ಳಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡ ಜಾತಿಯವರಿದ್ದರು. ನೆಲಮಂಗಲ ತಾಲೂಕನ್ನು ಹೊರತುಪಡಿಸಿ, ಉಳಿದ ಎಲ್ಲಾ ತಾಲೂಕುಗಳಲ್ಲಿ ಕೃಷಿಯಲ್ಲಿ ತೊಡಗಿರುವವರಲ್ಲಿ ಶೇ.50 ಕ್ಕೂ ಅಧಿಕ ಪ್ರಮಾಣ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗದವರಾಗಿದ್ದರು.

**ಕೋಷ್ಟಕ 9.10 ಸಾಮಾಜಿಕ ವರ್ಗವಾರು ಪುರುಷ ಮತ್ತು ಮಹಿಳೆ ದುಡಿಮೆ ಸಹಭಾಗಿತ್ವ ಪ್ರಮಾಣ, (2011)**

| ತಾಲೂಕು/ಜಿಲ್ಲೆ/ರಾಜ್ಯ | ಪುರುಷ | | | | ಮಹಿಳೆ | | | |
|---|---|---|---|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
| ದೇವನಹಳ್ಳಿ | 67.44 | 67.86 | 70.35 | 69.45 | 42.50 | 41.50 | 34.25 | 36.94 |
| ದೊಡ್ಡಬಳ್ಳಾಪುರ | 68.63 | 70.61 | 70.43 | 70.08 | 45.88 | 50.69 | 35.90 | 38.64 |
| ಹೊಸಕೋಟೆ | 67.16 | 68.81 | 69.90 | 69.29 | 36.53 | 34.42 | 26.63 | 29.08 |
| ನೆಲಮಂಗಲ | 67.01 | 70.46 | 69.17 | 68.76 | 33.59 | 34.95 | 27.16 | 28.88 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 67.61 | 69.20 | 69.99 | 69.45 | 39.95 | 41.61 | 31.11 | 33.61 |
| ಕರ್ನಾಟಕ | 65.46 | 67.99 | 67.18 | 66.94 | 43.81 | 47.75 | 33.24 | 36.04 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 9.11: ಕೃಷಿ ಕಾರ್ಮಿಕರ ಶೇಕಡಾವಾರು (ಕುಂಟೆ ಮತ್ತು ಬೇಸಾಯ ಕೂಲಿಗಳು)**

| ತಾಲೂಕು/ಜಿಲ್ಲೆ/ರಾಜ್ಯ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|
| ದೇವನಹಳ್ಳಿ | 58.31 | 60.04 | 49.70 | 52.79 |
| ದೊಡ್ಡಬಳ್ಳಾಪುರ | 60.76 | 57.42 | 41.49 | 46.39 |
| ಹೊಸಕೋಟೆ | 52.09 | 52.23 | 42.91 | 45.30 |
| ನೆಲಮಂಗಲ | 45.49 | 44.14 | 37.18 | 39.31 |
| ಬೆಂಗಳೂರು ಗ್ರಾಮಾಂತರ | 54.87 | 55.49 | 42.62 | 46.07 |
| ಕರ್ನಾಟಕ | 57.69 | 67.89 | 45.35 | 49.28 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 9.12: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮ.ಗಾಂ.ರಾ.ಗ್ರಾ.ಉ.ಖಾ.ಯೋ. ಅಡಿ ನೀಡಲಾದ ಉದ್ಯೋಗ ಚೀಟಿ**

| ವರ್ಷ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ವರ್ಷಾಂತ್ಯದಲ್ಲಿ ಒಟ್ಟು ನೊಂದಣಿ [33] |
|---|---|---|---|---|
| 2008 – 2009 | 15,864( 30.75) | 3,968(7.69) | 31,751(61.55) | 51,583 |
| 2009 –2010 | 20,795(20.5) | 5,217(5.14) | 75,428(74.36) | 101,440 |
| 2010 – 2011 | 15,540(20.61) | 4,184(5.55) | 55,660(73.84) | 75,384 |
| 2011 –2012 | 15,748(20.35) | 4,121(5.32) | 57,522(74.33) | 77,391 |

ಸೂಚನೆ: ಶೇಕಡಾವಾರನ್ನು ಕಂಸದೊಳಗೆ ನೀಡಲಾಗಿದೆ
ಮೂಲ: www.karnregs.kar.nic.in

ಕಾರ್ಮಿಕ ಸಂಖ್ಯೆಯಲ್ಲಿ ಕೃಷಿ ಕಾರ್ಮಿಕರು ಗಣನೀಯ ಪಾಲನ್ನು ಹೊಂದಿರುವುದರಿಂದ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯು(ಮ.ಗಾಂ.ರಾ.ಗ್ರಾ.ಉ.ಖಾ.ಯೋ.) ಜಿಲ್ಲೆಯಲ್ಲಿ ಕಾರ್ಮಿಕರಿಗೆ ಉದ್ಯೋಗ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಕ್ಕೆ ಹೋಲಿಸಿದರೆ, ಇತರ ವರ್ಗಗಳಿಗೆ ನೀಡಲಾದ ಉದ್ಯೋಗ ಚೀಟಿಯ ಸಂಖ್ಯೆಯು ಹೆಚ್ಚಾಗಿದೆ. ಜಿಲ್ಲೆಯಲ್ಲಿ ಮ.ಗಾಂ.ರಾ.ಗ್ರಾ.ಉ.ಖಾ.ಯೋ. ಅಡಿಯಲ್ಲಿ ಕೆಲಸ ಮಾಡಲು ಇಚ್ಛಿಸುವವರನ್ನು ಅಥವಾ ದಾಖಲಾತಿಯ ಪ್ರಮಾಣವನ್ನು ಅರ್ಥಮಾಡಿಕೊಳ್ಳಲು 2011-12 ಸಾಲಿನ ಕೊನೆಯವರೆಗೆ ನೀಡಲಾದ ಉದ್ಯೋಗ ಚೀಟಿಯ ಸಂಖ್ಯೆಯನ್ನು ಕುಟುಂಬಗಳ ಜನಗಣತಿ ದತ್ತಾಂಶದೊಂದಿಗೆ ಪರೀಕ್ಷಿಸಲಾಯಿತು. ಅದರಂತೆ ಶೇ. 39 ರಷ್ಟು ಪರಿಶಿಷ್ಟ ಜಾತಿ ಗ್ರಾಮೀಣ ಕುಟುಂಬಗಳು ಮತ್ತು ಶೇ. 41 ರಷ್ಟು ಪರಿಶಿಷ್ಟ ಪಂಗಡ ಗ್ರಾಮೀಣ ಕುಟುಂಬಗಳು ಹಾಗೂ ಶೇ.50 ರಷ್ಟು ಇತರ ವರ್ಗಗಳ ಗ್ರಾಮೀಣ ಕುಟುಂಬಗಳು ಮ.ಗಾಂ. ರಾ.ಗ್ರಾ.ಉ.ಖಾ.ಯೋ. ಅಡಿ ಕೆಲಸ ಮಾಡಲು ನೋಂದಣಿ ಮಾಡಿಕೊಂಡಿರುವುದು ಕಂಡುಬಂದಿತು. ಈ ನೊಂದಣಿಯು ದೇವನಹಳ್ಳಿ ತಾಲೂಕಿನಲ್ಲಿ ಅತಿ ಹೆಚ್ಚಿದ್ದು, ಶೇ. 58 ರಷ್ಟು ಪರಿಶಿಷ್ಟ ಜಾತಿ ಮತ್ತು ಶೇ. 60 ರಷ್ಟು ಪರಿಶಿಷ್ಟ ಪಂಗಡ ಕುಟುಂಬಗಳು ಮ.ಗಾಂ.ರಾ.ಗ್ರಾ.ಉ.ಖಾ.ಯೋ. ಅಡಿ ಕೆಲಸ ಮಾಡಲು ಇಚ್ಛಿಸಿದವು. ದೇವನಹಳ್ಳಿ ತಾಲೂಕಿನಲ್ಲಿ ಅತಿ ಹೆಚ್ಚಿನ ಕೃಷಿ ಕಾರ್ಮಿಕರು ಇದ್ದರು ಮತ್ತು ಪರಿಶಿಷ್ಟ ಜಾತಿ ಹಿಡುವಳಿಯಲ್ಲಿ ಅತಿ ಹೆಚ್ಚಿನ ಇಳಿಕೆ ಆಗಿರುವುದು ಎಂಬ ಅಂಶ ಇದಕ್ಕೆ ಹೊಂದಿಕೆಯಾಗುತ್ತದೆ. ನೆಲಮಂಗಲ ತಾಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳ ನೊಂದಣಿ ಪ್ರಮಾಣ ಅತಿ ಕಡಿಮೆಯಿತ್ತು.

2010-11ರಲ್ಲಿ ನೊಂದಣಿಯ ಸಂಖ್ಯೆಯಲ್ಲಿ ಇಳಿಕೆಯಾಗಿದ್ದು, ಇದಕ್ಕೆ ಕಾರಣ ಪರಿಶೀಲನೆ ಮೂಲಕ ಒಂದು ಕುಟುಂಬಕ್ಕೆ ಒಂದು ಉದ್ಯೋಗ ಚೀಟಿಯನ್ನು ಖಾತರಿ ಪಡಿಸಿ, ನಕಲಿ ಉದ್ಯೋಗ ಚೀಟಿಗಳನ್ನು ರದ್ದುಗೊಳಿಸಿದ್ದಿರಬಹುದು.

[33] 2010–11 ರಲ್ಲಿ ದಾಖಲಾತಿಯು ಇಳಿಮುಖವಾಗಿರುವುದನ್ನು ತೋರಿಸುತ್ತದೆ. ತಪಾಸಣೆ ಮೂಲಕ ಒಂದು ಕುಟುಂಬಕ್ಕೆ ಒಂದೇ ಉದ್ಯೋಗ ಚೀಟಿ ಸಿಗುವುದನ್ನು ಖಚಿತಪಡಿಸುವ ಮೂಲಕ ನಕಲಿ ಉದ್ಯೋಗ ಚೀಟಿಗಳನ್ನು ನಿರ್ಮೂಲನ ಮಾಡಿರುವುದು ಈ ಇಳಿಕೆಗೆ ಕಾರಣವಿರಬಹುದು.

**ಕೋಷ್ಟಕ 9.13: ಸಾಮಾಜಿಕ ವರ್ಗವಾರು ಕುಟುಂಬಗಳ ಸಂಖ್ಯೆ, ಮತ್ತು ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳ ಶೇಕಡಾವಾರು (2011–2012)**

| ತಾಲೂಕು/ಜಿಲ್ಲೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು | ಪರಿಶಿಷ್ಟ ಜಾತಿ (ಶೇ.) | ಪರಿಶಿಷ್ಟ ಪಂಗಡ (ಶೇ.) | ಇತರರು (ಶೇ.) | ಒಟ್ಟು |
|---|---|---|---|---|---|---|---|---|
| ದೇವನಹಳ್ಳಿ | 5,010 | 2,216 | 10,093 | 17,319 | 58.41 | 60.17 | 51.72 | 54.51 |
| ದೊಡ್ಡಬಳ್ಳಾಪುರ | 4,463 | 912 | 12,923 | 18,298 | 39.52 | 33.44 | 39.61 | 39.23 |
| ಹೊಸಕೋಟೆ | 4,699 | 676 | 17,350 | 22,725 | 41.67 | 38.19 | 51.13 | 48.37 |
| ನೆಲಮಂಗಲ | 1,576 | 317 | 17,156 | 19,049 | 17.01 | 17.77 | 60.49 | 48.33 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 15,748 | 4,121 | 57,522 | 77,391 | 38.97 | 41.36 | 50.27 | 46.96 |

ಮೂಲ: www.karnregs.kar.nic.in

**ಕೋಷ್ಟಕ 9.14: 2011–2012 ಸಾಲಿನಲ್ಲಿ ಮ.ಗಾಂ.ರಾ.ಗ್ರಾ.ಉ.ಖಾ.ಯೋ. ಅಡಿ ಕೆಲಸ ಮಾಡಿದ ಕುಟುಂಬಗಳ ಸಂಖ್ಯೆ**

| ತಾಲೂಕು/ಜಿಲ್ಲೆ | ಕೆಲಸ ಮಾಡಿದ ಕುಟುಂಬಗಳ ಸಂಖ್ಯೆ | | | | ಕೆಲಸ ಮಾಡಿದ ಕುಟುಂಬಗಳ ಶೇ. | | | |
|---|---|---|---|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
| ದೇವನಹಳ್ಳಿ | 877 | 464 | 2,317 | 3,658 | 17.50 | 20.94 | 22.96 | 21.12 |
| ದೊಡ್ಡಬಳ್ಳಾಪುರ | 819 | 236 | 3,243 | 4,298 | 18.35 | 25.88 | 25.09 | 23.49 |
| ಹೊಸಕೋಟೆ | 1,154 | 199 | 4,770 | 6,123 | 24.56 | 29.44 | 27.49 | 26.94 |
| ನೆಲಮಂಗಲ | 189 | 21 | 1,592 | 1,802 | 11.99 | 6.62 | 9.28 | 9.46 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 3,039 | 920 | 11,922 | 15,881 | 19.30 | 22.32 | 20.73 | 20.52 |

ಮೂಲ: www.karnregs.kar.nic.in

2011-2012 ಸಾಲಿನಲ್ಲಿ ಜಿಲ್ಲೆಯಲ್ಲಿ ಉದ್ಯೋಗ ಚೀಟಿ ಹೊಂದಿರುವ ಕುಟುಂಬಗಳ ಪೈಕಿ ಶೇ 21. ರಷ್ಟು ಮಾತ್ರ ಕೆಲಸ ಮಾಡಿದರು. ಈ ವರ್ಷದಲ್ಲಿ ಹೊಸಕೋಟೆ ತಾಲೂಕಿನಲ್ಲಿ ಶೇ.27 ರಷ್ಟು ಉದ್ಯೋಗ ಚೀಟಿ ಪಡೆದವರು ಮ.ಗಾಂ.ರಾ.ಗ್ರಾ.ಉ.ಖಾ. ಯೋ. ಅಡಿ ಕೆಲಸ ಮಾಡಿದ್ದು, ಜಿಲ್ಲೆಯಲ್ಲಿ ಇದೇ ಹೆಚ್ಚಿನ ಸಂಖ್ಯೆಯಾಗಿದೆ. ಉದ್ಯೋಗ ಚೀಟಿ ಪಡೆದವರಲ್ಲಿ ಕೆಲಸ ಮಾಡಿದವರ ಪೈಕಿ ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡದವರ ಅತಿ ಹೆಚ್ಚಿನ ಪ್ರಮಾಣ ಹೊಸಕೋಟೆ ತಾಲೂಕಿನಲ್ಲಿತ್ತು ಮತ್ತು ಅತಿ ಕಡಿಮೆ ಪ್ರಮಾಣ ನೆಲಮಂಗಲ ತಾಲೂಕಿನಲ್ಲಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗಳಲ್ಲಿ ಮಾನವ ದಿನಗಳ ಉದ್ಯೋಗದ ಪ್ರಮಾಣ ಅತಿ ಹೆಚ್ಚು ದೇವನಹಳ್ಳಿ ತಾಲೂಕಿನಲ್ಲಿತ್ತು ಮತ್ತು ಅತಿ ಕಡಿಮೆ ನೆಲಮಂಗಲ ತಾಲೂಕಿನಲ್ಲಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೆಲಸ ಮಾಡಿದ ಮಾನವ-ದಿನಗಳ ಅತಿ ಹೆಚ್ಚು ಸರಾಸರಿ ದೇವನಹಳ್ಳಿ ತಾಲೂಕಿನಲ್ಲಿತ್ತು.

**ಕೋಷ್ಟಕ 9.15: 2011–2012 ಸಾಲಿನಲ್ಲಿ ಕೆಲಸ ಮಾಡಿದ ಮಾನವದಿನಗಳ ಸಂಖ್ಯೆ ಮತ್ತು ಶೇಕಡಾವಾರು**

| ತಾಲೂಕು/ಜಿಲ್ಲೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು | ಪರಿಶಿಷ್ಟ ಜಾತಿ (ಶೇ.) | ಪರಿಶಿಷ್ಟ ಪಂಗಡ (ಶೇ.) | ಇತರರು (ಶೇ.) |
|---|---|---|---|---|---|---|---|
| ದೇವನಹಳ್ಳಿ | 45,265 | 25,318 | 130,335 | 200,918 | 22.53 | 12.60 | 64.87 |
| ದೊಡ್ಡಬಳ್ಳಾಪುರ | 37,084 | 11,066 | 159,928 | 208,078 | 17.82 | 5.32 | 76.86 |
| ಹೊಸಕೋಟೆ | 56,083 | 10,235 | 255,774 | 322,092 | 17.41 | 3.18 | 79.41 |
| ನೆಲಮಂಗಲ | 8,736 | 1,117 | 79,499 | 89,352 | 9.78 | 1.25 | 88.97 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 147,168 | 47,736 | 625,536 | 820,440 | 17.94 | 5.82 | 76.24 |

ಮೂಲ: www.karnregs.kar.nic.in

**ಕೋಷ್ಟಕ 9.16: 2011–2012 ಸಾಲಿಗೆ ಕೆಲಸ ಮಾಡಿದ ಮಾನವ ದಿನಗಳ ಸರಾಸರಿ ಸಂಖ್ಯೆ**

| ತಾಲೂಕು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|
| ದೇವನಹಳ್ಳಿ | 52 | 55 | 56 | 55 |
| ದೊಡ್ಡಬಳ್ಳಾಪುರ | 45 | 47 | 49 | 48 |
| ಹೊಸಕೋಟೆ | 49 | 51 | 54 | 53 |
| ನೆಲಮಂಗಲ | 46 | 53 | 50 | 50 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 48 | 52 | 52 | 52 |

ಮೂಲ: www.karnregs.kar.nic.in

## 9.6 ಜೀವನಮಟ್ಟ ಮತ್ತು ಸ್ವತ್ತುಗಳ ಒಡೆತನ

ಜೀವನಮಟ್ಟ, ಸಮುದಾಯದ ಮತ್ತು ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಾನ-ಮಾನವನ್ನು ಸೂಚಿಸುತ್ತದೆ. ವಾಸದ ಮನೆಯ ಸ್ಥಿತಿ, ಕುಡಿಯುವ ನೀರು, ಸ್ನಾನಗೃಹ ಮತ್ತು ಶೌಚಾಲಯಗಳ ಲಭ್ಯತೆಯು, ಕುಟುಂಬಗಳ ಯೋಗಕ್ಷೇಮ ಮತ್ತು ಆದಾಯದ ಮಟ್ಟವನ್ನು ಒಟ್ಟಾಗಿ ಮತ್ತು ತುಲನಾತ್ಮಕವಾಗಿ ಬಿಂಬಿಸುತ್ತವೆ. ಭಗತ್ (2013) ಗಮನಿಸಿದಂತೆ 2011 ಜನಗಣತಿ ಪ್ರಕಾರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಸತಿ, ಸೌಲಭ್ಯಗಳು ಮತ್ತು ಕೌಟುಂಬಿಕ ಆಸ್ತಿಗಳಲ್ಲಿ ಒಟ್ಟಾರೆ ಏರಿಕೆಯಾಗಿದ್ದರೂ, 2001 ರ ಅವಧಿಗೆ ಹೋಲಿಸಿದಂತೆ ಒಟ್ಟು ಕುಟುಂಬಗಳ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಕುಟುಂಬಗಳ ನಡುವಿನ ಅಂತರವು ಹೆಚ್ಚಿರುವುದು ಕಂಡುಬಂದಿದೆ. ಅಂದರೆ, ತುಲನಾತ್ಮಕವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳ ಜೀವನ ಮಟ್ಟದಲ್ಲಿ ಇಳಿಕೆಯಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ವರ್ಗಗಳ ನಡುವಿನ ಅಂತರವನ್ನು ಹೆಚ್ಚಾಗಿ ತೋರಿಸಿದ ಇತರ ಪ್ರಮುಖ ಸೂಚಕಗಳಲ್ಲಿ, ಸ್ನಾನಗೃಹ, ಒಳಚರಂಡಿ, ವಿದ್ಯುತ್ ಸಂಪರ್ಕ, ಶೌಚಾಲಯ, ನಲ್ಲಿ ನೀರು, ಅಡುಗೆ ಅನಿಲದ ಬಳಕೆ ಮತ್ತು ಟೆಲಿವಿಶನ್, ದ್ವಿಚಕ್ರವಾಹನ ಹಾಗೂ ನಾಲ್ಕು ಚಕ್ರದ ವಾಹನಗಳಂತಹ ಕೌಟುಂಬಿಕ ಸ್ವತ್ತುಗಳನ್ನು ಒಳಗೊಂಡಿದೆ.

### 9.6.1 ವಸತಿ ಮತ್ತು ವಸತಿ ಸೌಕರ್ಯಗಳು

ಜಿಲ್ಲೆಯಲ್ಲಿ ಉತ್ತಮ ಮತ್ತು ವಾಸಯೋಗ್ಯ ಮನೆಗಳಲ್ಲಿ ಇರುವಂತಹ ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ ಮತ್ತು ಇತರ ಕುಟುಂಬಗಳ ನಡುವಿನ ಅಂತರವು ಬಹಳ ಹೆಚ್ಚಿರಲಿಲ್ಲ, ಕರ್ನಾಟಕದಲ್ಲಿ ಇತರ ವರ್ಗದ ಕುಟುಂಬಗಳಿಗೆ ಹೋಲಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಾಸಯೋಗ್ಯ ಮನೆ ಹೊಂದಿದ ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡ ಕುಟುಂಬಗಳ ಪ್ರಮಾಣ ಕಡಿಮೆಯಿದ್ದಿತು(ಕೋಷ್ಟಕ 9.17). ಇತರ ವರ್ಗದ ಕುಟುಂಬಗಳಿಗೆ ಹೋಲಿಸಿದಂತೆ ಹೆಚ್ಚಿನ ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡದ ಕುಟುಂಬಗಳು ಗ್ರಾಮೀಣ ಭಾಗದಲ್ಲಿ ಸ್ವಂತ ಮನೆಗಳನ್ನು ಹೊಂದಿದ್ದವು (ಕೋಷ್ಟಕ 9.18). ಈ ಮಾದರಿಯು ಉತ್ತಮ ಸಂಕೇತವೆಂದು ಕಂಡುಬಂದರೂ, ಮನೆ ಇರುವ ಸ್ಥಳ, ಯಾವ ವಿಧದ ಮನೆ ಮತ್ತು ಅದರ ವಿಸ್ತೀರ್ಣ ಭಿನ್ನವಾದ ಕಥೆಯನ್ನು ಹೇಳುತ್ತವೆ.

**ಕೋಷ್ಟಕ 9.17: ಸಾಮಾಜಿಕ ವರ್ಗವಾರು ಉತ್ತಮ ಮತ್ತು ವಾಸಯೋಗ್ಯ ಮನೆಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 94.1 | 95.13 | 97.74 | 96.85 |
| | ಗ್ರಾಮೀಣ | 94.3 | 94.81 | 97.14 | 96.31 |
| | ನಗರ | 92.9 | 96.41 | 99.03 | 98.27 |
| ಕರ್ನಾಟಕ | ಒಟ್ಟು | 94.1 | 93.73 | 96.70 | 96.06 |
| | ಗ್ರಾಮೀಣ | 93.3 | 92.96 | 95.29 | 94.70 |
| | ನಗರ | 95.8 | 96.14 | 98.49 | 98.07 |

ಟಿಪ್ಪಣಿ: ಯಾವುದೇ ದುರಸ್ತಿಯು ಅಗತ್ಯವಿಲ್ಲದ ಮತ್ತು ಉತ್ತಮ ಸ್ಥಿತಿಯಲ್ಲಿರುವ ಮನೆಗಳನ್ನು ಮತ್ತು ಸಣ್ಣ ದುರಸ್ತಿಗಳ ಅಗತ್ಯವಿರುವ ಮನೆಗಳನ್ನು, ಅನುಕ್ರಮವಾಗಿ, ಉತ್ತಮ ಮತ್ತು ವಾಸಯೋಗ್ಯ ಮನೆ ಎನ್ನಲಾಗುತ್ತದೆ

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 9.18: ಸಾಮಾಜಿಕ ವರ್ಗವಾರು ಸ್ವಂತ ಮನೆ ಹೊಂದಿರುವ ಕುಟುಂಬಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 85.62 | 75.13 | 69.31 | 72.96 |
| | ಗ್ರಾಮೀಣ | 89.76 | 83.42 | 80.53 | 82.94 |
| | ನಗರ | 61.11 | 41.04 | 45.50 | 46.98 |
| ಕರ್ನಾಟಕ | ಒಟ್ಟು | 82.76 | 81.36 | 71.79 | 74.25 |
| | ಗ್ರಾಮೀಣ | 92.34 | 90.52 | 89.21 | 89.93 |
| | ನಗರ | 59.80 | 52.51 | 49.74 | 51.05 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 9.19: ಸಾಮಾಜಿಕ ವರ್ಗವಾರು ಶುದ್ಧ ಕುಡಿಯುವ ನೀರು ಲಭ್ಯವಿರುವ ಕುಟುಂಬಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 49.77 | 50.94 | 48.44 | 48.85 |
| | ಗ್ರಾಮೀಣ | 53.67 | 55.63 | 56.85 | 56.01 |
| | ನಗರ | 26.64 | 31.68 | 30.61 | 30.23 |
| ಕರ್ನಾಟಕ | ಒಟ್ಟು | 62.34 | 59.29 | 64.39 | 63.70 |
| | ಗ್ರಾಮೀಣ | 55.61 | 52.86 | 50.73 | 51.86 |
| | ನಗರ | 78.48 | 79.52 | 81.68 | 81.21 |

ಮೂಲ: ಭಾರತೀಯ ಜನಗಣತಿ

ಜಿಲ್ಲೆಯಲ್ಲಿ ಸುರಕ್ಷಿತ ಕುಡಿಯುವ ನೀರಿನ ಲಭ್ಯತೆಯಿರುವ ಕುಟುಂಬಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಮಾಣ ಅತಿ ಹೆಚ್ಚಿದ್ದು, ನಂತರದ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ವರ್ಗಗಳದ್ದಾಗಿದೆ. ಗ್ರಾಮೀಣ ಭಾಗದಲ್ಲಿ, ಸುರಕ್ಷಿತ ಕುಡಿಯುವ ನೀರಿನ ಲಭ್ಯತೆಯ ಪ್ರಮಾಣ ಅತಿ ಹೆಚ್ಚಾಗಿ ಇತರ ವರ್ಗಗಳ ಕುಟುಂಬಗಳಿಗಿತ್ತು. ಜಿಲ್ಲೆಯ ನಗರ ಪ್ರದೇಶಗಳಲ್ಲಿ ಸುರಕ್ಷಿತ ಕುಡಿಯುವ ನೀರಿನ ಲಭ್ಯತೆಯಿದ್ದ ಕುಟುಂಬಗಳಲ್ಲಿ ಪರಿಶಿಷ್ಟ ಜಾತಿ ಕುಟುಂಬಗಳ ಪ್ರಮಾಣ ಅತಿ ಕಡಿಮೆಯಿತ್ತು. ಇದಕ್ಕೆ ಕಾರಣ, ಜಿಲ್ಲೆಯ ನಗರ ಪ್ರದೇಶಗಳಲ್ಲಿ ಶುದ್ಧೀಕರಿಸಿದ ನೀರಿನ ಕಡಿಮೆ ಪ್ರಮಾಣದ ಲಭ್ಯತೆ. ಜಿಲ್ಲೆಯಲ್ಲಿ ಸುರಕ್ಷಿತ ಕುಡಿಯುವ ನೀರಿನ ಲಭ್ಯತೆಯಿರುವ ಕುಟುಂಬಗಳ ಪ್ರಮಾಣ ರಾಜ್ಯದ ಸರಾಸರಿಗಿಂತ ಬಹಳ ಕಡಿಮೆಯಿದ್ದಿತು. ನಗರ ಪ್ರದೇಶಗಳಲ್ಲಿ ಈ ಪ್ರಮಾಣ ಗಣನೀಯವಾಗಿ ಕಡಿಮೆಯಿದ್ದು, ಅಂತರವು ಸುಮಾರು ಶೇ. 50 ರಷ್ಟಿತ್ತು.

ಮನೆಯ ಆವರಣದಲ್ಲಿ ಸ್ನಾನಗೃಹದ ಅನುಕೂಲತೆ ಹೆಚ್ಚಿನ ಪ್ರಮಾಣದಲ್ಲಿ ಇತರ ವರ್ಗದ ಕುಟುಂಬಗಳಲ್ಲಿತ್ತು. ರಾಜ್ಯ ಸರಾಸರಿಗೆ ಹೋಲಿಸಿದರೆ ಸ್ನಾಗೃಹವಿದ್ದ ಕುಟುಂಬಗಳ ಪ್ರಮಾಣ ಎಲ್ಲಾ ಜನ ವರ್ಗಗಳಿಗೂ ಜಿಲ್ಲೆಯಲ್ಲಿ ಹೆಚ್ಚಾಗಿದ್ದಿತು. ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡಗಳಲ್ಲಿ ಸ್ನಾನಗೃಹದ ಲಭ್ಯತೆಯು ಪರಿಶಿಷ್ಟ ಜಾತಿಗಳಿಗಿಂತ ಹೆಚ್ಚಿತ್ತು ಮತ್ತು ಇತರ ವರ್ಗಗಳಿಗಿಂತ ಕಡಿಮೆಯಿತ್ತು. ಚರಂಡಿ ವ್ಯವಸ್ಥೆಯುಳ್ಳ ವಿಷಯದಲ್ಲಿ ಕುಟುಂಬಗಳ ಪ್ರವೃತ್ತಿಯು ಇದಕ್ಕೆ ವಿರುದ್ಧವಾಗಿದ್ದಿತು. ಪರಿಶಿಷ್ಟ ಪಂಗಡಗಳಿಗೆ ಹೋಲಿಸಿದಂತೆ ಪರಿಶಿಷ್ಟ ಜಾತಿಯಲ್ಲಿ ಚರಂಡಿ ವ್ಯವಸ್ಥೆ ಹೊಂದಿದ್ದ ಕುಟುಂಬಗಳ ಪ್ರಮಾಣ ಹೆಚ್ಚಿದ್ದು, ಇದು ಇತರ ವರ್ಗಗಳು ಚರಂಡಿ ಸೌಲಭ್ಯ ಹೊಂದಿದ್ದ ಪ್ರಮಾಣಕ್ಕಿಂತ ಕಡಿಮೆಯಿದ್ದಿತು.

**ಕೋಷ್ಟಕ 9.20: ಸಾಮಾಜಿಕ ವರ್ಗವಾರು ಸ್ನಾನಗೃಹ ಸೌಲಭ್ಯವುಳ್ಳ ಕುಟುಂಬಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 79.64 | 84.46 | 92.60 | 89.50 |
| | ಗ್ರಾಮೀಣ | 79.23 | 82.33 | 90.30 | 87.13 |
| | ನಗರ | 82.07 | 93.22 | 97.50 | 95.70 |
| ಕರ್ನಾಟಕ | ಒಟ್ಟು | 75.50 | 75.62 | 89.56 | 86.28 |
| | ಗ್ರಾಮೀಣ | 69.30 | 70.23 | 83.33 | 79.45 |
| | ನಗರ | 90.36 | 92.58 | 97.44 | 96.39 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 9.21: ಸಾಮಾಜಿಕ ವರ್ಗವಾರು ಒಳಚರಂಡಿ ವ್ಯವಸ್ಥೆಯುಳ್ಳ ಕುಟುಂಬಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 71.99 | 69.23 | 76.74 | 75.35 |
| | ಗ್ರಾಮೀಣ | 69.86 | 65.48 | 69.06 | 69.03 |
| | ನಗರ | 84.62 | 84.62 | 93.03 | 91.81 |
| ಕರ್ನಾಟಕ | ಒಟ್ಟು | 53.24 | 48.38 | 63.44 | 60.71 |
| | ಗ್ರಾಮೀಣ | 41.04 | 37.43 | 43.58 | 42.54 |
| | ನಗರ | 82.48 | 82.82 | 88.56 | 87.60 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 9.22: ಸಾಮಾಜಿಕ ವರ್ಗವಾರು ಶೌಚಾಲಯ ಸೌಲಭ್ಯವುಳ್ಳ ಕುಟುಂಬಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 67.26 | 73.66 | 83.87 | 79.91 |
| | ಗ್ರಾಮೀಣ | 67.53 | 71.43 | 78.66 | 75.52 |
| | ನಗರ | 65.64 | 82.81 | 94.92 | 91.34 |
| ಕರ್ನಾಟಕ | ಒಟ್ಟು | 31.50 | 28.70 | 57.47 | 51.21 |
| | ಗ್ರಾಮೀಣ | 16.39 | 15.64 | 33.24 | 28.41 |
| | ನಗರ | 67.73 | 69.81 | 88.13 | 84.93 |

ಮೂಲ: ಭಾರತೀಯ ಜನಗಣತಿ

ಜಿಲ್ಲೆಯಲ್ಲಿ ಶೌಚಾಲಯದ ಸೌಲಭ್ಯವುಳ್ಳ ಕುಟುಂಬಗಳ ಪ್ರಮಾಣ ಎಲ್ಲಾ ವರ್ಗಗಳಲ್ಲಿಯೂ ರಾಜ್ಯದ ಸರಾಸರಿಗಿಂತ ಗಣನೀಯವಾಗಿ ಹೆಚ್ಚಾಗಿದ್ದಿತು. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಲ್ಲಿ, ಶೌಚಾಲಯ ಸೌಲಭ್ಯವುಳ್ಳ ಕುಟುಂಬಗಳ ಪ್ರಮಾಣ ರಾಜ್ಯದ ಸರಾಸರಿಗಿಂತ ಎರಡರಷ್ಟಿತ್ತು. ಆದರೆ, ಜಿಲ್ಲೆಯಲ್ಲಿ ಶೌಚಾಲಯದ ಸೌಲಭ್ಯದ ವಿಷಯದಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ವರ್ಗಗಳ ನಡುವಿನ ಅಂತರ ಗ್ರಾಮೀಣ ಪ್ರದೇಶಗಳಲ್ಲಿ ಶೇ. 10 ಕ್ಕಿಂತ ಹೆಚ್ಚಾಗಿತ್ತು ಮತ್ತು ನಗರ ಪ್ರದೇಶಗಳಲ್ಲಿ ಶೇ. 30 ಕ್ಕಿಂತ ಹೆಚ್ಚು ಇದ್ದಿತು. ಈ ಅಂತರವು ಪರಿಶಿಷ್ಟ ಪಂಗಡ ಮತ್ತು ಇತರ ವರ್ಗಗಳ ನಡುವೆ ಕಡಿಮೆ ಇತ್ತು.

ವಿದ್ಯುತ್ ಸಂಪರ್ಕ ಇರುವ ಮನೆಗಳ ಪ್ರಮಾಣ ಇತರ ವರ್ಗದಲ್ಲಿ ಅತಿ ಹೆಚ್ಚಾದ ಶೇ. 97 ಇದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಲ್ಲಿ ಅನುಕ್ರಮವಾಗಿ ಶೇ. 90 ಮತ್ತು ಶೇ. 93 ರಷ್ಟು ಇದ್ದಿತು. ಭಾಗ್ಯಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಸಂಪರ್ಕಕ್ಕೆ ಅರ್ಹವಾಗಿದ್ದರೂ ಶೇ. 10 ರಷ್ಟು ಪರಿಶಿಷ್ಟ ಜಾತಿ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಸಂಪರ್ಕವಿರಲಿಲ್ಲ. ಆದರೆ, ಕರ್ನಾಟಕಕ್ಕೆ ಹೋಲಿಸಿದರೆ, ಬೆಂಗಳುರು ಗ್ರಾಮಾಂತರ ಜಿಲ್ಲೆಯಲ್ಲಿ ಎಲ್ಲಾ ವರ್ಗದ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಪ್ರಮಾಣ ಉತ್ತಮವಾಗಿವೆ. ಸ್ವಚ್ಛ ಅಡುಗೆ ಇಂಧನದ ಬಳಕೆಯನ್ನು ಆರ್ಥಿಕ ಸಬಲೀಕರಣದ ಸೂಚಕವೆಂದು ಪರಿಗಣಿಸಬಹುದು ಮತ್ತು ಸಕಾರಾತ್ಮಕ ಆರೋಗ ಅಭಿವೃದ್ಧಿ ಪರಿಣಾಮವನ್ನೂ ಹೊಂದಿದೆ. ಜಿಲ್ಲೆಯಲ್ಲಿ ಸ್ವಚ್ಛ ಅಡುಗೆ ಇಂಧನದ ಬಳಕೆಯು ರಾಜ್ಯದ ಸರಾಸರಿಗಿಂತ ಹೆಚ್ಚಾಗಿದ್ದರೂ, ಇತರ ವರ್ಗ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕುಟುಂಬಗಳ ನಡುವಿನ ಅಂತರವು ಬಹಳ ಹೆಚ್ಚಾಗಿದೆ. ಸ್ವಚ್ಛ ಅಡುಗೆ ಇಂಧನದ ಬಳಕೆಯ ವಿಚಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ವರ್ಗಗಳ ನಡುವಿನ ಅಂತರ ಶೇ. 30 ರಷ್ಟು ಇದ್ದು, ಪರಿಶಿಷ್ಟ ಪಂಗಡ ಮತ್ತು ಇತರ ವರ್ಗದ ನಡುವಿನ ಅಂತರವು ಸುಮಾರು ಶೇ. 23 ರಷ್ಟು ಇದೆ.

**ಕೋಷ್ಟಕ 9.23: ಸಾಮಾಜಿಕ ವರ್ಗವಾರು ವಿದ್ಯುತ್ ಸಂಪರ್ಕ ಹೊಂದಿರುವ ಕುಟುಂಬಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 90.31 | 93.01 | 96.89 | 95.33 |
| | ಗ್ರಾಮೀಣ | 90.70 | 93.03 | 96.37 | 94.79 |
| | ನಗರ | 88.04 | 92.94 | 97.99 | 96.73 |
| ಕರ್ನಾಟಕ | ಒಟ್ಟು | 85.06 | 83.61 | 92.47 | 90.63 |
| | ಗ್ರಾಮೀಣ | 82.42 | 81.01 | 88.59 | 86.72 |
| | ನಗರ | 91.39 | 91.77 | 97.37 | 96.42 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 9.24: ಸಾಮಾಜಿಕ ವರ್ಗವಾರು ಸ್ವಚ್ಛ ಅಡುಗೆ ಇಂಧನ ಬಳಸುವ ಕುಟುಂಬಗಳ ಶೇಕಡಾವಾರು**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 13.63 | 20.46 | 43.03 | 35.76 |
| | ಗ್ರಾಮೀಣ | 10.61 | 14.24 | 31.70 | 25.52 |
| | ನಗರ | 31.50 | 46.00 | 67.06 | 62.45 |
| ಕರ್ನಾಟಕ | ಒಟ್ಟು | 15.30 | 14.27 | 39.17 | 33.52 |
| | ಗ್ರಾಮೀಣ | 4.32 | 4.00 | 15.09 | 12.02 |
| | ನಗರ | 41.62 | 46.58 | 69.64 | 65.34 |

ಮೂಲ: ಭಾರತೀಯ ಜನಗಣತಿ

ಕೌಟುಂಬಿಕ ಸ್ವತ್ತುಗಳನ್ನು ಹೊಂದಿರುವುದು ಆರ್ಥಿಕ ಸಬಲೀಕರಣದ ಮತ್ತೊಂದು ಸೂಚಕವಾಗಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸಾಮಾಜಿಕ ಸ್ಥಾನದ ಸೂಚಕವೂ ಆಗಿದೆ. ಸ್ವತ್ತುಗಳಾದ ರೇಡಿಯೊ, ಟೆಲಿವಿಶನ್, ಮತ್ತು ದೂರವಾಣಿ, ಸಂವಹನವನ್ನು ಮತ್ತು ಮಾಹಿತಿಯ ಲಭ್ಯತೆಯನ್ನು ಹೆಚ್ಚಿಸುತ್ತವೆ ಮತ್ತು ವಾಹನದ ಒಡೆತನವು ಚಲನೆಯನ್ನು ಸಾಧ್ಯಗೊಳಿಸಿ, ಉದ್ಯೋಗ ಮತ್ತು ವ್ಯಾಪಾರದ ಅವಕಾಶಗಳನ್ನು ಹೆಚ್ಚಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ರೇಡಿಯೊ ಕಡಿಮೆ ಜನಪ್ರಿಯವಾಗಿದ್ದು, ಟೆಲಿವಿಶನ್ ಹೆಚ್ಚು ಜನಪ್ರಿಯವಾಗಿದೆ ಮತ್ತು ಹೊಂದಬೇಕಾದ ಅಗತ್ಯ ವಸ್ತುವೆಂದು ಪರಿಗಣಿಸಲ್ಪಟ್ಟಿದೆ. ಟೆಲಿವಿಶನ್ ಹೊಂದಿರುವ ಕುಟುಂಬಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರಮಾಣ (ಕೋಷ್ಟಕ 9.25 ಮತ್ತು 9.26) ಇತರ ವರ್ಗದವರಿಗಿಂತ ಗಣನೀಯವಾಗಿ ಕಡಿಮೆಯಿದ್ದಿತು. ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಟೆಲಿವಿಷನ್ ಹೊಂದಿದ್ದ ಕುಟುಂಬಗಳ ಪ್ರಮಾಣ ರಾಜ್ಯದ ಗಾಮೀಣ ಪ್ರದೇಶಗಳ ಸರಾಸರಿಗಿಂತ ಹೆಚ್ಚಾಗಿದ್ದು, ನಗರ ಪ್ರದೇಶಗಳಲ್ಲಿ ಇದು ರಾಜ್ಯದ ಸರಾಸರಿಗಿಂತ ಕಡಿಮೆ ಇದೆ.

**ಕೋಷ್ಟಕ 9.25: ಸಾಮಾಜಿಕ ವರ್ಗವಾರು ಟೆಲಿವಿಶನ್ ಹೊಂದಿರುವ ಕುಟುಂಬಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 55.69 | 63.05 | 74.26 | 69.84 |
| | ಗ್ರಾಮೀಣ | 54.38 | 60.60 | 70.55 | 66.02 |
| | ನಗರ | 63.47 | 73.12 | 82.13 | 79.79 |
| ಕರ್ನಾಟಕ | ಒಟ್ಟು | 46.22 | 44.18 | 64.42 | 60.03 |
| | ಗ್ರಾಮೀಣ | 35.91 | 35.69 | 50.40 | 46.29 |
| | ನಗರ | 70.94 | 70.91 | 82.16 | 80.35 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 9.26: ಸಾಮಾಜಿಕ ವರ್ಗವಾರು ದೂರವಾಣಿ ಹೊಂದಿರುವ ಕುಟುಂಬಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 59.03 | 67.86 | 78.16 | 73.68 |
| | ಗ್ರಾಮೀಣ | 58.35 | 66.31 | 75.62 | 70.87 |
| | ನಗರ | 63.12 | 74.21 | 83.53 | 81.00 |
| ಕರ್ನಾಟಕ | ಒಟ್ಟು | 57.36 | 57.38 | 75.90 | 71.57 |
| | ಗ್ರಾಮೀಣ | 50.93 | 51.95 | 67.12 | 62.64 |
| | ನಗರ | 72.76 | 74.47 | 87.02 | 84.79 |

ಮೂಲ: ಭಾರತೀಯ ಜನಗಣತಿ

ದೂರವಾಣಿ (ಸ್ಥಿರ ಅಥವಾ ಮೊಬೈಲ್) ಹೊಂದಿರುವ ಕುಟುಂಬಗಳ ಪ್ರಮಾಣ ಎಲ್ಲಾ ವರ್ಗಗಳಿಗೂ ರಾಜ್ಯದ ಸರಾಸರಿಗಿಂತ ಹೆಚ್ಚಾಗಿದೆ. ದೂರವಾಣಿ ಉಳ್ಳಂತಹ ಕುಟುಂಬಗಳಲ್ಲಿ ನಗರದ ಇತರ ವರ್ಗದ ಕುಟುಂಬಗಳ ಪ್ರಮಾಣ, ಪರಿಶಿಷ್ಟ ಜಾತಿ ಕುಟುಂಬಗಳಿಗೆ ಹೋಲಿಸಿದಂತೆ ಶೇ.20 ರಷ್ಟು ಹೆಚ್ಚಿದೆ. ಆದರೆ ದೂರವಾಣಿ ಹೊಂದಿರುವ ಪರಿಶಿಷ್ಟ ಪಂಗಡ ಕುಟುಂಬಗಳ ಪ್ರಮಾಣ ಪರಿಶಿಷ್ಟ ಜಾತಿ ಕುಟುಂಬಗಳಿಗಿಂತ ಹೆಚ್ಚಾಗಿದೆ. ಹಾಗೆಯೇ, ಜಿಲ್ಲೆಯಲ್ಲಿ ಗಣಕಯಂತ್ರವನ್ನು ಹೊಂದಿರುವ ಕುಟುಂಬಗಳ ಪ್ರಮಾಣ ಎಲ್ಲಾ ವರ್ಗಗಳಲ್ಲಿ ರಾಜ್ಯದ ಸರಾಸರಿಗಿಂತ ಹೆಚ್ಚಾಗಿರುವುದು ಕಂಡುಬಂದಿದೆ. ಗಣಕಯಂತ್ರ ಇರುವಂತಹ ಕುಟುಂಬಗಳಲ್ಲಿ ಪರಿಶಿಷ್ಟ ಪಂಗಡ ಮತ್ತು ಇತರ ವರ್ಗಗಳ ನಡುವಿನ ಅಂತರವು, ಪರಿಶಿಷ್ಟ ಜಾತಿ ಮತ್ತು ಇತರ ವರ್ಗಗಳ ನಡುವಿನ ಅಂತರಕ್ಕಿಂತ ಕಡಿಮೆಯಿದ್ದಿತು.

**ಕೋಷ್ಟಕ 9.27: ಸಾಮಾಜಿಕ ವರ್ಗವಾರು ಗಣಕಯಂತ್ರ ಹೊಂದಿರುವ ಕುಟುಂಬಗಳ ಪ್ರಮಾಣ (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 5.56 | 7.01 | 8.20 | 7.59 |
| | ಗ್ರಾಮೀಣ | 4.62 | 5.39 | 5.80 | 5.49 |
| | ನಗರ | 11.13 | 13.68 | 13.28 | 13.07 |
| ಕರ್ನಾಟಕ | ಒಟ್ಟು | 8.27 | 8.05 | 14.25 | 12.84 |
| | ಗ್ರಾಮೀಣ | 5.56 | 5.49 | 5.58 | 5.57 |
| | ನಗರ | 14.75 | 16.09 | 25.22 | 23.59 |

ಮೂಲ: ಭಾರತೀಯ ಜನಗಣತಿ

ಜಿಲ್ಲೆಯಲ್ಲಿ ದ್ವಿಚಕ್ರ ವಾಹನ ಹೊಂದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕುಟುಂಬಗಳ ಪ್ರಮಾಣ ಗ್ರಾಮೀಣ ಪ್ರದೇಶಗಳಲ್ಲಿ ರಾಜ್ಯದ ಸರಾಸರಿಗಿಂತ ಹೆಚ್ಚಾಗಿದ್ದು, ನಗರ ಪ್ರದೇಶಗಳಲ್ಲಿ ರಾಜ್ಯದ ಸರಾಸರಿಗಿಂತ ಕಡಿಮೆಯಿದೆ. ದ್ವಿಚಕ್ರವಾಹನವುಳ್ಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕುಟುಂಬಗಳ ಪ್ರಮಾಣ ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಇತರ ವರ್ಗದವರಿಗಿಂತ ಕಡಿಮೆಯಿದ್ದಿತು. ಇದೇ ರೀತಿಯ ಪ್ರವೃತ್ತಿಯನ್ನು ನಾಲ್ಕು ಚಕ್ರದ ವಾಹನವನ್ನು ಹೊಂದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕುಟುಂಬಗಳಲ್ಲಿಯೂ ಕಾಣಬಹುದಾಗಿದೆ.

**ಕೋಷ್ಟಕ 9.28: ಸಾಮಾಜಿಕ ವರ್ಗವಾರು ದ್ವಿಚಕ್ರವಾಹನ ಹೊಂದಿರುವ ಕುಟುಂಬಗಳ ಶೇಕಡಾವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 18.20 | 26.20 | 34.49 | 30.70 |
| | ಗ್ರಾಮೀಣ | 18.10 | 27.05 | 35.44 | 30.73 |
| | ನಗರ | 18.80 | 22.72 | 32.48 | 30.64 |
| ಕರ್ನಾಟಕ | ಒಟ್ಟು | 13.55 | 13.89 | 29.24 | 25.60 |
| | ಗ್ರಾಮೀಣ | 8.83 | 9.85 | 19.89 | 16.86 |
| | ನಗರ | 24.88 | 26.58 | 41.07 | 38.53 |

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 9.29: ಸಾಮಾಜಿಕ ವರ್ಗವಾರು ನಾಲ್ಕು ಚಕ್ರದ ವಾಹನ ಹೊಂದಿರುವ ಕುಟುಂಬಗಳ ಶೇಕಡವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 5.05 | 6.59 | 10.43 | 9.39 |
| | ಗ್ರಾಮೀಣ | 4.34 | 5.89 | 9.44 | 8.25 |
| | ನಗರ | 9.64 | 9.65 | 12.40 | 12.11 |
| ಕರ್ನಾಟಕ | ಒಟ್ಟು | 4.56 | 4.82 | 11.60 | 10.35 |
| | ಗ್ರಾಮೀಣ | 2.17 | 2.44 | 4.92 | 4.32 |
| | ನಗರ | 10.23 | 12.03 | 19.57 | 18.51 |

ಮೂಲ: ಭಾರತೀಯ ಜನಗಣತಿ

ಜಿಲ್ಲೆಯಲ್ಲಿ ಯಾವುದೇ ಸ್ವತ್ತುಗಳನ್ನು (ರೇಡಿಯೊ, ಟಿವಿ, ಗಣಕಯಂತ್ರ, ದ್ವಿಚಕ್ರ ಮತ್ತು ನಾಲ್ಕುಚಕದ್ರ ವಾಹನ) ಹೊಂದಿರದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕುಟುಂಬಗಳ ಪ್ರಮಾಣ ರಾಜ್ಯದ ಸರಾಸರಿಗಿಂತ ಕಡಿಮೆಯಿದ್ದಿತು. ಯಾವುದೇ ಸ್ವತ್ತು ಇರದ ಪರಿಶಿಷ್ಟ ಜಾತಿ ಕುಟುಂಬಗಳ ಪ್ರಮಾಣ ಅತಿ ಹೆಚ್ಚಾಗಿದ್ದು, ನಂತರದ ಸ್ಥಾನ ಪರಿಶಿಷ್ಟ ಪಂಗಡ ಮತ್ತು ಇತರ ವರ್ಗದ್ದಾಗಿತ್ತು.

**ಕೋಷ್ಟಕ 9.30: ಸಾಮಾಜಿಕ ವರ್ಗವಾರು ಯಾವುದೇ ಸ್ವತ್ತುಗಳನ್ನು ಹೊಂದಿರದ ಕುಟುಂಬಗಳ ಶೇಕಡವಾರು (2011)**

| ಜಿಲ್ಲೆ/ರಾಜ್ಯ | ಒಟ್ಟು/ಗ್ರಾಮೀಣ/ನಗರ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರರು | ಒಟ್ಟು |
|---|---|---|---|---|---|
| ಬೆಂಗಳೂರು ಗ್ರಾಮಾಂತರ ಜಿಲ್ಲೆ | ಒಟ್ಟು | 19.13 | 13.32 | 7.95 | 10.53 |
| | ಗ್ರಾಮೀಣ | 19.20 | 14.44 | 9.22 | 11.96 |
| | ನಗರ | 18.69 | 8.72 | 5.24 | 6.81 |
| ಕರ್ನಾಟಕ | ಒಟ್ಟು | 23.72 | 23.93 | 11.35 | 14.25 |
| | ಗ್ರಾಮೀಣ | 28.72 | 28.00 | 16.52 | 19.90 |
| | ನಗರ | 11.74 | 11.13 | 4.80 | 5.89 |

ಮೂಲ: ಭಾರತೀಯ ಜನಗಣತಿ

## 9.7. ರಾಜಕೀಯ ಸಬಲೀಕರಣ ಮತ್ತು ಆಡಳಿತ

ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿಗೆ ಮಾಡಬೇಕಾದ ವೆಚ್ಚಗಳ ಪ್ರಮಾಣವನ್ನು ರಕ್ಷಿಸಲು ಕಾನೂನನ್ನು ಜಾರಿಗೊಳಿಸಿದ ಎರಡನೇ ರಾಜ್ಯವೆಂದರೆ ಕರ್ನಾಟಕ (ಆಂಧ್ರಪ್ರದೇಶದ ನಂತರ). ಕರ್ನಾಟಕ ಪರಿಶಿಷ್ಟ ಜಾತಿಯ ಉಪ-ಯೋಜನೆ ಮತ್ತು ಪರಿಶಿಷ್ಟ ಪಂಗಡದ ಉಪ-ಯೋಜನೆ (ಯೋಜನೆ, ಹಣಕಾಸು ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ವಿಧೇಯಕವನ್ನು 2013ರಲ್ಲಿ ಜಾರಿಗೊಳಿಸಿದೆ. ಈ ಅಧಿನಿಯಮದ ಪ್ರಕಾರ ಎಲ್ಲ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಮಾಡಬೇಕಾದ ವೆಚ್ಚವನ್ನು ತೆಗೆದಿರಿಸುವುದು, ಮುಂದಿನ ವರ್ಷಕ್ಕೆ ನಿಧಿಗಳನ್ನು ಲೋಪವಾಗದಂತೆ ವಿಸ್ತರಿಸುವುದು ಮತ್ತು ಅಧಿನಿಯಮವನ್ನು ಅನುಷ್ಠಾನಗೊಳಿಸದ ಅಧಿಕಾರಿಗಳನ್ನು ಶಿಕ್ಷಿಸುವುದೂ ಸೇರಿದೆ.

ರಾಜಕೀಯದಲ್ಲಿ ಭಾಗವಹಿಸುವಿಕೆ, ಅದು ಮತದಾರನ ಅಥವಾ ಜನಪ್ರತಿನಿಧಿಯ ಪಾತ್ರದಲ್ಲಿ ಆಗಲಿ ಸಮುದಾಯದ ಪರವಾಗಿ ಧ್ವನಿ ಎತ್ತಲು, ಪ್ರಾತಿನಿಧ್ಯ ಮತ್ತು ಅಧಿಕಾರದ ಬದಲಾವಣೆಗಳಿಗೆ ಬಹಳ ಮುಖ್ಯವಾಗಿದೆ. ಸಾಂಪ್ರದಾಯಿಕವಾಗಿ ಶೋಷಿತ ಸಮುದಾಯಗಳು ಚುನಾವಣಾ ರಾಜಕೀಯದಲ್ಲಿ ಭಾಗವಹಿಸಿದಾಗ ಅವರಿಗೆ, ಕಾನೂನು, ಕಾರ್ಯನೀತಿ ಮತ್ತು ಹೂಡಿಕೆಗಳ ಆದ್ಯತೆಗಳ ಮೇಲೆ ಪ್ರಭಾವ ಬೀರುವಂಥ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಪಾತ್ರವಹಿಸುವ ಅವಕಾಶ ದೊರೆಯುತ್ತದೆ. ಸ್ಥಳೀಯ ಆಡಳಿತದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಜಕೀಯ ಪ್ರಾತಿನಿಧ್ಯ ಸಬಲೀಕರಣದ ಒಂದು ಮುಖ್ಯ ಸೂಚಕವಾಗಿದೆ. ಮೀಸಲಾತಿ ನೀತಿಯನ್ನು ಜನಸಂಖ್ಯೆಯ ಪ್ರಮಾಣ ನಿರ್ದೇಶಿಸುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮೀಸಲಿರುವ ಸ್ಥಾನಗಳ ಸಂಖ್ಯೆ ಆಯಾ ಪಂಚಾಯತ್ ರಾಜ್ ಸಂಸ್ಥೆ (ಗ್ರಾಮ ಪಂಚಾಯಿತಿ ಅಥವಾ ತಾ.ಪಂ. ಅಥವಾ ಜಿ.ಪಂ.) ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿರುವ ಅವರ ಜನಸಂಖ್ಯೆಯ ಅನುಪಾತವನ್ನು ಅವಲಂಬಿಸಿರುತ್ತದೆ[34] (ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993, ಮತ್ತು ಕರ್ನಾಟಕ ಪುರಸಭೆಗಳ ಅಧಿನಿಯಮ 1964). ಪರಿಶಿಷ್ಟ ಜಾತಿ. ಮತ್ತು ಪರಿಶಿಷ್ಟ ಪಂಗಡಕ್ಕೆ ಕನಿಷ್ಠ ಒಂದಾದರೂ ಸ್ಥಾನವನ್ನು ಮೀಸಲಿಡಬೇಕೆಂಬ ನಿಯಮವಿದೆ.

ಈ ಮೀಸಲಾತಿ ಕೇವಲ ಸ್ಥಳೀಯ ಸಂಸ್ಥೆಯ ಸದಸ್ಯತ್ವಕ್ಕೆ ಮಾತ್ರವಲ್ಲದೆ ಸಂಸ್ಥೆಗಳಲ್ಲಿನ ಅಧ್ಯಕ್ಷ ಸ್ಥಾನಕ್ಕೂ ಅನ್ವಯಿಸುತ್ತದೆ. ಅದು ರಾಜ್ಯ ಸರ್ಕಾರ ನಿಗದಿಪಡಿಸಿದಂತೆ ಅನುಕ್ರಮದಲ್ಲಿ ವಿವಿಧ ವರ್ಗಗಳಿಗೆ ಬರುತ್ತದೆ. ಈ ಮೀಸಲಾತಿಯನ್ನು ಇತರ ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೂ ವಿಸ್ತರಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸ್ಥಳೀಯ ಸರ್ಕಾರಗಳ ಎಲ್ಲ ಚುನಾಯಿತ ಪ್ರತಿನಿಧಿಗಳ ಸರಿಸುಮಾರು ಶೇ. 33 ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರಾಗಿದ್ದಾರೆ. ಈ ಜಿಲ್ಲೆಯಲ್ಲಿ ಶೇ. 27 ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿದ್ದಾರೆ. ಹಾಗಾಗಿ ಇದು ಉತ್ತಮವಾದ ರಾಜಕೀಯ ಪ್ರಾತಿನಿಧ್ಯ ಎಂದು ತೋರುತ್ತದೆ.

**ಕೋಷ್ಟಕ 9.31: ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡ ಚುನಾಯಿತ ಪ್ರತಿನಿಧಿಗಳ ಶೇ. (2011)**

| ತಾಲೂಕು/ಜಿಲ್ಲೆ | ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡ ಜನಸಂಖ್ಯೆ ಪ್ರಮಾಣ (ಶೇ.) | | ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡ ಚುನಾಯಿತ ಪ್ರತಿನಿಧಿಗಳ ಪ್ರಮಾಣ (ಶೇ.) | |
|---|---|---|---|---|
| | ನಗರ | ಗ್ರಾಮೀಣ | ನಗರ ಸ್ಥಳೀಯ ಸಂಸ್ಥೆ ಗಳು | ಪಂಚಾಯತ್ ರಾಜ್ ಸಂಸ್ಥೆ ಗಳು |
| ದೇವನಹಳ್ಳಿ | 20.26 | 38.96 | 19.57 | 39.17 |
| ದೊಡ್ಡಬಳ್ಳಾಪುರ | 12.43 | 31.20 | 16.13 | 32.69 |
| ಹೊಸಕೋಟೆ | 13.19 | 28.12 | 17.39 | 30.74 |
| ನೆಲಮಂಗಲ | 15.85 | 28.63 | 17.39 | 29.97 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 15.17 | 31.28 | 17.89 | 32.91 |

ಮೂಲ: ಜಿಲ್ಲಾ ಅಂಕಿ–ಅಂಶಗಳ ನೋಟ –2011–12

ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಪ್ರಾತಿನಿಧ್ಯ ಜನಸಂಖ್ಯೆಗೆ ಸರಿಯಾದ ಪ್ರಮಾಣದಲ್ಲಿ ಮೀಸಲಾತಿಗಳಿವೆ ಎಂಬುದನ್ನು ಸೂಚಿಸುತ್ತದೆ. ದೇವನಹಳ್ಳಿ ತಾಲೂಕು ಹೊರತಾಗಿ ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಪ್ರಾತಿನಿಧ್ಯ ಉಳಿದೆಲ್ಲ ತಾಲೂಕುಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನಸಂಖ್ಯೆಯ ಪ್ರಮಾಣಕ್ಕಿಂತ ಹೆಚ್ಚೇ ಇದೆ. ದೇವನಹಳ್ಳಿಯಲ್ಲಿ ಮಾತ್ರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನಗರ ಜನಸಂಖ್ಯೆಯ ಪ್ರಮಾಣ ನಗರ ಸ್ಥಳೀಯ ಸಂಸ್ಥೆ ಗಳಲ್ಲಿನ ಪ್ರಾತಿನಿಧ್ಯಕ್ಕಿಂತ ಅತ್ಯಲ್ಪವಾಗಿ ಹೆಚ್ಚಿದೆ.

## 9.8. ತಾರತಮ್ಯ ಮತ್ತು ಪರಿಹಾರ

ಕರ್ನಾಟಕದಲ್ಲಿ 1989ರಲ್ಲಿ, ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯವನ್ನು ನಿರ್ಣಾಯಕವಾಗಿ ನಿಭಾಯಿಸಲು ದೌರ್ಜನ್ಯಗಳ ತಡೆ ಅಧಿನಿಯಮವನ್ನು ಜಾರಿಗೊಳಿಸಲಾಯಿತು. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದೌರ್ಜನ್ಯಗಳ ತಡೆ ಕಾಯಿದೆ ಮೇಲ್ವಿಚಾರಣೆ ಮತ್ತು ಬಲಪಡಿಸುವ ಸಮಿತಿ ವರದಿ 2011 ಮತ್ತು 2012ರಲ್ಲಿ ಪರಿಸ್ಥಿತಿಗಳು ಹೇಗಿದ್ದವು ಎಂಬುದನ್ನು ಪ್ರಸ್ತುತಪಡಿಸುತ್ತವೆ.ಇದರ ದತ್ತಾಂಶವನ್ನು ವಿಶ್ಲೇಷಿಸಿದಾಗ ರಾಜ್ಯದಲ್ಲಿ ದೌರ್ಜನ್ಯಗಳ ಸಂಖ್ಯೆ ಮತ್ತು ತೀವ್ರತೆ ಎರಡೂ ಹೆಚ್ಚಿವೆ ಎಂದು ತಿಳಿಯುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶಿಕ್ಷೆಯಾದವರ ಪ್ರಮಾಣ 2011 ರಲ್ಲಿ ಶೇ. 5 ಇದ್ದದ್ದು 2012ರಲ್ಲಿ ಶೇ. 3 ಕ್ಕೆ ಇಳಿದಿದೆ. ಈ ಜಿಲ್ಲೆಯಲ್ಲಿ ವಾರ್ಷಿಕವಾಗಿ

[34] ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 1993 ಮತ್ತು ಕರ್ನಾಟಕ ಪೌರಸಭೆಗಳ ಕಾಯಿದೆ 1964

ಇತ್ಯರ್ಥವಾಗದೆ ಉಳಿದ ಪ್ರಕರಣಗಳ ಸಂಖ್ಯೆ ಶೇ. 18 ರಷ್ಟು ಇದ್ದು, ಕರ್ನಾಟಕ ರಾಜ್ಯಕ್ಕೆ ಈ ಪ್ರಮಾಣ ಕೇವಲ ಶೇ. 5 ರಷ್ಟು. ಜಿಲ್ಲಾ ಮಟ್ಟದ ಜಾಗ್ರತೆ ಮತ್ತು ಉಸ್ತುವಾರಿ ಸಮಿತಿ ನಡೆಸಬೇಕಾದ ಸಭೆಗಳ ಸಂಖ್ಯೆಯು 2011 ಮತ್ತು 2012 ಅವಧಿಯಲ್ಲಿ ಹೆಚ್ಚಳವಾಗಿದೆ. 2012ರಲ್ಲಿ ಕಾನೂನು ಪ್ರಕಾರ ಜಿಲ್ಲಾ ಮಟ್ಟದ ಜಾಗ್ರತೆ ಮತ್ತು ಉಸ್ತುವಾರಿ ಸಮಿತಿಯ ತ್ರೈಮಾಸಿಕ ಸಭೆಗಳನ್ನು ಕರೆದಿದ್ದ 6 ಜಿಲ್ಲೆಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಕೂಡ ಒಂದಾಗಿತ್ತು.

**ಕೋಷ್ಟಕ 9.32: 1989ರಲ್ಲಿ ದೌರ್ಜನ್ಯಗಳ ತಡೆ ಅಧಿನಿಯಮ ಅಡಿಯಲ್ಲಿ ಇತ್ಯರ್ಥವಾಗದೆ ಉಳಿದ, ವಿಲೇವಾರಿ ಆದ, ಮತ್ತು ಶಿಕ್ಷೆಯಾದ ಪ್ರಕರಣಗಳು, ಜಿಲ್ಲಾವಾರು.**

| ವರ್ಷ | ಅಂಶಗಳು | ಬೆಂಗಳೂರು ಗ್ರಾಮಾಂತರ | ಕರ್ನಾಟಕ |
|---|---|---|---|
| 2011 | PC ಬಾಕಿ ಪ್ರಕರಣಗಳು | 97 | 2,353 |
| | CR ದಾಖಲಾದ ಪ್ರಕರಣಗಳು | 70 | 1,262 |
| | TD ವಿಲೇವಾರಿಯಾದ ಪ್ರಕರಣಗಳು | 87 | 1,218 |
| | CV (ಶೇ.) ಶಿಕ್ಷೆಯಾದ ಪ್ರಕರಣಗಳು | 4.6 | 6.40 |
| | A (ಶೇ.) ಖುಲಾಸೆ ಪ್ರಕರಣಗಳು | 93.1 | 86.37 |
| | O (ಶೇ.) ಅನ್ಯರೀತಿ ವಿಲೇವಾರಿಯಾದ ಪ್ರಕರಣಗಳು | 2.3 | 7.22 |
| 2012 | PC ಬಾಕಿ ಪ್ರಕರಣಗಳು | 80 | 2,397 |
| | CR ದಾಖಲಾದ ಪ್ರಕರಣಗಳು | 75 | 1,238 |
| | TD ವಿಲೇವಾರಿಯಾದ ಪ್ರಕರಣಗಳು | 31 | 1,041 |
| | CV (ಶೇ.) ಶಿಕ್ಷೆಯಾದ ಪ್ರಕರಣಗಳು | 3.23 | 28.64 |
| | A (ಶೇ.) ಖುಲಾಸೆ ಪ್ರಕರಣಗಳು | 29.03 | 2.01 |
| | O (ಶೇ.) ಅನ್ಯರೀತಿ ವಿಲೇವಾರಿಯಾದ ಪ್ರಕರಣಗಳು | 67.74 | 24.64 |
| 2013 | PC ಬಾಕಿ ಪ್ರಕರಣಗಳು | 124 | 2,594 |
| ಇತ್ಯರ್ಥವಾಗದೆ ಉಳಿದ ಪ್ರಕರಣಗಳಲ್ಲಿ ವಾರ್ಷಿಕ ಹೆಚ್ಚಳ (ಶೇ.) | | 18.74 | 5.04 |

ಸೂಚನೆ: PC–ಆಯಾ ವರ್ಷದ ಜನವರಿ 1ರಂದು ಇತ್ಯರ್ಥವಾಗದೆ ಉಳಿದ ಪ್ರಕರಣಗಳು; CR–ಆ ವರ್ಷದಲ್ಲಿ ದಾಖಲಾದ ಪ್ರಕರಣಗಳು; TD–ಆ ವರ್ಷದಲ್ಲಿ ವಿಲೇವಾರಿ ಆದ ಪ್ರಕರಣಗಳು; CV (ಶೇ.) –ಒಟ್ಟು ವಿಲೇವಾರಿಯಾದ ಪ್ರಕರಣಗಳಲ್ಲಿ ಶಿಕ್ಷೆಯಾದ ಪ್ರಕರಣಗಳು (ಶೇ.); A (ಶೇ.)–ಒಟ್ಟು ವಿಲೇವಾರಿಯಾದ ಪ್ರಕರಣಗಳಲ್ಲಿ ಖುಲಾಸೆಯಾದ ಪ್ರಕರಣಗಳು; O (ಶೇ.) – ಒಟ್ಟು ವಿಲೇವಾರಿಯಾದ ಪ್ರಕರಣಗಳಲ್ಲಿ ಅನ್ಯ ರೀತಿಯಲ್ಲಿ ವಿಲೇವಾರಿಯಾದ ಪ್ರಕರಣಗಳು; AAGR–ಇತ್ಯರ್ಥವಾಗದೆ ಉಳಿದ ಪ್ರಕರಣಗಳಲ್ಲಿ ವಾರ್ಷಿಕ ಸರಾಸರಿ ಹೆಚ್ಚಳ ದರ; ಒಟ್ಟು ಪ್ರಕರಣಗಳು = ಇತ್ಯರ್ಥವಾಗದ ಪ್ರಕರಣಗಳು + ಒಟ್ಟು ವಿಲೇವಾರಿಯಾದ ಪ್ರಕರಣಗಳು.

ಮೂಲ: ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ./ಪರಿಶಿಷ್ಟ ಪಂಗಡ (PoA) ಅಧಿನಿಯಮವನ್ನು ಮೇಲ್ವಿಚಾರಿಸುವ ಮತ್ತು ಬಲಪಡಿಸುವ ಸಮಿತಿ (CMASK) ಮುಖ್ಯಮಂತ್ರಿಗಳಿಗೆ ನೀಡಿದ ವರದಿ.

## 9.9. ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭಿವೃದ್ಧಿಗೆ ಸರ್ಕಾರ ಮಾಡುತ್ತಿರುವ ಪ್ರಯತ್ನಗಳು ಉತ್ತಮ ಪರಿಣಾಮ ಉಂಟುಮಾಡುತ್ತಿದ್ದರೂ ದಲಿತರ ಅಥವಾ ಆದಿವಾಸಿಗಳ ದಿನನಿತ್ಯ ವೈಯಕ್ತಿಕ ಜೀವನದಲ್ಲಿ ಬದಲಾವಣೆ ಆಗಿದೆಯೇ ಎಂಬುದನ್ನು ತಿಳಿಯುವ ಅಗತ್ಯವಿದೆ. ಅಗತ್ಯವಾದ ಕಾರ್ಯನೀತಿ ಬದಲಾವಣೆಗಳಿಗೆ ಅಥವಾ ಮಾರ್ಗವನ್ನು ಸರಿಪಡಿಸಿಕೊಳ್ಳುವುದಕ್ಕೆ ಇದು ಬಹಳ ಮುಖ್ಯ. ಇದರಿಂದ ಉದ್ದೇಶಿತ ವರ್ಗಗಳ ಅವಕಾಶಗಳು ನಿಜಕ್ಕೂ ವಿಸ್ತಾರಗೊಳ್ಳುತ್ತವೆ - ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ ಜಿಲ್ಲೆಯ ಗ್ರಾಮ ಪಂಚಾಯತಿ ಮಟ್ಟದ ವಾಸ್ತವ ದತ್ತಾಂಶವನ್ನು ವಿಶ್ಲೇಷಿಸುವುದರಿಂದ ಇದನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.

ಕಾನೂನು ಚೌಕಟ್ಟುಗಳು ಇದ್ದರೂ, ದಲಿತರು ಮತ್ತು ಆದಿವಾಸಿಗಳ ಪ್ರಾತಿನಿಧ್ಯವನ್ನು ಉತ್ತಮಪಡಿಸಲು ನೆರವಾಗಿದ್ದರೂ ಅವರು ಸಮಾಜದಲ್ಲಿನ ತಾರತಮ್ಯ ಮತ್ತು ಬೇರ್ಪಡಿಸುವಿಕೆಯಿಂದ ಸಂಪೂರ್ಣವಾಗಿ ಹೊರಬರಲು ಸಾಧ್ಯವಾಗಿಲ್ಲ. ತಾರತಮ್ಯ ಪದ್ಧತಿಗಳನ್ನು ತೊಡೆದುಹಾಕಲು ನಿರಂತರ, ಉದ್ದೇಶಪೂರ್ವಕ ಮತ್ತು ಪ್ರಜ್ಞಾಪೂರ್ವಕ ಪ್ರಯತ್ನಗಳು ನಡೆಯುತ್ತಿದ್ದರೂ ಭಾರತದಲ್ಲಿ ದಲಿತರ ಸ್ಥಿತಿಗತಿಗಳು ಗಣನೀಯವಾಗಿ ಬದಲಾಗಿಲ್ಲ. ದಲಿತ ಸಮುದಾಯ ಸಾಮಾಜಿಕ-ಆರ್ಥಿಕ ಮೆಟ್ಟಿಲುಗಳನ್ನು ಏರಲು ಕಷ್ಟವಾಗುತ್ತಿರುವುದಕ್ಕೆ ಕೆಲವು ನಿರ್ದಿಷ್ಟ ಅಂಶಗಳನ್ನು ಆರೋಪಿಸಲಾಗುತ್ತಿದೆ. ಇವುಗಳಿಂದಾಗಿ ಅವರು ಸರ್ಕಾರ ಒದಗಿಸುತ್ತಿರುವ ಅವಕಾಶಗಳನ್ನು ಬಳಸಿಕೊಳ್ಳಲಾಗುತ್ತಿಲ್ಲ ಎನ್ನಲಾಗುತ್ತಿದೆ. ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಿಂದುಳಿದ ತಾಲೂಕಿಗೆ ಸೇರಿದ ಒಂದು ಗ್ರಾಮ ಪಂಚಾಯತಿಯಲ್ಲಿನ 50 ಕುಟುಂಬಗಳ ಸರ್ವೇಕ್ಷಣೆಯ ದತ್ತಾಂಶದ ಮೇಲೆ ಆಧರಿಸಿದೆ. ಹೀಗೆ ಹಿಂದುಳಿದ ತಾಲೂಕು ಮತ್ತು ಅದರಲ್ಲಿ ಸರಾಸರಿ ಸಾಧನೆಯ ಗ್ರಾಮ ಪಂಚಾಯತಿಯನ್ನೇ ಆಯ್ಕೆಮಾಡುವ ಔಚಿತ್ಯವೇಂದರೆ, ದಲಿತರ ಅಭಿವೃದ್ಧಿ ಮಟ್ಟವನ್ನು ಅರಿಯುವುದು, ಸಾಮಾಜಿಕ ಸಂಘರ್ಷಗಳನ್ನು ಅರಿಯುವುದು, ತಾರತಮ್ಯದ ವಿರುದ್ಧ ದಲಿತರ ಧ್ವನಿ ಎತ್ತುವುದನ್ನು ಹಿಂದುಳಿದ ಪ್ರದೇಶದಲ್ಲಿ ವಿಶ್ಲೇಷಿಸಿದರೆ ಅದರ ತೀವ್ರತೆಯನ್ನು ಇತರ ಸ್ಥಳಗಳಲ್ಲಿ ಊಹಿಸಬಹುದಾದ ಸಾಧ್ಯತೆ ಹೆಚ್ಚಾಗಿರುತ್ತದೆ. ಆದರೆ ಇದು ಇತರ ಸ್ಥಳಗಳಲ್ಲಿ ಭಿನ್ನವಾಗಿರಬಹುದು.

### 9.9.1 ಸಮೀಕ್ಷೆ ವಿಧಾನ

ಸಮೀಕ್ಷೆಗಾಗಿ 50 ದಲಿತ ಕುಟುಂಬಗಳನ್ನು ಎರಡು ಹಂತಗಳಲ್ಲಿ ಆಯ್ಕೆಮಾಡಲಾಯಿತು. ಮೊದಲ ಹಂತದಲ್ಲಿ ನಂಜುಂಡಪ್ಪ ಸಮಿತಿ ವರದಿಯನ್ನು[35] (ಡಾ. ಡಿ.ಎಂ. ನಂಜುಡಪ್ಪ ನೇತೃತ್ವದ ಪ್ರಾದೇಶಿಕ ಅಸಮತೋಲನಗಳ ನಿವಾರಣೆಗೆ ಉನ್ನತ ಅಧಿಕಾರದ ಸಮಿತಿ- ತಾಲೂಕುಗಳನ್ನು ಮುಂದುವರಿದ, ಹಿಂದುಳಿದ, ಹೆಚ್ಚು ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲೂಕುಗಳೆಂದು ವರ್ಗೀಕರಿಸಲು 35 ಸೂಚಕಗಳನ್ನು ಬಳಸಿತು) ಬಳಸಿಕೊಂಡು ಹೊಸಕೋಟೆ ತಾಲೂಕನ್ನು ಆಯ್ಕೆಮಾಡಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಏಕೈಕ ಹಿಂದುಳಿದ ತಾಲೂಕು ಇದು. ಎರಡನೇ ಹಂತದಲ್ಲಿ ಹೊಸಕೋಟೆ ತಾಲೂಕಿನ 26 ಗ್ರಾಮ ಪಂಚಾಯತಿಗಳಲ್ಲಿ ಖಾಜಿಹೊಸಹಳ್ಳಿ ಗ್ರಾಮ ಪಂಚಾಯತಿ ಯನ್ನು ಆಯ್ಕೆಮಾಡಲಾಯಿತು. ಇದಕ್ಕೆ ಅದು ಇರುವ ಸ್ಥಳ, ತಾಲೂಕು ಕೇಂದ್ರಸ್ಥಾನದಿಂದ ಇರುವ ದೂರ ಮತ್ತು ದಲಿತ ಕುಟುಂಬಗಳ ಸಂಖ್ಯೆಗಳನ್ನು ಆಧಾರವಾಗಿಟ್ಟುಕೊಳ್ಳಲಾಯಿತು. ಸ್ಥಳದ ಮಾನದಂಡದ ಪ್ರಕಾರ ಗ್ರಾಮ ಪಂಚಾಯತಿ ತಾಲೂಕು ಕೇಂದ್ರಸ್ಥಾನದಿಂದ ಕನಿಷ್ಠ 15 ಕಿಮೀ ದೂರದಲ್ಲಿರಬೇಕು. ಎರಡನೇ ಮಾನದಂಡದ ಪ್ರಕಾರ ಗ್ರಾಮ ಪಂಚಾಯತಿ ಯಲ್ಲಿ ಕನಿಷ್ಠ 50 ದಲಿತ ಕುಟುಂಬಗಳಿರಬೇಕು.

ಚಿತ್ರ 9.2: ಖಾಜಿಹೊಸಹಳ್ಳಿ ಗ್ರಾಮ ಪಂಚಾಯತಿಯ ಪ್ರತಿ ಗ್ರಾಮದಿಂದ ಆಯ್ದುಕೊಂಡ ಮಾದರಿ ಕುಟುಂಬಗಳ ಹಂಚಿಕೆ




ಖಾಜಿಹೊಸಹಳ್ಳಿ ಗ್ರಾಮ ಪಂಚಾಯತಿಯಲ್ಲಿ 1523 ಕುಟುಂಬಗಳಿವೆ, ಅದರಲ್ಲಿ 449 ದಲಿತ ಕುಟುಂಬಗಳು. ಗ್ರಾಮ ಪಂಚಾಯತಿ ಆಯ್ಕೆಯ ನಂತರ, ಖಾಜಿಹೊಸಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಬರುವ 4 ಹಳ್ಳಿಗಳ ದಲಿತ ಕುಟುಂಬಗಳ ಪ್ರಮಾಣಕ್ಕೆ ಅನುಗುಣವಾಗಿ 50 ದಲಿತ ಕುಟುಂಬಗಳನ್ನು ಯಾದೃಚ್ಛಿಕ ಮಾದರಿಯಲ್ಲಿ ಆಯ್ಕೆ ಮಾಡಲಾಯಿತು(ಚಿತ್ರ 9.2). ಇದರಂತೆ ಖಾಜಿಹೊಸಹಳ್ಳಿ ಗ್ರಾಮದಿಂದ 18 ಕುಟುಂಬಗಳು, ಕಾಮರಸನಹಳ್ಳಿ ಮತ್ತು ಪರಮನಹಳ್ಳಿ ಗ್ರಾಮಗಳಿಂದ ತಲಾ 12 ಕುಟುಂಬಗಳು ಮತ್ತು ತಿಂಡ್ಲು ಗ್ರಾಮದಿಂದ 8 ಕುಟುಂಬಗಳನ್ನು ಆಯ್ಕೆ ಮಾಡಲಾಯಿತು. ಸಮೀಕ್ಷೆಯನ್ನು 2013 ಡಿಸೆಂಬರ್ 18ರಿಂದ 20ರವರೆಗೆ 3 ದಿನಗಳ ಅವಧಿಯಲ್ಲಿ ನಡೆಸಲಾಯಿತು. ಸಂದರ್ಶಕರು ಕುಟುಂಬದ ಮುಖ್ಯಸ್ಥರು, ಮಹಿಳಾ ಸದಸ್ಯರು ಮತ್ತು ಯುವಕ-ಯುವತಿಯರನ್ನು ಸಂದರ್ಶಿಸಿದರು. ಸಂತಾನೋತ್ಪತ್ತಿ ಆರೋಗ್ಯ ಮತ್ತು ಸರ್ಕಾರಿ ಯೋಜನೆಗಳ ಅಡಿಯಲ್ಲಿ ಪಡೆದಿರುವ ಆರೋಗ್ಯ ನೆರವುಗಳ ಕುರಿತಾದ ಪ್ರಶ್ನೆಗಳಿಗೆ ಸಮರ್ಪಕ ಉತ್ತರದ ಅಪೇಕ್ಷೆಯಿಂದ ಮಹಿಳಾ ಸದಸ್ಯರನ್ನು ಪ್ರತ್ಯೇಕವಾಗಿ ಸಂದರ್ಶಿಸಲಾಯಿತು.

### 9.9.2. ಸಮೀಕ್ಷೆಯಲ್ಲಿನ ದಲಿತ ಕುಟುಂಬಗಳ ಸ್ಥೂಲಚಿತ್ರಣ

ಕೋಷ್ಟಕ 9.33 ತೋರಿಸುವಂತೆ ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ ರಚಿಸಲು ಅಗತ್ಯವಾದ ದತ್ತಾಂಶವನ್ನು ಸಂಗ್ರಹಿಸಲು ಸಂದರ್ಶಿಸಿದ ದಲಿತ ಕುಟುಂಬಗಳ ಒಂದು ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಸಮೀಕ್ಷಾ ಕುಟುಂಬಗಳ ಒಟ್ಟು ಜನಸಂಖ್ಯೆ 274 ಜನರಿದ್ದು, ಅದರಲ್ಲಿ 124 ಪುರುಷರು ಮತ್ತು 150 ಮಹಿಳೆಯರಿದ್ದರು.

ಕೋಷ್ಟಕ 9.33: ಸ್ಯಾಂಪಲ್ ದಲಿತ ಕುಟುಂಬಗಳ ಸ್ಥೂಲಚಿತ್ರಣ

| ವ್ಯತ್ಯಯಗಳು | ಒಟ್ಟು | ಪುರುಷ | ಮಹಿಳೆ |
|---|---|---|---|
| ಅ | ಬ | ಕ | ಡ |
| ಸಮೀಕ್ಷೆಯಲ್ಲಿನ ಜನಸಂಖ್ಯೆ | 274 | 124 (45.26) | 150 (54.74) |
| ತಲಾ ಕುಟುಂಬದ ಸರಾಸರಿ ವ್ಯಕ್ತಿ | 5.48 | – | – |
| ವಯಸ್ಸು | | | |
| < 5 | 18 (6.57) | 6 (33.33) | 12 (66.67) |
| 5–14 | 39 (14.23) | 17 (43.59) | 22 (56.41) |
| 15–59 | 186 (67.88) | 85 (45.70) | 101 (54.30) |
| > 60 | 32 (11.68) | 16 (50.00) | 15 (46.86) |

[35] ಡಾ. ಡಿ.ಎಮ್. ನಂಜುಂಡಪ್ಪ ಅವರ ನೇತೃತ್ವದ ಪ್ರಾದೇಶಿಕ ಅಸಮತೋಲನದ ನಿವಾರಣೆಗೆ ರಚಿಸಲಾದ ಉನ್ನತ ಅಧಿಕಾರದ ಸಮಿತಿ– ತಾಲೂಕುಗಳನ್ನು ಮುಂದುವರಿದ, ಹಿಂದುಳಿದ, ಹೆಚ್ಚು ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ವರ್ಗಗಳಾಗಿ ವಿಂಗಡಿಸಲು 35 ಸೂಚಕಗಳನ್ನು ಬಳಸಿತು

| | | | |
|---|---|---|---|
| **ವೈವಾಹಿಕ ಸ್ಥಾನಮಾನ** | | | |
| ಮದುವೆಯೇ ಆಗಿಲ್ಲ | 35 (17.41) | 22 (62.86) | 13 (37.14) |
| ಪ್ರಸ್ತುತ ಮದುವೆ ಆಗಿದೆ | 139 (69.15) | 67 (48.20) | 72 (51.80) |
| ವಿಧವೆ/ವಿಧುರ | 19 (9.45) | 2 (10.53) | 17 (89.47) |
| ವಿಚ್ಛೇದನ/ಬೇರ್ಪಟ್ಟಿರುವುದು | 3 (1.49) | 1 (33.33) | 2 (66.67) |
| **ಸಾಕ್ಷರ** | 179 (65.33) | 91 (50.84) | 88 (49.16) |
| **ಉದ್ಯೋಗಸ್ಥ** | 122 | 81 (66.39) | 41 (33.61) |
| ಕೃಷಿ | 63 (51.64) | 33 (52.38) | 30 (47.62) |
| ಉತ್ಪಾದನೆ | 5 (4.10) | 2 (40.00) | 3 (60.00) |
| ಕೃಷಿಯೇತರ | 59 (48.36) | 46 (85.19) | 8 (14.81) |
| **ನಿರುದ್ಯೋಗಿ** | 6 (3.23) | 1 (16.67) | 5 (83.33) |
| **ಮಾಸಿಕ ಕುಟುಂಬದ ಸರಾಸರಿ ಆದಾಯ (ರೂಗಳು)** | 10,831 | – | – |
| **ಮಾಸಿಕ ಕುಟುಂಬದ ಸರಾಸರಿ ಆದಾಯದ ವಿಚಲನ** | 5,270.35 | | |

**ಸೂಚನೆ:**

1. ಶೇ. ಗಳನ್ನು () ಕಂಸದಲ್ಲಿ ನೀಡಲಾಗಿದೆ
2. ಶೇ. ಗಳನ್ನು ವಯೋಮಿತಿ ವರ್ಗಗಳಲ್ಲಿ ನೀಡಲಾಗಿದೆ ಮತ್ತು ಒಟ್ಟು ಜನಸಂಖ್ಯೆಯನ್ನು ಛೇದವನ್ನಾಗಿ ತೆಗೆದುಕೊಂಡು ಸಾಕ್ಷರ ಜನಸಂಖ್ಯೆಯನ್ನು ಲೆಕ್ಕ ಮಾಡಲಾಗಿದೆ.
3. ವೈವಾಹಿಕ ಸ್ಥಿತಿ ವರ್ಗದಲ್ಲಿ ಶೇ. ಲೆಕ್ಕ ಮಾಡಲು 18 ಅಥವಾ ಹೆಚ್ಚಿನ ವಯಸ್ಸಿನ ಜನಸಂಖ್ಯೆಯನ್ನು ಛೇದವನ್ನಾಗಿ ತೆಗೆದುಕೊಳ್ಳಲಾಗಿದೆ.
4. ಕೃಷಿ, ಉತ್ಪಾದನೆ, ಮತ್ತು ಕೃಷಿಯೇತರ ವರ್ಗಗಳ ಉದ್ಯೋಗಸ್ಥರ ಶೇ. ಲೆಕ್ಕಮಾಡಲು – ಒಟ್ಟು ಉದ್ಯೋಗಸ್ಥರನ್ನು ಛೇದವನ್ನಾಗಿ ತೆಗೆದುಕೊಳ್ಳಲಾಗಿದೆ. ಉತ್ಪಾದನೆ ಕೃಷಿಯೇತರ ವರ್ಗದ ಉಪ–ವರ್ಗ. ಆದ್ದರಿಂದ ಕೃಷಿ + ಕೃಷಿಯೇತರ = 100ಶೇ..
5. ಬಾಲ ಕಾರ್ಮಿಕರ ಶೇ. ಲೆಕ್ಕ ಮಾಡಲು – 5–14 ವರ್ಷಗಳ ಒಟ್ಟು ಜನಸಂಖ್ಯೆಯನ್ನು ಛೇದವನ್ನಾಗಿ ತೆಗೆದುಕೊಳ್ಳಲಾಗಿದೆ.
6. ಕ ಮತ್ತು ಡ ಕಾಲಂಗಳ ಅಡಿಯಲ್ಲಿ ಕಂಸಗಳಲ್ಲಿ ನೀಡಿರುವ ಶೇ. ಬಿ ಕಾಲಂನ ಅಡ್ಡಸಾಲಿನ ಶೇ.ಗಳು.

ಇವರಲ್ಲಿ 15-59 ವಯೋಮಿತಿಯವರೇ ಹೆಚ್ಚಾಗಿದ್ದರು, ಅಂದರೆ ಸುಮಾರು ಶೇ 67.88 ರಷ್ಟು. ಈ ವಯೋಮಿತಿಯಲ್ಲಿ 101 ಮಹಿಳೆಯರು ಮತ್ತು 85 ಪುರುಷರಿದ್ದರು. ಮಾದರಿಯಲ್ಲಿ ಶೇ. 65.33 ರಷ್ಟು ಸಾಕ್ಷರರಿದ್ದರು. ಈ ಮಾದರಿಯಲ್ಲಿದ್ದವರಲ್ಲಿ 120 ಜನ ಉದ್ಯೋಗಸ್ಥರಿದ್ದರು, ಅದರಲ್ಲಿ ಶೇ. 51.64ರಷ್ಟು ಕೃಷಿ ಚಟುವಟಿಕೆಗಳಲ್ಲಿ ಮತ್ತು ಶೇ. 48.36 ರಷ್ಟು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡವರಿದ್ದರು. ಉದ್ಯೋಗಸ್ಥರಲ್ಲಿ ಶೇ. 66.39 ರಷ್ಟು ಪುರುಷರು ಮತ್ತು ಶೇ. 3.61 ರಷ್ಟು ಮಹಿಳೆಯರು. 15-59 ವಯೋಮಿತಿಯ ಮಹಿಳೆಯರಲ್ಲಿ ಶೇ. 42.42 ರಷ್ಟು ಗೃಹಿಣಿಯರು ಮತ್ತು ಶೇ. 11.11 ರಷ್ಟು ವಿದ್ಯಾರ್ಥಿಗಳು ಇದ್ದರು. ಖಾಜಿಹೊಸಹಳ್ಳಿ ಗ್ರಾಮ ಪಂಚಾಯತಿಯಲ್ಲಿ ನಿರುದ್ಯೋಗ ದರ ಸುಮಾರು ಶೇ. 3.23 ರಷ್ಟಿತ್ತು. 50 ದಲಿತ ಕುಟುಂಬಗಳ ಸರಾಸರಿ ಆದಾಯ ತಿಂಗಳಿಗೆ 10,831 ರೂ.ಗಳು ಆಗಿತ್ತು[36] (ಉದ್ಯೋಗಿ ಸ್ವಯಂ ಘೋಷಿಸಿದ ಆದಾಯದ ಮೇಲೆ ಲೆಕ್ಕ ಮಾಡಲಾಗಿದೆ).

## 9.9.3. ದತ್ತಾಂಶ ಮತ್ತು ಲೆಕ್ಕಾಚಾರದ ವಿಧಾನ

ಮಾದರಿ ದತ್ತಾಂಶದಲ್ಲಿ ಮೂಲಭೂತ ಸೌಲಭ್ಯಗಳ ಸುಲಭಲಭ್ಯತೆ, ಸ್ವಾತಂತ್ರ್ಯದ ಬಗ್ಗೆ ಗ್ರಹಿಕೆ, ದಲಿತರಲ್ಲದವರಿಗೆ ಹೋಲಿಸಿ ದಲಿತರನ್ನು ಕಾಣುವ ರೀತಿ, ತಾರತಮ್ಯದ ಮಟ್ಟ, ಅಂತಹ ತಾರತಮ್ಯದ ವಿರುದ್ಧ ಪ್ರತಿಭಟನೆ ಮತ್ತು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎದ್ದ ಯಾವುದೇ ಸಂಘರ್ಷದ ಪರಿಹಾರಕ್ಕೆ ಕೈಗೊಂಡ ಕ್ರಮಗಳ ಕುರಿತು ಪ್ರತಿಕ್ರಿಯಿಸಿದವರ ಪ್ರತಿಕ್ರಿಯೆಗಳನ್ನು ಸೇರಿಸಲಾಗಿದೆ. ಮಾದರಿ ದತ್ತಾಂಶದ ಜೊತೆಗೆ ಜನಸಂಖ್ಯೆ ಲಕ್ಷಣದ ಬಗ್ಗೆ ದತ್ತಾಂಶ, ಜೀವನ ಮಟ್ಟ, ಶಿಕ್ಷಣ ಮತ್ತು ಗ್ರಾಮ ಪಂಚಾಯತಿ ಮತ್ತು ಇತರ ಸಂಘಗಳಲ್ಲಿ ಸದಸ್ಯತ್ವ ಮತ್ತು ಖಾಜಿಹೊಸಹಳ್ಳಿ ಗ್ರಾಮ ಪಂಚಾಯತಿಯಲ್ಲಿ ವಾಸಿಸುತ್ತಿರುವ ಒಟ್ಟು ಕುಟುಂಬಗಳ ಕುರಿತಾದ ದತ್ತಾಂಶವನ್ನು ಗ್ರಾಮ ಪಂಚಾಯತಿ ಕಚೇರಿಯಿಂದ ಸಂಗ್ರಹಿಸಲಾಯಿತು. ನಂತರ ಪ್ರಾಥಮಿಕ ಮತ್ತು ದ್ವಿತೀಯ ಮೂಲಗಳ ದತ್ತಾಂಶವನ್ನು ಬಳಸಿ ದಲಿತರ ಅಭಿವೃದ್ಧಿ ಸೂಚ್ಯಂಕವನ್ನು ಲೆಕ್ಕಮಾಡಲಾಯಿತು.

ದಲಿತರ ಅಭಿವೃದ್ಧಿ ಸೂಚ್ಯಂಕವು ಒಂದು ಸಂಯುಕ್ತ ಸೂಚ್ಯಂಕ. ಇದನ್ನು ಲೆಕ್ಕಮಾಡಲು 10 ಉಪ-ಸೂಚ್ಯಂಕಗಳನ್ನು ಬಳಸಲಾಗುತ್ತದೆ. ಇವುಗಳಿಗೆ 0-1ರ ವರೆಗಿನ ಮೌಲ್ಯ ನೀಡಲಾಗಿರುತ್ತದೆ. ಈ 10 ಉಪ-ಸೂಚ್ಯಂಕಗಳಲ್ಲಿ 3 ಸಾಮಾಜಿಕ ಸೇರ್ಪಡೆ, ಸ್ವಾತಂತ್ರ್ಯ ಮತ್ತು ತಾರತಮ್ಯಗಳ ಬಗ್ಗೆ ಉತ್ತರಿಸಿದವರ ಪ್ರತಿಕ್ರಿಯೆಗಳನ್ನು ಆಧರಿಸಿವೆ. 2 ಉಪ-ಸೂಚ್ಯಂಕಗಳು ತಾರತಮ್ಯದ ವಿರುದ್ಧ ಪ್ರತಿಭಟನೆಗಳು ಮತ್ತು ಸ್ಥಳೀಯ ಪ್ರಾಧಿಕಾರಗಳಿಂದ ಸಂಘರ್ಷಗಳನ್ನು ತೃಪ್ತಿಕರವಾಗಿ ಪರಿಹರಿಸುವುದರ ಕುರಿತಾಗಿದೆ. ದಲಿತ ಜನರನ್ನು ಆಡಳಿತ ಪ್ರಕ್ರಿಯೆಯಲ್ಲಿ ಸೇರಿಸಿಕೊಳ್ಳುವುದನ್ನು ಅಳೆಯಲು ಉಪ-ಸೂಚಕವನ್ನು ಲೆಕ್ಕಮಾಡಲಾಗುತ್ತದೆ. ಎರಡು ಉಪ-ಸೂಚಕಗಳು ದಲಿತ ಕುಟುಂಬಗಳಿಗೆ ಮೂಲಭೂತ ಸೌಲಭ್ಯಗಳು, ಉದಾ: ಶಿಕ್ಷಣ, ಕುಡಿಯುವ ನೀರು, ಶೌಚಾಲಯಗಳು ಮತ್ತು ಚರಂಡಿಗಳು, ಸುಲಭವಾಗಿ ಲಭ್ಯವಿದೆಯೋ ಇಲ್ಲವೋ ಎಂಬುದರ ಬಗೆಗಾಗಿದೆ. ಮತ್ತೊಂದು ಉಪ-ಸೂಚ್ಯಂಕ ದಲಿತ ಕುಟುಂಬಗಳ ಜೀವನ ಮಟ್ಟವನ್ನು ಅಳೆಯುತ್ತದೆ, ಮಾದರಿ ಗ್ರಾಮ ಪಂಚಾಯತಿಯಲ್ಲಿನ ದಲಿತ ಕುಟುಂಬಗಳ ಮತ್ತು ಇತರರ ಪಕ್ಕಾ ಮನೆಗಳ ಒಡೆತನ, ವಿದ್ಯುತ್ ಸಂಪರ್ಕ ಮತ್ತು ಕೃಷಿಯೇತರ ಉದ್ದಿಮೆಗಳು, ಇತ್ಯಾದಿಗಳನ್ನು ಅಳೆಯುತ್ತದೆ. ಅಂತಿಮವಾಗಿ ದಲಿತ ಮಹಿಳೆ ಮತ್ತು ಇತರರ ಮಹಿಳೆಯರನ್ನು ಹೋಲಿಸಿ ಅವರಿಗೆ ಸಿಗುವ ಶಿಕ್ಷಣದ, ನ್ಯಾಯೋಚಿತ ವರ್ತನೆ, ಮತ್ತು ಸಂತಾನೋತ್ಪತ್ತಿ ಆರೋಗ್ಯದ ಅವಕಾಶಗಳನ್ನು ಕುರಿತಂತೆ ಲೆಕ್ಕ ಮಾಡಲು ಮತ್ತೊಂದು ಉಪ-ಸೂಚ್ಯಂಕವನ್ನು ಲೆಕ್ಕಮಾಡಲಾಗುತ್ತದೆ. ಚಿತ್ರ 9.3 ದಲಿತ ಅಭಿವೃದ್ಧಿ ಸೂಚ್ಯಂಕವನ್ನು ಲೆಕ್ಕಮಾಡಲು ಬಳಸಿದ ಉಪ-ಸೂಚ್ಯಂಕಗಳ ಮತ್ತು ವ್ಯತ್ಯಯಗಳ ವಿವರಗಳನ್ನು ನೀಡುತ್ತದೆ.

ದಲಿತ ಅಭಿವೃದ್ಧಿ ಸೂಚ್ಯಂಕವನ್ನು ನಿರ್ಮಿಸಲು ಉಪವ್ಯತ್ಯಯಗಳಿಗೆ ನೀಡಿದ 0-1 ಶ್ರೇಣಿ ಅಂಕಗಳನ್ನು ಬಳಸಲಾಗುತ್ತದೆ. ಇಂತಿಷ್ಟೇ ಅಂಕವನ್ನು ನೀಡಬೇಕೆಂಬ ನಿರ್ಣಯ ಒಂದು ಮಾನಕದ ಮೇಲೆ ಆಧರಿಸಿರುತ್ತದೆ. ಈ ಮಾನಕವನ್ನು ದ್ವಿತೀಯ ಮೂಲಗಳ ಮೂಲಕ ಸಂಗ್ರಹಿಸಿದ ವ್ಯತ್ಯಯಗಳಿಗೆ ಬಳಸಲಾಗುತ್ತದೆ, ಮತ್ತು ಪ್ರಾಥಮಿಕ ಸಮೀಕ್ಷೆ ಫಲಿತಾಂಶಗಳಿಂದ ನಿರ್ಮಿಸಿದ ವ್ಯತ್ಯಯಗಳಿಗೆ ಪ್ರತಿಕ್ರಿಯಿಸುವವರ ಪ್ರತಿಕ್ರಿಯೆಯ ಪ್ರಮಾಣದ ಮೇಲೂ ಆಧರಿಸಿರುತ್ತದೆ. ಈ ಮಾನಕಗಳ ಆಧಾರದ ಮೇಲೆ ಲೆಕ್ಕ ಮಾಡುವಾಗ ಮಾದರಿ ಗ್ರಾಮ ಪಂಚಾಯತಿಯಲ್ಲಿನ ದಲಿತ ಮತ್ತು ದಲಿತರಲ್ಲದ ಕುಟುಂಬಗಳ ಅನುಪಾತವನ್ನು ಲೆಕ್ಕ ಮಾಡಲಾಗುತ್ತದೆ. ಈ ಅನುಪಾತವನ್ನು ಮಾನದಂಡವನ್ನಾಗಿ ಬಳಸಿಕೊಳ್ಳಲಾಗುತ್ತದೆ. ಈ ಮಾನದಂಡವನ್ನು ಬಿಡಿ ಬಿಡಿ

[36] ಪ್ರತಿಕ್ರಿಯೆ ನೀಡಿದವರ ಮಾಲೀಕರ ಸ್ವ ಘೋಷಿತ ಆದಾಯವನ್ನು ಬಳಸಿ ಸರಾಸರಿ ಕುಟುಂಬ ಮಾಸಿಕ ಆದಾಯವನ್ನು ಲೆಕ್ಕ ಮಾಡಲಾಗಿದೆ.

ವ್ಯತ್ಯಯಗಳಿಗೆ ಇಂತಿಷ್ಟೇ ಅಂಕ ಎಂದು ನಿರ್ಧರಿಸಲು ಬಳಸಿಕೊಳ್ಳಲಾಗುತ್ತದೆ. ಉದಾ: 'ಕೃಷಿಯೇತರ ಸಂಸ್ಥೆಯ ಒಡೆತನ' ಎಂಬ ವ್ಯತ್ಯಯಕ್ಕೆ ಅಂಕವನ್ನು ನಿಗದಿಪಡಿಸಬೇಕಾದರೆ ಮೊದಲು ಗ್ರಾಮ ಪಂಚಾಯತಿಯಲ್ಲಿನ ದಲಿತ : ದಲಿತೇತರ ಕುಟುಂಬಗಳ ಅನುಪಾತವನ್ನು ಲೆಕ್ಕ ಮಾಡಲಾಗುತ್ತದೆ. ಒಂದು ವೇಳೆ, ಈ ಅನುಪಾತ 3:1 ಎಂದಿದೆ ಎಂದುಕೊಳ್ಳೋಣ. ನಂತರ, ಆ ಗ್ರಾಮ ಪಂಚಾಯತಿಯಲ್ಲಿ ಒಟ್ಟು ಕೃಷಿಯೇತರ ಸಂಸ್ಥೆ ಒಡೆತನ 68 ಎಂದುಕೊಳ್ಳೋಣ. ಆಗ, ದಲಿತರ ಕೃಷಿಯೇತರ ಸಂಸ್ಥೆಯ ಒಡೆತನ = 17[37] (=1/4 * ಗ್ರಾಮ ಪಂಚಾಯತಿಯಲ್ಲಿನ ಒಟ್ಟು ಕೃಷಿಯೇತರ ಸಂಸ್ಥೆಗಳು. = 1/4*68 = 17). ಈ 17 ನ್ನು ಈ ನಿರ್ದಿಷ್ಟ ವ್ಯತ್ಯಯಕ್ಕೆ ಸೂಕ್ತ ಅಂಕ ನೀಡಲು ಮಾನದಂಡವನ್ನಾಗಿ ಬಳಸಲಾಗುತ್ತದೆ. ಒಂದು ವೇಳೆ ದಲಿತರ ಕೃಷಿಯೇತರ ಸಂಸ್ಥೆ ಒಡೆತನ 17ಕ್ಕಿಂತ ಹೆಚ್ಚಿದ್ದರೆ ಆಗ 2 ಅಂಕಗಳನ್ನು ನೀಡಲಾಗುತ್ತದೆ. ಒಂದು ವೇಳೆ ದಲಿತರ ಕೃಷಿಯೇತರ ಸಂಸ್ಥೆ ಒಡೆತನ 17 ಎಂದಾದರೆ (ಮಾನಕಕ್ಕೆ ಸಮ) ಆಗ 1 ಅಂಕ ನೀಡಲಾಗುತ್ತದೆ. ಒಂದು ವೇಳೆ ದಲಿತರ ಒಡೆತನ ಮಾನಕಕ್ಕಿಂತ ಕಡಿಮೆ ಇದ್ದರೆ ಸೊನ್ನೆ ನೀಡಲಾಗುತ್ತದೆ.

**ಚಿತ್ರ 9.3: ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ ಲೆಕ್ಕಮಾಡಲು ಬಳಸುವ ಉಪ-ಸೂಚ್ಯಂಕಗಳ ವಿವರಗಳು[38]**




ಪ್ರತಿಕ್ರಿಯೆ ಪ್ರಮಾಣ ಆಧಾರದಲ್ಲಿ ಸರಿಯಾದ ಅಂಕಗಳನ್ನು ನೀಡಲು ಒಂದು ನಿರ್ದಿಷ್ಟ ವ್ಯತ್ಯಯಕ್ಕೆ ಬಂದ ಪ್ರತಿಕ್ರಿಯೆಗಳ ಶೇಕಡಾವಾರನ್ನು ಬಳಸಲಾಗುತ್ತದೆ. ಉದಾ: ಸಂಘರ್ಷ ಪರಿಹಾರ. ಒಂದು ವೇಳೆ ಪ್ರತಿಕ್ರಿಯಿಸಿದವರಲ್ಲಿ ಶೇ. 70 ರಷ್ಟು ಜನರು ಸಂಘರ್ಷಗಳನ್ನು ತೃಪ್ತಿಕರವಾಗಿ ಪರಿಹರಿಸಲಾಗಿದೆ ಎಂದರೆ 2 ಅಂಕಗಳನ್ನು, ಶೇ. 50-69 ರಷ್ಟು ಆದರೆ, 1 ಅಂಕವನ್ನು. ಶೇ. 49 ಕ್ಕಿಂತ ಕಡಿಮೆ ಇದ್ದರೆ ಶೂನ್ಯ(0) ನೀಡಲಾಗುತ್ತದೆ.

ಪ್ರತಿಯೊಂದು ವ್ಯತ್ಯಯಕ್ಕೂ ಸೂಕ್ತ ಅಂಕಗಳನ್ನು ನೀಡಿದ ನಂತರ ಪ್ರತಿ ಉಪ-ಸೂಚ್ಯಂಕದ ಅಡಿಯಲ್ಲಿನ ಅಂಕಗಳ ಮೊತ್ತ ಲೆಕ್ಕ ಮಾಡಿ ಆ ಉಪ-ಸೂಚ್ಯಂಕದ ಅಡಿಯಲ್ಲಿ ಸಾಧ್ಯವಿರುವ ಒಟ್ಟು ಸೂಚ್ಯಂಕಗಳಿಂದ ಭಾಗಿಸಲಾಗುವುದು. ಅದೇ ಆ ಉಪ-ಸೂಚ್ಯಂಕದ ಮೌಲ್ಯ. ಈ ಮೌಲ್ಯ 0-1 ಶ್ರೇಣಿಯಲ್ಲಿರುತ್ತದೆ. ನಂತರ ಪ್ರತಿ ಉಪ-ಸೂಚ್ಯಂಕದ ಮೌಲ್ಯಗಳ ಮೊತ್ತವನ್ನು ಲೆಕ್ಕ ಮಾಡಿ ಒಟ್ಟು ಸಾಧ್ಯವಿರುವ ಅಂಕಗಳಿಂದ ಭಾಗಿಸಲಾಗುವುದು (ಸಾಧ್ಯವಿರುವ ಒಟ್ಟು ಅಂಕ 10. ಕಾರಣ 10 ಉಪ-ಸೂಚ್ಯಂಕಗಳಿವೆ ಮತ್ತು ಒಂದೊಂದರಲ್ಲೂ ಗರಿಷ್ಠ ಮೌಲ್ಯ 1).[39] ಹೀಗೆ ಬಂದ ಮೌಲ್ಯವೇ ದಲಿತ ಅಭಿವೃದ್ಧಿ ಸೂಚ್ಯಂಕ ಮೌಲ್ಯ.

[37] ಗ್ರಾ.ಪಂ.ಯಲ್ಲಿ ಒಟ್ಟು ಕೃಷಿಯೇತರ ಸ್ಥಾಪನೆಗಳಲ್ಲಿ ದಲಿತರ ಮಾಲಿಕತ್ವವಿರುವುದು 1/4 ಭಾಗಕ್ಕೆ ಮಾತ್ರ. ಆದ್ದರಿಂದ 68 ರ 1/4 ಭಾಗವೆಂದರೆ 17. ಇದು ಗ್ರಾ.ಪಂ.ಯಲ್ಲಿ ಒಟ್ಟು ಕೃಷಿಯೇತರ ಸ್ಥಾಪನೆಗಳಲ್ಲಿ ದಲಿತರ ಮಾಲಿಕತ್ವ
[38] ಸೂಚನೆ: ಪ್ರತಿ ಉಪ-ಸೂಚ್ಯಂಕದ ಅಡಿಯಲ್ಲಿನ ವ್ಯತ್ಯಯಗಳನ್ನು ಪ್ರಕ್ಷೇಪಗಳಲ್ಲಿ ನೀಡಲಾಗಿದೆ.
[39] ಹತ್ತು ಉಪ ಸೂಚ್ಯಂಕಗಳಿರುವುದರಿಂದ ಒಟ್ಟು ಸಂಭವನೀಯ ಅಂಕ 10 ಮತ್ತು ಪ್ರತಿಯೊಂದೂ ಗರಿಷ್ಠ 1 ಅಂಕ ಪಡೆಯಬಹುದು.

## 9.9.4. ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕದ ಮಾಪನ

ಮೊದಲಿಗೆ, ದಲಿತ ಕುಟುಂಬಗಳು ಸಾಮಾನ್ಯವಾಗಿ ಇತರ ಕುಟುಂಬಗಳು ವಾಸಿಸುವ ಬಡಾವಣೆಗಳಲ್ಲಿ ವಾಸಿಸುವುದಿಲ್ಲ ಎಂದು ಹೇಳಬೇಕು. ಸರ್ಕಾರಿ ಯೋಜನೆ ಅಡಿಯಲ್ಲಿ ಒದಗಿಸಲಾದ ಒಂದು ಪ್ರತ್ಯೇಕ ಬಡಾವಣೆಯಲ್ಲಿ ವಾಸಿಸುತ್ತಾರೆ. ಅಲ್ಲಿ ಪ್ರತ್ಯೇಕ ನೀರಿನ ಸಂಪರ್ಕಗಳು, ಮಳಿಗೆಗಳು, ಹೋಟೆಲುಗಳು, ಮತ್ತು ದೇವಾಲಯಗಳು ಇರುತ್ತವೆ. ದಲಿತ-ದಲಿತರಲ್ಲದವರೆಂಬ ಭೇದ ಎರಡು ಸಮುದಾಯಗಳ ನಡುವಣ ತಾರತಮ್ಯಗಳಿಗೆ ಮತ್ತು ಸಂಘರ್ಷಗಳಿಗೆ ಕಾರಣವಾಗಿದೆ.

ದಲಿತ ಅಭಿವೃದ್ಧಿ ಸೂಚ್ಯಂಕದ ಮೌಲ್ಯ 0.685 ಇದ್ದು, ಇದು ನಿರೀಕ್ಷಿತ ಮಟ್ಟಕ್ಕಿಂತ ಕಡಿಮೆಯಿದೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಸಮಾಜದ ಒಳಗಡೆ ಸೇರಿಸಿಕೊಳ್ಳುವ ಬಗ್ಗೆ ಇರುವ ಸಮಸ್ಯೆಗಳು, ದಲಿತರು ತಾರತಮ್ಯಗಳ ಬಗ್ಗೆ ಯಾವುದೇ ಪ್ರತಿಭಟನೆ ಮಾಡದಿರುವುದು. ಮಾದರಿಯಲ್ಲಿ ನೋಡಿದಂತೆ ದಲಿತ ಮಹಿಳೆಯರ ಸಂತಾನೋತ್ಪತ್ತಿ ಆರೋಗ್ಯದ ಅಗತ್ಯಗಳ ಬಗ್ಗೆ ಕಡಿಮೆ ಗಮನವಿರುವುದು.

**ಕೋಷ್ಟಕ 9.34: ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕದ ಮಾಪನ**

| ಸೂಚಕದ ಹೆಸರು | ಮೌಲ್ಯ |
|---|---|
| ಸಾಂಸ್ಥಿಕ ಸೇರ್ಪಡೆ[ಬಿ] | 0.8 |
| ಸಾಮಾಜಿಕ ಸೇರ್ಪಡೆಯ ಗ್ರಹಿಕೆ[ಎ] | 0.5 |
| ತಾರತಮ್ಯದ ಗ್ರಹಿಕೆ[ಎ] | 0.9 |
| ತಾರತಮ್ಯದ ವಿರುದ್ಧ ಪ್ರತಿಭಟನೆ[ಎ] | 0 |
| ಸಂಘರ್ಷ ಪರಿಹಾರ[ಎ] | 1 |
| ಸ್ವಾತಂತ್ರ್ಯದ ಗ್ರಹಿಕೆ[ಎ] | 0.8 |
| ಬದುಕಿನ ಮಟ್ಟ[ಬಿ] | 0.6 |
| ಲಿಂಗ ಆಯಾಮಎ[ಬಿ] | 0.5 |
| ಮೂಲಭೂತ ಸೌಲಭ್ಯಗಳ ದೊರೆಗೊಳ್ಳುವಿಕೆ[ಬಿ] | 0.75 |
| ಶಿಕ್ಷಣದ ಸುಲಭ ಲಭ್ಯತೆ[ಬಿ] | 1 |
| ಗಣಿಸಿದ ಒಟ್ಟು ಅಂಕಗಳು | **6.85** |
| ಗರಿಷ್ಟ ಅಂಕಗಳು | **10** |
| ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ (ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ) | **0.685** |
| ದಲಿತ ದುಸ್ಥಿತಿ ಸೂಚ್ಯಂಕ | **0.315** |

ಸೂಚನೆ: 1.ಎ–ಪ್ರತಿಕ್ರಿಯೆ ದರದ ಮೇಲೆ ಅಂಕಗಳನ್ನು ನೀಡಲಾಗಿದೆ;
ಬಿ–ಮಾನದಂಡದ ಆಧಾರದ ಮೇಲೆ ಅಂಕಗಳನ್ನು ನೀಡಲಾಗಿದೆ.

ತಾರತಮ್ಯದ ವಿರುದ್ಧ ಪ್ರತಿಭಟನೆ ಉಪ-ಸೂಚ್ಯಂಕ ಸೊನ್ನೆ, ಕಾರಣ ಪ್ರತಿಕ್ರಿಯಿಸಿದವರು ಯಾರೂ ಪ್ರತಿಭಟಿಸಿಲ್ಲ. ಅಂತೆಯೇ ಸಂಘರ್ಷ ಪರಿಹಾರ ಉಪ-ಸೂಚ್ಯಂಕ ಕೂಡ ಇದೇ ಸಮಸ್ಯೆಯಿಂದ ಬಳಲುತ್ತಿದೆ. ಮಾದರಿ ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಯಾವುದೇ ಸಂಘರ್ಷಗಳನ್ನು ಪರಿಹರಿಸಲಾಗಿಲ್ಲ, ಕಾರಣ, ಅಲ್ಲಿ ದಲಿತ ಕುಟುಂಬಗಳಿಂದ ಯಾವುದೇ ಸಂಘರ್ಷದ ವರದಿಗಳಾಗಿಲ್ಲ. ಸಂಘರ್ಷ ಇಲ್ಲದಿರುವುದರಿಂದ ಎಲ್ಲ ಸೇವೆಗಳನ್ನು ತೃಪ್ತಿಕರ ವಿಧಾನದಲ್ಲಿ ಒದಗಿಸಲಾಗಿದೆ ಮತ್ತು ದಲಿತ-ದಲಿತೇರರ ನಡುವೆ ಯಾವುದೇ ಗಂಭೀರ ಆತಂಕಗಳಿಲ್ಲ ಎಂದು ಊಹಿಸಲಾಗಿದೆ. ಹೀಗೆ ಊಹಿಸಿ ಸಂಘರ್ಷ ಪರಿಹಾರ ಉಪ-ಸೂಚ್ಯಂಕಕ್ಕೆ ಪೂರ್ಣ 1 ಅಂಕ ನೀಡಲಾಗಿದೆ: ಅಂದರೆ ಎಲ್ಲ ಸಂಘರ್ಷಗಳನ್ನೂ ಪರಿಹರಿಸಲಾಗಿದೆ ಎಂದು. ಇದರ ಜೊತೆಗೆ, ಶಿಕ್ಷಣದ ಲಭ್ಯತೆ ಉಪ-ಸೂಚ್ಯಂಕದಲ್ಲಿ ದಾಖಲಾತಿ ಪ್ರಮಾಣ, ಹಾಜರಾತಿ ಪ್ರಮಾಣ ಮತ್ತು ಪರಿವರ್ತನೆ ಪ್ರಮಾಣಗಳಿವೆ. ಇವುಗಳನ್ನು ಗ್ರಾಮ ಪಂಚಾಯತಿ ಕಚೇರಿ 100ಶೇ. ಎಂದು ವರದಿ ಮಾಡಿರುವುದರಿಂದ ಈ ಉಪ-ಸೂಚ್ಯಂಕಕ್ಕೂ ಪೂರ್ಣ 1 ಅಂಕ ನೀಡಲಾಗಿದೆ.

### 9.9.4.1 ಸಾಂಸ್ಥಿಕ ಒಳಗೊಳ್ಳುವಿಕೆ

ಈ ಉಪ-ಸೂಚ್ಯಂಕದಲ್ಲಿ, ಗ್ರಾಮ ಪಂಚಾಯತಿ, ಶಾಲಾ ಸಮಿತಿ, ಅರಣ್ಯ ಸಮಿತಿ, ನೀರು ಮತ್ತು ನೈರ್ಮಲ್ಯ ಸಮಿತಿ, ಮತ್ತು ವಿತ್ತೀಯ ಸಮಿತಿಗಳಲ್ಲಿ ಪರಿಶಿಷ್ಟ ಜಾತಿಯ ದಲಿತ ಸದಸ್ಯರ ಶೇಕಡಾವಾರು, ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಆಡಳಿತ ಪ್ರಕ್ರಿಯೆಯಲ್ಲಿ ದಲಿತ ಸದಸ್ಯರ ಒಳಗೊಳ್ಳುವಿಕೆ ಮಟ್ಟವನ್ನು ಅಳೆಯುತ್ತದೆ ಎಂದು ಪರಿಗಣಿಸಲಾಗಿದೆ. ದಲಿತರ ಪ್ರಾತಿನಿಧಿತ್ವದಿಂದ, ಅವರ ಸಮಸ್ಯೆಗಳನ್ನು ಉತ್ತಮವಾಗಿ ಅರ್ಥಮಾಡಿಕೊಂಡು, ನಿರ್ಧಾರ ಪ್ರಕ್ರಿಯೆಯಲ್ಲಿ ಕೊಡುಗೆ ನೀಡುತ್ತದೆ. ಈ ಉಪ-ಸೂಚ್ಯಂಕದಲ್ಲಿ ಅಂಕಿಯ ಹಂಚಿಕೆಯು, ಈ ಸಂಸ್ಥೆಗಳಲ್ಲಿ ದಲಿತ ಸದಸ್ಯರಿಗೆ ಸರ್ಕಾರವು ಆದೇಶಿಸಿರುವ ಕಡ್ಡಾಯವಾದ ಸಂಖ್ಯೆಗಳನ್ನು ಆಧರಿಸಿದೆ.

**ಕೋಷ್ಟಕ 9.35: ಸಾಂಸ್ಥಿಕ ಒಳಗೊಳ್ಳುವಿಕೆ ಉಪ–ಸೂಚ್ಯಂಕದ ವಿವರಗಳು**

| ಸಂಸ್ಥೆಯ ಹೆಸರು | ದಲಿತ ಸದಸ್ಯತ್ವದ ಶೇಕಡಾವಾರು | ನಾರ್ಮ್ (ಶೇ.) | ನಿಯೋಜಿತ ಅಂಕಿ |
|---|---|---|---|
| ಗ್ರಾಮ ಪಂಚಾಯತಿಗಳು | 35.29 | 33 | 2 |
| ಶಾಲಾ ಆಡಳಿತ ಸಮಿತಿ | 42.45 | 33 | 2 |
| ಜಂಟಿ ಅರಣ್ಯ ನಿರ್ವಹಣಾ ಸಮಿತಿ | 20.00 | 13 | 2 |
| ನೀರು ಸಂಘಗಳು | 12.50 | 0 | 2 |
| ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ | 40.00 | 0 | 2 |
| ವಿತ್ತೀಯ ಸಂಸ್ಥೆಗಳು | ಇಲ್ಲ | 0 | 0 |
| ಒಟ್ಟು ಗಣಿಸಿದ ಅಂಕಗಳು | | | **10** |
| ಒಟ್ಟು ಗರಿಷ್ಟ ಅಂಕಗಳು | | | **12** |
| ಉಪ–ಸೂಚ್ಯಂಕ ಮೌಲ್ಯ | | | **0.8** |

ಟಿಪ್ಪಣಿ: 1. ಮಾರ್ಗಸೂಚಿಗಳ ಪ್ರಕಾರ, ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ರಚನೆಯು, ಸಮಿತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನರ ಸೂಕ್ತವಾದ ಪ್ರಾತಿನಿಧಿತ್ವಕ್ಕೆ ನಿಯಮವನ್ನು ಸ್ಥಾಪಿಸಿದೆ. ಆದ್ದರಿಂದ, ಈ ಸಮಿತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸದಸ್ಯತ್ವಕ್ಕೆ ಯಾವುದೇ ನಿರ್ದಿಷ್ಟ ಮೀಸಲಾತಿಯ ನವಯಿಸುವುದಿಲ್ಲ ಎಂದು ಊಹಿಸಲಾಗಿದೆ.

2. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸುತ್ತೋಲೆ ದಿನಾಂಕ 29-8-2013-RD/37/RWS(2)2013 ದ ಪ್ರಕಾರ, ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯದ ಸಮಿತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸದಸ್ಯರಿಗೆ ಯಾವುದೇ ಮೀಸಲಾತಿ ಇಲ್ಲ.

3. ಇಲ್ಲ = ರಚಿಸಲಾಗಿಲ್ಲ

2 ಅಂಕಿಗಳನ್ನು ಚರಮೌಲ್ಯಗಳಾದ ಗ್ರಾಮ ಪಂಚಾಯತಿ, ಶಾಲಾ ಸಮಿತಿ, ಅರಣ್ಯ ಸಮಿತಿ, ನೀರು ಮತ್ತು ನೈರ್ಮಲ್ಯ ಸಮಿತಿಗಳಲ್ಲಿ ಪರಿಶಿಷ್ಟ ಜಾತಿಗೆ ನೀಡಲಾಗಿದೆ ಏಕೆಂದರೆ ಕರ್ನಾಟಕ ಸರ್ಕಾರವು ದಲಿತ ಸದಸ್ಯರಿಗೆ ನಿಗದಿಪಡಿಸಿರುವ ಶೇ. 33 ಕ್ಕಿಂತ ಹೆಚ್ಚಾಗಿದೆ. ವಿತ್ತೀಯ ಸಂಸ್ಥೆಗಳ ವಿಷಯದಲ್ಲಿ, ಮಾದರಿ ಗ್ರಾಮ ಪಂಚಾಯತಿನಲ್ಲಿ ಯಾವುದೇ ವಿತ್ತೀಯ ಸಂಸ್ಥೆಯನ್ನು ಸ್ಥಾಪಿಸದಿದ್ದ ಕಾರಣ 0 ಅಂಕಿಯನ್ನು ನೀಡಲಾಗಿದೆ. ಇದರ ಫಲವಾಗಿ, ಅಂತಿಮ ಮೌಲ್ಯವಾದ 0.8, ಈ ಮಾಪನಕ್ಕೆ ಪರಿಗಣಿಸಲಾದ ಆರು ಸಂಸ್ಥೆಗಳಲ್ಲಿ ಒಂದು ಸಂಸ್ಥೆಯಲ್ಲಿ ಸರ್ಕಾರಿ ಆದೇಶದಂತೆ ದಲಿತ ಕುಟುಂಬವನ್ನು ಸಾಂಸ್ಥಿಕ ಒಳಗೊಳ್ಳುವಿಕೆಯಲ್ಲಿ ಪಾಲಿಸಲಾಗಿಲ್ಲ ಎಂಬುದನ್ನು ಸೂಚಿಸುತ್ತದೆ. ಕೋಷ್ಟಕ 9.35 ರಲ್ಲಿ, ಉಪಸೂಚ್ಯಂಕ ಮೌಲ್ಯವಾದ 0.8, ಸರ್ಕಾರಿ ಸಂಸ್ಥೆಗಳಲ್ಲಿ ಮತ್ತು ಸಮಿತಿಗಳಲ್ಲಿ ದಲಿತ ಪ್ರಾತಿನಿಧಿತ್ವವು ಸರ್ಕಾರವು ನಿಗದಿಪಡಿಸಿದ ನಿಯಮಕ್ಕಿಂತ ಹೆಚ್ಚಾಗಿದ್ದು, ಈ ಪಂಗಡದ ಸೂಕ್ತ ಪ್ರಾತಿನಿಧಿತ್ವವನ್ನು ಸಾಧಿಸಲಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ.

### 9.9.4.2 ಸಾಮಾಜಿಕ ಒಳ್ಳಗೊಳ್ಳುವಿಕೆಯ ಗ್ರಹಿಕೆ

ಸಾಮಾಜಿಕ ಒಳಗೊಳ್ಳುವಿಕೆ ಸೂಚ್ಯಂಕವು, ಕೆಳಕಂಡ ಪ್ರಮಿತಿಗಳ ಬಗ್ಗೆ ದಲಿತರನ್ನು ಪ್ರಶ್ನೆ ಮಾಡಿದುದನ್ನು ಆಧರಿಸಿದ ಗ್ರಹಿಕೆಯಾಗಿದೆ:

ಎ. ವಸತಿ: ದಲಿತೇತರ ಮನೆಗಳಲ್ಲಿ ದಲಿತರಿಗೆ ಮುಕ್ತ ಪ್ರವೇಶವಿದೆಯೆ?

ಬಿ. ಸಂಬೋಧನೆ: ದಲಿತೇತರರು ದಲಿತರನ್ನು ಗೌರವಯುತವಾಗಿ ಸಂಬೋಧಿಸುತ್ತಾರೆಯೆ?

ಸಿ. ಉತ್ಸವ: ದಲಿತೇತರರರಂತೆ ದಲಿತರು ಉತ್ಸವಗಳಲ್ಲಿ ಪಾಲ್ಗೊಳ್ಳುತ್ತಾರೆಯೆ?

ಡಿ. ದೇವಸ್ಥಾನ: ದಲಿತರಿಗೆ ದೇವಾಲಯ/ಪುಣ್ಯಸ್ಥಳಗಳಿಗೆ ಪ್ರವೇಶವಿದೆಯೆ?

ಇ. ಹೋಟೆಲ್: ಹೋಟೆಲುಗಳಲ್ಲಿ ದಲಿತರನ್ನು ದಲಿತೇತರರರಂತೆಯೇ ಉಪಚರಿಸಲಾಗುತ್ತಿದೆಯೆ?

ಚಿತ್ರ 9.4: ಸಾಮಾಜಿಕ ಒಳಗೊಳ್ಳುವಿಕೆ ಉಪಸೂಚ್ಯಂಕದಡಿ ಪ್ರತಿಕ್ರಿಯೆಗಳ ವಿವರಗಳು




ಸಂದರ್ಶಿಸಿದ ಮಾಡಲಾದ 50 ದಲಿತ ಕುಟುಂಬಗಳಲ್ಲಿ, ದಲಿತೇತರ ಮನೆಗಳಲ್ಲಿ ತಮಗೆ ಮುಕ್ತ ಪ್ರವೇಶವಿಲ್ಲ ಎಂದು ಪ್ರತಿಯೊಬ್ಬರೂ ಹೇಳಿದರು ಮತ್ತು ದಲಿತರಿಗೆ ದೇವಾಲಯಗಳ ಒಳಗೆ ಪ್ರವೇಶದ ನಿರ್ಬಂಧವಿದೆ ಎಂದು ಸುಮಾರು ಶೇ.10 ರಷ್ಟು ಜನ ಹೇಳಿದರು. ಅಂತೆಯೇ, ಉತ್ಸವಗಳಲ್ಲಿ ದಲಿತರ ಪಾಲ್ಗೊಳ್ಳುವಿಕೆಯಲ್ಲೂ ನಿರ್ಬಂಧವಿದೆ ಏಕೆಂದರೆ ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಉತ್ಸವಗಳಲ್ಲಿ ಪಾಲ್ಗೊಳ್ಳಲು ಅವರಿಗೆ ತಡೆ ಮಾಡಲಾಗಿದೆ ಎಂದು ಅವರಿಗೆ ಅನಿಸಿದೆ. ಇದಕ್ಕೆ ವಿರುದ್ಧವಾಗಿ, ಗೌರವಯುತ ಸಂಬೋಧನೆಯ ವಿಷಯದಲ್ಲಿ ದಲಿತೇತರರು ದಲಿತರನ್ನು ಕಾಣುವ ರೀತಿಯಲ್ಲಿ ಯಾವುದೇ ಸಮಸ್ಯೆ ಇರುವಂತೆ ಕಾಣುವುದಿಲ್ಲ. ಸುಮಾರು ಶೇ.88 ರಷ್ಟು ಜನರು ದಲಿತೇತರರು ತಮ್ಮನ್ನು ಗೌರವಯುತವಾಗಿ ಸಂಬೋಧಿಸುತ್ತಾರೆ ಎಂದು ನಂಬುತ್ತಾರೆ. ಇದರ ಜೊತೆಗೆ, ಹೋಟೆಲುಗಳಲ್ಲಿ ದಲಿತರ ಉಪಚಾರವು ಸಕಾರಾತ್ಮಕವಾಗಿದೆ ಏಕೆಂದರೆ, ಅವರನ್ನು ದಲಿತೇತರರರಂತೆಯೇ ಕಾಣಲಾಗುತ್ತದೆ ಎಂದು ಶೇ.97 ರಷ್ಟು ಜನ ಉತ್ತರಿಸಿದರು.

ಖಾಸಗಿ ಸ್ಥಳ ಮತ್ತು ಸಾರ್ವಜನಿಕ ಧಾರ್ಮಿಕ ಸ್ಥಳದ ವಿಷಯ ಬಂದಾಗ, ದಲಿತರು ತಾರತಮ್ಯ ಎದುರಿಸುತ್ತಿದ್ದಾರೆ ಆದರೆ ಧಾರ್ಮಿಕವಲ್ಲದ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯ ತಾರತಮ್ಯವಿಲ್ಲ ಅಥವಾ ಬಹಳ ಕಡಿಮೆ ತಾರತಮ್ಯವಿದೆ ಎಂದು ಇದು ಸೂಚಿಸುತ್ತದೆ. ಧಾರ್ಮಿಕವಲ್ಲದ ಮತ್ತು ಖಾಸಗಿಯಲ್ಲದ ಸಂದರ್ಭಗಳಲ್ಲಿ ಪಾವಿತ್ರತೆ-ಕಶ್ಮಲತೆ ಸಂಬಂಧಿತ ವಿಧಿ ನಿಷೇಧಗಳು ಬಹಳಷ್ಟು ಸಡಿಲಗೊಂಡಿವೆ ಆದರೆ ಧಾರ್ಮಿಕ ಮತ್ತು ಖಾಸಗಿ ಪ್ರಸಂಗಗಳಲ್ಲಿ ಇನ್ನೂ ತಾರತಮ್ಯ ಇದೆ ಮತ್ತು ಇಲ್ಲಿ ಪಾವಿತ್ರತೆಯ ಭಾವನೆ ಬಹಳ ನಿರ್ಣಾಯಕವಾಗಿವೆ.

### 9.9.4.3. ತಾರತಮ್ಯದ ಗ್ರಹಿಕೆ

ತಾರತಮ್ಯ ಗ್ರಹಿಕೆ ಆಧಾರಿತ ಉಪ-ಸೂಚಕವಾಗಿದ್ದು, ಇಲ್ಲಿ ದಲಿತ ಜನರನ್ನು, ಅವರು ಕುಡಿಯುವ ನೀರು, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳ ಜೊತೆಗೆ, ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯವನ್ನು ಎದುರಿಸಿದ್ದರೆಯೇ ಎಂದು ಕೇಳಲಾಯಿತು. ಜನರಿಂದ ಬಂದ ಉತ್ತರಗಳಿಂದ, ಕುಡಿಯುವ ನೀರು, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳ ವಿಷಯದಲ್ಲಿ ಯಾವುದೇ ತಾರತಮ್ಯ ಎದುರಿಸಿಲ್ಲ ಎಂದು ಕಂಡುಬಂದಿತು. ಆದರೆ, ಕುಡಿಯುವ ನೀರಿನ ಲಭ್ಯತೆಯ ಕುರಿತಾದ ಉತ್ತರವನ್ನು ನಿಜವೆಂದು ಪರಿಗಣಿಸಬೇಕಿಲ್ಲ ಏಕೆಂದರೆ ದಲಿತರು ಮತ್ತು ದಲಿತೇತರರು ಒಂದೇ ಪ್ರದೇಶದಲ್ಲಿ ವಾಸವಿರುವುದಿಲ್ಲ. ಸರ್ಕಾರದ ಯೋಜನೆಯಡಿ ನೀಡಿರುವ ಪ್ರತ್ಯೇಕ ಕಾಲನಿಯಲ್ಲಿ ದಲಿತರು ವಾಸಿಸುತ್ತಿದ್ದು, ಅಲ್ಲಿ ಪ್ರತ್ಯೇಕ ನೀರಿನ ಸಂಪರ್ಕವಿರುವುದರಿಂದ ಅಲ್ಲಿ ತಾರತಮ್ಯದ ಅಭ್ಯಾಸವಿಲ್ಲ.

ಸಾಮಾಜಿಕ ತಾರತಮ್ಯದ ವಿಷಯದಲ್ಲಿ, ಶೇ.90 ರಷ್ಟು ಜನ ತಾವು ಯಾವುದೇ ರೀತಿಯ ಸಾಮಾಜಿಕ ತಾರತಮ್ಯ ಎದುರಿಸಿಲ್ಲ ಎಂದು ಹೇಳಿದರು. ಆದರೆ, ನಮ್ಮ ಮಾದರಿಯಲ್ಲಿ 5 ದಲಿತ ಕುಟುಂಬಗಳು ದಲಿತೇತರಿಂದ ತಾರತಮ್ಯವಾಗುತ್ತದೆ ಆದರೆ ಅವು ವರದಿಯಾಗುವುದಿಲ್ಲ ಎಂದು ಸೂಚಿಸಿದರು.ಏಕೆಂದರೆ ದಲಿತರು ಈ ತಾರತಮ್ಯಗಳನ್ನು ತಮ್ಮ ಸಾಮಾಜಿಕ ಸಂಬಂಧದ ಭಾಗವಾಗಿ ಪರಿಗಣಿಸಿದ್ದಾರೆ ಮತ್ತು ಈ ಅಭ್ಯಾಸಗಳಲ್ಲಿ ಯಾವುದೇ ಅನಪೇಕ್ಷಿತವಾದದ್ದನ್ನು ಕಾಣುವುದಿಲ್ಲ ಎಂದು ಹೇಳಿದರು.

ಚಿತ್ರ 9.5: ತಾರತಮ್ಯದ ಗ್ರಹಿಕೆಯ ಕುರಿತಾದ ಪ್ರಶ್ನೆಗಳಿಗೆ ಉತ್ತರದ ಪ್ರಮಣ




ಆರ್ಥಿಕ ತಾರತಮ್ಯದ ವಿಷಯದಲ್ಲಿ, ಶೇ.39 ರಷ್ಟು ಜನ ತಾವು ಒಂದಿಲ್ಲೊಂದು ರೀತಿಯಲ್ಲಿ ತಾರತಮ್ಯ ಎದುರಿಸಿದ್ದಾಗಿ ಹೇಳಿದರು. ಆರ್ಥಿಕ ತಾರತಮ್ಯದ ಬೇರು ಸಾಮಾಜಿಕ ಬಹಿಷ್ಕಾರದಲ್ಲಿದೆ. ಪ್ರಮುಖ ತಾರತಮ್ಯವು, ದಲಿತರು ಮನೆಯನ್ನು ಬಾಡಿಗೆಗೆ ಪಡೆಯುವ ಅಥವಾ ತಮ್ಮ ಮನೆಯನ್ನು ಬಾಡಿಗೆಗೆ ನೀಡುವ ಸಾಮರ್ಥ್ಯ, ಮತ್ತು ಧಾರ್ಮಿಕ ಪ್ರಕ್ರಿಯೆಗಳಿರುವ ಕೆಲಸಗಳನ್ನು ಪಡೆಯುವ ಅವಕಾಶಗಳನ್ನು ಒಳಗೊಂಡಿದೆ. ಸುಮಾರು ಶೇ.97 ರಷ್ಟು ಜನರ ಅನಿಸಿಕೆ ದಲಿತೇತರರಂತೆ ತಮಗೆ ಮನೆಯು ಬಾಡಿಗೆಗೆ ಸಿಗುವುದಿಲ್ಲ. ಮತ್ತು ಸುಮಾರು ಶೇ.85 ರಷ್ಟು ಜನ ತಾವು ದಲಿತೇತರರಂತೆ ಇತರರಿಗೆ ತಮ್ಮ ಮನೆಯನ್ನು ಬಾಡಿಗೆಗೆ ನೀಡುವುದು ಸಾಧ್ಯವಿಲ್ಲ ಎಂದು ಭಾವಿಸುತ್ತಾರೆ. ಆದ್ದರಿಂದ, ಅವರು ಸ್ಥಳೀಯ ಮನೆ ಬಾಡಿಗೆ ಮಾರುಕಟ್ಟೆಯಲ್ಲಿ ಪೂರೈಕೆದಾರ ಹಾಗು ಗ್ರಾಹಕ ಎರಡೂ ಬಗೆಯ ನಿರ್ಬಂಧಗಳನ್ನು ಎದುರಿಸುತ್ತಾರೆ. ಮೇಲಾಗಿ, ಸುಮಾರು ಶೇ.71 ರಷ್ಟು ಜನ, ತಮಗೆ ದೇವಸ್ಥಾನದ ಹೊರಗೆ/ಒಳಗೆ ಮತ್ತು ದೇವಸ್ಥಾನದ ಉತ್ಸವಗಳು ಮತ್ತು ಹಬ್ಬಗಳಿಗೆ ಸಂಬಂಧಿಸಿದ ಕೆಲಸಗಳು ಸಿಗುವ ಅವಕಾಶಗಳಿಲ್ಲ ಎಂದು ಹೇಳುತ್ತಾರೆ. ಈ ರೀತಿಯ ತಾರತಮ್ಯವು ಸ್ಥಳೀಯ ಪ್ರದೇಶದಲ್ಲಿ ಅವರ ಉದ್ಯೋಗಾರ್ಹತೆಯನ್ನು ಕುಂಠಿತಗೊಳಿಸಿ, ಅವರನ್ನು ಕೆಲವೇ ಕೆಲಸ ಮತ್ತು ಪಾತ್ರಗಳಿಗೆ ಸೀಮಿತಗೊಳಿಸಿ, ಅವರ ಆರ್ಥಿಕ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುತ್ತದೆ.

### 9.9.4.4 ಸ್ವಾತಂತ್ರ್ಯದ ಗ್ರಹಿಕೆ

**ಕೋಷ್ಟಕ 9.36: ಸ್ವಾತಂತ್ರ್ಯದ ಗ್ರಹಿಕೆ ಉಪ ಸೂಚ್ಯಂಕದ ವಿವರಗಳು**

| ವಿವರಗಳು | ಅನ್ವಯಾರ್ಥಕ ಉತ್ತರಗಳ ಸಂಖ್ಯೆ | ಒಟ್ಟು ಉತ್ತರಗಳ ಸಂಖ್ಯೆ | ಅನ್ವಯಾರ್ಥಕ ಉತ್ತರದ ಪ್ರಮಾಣ (ಶೇ.) | ನೀಡಲಾದ ಅಂಕಿ |
|---|---|---|---|---|
| | ಎ | ಬಿ | ಎ/ಬಿ*100 | |
| ಪ್ರಶ್ನಿಸುವುದು | 33 | 50 | 66 | 1 |
| ತಾರತಮ್ಯದ ವಿರುದ್ಧ ಪ್ರತಿಭಟನೆ | 31 | 50 | 62 | 1 |
| ಚಲನಾ ಸ್ವಾತಂತ್ರ್ಯ | 49 | 50 | 98 | 2 |
| ಉದ್ಯೋಗಾವಕಾಶಗಳು | 46 | 50 | 92 | 2 |
| ಸಾಂಸ್ಕೃತಿಕ ಚಟುವಟಿಕೆಗಳು | 45 | 48 | 93.75 | 2 |
| ಒಟ್ಟು ಗಣಿಸಲಾದ ಅಂಕಗಳು | | | | 8 |
| ಒಟ್ಟು ಗರಿಷ್ಠ ಅಂಕಗಳು | | | | 10 |
| ಉಪಸೂಚ್ಯಂಕ | | | | 0.8 |

ಟಿಪ್ಪಣಿ: ಉತ್ತರದ ಪ್ರಮಾಣವನ್ನು ಆಧರಿಸಿ ಅಂಕಿಗಳನ್ನು ನೀಡಲಾಗಿದೆ

ಈ ಉಪಸೂಚ್ಯಂಕದಲ್ಲಿ, ತಮಗೆ ಆಗುತ್ತಿರುವ ಅನ್ಯಾಯ/ತಾರತಮ್ಯವನ್ನು ಪ್ರಶ್ನಿಸಲು ದಲಿತರಿಗಿರುವ ಸ್ವಾತಂತ್ರ್ಯ, ಯಾವುದೇ ತಾರತಮ್ಯದ ವಿರುದ್ಧ ಪ್ರತಿಭಟನೆ, ಚಲನೆ, ಉದ್ಯೋಗಾವಕಾಶಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸ್ವಾತಂತ್ರ್ಯದ ಬಗ್ಗೆ ಕೇಳಲಾಯಿತು. ಕೋಷ್ಟಕ 9.36 ತೋರಿಸುವಂತೆ, ಮಾದರಿಯಲ್ಲಿನ ದಲಿತರು, ಉತ್ತರದ ಪ್ರಮಾಣ ಸೂಚಿಸುವಂತೆ, ಚಲನೆ, ಉದ್ಯೋಗಾವಕಾಶ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ವಿಚಾರದಲ್ಲಿ ತಾವು ಸ್ವತಂತ್ರರು ಎಂದು ನಂಬುತ್ತಾರೆ. ಇಲ್ಲಿ, ಸಾಮಾನ್ಯ ಉದ್ಯೋಗದ ಮಾರುಕಟ್ಟೆಯಲ್ಲಿ ಅವರಿಗೆ ಉದ್ಯೋಗಾವಕಾಶಗಳಲ್ಲಿ ಹೆಚ್ಚಿನ ಭೇದವಿಲ್ಲ ಎಂದು ದಲಿತರು ನಂಬುತ್ತಾರೆ ಎಂಬುದನ್ನು ಉಲ್ಲೇಖಿಸಬೇಕು. ಇದರ ಅರ್ಥ, ಧಾರ್ಮಿಕ ಸ್ಥಳದಲ್ಲಿ ಅಥವಾ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಕೆಲಸಗಳನ್ನು ಪಡೆಯಲು ಅವರು ಎದುರಿಸಿದ ತಾರತಮ್ಯವು ಸಾಮಾನ್ಯ ಉದ್ಯೋಗ ಮಾರುಕಟ್ಟೆಗೆ ಅಂಟಿಕೊಂಡಿದೆ ಎಂದು ಅವರು ಭಾವಿಸುವುದಿಲ್ಲ. ಇಲ್ಲಿ, ಬಹಳಷ್ಟು ದಲಿತರು ಪಡೆಯಬಚ್ಛಿಸುವ, ಧಾರ್ಮಿಕ ಸ್ಥಾನಗಳಲ್ಲಿ ಕೆಲಸವನ್ನು ಒಳಗೊಂಡಿರದ, ಕೆಲಸದ ರೀತಿ ಎಂಬುದನ್ನು ಪರಿಗಣಿಸಬೇಕು. ಇದಕ್ಕೆ ವಿರುದ್ಧವಾಗಿ, ತಾರತಮ್ಯದ ವಿರುದ್ಧ ಪ್ರತಿಭಟಿಸಲು ಮತ್ತು ತಮಗಾಗುವ ಅನ್ಯಾಯವನ್ನು ಪ್ರಶ್ನಿಸುವಲ್ಲಿ ಅವರಿಗೆ ಕಷ್ಟವಾಗುತ್ತದೆ ಎಂದು ಜನರ ಪ್ರತಿಕ್ರಿಯಿಸಿದರು. ತಮಗಾಗುವ ಅನ್ಯಾಯವನ್ನು ಪ್ರಶ್ನಿಸುವ ಮತ್ತು ಪ್ರತಿಭಟನೆಯ ಸ್ವಾತಂತ್ರ್ಯಕ್ಕೆ ಉತ್ತರದ ಪ್ರಮಾಣವು ಅನುಕ್ರಮವಾಗಿ ಶೇ. 66 ಮತ್ತು ಶೇ. 62 ತಮಗಾಗುವ ಅನ್ಯಾಯವನ್ನು ಪ್ರಶ್ನಿಸುವ ಮತ್ತು ಪ್ರತಿಭಟನೆಯ ಸ್ವಾತಂತ್ರ್ಯಕ್ಕೆ ಆಗುವ ಕಷ್ಟಕ್ಕೆ ಕಾರಣವು ತಿಳಿದಿಲ್ಲ ಏಕೆಂದರೆ ಪ್ರಶ್ನಾವಳಿಯು ಈ ಪ್ರಶ್ನೆಗಳಿಗೆ ಅನುಸರಣೆಯನ್ನು ಒಳಗೊಂಡಿರಲಿಲ್ಲ.

### 9.9.4.5. ಜೀವನಮಟ್ಟ

**ಕೋಷ್ಟಕ 9.37: ಜೀವನಮಟ್ಟ ಉಪಸೂಚ್ಯಂಕದ ವಿವರಗಳು**

| ಚರಮೌಲ್ಯಗಳು | ಶೇಕಡಾವಾರು (ಪರಿಶಿಷ್ಟ ಜಾತಿ ಕುಟುಂಬಗಳು) | ನಿಯಮ (ಶೇ. ಪರಿಶಿಷ್ಟ ಜಾತಿ ಕುಟುಂಬ) | ನೀಡಲಾದ ಅಂಕಿ |
|---|---|---|---|
| ಭೂಮಿ ಹಿಡುವಳಿ | 17 | 29 | 0 |
| ಕೃಷಿಯೇತರ ಉದ್ಯಮಗಳು | 6 | 29 | 0 |
| ಪಕ್ಕಾ ಮನೆಗಳು | 32 | 29 | 2 |
| ವಿದ್ಯುತ್ ಸಂಪರ್ಕ | 32 | 29 | 2 |
| ದ್ವಿಚಕ್ರ ವಾಹನದ ಒಡೆತನ | 37 | 29 | 2 |
| ಒಟ್ಟು ಗಣಿಸಿದ ಅಂಕಗಳು | | | 6 |
| ಒಟ್ಟು ಗರಿಷ್ಠ ಅಂಕಗಳು | | | 10 |
| ಉಪಸೂಚ್ಯಂಕ | | | 0.6 |

ಟಿಪ್ಪಣಿ: ನಿಯಮವನ್ನು ಆಧರಿಸಿ ಅಂಕಿಗಳನ್ನು ನೀಡಲಾಗಿದೆ

ಜೀವನಮಟ್ಟ ಸೂಚ್ಯಂಕವು, ದಲಿತರ ಕೃಷಿಯೇತರ ಉದ್ಯಮಗಳ ಒಡೆತನ, ಶಾಶ್ವತ ಮನೆಗಳು ಮತ್ತು ದ್ವಿಚಕ್ರ ವಾಹನಗಳು, ಭೂ ಹಿಡುವಳಿ ಮತ್ತು ಮನೆಗಳಿಗೆ ವಿದ್ಯುತ್ ಸಂಪರ್ಕ ಕುರಿತಾದ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಕೇವಲ ಶೇ.6 ರಷ್ಟು ದಲಿತ ಕುಟುಂಬಗಳು, ಹೋಟೆಲ್, ಚಿಲ್ಲರೆ ಅಂಗಡಿ ಮತ್ತು ಸಣ್ಣ ಉದ್ಯಮಗಳಂತಹ ಕೃಷಿಯೇತರ ಉದ್ಯಮಗಳನ್ನು ಹೊಂದಿವೆ. ಕೇವಲ ಶೇ.17 ರಷ್ಟು ದಲಿತ ಕುಟುಂಬಗಳು ಭೂ ಹಿಡುವಳಿಯನ್ನು ಹೊಂದಿದ್ದು, ಇದು ನಿರೀಕ್ಷಿತ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಇದರ ಫಲವಾಗಿ, ಉಪಸೂಚ್ಯಂಕವು 0.6ಕ್ಕೆ ಇಳಿದಿದ್ದು, ಜೀವನ ಮಟ್ಟದಲ್ಲಿ ದಲಿತ ಕುಟುಂಬಗಳ ಕಳಪೆ ಸಾಧನೆಯನ್ನು ಸೂಚಿಸುತ್ತದೆ.

### 9.9.4.6. ಲಿಂಗ ತಾರತಮ್ಯ (ದಲಿತ ಮಹಿಳೆಯರ ಪ್ರಜನನ ಆರೋಗ್ಯ)

ದಲಿತ ಅಭಿವೃದ್ಧಿ ಸೂಚ್ಯಂಕದ ಲಿಂಗ ವಿಮಿತಿಯು ಮುಖ್ಯವಾಗಿ ದಲಿತ ಮಹಿಳೆಯರ ಪ್ರಜನನ ಆರೋಗ್ಯದ ಕುರಿತಾಗಿದೆ. ಇದು ಲಿಂಗ ಸಂಬಂಧಗಳ ವ್ಯಾಪ್ತಿಯನ್ನು ಮಿತಗೊಳಿಸುತ್ತದೆ ಮತ್ತು ಮಹಿಳೆಯರ ಸಮಯದ ಬಳಕೆ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಕೌಟುಂಬಿಕ ಸಂಬಂಧಗಳನ್ನು ಇದರ ವ್ಯಾಪ್ತಿಗೆ ಸೇರಿಸಿದರೆ ಈ ಸೂಚಕ ಉತ್ತಮಗೊಳ್ಳಬಹುದು.

**ಕೋಷ್ಟಕ 9.38: ಲಿಂಗ ತಾರತಮ್ಯ ಉಪ ಸೂಚ್ಯಂಕದ ವಿವರಗಳು**

| ವಿವರಗಳು | ಅನ್ವಯಾರ್ಥಕ ಉತ್ತರಗಳ ಸಂಖ್ಯೆ | ಒಟ್ಟು ಉತ್ತರಗಳ ಸಂಖ್ಯೆ | ಅನ್ವಯಾರ್ಥಕ ಉತ್ತರದ ಪ್ರಮಾಣ (ಶೇ.) | ನೀಡಲಾದ ಅಂಕಿ |
|---|---|---|---|---|
| | ಎ | ಬಿ | ಎ/ಬಿ*100 | |
| ಹೆರಿಗೆಯ ಮುನ್ನ ವಿಶ್ರಾಂತಿ | 27 | 50 | 54 | 1 |
| ಹೆರಿಗೆಯ ನಂತರ ವಿಶ್ರಾಂತಿ | 43 | 50 | 86 | 2 |
| ಸಾಂಸ್ಥಿಕ ಹೆರಿಗೆಯ ಪ್ರಮಾಣ | 42 | 50 | 84 | 2 |
| ಆರೋಗ್ಯ ಸಹಾಯಕರ ಭೇಟಿಯ ಪ್ರಮಾಣ | 18 | 50 | 36 | 0 |
| ಪ್ರಜನನ ಆರೋಗ್ಯಕ್ಕೆ ಬೆಂಬಲ | 22 | 50 | 44 | 0 |
| ಒಟ್ಟು ಗಣಿಸಿದ ಅಂಕಗಳು | | | | **5** |
| ಒಟ್ಟು ಗರಿಷ್ಟ ಅಂಕಗಳು | | | | **10** |
| ಉಪಸೂಚ್ಯಂಕ | | | | **0.5** |

ಟಿಪ್ಪಣಿ: ನಿಯಮ ಮತ್ತು ಉತ್ತರದ ಪ್ರಮಾಣವನ್ನು ಆಧರಿಸಿ ಅಂಕಿಯನ್ನು ನೀಡಲಾಗಿದೆ

ಕಡಿಮೆ ಸಂಖ್ಯೆಯ ಮಹಿಳೆಯರು ತಾವು ಹೆರಿಗೆಗೆ ಮುನ್ನ 3 ತಿಂಗಳು ಅಥವಾ ಹೆಚ್ಚು ಸಮಯ ವಿಶ್ರಾಂತಿ ಪಡೆಯುವುದಾಗಿ ಹೇಳಿರುವುದು, ಕಡಿಮೆ ಪ್ರಮಾಣದಲ್ಲಿ ಆರೋಗ್ಯ ಸಹಾಯಕರನ್ನು ಭೇಟಿಯಾಗಿರುವುದು ಮತ್ತು ಪ್ರಜನನ ಆರೋಗ್ಯಕ್ಕೆ ಸಹಾಯ ಅಪೇಕ್ಷಿಸುವುದು ಈ ಉಪಸೂಚ್ಯಂಕದ ಕಡಿಮೆ ಮೌಲ್ಯಕ್ಕೆ ಕಾರಣ ಆಗಿವೆ. ಕೇವಲಶೇ. 54 ರಷ್ಟು ಮಹಿಳೆಯರಿಗೆ ಮಾತ್ರ ತಮ್ಮ ಹೆರಿಗೆಯ ಮುನ್ನ 3 ಅಥವಾ ಹೆಚ್ಚು ತಿಂಗಳ ವಿಶ್ರಾಂತಿ ಪಡೆಯಲು ಸಾಧ್ಯವಾಯಿತು. ಆರೋಗ್ಯ ಸಹಾಯಕರು ತಮ್ಮ ಮನೆಗೆ ಭೇಟಿ ನೀಡಲಿಲ್ಲ ಎಂದು 13 ಮಹಿಳೆಯರು ಹೇಳಿದರು. ಕೇವಲ ಶೇ.36 ರಷ್ಟು ಮಹಿಳೆಯರು, ತಮ್ಮ ಗರ್ಭದ ಸಮಯದಲ್ಲಿ ಆರೋಗ್ಯ ಸಹಾಯಕರು ಕನಿಷ್ಟ ತಿಂಗಳಿಗೊಮ್ಮೆ ತಮ್ಮ ಮನೆಗೆ ಭೇಟಿ ನೀಡಿದರು ಎಂದು ಹೇಳಿದರು. ಸಾಮಾನ್ಯ ಜನಸಂಖ್ಯೆಗೆ ಆರೋಗ್ಯ ಸಹಾಯಕರ ಶೇ. 100 ರಷ್ಟು ಮನೆ ಭೇಟಿಗೆ ಹೋಲಿಸಿದಂತೆ, ಶೇ.38 ರಷ್ಟು ಆರೋಗ್ಯ ಸಹಾಯಕರ ಭೇಟಿಯು, ಗರ್ಭಧಾರಣೆಯ ಸಮಯದಲ್ಲಿ ಆರೋಗ್ಯ ಸಹಾಯಕ ಸೇವೆಗಳ ದಲಿತರ ಕಡೆಗಣನೆಯನ್ನು ಸೂಚಿಸುತ್ತದೆ. ಪ್ರಜನನ ಆರೋಗ್ಯದ ಸಹಾಯ ಅಪೇಕ್ಷಿಸುವ ವಿಷಯದಲ್ಲಿ, ಸುಮಾರು ಶೇ. 44ರಷ್ಟು ಮಹಿಳೆಯರು, ತಾವು ಮಡಿಲು ಕಿಟ್, ಜನನಿಸುರಕ್ಷಾಯೋಜನೆಯ ಮೂಲಕ ನಗದು, ಮಾತ್ರೆಗಳು ಅಥವಾ ಚುಚ್ಚುಮದ್ದನ್ನು ಪಡೆದಿದ್ದಾಗಿ ಹೇಳಿದರು. ಸರ್ಕಾರಿ ಯೋಜನೆಯಡಿ ನೀಡಲಾದ ಯಾವುದೇ ಪ್ರಜನನ ಆರೋಗ್ಯ ಬೆಂಬಲದ ಬಗ್ಗೆ ತಿಳಿದಿಲ್ಲವೆಂದು 12 ಮಹಿಳೆಯರು ಹೇಳಿದರು. ಈ ಎಲ್ಲಾ ಅಂಶಗಳು ತಾಯಿಯ ಆರೋಗ್ಯ ಮತ್ತು ಮಗುವಿನ ಜನನದಲ್ಲಿ ಗಣನೀಯ ಪಾತ್ರ ವಹಿಸುತ್ತವೆ.

## 9.10 ತಾತ್ಪರ್ಯ

ಚಲಿಸುವ, ಉದ್ಯೋಗಾವಕಾಶ, ಪ್ರಾಥಮಿಕ ಸೌಲಭ್ಯಗಳ ಲಭ್ಯತೆ ಮತ್ತು ಶಿಕ್ಷಣದ ಲಭ್ಯತೆ ಕುರಿತಾದ ಸ್ವಾತಂತ್ರ್ಯವು ದಲಿತೇತರ ಕುಟುಂಬಗಳಷ್ಟೇ ಇದೆ ಎಂದು ಬಹಳಷ್ಟು ದಲಿತ ಕುಟುಂಬಗಳು ನಂಬುತ್ತಾರೆಂಬ ಅಂಶವನ್ನು ಪರಿಗಣಿಸಿದರೆ, ತಾರತಮ್ಯದ ಪದ್ಧತಿಯನ್ನು ತೊಡೆದುಹಾಕಲು ಮತ್ತು ವಿರೋಧಿಸಲು ಸರ್ಕಾರದ ನಿರಂತರ ಮತ್ತು ಪ್ರಜ್ಞಾಪೂರ್ವಕ ಶ್ರಮವು ಯಶಸ್ಸನ್ನು ಸಾಧಿಸಿದೆ ಎಂದು ತೀರ್ಮಾನಿಸಬಹುದು. ಆದರೆ, ಖಾಸಗಿ ಮತ್ತು ಧಾರ್ಮಿಕ ಸ್ಥಳದಲ್ಲಿ ಇರುವ ತಾರತಮ್ಯದ ವಿಷಯದಲ್ಲಿ ಇನ್ನೂ ಬಹಳಷ್ಟು ಅಂತರವನ್ನು ಕ್ರಮಿಸಬೇಕಿದೆ. ತಮ್ಮ ಹಕ್ಕು ಮತ್ತು ಹಕ್ಕಿಗಾಗಿ ಹೋರಾಡುವ ಸಾಮರ್ಥ್ಯದ ಜಾಗೃತಿಯು ದಲಿತರಲ್ಲಿ ಬೆಳೆಯಬೇಕಿದೆ.

ತಾರತಮ್ಯದ ತೀವ್ರತೆಯು ಖಂಡಿತವಾಗಿ ಸಡಿಲಗೊಂಡಿದೆ ಎಂಬುದನ್ನು ಗುರುತಿಸುವುದು ಮುಖ್ಯವಾಗಿದ್ದರೂ, ಕೆಲವು ದಲಿತರು ತಾವೇ ಶಂಕಿಸುವಂತೆ, ತಾರತಮ್ಯವನ್ನು ಮತ್ತು ಪದ್ಧತಿಗಳನ್ನು ಒಪ್ಪಿಕೊಂಡಿರುತ್ತಾರೆ. ಕೆಲವು ವಲಯಗಳಲ್ಲಿ ತಾರತಮ್ಯವು ಇಲ್ಲವೆಂದು ಪರಿಗಣಿಸಲು ಇದೂ ಒಂದು ಕಾರಣವಾಗಿರಬಹುದು. ಖಾಸಗಿ ಸ್ಥಳಗಳಲ್ಲಿ ಪ್ರವೇಶ ನಿಷೇಧ ಹಿಂದಿನಂತೆಯೇ ಇದೆ. ಸರ್ಕಾರ ದಲಿತರಿಗಾಗಿ ಪ್ರತ್ಯೇಕ ಬಡಾವಣೆ ನಿರ್ಮಿಸಿದ್ದು ಇದಕ್ಕೆ ಕಾರಣವಿರಬಹುದು. ದಲಿತ ಕುಟುಂಬಗಳಿಗೆ ಜೀವನಮಟ್ಟ ಮತ್ತು ಪ್ರಜನನ ಆರೋಗ್ಯ ಸೇವೆಗಳ ಲಭ್ಯತೆಯು ಇನ್ನೂ ನಿಕೃಷ್ಟವಾಗಿಯೇ ಇವೆ. ಇದರ ವಿಚಾರದಲ್ಲಿ ಉತ್ತಮ ಪಡಿಸುವ ಅಗತ್ಯವಿದೆ ಎಂದು ಇದು ಸೂಚಿಸುತ್ತದೆ.



# ಆಡಳಿತ ಪರಿಪಾಲನೆ



# 10. ಆಡಳಿತ ಪರಿಪಾಲನೆ

ಒಂದು ದೇಶದ ವ್ಯವಹಾರಗಳನ್ನು ನಿರ್ವಹಿಸಲು ಬಳಸುವ ವಿವಿಧ ಹಂತದ ರಾಜಕೀಯ ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳ ಬಳಕೆಯನ್ನು ಆಡಳಿತ ಪರಿಪಾಲನೆ ಎನ್ನಬಹುದು.

- ಕೋಫಿ ಅನ್ನನ್,
ವಿಶ್ವ ಸಂಸ್ಥೆಯ ಮಾಜಿ ಮಹಾಕಾರ್ಯದರ್ಶಿ

## 10.1 ಪ್ರಸ್ತಾವನೆ

ಆಡಳಿತ ಪರಿಪಾಲನೆಯು ನಾಗರೀಕರು ಹಾಗು ಸಮುದಾಯಗಳು ತಮ್ಮ ಹಿತಾಸಕ್ತಿಗಳನ್ನು ಅಭಿವ್ಯಕ್ತಿಸುವ ಮತ್ತು ಕಾನೂನು ರೀತ್ಯಾ ಹಕ್ಕನ್ನು ಚಲಾಯಿಸಿ ತನ್ಮೂಲಕ ತಮ್ಮ ಉದ್ದೇಶಗಳ ಈಡೇರಿಕೆಗೆ ಪ್ರಯತ್ನಿಸುವ ಹಾಗು ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಬಳಸುವ ವಿವಿಧ ಆಡಳಿತಾತ್ಮಕ ಪ್ರಕ್ರಿಯೆಗಳು, ಸಾಂಸ್ಥಿಕ ವಿಧಿಗಳು ಮತ್ತು ವಿಧಾನಗಳನ್ನು ಒಳಗೊಂಡಿರುತ್ತದೆ.[40] ಈ ಆಡಳಿತ ಪರಿಪಾಲನೆಯು ಜನರು ನಿರ್ಧಾರಗಳನ್ನು ಮೂಡಿರುವುದಕ್ಕೆ ಅಧಿಕಾರವನ್ನು ಚಲಾಯಿಸುವುದಕ್ಕೆ ಬಳಸುವ ನಿಯಮಗಳು, ಮೌಲ್ಯಗಳೂ ಹಾಗು ತತ್ಸಂಬಂಧವಾದ ಪ್ರಕ್ರಿಯೆಗಳನ್ನು ಒಳಗೊಂಡಿದೆ.

ಪ್ರಜಾಪ್ರಭುತ್ವ ಆಡಳಿತ ಪರಿಪಾಲನೆಯು ಎಲ್ಲ ವರ್ಗದ ಜನರ ಹಾಗು ಸಮುದಾಯಗಳ ಏಳಿಗೆಗೆ ಅವರನ್ನು ಒಳಗೊಳ್ಳುವಂತಹ ಮತ್ತು ಅವರಿಗೆ ಸೂಕ್ತವಾಗಿ ಸ್ಪಂದಿಸುವಂತಹ ವಾತಾವರಣವನ್ನು ಸೃಜಿಸುವ ಮತ್ತು ಪರಿಪಾಲಿಸುವ ಕಾರ್ಯವಾಗಿದೆ.[41]

ವಿಶ್ವ ಮಾನವ ಹಕ್ಕುಗಳ ಆಯೋಗದ ಅನ್ವಯ ಉತ್ತಮ ಆಡಳಿತವು ಪಾರದರ್ಶಕತೆ, ಹೊಣೆಗಾರಿಕೆ, ಭಾಗವಹಿಸುವಿಕೆ, ಜವಬ್ದಾರಿ ಹಾಗು ಜನರ ಅಗತ್ಯಗಳಿಗೆ ಸ್ಪಂದನೆ ಎಂಬ ಐದು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಆಡಳಿತ ಪರಿಪಾಲನೆಯು ಮಾನವ ಅಭಿವೃದ್ಧಿಗೆ ಪೂರಕವಾದ ಸಾಂಸ್ಥಿಕ ಹಾಗು ಮಾನವ ಸಂಪನ್ಮೂಲಗಳ ಬಳಕೆಯ ಮೇಲೆ ತನ್ನ ನೇರ ಪ್ರಭಾವವನ್ನು ಬೀರುತ್ತದೆ. ಇದು ಸಾರ್ವಜನಿಕ ಕಾರ್ಯ ನೀತಿಗಳನ್ನ ತಯಾರಿಸುವಲ್ಲಿ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ, ನಿಮ್ನ ಹಾಗೂ ಶೋಷಿತ ವರ್ಗದ ಜನರ ಅಗತ್ಯಗಳನ್ನೂ ಒಳಗೊಂಡಂತಹ ರೀತಿಯಲ್ಲಿ ಸಾರ್ವಜನಿಕ ಸೇವಾ ಸೌಲಭ್ಯಗಳನ್ನು ತಲುಪಿಸುವಲ್ಲಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆಯಲ್ಲಿ ತನ್ನ ಪ್ರಭಾವದ ಛಾಪನ್ನು ತೋರಿಸುತ್ತದೆ.

ಮಾನವ ಅಭಿವೃದ್ಧಿಯು ಮಾನವ ಹಕ್ಕುಗಳ ಊರ್ಜಿತಗೊಳಿಸಲು ಎಲ್ಲ ವರ್ಗದ ಅದರಲ್ಲೂ ನಿಮ್ನ ಹಾಗು ಶೋಷಿತ ಸಮುದಾಯದ ಅವಕಾಶಗಳ ನಿರಂತರ ಬೆಳವಣಿಗೆ ಹಾಗು ವಿಸ್ತಾರಗೊಳಿಸುವ ಪ್ರಕ್ರಿಯೆಯನ್ನು ಸಾರುತ್ತದೆ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ, ಸಮಾಜದ ವಿವಿಧ ಸ್ತರದ ಜನ ಸಮುದಾಯದ ನಡುವೆ ಅಭಿವೃದ್ಧಿಯಲ್ಲಿ ಅಂತರವಿರುವುದು. ಹಾಗಾಗಿ ಅಭಿವೃದ್ಧಿಯೆಂದರೆ ಶೋಷಿತ ಸಮುದಾಯಗಳ ಆಯ್ಕೆಯು ವಿಸ್ತರಣೆಯಷ್ಟೆ ಅಲ್ಲದೆ ಇತರ ವರ್ಗಕ್ಕೆ ಹೋಲಿಸಿದಂತೆ ಇರುವ ಅಭಿವೃದ್ಧಿಯ ಅಂತರವನ್ನ ಕಡಿಮೆ ಮಾಡೂವುದೇ ಆಗಿದೆ. ಈ ಅಂತರ ಕಡಿಮೆ ಮಾಡುವಲ್ಲಿ ಶೋಷಿತ ವರ್ಗದ ಅಭಿವೃದ್ಧಿಗೆ ಅವಕಾಶಗಳ ವಿಸ್ತರಣೆಯು ಜೊತೆಗೆ ಹಕ್ಕುಗಳ ಊರ್ಜಿತಗೊಳಿಸುವಿಕೆ ಸಹ ಸೇರಿದೆ.

ಉತ್ತಮ ಆಡಳಿತ ಪರಿಪಾಲನೆಯನ್ನು ಅಪೇಕ್ಷಿತ ಪರಿಣಾಮ ಮತ್ತು ಫಲಿತಾಂಶಗಳನ್ನು ನೀಡುವ ಪ್ರಕ್ರಿಯೆ ಎಂದರೆ ತಪ್ಪಾಗಲಾರದು. ಈ ಪ್ರಕ್ರಿಯೆ ಮಾನವ ಅಭಿವೃದ್ಧಿಗೆ ಮುಖ್ಯವಾಗಿದ್ದು ಅವಕಾಶಗಳ ವಿಸ್ತರಣೆಯ ಜೊತೆಗೆ ಅವುಗಳ ದೊರೆಗೊಳ್ಳುವಿಕೆಗೂ ಕಾರಣವಾಗಿರುತ್ತದೆ. ಆಡಳಿತ ಪರಿಪಾಲನೆಯು ನಿಯಮಗಳು, ರೀತಿ ನೀತಿಗಳು ಹಾಗು ಪ್ರಕ್ರಿಯೆಗಳನ್ನು ಒಳಗೊಂಡಿರುವ ಆಡಳಿತವನ್ನು ಸೂಚಿಸುತ್ತದೆ ಅದರಂತೆಯೇ ಜನರಿಗೆ ದೊರೆಯುತ್ತಿರುವ ಅಭಿವೃದ್ಧಿ ಅವಕಾಶಗಳ ವಿಸ್ತರಣೆಯನ್ನೂ ಹಾಗು ಅವಕಾಶಗಳ ಮೇಲೆ ಪ್ರಭುತ್ವ ಸಾಧಿಸುವ ವಿವಿಧ ಸಮುದಾಯದ ಪ್ರಯತ್ನವನ್ನು ತನ್ಮೂಲಕ ಸಾರ್ವಜನಕರಿಗೆ ಲಭ್ಯವಾಗುತ್ತಿರುವ ಸೇವಾಸೌಲಭ್ಯಗಳ ಮಟ್ಟವನ್ನೂ ಬಿಂಬಿಸುತ್ತದೆ. ಇದರಲ್ಲಿ ಆಡಳಿತ ಯಂತ್ರದ ಸಾಮರ್ಥ್ಯ ಕಾರ್ಯಕ್ಷಮತೆಯೂ ಮತ್ತೆ ಜನಸ್ಪಂದನೆಯೂ ಸೇರಿರುತ್ತದೆ.

ರಾಷ್ಟ್ರ ಹಾಗು ರಾಜ್ಯ ಸರ್ಕಾರಗಳಲ್ಲದೆ, ಸ್ಥಳೀಯ ಸರ್ಕಾರಗಳಲ್ಲಿನ ಆಡಳಿತ ಪರಿಪಾಲನೆಯು ಮಾನವ ಅಭಿವೃದ್ಧಿಗೆ ಪೂರಕವಾದ ವಾತಾವರಣ ಕಲ್ಪಿಸಲು ಮತ್ತು ಅವಕಾಶಗಳನ್ನು ಒದಗಿಸಲು ಹೆಚ್ಚು ಸಾಮರ್ಥ್ಯವನ್ನು ಹೊಂದಿದೆ. ಸ್ಥಳೀಯ ಸರ್ಕಾರದಲ್ಲಿ ಜನ ಪ್ರತಿನಿಧಿಗಳು ತಾವು ಪ್ರತಿನಿಧಿಸುವ ಕ್ಷೇತ್ರದಲ್ಲಿರುವ ವಿವಿಧ ವರ್ಗದ ಜನರ ಅಗತ್ಯಗಳು ಹಾಗೂ ಸಮಸ್ಯೆಗಳ ಕುರಿತಾದ ತಿಳುವಳಿಕೆಯನ್ನು ಆಡಳಿತ ಪರಿಪಾಲನೆಯಲ್ಲಿ ವಿನಿಯೋಗಿಸಬಲ್ಲವರಾಗಿರುತ್ತಾರೆ. ಇದು ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯವಾದ ಪರಿಹಾರಗಳನ್ನು ಕಂಡುಕೊಳ್ಳಲು ಬಹಳ ಸಹಕಾರಿಯಾಗುತ್ತದೆ. ಸ್ಥಳೀಯ ಸರ್ಕಾರದಲ್ಲಿನ ಮೀಸಲಾತಿಯಿಂದ ಮಹಿಳೆಯರ ಮತ್ತು ಸಮಾಜದ ಶೋಷಿತ ವರ್ಗದ ಅಗತ್ಯಗಳನ್ನು ಬಿಂಬಿಸಲು ಮತ್ತು ಸೂಕ್ತವಾಗಿ ಕಾರ್ಯಪ್ರವೃತ್ತರಾಗಲು ಸಹಕಾರಿಯಾಗಿದೆ.

## 10.2 ಸ್ಥಳೀಯ ಸರ್ಕಾರದ ಸ್ವರೂಪ ಮತ್ತು ಪ್ರಕ್ರಿಯೆಗಳು.

ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ಪಡೆದನಂತರದ ದಿನಗಳಲ್ಲಿ ಕೆಲವು ಕಾಲ ಸ್ಥಳೀಯ ಸರ್ಕಾರಗಳು ಭಿನ್ನರೂಪದಲ್ಲಿ ಅಸ್ತಿತ್ವದಲ್ಲಿತ್ತು. ಆಗ ಸ್ಥಳೀಯ ಸರ್ಕಾರಗಳು ಪುರಸಭೆ ಹಾಗೂ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಸ್ವರೂಪದಲ್ಲಿದ್ದು ಅದರ ಸದಸ್ಯರು ರಾಜ್ಯಸರ್ಕಾರಗಳಿಂದ ನಾಮನಿರ್ದೇಶಿತ ಗೊಂಡವರಾಗಿದ್ದರು.

ಪಶ್ಚಿಮ ಬಂಗಾಳ ರಾಜ್ಯದಲ್ಲಿ 1973ರಲ್ಲಿ ಪಂಚಾಯತ್ ರಾಜ್ ಅಧಿನಿಯಮವನ್ನು ಜಾರಿಗೆ ತಂದು ಕ್ರಮವಾಗಿ ಸ್ಥಳೀಯ ಸರ್ಕಾರಗಳಿಗೆ ಚುನವಣೆನಡೆಸಿ ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಿದರು. ಕರ್ನಾಟಕದಲ್ಲೂ ಸಹ ವಿಧಾನಸಭೆಯು 1983ರಲ್ಲಿ ಸ್ಥಳೀಯ ಸರ್ಕಾರಗಳನ್ನು ಶಾಸನದ ಮೂಲಕ ಸಾಂವಿಧಾನಿಕ ನೆಲೆಗಟ್ಟನ್ನು ಒದಗಿಸುವ ಪ್ರಯತ್ನ ಮಾಡಲಾಯಿತು ಮತ್ತು ರಾಜ್ಯದಲ್ಲಿ ಎಲ್ಲ ಸ್ತರದ ಸ್ಥಳೀಯ ಸರ್ಕಾರಗಳನ್ನು ರಚಿಸಲಾಯಿತು.[42]

ರಾಷ್ಟ್ರಮಟ್ಟದಲ್ಲಿ ಈ ಪ್ರಯತ್ನ 1989ರಲ್ಲಿ ಪ್ರಾರಂಭವಾದರೂ, ಲೋಕಸಭೆಯಲ್ಲಿ ಸೂಕ್ತ ಬೆಂಬಲ ಸಿಗದ ಕಾರಣ ಮುಂದೂಡಲ್ಪಟ್ಟಿತು. 1992ರಲ್ಲಿ ಸಂವಿಧಾನದ 73ನೇ ಹಾಗೂ 74ನೇ ತಿದ್ದುಪಡಿಯ ಕ್ರಮವಾಗಿ ರಾಷ್ಟ್ರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ರಚನೆಯ ಮೂಲಕ ಸ್ಥಳೀಯ ಸರ್ಕಾರಗಳ ಯುಗಕ್ಕೆ ನಾಂದಿಯಾಯಿತು.[43] ಎಲ್ಲ ರಾಜ್ಯಗಳು 3ನೇ ಸ್ತರದ ಸಂವಿಧಾನದ ತಿದ್ದುಪಡಿಯಾದ ಒಂದು ವರ್ಷದ ಅವಧಿಯಲ್ಲಿ ರಾಜ್ಯಮಟ್ಟದಲ್ಲಿ ಸ್ಥಳೀಯ ಸರ್ಕಾರದ ರಚನೆ ಹಾಗೂ ಕಾರ್ಯಕ್ಕೆ ಅನುವುಮಾಡಿಕೊಡುವ ಕಾಯ್ದೆಗಳನ್ನು ಜಾರಿಗೊಳಿಸಿದವು. ಮೂರನೆ ಸ್ತರದ ಸರ್ಕಾರಗಳಿಗೆ ಪೂರಕವಾಗಿ ಅಗತ್ಯವಾದ ರಾಜ್ಯ ಚುನಾವಣಾ ಅಯೋಗ ಮತ್ತು ರಾಜ್ಯ ಹಣಕಾಸು ಅಯೋಗದ ರಚನೆಗೂ ಈ ಸಂವಿಧಾನದ ತಿದ್ದುಪಡಿ ಚಾಲನೆ ನೀಡಿತು. ಸಂವಿಧಾನದ 11ನೇ ಮತ್ತು 12ನೇ ಪರಿಚ್ಛೇದದ ಅಡಿಯಲ್ಲಿ ಕ್ರಮವಾಗಿ

[40] ಸಾರ್ವಜನಿಕ ಆಡಳಿತ ಕುರಿತು ಪರಿಣಿತರ ಸಮಿತಿ, ಆಡಳಿತ ಮತ್ತು ಸಾರ್ವಜನಿಕ ಆಡಳಿತದಲ್ಲಿ ಮೂಲಭೂತ ಪರಿಕಲ್ಪನೆಗಳ ಹಾಗೂ ಪದಗಳ ವಿವರಣೆ (E/C.16/2006/4) (New York, 2006)
[41] ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ, ಮಾನವ ಅಭಿವೃದ್ಧಿ ವರದಿ 2011 (New York, 2011)
[42] ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತುಗಳು ಮತ್ತು ನ್ಯಾಯ ಪಂಚಾಯತಿ ಕಾಯಿದೆ, 1983
[43] 20 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ರಾಜ್ಯಗಳು ಮಾತ್ರ 2 ಸ್ತರದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊಂದಬಹುದು

29 ಮತ್ತು 18 ಕರ್ತವ್ಯಗಳನ್ನು ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿದೆ.

ಸ್ಥಳಿಯ ಸರ್ಕಾರಗಳಿಗೆ ಸರ್ಕಾರದ ಸ್ಥಾನಮಾನ ಮತ್ತು ಅಧಿಕಾರವನ್ನು ಸಂವಿಧಾನದ ತಿದ್ದುಪಡಿಯು ತಂದುಕೊಟ್ಟಿತು. ಸ್ಥಳೀಯ ಸರ್ಕಾರಗಳು ರಾಜ್ಯ ಸರ್ಕಾರದ ಅಧೀನಕ್ಕೆ ಒಳಪಟ್ಟ ವಿಷಯವಾದ್ದರಿಂದ, ಸಂವಿಧಾನದ ತಿದ್ದುಪಡಿಯು ಕಡ್ಡಾಯ ಮತ್ತು ಐಚ್ಛಿಕ ನಿಬಂಧನೆಗಳನ್ನು ಸೂಚಿಸಿದೆ. ಸಂವಿಧಾನ ತಿದ್ದುಪಡಿ ಸ್ಥಳೀಯ ಸರ್ಕಾರದ ಕುರಿತಾದ ಪ್ರಮುಖ ಲಕ್ಷಣಗಳೆಂದರೆ ಮೂರು ಹಂತದ (ಜಿಲ್ಲೆ ತಾಲ್ಲೂಕು ಮತ್ತು ಗ್ರಾಮ) ಪಂಚಾಯತ್ ರಾಜ್ಯ ಸಂಸ್ಥೆಗಳು ಗ್ರಾಮೀಣ ಭಾಗದಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಅಸ್ತಿತ್ವದಲ್ಲಿರುವುದು, ಪ್ರತಿ ಐದು ವರ್ಷಗಳಿಗೊಮ್ಮೆ ಈ ಸ್ಥಳೀಯ ಸರ್ಕಾರಗಳಿಗೆ ಚುನಾವಣೆ ನಡೆಸುವುದು ಹಾಗೂ ಚುನಾವಣೆಯಲ್ಲಿ ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಪ್ರಾತಿನಿಧ್ಯ ಒದಗಿಸುವುದು ಮತ್ತು ರಾಜ್ಯಮಟ್ಟದಲ್ಲಿ ಚುನಾವಣಾ ಆಯೋಗ ಮತ್ತು ಹಣಕಾಸು ಆಯೋಗದ ರಚನೆ (ರಾಜ್ಯ ಸರ್ಕಾರದ ಆದಾಯದಲ್ಲಿ ಸ್ಥಳೀಯ ಸರ್ಕಾರಗಳ ಪಾಲು ನಿರ್ಧರಿಸುವ ಸಲುವಾಗಿ), ಮುಖ್ಯವಾದವು. ಪ್ರತಿ ಐದು ವರ್ಷಗಳಿಗೊಮ್ಮೆ ಸ್ಥಳಿಯ ಸರ್ಕಾರಗಳ ಚುನಾವಣೆ ನಡೆಸಲು ಸ್ಥಳೀಯ ಸರ್ಕಾರದಲ್ಲಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದಲ್ಲಿನ ಪ್ರಾತಿನಿಧ್ಯಗಾಗಿ ಮೀಸಲಾತಿ ಮತ್ತು ಜನರ ಸಹಭಾಗಿತ್ವವನ್ನು ಅನುವು ಮಾಡಲು ಗ್ರಾಮಸಭೆ ಮತ್ತು ವಾರ್ಡ್ ಸಭೆಗಳನ್ನು ನಿಯೋಜಿಸುವ  ಕ್ರಮಗಳನ್ನು ಸಹ ಸ್ಥಳೀಯ ಸರ್ಕಾರದ ರಚನೆಯಲ್ಲಿ ಅಳವಡಿಸಲಾಗಿದೆ.

## 10.3 ಪಂಚಾಯತ್ ರಾಜ್ಯ ಸಂಸ್ಥೆಗಳು : ರಚನೆ ಮತ್ತು ಪ್ರಕ್ರಿಯೆಗಳು

ಸಂವಿಧಾನದ ತಿದ್ದುಪಡಿಯ ನಂತರ ಪಂಚಾಯತ್ ರಾಜ್ ಅಧಿನಿಯಮವನ್ನು ತಿದ್ದುಪಡಿ ಮಾಡಿದ ಮೊದಲ ರಾಜ್ಯ ಕರ್ನಾಟಕ. ಈ ತಿದ್ದುಪಡಿಯನ್ನು 10 ಮೇ 1993 ರಂದು ಜಾರಿಗೊಳಿಸಲಾಯಿತು ಸಂವಿಧಾನದ ತಿದ್ದುಪಡಿಯೂ ಮೊದಲೇ ಕರ್ನಾಟಕ ರಾಜ್ಯ ಸ್ಥಳೀಯ ಸರ್ಕಾರಗಳ ರಚನೆ ಹಾಗು ಕಾರ್ಯಗಳಲ್ಲಿ ಮುಂಚೂಣಿಯಲ್ಲಿತ್ತು. ವಿಕೇಂದ್ರಿಕೃತ ಸ್ಥಳೀಯ ಸರ್ಕಾರದ ಅಸ್ತಿತ್ವ ಪ್ರಯೋಜನ ಹಾಗು ಅಗತ್ಯತೆಗಳ ಬಗ್ಗೆ  ಸಾಕಷ್ಟು ಚರ್ಚೆಗಳಾಗಿ ಅದು ಅಭಿವೃದ್ಧಿಯ ಪಥಕ್ಕೆ ಮಾರ್ಗ ಎಂದು ನಿರ್ಣಾಯಿಸಲಾಗಿತ್ತು. ಇದಕ್ಕಾಗಿ 1983ರಲ್ಲಿ[44] ರಾಜ್ಯ ಶಾಸನ ಸಭೆಯಲ್ಲಿ ಸ್ಥಳಿಯ ಸರ್ಕಾರಗಳ ರಚನೆ ಕುರಿತಾದ ಕಾಯ್ದೆಯನ್ನು ಜಾರಿಗೆ ತಂದು 1987ರಲ್ಲೆ ಚುನಾವಣೆಯನ್ನು ಸಹ ನಡೆಸಲಾಗಿತ್ತು

ಸಂವಿಧಾನದ ತಿದ್ದುಪಡಿಯ ನಂತರ ಸಂವಿಧಾನದ 11ನೇ ಮತ್ತು 12ನೇ ಪರಿಚ್ಛೇದದಲ್ಲಿ ಪ್ರಸ್ತಾಪಿಸಿದ 29 ಮತ್ತು 18 ಕರ್ತವ್ಯಗಳನ್ನು ಅದಕ್ಕೆ ಅಗತ್ಯವಾದ ಹಣಕಾಸು ಮತ್ತು ಮಾನವಸಂಪನ್ಮೂಲಗಳೊಂದಿಗೆ ಕ್ರಮವಾಗಿ ಪಂಚಾಯಿತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲಾಯಿತು. ಪಂಚಾಯಿತ್ ರಾಜ್ ಸಂಸ್ಥೆಗಳಿಗೆ ನೀಡುವ ವಿತ್ತಿಯ ವರ್ಗಾವಣೆ ಸೂಚಿಸುವ ಪಂಚಾಯಿತ್ ಜಿಲ್ಲಾ ವಲಯದ ನಿಧಿ ಮತ್ತು ಅದನ್ನು ವಿವಿಧ ಇಲಾಖಾವಾರು ಸೂಚಿಸುವ ಕೈಪಿಡಿಯಾದ ಲಿಂಕ್ ಡಾಕ್ಯುಮೆಂಟ್ ಕರ್ನಾಟಕ ರಾಜ್ಯ ಬಜೆಟ್‌ನಲ್ಲಿನ[45] ವಿಶಿಷ್ಟ ಭಾಗವಾಗಿದೆ.

### 10.3.1 ಗ್ರಾಮ ಪಂಚಾಯತಿ (ಗ್ರಾ.ಪಂ)

ಒಂದು ಹಳ್ಳಿಯ ಅಥವಾ ಹಳ್ಳಿಗಳ ಸಮೂಹ ಸುಮಾರು 5000 ದಿಂದ 7000ವರೆವಿನ ಜನಸಂಖ್ಯೆಯನ್ನು ಹೊಂದಿರುವ ಒಂದು ಹಳ್ಳಿಯ ಅಥವಾ ಹಳ್ಳಿಗಳ ಸಮೂಹವನ್ನ ಗ್ರಾಮ ಪಂಚಾಯತಿ ಎಂದು ರಚಿಸಲಾಗುತ್ತದೆ ಈ ಹಳ್ಳಿಗಳಲ್ಲಿ ಪ್ರತಿ 400 ಜನಸಂಖ್ಯೆಗೆ ಒಬ್ಬರಂತೆ ಸದಸ್ಯರನ್ನ ಚುನಾಯಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವಿರುತ್ತದೆ. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಟ ಒಬ್ಬ ಪರಿಶಿಷ್ಟ ಜಾತಿ ಮತ್ತು ಒಬ್ಬ ಪರಿಶಿಷ್ಟ ಪಂಗಡದ ಸದಸ್ಯನಿರಬೇಕಾಗಿದೆ ಪರಿಶಿಷ್ಟ ಜಾತಿ ಸದಸ್ಯನಿರದಿದ್ದರೆ ಆ ಸ್ಥಾನವನ್ನು ಪರಿಶಿಷ್ಟ ಪಂಗಡವರಿಂದಲೂ ಮತ್ತು ಪರಿಶಿಷ್ಟ ಪಂಗಡ ಇಲ್ಲದಿದ್ದರೆ ಪರಿಶಿಷ್ಟ ಜಾತಿ ಸದಸ್ಯರಿಂದ ತುಂಬಬೇಕಾದ ಅವಶ್ಯಕತೆ ಇದೆ.

ಪ್ರತಿ ಗ್ರಾಮ ಪಂಚಾಯತಿ ಚುನಾಯಿತ ಸದಸ್ಯರು ತಮ್ಮಲ್ಲಿ ಒಬ್ಬರನ್ನು ಅಧ್ಯಕ್ಷ ಮತ್ತೊಬ್ಬರನ್ನು ಉಪಾಧ್ಯಕ್ಷರನ್ನಾಗಿ ಆರಿಸುತ್ತಾರೆ. ಈ ಅಧ್ಯಕ್ಷರು ಉಪಾಧ್ಯಕ್ಷರ ಅಧಿಕಾರಾವಧಿಯು 30 ತಿಂಗಳು (2½ ವರ್ಷ) ಅವಧಿಯಾಗಿರುತ್ತದೆ. ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಮೂರು ಸ್ಥಾಯಿ ಸಮಿತಿಗಳು ಅಸ್ತಿತ್ವದಲ್ಲಿರುತ್ತದೆ. ಅದು ಯಾವುವೆಂದರೆ ಉತ್ಪಾದನಾ ಸಮಿತಿ, ಮೂಲಭೂತ ಸೌಕರ್ಯಗಳ ಅಮಿತಿ ಮತ್ತು ಸಾಮಾಜಿಕ ನ್ಯಾಯ ಸಮಿತಿ, ಮೂಲಭೂತ ಸೌಕರ್ಯಗಳ ಸಮಿತಿ ಮತ್ತು ಸಾಮಾಜಿಕ ನ್ಯಾಯಸಮಿತಿ. ಉತ್ಪಾದನಾ ಸಮಿತಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರೇ ಅಧ್ಯಕ್ಷರಾಗಿರುತ್ತಾರೆ ಮತ್ತು ಸಾಮಾಜಿಕ ನ್ಯಾಯ ಸಮಿತಿಗೆ ಗ್ರಾಮ ಪಂಚಾಯತಿಗೆ ಉಪಾಧ್ಯಕ್ಷರು ಅಧ್ಯಕ್ಷರಾಗಿರುತ್ತಾರೆ. ಪ್ರತಿ ಸಮಿತಿಯು ಐದು ಸದಸ್ಯರನ್ನು ಹೊಂದಿದ್ದು, ಸಾಮಾಜಿಅಕ ನ್ಯಾಯ ಸಮಿತಿಯಲ್ಲಿ ಒಬ್ಬ ಅಧ್ಯಕ್ಷರ ಸಹಿತ ಸದಸ್ಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಬೇಕು ಮತ್ತು ಒಬ್ಬ ಮಹಿಳಾ ಸದಸ್ಯರಿರಬೇಕು. ಈ ಸಮಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳು ಒಂದು ವರ್ಷದ ಅವಧಿಯಾಗಿದ್ದು ಸರದಿಯಲ್ಲಿ ಸಮಿತಿಯ ಸದಸ್ಯರು ಅಧ್ಯಕ್ಷ ಸ್ಥಾನ ಅಲಂಕರಿಸಬಹುದಾಗಿದೆ. ಪ್ರತಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಯನ್ನ ಹೊಂದಿರುತ್ತದೆ. ಈ ಅಧಿಕಾರಿಗಳು ರಾಜ್ಯ ಸರ್ಕಾರದ ನೌಕರರಾಗಿರುತ್ತಾರೆ ಕರವಸೂಲಿಕಾರರು ನೀರು ಗಂಟಿ ಮತ್ತು ಸಹಾಯಕರು ಗ್ರಾಮ ಪಂಚಾಯತಿಯಲ್ಲಿ ಕೆಲಸ ನಿರ್ವಹಿಸುತ್ತಾರೆ..

ಗ್ರಾಮ ಪಂಚಾಯತಿಯು ಕರ ಸಂಗ್ರಹಣೆ ಮತ್ತು ತತ್ಸಂಬಂಧಿತವಾದ ಅಧಿಕಾರ ಹೊಂದಿದೆ. ಇದು ಪಂಚಾಯತಿ ರಾಜ್ ಸಂಸ್ಥೆಗಳ (ಮೂರು ಸ್ತರಗಳ) ಪೈಕಿ ಕರವಿಧಿಸುವ ಅಧಿಕಾರ ಹೊಂದಿರುವ ಏಕೈಕ ಹಂತವಾಗಿದೆ. ಆಸ್ತಿತೆರಿಗೆ, ನೀರು ಮತ್ತು ನೈರ್ಮಲ್ಯದ ಶುಲ್ಕ, ವ್ಯಾಪಾರ ಮತ್ತು ಕಟ್ಟಡ ನಿರ್ಮಾಣ ಪರವಾನಗಿ ಶುಲ್ಕ ಮತ್ತು ಮಾರುಕಟ್ಟೆ ಶುಲ್ಕಗಳು ಪ್ರಮುಖವಾದ ಆದಾಯದ ಮೂಲಗಳಾಗಿವೆ. ಅದರಂತೆ ಕರ್ತವ್ಯಗಳಲ್ಲಿ ಮುಖ್ಯವಾದ ಕರ್ತವ್ಯಗಳಲ್ಲಿ ನೀರು ಸರವರಾಜು ನೈರ್ಮಲ್ಯ, ಸಾರ್ವಜನಿಕ ರಸ್ತೆಗಳ ಅಭಿವೃದ್ಧಿ ನಿರ್ವಹಣೆ ಹಾಗು ದುರಸ್ತಿ, ಬೀದಿದೀಪಗಳ ನಿರ್ವಹಣೆ, ಜನನ ಮತ್ತು ಮರಣದ ನೊಂದಣಿ, ಸಾರ್ವತ್ರಿಕವಾಗಿ ಮಕ್ಕಳಿಗೆ ಚುಚ್ಚುಮದ್ದು ಹಾಕಿಸುವುದು ಹಾಗೂ ಶಾಲೆಗೆ ಸೇರಿಸುವುದು ಮತ್ತು ಸಾರ್ವಜನಿಕ ಸ್ವತ್ತುಗಳ ನಿರ್ವಹಣೆ ಸೇರಿವೆ. ಇದಲ್ಲದೆ ಕೇಂದ್ರ ಹಾಗು ರಾಜ್ಯ ಸರ್ಕಾರದ ಯೋಜನೆಗಳಾದ ಮ.ಗಾ.ಗ್ರಾ.ಉ.ಖಾ ಯೋಜನೆ, ಆಶ್ರಯ ಯೋಜನೆ ಮೊದಲಾದ ಯೋಚನೆಗಳ ಸಮಗ ಅನುಷ್ಠಾನದ ಜವಾಬ್ದಾರಿಯೂ ಗ್ರಾಮ ಪಂಚಾಯತಿ ನಿರ್ವಹಿಸಬೇಕಿದೆ.

ಗ್ರಾಮ ಪಂಚಾಯತಿಯಲ್ಲಿ ಪ್ರಮುಖವಾದ ಪ್ರಕ್ರಿಯೆ ಗ್ರಾಮಸಭೆ. ಇದನ್ನು ವರ್ಷದಲ್ಲಿ 2 ಬಾರಿ ನಡೆಸಬೇಕು. ಮ.ಗಾ.ಗ್ರಾ.ಉ.ಖಾ ಯೋಜನೆ ಅಡಿಯಲ್ಲಿನ ಕೆಲಸ ಕಾರ್ಯಗಳಿಗಾಗಿ ಪ್ರತ್ಯೇಕ ಗ್ರಾಮಸಭೆ ನಡೆಸಬೇಕು. ಈ ಗ್ರಾಮ ಸಭೆ ಗ್ರಾಮ ಪಂಚಾಯತಿ ಅಧ್ಯಕ್ಷರ, ಉಪಾಧ್ಯಕ್ಷರು-ಅಧ್ಯಕ್ಷರ ಅನುಪಸ್ಥಿತಿಯಲ್ಲಿ) ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಇದರಲ್ಲಿ ಇಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನಾಗರೀಕರು ಈ ಗ್ರಾಮ ಸಭೆಯ ಸದಸ್ಯರಾಗಿರುತ್ತಾರೆ ಗ್ರಾಮ ಪಂಚಾಯತಿಯು ವಾರ್ಷಿಕ ಯೋಜನೆಗಳಿಗೆ ಅನುಮೋದನೆಯನ್ನು ಗ್ರಾಮಸಭೆ ನೀಡಬೇಕಾಗಿರುತ್ತದೆ. ಗ್ರಾಮ ಸಭೆಯ ಸದಸ್ಯರ ಶೇ 10 ಕ್ಕಿಂತ ಕಡಿಮೆ ಇಲ್ಲದ ಸಂಖ್ಯೆಯಲ್ಲಿ ಈ ಅನುಮೋದನೆ ಪಡೆಯಬೇಕಾಗಿರುತ್ತದೆ. ಗ್ರಾಮ ಸಭೆಯು ಯೋಜನೆಗಳಿಗೆ ಅನುಮೋದನೆಯಿಲ್ಲದೆ ಅಭಿವೃದ್ಧಿ ಕಾರ್ಯಗಳು ಪ್ರಸ್ತಾವನೆ ಮತ್ತು ಆದ್ಯತೆಗಳನ್ನು ಪಡೆಯುದಕ್ಕೂ ವಿವಿಧ ಯೋಜನೆಗಳನ್ನು ಪಡೆಯುವುದಕ್ಕೂ, ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆ ಮಾಡುವುದಕ್ಕೂ ಅವಶ್ಯಕವಾಗಿದೆ. ಗ್ರಾಮ ಪಂಚಾಯತಿಯು ತನ್ನ ವಾರ್ಷಿಕ ಲೆಖ್ಖ ವರದಿಯನ್ನು, ಆಡಿಟ್ ವರದಿಯನ್ನು ಮತ್ತು ಜಮಾಬಂದಿ ವರದಿಯನ್ನು ಗ್ರಾಮಸಭೆಯ ಗಮನಕ್ಕೆ ತರಬೇಕು. ಗ್ರಾಮ ಪಂಚಾಯತಿ ವ್ಯಾಪ್ರಿಯ ಹಳ್ಳಿಗಳಲ್ಲಿ ವಾರ್ಡ ಸಭೆ ನಡೆಸಬೇಕು ಮತ್ತು ಅದರ ಅಧ್ಯಕ್ಷತೆಯನ್ನು ಆಯಾ ವಾರ್ಡಿನ ಚುನಾಯಿತ ಸದಸ್ಯರು ವಹಿಸುವರು.

ಜಮಾಬಂದಿಯು ಗ್ರಾಮ ಪಂಚಾಯತಿಯು ತನ್ನ ವ್ಯಾಪ್ತಿಯ ಜನರಿಗೆ ತನ್ನ ಕಾರ್ಯ ಚಟುವಟಿಕೆಗಳ ವಿವರಗಳನ್ನು ನೀಡಿ, ಚರ್ಚಿಸುವ ವೇದಿಕೆಯಾಗಿದೆ.

[44] ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತುಗಳು ಮತ್ತು ನ್ಯಾಯ ಪಂಚಾಯತಿ ಕಾಯಿದೆ, 1983

[45] ಲಿಂಕ್ ಡಾಕ್ಯುಮೆಂಟ್ ಬಜೆಟ್ ದಾಖಲೆಯ ಭಾಗವಾಗಿದ್ದು, ಪಂ.ರಾ.ಸಂ.ಗಳಿಗೆ ವರ್ಗಾಯಿಸಲಾದ ಹಣದ ಮಾಹಿತಿ ಒದಗಿಸುತ್ತದೆ (ಲೆಖ್ಖ ಶೀರ್ಷಿಕೆ ಕೋಡ್ ಮೂಲಕ). ಇದು, ಪಂ. ರಾ.ಸ.ಗಳು ನಿರ್ವಹಿಸುವ ಹಣವನ್ನು ಅರ್ಥಮಾಡಿಕೊಳ್ಳಲೂ ಅನುವು ಮಾಡಿಕೊಡುತ್ತದೆ..

ಇದನ್ನು ರಾಜ್ಯ ಸರ್ಕಾರದ ತಾಲೂಕು ಮಟ್ಟದ ಪತ್ರಾಂಕಿತ ಅಧಿಕಾರಿಯೊಬ್ಬರ ಸಮಕ್ಷಮದಲ್ಲಿ ನೆಡೆಸಲಾಗುತ್ತದೆ ಇದನ್ನ ರಾಜ್ಯದಾದ್ಯಂತ ಆಗಷ್ಟ ತಿಂಗಳ 16 ರಿಂದ ಸೆಪ್ಟೆಂಬರ್ ತಿಂಗಳ 15ರ ಒಳಗೆ ಎಲ್ಲಾ ಗ್ರಾಮ ಪಂಚಾಯಿತ್‌ಗಳಲ್ಲಿ ನಡೆಸಲಾಗುತ್ತದೆ. ಇದಕ್ಕಾಗಿ ನಿರ್ದಿಷ್ಟ ಸ್ಥಳ ಮತ್ತು ಸಮಯ ಗೊತ್ತುಪಡಿಸಿ ಗ್ರಾಮ ಪಂಚಾಯಿತ್ ವ್ಯಾಪ್ತಿಯಲ್ಲಿ ಪ್ರಚುರ ಪಡಿಸಲಾಗುತ್ತದೆ. ಪತ್ರಿಕೆ ಮತ್ತು ಕರಪತ್ರದ ಮೂಲಕವೂ ಪ್ರಚಾರ ಮಾಡುತ್ತಾರೆ. ಗ್ರಾಮ ಪಂಚಾಯಿತಿ ಅಧಿಕಾರಿ/ಕಾರ್ಯದರ್ಶಿ ಸೂಕ್ತ ಏರ್ಪಾಡುಗಳನ್ನು ಮಾಡಬೇಕು (ಈ ಸಂದರ್ಭದಲ್ಲಿ ಗ್ರಾಮಸಭೆಯ ಸದಸ್ಯರು ಭಾಗವಹಿಸಿ ಗ್ರಾಮ ಪಂಚಾಯತಿ ಕುರಿತಾದ ಯಾವುದೇ ಮಾಹಿತಿ ಪಡೆಯಬಹುದಾಗಿದೆ ಮತ್ತು ತತ್ಸಂಬಂಧವಾಗಿ ಗ್ರಾಮ ಪಂಚಾಯತಿ ಅಧಿಕಾರಿಗಳ ಮತ್ತು ಚುನಾಯಿತ ಪ್ರತಿನಿಧಿಗಳ ಜೊತೆ ಚರ್ಚೆ ನೆಡಸಬಹುದಾಗಿದೆ. ಇಡೀ ಪ್ರಕ್ರಿಯೆಯನ್ನ ಚಿತ್ರೀಕರಣ ಮಾಡವಂತೆ ಇತ್ತೀಚಿನ ನಿರ್ದೇಶನವಿದೆ)

ಜಮಾಬಂದಿಯ ನೆಡೆಯುವ ದಿನದಂದು ಬೆಳಗ್ಗೆ ಗ್ರಾಮ ಪಂಚಾಯತಿ ಲೆಖ್ಖ, ವಿವಿಧ ರೆಜಿಸ್ಟರ್ (ಪುಸ್ತಕಗಳ) ಮತ್ತು ದಾಖಲೆಗಳ ಪರಿಶೀಲನೆಗೆ ಅವಕಾಶವಿರುತ್ತದೆ. ಮಧ್ಯಾನ್ಹ ವಿವಿಧ ಕಾಮಗಾರಿಗಳ ಪರಿಶೀಲನೆ ನಡೆಯುತ್ತದೆ. ಜಮಾಬಂದಿ ಆದ 2 ದಿನಗಳ ಒಳಗಾಗಿ ನಿಬಂಧಿಸಿದ ಅಧಿಕಾರಿ ಇದರ ವರದಿಯನ್ನ ತಾಲೂಕು ಪಂಚಾಯತಿ ಕಾರ್ಯ ನಿರ್ವಹಣಾಧಿಕಾರಿಗೆ ತಲುಪಿಸಬೇಕು.

ಪ್ರತಿ ಗ್ರಾಮ ಪಂಚಾಯತಿಯು ಸುಮಾರು 75 ಲಕ್ಷದಿಂದ 100 ಲಕ್ಷದವರೆಗೆ ವಿವಿಧ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಅನುದಾನವನ್ನು ಪಡೆಯುತ್ತದೆ. ಇದಲ್ಲದೆ ಶಾಸನಬದ್ಧ ಅನುದಾನ ಮತ್ತು ನಿರ್ವಹಣೆಗಾಗಿ ಅನುದಾನ ಲಭ್ಯವಾಗುತದೆ. ಗ್ರಾಮ ಪಂಚಾಯತಿಯಲ್ಲಿ ನಡೆಯುವ ಮತ್ತೊಂದು ಪ್ರಮುಖವಾದ ಪ್ರಕ್ರಿಯೆದಿಂದ ಬಜೆಟ್ ಅಥವಾ ಆಯವ್ಯಯ ಮಂಡನೆ. ಬರುವ ಸಾಲಿನ ಆರ್ಥಿಕ ವರ್ಷದ ಬಜೆಟ್ ಅಥವಾ ಮುಂಗಡ ಪತ್ರವನ್ನು ಪಂಚಾಯತಿಯ ಅಧಿಕಾರಿಯು ತಯಾರಿಸಿ ಗ್ರಾಮ ಪಂಚಾಯತಿಯು ಅನುಮೋದನೆಗೆ ಸಲ್ಲಿಸಬೇಕು. ಗ್ರಾಮ ಪಂಚಾಯತಿಯ ಸರ್ವ ಸದಸ್ಯರ ಸಭೆಯು ಮಾರ್ಚ 10 ನೇ ತಾರೀಖಿನ ಒಳಗಾಗಿ ಸದರಿ ಆಯುವ್ಯಯವನ್ನು ಬದಲಾವಣೆ ಸಹಿತ/ರಹಿತವಾಗಿ ಅನುಮೋದಿಸಬೇಕು ನಂತರ ಇದನ್ನ ತಾಲೂಕು ಪಾಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿಗಳು ಮಾರ್ಚ ತಿಂಗಳಾಂತ್ಯದ ಒಳಗೆ ಅನುಮೊದಿಸಬೇಕು. ನಂತರ ಮುಂದಿನ ಆರ್ಥಿಕ ವರ್ಷದಲ್ಲಿ ಆದಾಯ ಹಾಗು ಖರ್ಚುಗಳು ಬಜೆಟಿನ ಅನುಮೋದನೆಗೆ ಒಳಪಟ್ಟು ನೆಡೆಯುತ್ತದೆ. ಗ್ರಾಮ ಪಂಚಾಯತಿಯ ಲೆಖ್ಖಗಳನ್ನು ರಾಜ್ಯ ಸರ್ಕಾರದ ಲೆಖ್ಖ ಪರಿಶೋಧನಾ ಇಲಾಖೆ ಆಡಿಟ್ ಮಾಡುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲೂಕುವಾರು ಗ್ರಾಮ ಪಂಚಾಯತಿಗಳ ಆದಾಯ ಮತ್ತು ಖರ್ಚುಗಳನ್ನು ಕೋ 10.1 ರಲ್ಲಿ ನೀಡಲಾಗಿದೆ. ಆದಾಯ ಹಾಗು ಖರ್ಚುಗಳ 2005-06 ಮತ್ತು 2009-10 ನಡುವಿನ ಐದು ವರ್ಷಗಳಲ್ಲಿ ಗಣನೀಯವಾಗಿ ವೃದ್ಧಿಸಿದೆ. ಈ ಅವಧಿಗೆ ಹೊಸಕೋಟೆ ತಾಲೂಕಿನಲ್ಲಿ ಶೇಕಡಾವಾರು ಖರ್ಚಿನ ಪ್ರಮಾಣ ಅದ್ಯಧಿಕವಾಗಿದ್ದು ದೇವನಹಳ್ಳಿಯಲ್ಲಿ 2007-08 ರಿಂದ 2009-10 ರಲ್ಲಿ ಅತ್ಯಂತ ಕಡಿಮೆ ಇದೆ. ಗ್ರಾಮ ಪಂಚಾಯತಿ ಸರಸರಿ ಆದಾಯ ಈ ಐದು ವರ್ಷಗಳಲ್ಲಿ 23 ಲಕ್ಷದಿಂದ 105 ಲಕ್ಷಕ್ಕೆ ಏರಿದೆ. ಗ್ರಾಮ ಪಂಚಾಯತಿಯ ಸರಾಸರಿ ವೆಚ್ಚ ಇದೇ ಅವಧಿಯಲ್ಲಿ 19 ಲಕ್ಷದಿಂದ 95 ಲಕ್ಷಕ್ಕೂ ಹೆಚ್ಚಿದೆ. ಆದಾಯದ ಬಳಕೆಯಲ್ಲಿ 2005-06 ಶೇ 80ರಷ್ಟು ಇದ್ದದ್ದು 2007-08 ರಲ್ಲಿ ಶೇ 75ಕ್ಕೆ ಇಳಿದಿದ್ದು ನಂತರ 2009-10ರಲ್ಲಿ ಶೇ 90 ಕ್ಕೂ ಹೆಚ್ಚಿದೆ (ಚಿತ್ರ 10.1)

**ಕೋಷ್ಟಕ 10.1 ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲೂಕುವಾರು ಗ್ರಾಮ ಪಂಚಾಯತಿಗಳ ಆದಾಯ ಮತ್ತು ವೆಚ್ಚಗಳು (ರೂ. ಲಕ್ಷಗಳಲ್ಲಿ)**

| ವರ್ಷ | ಆದಾಯಗಳು/ ವೆಚ್ಚಗಳ | ದೇವನಹಳ್ಳಿ | ದೊಡ್ಡಬಳ್ಳಾಪುರ | ಹೊಸಕೋಟೆ | ನೆಲಮಂಗಲ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
|---|---|---|---|---|---|---|
| 2005-2006 | ಆದಾಯ | 558.33 | 639.31 | 524.06 | 576.09 | 2,297.79 |
| | ವೆಚ್ಚ | 456.80 | 510.63 | 436.45 | 444.43 | 1,848.31 |
| | ಶೇ. ವೆಚ್ಚ | 81.81 | 79.87 | 83.28 | 77.15 | 80.44 |
| 2006-2007 | ಆದಾಯ | 855.89 | 1142.98 | 904.70 | 911.96 | 3,815.53 |
| | ವೆಚ್ಚ | 662.97 | 833.02 | 743.67 | 677.72 | 2,917.39 |
| | ಶೇ. ವೆಚ್ಚ | 77.46 | 72.88 | 82.20 | 74.31 | 76.46 |
| 2007-2008 | ಆದಾಯ | 1,173.15 | 1,482.73 | 1074.33 | 1,337.18 | 5,067.38 |
| | ವೆಚ್ಚ | 767.42 | 1,081.11 | 877.24 | 1,058.76 | 3,784.52 |
| | ಶೇ. ವೆಚ್ಚ | 65.42 | 72.91 | 81.65 | 79.18 | 74.68 |
| 2008-2009 | ಆದಾಯ | 1,703.69 | 1,594.23 | 1343.19 | 1,464.68 | 6,105.79 |
| | ವೆಚ್ಚ | 1,170.34 | 1,275.71 | 1028.70 | 1,076.77 | 4,551.52 |
| | ಶೇ. ವೆಚ್ಚ | 68.69 | 80.02 | 76.59 | 73.52 | 74.54 |
| 2009-2010 | ಆದಾಯ | 2,591.63 | 2,090.98 | 2,986.90 | 2,638.15 | 10,307.67 |
| | ವೆಚ್ಚ | 2,214.03 | 1,865.70 | 2,794.21 | 2,424.34 | 9,298.28 |
| | ಶೇ. ವೆಚ್ಚ | 85.43 | 89.23 | 93.55 | 91.90 | 90.21 |

ಮೂಲ: ವಿಕೇಂದ್ರೀಕರಣ ವಿಶ್ಲೇಷಣಾ ಕೋಶದ ದತ್ತಾಂಶ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

ಚಿತ್ರ 10.1: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮ ಪಂಚಾಯತಿಗಳ ಸರಾಸರಿ ಆದಾಯ ಮತ್ತು ವೆಚ್ಚಗಳು




ಮೂಲ: ವಿಕೇಂದ್ರೀಕರಣ ವಿಶ್ಲೇಷಣಾ ಕೋಶದ ದತ್ತಾಂಶ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

## 10.3.2 ತಾಲೂಕು ಪಂಚಾಯತಿ (ತಾ.ಪಂ)

ತಾಲೂಕು ಪಂಚಾಯತಿಯು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಧ್ಯದ ಹಂತದ ಸ್ಥಳೀಯ ಸರ್ಕಾರ. ತಾಲೂಕು ಪಂಚಾಯತಿಯು ತಾಲೂಕಿನ ಪ್ರತಿ 10000 ಜನ ಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯರಂತೆ ಆಯ್ಕೆಗೊಂಡ ಸದಸ್ಯರಿಂದ ರಚನೆಯಾಗುತ್ತದೆ. ಈ ಪ್ರಕಾರದ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಕ್ಕೆ (ಜನಸಂಖ್ಯೆಯ ಪ್ರಮಾಣಕ್ಕೆನುಗುಣವಾಗಿ) ಮೀಸಲಾತಿ ಇದ್ದು ಇದು ಸರದಿಯಲ್ಲಿ ವಿವಿಧ ಪ್ರತಿನಿಧಿಕ ಕ್ಷೇತ್ರಕ್ಕೆ ಅನ್ವಯಿಸುತ್ತದೆ. ಈ ರೀತಿ ನೇರವಾಗಿ ಚುನಾಯಿತ ಸದಸ್ಯರಲ್ಲದೆ, ಆ ಭಾಗದ ವಿಧಾನ ಸಭೆಯ, ವಿಧಾನ ಪರಿಷತ್ತಿನ ಹಾಗು ಲೋಕ ಸಭೆಯ ಸದಸ್ಯರು ತಾ.ಪಂ ಸದಸ್ಯರಾಗಿರುತ್ತಾರೆ. ತಾಲೂಕಿನಲ್ಲಿನ (ಶೇ 20 ರಷ್ಟು) ಗ್ರಾ ಪಂ ಗಳ (ಶೇ 20 ರಷ್ಟು) ಅಧ್ಯಕ್ಷರು. ಸರದಿಯಂತೆ ಪ್ರತಿ ವರ್ಷದಲ್ಲಿ ತಾಲೂಕು ಪಂಚಾಯತಿ ಸದಸ್ಯರಾಗಿರುತ್ತಾರೆ. ನೇರವಾಗಿ ಚುನಾಯಿತ ಸದಸ್ಯರು ತಮ್ಮಲ್ಲಿ ಒಬ್ಬರನ್ನು ಅಧ್ಯಕ್ಷರು ಹಾಗು ಮತ್ತೊಬ್ಬರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆರಿಸುತ್ತಾರೆ. ಅಧ್ಯಕ್ಷರು ತಾ ಪಂ ಯ ಕಾರ್ಯಕಾರಿ ಮುಖ್ಯಸ್ಥರಾಗಿರುತ್ತಾರೆ. ತಾ ಪಂ ಯು ಮೂರು ಸ್ಥಾಯಿ ಸಮಿತಿಯನ್ನ ಒಳಗೊಂಡಿರುತ್ತದೆ. ಇವು ಯಾವುವೆಂದರೆ ಸಾಮನ್ಯ ಸ್ಥಾಯಿ ಸಮಿತಿ, ಆರ್ಥಿಕ, ಲೆಖ್ಖ ಪರಿಶೋಧನ ಮತ್ತು ಯೋಜನಾ ಸಮಿತಿ ಹಾಗೂ ಸಾಮಾಜಿಕ ನ್ಯಾಯ ಸಮಿತಿ. ಪ್ರತಿಯೊಂದು ಸ್ಥಾಯಿಸಮಿತಿಯು ಆರು ಸದಸ್ಯರನ್ನು ಒಳಗೊಂಡಿರುತ್ತದೆ. ಸಾಮಾನ್ಯ ಸ್ಥಾಯಿ ಸಮಿತಿಯು ಸಿಬ್ಬಂದಿ ವಿಷಯ, ಕಟ್ಟಡಗಳು, ಗ್ರಾಮೀಣ ವಸತಿ, ನೀರು ಸರಬರಾಜು ಮತ್ತು ಇತರೆ ವಿಷಯಗಳ ಕುರಿತಾದ ಕರ್ತವ್ಯಗಳನ್ನು ಆ.ತ. ಮತು ಯೋಜನಾ ಸಮಿತಿಯು ಹಣಕಾಸು ಬಜೆಟ್ ತಯಾರಿಕೆ ಆದಾಯದ ಮತ್ತು ವೆಚ್ಚಗಳ ಪಟ್ಟಿಯ ತಯಾರಿಕೆ, ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ವಿಚಾರಗಳು/ಯೋಜನೆಗಳು ಮೊದಲಾದ ವಿಷಯಗಳ ಕಾರ್ಯಗಳನ್ನು ನೋಡಿಕೊಳ್ಳುತ್ತದೆ. ತಾ ಪಂ ಅಧ್ಯಕ್ಷರೇ ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಸಾಮಾಜಿಕ ನ್ಯಾಯ ಸಮಿತಿಯು ಸಮಾಜದ ದುರ್ಬಲ ವರ್ಗದ ಅದರಲ್ಲೂ ಪ.ಜಾ, ಪ.ಪಂ ಮತ್ತು ಹಿಂದುಳಿದ ವರ್ಗಗಳ ಶಿಕ್ಷಣಿಕ ಸಮಾಜಕ್ಕೆ ಆರ್ಥಿಕ ಹಾಗು ಸಾಂಸ್ಕೃತಿಕ ಏಳಿಗೆಯ ವಿಷಯಗಳ ಕಾರ್ಯವನ್ನು ಮಾಡುತ್ತದೆ.

ತಾಲೂಕು ಪಂಚಾಯತಿಯು ಕಾರ್ಯ ನಿರ್ವಹಿಸುವುದಕ್ಕಗಿ ರಾಜ್ಯ ಸರ್ಕಾರಿ ನೌಕರರು ನಿಯೋಜಿಸಲ್ಪಟ್ಟಿರುತ್ತಾರೆ. ರಾಜ್ಯ ಹಾಗು ಕೇಂದ್ರ ಸರ್ಕಾರಗಳ ಯೋಜನೆಗಳ ಸಮರ್ಪಕ ಅನುಷ್ಠಾನ ಹಾಗು ಗ್ರಾ ಪಂ ಗಳ ಮೇಲ್ವಿಚಾರಣೆಯಲ್ಲದೆ ರಾಜ್ಯ ಸರ್ಕಾರಕ್ಕೆ ಕಾಲಕಾಲಕ್ಕೆ ವರದಿಗಳನ್ನು ಸಲ್ಲಿಸುವುದು ತಾ ಪಂ ಯ ಕರ್ತವ್ಯವಾಗಿರುತ್ತದೆ. ತಾ.ಪಂ ಯು ಯಾವುದೇ ತೆರಿಗೆ ಸಂಗ್ರಹಣಾ ಅಧಿಕಾರ ಮತ್ತು ಜವಾಬ್ದಾರಿ ಹೊಂದಿರುವುದಿಲ್ಲ. ರಾಜ್ಯ ಸರ್ಕಾರದಿಂದ ದೊರೆಯುವ ಅನುದಾನವೇ ತಾ ಪಂ ಯ ಪ್ರಮುಖ ಆದಾಯ ವಾಗಿರುತ್ತದೆ. ಆದಾಯದ ಇತರೆ ಮೂಲವೆಂದರೆ ಅದು ಸ್ವಂತ ಕಟ್ಟಡಗಳ ಬಾಡಿಗೆ ಮತ್ತು ಕೆಲವು ಶುಲ್ಕಗಳು ಮಾತ್ರ. ಕೋಷ್ಟಕ 10.2 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ತಾಲೂಕು ಪಂಚಾಯಿತಿಗಳಲ್ಲಿ 2005-06 - 2009-10 ಅವಧಿಯ ಆದಾಯ ಮತ್ತು ಖರ್ಚುಗಳನ್ನು ನೀಡಿರುತ್ತದೆ. ತಾಲೂಕು ಪಂಚಾಯತಿಗಳ ಆದಾಯ ಮತ್ತು ಖರ್ಚುಗಳಲ್ಲಿ 2005-06 ನೇ ಸಾಲಿನಿಂದ 2010-11 ವರೆವಿನ ಅವಧಿಯಲ್ಲಿ ದ್ವಿಗುಣಗೊಂಡಿದೆ. ಅನುದಾನದ ಬಳಕೆಯಲ್ಲಿ ಹೊಸಕೋಟೆ ಹಿಂದಿದ್ದರೆ ನೆಲಮಂಗಲ ತಾಲೂಕು ಪ್ರಥಮ ಸ್ಥಾನದಲ್ಲಿದೆ.

ಚಿತ್ರ 10.2: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲೂಕು ಪಂಚಾಯತಿಗಳ ಸರಾಸರಿ ಆದಾಯ ಮತ್ತು ವೆಚ್ಚಗಳು




**ಕೋಷ್ಟಕ 10.2 ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲೂಕು ಪಂಚಾಯತಿಗಳ ಆದಾಯ ಮತ್ತು ವೆಚ್ಚಗಳು (ರೂ. ಲಕ್ಷಗಳಲ್ಲಿ)**

| ವರ್ಷ | ಆದಾಯಗಳು/ ವೆಚ್ಚಗಳ | ದೇವನಹಳ್ಳಿ | ದೊಡ್ಡಬಳ್ಳಾಪುರ | ಹೊಸಕೋಟೆ | ನೆಲಮಂಗಲ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
|---|---|---|---|---|---|---|
| 2005- 2006 | ಆದಾಯ | 1,425.79 | 2,032.28 | 1,858.60 | 1,502.33 | 6,818.99 |
| | ವೆಚ್ಚ | 1,286.27 | 1,937.68 | 1,569.77 | 1,392.46 | 6,186.18 |
| | ಶೇ. ವೆಚ್ಚ | 90.21 | 95.35 | 84.46 | 92.69 | 90.72 |
| 2006- 2007 | ಆದಾಯ | 1,523.50 | 2,306.61 | 2,062.25 | 1,818.34 | 7,710.69 |
| | ವೆಚ್ಚ | 1,488.56 | 2,330.76 | 1,718.20 | 1,988.06 | 7,525.59 |
| | ಶೇ. ವೆಚ್ಚ | 97.71 | 101.05 | 83.32 | 109.33 | 97.60 |
| 2007- 2008 | ಆದಾಯ | 1,818.91 | 2,963.55 | 2,614.61 | 2,267.88 | 9,664.94 |
| | ವೆಚ್ಚ | 1,752.13 | 2,495.52 | 2,058.88 | 1,990.84 | 8,297.37 |
| | ಶೇ. ವೆಚ್ಚ | 96.33 | 84.21 | 78.75 | 87.78 | 85.85 |

| ವರ್ಷ | ಆದಾಯಗಳು/ ವೆಚ್ಚಗಳ | ದೇವನಹಳ್ಳಿ | ದೊಡ್ಡಬಳ್ಳಾಪುರ | ಹೊಸಕೋಟೆ | ನೆಲಮಂಗಲ | ಬೆಂಗಳೂರು ಗ್ರಾಮಾಂತರ ಜಿಲ್ಲೆ |
|---|---|---|---|---|---|---|
| 2008- 2009 | ಆದಾಯ | 2,249.72 | 3,392.85 | 2,901.46 | 2,624.98 | 11,169.00 |
| | ವೆಚ್ಚ | 2,050.39 | 2,931.10 | 2,463.15 | 2,271.57 | 9,716.21 |
| | ಶೇ. ವೆಚ್ಚ | 91.14 | 86.39 | 84.89 | 86.54 | 86.99 |
| 2009- 2010 | ಆದಾಯ | 4,366.50 | 3,030.77 | 4,129.81 | 0.00 | 11,527.08 |
| | ವೆಚ್ಚ | 3,833.28 | 2,769.91 | 3,853.13 | 0.00 | 10,456.33 |
| | ಶೇ. ವೆಚ್ಚ | 87.79 | 91.39 | 93.30 | 0.00 | 90.71 |
| 2010- 2011 | ಆದಾಯ | 2,889.64 | 4,014.96 | 3,476.77 | 3,386.22 | 13,767.59 |
| | ವೆಚ್ಚ | 2,673.28 | 4,039.60 | 3,393.81 | 3,294.01 | 13,400.70 |
| | ಶೇ. ವೆಚ್ಚ | 92.51 | 100.61 | 97.61 | 97.28 | 97.34 |
| ಎಲ್ಲ ವರ್ಷಗಳು | ಆದಾಯ | 14,274.05 | 17,741.01 | 17,043.50 | 11,599.74 | 60,658.29 |
| | ವೆಚ್ಚ | 13,083.91 | 16,504.58 | 15,056.95 | 10,936.94 | 55,582.38 |
| | ಶೇ. ವೆಚ್ಚ | 91.66 | 93.03 | 88.34 | 94.29 | 91.63 |

ಮೂಲ: ವಿಕೇಂದ್ರೀಕರಣ ವಿಶ್ಲೇಷಣಾ ಕೋಶದ ದತ್ತಾಂಶ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

ಎಲ್ಲಾ ತಾಲೂಕು ಪಂಚಾಯತಿಗಳ ಒಟ್ಟು ಬಳಕೆ 2006-07 ಮತ್ತು 2010-11 ನೇ ಸಾಲಿನಲ್ಲಿ ಹೆಚ್ಚು ಇದ್ದು ಅದು ಶೇ 97 ರಷ್ಟಾಗಿರುತ್ತದೆ ಬಳಕೆಯು 2007-08 ಮತ್ತು 2008-09 ರಲ್ಲಿ ಅದು ಶೇ 86ರ ಆಸುಪಾಸಿನಲ್ಲಿತ್ತು.

### 10.3.3 ಜಿಲ್ಲಾ ಪಂಚಾಯತಿ (ಜಿ.ಪಂ.)

ಇದು ಜಿಲ್ಲಾ ಮಟ್ಟದಲ್ಲಿನ ಪಂಚಾಯತ್ ರಾಜ್ ಸಂಸ್ಥೆಯಾಗಿದ್ದು ಪ್ರತಿ 40000 ಜನಸಂಖ್ಯೆಗೆ ಒಬ್ಬ ಸದಸ್ಯರಂತೆ ಜಿಲ್ಲೆಯಲ್ಲಿನ ಜನಸಂಖ್ಯಾನುಸಾರ ಚುನಾಯಿತ ಸದಸ್ಯರಿರುತ್ತಾರೆ. ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಸಾರವಾಗಿ ಮೀಸಲಾತಿ ಇದೆ. ಮೂರನೇ ಒಂದು ಭಾಗದ ಸದಸ್ಯರು ನೇರವಾಗಿ ಚುನಾಯಿತ ಸದಸ್ಯರಲ್ಲದೆ ವಿಧಾನಸಭೆ, ವಿಧಾನ ಪರಿಷತ್ತು ಹಾಗು ಲೋಕಸಭೆ ಸದಸ್ಯರು ಜಿಲ್ಲಾ ಪಂಚಾಯತಿ ಸದಸ್ಯರಾಗಿರುತ್ತಾರೆ. ಚುನಾಯಿತ ಸದಸ್ಯರು ತಮ್ಮಲ್ಲಿ ಒಬ್ಬರನ್ನು ಅಧ್ಯಕ್ಷ ಸ್ಥಾನಕ್ಕೆ ಮತ್ತೊಬ್ಬರನ್ನ ಉಪಾಧ್ಯಕ್ಷ ಸ್ಥಾನಕ್ಕೆ ಆರಿಸುತ್ತಾರೆ. ಜಿಲ್ಲಾ ಪಂಚಾಯತಿ ಅಧ್ಯಕ್ಷರು ಜಿಲ್ಲಾ ಪಂಚಾಯತಿಯ ಕಾರ್ಯಕಾರಿ ಮುಖ್ಯಸ್ಥರಾಗಿರುತ್ತಾರೆ ಮತ್ತು ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರೂ ಆಗಿರುತ್ತಾರೆ.

ಜಿಲ್ಲಾ ಪಂಚಾಯತಿಯು 5 ಸ್ಥಾಯಿ ಸಮಿತಿಯನ್ನು ಒಳಗೊಂಡಿರುತ್ತಾರೆ. ಅವು ಯಾವುವೆಂದರೆ

1. ಸಾಮಾನ್ಯ ಸ್ಥಾಯಿ ಸಮಿತಿ
2. ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿ
3. ಸಾಮಾಜಿಕ ನ್ಯಾಯ ಸಮಿತಿ
4. ಶಿಕ್ಷಣ ಮತ್ತು ಆರೋಗ್ಯ ಸಮಿತಿ
5. ಕೃಷಿ ಮತ್ತು ಕೈಗಾರಿಕಾ ಸಮಿತಿ

ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಹಣಕಾಸು ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಪಂಚಾಯತಿಯ ಉಪಾಧ್ಯಕ್ಷರು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಯ ಹುದ್ದೆಯು ಜಿಲ್ಲಾಧಿಕಾರಿಗಳ ಹುದ್ದೆಯ ಸಮಾನ ಶ್ರೇಣಿಯದ್ದಾಗಿರುತ್ತದೆ. ರಾಜ್ಯ ಸರ್ಕಾರವು ಮುಖ್ಯ ಲೆಖ್ಖಾಧಿಕಾರಿ, ಮುಖ್ಯ ಯೋಜನಾ ಅಧಿಕಾರಿ, ಮತ್ತು ಉಪನಿರ್ದೇಶಕರನ್ನು ಜಿಲ್ಲಾ ಪಂಚಾಯತಿಗಳಿಗಾಗಿ ನೇಮಕ ಮಾಡುತ್ತದೆ. ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯತಿಗೆ ಅಗತ್ಯವಾದ ಇತರೆ ಹುದ್ದೆಗಳನ್ನು ಸೃಜಿಸಿದ್ದು ಅಧಿಕಾರಿಗಳ ನೇಮಕ ಮಾಡಿರುತ್ತದೆ. ಇದು ಜಿಲ್ಲಾ ಪಂಚಾಯತಿ ಸುಗಮವಾಗಿ ವ್ಯವಹರಿಸಲು ಸಹಾಯಕವಾಗಿದೆ. ಜಿಲ್ಲಾ ಪಂಚಾಯತಿಯು ಪ್ರತಿ ತಿಂಗಳು ಪ್ರಗತಿ ಪರಿಶೀಲನಾ ಸಭೆ ನಡೆಸುತ್ತದೆ. ಇದನ್ನು ಕರ್ನಾಟಕ ಅಭಿವೃದ್ಧಿ (ಕೆ.ಡಿ.ಪಿ) ಕಾರ್ಯಕ್ರಮ ಪರಿಶೀಲನಾ ಸಭೆಯೆಂದೂ ಕರೆಯುತ್ತಾರೆ.

ಜಿಲ್ಲಾ ಪಂಚಾಯತಿಯು ತನ್ನ ಆದಾಯಕ್ಕೆ ರಾಜ್ಯ ಸರ್ಕಾರದ ಅನುದಾನವನ್ನು ಅವಲಂಬಿಸಿದೆ. ಜಿಲ್ಲಾ ಪಂಚಾಯತಿಗೆ ಯಾವುದೇ ತೆರಿಗೆ ವಿಧಿಸುವ ಅಧಿಕಾರ ಇರುವುದಿಲ್ಲ ಸ್ವಂತ ಕಟ್ಟಡದ ಬಾಡಿಗೆ ಹಾಗು ಶುಲ್ಕಗಳ ಹೊರತು ಬೇರೆ ಸ್ವಂತ ಆದಾಯದ ಜಿಲ್ಲಾ ಪಂಚಾಯತಿ ಇರುವುದಿಲ್ಲ. ಜಿಲ್ಲಾ ಪಂಚಾಯತಿಯ ಲೆಕ್ಕವನ್ನ ಕೇಂದ್ರ ಸರ್ಕಾರದ ಮಹಾಲೇಖಪಾಲಕರು ಪರಿಶೋಧನೆ ನಡೆಸುತ್ತಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯಲ್ಲಿನ ಆದಾಯ ಮತ್ತು ವೆಚ್ಚವನ್ನು ಕೋಷ್ಟಕ 10.3ರಲ್ಲಿ ನೀಡಲಾಗಿದೆ. ಆದಾಯದ ಬಳಕೆಯೂ 2008-09 ರಿಂದ 2010-11 ರವರೆಗಿನ ಸತತವಾಗಿ ಹೆಚ್ಚಿರುವುದನ್ನು ಗಮನಿಸಬಹುದು. ಜಿಲ್ಲಾ ಮಟ್ಟದಲ್ಲಿನ ಎಲ್ಲಾ ಅಭಿವೃದ್ಧಿ ಇಲಾಖೆಗಳನ್ನು ಜಿಲ್ಲಾ ಪಂಚಾಯತಿ, ಹಾಗೂ ತಾಲೂಕು ಪಂಚಾಯತಿಯ ಅಧೀನದಲ್ಲಿ ತಂದಿರುವುದರಿಂದ ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿಯ ವೆಚ್ಚಗಳಲ್ಲಿ ಸಿಬ್ಬಂದಿಯ ವೇತನದ ಪಾಲು ಅಧಿಕವಾಗಿದೆ.

**ಕೋಷ್ಟಕ 10.3 ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಯತಿಯ ಆದಾಯ ಮತ್ತು ವೆಚ್ಚಗಳು (ರೂ. ಲಕ್ಷಗಳಲ್ಲಿ)**

| ವರ್ಷ | ಒಟ್ಟು ಆದಾಯ | ಒಟ್ಟು ಖರ್ಚುಗಳು | ಶೇ. ವೆಚ್ಚ |
|---|---|---|---|
| 2008-2009 | 14,284.40 | 11,783.47 | 82.49 |
| 2009-2010 | 25,621.21 | 24,440.51 | 95.39 |
| 2010-2011 | 15,474.26 | 15,392.09 | 99.47 |

ಮೂಲ: ವಿಕೇಂದ್ರೀಕರಣ ವಿಶ್ಲೇಷಣಾ ಕೋಶದ ದತ್ತಾಂಶ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.

ಜಿಲ್ಲಾ ಯೋಜನಾ ಸಮಿತಿಯು ಕೇವಲ ಹೆಸರಿಗೆ ಇದ್ದು, ಇದು ಯಾವುದೇ ರೀತಿ ಜಿಲ್ಲಾ ಮಟ್ಟದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಯೋಜನೆಗಳ ಕ್ರೋಢಿಕರಣ ಮಾಡದಿರುವುದು ವಾಸ್ತವದ ಸಂಗತಿಯಾಗಿದೆ.

## 10.4 ನಗರ ಸಳೀಯ ಸಂಸ್ಥೆಗಳ ರಚನೆ ಮತ್ತು ಪ್ರಕ್ರಿಯೆ

ನಗರ ಸಳೀಯ ಸಂಸ್ಥೆಗಳು ನಗರ ಪ್ರದೇಶದ ಆಡಳಿತವನ್ನ ನಡೆಸುವ ಸಲುವಾಗಿ ಸಂವಿಧಾನದ 74ನೇ ತಿದ್ದುಪಡಿಯಂತೆ ರಚನೆಯಾದ ಚುನಾಯಿತ ಸ್ಥಳೀಯ ಸರ್ಕಾರ. ಕರ್ನಾಟಕ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆ 1976 ಮತ್ತು ಕರ್ನಾಟಕ ಮುನಿಸಿಪಲ್ ಕಾಯ್ದೆ 1964 ಅನ್ನೂ 1994ರಲ್ಲಿ ಸಂವಿಧಾನದ 74ನೇ ತಿದ್ದುಪಡಿಯ ಅನ್ವಯ ತಿದ್ದುಪಡಿ ಮಾಡಲಾಯಿತು. ನಗರಗಳನ್ನು ಜನಸಂಖ್ಯೆ, ಜನಸಾಂದ್ರತೆ ಆದಾಯದ ಪ್ರಮಾಣ, ಆರ್ಥಿಕ ಮಹತ್ವ ಮೊದಲಾದ ಮಾನದಂಡಗಳನ್ನು ಉಪಯೋಗಿಸಿ ವರ್ಗೀಕರಿಸಲಾಗಿದೆ.

### ಕರ್ನಾಟಕದಲ್ಲಿ 5 ಬಗೆಯ ನಗರ ಸಳೀಯ ಸಂಸ್ಥೆಗಳಿವೆ

1. ಮಹಾನಗರ ಪಾಲಿಗೆ (ಜನಸಂಖ್ಯೆ 3 ಲಕ್ಷಕ್ಕೂ ಹೆಚ್ಚು) (30-99 ಜನ ಪ್ರತಿನಿಧಿಗಳು ಕಾರ್ಪೋರೇಟರುಗಳು)
2. ನಗರಸಭೆ (ಜನಸಂಖ್ಯೆ 50000 - 3 ಲಕ್ಷ) (31-35 ಜನ ಪ್ರತಿನಿಧಿಗಳು ಕೌನ್ಸಲರ್‌ಗಳು)
3. ಪುರಸಭೆ (ಜನಸಂಖ್ಯೆ 20000 - 50000) (23-27 ಜನಪ್ರತಿನಿಧಿಗಳು)
4. ಪಟ್ಟಣ ಪಂಚಾಯತಿ (ಜನಸಂಖ್ಯೆ 10000 - 20000)
5. ನಿರ್ದಿಷ್ಟ ಕ್ಷೇತ್ರ ಸಮಿತಿ (ನೋಟಿಫೈಡ್ ಏರಿಯಾ ಕಮಿಟಿ) : ಇಲ್ಲಿ ನಗರ ಸೇವಾ ಸೌಲಭ್ಯವನ್ನು ಒದಗಿಸಬೇಕಾಗಿದೆ,

ಈ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಐದಕ್ಕೆ ಮೀರದಂತೆ ಸದಸ್ಯರನ್ನು ರಾಜ್ಯ ಸರ್ಕಾರ ನಾಮ ನಿರ್ದೇಶನ ಮಾಡುತದೆ. ಇವರು ನಗರ ವ್ಯಾಪ್ತಿಯಲ್ಲಿ ವಾಸ ಮಾಡುವವರಾಗಿರಬೇಕು. ಮತ್ತು ತಮ್ಮ ವೃತ್ತಿ ಕ್ಷೇತ್ರದಲ್ಲಿ ಸಾಧನೆ ಮಾಡಿದವರಾಗಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಅಧ್ಯಕ್ಷ ಸ್ಥಾನವನ್ನ ಸಹ ಸರದಿಯಲ್ಲಿ ಮೀಸಲಾತಿಗೆ ಒಳಪಡಿಸಲಾಗಿದೆ.

ಕರ್ನಾಟಕ ರಾಜ್ಯ ಸರ್ಕಾರವು ಸಂವಿಧಾನದ 12ನೇ ಪರಿಚ್ಛೇದದಲ್ಲಿನ 18 ಕರ್ತವ್ಯಗಳಲ್ಲಿ ಹನ್ನೆರೆಡನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವಹಿಸಿದೆ. ನಗರ ಸ್ಥಳೀಯ ಸಂಸ್ಥೆಗಳ ಖಡ್ಡಾಯ ಕರ್ತವ್ಯಗಳಲ್ಲಿ ನೀರು ಸರಬರಾಜು, ರಸ್ತೆ ಬದಿ ಚರಂಡಿ ಹಾಗು ಒಳಚರಂಡಿ ವ್ಯವಸ್ಥೆ, ಬೀದಿದೀಪ ವ್ಯವಸ್ಥೆ, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ, ಬಸ್ ನಿಲ್ದಾಣ ಮೊದಲಾದ ಸಾರ್ವಜನಿಕ ಸ್ಥಳಗಳ ನಿರ್ಮಾಣ ಮತ್ತು ನಿರ್ವಹಣೆ, ರಸ್ತೆ ನಿರ್ಮಾಣ ಮತ್ತು ನಿರ್ವಹಣೆ. ಸಾರ್ವಜನಿಕ ಉದ್ಯಾನಗಳ ನಿರ್ವಹಣೆ, ಕಟ್ಟಡ ನಿರ್ಮಣದ ಪರವಾನಗಿ ಹಾಗು ವ್ಯಾಪಾರ ಪರವಾನಗಿ ನೀಡುವುದು ಮತ್ತು ಜನನ ಹಾಗು ಮರಣದ ನೊಂದಣಿ ಪ್ರಮುಖವಾದವು. ಐಚ್ಛಿಕ ಕರ್ತವ್ಯಗಳಲ್ಲಿ ಶೈಕ್ಷಣಿಕ, ಆರೋಗ್ಯ, ಮನೊರಂಜನೆ ಮತ್ತು ಸಮುದಾಯದ ಕುರಿತಾದ ಕೆಲಸಗಳನ್ನು ನಿರ್ವಹಿಸುವುದು ಸೇರಿದೆ. ಇದಲ್ಲದೆ ಪ್ರಮುಖ ಯೋಜನೆಗಳಾದ ಸ್ವರ್ಣ ಜಯಂತಿ ಶಹರಿ ರೋಜ್ಗಾರ್ ಯೋಜನೆ, ಕೊಳಗೇರಿ ಅಭಿವೃದ್ಧಿ ಯೋಜನೆ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ ಮತ್ತು ನಗರ ಪಾಲಿಕೆ ಯೋಜನೆಗಳ ಸಮಗ್ರ ಅನುಷ್ಠಾನವೂ ಸೇರಿದೆ.

ನಗರಾಡಳಿತದ ಮತ್ತೊಂದು ಪ್ರಮುಖ ಅಂಶವೆಂದರೆ ಆಡಳಿತದಲ್ಲಿ ಸಾರ್ವಜನಿಕ ಸಹಭಾಗಿತ್ವದ ಅವಕಾಶ. ವಾರ್ಡ್/ಸಮಿತಿ ಮತ್ತು ವಾರ್ಡ್/ಸಭೆಗಳನ್ನ ನಗರ ಪಾಲಿಕೆಗಳಲ್ಲಿ (3 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇರುವ ನಗರಗಳಲ್ಲಿ) ನಡೆಸುವುದನ್ನು ಕಾಯ್ದೆ ಮೂಲಕ ಜಾರಿ ಗೂಳಿಸಲಾಗಿದೆ. ಆ ವಾರ್ಡಿನ ಪ್ರತಿ ವಾರ್ಡ/ಸಮಿತಿಯಲ್ಲಿ ಆಯಾ ವಾರ್ಡಿನ ಸದಸ್ಯರಲ್ಲದೆ. ಐದು ಜನ ನಾಮ ನಿರ್ದೇಶಿತ ಸದಸ್ಯರು ಇರುತ್ತಾರೆ. ವಾರ್ಡ್/ಸಮಿತಿ ಮತ್ತು ವಾರ್ಡ್/ಸಭೆಗಳು ಸಾರ್ವಜನಿಕ ಸಹಭಾಗಿತ್ವಕ್ಕೆ ಅನುವು ಮಾಡಿಕೊಡುವುದು. ನಾಗರೀಕ ಕ್ಷೇಮಾಭಿವೃದ್ಧಿ ಸಂಘಗಳು ಸಹ ಜನರ ಸಹಭಾಗಿತ್ವ ಹೆಚ್ಚಿಸಲು ಅನುಕೂಲವಾಗಿದೆ. ಬಜೆಟ್ ಪ್ರಕ್ರಿಯೆಯು ಎರಡು ಸುತ್ತಿನ ಸಾರ್ವಜನಿಕ ಸಮಾಲೋಚನಾ ಸಭೆಗಳನ್ನು ಒಳಗೊಂಡಿದೆ. ಮೊದಲ ಸುತ್ತಿನ ಸಭೆಯಲ್ಲಿ ಕಳೆದ ಆರ್ಥಿಕ ವರ್ಷದ ವಾರ್ಷಿಕ ಸಾಧನಾ ವರದಿಯನ್ನು ಪ್ರಚುರ ಪಡಿಸಬೇಕು ಮತ್ತು ಇದರಲ್ಲಿ ಬಜೆಟಿನ ವ್ಯತ್ಯಾಸ ಕೋಷ್ಟಕ ಹಾಗು ಅದರಲ್ಲಿ ಶೇ.15 ಕ್ಕಿಂತ ಹೆಚ್ಚು ವ್ಯತ್ಯಾಸದ ವೆಚ್ಚಗಳಿಗೆ ವಿವರಣೆ ಇರುತ್ತದೆ. ಮೊದಲ ಸಮಾಲೋಚನಾ ಸಭೆ ನಗರದ ಸರ್ಕಾರಕ್ಕೆ ತನ್ನ ಕಾರ್ಯಚಟುವಟಿಕೆಗಳನ್ನು ನಾಗರೀಕರ ಮುಂದೆ ವಿವರಿಸಿ ಅದರ ಕುರಿತಾದ ಅನಿಸಿಕೆ ಮತ್ತು ಸಲಹೆ ಪಡೆಯುವ ಮಾರ್ಗವಾಗಿದೆ. ಎರಡನೇ ಸುತ್ತಿನ ಸಮಲೋಚನಾ ಸಭೆಯಲ್ಲಿ ಮುಂದಿನ ಸಾಲಿನ ಕರಡು ಬಜೆಟ್‌ನ್ನು ಪ್ರಸ್ತಾಪಿಸಿ ಅದಕ್ಕಾಗಿ ಸಲಹೆ ಮತ್ತು ಅಭಿಪ್ರಾಯಗಳನ್ನು ಪಡೆಯಲಾಗುತ್ತದೆ. ಈ ಅಭಿಪ್ರಾಯಗಳನ್ನು ಆಧರಿಸಿ ಫೆಬ್ರವರಿ/ಮಾರ್ಚಿ ತಿಂಗಳಲ್ಲಿ ಬಜೆಟ್ ಮಂಡಿಸಲಾಗುತ್ತದೆ.

ನಗರಾಡಳಿತವನ್ನು ಉತ್ತಮಪಡಿಸುವ ಸಲುವಾಗಿ ಕರ್ನಾಟಕ ರಾಜ್ಯ ಸರ್ಕಾರ ನಗರಾಡಳಿತದಲ್ಲಿ ಹಲವು ಸುಧಾರಣೆಗಳನ್ನು ಜಾರಿಗೊಳಿಸಿದೆ. ಇದಕ್ಕಾಗಿ ನಗರಾಡಳಿತ ಸುಧಾರಣ ಕೋಶ ಎಂಬ ಪ್ರತ್ಯೇಕ ವಿಭಾಗವನ್ನು ಪೌರಾಡಳಿತ ನಿರ್ದೇಶನಾಲಯದ ಅಡಿಯಲ್ಲಿ ತೆರೆಯಲಾಗಿದೆ. ಎಲ್ಲ ನಗರ ಸಳೀಯ ಸಂಸ್ಥೆಗಳ ಗಣಕೀಕರಣ ಮೊದಲಾದ ಹಲವಾರು ಕ್ರಮಗಳಿಂದ ಸೇವೆಗಳನ್ನು ಉತ್ತಮ ಪಡಿಸುವತ್ತ ಹೆಜ್ಜೆ ಇಡಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ

1. ಇ-ಆಡಳಿತ ವೇದಿಕೆಯ ಮೂಲಕ ನಗರಾಡಳಿತವನ್ನ ಉತ್ತಮ ಪಡಿಸುವಿಕೆ
2. ಜಿ.ಐ.ಎಸ್ ಆಧಾರಿತ ಆಸ್ತಿ ತೆರಿಗೆ ಮಾಹಿತಿ ಮತ್ತು ತೆರಿಗೆಸಂಗಹಣೆ
3. ಅಧುನಿಕ ಲೆಕ್ಕ ಪತ್ರ ಪದ್ದತಿ (ದ್ವಿಮೂದು ಲೆಖ್ಖ ಪತ್ರ ಪದ್ದತಿ ವ್ಯವಸ್ಥೆ)
4. ಗಣಕೀಕೃತ ಜನನ ಮತ್ತು ಮರಣದ ನೊಂದಣಿ ವ್ಯವಸ್ಥೆ
5. ಸಾರ್ವಜನಿಕ ಕುಂದುಕೊರತೆಗೆ ಜನಸ್ನೇಹಿ ದೂರು ನೊಂದಣಿ ಪ್ರಕ್ರಿಯ
6. ನಾಗರೀಕರಿಗೆ ಮತ್ತು ಇತರ ಆಸಕ್ತರಿಗೆ ನಗರಾಡಳಿತದ ಕುರಿತಾದ ಮಾಹಿತಿಯನ್ನ ಕಾಲಕಾಲಕ್ಕೆ ತಲುಪಿಸಿ ಅವರ ಸಹಭಾಗಿತ್ವವನ್ನು ಉತ್ತಮ ಪಡಿಸುವುದು.
7. ಸಾರ್ವಜನಿಕ ಸಂಪರ್ಕಕ್ಕೆ ಉತ್ತಮ ವೇದಿಕೆಯಾಗುವುದು

ಈಗ ರಾಜ್ಯದ ಎಲ್ಲಾ ನಗರ ಸಳೀಯ ಸಂಸ್ಥೆಗಳೂ ಸಹ ತನ್ನದೇ ಆದ ಅಂತರ್ಜಾಲದ ವಿಳಾಸ[46] ಹೊಂದಿದ್ದು ಅದರಲ್ಲಿ ಪಟ್ಟಣದ ಕುರಿತಾದ ಜನಸಂಖ್ಯೆ ಮೊದಲಾದ ಸಾಮಾನ್ಯ ಮಾಹಿತಿ, ಸಂಸ್ಥೆಯ ಕಾರ್ಯ ಚಟುವಟಿಕೆಗಳು ಜನ ಪ್ರತಿನಿಧಿಗಳ ಹಾಗು ಸಿಬ್ಬಂದಿಗಳ ವಿವರ, ಸಾರ್ವಜನಿಕರಿಗೆ ಲಭ್ಯವಿರಬೇಕಾದ ಬಜೆಟ್, ವಾರ್ಷಿಕ ಸಾಧನ ವರದಿ, ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಲಭ್ಯವಿರಬೇಕಾದ ಮಾಹಿತಿ ಮೊದಲಾದವುಗಳು ಲಭ್ಯವಾಗುತ್ತದೆ. ಈ ನಗರ ಸಳೀಯ ಸಂಸ್ಥೆಗಳನ್ನು ಅವುಗಳ ಸೇವಾ ಕಾರ್ಯಗಳಿಗೆ ಮತ್ತು ಸಂಪನ್ಮೂಲಗಳ ಕ್ರೂಢೀಕರಣಕ್ಕೆ ಕುರಿತಾಗಿ ರಾಜ್ಯ ಮಟ್ಟದಲ್ಲಿ ಉಸ್ತುವಾರಿ ಮಾಡಲಾಗುತ್ತದೆ. ನಗರದ ಸೇವೆಗಳ ಗುಣಮಟ್ಟ ಕಾಯ್ದುಕೊಳ್ಳುವ ಸಲುವಾಗಿ ಎಲ್ಲ ನಗರ ಸಳೀಯ ಸಂಸ್ಥೆಗಳ ಸೇವಗಳನ್ನು ಕಾಲಕಾಲಕ್ಕೆ ಮಾಪನ ಮಾಡಿ ಅವುಗಳಿಗೆ ಶ್ರೇಣಿಯನ್ನು ನೀಡಲಾಗುತ್ತಿದೆ. ಈ ಗುಣಮಟ್ಟ ಮಾಪನ ಕಾರ್ಯದಲ್ಲಿ ಸೇವಾ ಸೌಲಭ್ಯಗಳ ನೀಡಿಕೆ, ದಾಖಲೆಗಳ ನಿರ್ವಹಣೆ, ಆಡಳಿತದಲ್ಲಿನ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಹಾಗು ಆದಾಯದ ಕ್ರೂಢೀಕರಣವನ್ನ ಮಾನದಂಡವನ್ನಾಗಿ ಬಳಸಲಾಗುತ್ತದೆ. ಈ ರೀತಿಯ ಪ್ರಯತ್ನಗಳಿಗೆ ರಾಷ್ಟ್ರಮಟ್ಟದಲ್ಲಿ ಮನ್ನಣೆ ದೊರೆತಿದೆ.

## 10.5 ಸೇವೆ ನೀಡುವ ವ್ಯವಸ್ಥೆಗಳನ್ನ ಉತ್ತಮ ಪಡಿಸುವುದು ಮತ್ತು ಅದರ ತಂತ್ರಗಳು- ಇ-ಆಡಳಿತ ಕ್ರಮಗಳು, ಸಾಮರ್ಥ್ಯ ನಿರ್ಮಾಣ, ಆದರ್ಶ ಆಡಳಿತ ಪರಿಪಾಲನೆ ಅನುಭವಗಳು

### 10.5.1 ಭೂಮಿ- ತಂತ್ರಾಂಶ

ಈ ಸೌಲಭ್ಯದಿಂದ ರಾಜ್ಯದ ಭೂ ದಾಖಲೆಗಳ ಕಂಪ್ಯೂಟರೀಕರಣವಾಗಿದ್ದು. ರೈತರಿಗೆ ಬೇಕಾದ ಪಹಣಿ (ಗೇಣಿ ಮತ್ತು ಭೂಮಾಲಿಕತ್ವ)ಯನ್ನು ತಾಲೂಕು ಅಥವ

[46] www.devanahallitown.gov.in;www.hosakotetown.gov.in;www.nelamangalatown.gov.in;www.vijayapuratown.gov.in and www.doddaballpurcity.gov.in

ಹೋಬಳಿ ಮಟ್ಟದಲ್ಲಿ ಪಡೆಯಬಹುದಾಗಿದೆ ಇದು ರೈತರು ಗ್ರಾಮ ಸಹಾಯಕರನ್ನ ಅವಲಂಬಿಸುವುದನ್ನು ಕಡಿಮೆ ಮಾಡಿದೆ.

ನಗರ ಪ್ರದೇಶದಲ್ಲಿ ನಾಗರೀಕ ಸೇವಾ ಕೇಂದ್ರಗಳು ನಾಗರೀಕರು ವಿವಿಧ ಸೇವೆಗಳಿಗೆ ಪಾವತಿಸಬೇಕಾದ ಶುಲ್ಕವನ್ನು ಒಂದೇ ಸ್ಥಳದಲ್ಲಿ ಪಾವತಿಸುವ ಅನುಕೂಲ ಮಾಡಲಾಗಿದೆ. ಇದರಿಂದ ವಿದ್ಯುತ್ ಸಂಪರ್ಕ, ನೀರು ಸರಬರಾಜು, ದೂರವಾಣಿ ಮೊದಲಾದ ಸೇವಾ ಶುಲ್ಕಗಳು ಹಾಗು ಆಸ್ತಿ ತೆರಿಗೆ ಮೊದಲಾದ ಪಾವತಿಗಳನ್ನು ಒಂದೇ ಸ್ಥಳದಲ್ಲಿ ಮಾಡಬಹುದಾಗಿದೆ.

### 10.5.2 ಸಕಾಲ

ಸರ್ಕಾರದ ಸಾರ್ವಜನಿಕ ಸೇವೆಗಳ ಒದಗಿಸುವಿಕೆಯಲ್ಲಿ ನಿಯಮಿತವಾದ ಅವಧಿಯನ್ನ ಮೀರದಂತೆ ಮಾಡುವ ಸಲುವಾಗಿ ಸಕಾಲ 2011 ಎಂಬ ಕಾಯ್ದೆ ಜಾರಿಗೆ ತಂದಿದೆ. ಈ ಮೂಲಕ ನಾಗರೀಕರ ನಿರ್ದಿಷ್ಟ ಮನವಿಗಳಿಗೆ ಸರ್ಕಾರಿ ಕಛೇರಿಗಳಲ್ಲಿ ಸ್ಪಂದಿಸಲು ನಿರ್ದಿಷ್ಟ ಸಮಯವ ನಿಗದಿ ಮಾಡಲಾಗಿದೆ. ನಿಗದಿತ ಸಮಯ ಮೀರಿದರೆ, ಸಬಂಧಿಸಿದ ನೌಕರರಿಗೆ ಹಣದ ರೂಪದಲ್ಲಿ ದಂಡ ಹಾಕಲಾಗುತ್ತದೆ. ಈ ವ್ಯವಸ್ಥೆಯಡಿ ಕೆಲವು ಇಲಾಖೆಗಳ ಹಲವಾರು ಸೇವೆಗಳು ಸೇರಿವೆ ಮತ್ತೂ ಇತರ ಸೇವೆಗಳು ಸೇರಿಸಲಾಗುತ್ತಿದೆ. ಈ ವ್ಯವಸ್ಥೆಯಡಿ ನೀಡಲಾದ ಅರ್ಜಿಗಳ ವಿಲೇವಾರಿ ಪ್ರಕ್ರಿಯನ್ನ ತಾಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಇಲಾಖಾವಾರು[47] ನಿರಂತರವಾಗಿ (ದಿನಂಪ್ರತಿ) ಗಮನಿಸಲಾಗುತ್ತದೆ ಮತ್ತು ಈ ಮಾಹಿತಿ ಸಾರ್ವಜನಿಕರಿಗೆ ಅಂತರ್ಜಾಲದ ಮೂಲಕ ಲಭ್ಯವಾಗುತ್ತದೆ. ಈ ಕಾಯ್ದೆಯಡಿ 2012ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸ್ವೀಕರಿಸಲಾದ ಮತ್ತು ವಿಲೇವಾರಿ ಆದ ಅರ್ಜಿಗಳ ಸಂಖ್ಯೆಯನ್ನು ಕೋಷ್ಟಕ.10.4 ರಲ್ಲಿ ನೀಡಲಾಗಿದೆ. ಜಿಲ್ಲೆಯು ಒಟ್ಟು ಅರ್ಜಿಗಳಲ್ಲಿ ಶೇ. 97 ರಷ್ಟು ಅರ್ಜಿಗಳ ವಿಲೇವಾರಿ ಆಗಿರುವ ಮಾಹಿತಿ ತಿಳಿಯುತ್ತದೆ.

**ಕೋಷ್ಟಕ.10.4: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಕಾಲ ಕಾಯ್ದೆಯಡಿಯಲ್ಲಿ 2012ರಲ್ಲಿ ಸ್ವೀಕರಿಸಲಾದ ಮತ್ತು ವಿಲೇವಾರಿಯಾದ ಅರ್ಜಿಗಳು.**

| ತಾಲೂಕು/ಜಿಲ್ಲೆ | ಸ್ವೀಕೃತ ಅರ್ಜಿಗಳ ಸಂಖ್ಯೆ | ವಿಲೇವಾರಿಯಾದ ಅರ್ಜಿಗಳ ಸಂಖ್ಯೆ | ಶೇ. ವಿಲೇವಾರಿ |
|---|---|---|---|
| ದೇವನಹಳ್ಳಿ | 48,307 | 47,578 | 98.49 |
| ದೊಡ್ಡಬಳ್ಳಾಪುರ | 70,754 | 68,454 | 96.75 |
| ಹೊಸಕೋಟೆ | 40,710 | 39,789 | 97.74 |
| ನೆಲಮಂಗಲ | 71,525 | 69,778 | 97.56 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 231,296 | 225,599 | 97.54 |

ಮೂಲ: http://www.sakala.kar.nic.in/ ಜೂನ್ 3 2014 ರಂದು ಪಡೆದದ್ದು.

### 10.5.3 ಯಶಸ್ವಿನಿ :

ಈ ಯೋಜನೆ ಬಡಜನರಿಗೆ ಉನ್ನತ ಮಟ್ಟದ ವೈದ್ಯಕೀಯ ಸೌಲಭ್ಯ ಪಡೆಯವಲ್ಲಿ ಸಹಕರಿಸುತ್ತದೆ. ಇದಕ್ಕಾಗಿ ಕಡಿಮೆ ಖರ್ಚಿನಲ್ಲಿ ಸ್ಥಳಿಯ ಸಹಕಾರ ಸಂಘಗಳಲ್ಲಿನ ಸದಸ್ಯತ್ವದೊಂದಿಗೆ ಅಲ್ಪ ಪ್ರಮಾಣದ ಪ್ರೇಮಿಯಂ ಪಾವತಿಸಬೇಕಾಗಿದೆ.

### 10.5.4 ಸಾಮರ್ಥ್ಯ ನಿರ್ಮಾಣ

ಆಡಳಿತ ಪರಿಪಾಲನೆಯಲ್ಲಿ ನಿರಂತರವಾಗಿ ಉತ್ತಮಗೊಳ್ಳಲು ಬೇಕಾದ ಬಹುಮುಖ್ಯ ಚಟುವಟಿಕೆಗಳಲ್ಲಿ ಸಾಮರ್ಥ್ಯ ನಿರ್ಮಾಣ ಮತ್ತು ವೃದ್ಧಿಯೂ ಒಂದು. ಆಡಳಿತ ಪರಿಪಾಲನೆಯಲ್ಲಿ ಪಾಲುದಾರರಾದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ತಮ್ಮ ಸಾಮರ್ಥ್ಯಾಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು ತುಂಬಾ ಅವಶ್ಯವಾಗಿದೆ. ಇದರಿಂದ ಬದಲಾಗುತ್ತಿರುವ ಸಮಾಜದಲ್ಲಿನ ಅಗತ್ಯಗಳಿಗೆ ಸ್ಪಂದಿಸಿ ಸೇವಾಸೌಲಭ್ಯಗಳನ್ನು ಒದಗಿಸುವುದರಲ್ಲಿ ಹೆಚ್ಚು ಪರಿಣಾಮಕಾರಿಯಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಆಡಳಿತ ಪರಿಪಾಲನೆಯ ಈ ಅಗತ್ಯಕ್ಕೆ ಅನುವಾಗಲು ಕಾಲಕಾಲಕ್ಕೆ ತರಬೇತಿಗಳನ್ನು ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ನೀಡುವ ಪ್ರಕ್ರಿಯೆ ಚಾಲನೆಯಲ್ಲಿದೆ. ಇದಕ್ಕಾಗಿ ತರಬೇತಿ ಸಂಸ್ಥೆಗಳು ಕೆಲಸ ಮಾಡುತ್ತಿದ್ದು. ಕಂಪ್ಯೂಟರೀಕರಣ, ಕಛೇರಿ ನಿರ್ವಹಣೆ, ಸಾರ್ವಜನಿಕ ಕುಂದುಕೊರತೆಗೆ ಸ್ಪಂದನೆ, ಆದಾಯ ಕ್ರೂಢಿಕರಣ, ಕಾನೂನು ವಿಷಯಗಳು ಮೊದಲಾದ ಪ್ರತ್ಯೇಕ ವಿಷಯಗಳ ಕುರಿತಾದ ತರಬೇತಿಗಳನ್ನು ಕ್ರಮ ಪ್ರಕಾರವಾಗಿ ಎಲ್ಲಾ ಇಲಾಖೆಯ ಅಧಿಕಾರಿಗಳಿಗೂ ಕಾಲಕಾಲಕ್ಕೆ ನೀಡುತ್ತಿದ್ದಾರೆ.

## 10.6 ಸರ್ಕಾರೇತರ/ ಸ್ವಯಂ ಸೇವಾ ಸಂಸ್ಥೆ ಮತ್ತು ಸಮಾಜ ಸೇವಾ ಸಂಸ್ಥೆಗಳ ಪಾತ್ರ

ಇವು ಸಮಾಜದಲ್ಲಿನ ಏಳಿಗೆಗೆ ತೊಡಗಿಸಿಕೊಂಡಿದ್ದು ಆಡಳಿತ ಪರಿಪಾಲನೆಯನ್ನು ಉತ್ತಮಪಡಿಸಲು ಬಹಳ ಸಹಕಾರಿಯಾಗಿವೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ನಡೆಯುವ ಸಾಮಾಜಿಕ ಲೆಕ್ಕ ಪರಿಶೋಧನೆ (ಸೋಷಿಯಲ್ ಆಡಿಟ್) ಅನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಲಾಗಿದೆ. ಸ್ವಯಂ ಸೇವಾ ಸಂಸ್ಥೆಗಳು ಸಾರ್ವಜನಿಕರಿಗೆ ಲಭ್ಯವಾಗುವ ಸೇವಾ ಸೌಲಭ್ಯಗಳನ್ನು ಉತ್ತಮಪಡಿಸುವುದಕ್ಕೆ ಪೂರಕವಾಗಿ ದುಡಿಯುತ್ತಿದ್ದು ಆಡಳಿತದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವಲ್ಲಿ ಸಹಾಯವಾಗಿವೆ. ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಮಾಜ ಸೇವಾ ಸಂಸ್ಥೆಗಳು ಆಡಳಿತ ಪರಿಪಾಲನೆಯನ್ನು ಸಾರ್ವಜನಿಕರಿಗೆ ಲಭ್ಯವಾಗುವ ಮಾಹಿತಿ ಮೂಲಕ ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಲೋಪದೋಷಗಳು ಕಂಡುಬಂದ ಕೂಡಲೆ ಕಾರ್ಯಪ್ರವೃತ್ತರಾಗಿ ಅದಕ್ಕೆ ವಿವರಣೆ ಕೊರುತ್ತಿದ್ದಾರೆ.

ಹಲವು ಸ್ವಯಂ ಸೇವಾ ಸಂಸ್ಥೆಗಳು ಬಡವರ/ದಲಿತರ/ಶೋಷಿತ ವರ್ಗಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದು ನಾಗರೀಕ ಸೇವಾ ಸೌಲಭ್ಯಗಳೂ, ಸರ್ಕಾರಿ ಯೋಜನೆಗಳೂ ಅವರಿಗೆ ಹೆಚ್ಚು ಪರಿಣಾಮಕಾರಿಯಾಗಿ ತಲುಪಲು ಸಹಕರಿಸುತ್ತಿವೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಸಲುವಾಗಿ ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದ್ದಾರೆ.

## 10.7 . ಆಡಳಿತದಲ್ಲಿ ಮಹಿಳೆ ಮತ್ತು ಕಡೆಗಣಿಸಲ್ಪಟ್ಟ ವರ್ಗದ ಪ್ರಾತಿನಿಧ್ಯ

ಸಮಾಜದಲ್ಲಿನ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಸ್ಥಳೀಯ ಸರ್ಕಾರಗಳಲ್ಲಿ ಪರಿಹಾರ ಹುಡುಕಲು ಮೀಸಲಾತಿ ಕಲ್ಪಿಸಲಾಗಿದೆ. ಇದು ಆಯಾ ವರ್ಗದ ಜನರ ಸಮಸ್ಯಗಳಿಗೆ ಪರಿಹಾರಗಳನ್ನು ಮತ್ತು ಅಭಿವೃದ್ಧಿಗೆ ಅವಕಾಶಗಳನ್ನು ಕಲ್ಪಿಸಲು ನೆರವಾಗಿದೆ. ಸ್ಥಳೀಯವಾಗಿ ಯಾವ ವಿಧಾನದ ಆಡಳಿತ ಕಾರ್ಯಗಳು ಪರಿಣಾಮಕಾರಿಯಾಗಬಲ್ಲವು ಎಂಬುದರ ಬಗ್ಗೆ ಈ ಪ್ರಾತಿನಿಧ್ಯದಿಂದ ಹೆಚ್ಚು ಪರಿಣಾಮಕಾರಿಯಾದ ನಿರ್ಧಾರ ತೆಗೆದುಕೊಳ್ಳಲು ಸಹಾಯವಾಗಿದೆ.

[47] http://www.sakala.kar.nic.in/

**ಕೋಷ್ಟಕ 10.5: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಪಂಚಾಯತ್ ರಾಜ್ ಸಂಸ್ಥೆ(ಪಂ.ರಾ.ಸಂ) ಮತ್ತು ನಗರ ಸ್ಥಳೀಯ ಸಂಸ್ಥೆ(ನ.ಸ್ಥ.ಸಂ)ಯಲ್ಲಿ ಪ್ರಾತಿನಿಧ್ಯ.**

| ತಾಲೂಕು/ಜಿಲ್ಲೆ | ಒಟ್ಟು | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | | ಶೇ. ಪ.ಜಾ/ಪ. ಪಂ | | ಶೇ. ಮಹಿಳೆಯರು | |
|---|---|---|---|---|---|---|---|---|---|---|
| | ನ.ಸ್ಥ.ಸಂ | ಪಂ.ರಾ. ಸಂ | ನ.ಸ್ಥ.ಸಂ | ಪಂ.ರಾ. ಸಂ | ನ.ಸ್ಥ.ಸಂ | ಪಂ.ರಾ. ಸಂ | ನ.ಸ್ಥ.ಸಂ | ಪಂ.ರಾ. ಸಂ | ನ.ಸ್ಥ.ಸಂ | ಪಂ.ರಾ. ಸಂ |
| ದೇವನಹಳ್ಳಿ | 46 | 360 | 9 | 141 | 18 | 169 | 19.57 | 39.17 | 39.13 | 46.94 |
| ದೊಡ್ಡಬಳ್ಳಾಪುರ | 31 | 520 | 5 | 170 | 12 | 241 | 16.13 | 32.69 | 38.71 | 46.35 |
| ಹೊಸಕೋಟೆ | 23 | 501 | 4 | 154 | 9 | 219 | 17.39 | 30.74 | 39.13 | 43.71 |
| ನೆಲಮಂಗಲ | 23 | 357 | 4 | 107 | 9 | 156 | 17.39 | 29.97 | 39.13 | 43.70 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 123 | 1,738 | 22 | 572 | 48 | 785 | 17.89 | 32.91 | 39.02 | 45.17 |

ಮೂಲ: ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ ಅಂಶಗಳ ನೋಟ 2011–12

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಸ್ಥಳೀಯ ಸರ್ಕಾರಗಳಲ್ಲಿನ ವಿವಿಧ ವರ್ಗದ ಪ್ರಾತಿನಿಧ್ಯವನ್ನು ಕೋ. 10.5 ರಲ್ಲಿ ನೀಡಲಾಗಿದೆ. ಈ ಪ್ರಾತಿನಿಧ್ಯದ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗದ ಹಾಗು ಮಹಿಳೆಯರು ಅಧಿಕಾರವನ್ನು ಪಡೆದು ಆಯಾ ವರ್ಗದ ಏಳಿಗೆಗೆ ಸೂಕ್ತ ತೀರ್ಮಾನಗಳನ್ನು ಮಾಡುವಲ್ಲಿ ಮತ್ತು ಆಡಳಿತ ಪರಿಪಾಲನೆಯಲ್ಲಿ ಎಲ್ಲಾ ವರ್ಗದ ಒಳಗೊಳ್ಳುವಿಕೆಗೆ ಸಹಕಾರಿಯಾಗಿದೆ.

## 10.8 ತಾತ್ಪರ್ಯ

ಆಡಳಿತ ಪರಿಪಾಲನೆ ಒಂದು ಸಂಕೀರ್ಣವಾದ ವಿದ್ಯಮಾನವಾಗಿದ್ದು ಹಲವಾರು ಘಟಕಗಳನ್ನು ಹೊಂದಿದೆ. ಉತ್ತಮ ಆಡಳಿತ ಪ್ರಕ್ರಿಯೆಗಳ ಜೊತೆಗೆ ಜನರ ಸಕ್ರಿಯ ಪಾಲ್ಗೊಳ್ಳುವಿಕೆಯು ಉತ್ತಮ ಆಡಳಿತ ಪರಿಪಾಲನೆಗೆ ಸಹಾಯಕವಾಗಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ ಆಡಳಿತ ಪರಿಪಾಲನೆಯಲ್ಲಿನ ವಿಶೇಷ ಸಾಧನೆಗಳ ಮಾಹಿತಿ ಲಭ್ಯವಿರುವುದಿಲ್ಲ. ಜಿಲ್ಲಾ ಕೇಂದ್ರವಿಲ್ಲದಿರುವುದು ಹಾಗು ರಾಜ್ಯದ ರಾಜಧಾನಿಯು ಜಿಲ್ಲಾ ಮಟ್ಟದ ಕಛೇರಿಗಳನ್ನು ಒಳಗೊಂಡಿರುವುದು ಆಡಳಿತಾತ್ಮಕವಾಗಿ ಆಡಳಿತ ಪರಿಪಾಲನೆ ಹೆಚ್ಚು ಸಂಕೀರಣವಾಗಿರುವಂತೆ ತೋರುತ್ತದೆ.

# ಮಾನವ ಅಭಿವೃದ್ಧಿಯಲ್ಲಿ ನಗರೀಕರಣದ ಸಮಸ್ಯೆಗಳು





# 11. ಮಾನವ ಅಭಿವೃದ್ಧಿಯಲ್ಲಿ ನಗರೀಕರಣದ ಸಮಸ್ಯೆಗಳು

ಅಭಿವೃದ್ಧಿಯ ಕಲೆಯೆಂದರೆ ಬದಲಾವಣೆಗಳ ಜೊತೆಯಲ್ಲಿ ಕ್ರಮಬದ್ಧತೆಯನ್ನು ರಕ್ಷಿಸುವುದು ಮತ್ತು ಕ್ರಮಬದ್ಧತೆಗಳ ಜೊತೆಯಲ್ಲಿ ಬದಲಾವಣೆಯನ್ನು ರಕ್ಷಿಸುವುದಾಗಿದೆ.

- ಆಲ್ಫ್ರೆಡ್ ನಾರ್ತ್ ವೈಟ್‌ಹೆಡ್
(ಗಣಿತಜ್ಞ ಹಾಗೂ ತತ್ವಸಿದ್ಧಾಂತಿ)

## 11.1 ಪ್ರಸ್ತಾವನೆ

ಜಗತ್ತಿನಲ್ಲಿ ಅರ್ಥಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ಸರ್ಕಾರಗಳು ನಗರಪ್ರದೇಶ ಎಂಬುವುದು ಏನು ಎಂದು ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಈ ವ್ಯಾಖ್ಯಾನಗಳು ಬಹಳವಾಗಿ ಬೇರೆಯಾಗಿದ್ದರು ಅವು ನಗರೀಕರಣ ಎಂದರೇನು ಮತ್ತು ನಗರಪ್ರದೇಶದ ಸಮಸ್ಯೆಗಳು ಮತ್ತು ಪರಿಸ್ಥಿತಿಯನ್ನು ವಿವರಿಸುತ್ತವೆ. ಆರ್ಥಿಕ ಅಭಿವೃದ್ಧಿ, ಕೈಗಾರಿಕೆಗಳು, ಉದ್ಯಮಗಳು, ವ್ಯವಹಾರಗಳು ಮತ್ತು ಸೇವೆಗಳು ದೊಡ್ಡ ಪ್ರಮಾಣದಲ್ಲಿ ಅಸ್ಥಿತ್ವದಲ್ಲಿರುವುದು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಜನರು ಕಡಿಮೆ ವಿಸ್ತೀರ್ಣದಲ್ಲಿ ವಾಸಮಾಡುವಿಕೆಯು (ಹೆಚ್ಚಿನ ಜನಸಾಂದ್ರತೆ) ಎಲ್ಲಾ ವಿಧಧ ನಗರೀಕರಣದ ಸಾಮಾನ್ಯ ಮತ್ತು ಪ್ರಮುಖವಾದ ಲಕ್ಷಣಗಳಾಗಿದೆ.[48] ಈ ನಗರೀಕರಣ ಪ್ರಕ್ರಿಯೆಯಲ್ಲಿ ನಗರದಲ್ಲಿ ವಾಸಿಸುವ ಜನರ ಸಂಖ್ಯೆಯು ಗ್ರಾಮೀಣ ಭಾಗದಲ್ಲಿ ವಾಸಿಸುವ ಸಂಖ್ಯೆಗಿಂತ ಬಹಳ ಅಧಿಕ ಪ್ರಮಾಣದಲ್ಲಿ ವೃದ್ಧಿಸುತ್ತದೆ (ಲಾಂಗ್ 1998). ನಗರೀಕರಣ ಕೆಲವು ಮುಖ್ಯವಾದ ಸಾಮಾಜಿಕ ಪರಿಣಾಮಗಳನ್ನು ಉಂಟು ಮಾಡುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ನಿತ್ಯ ಜೀವನದಲ್ಲಿ ಸಾಮಾಜಿಕ ವ್ಯಕ್ತಿತ್ವವನ್ನು ಮಸಕು ಮಾಡಿ ಅನಾಮಧೇಯತೆಯನ್ನು ಹೆಚ್ಚಿಸುವುದು, ಜನರಲ್ಲಿನ ಪರಸ್ಪರ ನಂಬಿಕೆ ಕ್ಷೀಣಿಸುವುದು, ಹಲವು ವಿದಧ ಸಾಮಾಜಿಕ ಅವ್ಯವಸ್ಥೆಗಳನ್ನು ಹುಟ್ಟು ಹಾಕುವುದು ಮತ್ತು ಗ್ರಾಮೀಣ ಭಾಗಕ್ಕೆ ಹೋಲಿಸಿದರೆ ಸಮಾಜದಲ್ಲಿನ ಅಪರಾಧಗಳ ಹೆಚ್ಚಳವಾಗುವುದು. ನಗರಪ್ರದೇಶಗಳು ದೇಶದ ಆರ್ಥಿಕ ಅಭಿವೃದ್ಧಿಯನ್ನು ಮುನ್ನೆಡೆಸುವ ಮಹಾಯಂತ್ರಗಳೆಂದು ಪರಿಗಣಿಸಲಾಗುತ್ತವೆ. 2010ರಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನದಲ್ಲಿ ನಗರ ವಲಯದ ಪಾಲು ಶೇ. 62 ರಷ್ಟು ಇದ್ದಿತ್ತು. ದೇಶದ ಯೋಜನಾ ಆಯೋಗದ ಪ್ರಕಾರ ಭಾರತದ ಅಭಿವೃದ್ಧಿಯು ಹೆಚ್ಚು ವೇಗವಾಗಿ ಮತ್ತು ಎಲ್ಲ ವರ್ಗದವರನ್ನು ಒಳಗೊಳ್ಳುವ ರೀತಿಯಲ್ಲಿ ಆಗಬೇಕಾದಲ್ಲಿ ನಗರೀಕರಣದ ಪಾತ್ರ ಮುಖ್ಯವಾಗಿದೆ.[49]

2011 ರ ಜನಗಣತಿಯ ಪ್ರಕಾರ ದೇಶದ ನಗರಪ್ರದೇಶದ ಜನಸಂಖ್ಯೆ ಕಳೆದ ದಶಕದಲ್ಲಿ ಶೇ. 31.8 ರಷ್ಟು ಹೆಚ್ಚಳವಾಗಿದ್ದು ಒಟ್ಟು 37.7 ಕೋಟಿಗೆ ತಲುಪಿದೆ. ಕೆಲವು ಅಂದಾಜಿನ ಪ್ರಕಾರ ಭಾರತ ದೇಶದ ನಗರಪ್ರದೇಶದ ಜನಸಂಖ್ಯೆ 2030ರ ವೇಳೆಗೆ 59 ಕೋಟಿ ತಲುಪುವ ನಿರೀಕ್ಷೆಯಿದೆ. ಭಾರತದ ನಗರಗಳು ದೇಶದ ಶೇ. 70ರಷ್ಟು ಉದ್ಯೋಗಗಳನ್ನು ಮತ್ತು ದೇಶದ 70ರಷ್ಟು ಒಟ್ಟು ಆಂತರಿಕ ಉತ್ಪನ್ನವನ್ನು ನೀಡುವ ನಿರೀಕ್ಷೆಯಿದ್ದು ಇದರಿಂದ ಜನರ ಆದಾಯವು ನಾಲ್ಕು ಪಟ್ಟು ಹೆಚ್ಚುವ ನಿರೀಕ್ಷೆಯಿದೆ (ಮೇಕೆನ್ಸಿ ಗ್ಲೊಬಲ್ 2010)

ಭಾರತದಲ್ಲಿನ ನಗರೀಕರಣವನ್ನು ವಿಭಿನ್ನ ರೀತಿಯಲ್ಲಿನ ನಗರೀಕರಣವೆಂದು ತಿಳಿಯಬೇಕಾಗಿದೆ. ಇದಕ್ಕೆ ಕಾರಣವೇನೆಂದರೆ ಸಾಮಾನ್ಯವಾಗಿ ನಗರೀಕರಣವು ಪ್ರಾಥಮಿಕ ವಲಯವಾದ ಕೃಷಿಯಿಂದ ಕೈಗಾರಿಕಾ ಅಭಿವೃದ್ಧಿಯೆಡೆಗೆ ಸಾಗಿ ನಂತರ ಸೇವಾವಲಯ ಹೆಚ್ಚಳಗೊಂಡು ನಗರೀಕರಣವಾಗುವುದು ಪ್ರಪಂಚದ ಕೈಗಾರಿಕಾ ದೇಶಗಳಲ್ಲಿ ಕಂಡು ಬರುತ್ತದೆ. ಆದರೆ ಭಾರತದಲ್ಲಿನ ನಗರೀಕರಣದಲ್ಲಿ ಭಾರಿ ಪ್ರಮಾಣದ ಕೈಗಾರಿಕರಣ ಕಂಡು ಬರುವುದಿಲ್ಲ. ಬದಲಿಗೆ ಕೃಷಿಯಿಂದ ನೇರವಾಗಿ ಸೇವಾವಲಯದ ಹೆಚ್ಚಳವನ್ನು ಕಾಣಬಹುದಾಗಿದೆ.

ಈ ಪ್ರಕ್ರಿಯೆಯು ವಿವಿಧ ರೀತಿಯು ಸಮಸ್ಯೆಗಳಿಗೆ ಕಾರಣವಗಬಲ್ಲದು. ಅಸಂಘಟಿತ ಕಾರ್ಮಿಕರ ಹೆಚ್ಚಳ, ವಿವಿಧ ವರ್ಗದ ಕಾರ್ಮಿಕರ ಆದಾಯದಲ್ಲಿನ ಅಂತರದ ಹೆಚ್ಚಳ, ಕೊಳಚೆ ಪ್ರದೇಶಗಳ ಅಸ್ತಿತ್ವ ಮತ್ತು ಅವೈಜ್ಞಾನಿಕ ಭೂ ಬಳಕೆ ಅವುಗಳಲ್ಲಿ ಪ್ರಮುಖ ಅನುವಾದವುಗಳು (ಶಾಸ್ತ್ರಿ 2009). ಕೈಗಾರಿಕೆಯ ಹೆಚ್ಚಿನ ಅವಲಂಬನ ಇಲ್ಲದಿರುವುದರಿಂದ ಇತ್ತೀಚಿನ ಜಾಗತಿಕ ಆರ್ಥಿಕ ಕುಸಿತ ಭಾರತ ಹಾಗು ಕರ್ನಾಟಕದ ಮೇಲೆ ಹೆಚ್ಚು ಪರಿಣಾಮ ಬೀರಲಿಲ್ಲ.

ಭಾರತದಲ್ಲಿ ರಾಜ್ಯಗಳ ನಗರ ಸ್ಥಳೀಯ ಸರ್ಕಾರಗಳ ಕಾಯ್ದೆ ಅನ್ವಯ ನಗರಪಾಲಿಕೆ, ನಗರಸಭೆ, ಪುರಸಭೆ ಹಾಗು ಪಟ್ಟಣ ಪಂಚಾಯತಿಗಳು ಅಸ್ತಿತ್ವದಲ್ಲಿದೆ. ಈ ರೀತಿಯ ನಗರಪ್ರದೇಶದ ಘೋಷಣೆಗೆ ಕೆಲವು ಮಾನದಂಡಗಳನ್ನು ಬಳಸಲಾಗುತ್ತಿದೆ. ನಿರ್ದಿಷ್ಟ ಜನಸಾಂದ್ರತೆಯಲ್ಲಿ ವಾಸಿಸುವ ಜನಸಂಖ್ಯೆ, ಕೃಷಿಯೇತರ ಚಟುವಟಿಕೆ, ಉದ್ಯೋಗ, ಆದಾಯದ ಉತ್ಪಾದನೆ ಹಾಗು ಆರ್ಥಿಕ ಮಹತ್ವ ಇವುಗಳಲ್ಲಿ ಮುಖ್ಯವಾದವುಗಳು.

ಭಾರತದ ಜನಗಣತಿಯು 5000ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ, 400ಕ್ಕೂ ಹೆಚ್ಚಿನ ಜನಸಾಂದ್ರತೆ (ಪ್ರತಿ ಚ.ಕಿ.ಮಿ ಗೆ ) ಇರುವ ಮತ್ತು ಶೇ. 75 ರಷ್ಟಕ್ಕಿಂತ ಹೆಚ್ಚಿನ ಪುರುಷ ಕಾರ್ಮಿಕರು ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರೆ, ಅಂತಹ ಜನವಸತಿಯನ್ನು ನಗರ ಪ್ರದೇಶ ಎಂದು ಗುರುತಿಸಿದೆ. ಆದ್ದರಿಂದ ಜನಗಣತಿಯೆಂತೆ ನಗರಪ್ರದೇಶದ ಜನಸಂಖ್ಯೆಯು ಕಾಯ್ದೆ ಗುರುತಿಸಿದ ಪಟ್ಟಣಗಳಲ್ಲದೆ ಜನಗಣತಿ ಗುರುತಿಸಿದ ಪಟ್ಟಣಗಳನ್ನೂ ಒಳಗೊಂಡಿದೆ. ನಗರದಲ್ಲಿ ವಾಸಿಸುವ ಜನಸಂಖ್ಯೆಯ ಹೆಚ್ಚಳವು ಅಲ್ಲಿ ವಾಸಿಸುವ ಜನಸಂಖ್ಯೆಯ ಹೆಚ್ಚಳವಲ್ಲದೇ, ಗ್ರಾಮೀಣ ಭಾಗವು ನಗರ ಪ್ರದೇಶವೆಂದು ಘೋಷಣೆಯಾಗುವ ಮೂಲಕ ಮತ್ತು ಜನರು ಗ್ರಾಮೀಣ ಭಾಗದಿಂದ ನಗರಪ್ರದೇಶಕ್ಕೆ ವಲಸೆ ಬರುವ ಮೂಲಕವೂ ಹೆಚ್ಚುತ್ತದೆ.

ಕರ್ನಾಟಕದ ನಗರೀಕರಣ ರಾಜ್ಯದ ರಾಜಧಾನಿಯಾದ ಬೆಂಗಳೂರಿಗೆ ಹೊಂದಿಕೊಂಡಂತೆ ಇದೆ. ನೆರೆಯ ರಾಜ್ಯವಾದ ತಮಿಳುನಾಡಿನಲ್ಲಿ ಚೆನ್ನೈ ನಗರವಲ್ಲದೆ ಮಧುರೈ, ಕೊಯಮತ್ತೂರು ಮೊದಲಾದ ನಗರಗಳು ಅಭಿವೃದ್ಧಿ ಹೊಂದಿದ್ದು ಉತ್ತಮವಾದ ರೀತಿಯಲ್ಲಿ ಉದ್ಯೋಗ ಸೃಷ್ಟಿಯನ್ನು ಮಾಡಿರುತ್ತದೆ. ಆದರೆ ಕರ್ನಾಟಕದಲ್ಲಿ ಬೆಂಗಳೂರು ನಗರ ಪ್ರದೇಶವನ್ನು ಹೊರತು ಪಡಿಸಿ. ಮೈಸೂರು, ಹುಬ್ಬಳ್ಳಿ - ಧಾರವಾಡ ನಗರಗಳಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿ ಆಗಿರುವುದಿಲ್ಲ (ವಿಶ್ವ ಬ್ಯಾಂಕ್ 2013).

ಉತ್ತೇಜನಕಾರಿಯಾದ ಭೂಮಿ ಮತ್ತು ತೆರಿಗೆ ನೀತಿ, ಉನ್ನತ ಶಿಕ್ಷಣದಲ್ಲಿನ ಅಪಾರ ಬಂಡವಾಳ, ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯು ಬೆಂಗಳೂರಿನಲ್ಲಿ ದೇಶದಲ್ಲೇ ಅತ್ಯಧಿಕ ಪ್ರಮಾಣದ ಮಾಹಿತಿ ತಂತ್ರಜ್ಞಾನದ ಉದ್ಯಮಗಳು ಬೆಳೆಯಲು ಸಹಕಾರಿಯಾದವು. ಇದು ಬೆಂಗಳೂರಿನ ಸುತ್ತ ನಗರದ ಬೆಳವಣಿಗೆಗೆ ಕಾರಣವಾಯಿತು. ದೇಶದ ವಿವಿಧ ಭಾಗಗಳಿಂದ ಜನರು ಮಾಹಿತಿ ತಂತ್ರಜ್ಞಾನದ ಉದ್ಯೋಗ ಅರಸಿ ಬಂದು ನೆಲೆಸಿದರು. ಇದು ನಗರದ ಆದಾಯದಲ್ಲಿ ಪ್ರತಿಫಲಿಸಿತು ಅದು ದೇಶದ ಸರಾಸರಿ ಆದಾಯಕ್ಕಿಂತ (1998 ರಲ್ಲಿ) ಶೇ. 24 ರಷ್ಟು ಹೆಚ್ಚು ಇತ್ತು ಮತ್ತು 2005 ಶೇ. 70ರಷ್ಟು ಹೆಚ್ಚು ಇತ್ತು (ವಿಶ್ವ ಬ್ಯಾಂಕ್ 2013). ಜಾಗತಿಕ ಆರ್ಥಿಕ ಕುಸಿತದ ಅವಧಿಯಲ್ಲೂ ಕರ್ನಾಟಕದಲ್ಲಿ ಆದಾಯ ಇತರೆ ರಾಜ್ಯಗಳ ಸರಾಸರಿ ಆದಾಯಕ್ಕಿಂತ ಹೆಚ್ಚಾಗಿಯೇ ಇತ್ತು. ಮಾಹಿತಿ ತಂತ್ರಜ್ಞಾನದ ಉದ್ದಿಮೆಗಳು ಕೈಗಾರಿಕೆಯಷ್ಟು ಕುಸಿತವಾಗದೇ ಉಳಿದ್ದದ್ದೇ ಇದಕ್ಕೆ ಕಾರಣ.

---

[48] ದಯವಿಟ್ಟು ನೋಡಿ

1. http://water.tkk.fi/wr/tutkimus/glob/publications/Haapala/pdf-files/URBANIZATION.pdf;
2. http://siteresources.worldbank.org/EXTPREMNET/Resources/489960-1338997241035/Growth_Commission_Vol1_Urbanization_Growth_Ch1_Urbanization_Growth_Setting_Context.pdf;
3. http://public.econ.duke.edu/Econ/Faculty/Users//cbecker_files/papers/IHDE_urbanization_and_migration_ch_35_becker.pdf

[49] http://www.sagepub.com/oswmedia3e/study/chapters/handbooks/handbook15.2.pdf

ಕರ್ನಾಟಕ ನಗರಾಭಿವೃದ್ಧಿ ನೀತಿ 2009 ಬೆಂಗಳೂರನ್ನು ಪ್ರಧಾನವಾಗಿ ಗುರಿಯಾಗಿಸಿ ಅಭಿವೃದ್ಧಿಗೊಂಡ ನಗರೀಕರಣದ ಸಮಸ್ಯೆಗಳನ್ನು ಚರ್ಚಿಸುತ್ತದೆ. ರಾಜ್ಯದ ಒಂದು ಮಹಾನಗರದ ಬೆಳವಣಿಗೆ ಬದಲಿಗೆ ಮಧ್ಯಮ ಹಾಗೂ ಸಣ್ಣ ಪಟ್ಟಣಗಳ ಅಭಿವೃದ್ಧಿಯ ಮೂಲಕ ಹೆಚ್ಚು ಮಹತ್ವವುಳ್ಳ ಮತ್ತು ಸುಸ್ಥಿರ ಅಭಿವೃದ್ಧಿಯ ಅಗತ್ಯತೆಯ ಕುರಿತಾಗಿ ಅದು ವಿಶ್ಲೇಷಿಸುತ್ತದೆ. ರಾಜ್ಯದಲ್ಲಿ ಬೆಂಗಳೂರು ನಗರದ ನಂತರದ ದೊಡ್ಡನಗರದ ಜನಸಂಖ್ಯೆ ಬೆಂಗಳೂರಿನ 1/6 ಭಾಗದಷ್ಟು ಎಂದರೆ ಬೆಂಗಳೂರಿನ ನಗರೀಕರಣ ಸಾಂದ್ರತೆಯನ್ನು ಊಹಿಸಬಹುದು. ಈ ನೀತಿಯು ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಬಡತನಕ್ಕಿಂತ ನಗರ ಪ್ರದೇಶದ ಬಡತನ ಹೆಚ್ಚಿರುವುದನ್ನೂ ಗುರುತಿಸಿದೆ. ಬೆಂಗಳೂರು ಜಾಗತಿಕ ನಗರವಾಗಿ ಪರಿವರ್ತನೆಯಾಗುವುದರ ಜೊತೆಗೆ ಮೂಲಭೂತ ಸೌಕರ್ಯಗಳ ಹಾಗು ಸೇವೆಗಳ ತೀವ್ರ ಕೊರತೆ ಅನುಭವಿಸುತ್ತಿದ್ದು ವಸತಿ, ಸಾರಿಗೆ ಸಂಪರ್ಕ, ನೀರು ಸರಬರಾಜು ನೈರ್ಮಲ್ಯ, ತ್ಯಾಜ್ಯ ನಿರ್ವಹಣೆಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ನಗರ ಜಿಲ್ಲೆಗೆ ಹೊಂದಿಕೊಂಡು ಇರುವಾದರಿಂದ ಈ ಎಲ್ಲಾ ಬೆಳವಣಿಗೆಗಳ ಪರಿಣಾಮ ಮತ್ತು ಪ್ರಭಾವವನ್ನು ಹೊಂದಿದೆ.ಈ ಅಧ್ಯಾಯವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರೀಕರಣ, ಅದರ ಸ್ವರೂಪ, ವಿವಿಧ ನಾಗರೀಕ ಸೇವೆಗಳ ಲಭ್ಯತೆ ದೊರೆಗೊಳ್ಳುವಿಕೆ ಹಾಗು ಅದರ ಮಟ್ಟವನ್ನು ನಾಗರೀಕ ಸೇವೆಗಳ ಮಾನದಂಡಕ್ಕೆ ಹೋಲಿಸಿದಾಗ ಕಂಡುಬರುವ ವಿಷಯಗಳ ಕುರಿತಾಗಿ ಚರ್ಚಿಸುತ್ತದೆ. ಈ ಅಧ್ಯಾಯವು ಭೂಬಳಕೆಯಲ್ಲಿನ ಬದಲಾವಣೆ ಮತ್ತು ಸಾರಿಗೆ ಸಂಪರ್ಕದ ಸೌಲಭ್ಯಗಳ ಕುರಿತಾದ ನಗರದ ವಿಷಯಗಳನ್ನು ಕಿರು ಕ್ಷೇತ್ರ ಅಧ್ಯಯನದ ಮೂಲಕ ಅಭ್ಯಸಿಸುತ್ತದೆ.

## 11.2 ನಗರೀಕರಣದ ವಿನ್ಯಾಸ

ಭಾರತದಲ್ಲಿ 2001 ಮತ್ತು 2011ರ ನಡುವೆ ನಗರದ ಜನಸಂಖ್ಯೆ 9.1 ಕೋಟಿಯಷ್ಟು ಏರಿದರೆ, ಗ್ರಾಮೀಣ ಜನಸಂಖ್ಯೆ 9.0 ಕೋಟಿಯಷ್ಟು ಏರಿಕೆ ಕಂಡಿತು. ಇದು ಸ್ವಾತಂತ್ರ್ಯಾನಂತರ, ಮೊದಲ ಬಾರಿಗೆ ಗ್ರಾಮೀಣ ಜನಸಂಖ್ಯೆಗಿಂತ ನಗರ ಜನಸಂಖ್ಯೆಯಲ್ಲಿ ನಿಚ್ಚಳ ಬೆಳವಣಿಗೆ ಕಂಡುಬಂದಿದೆ(ಭಗತ್ 2011). ದೇಶದಲ್ಲಿ ನಗರೀಕರಣದ ಮಟ್ಟ 1991 ರಲ್ಲಿ ಶೇ. 26.5 ಇದ್ದದ್ದು 2001 ರಲ್ಲಿ ಶೇ. 27.7 ಕ್ಕೆ ಏರಿ 2011 ರಲ್ಲಿ ಶೇ. 31.2 ತಲುಪಿದೆ ಮತ್ತು 2001-11ರ ಅವಧಿಯಲ್ಲಿ ಅತೀ ಹೆಚ್ಚಿನ ಬೆಳವಣಿಗೆಯಾಗಿರುವುದನ್ನು ಸೂಚಿಸುತ್ತದೆ. ಗ್ರಾಮೀಣದಿಂದ ನಗರಕ್ಕೆ ವಲಸೆ ಪ್ರಮಾಣ ಹಾಗು ಗ್ರಾಮೀಣ ನಗರವಾಗಿ ವರ್ಗೀಕರಣ ಪ್ರಮಾಣ 1991ರಲ್ಲಿ ಶೇ. 38ರಷ್ಟು ಇದ್ದದ್ದು 2011 ರಲ್ಲಿ ಶೇ. 56ಕ್ಕೆ ಏರಿತು. ಇದೇ ಅವಧಿಯಲ್ಲಿ ನಗರದ ಜನಸಂಖ್ಯೆಯಲ್ಲಿ ಸಹಜ ಹೆಚ್ಚಳದ ರೂಪದಲ್ಲಿ ಈ ಪ್ರಮಾಣ ಶೇ. 62 ರಿಂದ ಶೇ. 44 ಕ್ಕೆ ಇಳಿದಿದೆ(ಭಗತ್ 2011). ಬಹಳ ತ್ವರಿತವಾಗಿ ನಗರೀಕರಣಗೊಳ್ಳುತ್ತಿರುವ ರಾಜ್ಯಗಳ ಪೈಕಿ ತಮಿಳುನಾಡು, ಗುಜರಾತ್ ಮತ್ತು ಮಹಾರಾಷ್ಟ್ರಗಳ ನಂತರ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ನಗರ ಜನಸಂಖ್ಯೆಯ ಪಾಲು 2001ರಲ್ಲಿ ಶೇ. 33.99ರಷ್ಟು ಇದ್ದದ್ದು 2011 ರಲ್ಲಿ ಶೇ. 38.67ಕ್ಕೆ ಹೆಚ್ಚಿದೆ (ಚಿತ್ರ 11.1).

**ಚಿತ್ರ 11.1 ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದಲ್ಲಿ ನಗರ ಜನಸಂಖ್ಯೆ ಪಾಲು**




ಮೂಲ: ಭಾರತ ಜನಗಣತಿ

2011 ರ ಜನಗಣತಿ ಪ್ರಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನಸಂಖ್ಯೆ 9.90 ಲಕ್ಷವಿದ್ದು, ಅದರಲ್ಲಿ ನಗರ ಜನಸಂಖ್ಯೆ 2.69 ಲಕ್ಷ[50] ಅಂದರೆ, ಜಿಲ್ಲೆಯ ಒಟ್ಟಾರೆ ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆ ಶೇ. 27.12 ಇತ್ತು.

ಈ ಮೊದಲೇ ತಿಳಿಸಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಐದು ನಗರ ಸ್ಥಳೀಯ ಸಂಸ್ಥೆಗಳಿವೆ. ಅದರಲ್ಲಿ ದೊಡ್ಡಬಳ್ಳಾಪುರ ನಗರಸಭೆಯಾದರೆ ಉಳಿದ ನಾಲ್ಕು ಪುರಸಭೆಗಳು (ಟಿಎಂಸಿ). ದೇವನಹಳ್ಳಿ ತಾಲೂಕಿನಲ್ಲಿರುವ ವಿಜಯಪುರವನ್ನು ಹೊರತುಪಡಿಸಿ ಉಳಿದವು ತಾಲೂಕು ಕೇಂದ್ರಸ್ಥಾನಗಳು. ದೊಡ್ಡಬಳ್ಳಾಪುರ ನಗರಸಭೆ ಮತ್ತು ವಿಜಯಪುರ ಪುರಸಭೆ ಬೆಂಗಳೂರಿನಿಂದ 40-45 ಕಿಮೀ ದೂರದಲ್ಲಿದ್ದರೆ, ಉಳಿದ ಮೂರು ನಗರ ಸ್ಥಳೀಯ ಸಂಸ್ಥೆಗಳು 35 ಕಿ.ಮೀ.ಗಿಂತ ಕಡಿಮೆ ದೂರದಲ್ಲಿವೆ. ಕೆಲವು ಜನರು ಪ್ರತಿದಿನ ಕೆಲಸ, ಶಿಕ್ಷಣ ಮತ್ತು ಇತರ ಉದ್ದೇಶಗಳಿಗಾಗಿ ಬೆಂಗಳೂರಿಗೆ ಬಂದು ಹೋಗುತ್ತಾರೆ. ಜಿಲ್ಲೆಯ ನಾಲ್ಕೂ ತಾಲೂಕುಗಳನ್ನು ಕೈಗಾರಿಕೆಯಲ್ಲಿ ಮುಂದುವರಿದ ತಾಲೂಕುಗಳೆಂದು ವರ್ಗೀಕರಿಸಲಾಗಿದೆ(ಕರ್ನಾಟಕ ಕೈಗಾರಿಕ ನೀತಿ 2009-2014)[51]. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ದೇವನಹಳ್ಳಿ ಪಟ್ಟಣಕ್ಕೆ ಸಮೀಪವಿದೆ. ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ವಸ್ತ್ರೋದ್ಯಮಕ್ಕೆ ಸಂಬಂಧಿಸಿದ ವಿಶೇಷ ಆರ್ಥಿಕ ವಲಯಗಳು ಇವೆ. ಇದರಿಂದಾಗಿ ಜಿಲ್ಲೆಯು ರಾಜ್ಯದ ಇತರ ಜಿಲ್ಲೆಗಳಿಗಿಂತ ಹೆಚ್ಚು ವೇಗವಾಗಿ ನಗರೀಕರಣಗೊಳ್ಳುತ್ತಿದೆ. 2001-2011ರ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಒಟ್ಟು ವಿಸ್ತೀರ್ಣ ಶೇ. 35.02 ರಷ್ಟು ಹೆಚ್ಚಾಗಿದೆ (ರಾಜ್ಯ ಸರ್ಕಾರದ ಅಧಿಸೂಚನೆಯ ಮೂಲಕ). ಈ ಅವಧಿಯಲ್ಲಿ ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ನಗರ ಸ್ಥಳೀಯ ಸಂಸ್ಥೆಗಳ ವಿಸ್ತೀರ್ಣ ಮತ್ತು ಜನಸಂಖ್ಯೆ ಎರಡೂ ಹೆಚ್ಚಿದ್ದವು (ಕೋಷ್ಟಕ 11.1).

**ಕೋಷ್ಟಕ 11.1: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವಿಸ್ತೀರ್ಣ ಮತ್ತು ಜನಸಂಖ್ಯೆ**

| ನಗರ ಸ್ಥಳೀಯ ಸಂಸ್ಥೆ | 2001 | | 2011 | | ಶೇಕಡಾವಾರು ಬೆಳವಣಿಗೆ | |
|---|---|---|---|---|---|---|
| | ವಿಸ್ತೀರ್ಣ (ಚದರ ಕಿ.ಮೀ. ಗಳಲ್ಲಿ) | ಜನಸಂಖ್ಯೆ | ವಿಸ್ತೀರ್ಣ (ಚದರ ಕಿ.ಮೀ. ಗಳಲ್ಲಿ) | ಜನಸಂಖ್ಯೆ | ವಿಸ್ತೀರ್ಣ | ಜನಸಂಖ್ಯೆ |
| ದೇವನಹಳ್ಳಿ | 15.94 | 23,406 | 16.00 | 28,051 | 0.38 | 19.85 |
| ವಿಜಯಪುರ | 14.55 | 29,540 | 16.00 | 34,866 | 9.97 | 18.03 |
| ದೊಡ್ಡಬಳ್ಳಾಪುರ | 13.37 | 71,606 | 18.00 | 84,642 | 34.63 | 18.21 |
| ಹೊಸಕೋಟೆ | 14.28 | 36,323 | 18.25 | 56,980 | 27.80 | 56.87 |
| ನೆಲಮಂಗಲ | 2.85 | 25,287 | 14.10 | 37,232 | 394.74 | 47.24 |
| ಒಟ್ಟು | 60.99 | 186,162 | 82.35 | 241,771 | 35.02 | 29.87 |

ಮೂಲ: ಭಾರತದ ಜನಗಣತಿ

50 ನಗರ ಜನಸಂಖ್ಯೆಯಲ್ಲಿ ಜನಗಣತಿಯ ಪ್ರಕಾರ ಪಟ್ಟಣಗಳೆಂದು ಗುರುತಿಸಲಾದ 2 ಗ್ರಾಮಗಳು ಹಾಗೂ 5 ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿದೆ

51 ಕರ್ನಾಟಕ ಕೈಗಾರಿಕ ನೀತಿ 2009-2014

**ಚಿತ್ರ 11.2: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಜನಸಾಂದ್ರತೆ**




ಮೂಲ: ಭಾರತದ ಜನಗಣತಿ

ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಸ್ತೀರ್ಣ ಹೆಚ್ಚಿದ್ದರಿಂದ ಜನಸಾಂದ್ರತೆ ಕಡಿಮೆಯಾಗಿದ್ದರೆ, ಹೊಸಕೋಟೆ ಪುರಸಭೆಯಲ್ಲಿ ವಿಸ್ತೀರ್ಣ ಹೆಚ್ಚಿದ್ದರೂ ಜನಸಾಂದ್ರತೆಯೂ ಹೆಚ್ಚಿದೆ. ಜಿಲ್ಲೆಯಲ್ಲಿರುವ ನಗರ ಕುಟುಂಬಗಳ ಸಂಖ್ಯೆ[52] 37654 ರಿಂದ 57718 ಕ್ಕೆ ಹೆಚ್ಚಿದ್ದು, ಶೇ. 53.3ರಷ್ಟು ಹೆಚ್ಚಳ ದಾಖಲಿಸಿದೆ. ಹೊಸಕೋಟೆ, ನೆಲಮಂಗಲ ಮತ್ತು ದೊಡ್ಡಬಳ್ಳಾಪುರಗಳಲ್ಲಿ ಕುಟುಂಬಗಳ ಸಂಖ್ಯೆ ಹೆಚ್ಚಲು ಕಾರಣ, ಈ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವಿಸ್ತೀರ್ಣ ಹೆಚ್ಚಿರುವುದೇ ಆಗಿದೆ (ಕೋಷ್ಟಕ 11.2).

**ಕೋಷ್ಟಕ 11.2: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಕುಟುಂಬಗಳ ಸಂಖ್ಯೆ**

| ನಗರ ಸ್ಥಳೀಯ ಸಂಸ್ಥೆ | ಕುಟುಂಬಗಳು | | |
|---|---|---|---|
| | 2001 | 2011 | ಶೇಕಡಾವಾರು ಬದಲಾವಣೆ |
| ದೇವನಹಳ್ಳಿ | 4,584 | 5,969 | 30.2 |
| ವಿಜಯಪುರ | 5,850 | 7,924 | 35.5 |
| ದೊಡ್ಡಬಳ್ಳಾಪುರ | 14,756 | 21,937 | 48.7 |
| ಹೊಸಕೋಟೆ | 7,267 | 13,091 | 80.1 |
| ನೆಲಮಂಗಲ | 5,197 | 8,797 | 69.3 |
| ಒಟ್ಟು | 37,654 | 57,718 | 53.3 |

ಮೂಲ: ಭಾರತದ ಜನಗಣತಿ

ನಗರೀಕರಣ ಪ್ರಕ್ರಿಯೆಯಲ್ಲಿ ಭೂಬಳಕೆಯಲ್ಲಿ ಬದಲಾವಣೆಗಳು ಆಗುತ್ತವೆ. ನಗರದ ಸುತ್ತಲಿನ ಪ್ರದೇಶ ನಗರೀಕರಣಕ್ಕೆ ತುತ್ತಾಗುತ್ತದೆ. ಉದ್ಯೋಗ, ಶಿಕ್ಷಣ, ವ್ಯಾಪಾರ ಮತ್ತು ಇತರ ಉದ್ದೇಶಗಳಿಗಾಗಿ ನಗರಗಳಿಗೆ ಬರುವ ಜನರ ಸಂಖ್ಯೆ ಹೆಚ್ಚಿರುವುದರಿಂದ ಸುತ್ತಮುತ್ತಲಿನ ಭೂಬಳಕೆಯ ಮೇಲೆ ಪ್ರಭಾವ ಉಂಟಾಗುತ್ತದೆ. ಕೃಷಿ ಭೂಮಿಯ ಮೇಲೆ ಭೂ ಮಾರುಕಟ್ಟೆ ಮತ್ತು ರಿಯಲ್ ಎಸ್ಟೇಟ್ ವ್ಯಾಪಾರ ಪ್ರಭಾವ ಬೀರುತ್ತವೆ. ಅಭಿವೃದ್ಧಿಪರ ಹೂಡಿಕೆಗಳನ್ನು ಸರಿಯಾದ ಮಾರ್ಗದಲ್ಲಿ ಆಗುವಂತೆ ನೋಡಿಕೊಳ್ಳುವ ಹಾಗು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಮತ್ತು ಕಾರ್ಯನೀತಿ ವಾತಾವರಣವನ್ನು ಒದಗಿಸುವಲ್ಲಿ ಸರ್ಕಾರದ ಪಾತ್ರ ಮುಖ್ಯ. ಅದು, ಸಮಾಜದ ಅದರಲ್ಲೂ ದುರ್ಬಲವರ್ಗಗಳ ಮೇಲೆ ಪ್ರತಿಕೂಲ ಪರಿಣಾಮ ಬೀರದಂತೆ ಕಾಪಾಡಬೇಕು. ಒಂದು ಪ್ರದೇಶ ನಗರೀಕರಣಗೊಳ್ಳುತ್ತಿದ್ದಂತೆ ನಗರದ ಪರಿಧಿಯಲ್ಲಿರುವ ಜನರ ಜೀವನೋಪಾಯಗಳ ಮೇಲೂ ಪ್ರಭಾವ ಉಂಟಾಗುತ್ತದೆ. ಈ ಪರಿಣಾಮಗಳು ಎಲ್ಲ ವರ್ಗದ ಜನರಿಗೂ ಸಮನಾಗಿರುವುದಿಲ್ಲ. ಕೆಲವರಿಗೆ ಲಾಭವಾದರೆ ಕೆಲವರು ಮತ್ತಷ್ಟು ದುರ್ಬಲರಾಗುತ್ತಾರೆ. ಕೇವಲ ಬೆಳವಣಿಗೆಯೊಂದೇ ಗುರಿಯಾಗಿರುವ ಆರ್ಥಿಕ ಅಭಿವೃದ್ಧಿನೀತಿಗಳು ನಗರದ ಪರಿಧಿಯಲ್ಲಿರುವ ಭೂಮಿಯನ್ನು ಕೈಗಾರಿಕೆಗಳಿಗೆ ನೀಡುವುದರಿಂದ ಉತ್ತಮ ಕೃಷಿಯೋಗ್ಯ ಭೂಮಿಯ ನಷ್ಟವಾಗುವುದಲ್ಲದೆ ಮತ್ತು ಅಭಿವೃದ್ಧಿಯ ಅಂಚಿನಲ್ಲಿರುವ ಬಡವರ ಜೀವನೋಪಾಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ.

ಮಹಾನಗರಗಳಿಗೆ ಸಮೀಪವಿರುವ ಪ್ರದೇಶಗಳು ಹೆಚ್ಚುತ್ತಿರುವ ಜನಸಂಖ್ಯೆ ಹಾಗು ಭೂಮಿಯ ಮೇಲಿನ ಒತ್ತಡದ ಕಾರಣದಿಂದ ಎಲ್ಲ ಬಗೆಯ ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಗಳನ್ನು ಆಕರ್ಷಿಸುತ್ತವೆ. ಇದಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಒಂದು ಉತ್ತಮ ನಿದರ್ಶನ. ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ (ರಾಜ್ಯ ಸರ್ಕಾರದ ಭೂ ಸ್ವಾಧೀನದ ಸಂಸ್ಥೆ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ (4 ತಾಲೂಕುಗಳಲ್ಲಿ) 4600 ಎಕರೆ ಭೂಮಿಯನ್ನು ಕೈಗಾರಿಕಾ ಪ್ರದೇಶಗಳ ರಚನೆಗಾಗಿ ಸ್ವಾಧೀನಪಡಿಸಿಕೊಂಡಿತು.[53] ದೊಡ್ಡಬಳ್ಳಾಪುರ ಮತ್ತು ಹೊಸಕೋಟೆಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಯಿತು ಮತ್ತು ನೆಲಮಂಗಲ ಮತ್ತು ಹೊಸಕೋಟೆಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆ ನಡೆಯುತ್ತಿದೆ.

52 ನಿವಾಸಗಳ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಕುಟುಂಬಗಳಲ್ಲಿ ಸಾಂಸ್ಥಿಕ ಕುಟುಂಬಗಳನ್ನು ಹೊರತುಪಡಿಸಲಾಗಿದೆ. 2011 ಇಸವಿಗೆ, ದೊಡ್ಡಬಳ್ಳಾಪುರ ಹೊರತುಪಡಿಸಿ ಉಳಿದೆಲ್ಲಾ ತಾಲೂಕುಗಳಿಗೆ ಪ್ರಾಥಮಿಕ ಜನಗಣತಿ ಗೋಷ್ವಾರೆಗಿಂತ ಕುಟುಂಬಗಳ ಸಂಖ್ಯೆ ಹೆಚ್ಚಾಗಿದೆ

53 http://dcmsme.gov.in/dips/Bangalore%20Rural%20Dist-final%20-%20Copy.pdf

**ಕೋಷ್ಟಕ 11.3: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಭೂ ಬಳಕೆಯಲ್ಲಿ ಆಗಿರುವ ಬದಲಾವಣೆಗಳು (ಹೆಕ್ಟೇರುಗಳಲ್ಲಿ)**

| ತಾಲೂಕು/ಜಿಲ್ಲೆ | ಒಟ್ಟು ಭೌಗೋಳಿಕ ವಿಸ್ತೀರ್ಣ | ಅರಣ್ಯ | ಕೃಷಿಯೇತರ | ಬಂಜರು | ಸಾಗುವಳಿ ಮಾಡಿರದ ಪ್ರದೇಶ* | ಪಾಳುಬಿದ್ದ ಜಮೀನು | ಒಟ್ಟು ಸಾಗುವಳಿ ಮಾಡಿದ್ದು |
|---|---|---|---|---|---|---|---|
| | 2002-2003 | | | | | | |
| ದೇವನಹಳ್ಳಿ | 44,935 | 2,275 | 5,764 | 1477 | 7,121 | 8,749 | 19,549 |
| ದೊಡ್ಡಬಳ್ಳಾಪುರ | 78,760 | 3,895 | 9,526 | 5063 | 8,440 | 13,656 | 38,180 |
| ಹೊಸಕೋಟೆ | 54,857 | 3,444 | 9,492 | 1049 | 7,679 | 5,456 | 27,737 |
| ನೆಲಮಂಗಲ | 50,967 | 1,708 | 9,306 | 3535 | 3,698 | 5,894 | 26,826 |
| ಬೆಂಗಳೂರು ಗ್ರಾಮಾಂತರ | 229,519 | 11,322 | 34,088 | 11124 | 26,938 | 33,755 | 112,292 |
| | 2010-2011 | | | | | | |
| ದೇವನಹಳ್ಳಿ | 44,935 | 2,275 | 8,793 | 1477 | 5,741 | 5,712 | 20,937 |
| ದೊಡ್ಡಬಳ್ಳಾಪುರ | 78,760 | 3,895 | 9,526 | 5063 | 8,042 | 10,649 | 41,585 |
| ಹೊಸಕೋಟೆ | 54,857 | 3,444 | 10,942 | 1049 | 2,438 | 2,651 | 34,333 |
| ನೆಲಮಂಗಲ | 50,967 | 1,708 | 10,717 | 3535 | 4,054 | 2,038 | 28,915 |
| ಬೆಂಗಳೂರು ಗ್ರಾಮಾಂತರ | 229,519 | 11,322 | 39,978 | 11124 | 20,275 | 21,050 | 125,770 |
| ಬದಲಾವಣೆ | 0 | 0 | 5,890 | 0 | -6,663 | -12,705 | 13,478 |

ಸೂಚನೆ: *ಕೃಷಿ ಮಾಡಬಲ್ಲ ಬಂಜರು, ಶಾಶ್ವತ ಗೋಮಾಳ, ಮರಗಳು ಮತ್ತು ತೋಪುಗಳು ಸೇರಿವೆ.
ಮೂಲ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂಕಿ-ಅಂಶಗಳ ನೋಟ 2003-04 ಮತ್ತು 2011-12

ರಾಜ್ಯ ಸರ್ಕಾರ ಕೂಡ ಅಲ್ಲಲ್ಲಿ ಭೂಮಿಗಳನ್ನು ಸ್ವಾಧೀನಪಡಿಸಿಕೊಂಡು ಭೂಮಿ ಬ್ಯಾಂಕನ್ನು ರಚಿಸಿದೆ[54] (ಕರ್ನಾಟಕ ಸರ್ಕಾರ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಹೂಡಿಕೆದಾರರಿಗೆ ಭೂಮಿ ನೀಡುವ ಸಲುವಾಗಿ ಭೂಮಿ ಬ್ಯಾಂಕುಗಳನ್ನು ರಚಿಸಿದೆ). ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 4038 ಎಕರೆಗಳ ಭೂಮಿಯನ್ನು ಭೂಮಿ ಬ್ಯಾಂಕಿಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ[55]. ಭೂಮಿ ತಂತ್ರಾಂಶದ ಕುರಿತಾದ ಅಧ್ಯಯನವು ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನೂ ಒಳಗೊಂಡಿತ್ತು. ಅಧ್ಯಯನವನ್ನು ಭಾರತೀಯ ತಂತ್ರಾಂಶ ತಂತ್ರಜ್ಞಾನ ಸಂಸ್ಥೆಯು (Indian Institute of Information Technology Bangalore IIITB) 2005ರಲ್ಲಿ ನಡೆಸಿತ್ತು. ಈ ತಂತ್ರಜ್ಞಾನದಿಂದ ರೈತರಿಗೆ ಅಲ್ಪ ಶುಲ್ಕ ಪಾವತಿಸಿದರೆ ಜಮೀನಿನ ಗಣಕೀಕೃತ ಭೂ ದಾಖಲೆಗಳ ವಿವರಗಳು (ಪಹಣಿ ಅಥವಾ ಆರ್‌ಟಿಸಿ) ದೊರೆಯಬೇಕು ಮತ್ತು ಭೂ ದಾಖಲೆಗಳು ಗಣಕೀಕರಣವಾಗಬೇಕೆಂಬುದಾಗಿತ್ತು. ಆದರೆ ವಾಸ್ತವವಾಗಿ ಇದು ಬಹಳ ದುಬಾರಿಯಾಗಿದೆ ಮತ್ತು ಬಡ ಜನರು ದಾಖಲೆಗಳನ್ನು ಪಡೆಯುವುದು ಕಷ್ಟವಾಗಿರುವುದಾಗಿ ಅಧ್ಯಯನ ವರದಿ ಮಾಡಿದೆ. ಅಲ್ಲದೆ ಈ ಪ್ರಕ್ರಿಯೆ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರಿಗಿಂತ ಭೂಮಿಯನ್ನು ಗುರುತಿಸಿ ಕೊಳ್ಳುವ ಮತ್ತು ಮಾರುವ ದಳ್ಳಾಳಿದಾರರಿಗೆ ಬಹಳ ಸುಲಭವಾಗಿ ಮಾಹಿತಿ ದೊರೆತು ಅವರುಗಳು ಭೂ ಮಾರುಕಟ್ಟೆಯ ಲಾಭ ಪಡೆಯಲು ಅನುಕೂಲ ಮಾಡಿಕೊಟ್ಟಿರುವುದಾಗಿ ತಿಳಿಸಿದೆ.

ನಗರೀಕರಣ ಒಂದು ಅನಿವಾರ್ಯ ಪ್ರಕ್ರಿಯೆಯೇ ಆದರೂ ಯಾವುದೇ ರೀತಿಯಲ್ಲಿ ತೀವ್ರವಾದ ಋಣಾತ್ಮಕ ಸಾಮಾಜಿಕ, ಆರ್ಥಿಕ ಅಥವಾ ಪರಿಸರದ ಮೇಲಿನ ಪರಿಣಾಮಗಳು ಆಗದಂತೆ ಎಲ್ಲ ಹಂತಗಳಲ್ಲಿ ಸೂಕ್ತವಾದ ಕಾರ್ಯನೀತಿಯನ್ನು ರೂಪಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ನಗರೀಕರಣವನ್ನು ಸುವ್ಯವಸ್ಥಿತವಾಗಿ ಬೆಳೆಸಲು ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಯು ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾದ ಅಗತ್ಯವಿರುತ್ತದೆ ಮತ್ತು ದುರ್ಬಲವರ್ಗದವರ ಅಗತ್ಯಗಳ ಹಾಗು ಅವರ ಮೇಲಾಗುವ ಪರಿಣಾಮಗಳ ಕುರಿತಾದ ದನಿಗೆ ಅವಕಾಶನೀಡಿ ಅದಕ್ಕೆ ಸ್ಪಂದಿಸಬೇಕಾಗಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಅಂತಹ ಯಾವುದೇ ಪ್ರಕ್ರಿಯೆ ನಡೆಯುತ್ತಿಲ್ಲ ಎಂಬುದು ಗೋಚರವಾಗುತ್ತದೆ. ಉದಾ: ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಮಾಹಿತಿ ತಂತ್ರಜ್ಞಾನದ ಕುರಿತಾದ ಹೂಡಿಕೆಗಳಿಗೆ ಕೃಷಿಯೇತರ ಭೂಮಿಯನ್ನೇ ಮುಖ್ಯವಾಗಿ ಸ್ವಾಧೀನಪಡಿಸಿಕೊಳ್ಳಬೇಕು. ಆದರೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳ ಪ್ರಕಾರ ಮಾಹಿತಿ ತಂತ್ರಜ್ಞಾನದ ಹೂಡಿಕೆ ಪ್ರದೇಶಕ್ಕಾಗಿ (Information Technology Investment Region) ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ನೀರಾವರಿ ಭೂಮಿಯೂ ಸೇರಿದೆ.[56] ಬಹಳ ಸಂದರ್ಭಗಳಲ್ಲಿ ಈ ಬಗೆಯ ಪ್ರಕ್ರಿಯೆಗಳು ಜಮೀನು ಸ್ವಾಧೀನ ಪಡಿಸಿಕೊಳ್ಳಲಾರಂಭವಾದ ಬಳಿಕವೇ ಸಣ್ಣ ರೈತರಿಗೆ ವಿಷಯ ತಿಳಿಯುತ್ತದೆ. ಮಧ್ಯವರ್ತಿಗಳು ಈ ಪರಿಸ್ಥಿತಿಯ ಲಾಭ ಪಡೆದು ಹಣ ಗಳಿಸುತ್ತಿದ್ದಾರೆ. ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಗಳನ್ನು, ಸರ್ಕಾರ ಅಧಿಸೂಚಿತ ಭೂಮಿಗಳಿಗೆ ಕೊಡುವ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಕೊಂಡು ಲಾಭಮಾಡಿಕೊಳ್ಳುತ್ತಾರೆ. ರಿಯಲ್ ಎಸ್ಟೇಟ್ ವ್ಯವಹಾರಸ್ಥರು ಅಧಿಸೂಚಿತ ಭೂಮಿಗಳ ಸುತ್ತಮುತ್ತಲ ಪ್ರದೇಶಗಳನ್ನು ಗುರಿಯಾಗಿಸಿಕೊಳ್ಳುತ್ತಾರೆ. ಇವರುಗಳು ಎಲ್ಲರಿಗಿಂತ ಮೊದಲೇ ಅಲ್ಲಿ ಹಣ ಹೂಡಿ ಮುಂದೆ ಲಾಭ ಮಾಡಿಕೊಳ್ಳುತ್ತಾರೆ.

## 11.3 ನಾಗರಿಕ ಸೇವೆಗಳ ಸರಬರಾಜು

ನಾಗರಿಕ ಸೇವೆಗಳ ವ್ಯಾಪ್ತಿ ಮತ್ತು ಗುಣಮಟ್ಟವು ನಗರೀಕರಣದ ಗುಣಮಟ್ಟದ ಒಂದು ಪ್ರಮುಖ ಸೂಚಕವಾಗಿರುತ್ತದೆ. ನಾಗರಿಕ ಸೇವೆಗಳು ಕೇವಲ ಮೂಲಸೌಕರ್ಯ ಮಾತ್ರವಲ್ಲದೆ, ನಗರದ ಜನರ ಅದರಲ್ಲೂ ಕಡೆಗಣಿಸಲ್ಪಟ್ಟ ವರ್ಗದ ಜನರ ಯೋಗಕ್ಷೇಮದ ಬಗ್ಗೆಯೂ ಆಗಿದೆ. ನಾಗರಿಕ ಸೇವೆಗಳ ಸುಸ್ಥಿರವಾಗಿ ಒದಗಿಸಲು, ಸಂಪನ್ಮೂಲಗಳ ಸಮರ್ಥ ನಿರ್ವಹಣೆ ಮತ್ತು ಆರ್ಥಿಕ ಸಾಮರ್ಥ್ಯದ ಕುರಿತಾದ ಸಮಸ್ಯೆಗಳನ್ನು ಪರಿಗಣಿಸಬೇಕು. ಸುಸ್ಥಿರವಾದ ರೀತಿಯಲ್ಲಿ ನಾಗರಿಕ ಸೇವೆಗಳನ್ನು ಒದಗಿಸಲು ವೆಚ್ಚದ ಮರುಪಾವತಿಯು ಅತ್ಯಂತ ದಕ್ಷವಾಗಿರಬೇಕು. ಇದಕ್ಕೆ ಪಾಲುದಾರರಾದ ನಾಗರಿಕರ ಸಹಕಾರ ಅತ್ಯಗತ್ಯವಾಗಿದ್ದು, ಅದನ್ನು ಪಡೆಯುವುದು ಸುಧಾರಿತ ಆಡಳಿತ ಪರಿಪಾಲನೆಯಿಂದ ಮಾತ್ರ ಸಾಧ್ಯವಿದೆ. ನಾಗರಿಕ

[54] ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕರ್ನಟಕ ಸರ್ಕಾರವು ಹೂಡಿಕೆದಾರರಿಗೆ ಭೂಮಿ ಒದಗಿಸಲು ಭೂ ಬ್ಯಾಂಕ್‌ಗಳನ್ನು ಸೃಷ್ಟಿಸಿದೆ. ಈ ಭೂ ಬ್ಯಾಂಕ್‌ಗಳನ್ನು ಸ್ವಾಧೀನಪಡಿಸಿಕೊಂಡ ನಂತರ ಹೂಡಿಕೆದಾರರಿಗೆ ತಿನೀಡಲಾಗುತ್ತದೆ.

[55] http://www.pppinindia.com/pdf/karnataka/District%20Profiles/Bangalore%20Rural.pdf and http://www.kiadb.in/images/stories/LAND%20BANK%20DETAILS.pdf

[56] http://www.livemint.com/Companies/t39AQppVx6YNRVKUVoDnjM/Karnataka-govt-notifies-land-to-set-up-IT-park.html

ಮೂಲಸೌಕರ್ಯ ಮತ್ತು ಸೇವೆಗಳ ಬಗ್ಗೆ ಭಾರತ ಸರ್ಕಾರದ ಉನ್ನತಾಧಿಕಾರದ ಸಮಿತಿಯ ವರದಿಯು (HPEC 2011), ನಗರ ಮತ್ತು ಪಟ್ಟಣಗಳಲ್ಲಿ, ಈಗಿರುವ ಜನಸಂಖ್ಯೆಗೆ, ನೀಡಲಾಗುತ್ತಿರುವ ಸೇವೆಗಳ ಪ್ರಮಾಣ ಮತ್ತು ಗುಣಮಟ್ಟದಲ್ಲಿ ನ್ಯೂನತೆಯಿರುವುದನ್ನು ಸೂಚಿಸಿದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಯೋಜನೆ ತಯಾರಿಕೆ, ಅನುಷ್ಠಾನ ಮತ್ತು ನಿರ್ವಹಣೆಯಲ್ಲಿನ ಕಡಿಮೆ ಸಾಮರ್ಥ್ಯ, ಸೂಕ್ತವಲ್ಲದ ತಂತ್ರಜ್ಞಾನದ ಬಳಕೆ, ಕಡಿಮೆ ಪ್ರಮಾಣದ ಆರ್ಥಿಕ ಸಾಮರ್ಥ್ಯ ಹಾಗು ಆದಾಯ ಕ್ರೋಢೀಕರಣ ಇದಕ್ಕೆ ಪ್ರಮುಖ ಕಾರಣಗಳಾಗಿವೆ.

ಭಾರತದಲ್ಲಿ ನಗರಗಳಲ್ಲಿನ ನಾಗರಿಕ ಸೇವೆಗಳ ಲಭ್ಯತೆಯು ಅವುಗಳ ಗಾತ್ರದಂತೆ ಬದಲಾಗುತ್ತವೆ. ದೊಡ್ಡ ನಗರಗಳಲ್ಲಿ ಪ್ರಾಥಮಿಕ ಸೇವೆಗಳ ಲಭ್ಯತೆಯು ಅತ್ಯುತ್ತಮವಾಗಿದ್ದು, ಪಟ್ಟಣಗಳ ಗಾತ್ರದಂತೆ ಕಡಿಮೆಯಾದಂತೆ ಅವುಗಳ ಲಭ್ಯತೆ ಕ್ಷೀಣಿಸಿ, ಗ್ರಾಮೀಣ ಪ್ರದೇಶಗಳಲ್ಲಿ ಬಹಳ ಕಳಪೆಯಾಗಿವೆ (ವಿಶ್ವಬ್ಯಾಂಕ್ 2013). ಉದಾಹರಣೆಗೆ, 50000ಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ನಗರಗಳಲ್ಲಿ, ಜನಸಂಖ್ಯೆಯ ಶೇ.60–70ರಷ್ಟು ಜನಕ್ಕೆ ತಮ್ಮ ಆವರಣದಲ್ಲಿ ಕುಡಿಯುವ ನೀರಿನ ಲಭ್ಯತೆಯಿದ್ದರೆ, ಅದಕ್ಕಿಂತ ಸಣ್ಣ ಪಟ್ಟಣಗಳಲ್ಲಿ ಈ ಪಾಲು ಶೇ.50ಕ್ಕಿಂತ ಕಡಿಮೆಯಾಗುತ್ತದೆ. ನಗರ/ಪಟ್ಟಣಗಳಲ್ಲಿ ಲಭ್ಯತೆಯ ಮಾದರಿಯು ಸಮಾನವಾಗಿರದೆ, ಪಟ್ಟಣದ ಮಧ್ಯಭಾಗದಲ್ಲಿ ಲಭ್ಯತೆಯು ಹೆಚ್ಚಾಗಿದ್ದು, ಹೊರವಲಯಗಳಲ್ಲಿ ಸೇವೆಗಳ ಮಟ್ಟವು ನಗಣ್ಯವಾಗಿವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಯಂತಹ ಸೇವೆಗಳ ಲಭ್ಯತೆಯನ್ನು ಮೌಲ್ಯಮಾಪನ ಮಾಡಲು ಜನಗಣತಿ ದತ್ತಾಂಶವನ್ನು ಬಳಸಲಾಗಿದ್ದು, ರಸ್ತೆಗಳು, ಬೀದಿದೀಪಗಳು, ನೀರು ಸರಬರಾಜು ಮತ್ತು ಘನತ್ಯಾಜ್ಯ ನಿರ್ವಹಣೆಯಂತಹ ಸೇವೆಗಳ ಸರಬರಾಜನ್ನು ಅಭ್ಯಸಿಸಲು ನಗರ ಸ್ಥಳೀಯ ಸಂಸ್ಥೆಗಳ ದತ್ತಾಂಶವನ್ನು ಬಳಸಲಾಯಿತು. ಸ್ವಚ್ಛ ನೀರಿನ ಲಭ್ಯತೆಯು ಉತ್ತಮ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ನಿರ್ಣಾಯಕವಾಗಿರುತ್ತದೆ. ಜಿಲ್ಲೆಯಲ್ಲಿ ನದಿ ಮೊದಲಾದ ಜಲಮೂಲ ಲಭ್ಯವಿಲ್ಲದ್ದರಿಂದ, ಅಂತರ್ಜಲದ ಮೇಲೆ ಅವಲಂಬನೆಯು ಅತಿ ಹೆಚ್ಚಾಗಿದೆ. ಜನಗಣತಿ 2011ರ ಪ್ರಕಾರ, ದೇವನಹಳ್ಳಿಯನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲೂ ನಲ್ಲಿ ನೀರಿನ ಲಭ್ಯತೆಯಿರುವ ಕುಟುಂಬಗಳ ಸಂಖ್ಯೆಯು ಹೆಚ್ಚಾಗಿದ್ದು, ನಲ್ಲಿ ನೀರಿನ ಲಭ್ಯತೆಯಿರುವ ಕುಟುಂಬಗಳ ಶೇಕಡಾವಾರು ಪ್ರಮಾಣ ಕಡಿಮೆಯಾಗಿದೆ. ಶುದ್ಧೀಕರಿಸಿದ ನಲ್ಲಿ ನೀರಿನ ಲಭ್ಯತೆಯು ಹೊಸಕೋಟೆ ಪುರಸಭೆಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿದ್ದು, ದೊಡ್ಡಬಳ್ಳಾಪುರದಲ್ಲಿ ಅತಿ ಕಡಿಮೆಯಿದ್ದಿತು[57].

ಚಿತ್ರ 11.4: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಲ್ಲಿನೀರಿನ ಲಭ್ಯತೆಯಿರುವ ಕುಟುಂಬಗಳು (ಶೇ.)




ಮೂಲ: ಭಾರತೀಯ ಜನಗಣತಿ

ಚಿತ್ರ 11.5: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮನೆಯ ಆವರಣದಲ್ಲಿ ನೀರಿನ ಲಭ್ಯತೆಯಿರುವ ಕುಟುಂಬಗಳು (ಶೇ.)




ಮೂಲ: ಭಾರತೀಯ ಜನಗಣತಿ

ಮನೆಯ ಆವರಣದ ಬಳಿ ನೀರಿನ ಲಭ್ಯತೆಯು (100 ಮೀ. ಒಳಗೆ) ಅತಿ ಹೆಚ್ಚಾಗಿ ನೆಲಮಂಗಲದಲ್ಲಿ ಕಂಡುಬಂದಿದ್ದು, ಅತಿ ಕಡಿಮೆ ದೊಡ್ಡಬಳ್ಳಾಪುರದಲ್ಲಿತ್ತು. ದೇವನಹಳ್ಳಿ, ವಿಜಯಪುರ ಮತ್ತು ನೆಲಮಂಗಲ ಪುರಸಭೆಗಳು ತಮ್ಮ ವ್ಯಾಪ್ತಿಯಲ್ಲಿ ಮನೆ ಆವರಣದ ಬಳಿ ನೀರನ್ನು ಪಡೆಯುತ್ತಿರುವ ಕುಟುಂಬಗಳ ಪ್ರಮಾಣದಲ್ಲಿ ಹೆಚ್ಚಳವನ್ನು ದಾಖಲಿಸಿವೆ. ದೊಡ್ಡಬಳ್ಳಾಪುರದಲ್ಲಿ ಶೇ.80ರಷ್ಟು ಕುಟುಂಬಗಳು ನಲ್ಲಿನೀರಿನ ಲಭ್ಯತೆಯನ್ನು ಹೊಂದಿದ್ದರೂ (2011), ಕೇವಲ ಶೇ.23ರಷ್ಟು ಕುಟುಂಬಗಳು ತಮ್ಮ ಆವರಣದ ಬಳಿ ನೀರಿನ್ನು ಪಡೆಯುತ್ತಿದ್ದಾರೆ[58] ಹಾಗು ಶೇ.5ರಷ್ಟು ಮಾತ್ರ ಶುದ್ಧೀಕರಿಸಿದ ನೀರನ ಲಭ್ಯತೆಯನ್ನು ಹೊಂದಿವೆ. ಇದಕ್ಕೆ ವಿರುದ್ಧವಾಗಿ, ಹೊಸಕೋಟೆಯಲ್ಲಿ ಶೇ.69ರಷ್ಟು ಕುಟುಂಬಗಳು ನಲ್ಲಿನೀರಿನ ಲಭ್ಯತೆಯನ್ನು ಹೊಂದಿದ್ದು (2011) ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇದು ಅತಿ ಕಡಿಮೆ ಪ್ರಮಾಣವಾಗಿದೆ. ಆದರೆ ಮನೆಯ ಆವರಣದ ಬಳಿ ನೀರನ್ನು ಪಡೆಯುತ್ತಿರುವ ಕುಟುಂಬಗಳ ಪ್ರಮಾಣ ಶೇ.48ರಷ್ಟು ಇದ್ದು ಉತ್ತಮವಾಗಿದೆ ಮತ್ತು ಶೇ.43ರಷ್ಟು ಕುಟುಂಬಗಳು ಶುದ್ಧೀಕರಿಸಿದ ನೀರನ್ನು ಪಡೆಯುತ್ತಿದ್ದು ಇದು ಇತರ ನಗರ ಸ್ಥಳೀಯ ಸಂಸ್ಥೆಗಳಿಗಿಂತ ಉತ್ತಮವಾಗಿದೆ.

ಮನೆಯೊಳಗೆ ಸ್ನಾನಗೃಹದ ಸೌಲಭ್ಯವುಳ್ಳ ಕುಟುಂಬಗಳ ಪ್ರಮಾಣವು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೆಚ್ಚಳವನ್ನು ಕಂಡಿದೆ. ಹೊಸಕೋಟೆಯಲ್ಲಿ ಈ ಹೆಚ್ಚಳವು ಉತ್ತಮವಾಗಿದ್ದರೆ, ನೆಲಮಂಗಲದಲ್ಲಿ ಅತಿ ಕಡಿಮೆಯಿತ್ತು. ಚರಂಡಿ ವ್ಯವಸ್ಥೆಯುಳ್ಳ ಒಟ್ಟು ಕುಟುಂಬಗಳ ಶೇಕಡವಾರಾಗಿ, 2001-2011ರ ಅವಧಿಯಲ್ಲಿ ಸುಧಾರಣೆಯನ್ನು ಕಂಡಿದೆ. 2001-2011ರ ಅವಧಿಯಲ್ಲಿ ಶೌಚಾಲಯದ ಸೌಲಭ್ಯವುಳ್ಳ ಮನೆಗಳ ಸಂಖ್ಯೆಯೂ ಹೆಚ್ಚಳವನ್ನು ಕಂಡಿದೆ (ಚಿತ್ರ 11.6, 11.7 ಮತ್ತು ಚಿತ್ರ 11.8).

ಚಿತ್ರ 11.6: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ನಾನಗೃಹದ ಸೌಲಭ್ಯವುಳ್ಳ ಕುಟುಂಬಗಳು (ಶೇ.)




ಮೂಲ: ಭಾರತೀಯ ಜನಗಣತಿ

[57] 2011 ಇಸವಿಗೆ ಸಂಸ್ಕರಿಸಿದ ಮೂಲಗಳಿಂದ ನಲ್ಲಿ ನೀರಿನ ಲಭ್ಯತೆ ಕುರಿತ ದತ್ತಾಂಶ ಲಭ್ಯವಾಗಿಲ್ಲ

[58] ಮನೆಯ ಸಮೀಪ ಎಂದರೆ 100 ಮೀಟರ್ ವ್ಯಾಪ್ತಿಯೊಳಗೆ ನೀರಿನ ಮೂಲವಿರುವುದು.

**ಚಿತ್ರ 11.7: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚರಂಡಿ ಸೌಲಭ್ಯವುಳ್ಳ ಕುಟುಂಬಗಳು (ಶೇ.)**




ಮೂಲ: ಭಾರತೀಯ ಜನಗಣತಿ

**ಚಿತ್ರ 11.8: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೌಚಾಲಯ ಮತ್ತು ಸೌಲಭ್ಯವುಳ್ಳ ಕುಟುಂಬಗಳು (ಶೇ.)**




ಮೂಲ: ಭಾರತೀಯ ಜನಗಣತಿ

ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ವ್ಯವಸ್ಥೆಯು ಕಳಪೆಯಾಗಿದ್ದು, ವಿಜಯಪುರ ಪುರಸಭೆಯು ಮಾತ್ರ ಸರಿಯಾದ ಒಳಚರಂಡಿ ವ್ಯವಸ್ಥೆಯನ್ನು ಹೊಂದಿದೆ. ಸುಮಾರು 30000 ಜನಸಂಖ್ಯೆ ಹೊಂದಿರುವ ವಿಜಯಪುರದಲ್ಲಿ ಶೇ.54ರಷ್ಟು ಮನೆಗಳಿಗೆ ಒಳಚರಂಡಿ ಸಂಪರ್ಕವನ್ನು ಹೊಂದಿದ್ದರೆ, 85000ಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ದೊಡ್ಡಬಳ್ಳಾಪುರವು ಕೇವಲ ಶೇ.3ರಷ್ಟು ಮನೆಗಳಿಗೆ ಒಳಚರಂಡಿ ಸಂಪರ್ಕವನ್ನು ಹೊಂದಿದೆ. ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದಿದ್ದರೆ, ಅಂತರ್ಜಲವು ಕಲುಷಿತಗೊಳ್ಳುವ ಸಂಭಾವ್ಯತೆ ಹೆಚ್ಚು ಇರುತ್ತದೆ. ಆದರೆ, ಕುಡಿಯುವ ನೀರಿಗೆ ಬೇಡಿಕೆ ಇರುವಂತೆ ಒಳಚರಂಡಿ ವ್ಯವಸ್ಥೆಯ ಅವಶ್ಯಕತೆಯು ವ್ಯಕ್ತವಾಗುವುದಿಲ್ಲ ಮತ್ತು ಯಾವಾಗಲೂ ಸ್ಪಷ್ಟವಾಗಿರುವುದಿಲ್ಲ. ಇದರಿಂದ ಉತ್ತಮವಾದ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಲು ಒಳ್ಳೆಯ ಯೋಜನೆ ಮತ್ತು ಸಂಘಟಿತ ಶ್ರಮವನ್ನು ಮಾಡುವಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಮೇಲೆ ಇದು ಹೆಚ್ಚಿನ ಜವಾಬ್ದಾರಿಯನ್ನು ಹೊರಿಸುತ್ತದೆ. ಅಡುಗೆ ಉದ್ದೇಶಗಳಿಗೆ ಆಧುನಿಕ ಇಂಧನಗಳ ಬಳಕೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗಣನೀಯ ಹೆಚ್ಚಳವಾಗಿದೆ. ಆದರೆ, ವಿಜಯಪುರ ಮತ್ತು ದೇವನಹಳ್ಳಿಗಳಲ್ಲಿ ಅಡುಗೆಗೆ ಸೌದೆಯ ಬಳಕೆಯು ಹೆಚ್ಚಿನ ಪ್ರಮಾಣದಲ್ಲಿಯೇ ಇದೆ (ಚಿತ್ರ 11.9).

**ಚಿತ್ರ 11.9: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಧುನಿಕ ಅಡುಗೆ ಇಂಧನ ಸೌಲಭ್ಯವುಳ್ಳ ಕುಟುಂಬಗಳು (ಶೇ.)**




ಟಿಪ್ಪಣಿ: ಆಧುನಿಕ ಇಂಧನವು ಎಲ್‌ಪಿಜಿ, ವಿದ್ಯುತ್ ಮತ್ತು ಜೈವಿಕ ಅನಿಲವನ್ನು ಒಳಗೊಂಡಿದೆ.

ಮೂಲ: ಭಾರತೀಯ ಜನಗಣತಿ

**ಕೋಷ್ಟಕ 11.4: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ರಸ್ತೆ, ರಸ್ತೆಬದಿಯ ಚರಂಡಿ ಮತ್ತು ಬೀದಿದೀಪಗಳು (2011)**

| ನಗರ ಸ್ಥಳೀಯ ಸಂಸ್ಥೆ | ವಿಸ್ತೀರ್ಣ (ಚ ಕಿಮೀ) | ರಸ್ತೆ ಉದ್ದ (ಕಿಮೀ) | ಸರ್ವಋತು ರಸ್ತೆಗಳ ಶೇ. | ಚರಂಡಿಗಳ ಉದ್ದ (ಕಿಮೀ) | ಬೀದಿದೀಪಗಳು (ಸಂಖ್ಯೆ) | ರಸ್ತೆ ಉದ್ದ ಪ್ರತಿ ಚ.ಕಿ. ಮಿ. ಗೆ | ಪ್ರತಿ ಕಿಮೀ ರಸ್ತೆಗೆ ಬೀದಿದೀಪ (ಸಂಖ್ಯೆ) | ರಸ್ತೆಬದಿಯ ಚರಂಡಿಗಳು (ರಸ್ತೆ ಉದ್ದದ ಶೇ.) |
|---|---|---|---|---|---|---|---|---|
| ದೇವನಹಳ್ಳಿ | 16.00 | 62 | 77 | 110 | 2,679 | 3.88 | 43 | 177 |
| ವಿಜಯಪುರ | 16.00 | 73 | 75 | 75 | 3,978 | 4.56 | 54 | 103 |
| ದೊಡ್ಡಬಳ್ಳಾಪುರ | 18.00 | 186 | 59 | 218 | 7,015 | 10.33 | 38 | 117 |
| ಹೊಸಕೋಟೆ | 18.25 | 75 | 73 | 110 | 3,643 | 4.11 | 49 | 147 |
| ನೆಲಮಂಗಲ | 14.10 | 53 | 30 | 85 | 3,155 | 3.74 | 60 | 161 |
| ಒಟ್ಟು | 82.35 | 449 | 63 | 598 | 2,0470 | – | 46 | 133 |

ಟಿಪ್ಪಣಿ: ರಸ್ತೆಬದಿಯ ಚರಂಡಿಗಳ ಉದ್ದ ಗರಿಷ್ಟ ಶೇ. 200 (ರಸ್ತೆ ಉದ್ದದ ಶೇಕಡಾವಾರು) ಏಕೆಂದರೆ, ರಸ್ತೆ ಎರಡೂ ಬದಿಗಳಲ್ಲಿ ಚರಂಡಿ ನಿರೀಕ್ಷಿಸಲಾಗುವುದು.
ಮೂಲ: ಭಾರತೀಯ ಜನಗಣತಿ

ದೊಡ್ಡಬಳ್ಳಾಪುರವನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಸ್ತೀರ್ಣದ ಪ್ರತಿ ಚ.ಕಿ.ಮಿ.ಗೆ ರಸ್ತೆ ಉದ್ದವು ಸುಮಾರು 4 ಕಿ.ಮೀ ಇದ್ದರೆ, ಇಲ್ಲಿ ಪ್ರತಿ ಚ.ಕಿ.ಮಿ. ವಿಸ್ತೀರ್ಣಕ್ಕೆ 10ಕಿ.ಮೀ. ಉದ್ದ ರಸ್ತೆಯಿದೆ. ರಸ್ತೆಗಳ ಮಾನದಂಡ ಸೂಚಕವು ಎಲ್ಲಾ ರಸ್ತೆಗಳೂ ಸರ್ವಋತು ರಸ್ತೆಗಳಾಗಿರಬೇಕೆಂದು ಸೂಚಿಸುತ್ತದೆ. ಎಲ್ಲಾ ಬಗೆಯ ರಸ್ತೆಗಳಲ್ಲಿ ಸರ್ವಋತು ರಸ್ತೆಗಳ ಪ್ರಮಾಣವು ನೆಲಮಂಗಲದಲ್ಲಿ ಅತಿ ಕಡಿಮೆಯಿದ್ದು, ದೇವನಹಳ್ಳಿಯಲ್ಲಿ ಅತಿ ಹೆಚ್ಚಾಗಿದೆ. ಮಾನದಂಡದ ಪ್ರಕಾರ ರಸ್ತೆಬದಿ ಚರಂಡಿಯ ಉದ್ದವು ರಸ್ತೆ ಉದ್ದದ 140ಶೇ. ರಷ್ಟಿರಬೇಕಿದ್ದು, ಇದನ್ನು ವಿಜಯಪುರ ಮತ್ತು ದೊಡ್ಡಬಳ್ಳಾಪುರ ಪಟ್ಟಣಗಳನ್ನು ಹೊರತುಪಡಿಸಿ, ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಸಾಧಿಸಲಾಗಿದೆ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ರಸ್ತೆಯ ಪ್ರತಿ ಕಿ.ಮೀ.ಗೆ ಬೀದಿದೀಪಗಳ ಸಂಖ್ಯೆಯು ಸೂಚಿತ ಮಾನದಂಡ 29 ದೀಪಗಳಿಗಿಂತ ಹೆಚ್ಚಾಗಿದೆ.

ಎಲ್ಲಾ ನಗರ ಪ್ರದೇಶಗಳಲ್ಲಿಯೂ ಸುಲಭವಾಗಿ ಮತ್ತು ಅಗ್ಗವಾಗಿ ಲಭಿಸುವ ಸಾರ್ವಜನಿಕ ಸಾರಿಗೆಯು ಬಹಳ ಮುಖ್ಯವಾಗಿದೆ. ಆದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇದು ಇನ್ನೂ ಮುಖ್ಯವಾಗಿದೆ ಏಕೆಂದರೆ, ಶೈಕ್ಷಣಿಕ ಸಂಸ್ಥೆಗಳು, ಮಾರುಕಟ್ಟೆ ಮತ್ತು ಉದ್ಯೋಗದ ಅವಕಾಶಗಳು ಲಭ್ಯವಿರುವ ಬೆಂಗಳೂರು ನಗರಕ್ಕೆ ಇದು ಹತ್ತಿರವಿರುವ ಮತ್ತು ಹೆಚ್ಚು ಅವಲಂಬಿತವಾಗಿದೆ. ಜಿಲ್ಲೆಯ ಎರಡು ಪ್ರದೇಶಗಳಲ್ಲಿ ನಡೆಸಲಾದ ಕಿರು ಸಮೀಕ್ಷೆಯಾಧಾರಿತ ಅಧ್ಯಯನವು ಬಹಳಷ್ಟು ಜನರು ದಿನವೂ ಬೆಂಗಳೂರು ನಗರಕ್ಕೆ ಪ್ರಯಾಣಿಸುತ್ತಾರೆ ಮತ್ತು ಸಾರ್ವಜನಿಕ ಹಾಗು ಖಾಸಗಿ

59 ಮೂರು ವರ್ಷಗಳ ಸರಾಸರಿಯನ್ನು ಪರಿಗಣಿಸಲಾಯಿತು

60 ವೆಬ್ ಸೈಟ್‌ನಲ್ಲಿ ಒದಗಿಸಲಾದಂತೆ ಪ್ರತಿದಿನ ಪ್ರತಿವ್ಯಕ್ತಿಗೆ ಲಭ್ಯವಾಗುವ ನೀರಿನ ಪ್ರಮಾಣ (ಲೀ. ನಲ್ಲಿ) ಮತ್ತು ಲೆಕ್ಕಾಚಾರದ ವಿವರಗಳು ಲಭ್ಯವಿಲ್ಲ

ಸಾರಿಗೆ ವ್ಯವಸ್ಥೆಯನ್ನು ಬಳಸುತ್ತಾರೆ ಎಂಬುದನ್ನು ಹೊರಗೆಡಹಿತು. ಸಾರಿಗೆ ಸೇವೆಗಳ ಲಭ್ಯತೆ ಮತ್ತು ಗುಣಮಟ್ಟವು ಉತ್ತಮವಾಗಿದೆ ಎಂದು ಕಂಡುಬರುತ್ತದೆ ಆದರೆ ಸುಧಾರಣೆಗೆ ಇನ್ನೂ ಬಹಳ ಅವಕಾಶವಿದೆ.

## 11.4 ನೀರು ಸರಬರಾಜು ಮತ್ತು ಘನ ತ್ಯಾಜ್ಯ ನಿರ್ವಹಣೆ

ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲೂ ನೀರು ಸರಬರಾಜಿನ ಮೂಲ ಅಂತರ್ಜಲವಾಗಿದೆ. ಕೇಂದ್ರ ಅಂತರ್ಜಲ ಮಂಡಳಿ ವರದಿ (2013) ಹೇಳುವಂತೆ, ಜಿಲ್ಲೆಯ ಎಲ್ಲಾ ತಾಲೂಕುಗಳು ಮಿತಿಮೀರಿದ ಅಂತರ್ಜಲ ಬಳಕೆ ಮಾಡಿವೆ. ಆದರೂ, ಬೆಂಗಳೂರು ಗ್ರಾಮಾಂತರದ ಒಂದು ನಗರ ಸ್ಥಳೀಯ ಸಂಸ್ಥೆಯೂ ನೀರು ಸರಬರಾಜಿನ ಸೂಚಿತ ಮಾನದಂಡವಾದ 142 ಲೀಟರಿನ (ಪ್ರತಿದಿನ ಪ್ರತಿವ್ಯಕ್ತಿಗೆ) ಅರ್ಧವನ್ನೂ ತಲುಪಲು ಸಾಧ್ಯವಾಗಿಲ್ಲ, ಅಂದರೆ ಇದು ಕುಡಿಯುವ ನೀರಿನ ಅಭಾವವನ್ನು ಸೂಚಿಸುತ್ತದೆ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಾಸಿಕ ನೀರಿನ ಶುಲ್ಕಗಳು, ಕೌಟುಂಬಿಕ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ, ಅನುಕ್ರಮವಾಗಿ ರೂ 80 ಮತ್ತು ರೂ 160 ಇದ್ದು, ದೊಡ್ಡಬಳ್ಳಾಪುರ ನಗರಸಭೆಯಲ್ಲಿ ಮಾತ್ರ ಅನುಕ್ರಮವಾಗಿ ರೂ 120 ಮತ್ತು ರೂ 240 ಇವೆ. ಸಂಪರ್ಕಗಳ ಸಂಖ್ಯೆಯು ದೊಡ್ಡಬಳ್ಳಾಪುರದಲ್ಲಿ ಹೆಚ್ಚಾಗಿದ್ದು, ಅತಿ ಕಡಿಮೆ ವಿಜಯಪುರದಲ್ಲಿದೆ. 2009-10 ನಿಂದ 2011-12[59] ವರೆಗೆ ಬೇಡಿಕೆಗೆ ಅನುಗುಣವಾಗಿ ನೀರು ಸರಬರಾಜಿನಿಂದ ಬಂದ ಆದಾಯವು ದೇವನಹಳ್ಳಿಯಲ್ಲಿ ಹೆಚ್ಚಾಗಿದ್ದಿತು.

**ಕೋಷ್ಟಕ 11.5: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರು ಸರಬರಾಜು (2011–2012)**

| ನಗರ ಸ್ಥಳೀಯ ಸಂಸ್ಥೆ | ದಶ ಲಕ್ಷ ಲೀ.ಗಳಲ್ಲಿ | ಪ್ರತಿದಿನ ಪ್ರತಿವ್ಯಕ್ತಿಗೆ ಲೀ. ಗಳಲ್ಲಿ[60] | ಕುಟುಂಬಗಳ ಸಂಖ್ಯೆ | ನೀರು ಸಂಪರ್ಕಗಳ ಸಂಖ್ಯೆ | ಸಾರ್ವಜನಿಕ ನಲ್ಲಿಗಳು | ನೀರು ಸರಬರಾಜಿನ ಆವರ್ತನ |
|---|---|---|---|---|---|---|
| ದೇವನಹಳ್ಳಿ | 3.45 | 70 | 5,969 | 1,496 | 25 | ಕುಡಿಯುವ ನೀರು– 4 ದಿನಗಳಿಗೊಮ್ಮೆ ಮತ್ತು ಇತರ ಬಳಕೆಯ ನೀರು 2 ದಿನಗಳಿಗೊಮ್ಮೆ |
| ವಿಜಯಪುರ | 1.89 | 57 | 7,924 | 1,768 | 683 | ವಾರಕ್ಕೆ 2 ದಿನಗಳು: 60 ನಿಮಿಷಗಳು |
| ದೊಡ್ಡಬಳ್ಳಾಪುರ | 4.84 | 57 | 21,937 | 9,984 | 1,050 | ವಾರಕ್ಕೆ 2 ದಿನಗಳು: 45 ನಿಮಿಷಗಳು |
| ಹೊಸಕೋಟೆ | 2.70 | 35 | 13,091 | 4,404 | 50 | ವಾರಕ್ಕೆ 3 ದಿನಗಳು: 60 ನಿಮಿಷಗಳು |
| ನೆಲಮಂಗಲ | 1.30 | 65 | 8,797 | 2947 | 100 | ವಾರಕ್ಕೆ 4 ದಿನಗಳು: 60 ನಿಮಿಷಗಳು |
| ಒಟ್ಟು | 14.18 | 57 | 57,718 | 20,599 | 1,908 | |

ಮೂಲ: ಜಿಲ್ಲಾ ನಗರ ಅಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಕೋಷ್ಟಕ 11.6: ಸರಾಸರಿ ನೀರಿನ ಶುಲ್ಕಗಳು (2009–2012)**

| ನಗರ ಸ್ಥಳೀಯ ಸಂಸ್ಥೆ | ಬೇಡಿಕೆ (ರೂ ಲಕ್ಷಗಳಲ್ಲಿ) | ಸಂಗ್ರಹಣೆ (ರೂ ಲಕ್ಷಗಳಲ್ಲಿ) |
|---|---|---|
| ದೇವನಹಳ್ಳಿ | 14.11 | 12.84 |
| ವಿಜಯಪುರ | 9.00 | 3.78 |
| ದೊಡ್ಡಬಳ್ಳಾಪುರ | 52.22 | 19.81 |
| ಹೊಸಕೋಟೆ | 25.00 | 10.10 |
| ನೆಲಮಂಗಲ | 19.97 | 12.48 |
| ಒಟ್ಟು | 120.30 | 59.01 |

ಮೂಲ: ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಚಿತ್ರ 11.10: ನೀರಿನ ಸಂಪರ್ಕದ ಶೇಕಡಾವಾರು ಮತ್ತು ನೀರಿನ ಶುಲ್ಕದ ಸಂಗ್ರಹಣೆಯ ಪ್ರಮಾಣ (2011–2012)**




ಮೂಲ: ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಗಳಲ್ಲಿ ಘನತ್ಯಾಜ್ಯ ನಿರ್ವಹಣೆಯು, ರಸ್ತೆಗಳನ್ನು ಗುಡಿಸುವುದು, ಕಸದಬುಟ್ಟಿಗಳಿಂದ ತ್ಯಾಜ್ಯವನ್ನು ಸಂಗ್ರಹಿಸುವುದು ಮತ್ತು ಮನೆಗಳಿಂದ ತ್ಯಾಜ್ಯವನ್ನು ಸಂಗ್ರಹಿಸುವುದಕ್ಕೆ ಸೀಮಿತವಾಗಿವೆ. ಗುಡಿಸುವ ಆವರ್ತನವನ್ನು ಆಧರಿಸಿ ರಸ್ತೆಗಳನ್ನು ಎ, ಬಿ ಮತ್ತು ಸಿ ಎಂದು ವರ್ಗೀಕರಿಸಲಾಗಿದ್ದು, ಎ ವರ್ಗವನ್ನು ಹೆಚ್ಚು ಆವರ್ತನದಲ್ಲಿ ಗುಡಿಸಬೇಕಿದೆ. ಇಡೀ ನಗರಕ್ಕೆ ಅಥವಾ ಅದರ ಭಾಗಗಳಿಗೆ ರಸ್ತೆ ಗುಡಿಸುವ ಕಾರ್ಯವನ್ನು ಸಂಸ್ಥೆಗಳಿಗೆ ಹೊರಗುತ್ತಿಗೆ ನೀಡಲಾಗಿದೆ. ಘನತ್ಯಾಜ್ಯವನ್ನು, ಪಟ್ಟಣದ ಹೊರಗಿರುವ ಲ್ಯಾಂಡ್ ಫಿಲ್ ಸ್ಥಳಕ್ಕೆ ರವಾನಿಸಲಾಗುತ್ತಿದೆ. ಉತ್ಪತ್ತಿಯಾದ ಎಲ್ಲಾ ಘನತ್ಯಾಜ್ಯವನ್ನು ಸಂಗ್ರಹಿಸುತ್ತಿಲ್ಲ ಮತ್ತು ಯಾವುದೇ ಪಟ್ಟಣಗಳಲ್ಲಿ ಇದರ ವೈಜ್ಞಾನಿಕ ಸಂಸ್ಕರಣೆಯಾಗುತ್ತಿರುವುದಿಲ್ಲ. ಕೇವಲ 3 ಪಟ್ಟಣಗಳಲ್ಲಿ ಮಾತ್ರ ಕುಟುಂಬದ ಮಟ್ಟದಲ್ಲಿ ಘನತ್ಯಾಜ್ಯದ ವಿಂಗಡಣೆಯಾಗಿತ್ತಲಿದ್ದು, ಹೀಗೆ ಮನೆಯ ಘನತ್ಯಾಜ್ಯವನ್ನು ವಿಂಗಡಣೆ ಮಾಡುವ ಕುಟುಂಬಗಳ ಸಂಖ್ಯೆಯು ದೇವನಹಳ್ಳಿಯಲ್ಲಿ ಹೆಚ್ಚಾಗಿದೆ. ಉತ್ಪತ್ತಿಯಾದ ಘನ ತ್ಯಾಜ್ಯದ ಶೇ. 20 ರಷ್ಟನ್ನು ಲ್ಯಾಂಡ್ ಫಿಲ್‌ಗೆ ರವಾನಿಸಲಾಗುವುದಿಲ್ಲ (ಕೋಷ್ಟಕ 11.7). ವಿಜಯಪುರ ಪಟ್ಟಣದಲ್ಲಿ ಮಾತ್ರ ಒಳಚರಂಡಿ ವ್ಯವಸ್ಥೆಯಿದೆ. ಈ ಜಿಲ್ಲೆಯ ಪಟ್ಟಣಗಳಲ್ಲಿ ಒಳಚರಂಡಿ ನೀರಿನ ಸಂಸ್ಕರಣಾ ಘಟಕಗಳಿಲ್ಲ ಮತ್ತು ದ್ರವತ್ಯಾಜ್ಯದ ವೈಜ್ಞಾನಿಕ ವಿಲೇವಾರಿಯನ್ನು ಇನ್ನೂ ಆರಂಭಿಸಬೇಕಿದೆ.

**ಕೋಷ್ಟಕ 11.7: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ (2011–2012)**

| ನಗರ ಸ್ಥಳೀಯ ಸಂಸ್ಥೆ | ಘನತ್ಯಾಜ್ಯ (ಟನ್ ಗಳು ಪ್ರತಿ ದಿನ) | | ಲ್ಯಾಂಡ್ ಫಿಲ್ ಸ್ಥಳ | ಘನತ್ಯಾಜ್ಯವನ್ನು ವಿಂಗಡಿಸುತ್ತಿರುವ ಕುಟುಂಬಗಳ ಸಂಖ್ಯೆ |
|---|---|---|---|---|
| | ಉತ್ಪಾದನೆ | ಸಂಗ್ರಹಣೆ | | |
| ದೇವನಹಳ್ಳಿ | 14 | 12 | ಇದೆ | 4,165 |
| ವಿಜಯಪುರ | 14 | 12 | ಇಲ್ಲ | 1,200 |
| ದೊಡ್ಡಬಳ್ಳಾಪುರ | 38 | 30 | ಇದೆ | 7,000 |
| ಹೊಸಕೋಟೆ | 20 | 14 | ಇದೆ | 0 |
| ನೆಲಮಂಗಲ | 14 | 12 | ಇದೆ | 0 |
| ಒಟ್ಟು | 100 | 80 | | 12,365 |

ಟಿಪ್ಪಣಿ: ದೇವನಹಳ್ಳಿ ಮತ್ತು ಹೊಸಕೋಟೆಗಳಲ್ಲಿ ಲ್ಯಾಂಡ್ ಫಿಲ್ ಸ್ಥಳಗಳನ್ನು ನಿಗದಿಪಡಿಸಲಾಯಿತು, ಆದರೆ ಈ ಸ್ಥಳಗಳ ಕಾರ್ಯಾಚರಣೆಗೆ ಮಾಲಿನ್ಯ ನಿಯಂತ್ರಣ ಮಂಡಳಿ ತಡೆಯೊಡ್ಡಿತು. ಆದ್ದರಿಂದ ಈ ಸ್ಥಳಗಳು ಕಾರ್ಯಾಚರಣೆಯಲ್ಲಿಲ್ಲ.

ಮೂಲ: ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ತಮ್ಮ ಜನತೆಗೆ ಸಮನಾದ ಮುನಿಸಿಪಲ್ ಸೇವೆಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಾಚರಣೆಯ ಮಾಪನ ಮಾಡಲು ಕೊಳಗೇರಿ ಪ್ರದೇಶಗಳಲ್ಲಿ ಮುನಿಸಿಪಲ್ ಸೇವೆಗಳ ಪರಿವೀಕ್ಷಣೆ ಮಾಡಲಾಯಿತು. ಜಿಲ್ಲೆಯಲ್ಲಿ ಸುಮಾರು 42,000 ಜನರು ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದು, ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆ ಜನಸಂಖ್ಯೆಯ ಶೇ 17 ಇದಾಗಿದ್ದು, ಅತಿ ಹೆಚ್ಚು ಸಂಖ್ಯೆಯು ದೊಡ್ಡಬಳ್ಳಾಪುರದಲ್ಲಿ ಮತ್ತು ಅತಿ ಕಡಿಮೆ ನೆಲಮಂಗಲ ಪಟ್ಟಣದಲ್ಲಿದೆ (ಚಿತ್ರ 11.11). ಕೊಳೆಗೇರಿಯ ಜನಸಂಖ್ಯೆಯ ಮತ್ತು ಸೇವೆಗಳ ಮೇಲಿನ ದತ್ತಾಂಶವು (ಕೋಷ್ಟಕ 11.8) ಬಹಳ ಅಸ್ಪಷ್ಟವಾಗಿ ಮತ್ತು ಗೊಂದಲಮಯವಾಗಿದೆ,[61] ಮತ್ತು ಕೊಳೆಗೇರಿಗಳಲ್ಲಿ ಪ್ರತ್ಯೇಕ ನೀರಿನ ಸಂಪರ್ಕ, ರಸ್ತೆಗಳು, ಚರಂಡಿಗಳು ಮತ್ತು ಪ್ರತ್ಯೇಕ ಶೌಚಾಲಯಗಳ ಬಗ್ಗೆ ದತ್ತಾಂಶವು ಲಭ್ಯವಾಗಿದ್ದರೂ, ಅವು ಆಂತರಿಕವಾಗಿ ಎಷ್ಟು ಅಸಮಂಜಸವಾಗಿದೆಯೆಂದರೆ, ಅವನ್ನು ಪರಿಶೀಲಿಸಲು ಸಾಧ್ಯವಾಗಲ್ಲ.[62]

ಚಿತ್ರ 11.11: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೊಳೆಗೇರಿ ಜನಸಂಖ್ಯೆ ಮತ್ತು ಅದರ ಪಾಲು (2011–2012)




ಮೂಲ: ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ

**ಕೋಷ್ಟಕ 11.8: ನಗರ ಸ್ಥಳೀಯ ಸಂಸ್ಥೆಗಳ ಕೊಳೆಗೇರಿ ಪ್ರದೇಶಗಳಲ್ಲಿ ನಾಗರಿಕ ಸೇವೆಗಳ ವಿವರ (2011–2012)**

| ನಗರ ಸ್ಥಳೀಯ ಸಂಸ್ಥೆ | ನೀರಿನ ಸಂಪರ್ಕಗಳು (ಸಂಖ್ಯೆ) | ಸಾರ್ವಜನಿಕ ನಲ್ಲಿಗಳು (ಸಂಖ್ಯೆ) | ರಸ್ತೆಯ ಉದ್ದ (ಕಿಮೀ) | ಶೌಚಾಲಯ ಗಳು (ಸಂಖ್ಯೆ) |
|---|---|---|---|---|
| ದೇವನಹಳ್ಳಿ | 22 | 591 | – | 412 |
| ವಿಜಯಪುರ | 65 | 1,031 | – | 398 |
| ದೊಡ್ಡಬಳ್ಳಾಪುರ | 600 | 450 | 20 | 90 |
| ಹೊಸಕೋಟೆ | – | 38 | 6 | 123 |
| ನೆಲಮಂಗಲ | 250 | 160 | – | 100 |
| ಒಟ್ಟು | 937 | 2,270 | 26 | 1,123 |

ಮೂಲ: ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ (–ಮಾಹಿತಿ ಇಲ್ಲ)

ನಾಗರಿಕರಿಗೆ ನಗರದ ಸೇವೆಗಳನ್ನು ಒದಗಿಸುವ ಜೊತೆಗೆ, ನಗರ ಸ್ಥಳೀಯ ಸಂಸ್ಥೆಗಳು ಸ್ಥಳೀಯ ತೆರಿಗೆಗಳನ್ನು ಮತ್ತು ಶುಲ್ಕಗಳನ್ನು ದಕ್ಷತೆಯಿಂದ ಕ್ರೋಡೀಕರಿಸಬೇಕಾಗಿರುವುದು. ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯು ನಾಗರಿಕ ಸೇವೆಗಳನ್ನು ನೀಡುವುದರ ಮೇಲೆ ಪ್ರಭಾವವನ್ನು ಬೀರುತ್ತದೆ. ಹದಿಮೂರನೆಯ ಹಣಕಾಸು ಆಯೋಗದ ಲೆಕ್ಕದ ಪ್ರಕಾರ, ಭಾರತದಲ್ಲಿ ನಗರ ಸ್ಥಳೀಯ ಸಂಸ್ಥೆಗಳು ದೇಶದ ಆಂತರಿಕ ಉತ್ಪನ್ನದ ಶೇ.1.24ರಷ್ಟನ್ನು ನಾಗರೀಕ ಸೇವೆಗಳ ಪೂರೈಕೆಗಾಗಿ ಖರ್ಚುಮಾಡುತ್ತಿದ್ದು, ಅದರ ಆದಾಯಗಳಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರಗಳ ಅನುದಾನವೂ ಸೇರಿದಂತೆ ದೇಶದ ಆಂತರಿಕ ಉತ್ಪನ್ನದ ಶೇ.1.16ರಷ್ಟಿದೆ. ಹದಿಮೂರನೆಯ ಹಣಕಾಸು ಆಯೋಗವು ದೇಶದಲ್ಲಿ ನಗರಾಭಿವೃದ್ಧಿಯ ಪರಿಸ್ಥಿತಿಯನ್ನು ಸುಧಾರಿಸಲು, ರಾಜ್ಯಗಳಿಗೆ ರೂ.8000 ಕೋಟಿಗಳ ಸಾಧನಾಧಾರಿತ ಅನುದಾನವನ್ನು ನೀಡುತ್ತಿದೆ. ಈ ಅನುದಾನವನ್ನು ಬಳಸಿಕೊಳ್ಳಲು ನಗರಾಡಳಿತದಲ್ಲಿ ಸುಧಾರಣೆಯನ್ನು ಮಾಡಬೇಕಾಗಿರುತ್ತದೆ. ಇವೆಂದರೆ ಮುಖ್ಯಮಹಾಲೇಖಪಾಲರ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ, ಶಾಸಕಾಂಗ ಸಭೆಯಲ್ಲಿ ಈ ಲೆಕ್ಕಪರಿಶೋಧನೆಯ ವರದಿಯನ್ನು ಮಂಡಿಸುವುದು, ರಾಜ್ಯ ಮಟ್ಟದಲ್ಲಿ ಆಸ್ತಿತೆರಿಗೆ ಮಂಡಳಿಯನ್ನು ಸ್ಥಾಪಿಸಿ[63] ಆಸ್ತಿತೆರಿಗೆಯ ದಕ್ಷ ಸಂಗ್ರಹಣೆಯನ್ನು ಸಾಧ್ಯಗೊಳಿಸುವುದು ಮತ್ತು ಸ್ಥಳೀಯ ಸಂಸ್ಥೆಗಳು ಎಲ್ಲಾ ಅಗತ್ಯ ಸೇವೆಗಳ (ನೀರು ಸರಬರಾಜು, ಒಳಚರಂಡಿ, ಮಳೆ ನೀರು ಕಾಲುವೆ ಮತ್ತು ಘನತ್ಯಾಜ್ಯ ನಿರ್ವಹಣೆ) ಒದಗಣೆಗೆ ಮಾನದಂಡಗಳನ್ನು ರೂಪಿಸುವುದು ಆಗಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಹದಿಮೂರನೆಯ ಹಣಕಾಸು ಆಯೋಗದ ಅನುದಾನವು ನಿರ್ಣಾಯಕವಾಗಿದ್ದರೂ, ಅದರ ಲಭ್ಯತೆಯು ಶಾಸನಬದ್ಧ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದ್ದು, ಜನಗಣತಿ ಗುರುತಿಸುವ ಸುಮಾರು 3900 ಪಟ್ಟಣಗಳನ್ನು ಒಳಗೊಂಡಿಲ್ಲ ಮತ್ತು ಇವು ದೇಶದ ನಗರ ಜನಸಂಖ್ಯೆಯ ಶೇ. 10-12ರಷ್ಟಿದ್ದು ಪಟ್ಟಣಗಳಿಗೆ ಅನ್ವಯವಾಗುವ ಕಾನೂನುಗಳಿಂದ ಅವುಗಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ನಿಯಂತ್ರಿಸದಿದ್ದರೆ, ಅವು ಕೊಳೆಗೇರಿಗಳಾಗುವ ಸಂಭವವಿದೆ (ಮಾಥುರ್ 2013).

ಆಸ್ತಿತೆರಿಗೆ ಸಂಗ್ರಹಣೆಯ ಮಾನದಂಡವು ಸೂಚಿಸುವಂತೆ, ಸಂಗ್ರಹಣೆಯು ಕನಿಷ್ಠ ಶೇ. 90ರಷ್ಟು ಇರಬೇಕಾಗಿದೆ. ಆಸ್ತಿತೆರಿಗೆಯ ಮೂರು ವರ್ಷಗಳ ದತ್ತಾಂಶದ ಪರಿಶೀಲನೆಯು ನೆಲಮಂಗಲ ಪುರಸಭೆಯು ಮಾತ್ರ ಸಂಗ್ರಹಣೆಯ ಮಟ್ಟವನ್ನು ಕಾಯ್ದುಕೊಂಡಿದ್ದು, ವಿಜಯಪುರ ಮತ್ತು ದೇವನಹಳ್ಳಿ ಪುರಸಭೆಗಳು ಈ ಮಾನದಂಡಕ್ಕೆ ಬಹಳ ಹತ್ತಿರವಾಗಿವೆ ಹಾಗು ಹೊಸಕೋಟೆ ಮತ್ತು ದೊಡ್ಡಬಳ್ಳಾಪುರಗಳು ತಮ್ಮ ಸಂಗ್ರಹಣೆ ದಕ್ಷತೆಯನ್ನು ಗಣನೀಯವಾಗಿ ಸುಧಾರಿಸಿಕೊಳ್ಳಬೇಕು ಎಂಬುದನ್ನು ಸೂಚಿಸುತ್ತದೆ(ಚಿತ್ರ 11.12). ಆರ್ಥಿಕ ದಕ್ಷತೆಯ ಸೂಚಕವಾಗಿ ಬಳಸುವ ಇನ್ನೊಂದು ಮಾನದಂಡವೆಂದರೆ, ಪ.ಜಾ ಮತ್ತು ಪ.ಪಂ.ಗಳಿಗೆ ಮೀಸಲಿಟ್ಟ ಹಣದ ಬಳಕೆ (ಪ.ಜಾ ಗಳಿಗೆ ಶೇ. 15 ರಷ್ಟು ಮತ್ತು ಪ.ಪಂ.ಗಳಿಗೆ ಶೇ.7.75ರಷ್ಟು ಇವೆರಡೂ ಸೇರಿ ಬಜೆಟ್‌ನ ಶೇ.22.75 ರಷ್ಟು). ಜಿಲ್ಲೆಯು ಈ ಅಂಶದಲ್ಲಿ ಬಹಳ ಕಳಪೆ ಸಾಧನೆ ಮಾಡಿದೆ ಏಕೆಂದರೆ, 3 ವರ್ಷಗಳ ದತ್ತಾಂಶ ಸೂಚಿಸುವಂತೆ, ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳನ್ನೂ ಒಟ್ಟಿಗೆ ಸೇರಿಸಿದರೆ, ಪ.ಜಾ ಮತ್ತು ಪ.ಪಂ.ಗಳ ನಿಧಿಯಲ್ಲಿ ಶೇ.42ರಷ್ಟನ್ನು ಬಳಸಲಾಗಿಲ್ಲ (ಚಿತ್ರ 11.13). ಹೊಸಕೋಟೆಯಲ್ಲಿ ಈ ಬಳಕೆಯು ಅತಿ ಕಡಿಮೆಯಿದ್ದು, ದೊಡ್ಡಬಳ್ಳಾಪುರದಲ್ಲಿ ಹೆಚ್ಚಾಗಿದ್ದಿತು.

ಚಿತ್ರ 11.12: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿತೆರಿಗೆ ಬೇಡಿಕೆ ಮತ್ತು ಸಂಗ್ರಹಣೆ (2011–2012)




ಮೂಲ: ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಚಿತ್ರ 11.13: : ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಪ.ಜಾ/ಪ.ಪಂ. ಗಳ ನಿಧಿಯ ಬಳಕೆ (2011–

61 ವೆಬ್ ಸೈಟ್‌ಗಳಲ್ಲಿರುವ ಇತರ ಪುಟಗಳಲ್ಲಿನ ಮಾಹಿತಿ ಹಾಗೂ ಇತರ ದಾಖಲೆಗಳಿಗೆ ತದ್ವಿರುದ್ಧವಾಗಿದೆ. ಕೊಳಗೇರಿ ಹಾಗೂ ಕುಟುಂಬಗಳ ವಿಸ್ತೀರ್ಣ ಕುರಿತ ದತ್ತಾಂಶಗಳು ಲಭ್ಯವಿದ್ದರೂ ಅವು ಆಂತರಿಕವಾಗಿ ಒಂದೇ ರೀತಿ ಇಲ್ಲ.

62 ಉದಾಹರಣೆಗೆ, ನ.ಸ್ಥ.ಸಂ.ಗಳಲ್ಲಿರುವ ಒಟ್ಟು ಸಂಖ್ಯೆಯ ಸಾರ್ವಜನಿಕ ನಲ್ಲಿಗಳಿಗಿಂತ ಕೊಳಗೇರಿಯಲ್ಲಿರುವ ಸಾರ್ವಜನಿಕ ನಲ್ಲಿ ಸಂಖ್ಯೆ ಹೆಚ್ಚಾಗಿದೆ.

63 ತೆರಿಗೆ ನಿರ್ಧಾರಣೆಗೆ ಸ್ವತಂತ್ರ ಹಾಗೂ ಪಾರದರ್ಶಕ ಕಾರ್ಯವಿಧಾನವನ್ನು ಸ್ಥಾಪಿಸುವಲ್ಲಿ ಆಸ್ತಿತೆರಿಗೆ ಮಂಡಲಿಯು ಸಹಾಯ ಮಾಡಬೇಕೆನ್ನುವ ನಿರೀಕ್ಷೆ ಇದೆ.

2012)




ಮೂಲ: ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಈ ಹಿಂದೆಯೇ ಚರ್ಚಿಸಿದಂತೆ, ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅವುಗಳ ಸಾಧನೆಗೆ ಶ್ರೇಣಿಯನ್ನು ನೀಡಲಾಗುತ್ತದೆ. ನೀರು ಸರಬರಾಜು, ಘನತ್ಯಾಜ್ಯ ಮತ್ತು ದ್ರವತ್ಯಾಜ್ಯದ ನಿರ್ವಹಣೆ, ರಸ್ತೆಗಳು, ಬೀದಿದೀಪಗಳು, ಹಣಕಾಸು ನಿರ್ವಹಣೆ ಮೊದಲಾದ ಸೂಚಕಗಳನ್ನು ಬಳಸಿ ಈ ನಗರ ಸ್ಥಳೀಯ ಸಂಸ್ಥೆಗಳ ಸಾಧನೆಯನ್ನು ಅಳೆಯುವ ಉದ್ದೇಶಕ್ಕೆ ಪರಿಗಣಿಸಲಾಗುತ್ತುದೆ ಮತ್ತು ನಗರ ಸ್ಥಳೀಯ ಸಂಸ್ಥೆಯ ಸೇವೆಗಳ ಮಾನದಂಡಕ್ಕೆ ಹೋಲಿಸಿ ಸಾಧನೆಯನ್ನು ರಾಜ್ಯಮಟ್ಟದಲ್ಲಿ ಶ್ರೇಣಿಗಾಗಿ ಪರಿಗಣಿಸಲಾಗುತ್ತದೆ. 2008-09 ಮತ್ತು 2009-10 ವರ್ಷಗಳಿಗೆ ಲಭ್ಯವಿರುವ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಶ್ರೇಣಿಯನ್ನು (ರಾಜ್ಯದ 213 ನಗರ ಸ್ಥಳೀಯ ಸಂಸ್ಥೆಗಳಲ್ಲಿ) ಇಲ್ಲಿ ಪ್ರಸ್ತುತಪಡಿಸಲಾಗಿದೆ.[64] ದೇವನಹಳ್ಳಿ, ಹೊಸಕೋಟೆ ಮತ್ತು ದೊಡ್ಡಬಳ್ಳಾಪುರ ತಮ್ಮ ಶ್ರೇಣಿಯಲ್ಲಿ ಇಳಿಕೆಯನ್ನು ಕಂಡಿದ್ದರೆ, ವಿಜಯಪುರ ಮತ್ತು ನೆಲಮಂಗಲ ಪಟ್ಟಣಗಳು ತಮ್ಮ ಶ್ರೇಣಿಯನ್ನು ಸುಧಾರಿಸಿವೆ.

**ಕೋಷ್ಟಕ 11.9: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಶ್ರೇಣಿ**

| ನಗರ ಸ್ಥಳೀಯ ಸಂಸ್ಥೆ | 2008–2009 | 2009–2010 | ಶ್ರೇಣಿಯಲ್ಲಿ ಬದಲಾವಣೆ |
|---|---|---|---|
| ದೇವನಹಳ್ಳಿ | 94 | 199 | –105 |
| ವಿಜಯಪುರ | 117 | 47 | 70 |
| ದೊಡ್ಡಬಳ್ಳಾಪುರ | 149 | 184 | –35 |
| ಹೊಸಕೋಟೆ | 57 | 127 | –70 |
| ನೆಲಮಂಗಲ | 153 | 78 | 75 |

ಮೂಲ: ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ

## 11.5 ತಾತ್ಪರ್ಯ

ಸಣ್ಣ ಮತ್ತು ಮಧ್ಯಮ ಗಾತ್ರದ ಪಟ್ಟಣಗಳನ್ನು ಕಾಡುವ ಸಾಮಾನ್ಯ ಸಮಸ್ಯೆಗಳೆಂದರೆ ಹಣಕಾಸು ಮತ್ತು ಯೋಜನಾ ಸಾಮರ್ಥ್ಯದ ಅಭಾವ. ನಗರ ಸ್ಥಳೀಯ ಸಂಸ್ಥೆಗಳು ಕಡಿಮೆ ಸಾಮರ್ಥ್ಯ, ಕಳಪೆ ಯೋಜನೆ ಮತ್ತು ಸೇವೆಗಳ ಕಳಪೆ ಗುಣಮಟ್ಟದ ವಿಷವರ್ತುಲದಲ್ಲಿ ಸಿಕ್ಕುಹಾಕಿಕೊಂಡು, ಆಸ್ತಿತೆರಿಗೆ ಮತ್ತು ಶುಲ್ಕಗಳ ಕಡಿಮೆಯಾದ ಸಂಗ್ರಹಣೆಗೆ ದಾರಿಮಾಡಿಕೊಟ್ಟು, ಪುನಃ ಸೇವೆಗಳ ಗುಣಮಟ್ಟದ ಮೇಲೆ ಪ್ರಭಾವ ಉಂಟುಮಾಡುತ್ತವೆ (ಕಲ್ಪನಾ ಶರ್ಮ 2012). ಇಂತಹ ಪರಿಸ್ಥಿತಿಯಲ್ಲಿ, ವ್ಯತಿರಿಕ್ತ ಪರಿಣಾಮ ಎದುರಿಸುವ ಜನರು ಬಡವರಾಗಿದ್ದು, ಇವರಲ್ಲಿ ಮಹಿಳೆಯರು ಮತ್ತು ಸಮಾಜದ ದುರ್ಬಲ ವರ್ಗಗಳು ಹೆಚ್ಚಾಗಿದ್ದು, ಇವರಿಗೆ ಯೋಜನೆಗಳ ಬಗ್ಗೆ ಜಾಗೃತಿಯೂ ಇಲ್ಲ, ಮತ್ತು ನಾಗರಿಕ ಸೇವೆಗಳನ್ನು ಪಡೆಯುವ ಪ್ರಕ್ರಿಯೆಗಳ ಮತ್ತು ಕ್ರಮಗಳ ಅನುಸರಿಸುವ ಶಕ್ತಿಯೂ ಇಲ್ಲ. ಈ ವಿಷಯದಲ್ಲಿ ಬೆಂಗಳೂರು ಗ್ರಾಮಂತರ ಜಿಲ್ಲೆಯ ಪರಿಸ್ಥಿತಿಯು ಭಿನ್ನವಾಗಿಲ್ಲ. ಆದರೆ ಇದರ ಬಹಳಷ್ಟು ಸಮಸ್ಯೆಗಳು ಬೆಂಗಳೂರು ನಗರಕ್ಕೆ ಹತ್ತಿರವಿರುವುದರಿಂದಲೂ ಉಂಟಾಗುತ್ತಿದೆ.

ಬೆಂಗಳೂರು ನಗರಕ್ಕೆ ಹತ್ತಿರವಿರುವುದು, ಹೆಚ್ಚು ಕೈಗಾರೀಕರಣಗೊಂಡ ತಾಲೂಕುಗಳು ಮತ್ತು ನಿರಂತರವಾಗಿ ವಿಸ್ತರಿಸುತ್ತಿರುವ ನಗರ ಪ್ರದೇಶಗಳಿಂದ, ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು ಸುಸ್ಥಿರ ನಗರಾಭಿವೃದ್ಧಿ ಕ್ರಮಗಳನ್ನು ಪರಿಗಣಿಸುವ ಬದಲಿಗೆ ಸಮರ್ಪಕ ನಾಗರಿಕ ಸೇವೆಗಳ ತಾತ್ಕಾಲಿಕ ಸರಬರಾಜಿಗಾಗಿ ಒತ್ತಡವನ್ನು ಎದುರಿಸುತ್ತಿವೆ. ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಕುರಿತಾದ ಹೆಚ್ಚಿನ ಸಂಶೋಧನೆಯ ಅಗತ್ಯವಿದ್ದು, ಅವುಗಳನ್ನು ಪರಿಸರಕ್ಕೆ ಪೂರಕವಾದ ಸುಸ್ಥಿರ ನಗರ ಪ್ರದೇಶಗಳನ್ನಾಗಿ ಪರಿವರ್ತಿಸಬೇಕಿದೆ. ನಗರೀಕರಣದ ಸಮಸ್ಯೆಗಳನ್ನು ಅಭ್ಯಸಿಸಲು ಮತ್ತು ಸೇವೆಗಳಲ್ಲಿ ಉದ್ದೇಶಿತ ಪ್ರಯತ್ನಗಳನ್ನೊಳಗೊಂಡ ಪ್ರಯೋಗ ನಡೆಸಲು ಸಣ್ಣ ಪಟ್ಟಣಗಳು ಉತ್ತಮ ತಾಣವಾಗಿವೆ (ಕಲ್ಪನಾ ಶರ್ಮ 2012). ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಇನ್ನೂ ಪ್ರಸ್ತುತವಾಗಿವೆ. ಬೃಹತ್‌ನಗರಕ್ಕೆ ಹತ್ತಿರವಿರುವುದರಿಂದ ಉಂಟಾಗುವ ವಿಪುಲ ಅಭಿವೃದ್ಧಿ ಅವಕಾಶಗಳನ್ನು ಬಳಸಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಅದೇ ರೀತಿ ನಗರದ ಸಾಮೀಪ್ಯದಿಂದ ಉಂಟಾಗುವ ಅಪಾಯಗಳನ್ನು, ಸುಸ್ಥಿರ ಅಭಿವೃದ್ಧಿಯ ತೊಡಕುಗಳನ್ನು ಕಡಿಮೆಗೊಳಿಸುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ತನ್ನ ನಗರಪ್ರದೇಶಗಳ ಯೋಜನೆ ಮಾಡಬೇಕಿದೆ. ಜಿಲ್ಲೆಯು ಭವಿಷ್ಯದಲ್ಲಿ ಉದ್ಭವಿಸಬಲ್ಲ ಸಮಸ್ಯೆಗಳನ್ನೂ, ಅವು ಪೂರ್ಣವಾಗಿ ಬೆಳೆಯುವವರೆಗೂ ಕಾಯುವ ಬದಲಿಗೆ, ಮುಂಚಿತವಾಗಿ ಅದನ್ನು ಮನಗಂಡು, ಅದಕ್ಕಾಗಿ ಯೋಜನೆ ಸಿದ್ಧಪಡಿಸಬೇಕು.[65] ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗಾತ್ರದ ಇತರ ಜಿಲ್ಲೆಗಳಿಗೆ ಹೋಲಿಸಿದರೆ, ನಗರೀಕರಣದ ಪ್ರಕ್ರಿಯೆಯು ಕ್ಷಿಪ್ರಗತಿಯಲ್ಲಿ ಸಾಗಲಿದ್ದು, ಅದಕ್ಕಾಗಿ ಹೆಚ್ಚಿನ ಪೂರ್ವಸಿದ್ಧತೆಯ ಅಗತ್ಯವಿದೆ. ಇಂತಹ ಸಂದರ್ಭದಲ್ಲಿ, ಜನರ ಹಾಗು ಸ್ಥಳೀಯ ಸರ್ಕಾರದ ಜಾಗೃತಿ, ಸಾಮರ್ಥ್ಯ ಮತ್ತು ಸಿದ್ಧತೆಯನ್ನು ಹೆಚ್ಚಿಸುವ ಜವಾಬ್ದಾರಿ ನಾಗರಿಕ ಸಮಾಜ ಮತ್ತು ರಾಜ್ಯ ಸರ್ಕಾರದ ಮೇಲೆ ಇದೆ.

64 ಪ್ರತಿ ಸೂಚಕಕ್ಕೆ ಸಂಬಂಧಿಸಿದಂತೆ ನ.ಸ್ಥ.ಸಂ. ಗಳು ಪಡೆದುಕೊಂಡ ಅಂಕಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

65 ಬೆಂಗಳೂರು ನಗರದಲ್ಲಿ ತ್ಯಾಜ್ಯ ವಿಲೇವಾರಿಯ ಸಮಸ್ಯೆ ಒಂದು ಉದಾಹರಣೆಯ ನಿದರ್ಶನ. ನಗರದ ತ್ಯಾಜ್ಯದ ವಿಲೇವಾರಿಗೆ ತಮ್ಮ ಊರಿನ ಸ್ಥಳಗಳು ಕಸದಗುಂಡಿಯಾಗುತ್ತಿರುವುದಕ್ಕೆ ಸಮೀಪದ ಗ್ರಾಮೀಣ ಪ್ರದೇಶಗಳು ಗಂಭೀರ ಅಪಾಯ ಎದುರಿಸುತ್ತಿವೆ ಮತ್ತು ಅದರ ವಿರುದ್ಧ ಪ್ರತಿಭಟಿಸುತ್ತಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಇದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳದಿದ್ದರೆ, ಭವಿಷ್ಯದಲ್ಲಿ ಅದೂ ಇಂತಹುದೇ ಸಮಸ್ಯೆ ಎದುರಿಸಬೇಕಾಗುತ್ತದೆ.

## ಕಿರುಕ್ಷೇತ್ರ ಅಧ್ಯಯನ 3

## ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಭೂ ಬಳಕೆಯಲ್ಲಿನ ಬದಲಾವಣೆಗಳು

### 3.1. ಪ್ರಸ್ತಾವನೆ

ಅಭಿವೃದ್ಧಿಯ ಬೇರೆ ಬೇರೆ ಸಂದರ್ಭಗಳಲ್ಲಿ ಭೂ ಬಳಕೆಯನ್ನು ಬೇರೆ ಬೇರೆ ರೀತಿಯಲ್ಲಿ ವಿವರಿಸಲಾಗುತ್ತದೆ. ಭೂ ಬಳಕೆ ಎಂದರೆ ಯಾವ ಉದ್ದೇಶಕ್ಕಾಗಿ ಭೂಮಿಯನ್ನು ಬಳಸಲಾಗುತ್ತಿದೆ ಅಥವಾ ಬಳಸಬಹುದು ಎಂದು. ಭಾರತದಲ್ಲಿ ಭೂ ಬಳಕೆಯನ್ನು ಬಹುಪಾಲು ವರ್ಗೀಕರಿಸಿರುವುದರ ಮೂಲ 1948ರಲ್ಲಿ ಮಾಡಲಾದ ಭಾರತ ಸರ್ಕಾರದ ಆಹಾರ ಮತ್ತು ಕೃಷಿ ಸಚಿವಾಲಯದ ಕೃಷಿ ಅಂಕಿಸಂಖ್ಯೆಗಳನ್ನು ಸಮನ್ವಯಿಸಿ ಮಾಡಲಾದ ಶಿಫಾರಸುಗಳು. ಇದರಲ್ಲಿ 9 ಶೀರ್ಷಿಕೆಗಳ ಅಡಿಯಲ್ಲಿ ವರ್ಗೀಕರಣ ಮಾಡಲಾಗಿದೆ:

1. ಅರಣ್ಯಗಳು
2. ಬರಡು ಮತ್ತು ಕೃಷಿಗೆ ಯೋಗ್ಯವಲ್ಲದ ಭೂಮಿ
3. ಶಾಶ್ವತ ಗೋಮಾಳಗಳು ಮತ್ತು ಹುಲ್ಲುಗಾವಲುಗಳು
4. ಬಗೆಬಗೆಯ ಮರಗಳು ಮತ್ತು ತೋಪುಗಳು
5. ಸಂಸ್ಕರಿಸಬಹುದಾದ ತ್ಯಾಜ್ಯ/ಕೃಷಿ ಮಾಡಬಹುದಾದ ಬಂಜರು ಭೂಮಿಗಳು
6. ಸಾಗುವಳಿಯಿಲ್ಲದ ಜಮೀನು
7. ಪ್ರಸಕ್ತ ಸಾಗುವಳಿಯಿಲ್ಲದ ಜಮೀನು
8. ನಿವ್ವಳ ಉತ್ತ ಪ್ರದೇಶ
9. ಕೃಷಿಯೇತರ ಬಳಕೆಗಳ ಪ್ರದೇಶ

ತಮ್ಮ ವ್ಯಾಪ್ತಿಯಲ್ಲಿ ಬರುವ ಭೂಮಿಯ ಬಳಕೆಯನ್ನು ನಿಯಂತ್ರಿಸುವ ಯೋಜನಾ ಪ್ರಾಧಿಕಾರಗಳು ಭೂಮಿಯನ್ನು ಅವುಗಳ ಬಳಕೆಗೆ ಅನುಗುಣವಾಗಿ ವರ್ಗೀಕರಿಸುತ್ತವೆ - ನಿವಾಸ, ವಾಣಿಜ್ಯ, ಕೈಗಾರಿಕಾ, ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ, ಸಾರ್ವಜನಿಕ ಉಪಯೋಗಿ, ಮುಕ್ತ ಬಯಲುಗಳು, ಸಾರಿಗೆ ಮತ್ತು ಸಂವಹನ ಮತ್ತು ಕೃಷಿ ಬಳಕೆಗಳ ಭೂಮಿಗಳು. ಈ ವರ್ಗೀಕರಣವನ್ನು zoning (ವಲಯೀಕರಣ) ಎಂದೂ ಕರೆಯುತ್ತೇವೆ. ನಗರೀಕರಣವನ್ನು ನಿಯಂತ್ರಿಸಲು ಮತ್ತು ನಿರ್ದೇಶಿಸಲು ಮುಖ್ಯವಾಗಿ ಈ ವರ್ಗೀಕರಣವನ್ನೇ ಬಳಸಲಾಗುತ್ತದೆ.

ನಗರೀಕರಣ ಪ್ರಕ್ರಿಯೆ ಭೂಮಿಯ ಬಳಕೆಯಲ್ಲಿ ಬದಲಾವಣೆಗಳನ್ನು ತರುತ್ತದೆ ಮತ್ತು ನಗರದ ಸುತ್ತಲಿನ ಭೂಮಿ ನಗರೀಕರಣಕ್ಕೆ ತುತ್ತಾಗುತ್ತದೆ. ಕೆಲಸಗಳು, ಶಿಕ್ಷಣ, ವ್ಯಾಪಾರ ಮತ್ತು ಇತರ ಉದ್ದೇಶಗಳಿಗಾಗಿ ನಗರಕ್ಕೆ ಬರುವವರ ಸಂಖ್ಯೆ ಹೆಚ್ಚುತ್ತ ಹೋದಂತೆ ನಗರದ ಮೇಲೆ ಒತ್ತಡ ಹೆಚ್ಚಿ ವಿಸ್ತರಿಸುವ ಅಗತ್ಯ ನಿರ್ಮಾಣ ಉಂಟಾಗುತ್ತದೆ. ಸತತ ನಗರದ ವಿಸ್ತರಣೆಯು ಸುತ್ತಲಿನ ಭೂಮಿಯ ಮೇಲೆ ಭಾರಿ ಪ್ರಭಾವ ಬೀರುತ್ತದೆ. ಕೃಷಿ ಭೂಮಿಯ ಮೇಲೆ ವಿಶೇಷವಾಗಿ ಭೂ ಮಾರುಕಟ್ಟೆ ಮತ್ತು ರಿಯಲ್ ಎಸ್ಟೇಟ್ ವ್ಯವಹಾರಗಳು ಪ್ರಭಾವ ಬೀರುತ್ತವೆ. ಈ ಜಮೀನುಗಳ ಮೇಲೆ ಭಾರಿ ಹೂಡಿಕೆ ಮಾಡುವುದರಿಂದ ಅನತಿ ಕಾಲದಲ್ಲಿ ಈ ಭೂಭಾಗಗಳ ಬಳಕೆಯ ರೀತಿಯೇ ಬದಲಾಗಿಬಿಡುತ್ತದೆ. ಹೂಡಿಕೆಗಳನ್ನು ನಿರ್ದೇಶಿಸುವಲ್ಲಿ, ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಮತ್ತು ಅಭಿವೃದ್ಧಿಗೆ ಬೇಕಾದ ಕಾರ್ಯನೀತಿ ವಾತಾವರಣ ಒದಗಿಸುವಲ್ಲಿ ಸರ್ಕಾರದ ಪಾತ್ರ ಬಹು ಮುಖ್ಯ. ಕ್ಷಿಪ್ರ ಮತ್ತು ಯೋಜನೆಯಿಲ್ಲದ ನಗರೀಕರಣವು, ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ, ಜನ ಜೀವನದ ಗುಣಮಟ್ಟದ ಮೇಲೆ ಪ್ರಭಾವ ಬೀರುತ್ತದೆ. ಈ ನಗರೀಕರಣದ ಪ್ರಭಾವ ನಗರದ ಎಲ್ಲೆಗಳನ್ನು ಮೀರಿ ಸುತ್ತಮುತ್ತಲ ಪ್ರದೇಶಗಳಿಗೂ ಹರಡುತ್ತದೆ.

ಒಂದು ಪ್ರದೇಶ ನಗರೀಕರಣಗೊಳ್ಳುತ್ತ ಹೋದಂತೆ ಅದರಿಂದ ನಗರದ ಅಂಚಿನಲ್ಲಿರುವ ಪ್ರದೇಶಗಳ ಜನರ ಜೀವನೋಪಾಯಗಳೂ ಪ್ರಭಾವಗೊಳ್ಳುತ್ತವೆ. ಈ ಪ್ರಭಾವಗಳು ಎಲ್ಲರಿಗೂ ಸಮನಾಗಿರುವುದಿಲ್ಲ. ಕೆಲವರಿಗೆ ಲಾಭವಾದರೆ, ಕೆಲವರು ಅಸ್ಥಿರಗೊಳ್ಳುತ್ತಾರೆ. ಈ ಹೊರ ಅಂಚಿನಲ್ಲಿರುವ ಪ್ರದೇಶಗಳು ಅತ್ತ ನಗರವೂ ಅಲ್ಲ, ಇತ್ತ ಗ್ರಾಮವೂ ಅಲ್ಲ ಎನ್ನುವ ಮಧ್ಯಂತರ ಸ್ಥಿತಿಯಲ್ಲಿರುತ್ತದೆ. ನಗರಗಳಲ್ಲಿದ್ದಷ್ಟು ವಿವಿಧ ನಗರ ಸೇವೆಗಳು ಅಲ್ಲಿ ಲಭ್ಯವಿರುವುದಿಲ್ಲ ಮತ್ತು ಗ್ರಾಮೀಣ ಪ್ರದೇಶಗಳಷ್ಟು ಪರಿಸರೀಯ ಸೇವೆಗಳೂ ಅಲ್ಲಿರುವುದಿಲ್ಲ. ಆರ್ಥಿಕ ಅಭಿವೃದ್ಧಿಯ ಕಾರ್ಯನೀತಿಗಳು ಅಂತಹ ಪ್ರದೇಶಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಥವಾ ವಲಯಗಳನ್ನು ರಚಿಸಲು ಸಹಾಯಧನ ನೀಡುತ್ತದೆ. ಇದರಿಂದಾಗಿ ಪ್ರಮುಖ ಕೃಷಿ ಭೂಮಿಗಳು ನಷ್ಟವಾಗುತ್ತವೆ ಇಲ್ಲ ಅದಕ್ಷವಾಗಿ ಬಳಕೆಯಾಗುತ್ತವೆ.

ಇದಕ್ಕೆ ಒಂದು ಉದಾಹರಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಈ ಜಿಲ್ಲೆ ಬೆಂಗಳೂರು ನಗರ ಜಿಲ್ಲೆಯ ಪರಿಧಿಯಲ್ಲಿದೆ, ಅದರ ಉತ್ತರ ಭಾಗವನ್ನು ಸುತ್ತುವರೆದಿದೆ. ಈ ಗ್ರಾಮಾಂತರ ಜಿಲ್ಲೆಯ ತಾಲೂಕುಗಳು ಬೆಂಗಳೂರು ನಗರದ ಕೇಂದ್ರಭಾಗಕ್ಕೆ ಸಮೀಪವಿವೆ ಮತ್ತು, ರಸ್ತೆ ಹಾಗೂ ರೈಲು ಜಾಲಗಳಿಂದ ಸಂಪರ್ಕಗೊಂಡಿವೆ. ಸದ್ಯದ ಈ ಸಂಕ್ಷಿಪ್ತ ಅಧ್ಯಯನವು ಈ ವಿಷಯಗಳ ಬಗ್ಗೆ ಗಮನ ಹರಿಯಿಸುತ್ತದೆ:

ಎ) ಭೂಮಿಯ ಬಳಕೆಯಲ್ಲಿನ ಬದಲಾವಣೆಗಳು ಮತ್ತು ಅದರ ಪ್ರಭಾವ - ಭೂ ಬಳಕೆ ಹೇಗೆ ಬದಲಾಗುತ್ತದೆ, ಸರ್ಕಾರ, ದೊಡ್ಡ ಮತ್ತು ಸಣ್ಣ ಪಾತ್ರಧಾರಿಗಳ ಪಾತ್ರಗಳೇನು, ಇತ್ಯಾದಿ.

ಬಿ) ಈ ಭೂ ಬಳಕೆಯಲ್ಲಿನ, ಮತ್ತು ಕೃಷಿ ಕಾರ್ಮಿಕ ಮಾರುಕಟ್ಟೆಯಲ್ಲಿನ ಬದಲಾವಣೆಗಳಿಂದ ಪ್ರಭಾವಿತರಾಗುವ ಕೃಷಿ ಜಮೀನಿನ ಮಾಲೀಕರ ಅಭಿಪ್ರಾಯಗಳು.

ಭೂ ಬಳಕೆಯಲ್ಲಿನ ಬದಲಾವಣೆಗಳ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸದ್ಯ ಇರುವ ಅಧ್ಯಯನಗಳು ಮತ್ತು ಅಂಕಿ–ಅಂಶಗಳ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಆದರೆ ದೇವನಹಳ್ಳಿ ತಾಲೂಕಿನ ಸವಕನಹಳ್ಳಿ ಮತ್ತು ಕೋಡಿಮಂಚೇನಹಳ್ಳಿ ಗ್ರಾಮಗಳಲ್ಲಿನ ಸಣ್ಣ ಮತ್ತು ಅತಿಸಣ್ಣ ರೈತರ ಅಭಿಪ್ರಾಯಗಳನ್ನು ಅರ್ಥಮಾಡಿಕೊಳ್ಳಲು ಸಮೂಹ ಚರ್ಚೆಗಳನ್ನು ಬಳಸಿಕೊಳ್ಳಲಾಗಿದೆ.

### 3.2. ಭೂ ಬಳಕೆಯಲ್ಲಿನ ಬದಲಾವಣೆಗಳ ಸಮಸ್ಯೆಗಳು ಮತ್ತು ಅದರ ಪ್ರಭಾವ

ಬೆಂಗಳೂರು ನಗರಕ್ಕೆ ನಗರದ ಸುತ್ತ ಇರುವ 8 ನಗರ ಸ್ಥಳೀಯ ಸಂಸ್ಥೆ ಗಳು ಮತ್ತು 115 ಗ್ರಾಮಗಳು ಸೇರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ರಚನೆಯಾಗಿದೆ. ಇದು ನಗರೀಕರಣದ ಪ್ರವೃತ್ತಿಗೆ ಒಂದು ನಿದರ್ಶನ. 2 ನಗರ ಸ್ಥಳೀಯ ಸಂಸ್ಥೆಗಳು ಉಪನಗರಗಳಾಗಿ ಅಭಿವೃದ್ಧಿಯಾಗಿದ್ದವು (ಯಲಹಂಕ ಸಿಎಂಸಿ ಮತ್ತು ಕೆಂಗೇರಿ ಟಿಎಂಸಿ). ಅವುಗಳೂ ಈಗ ಬಿಬಿಎಂಪಿ ಯಲ್ಲಿ ವಿಲೀನಗೊಂಡಿವೆ. 8,005 ಚದರ ಕಿ.ಮೀ. ವಿಸ್ತೀರ್ಣದ ಮಹಾನಗರ ಪ್ರದೇಶದ ಉಸ್ತುವಾರಿಗಾಗಿ ಬೆಂಗಳೂರು ಮೆಟ್ರೋಪಾಲಿಟನ್ ರೀಜನ್ ಡೆವಲಪ್ಮೆಂಟ್ ಅಥಾರಿಟಿ (ಬಿಎಂಆರ್‌ಡಿಎ) ರಚನೆಯಾಯಿತು.[66] ಈ ನಗರದ ಪರಿಧಿಯಲ್ಲಿರುವ ಭೂ ಭಾಗಗಳ ಮೇಲೆ ನಗರೀಕರಣವಷ್ಟೇ ಅಲ್ಲದೆ ಕೆಲಸಗಳನ್ನು ಮತ್ತು ಮಾರುಕಟ್ಟೆಗಳನ್ನು ಸೃಷ್ಟಿಸಲು ಮಾಡುವ ಹೂಡಿಕೆಗಳೂ ಪ್ರಭಾವ ಬೀರುತ್ತವೆ. ಕೆಲಸಗಳನ್ನು ಸೃಷ್ಟಿಸುವ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಹೂಡಿಕೆಗಳನ್ನು (ದೊಡ್ಡ ಮತ್ತು ಸಣ್ಣ ಗಾತ್ರದ) ಆಹ್ವಾನಿಸುವಾಗ ನಗರದ ಹತ್ತಿರವಿರುವ ಭೂ ಭಾಗಗಳು ಗುರಿಯಾಗುತ್ತವೆ.

ಕೈಗಾರಿಕಾ ಪ್ರದೇಶಗಳನ್ನು ಸೃಷ್ಟಿಸುವ ಉದ್ದೇಶದಿಂದ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಲಿ (ಕೆಐಎಡಿಬಿ - ಭೂ ಸ್ವಾಧೀನದ ಸಂಸ್ಥೆ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯಲ್ಲಿ (4 ತಾಲೂಕುಗಳಲ್ಲಿ) 4600 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ[67]. ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಈಗ ಅವುಗಳನ್ನು ವಿಸ್ತರಿಸಲಾಗುತ್ತಿದೆ. ಹೊಸಕೋಟೆ ಮತ್ತು ನೆಲಮಂಗಲಗಳಲ್ಲಿ ಹೊಸ ಕೈಗಾರಿಕಾ

[66] http://www.bmrda.kar.nic.in/
[67] http://dcmsme.gov.in/dips/Bangalore%20Rural%20Dist-final%20-%20Copy.pdf

ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ರಾಜ್ಯ ಸರ್ಕಾರವು ಅಧಿಸೂಚನೆಯನ್ನು ನೀಡಿ ಭೂ ಭಾಗಗಳನ್ನು ಸ್ವಾಧೀನಪಡಿಸಿಕೊಂಡು ಭೂಮಿ ಬ್ಯಾಂಕುಗಳನ್ನು[68] ಸೃಷ್ಟಿಸುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯಲ್ಲಿ 4,038 ಎಕರೆ ಭೂಮಿಯನ್ನು ಭೂಮಿ ಬ್ಯಾಂಕಿನ[68] ಅಡಿಯಲ್ಲಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ದೇವನಹಳ್ಳಿಯ ಬಳಿ ನಿರ್ಮಿಸಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ (ಹಿಂದಿನ ಹೆಸರು -ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ - ಬಿಐಎಎಲ್) ಸುತ್ತ ಮುತ್ತಲ ಪ್ರದೇಶಗಳು ಹೂಡಿಕೆಗೆ ಬಹಳ ಆಕರ್ಷಕವಾಗಿವೆ. ಕರ್ನಾಟಕ ಸರ್ಕಾರವು ಕೆಐಎಎಲ್ ಸುತ್ತ ಹಲವಾರು ಹೂಡಿಕೆಗಳನ್ನು ಮಾಡಲು ಯೋಜಿಸಿದೆ. ಅದಕ್ಕೆ ಬೇಕಾದ ಭೂ ಸ್ವಾಧೀನ ಪ್ರಕ್ರಿಯೆಗಳು ಈಗಾಗಲೇ ಜಾರಿಯಲ್ಲಿವೆ. 10,500 ಎಕರೆಗಳಲ್ಲಿ ನಿರ್ಮಾಣವಾಗುವ ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯ (ಐಟಿಐಆರ್) ಹಂತ ಹಂತವಾಗಿ ಪೂರ್ಣಗೊಳ್ಳಲಿದೆ.[69] ಈ ಉದ್ದೇಶಕ್ಕಾಗಿ ಕೆಐಎಡಿಬಿ 1,000 ಕೋಟಿ ರೂಗಳ ಸಾಲ ಪಡೆಯುತ್ತಿದೆ[70].

ಬಿಎಂಆರ್‌ಡಿಎ ಅಧೀನದಲ್ಲಿರುವ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ (ಬಿಐಎಪಿಎ) ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಲಿನ ಪ್ರದೇಶದಲ್ಲಿನ ಭೂ ಬಳಕೆಯ ಯೋಜನೆಗಳನ್ನು ನಿಯಂತ್ರಿಸುತ್ತದೆ. ಈ ಬಿಐಎಪಿಎ 1996 ಜನವರಿಯಲ್ಲಿ ಸ್ಥಾಪನೆಯಾಯಿತು ಮತ್ತು ದೇವನಹಳ್ಳಿಯ 214 ಗ್ರಾಮಗಳು, ದೊಡ್ಡಬಳ್ಳಾಪುರ ತಾಲೂಕಿನ 67 ಗ್ರಾಮಗಳು ಮತ್ತು ಬೆಂಗಳೂರು ಉತ್ತರ ತಾಲೂಕಿನ 66 ಹಳ್ಳಿಗಳನ್ನು ವ್ಯಾಪಿಸುತ್ತದೆ. ಈ ಪ್ರದೇಶಗಳಲ್ಲಿನ ಯಾವುದೇ ಭೂ ಅಭಿವೃದ್ಧಿ ಅಥವಾ ಭೂ ಬಳಕೆಯಲ್ಲಿನ ಬದಲಾವಣೆಗಳಿಗೆ ಪ್ರಾಧಿಕಾರದ ಅನುಮತಿ ಅಗತ್ಯ. ಇದು ಅಂತಹ ಸೌಲಭ್ಯಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಭೂಮಿಯ ಮೇಲೂ ಪ್ರಭಾವ ಬೀರುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯಲ್ಲಿನ 2002-03 ಹಾಗೂ 2010-11 ವರ್ಷಗಳಲ್ಲಿನ ಭೂ ಬಳಕೆಗಳನ್ನು ಹೋಲಿಸಿ ಆಗಿರುವ ಬದಲಾವಣೆಗಳನ್ನು ಗಮನಿಸಲಾಗಿದೆ. ಕೋಷ್ಟಕ 3.1-ಅ ಗಮನಿಸಿದರೆ, ಸಾಗುವಳಿ ಪ್ರದೇಶದ ವಿಸ್ತೀರ್ಣತೆ ಮತ್ತು ಕೃಷಿಯೇತರ ಭೂಮಿಯ ಹೆಚ್ಚಾಗಿರುವುದು ಹಾಗೂ ಸಾಗುವಳಿ ಮಾಡಿರದ ಮತ್ತು ಬೀಳುಬಿಟ್ಟ ಭೂಮಿಯ ವಿಸ್ತೀರ್ಣತೆಯಲ್ಲೂ ಗಮನಾರ್ಹ ಇಳಿಕೆಯಾಗಿರುವುದು ಕಂಡುಬರುತ್ತದೆ. ಬೀಳುಬಿಟ್ಟ, ಬಂಜರು ಹಾಗೂ ಸಾಗುವಳಿ ಸಾಧ್ಯವಿದ್ದು ಸುಮ್ಮನೆ ಬಿಟ್ಟ ಭೂಮಿಯನ್ನು ಒಳಗೊಂಡಿರುವ ಕೃಷಿ ಹಿಡುವಳಿ ಪ್ರದೇಶದ ದತ್ತಾಂಶ, ಮಾರ್ಪಾಡುಗಳನ್ನು ಸ್ಪಷ್ಟವಾಗಿ ತೋರಿಸುತ್ತದೆ.

**ಕೋಷ್ಟಕ 3.1 –ಅ: ಬೆಂಗಳೂರು ಗ್ರಾಮಾಂತರ ಜಿಲ್ಲೆ ಜಿಲ್ಲೆಯಲ್ಲಿ ಭೂ ಬಳಕೆಯಲ್ಲಿನ ಬದಲಾವಣೆಗಳು (ಹೆಕ್ಟೇರುಗಳಲ್ಲಿ)**

| ತಾಲೂಕು/ಜಿಲ್ಲೆ | ಒಟ್ಟು ಭೌಗೋಳಿಕ ವಿಸ್ತೀರ್ಣ | ಅರಣ್ಯ | ಕೃಷಿಯೇತರ | ಬಂಜರು | ಸಾಗುವಳಿ ಮಾಡಿರದ ಪ್ರದೇಶ* | ಪಾಳುಬಿದ್ದ ಜಮೀನು | ಒಟ್ಟು ಸಾಗುವಳಿ ಮಾಡಿದ್ದು |
|---|---|---|---|---|---|---|---|
| | 2002-2003 | | | | | | |
| ದೇವನಹಳ್ಳಿ | 44,935 | 2,275 | 5,764 | 1477 | 7,121 | 8,749 | 19,549 |
| ದೊಡ್ಡಬಳ್ಳಾಪುರ | 78,760 | 3,895 | 9,526 | 5063 | 8,440 | 13,656 | 38,180 |
| ಹೊಸಕೋಟೆ | 54,857 | 3,444 | 9,492 | 1049 | 7,679 | 5,456 | 27,737 |
| ನೆಲಮಂಗಲ | 50,967 | 1,708 | 9,306 | 3535 | 3,698 | 5,894 | 26,826 |
| ಬೆಂಗಳೂರು ಗ್ರಾಮಾಂತರ | 229,519 | 11,322 | 34,088 | 11124 | 26,938 | 33,755 | 112,292 |
| ತಾಲೂಕು/ಜಿಲ್ಲೆ | ಒಟ್ಟು ಭೌಗೋಳಿಕ ವಿಸ್ತೀರ್ಣ | ಅರಣ್ಯ | ಕೃಷಿಯೇತರ | ಬಂಜರು | ಸಾಗುವಳಿ ಮಾಡಿರದ ಪ್ರದೇಶ* | ಪಾಳುಬಿದ್ದ ಜಮೀನು | ಒಟ್ಟು ಸಾಗುವಳಿ ಮಾಡಿದ್ದು |
| | 2010-2011 | | | | | | |
| ದೇವನಹಳ್ಳಿ | 44,935 | 2,275 | 8,793 | 1477 | 5,741 | 5,712 | 20,937 |
| ದೊಡ್ಡಬಳ್ಳಾಪುರ | 78,760 | 3,895 | 9,526 | 5063 | 8,042 | 10,649 | 41,585 |
| ಹೊಸಕೋಟೆ | 54,857 | 3,444 | 10,942 | 1049 | 2,438 | 2,651 | 34,333 |
| ನೆಲಮಂಗಲ | 50,967 | 1,708 | 10,717 | 3535 | 4,054 | 2,038 | 28,915 |
| ಬೆಂಗಳೂರು ಗ್ರಾಮಾಂತರ | 229,519 | 11,322 | 39,978 | 11124 | 20,275 | 21,050 | 125,770 |
| ಬದಲಾವಣೆ | 0 | 0 | 5,890 | 0 | -6,663 | -12,705 | 13,478 |

ಸೂಚನೆ: *ಕೃಷಿಮಾಡಬಲ್ಲ ಬಂಜರು, ಶಾಶ್ವತ ಗೋಮಾಳ, ಮರಗಳು ಮತ್ತು ತೋಪುಗಳು ಸೇರಿವೆ.

ಮೂಲ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂಕಿ-ಅಂಶಗಳ ನೋಟ 2003-04 ಮತ್ತು 2011-12

68 ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹೂಡಿಕೆದಾರರಿಗೆ ಭೂಮಿ ಒದಗಿಸುವ ಉದ್ದೇಶಕ್ಕೆ ಕರ್ನಾಟಕ ಸರ್ಕಾರವು ಭೂ ಬ್ಯಾಂಕ್ ಸೃಷ್ಟಿಸಲು ಭೂಮಿಯನ್ನು ಖರೀದಿಸಿದೆ.

69 http://www.pppinindia.com/pdf/karnataka/District%20Profiles/Bangalore%20Rural.pdf;http://www.kiadb.in/images/stories/LAND%20BANK%20DETAILS.pdf

70 http://timesofindia.indiatimes.com/city/mangalore/Karnataka-expediting-setting-up-of-Information-Technology-Investment-Region-near-Bangalore-International-Airport/articleshow/22172549.cms

71 http://www.deccanherald.com/content/345688/kiadb-raise-rs-1000-crore.html

**ಕೋಷ್ಟಕ 3.2-ಅ: ಸಾಮಾಜಿಕ ವರ್ಗದ ಹಿಡುವಳಿಯಲ್ಲಿರುವ ಪಟ್ಟಿ**

| ತಾಲೂಕು/ಜಿಲ್ಲೆ | ಪ್ರದೇಶ (ಹೆಕ್ಟೇರುಗಳಲ್ಲಿ) | | | |
|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ವರ್ಗ | ಒಟ್ಟು |
| | 2005-2006 | | | |
| ದೇವನಹಳ್ಳಿ | 2,959 | 1,891 | 24,633 | 29,542 |
| ದೊಡ್ಡಬಳ್ಳಾಪುರ | 5,288 | 2,049 | 42,722 | 50,161 |
| ಹೊಸಕೋಟೆ | 4,338 | 602 | 37,536 | 42,563 |
| ನೆಲಮಂಗಲ | 3,468 | 905 | 33,764 | 38,217 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 16,053 | 5,447 | 138,655 | 160,483 |
| 2010-2011 | | | | |
| ದೇವನಹಳ್ಳಿ | 2,080 | 1,963 | 24,101 | 28,160 |
| ದೊಡ್ಡಬಳ್ಳಾಪುರ | 5,005 | 1,858 | 44,638 | 51,541 |
| ಹೊಸಕೋಟೆ | 2,812 | 387 | 32,882 | 36,103 |
| ನೆಲಮಂಗಲ | 3,496 | 689 | 32,041 | 36,230 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 13,393 | 4,897 | 133,662 | 152,034 |
| ಬದಲಾವಣೆ | 2,660 | 550 | 4,993 | 8,449 |
| ಬದಲಾವಣೆ ಶೇಕಡವಾರು | -16.57 | -10.1 | -3.6 | -5.26 |

ಮೂಲ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂಕಿ-ಅಂಶಗಳ ನೋಟ 2003-04 ಮತ್ತು 2011-12

2005-06 ಮತ್ತು 2010-11 ಅವಧಿಗಳಲ್ಲಿ ಕೃಷಿ ಜನಗಣತಿ ನಡೆಯಿತು. ಅವಧಿಗಳ ಭೂ ಹಿಡುವಳಿಗಳನ್ನು ಕೋಷ್ಟಕ 3.2-ಅ ನಲ್ಲಿ ನೀಡಲಾಗಿದೆ. ಇದರ ಪ್ರಕಾರ ಸುಮಾರು 8,450 ಹೆಕ್ಟೇರುಗಳಷ್ಟು ಭೂಮಿಯ ಬಳಕೆಯನ್ನು ಕೃಷಿಯಿಂದ ಕೃಷಿಯೇತರ ಉದ್ದೇಶಗಳಿಗೆ ಬದಲಿಸಲಾಗಿದೆ. ಎಲ್ಲ ವರ್ಗದ ಜನಗಳೂ ಭೂಮಿಯನ್ನು ಕಳೆದುಕೊಂಡಿದ್ದಾರೆ. ಭೂಮಿಯ ಹಿಡುವಳಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳಲ್ಲಿ ಹೆಚ್ಚಾಗಿದೆ, 'ಇತರ'ರಿಗೆ ಹೋಲಿಸಿದರೆ. ಇದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳವರ ಭೂಮಿಯನ್ನೇ ಕೃಷಿಯೇತರ ಉದ್ದೇಶಗಳಿಗೆ ಗುರಿಮಾಡಿಕೊಂಡಿದ್ದಾರೆ ಎಂದು ತಿಳಿಯುತ್ತದೆ. ಅನೇಕ ಬಾರಿ ಈ ಭೂಮಿಗಳು ಕಡಿಮೆ ಉತ್ಪತ್ತಿಯ ಕಡಿಮೆ ವಿಸ್ತಾರದ ಭೂಮಿಗಳು. ಅವುಗಳ ಒಡೆಯರಿಗೆ ಭೂಮಿ ಮಾರುಕಟ್ಟೆಯ ಬಗ್ಗೆ ಹೆಚ್ಚು ಮಾಹಿತಿ ಇರುವುದಿಲ್ಲ.

ಭೂಮಿಯ ಬಳಕೆಯ ಬಗ್ಗೆ ಅಧಿಕೃತ ದತ್ತಾಂಶ ಲಭ್ಯವಿಲ್ಲದಿರುವಾಗ ಭೂಮಿಯ ಬಳಕೆಯಲ್ಲಿನ ಬದಲಾವಣೆಗಳನ್ನು ಪತ್ತೆ ಮಾಡುವುದು ಸುಲಭವಲ್ಲ. ಜಿಐಎಸ್ ನಕ್ಷೆಗಳು ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಜೊತೆಗೆ ಅವುಗಳನ್ನು ಕರಾರುವಾಕ್ಕಾಗಿ ಲೆಕ್ಕ ಮಾಡಲು ನೆರವಾಗುತ್ತವೆ. ಇದರಿಂದ ಹಿತಾಸಕ್ತಿದಾರರಿಗೆ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಬಹಳ ಅನುಕೂಲವಾಗುತ್ತದೆ. ಮಯೂರ್ ಮತ್ತು ಇತರರು (2013) ಕೆಐಎಎಲ್ ಪ್ರದೇಶದ 2002 ಮತ್ತು 2010 ವರ್ಷಗಳ ನಕ್ಷೆಗಳನ್ನು ಹೋಲಿಸಿ ನೋಡಿದರು (ಚಿತ್ರ 3.1-ಅ). ಅವರಿಗೆ ತಿಳಿದ ಪ್ರಮುಖ ವಿಷಯಗಳಲ್ಲಿ ಕೆಲವು: ಕೃಷಿ ಭೂಮಿ ಒಟ್ಟಾರೆ ಭೂಮಿಯ (1720 ಎಕರೆಗಳು) 43ಶೇಕಡ ಇದ್ದದ್ದು ಶೂನ್ಯಕ್ಕೆ ಬಂದಿದೆ. ನೀರಿನ ಪಾತ್ರಗಳ ಪ್ರದೇಶ 53.8ಶೇಕಡ ನಷ್ಟು ಕಡಿಮೆಯಾಗಿದೆ ಮತ್ತು ಅರಣ್ಯವಿದ್ದ ಪ್ರದೇಶ ಶೇ. 37.32 ನಷ್ಟು (820 ಎಕರೆಗಳು) ಕಡಿಮೆಯಾಗಿದೆ. ಇದಕ್ಕೆ ಪ್ರತಿಯಾಗಿ ನಿರ್ಮಿತ ಪ್ರದೇಶ ಮತ್ತು ಅಗೆದ/ಪಲ್ಲಟಗೊಂಡ ಪ್ರದೇಶಗಳು ಅನುಕ್ರಮವಾಗಿ ಶೇ. 16.35 ಕ್ಕೆ ಮತ್ತು ಶೇ. 48.29 ಕ್ಕೆ ಏರಿವೆ.

**ಚಿತ್ರ: 3.1-ಅ: 2002 ಮತ್ತು 2010ರಲ್ಲಿ ಕೆಐಎಎಲ್ ಭೂ ಬಳಕೆ**







ಮೂಲ: ಮಯೂರ್ ಮತ್ತು ಇತರರು (2013)

ಅರಣ್ಯ ಪ್ರದೇಶ ಪರಿಮಾಣಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ಕಡಿಮೆಯಾಗಿದೆ, ಅನೇಕ ಅತ್ಯಮೂಲ್ಯ ವೃಕ್ಷ ಪ್ರಭೇಧಗಳನ್ನು ಕಳೆದುಕೊಂಡಿದ್ದೇವೆ ಎಂದು ಈ ಅಧ್ಯಯನವು ಸೂಚಿಸುತ್ತದೆ. ಇದರಿಂದ ಈ ಪ್ರದೇಶದ ಪ್ರಾಣಿಕೋಟಿಯ ಮೇಲೂ ಪರಿಣಾಮಗಳಾಗಿವೆ. ಅರಣ್ಯದಲ್ಲಿ ಬೆಳೆಯಬಹುದಾಗಿದ್ದ ವೈವಿಧ್ಯಮಯ ಮರ ಗಿಡಗಳ ಸಂಕುಲ ಹೋಗಿ ಅಕೇಷ ಮತ್ತು ನೀಲಗಿರಿಯಂತಹ ಒಂದೇ ಬಗೆಯ ತೋಪುಗಳು ಬಂದವು. ಇದರಿಂದ ಸಮೃದ್ಧವಾಗಿದ್ದ ನೈಸರ್ಗಿಕ ಸಸ್ಯ ಕೋಟಿ ಹಾಗೂ ಪ್ರಾಣಿ ಕೋಟಿಗಳೆರಡೂ ಕಡಿಮೆಯಾದವು. ಕಾಫ್‌ಮನ್ ಮತ್ತು ಇತರರು (2007) ಚೀನದ ಪರ್ಲ್ ನದಿ ಪಾತ್ರದಲ್ಲಿ ನಡೆಸಿದ ಅಧ್ಯಯನವು ಸೂಚಿಸುವಂತೆ ಭೂಮಿಯ ಬಳಕೆಯಲ್ಲಿನ ಬದಲಾವಣೆಗಳು ಮಣ್ಣಿನ ಭೌತಿಕ ಗುಣಲಕ್ಷಣಗಳನ್ನು ಬದಲಿಸಿವೆ, ಮಳೆನೀರು ಭೂಮಿಯಲ್ಲಿ ಇಂಗುವುದು ಕಡಿಮೆಯಾಗಿದೆ ಮತ್ತು ಆ ಮೂಲಕ ಮಣ್ಣಿನಲ್ಲಿನ ನೀರು ಆವಿಯಾಗಿ ವಾತಾವರಣಕ್ಕೆ ವರ್ಗಾವಣೆಯಾಗುವುದು ಕಡಿಮೆಯಾಗಿ ಚಳಿಗಾಲದ ಮಳೆ ಕಡಿಮೆಯಾಗಿದೆ. ಅದು ಇಲ್ಲಿಯೂ ನಿಜವಾಗಿರಬಹುದು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ನಡೆಸಿದ ಅಧ್ಯಯನವೊಂದರಲ್ಲಿ ಭೂಬಳಕೆಯಲ್ಲಿನ ಮಾರ್ಪಾಡುಗಳನ್ನು ಅಂದಾಜು ಮಾಡುವ ಮತ್ತೊಂದು ವಿಧಾನ ಉಲ್ಲೇಖಿಸಲಾಗಿದೆ. ಇದರಲ್ಲಿ, ಭೂ ಬದಲಾವಣೆ ಮಾಡಲರ್ ಉಪಯೋಗಿಸಿ ಭೂಬಳಕೆಯ ಸಾಧ್ಯತೆಗಳನ್ನು ಅಂದಾಜು ಮಾಡಲಾಗಿದೆ. 2020 ಇಸವಿಯಲ್ಲಿ (ಚಿತ್ರ 3.2-ಅ) ಬೃಹತ್ ಬೆಂಗಳೂರಿನ (ಬೃ.ಬೆಂ.ಮ.ಪಾ) ಸುತ್ತಲಿನ 10 ಕಿ.ಮೀ. ವಿಸ್ತೀರ್ಣದಲ್ಲಿ ಭೂ ಬಳಕೆಯಲ್ಲಿ ಮಾರ್ಪಾಡುಗಳಾಗುತ್ತದೆ ಎಂದು ಭರತ್ ಹಾಗೂ ಇತರರು(2013) ಸೂಚಿಸಿದ್ದಾರೆ. 2012 ಇಸವಿಗೆ ಭೂ ಬಳಕೆಯ ಅಂದಾಜು ಹಾಗೂ ವಾಸ್ತವ ಭೂ ಬಳಕೆ ಬದಲಾವಣೆಗಳನ್ನು ಹೋಲಿಸಿ ನೋಡುವ ಮೂಲಕ ಮಾದರಿಯನ್ನು ಪರೀಕ್ಷಿಸಲಾಯಿತು. ಉಲ್ಲೇಖನ ವರ್ಷ 2012 ರಿಂದ ನಗರ ಪ್ರದೇಶವು ಶೇ. 108 ರಷ್ಟು ವಿಸ್ತಾರಗೊಳ್ಳುವುದು ಹಾಗೂ ಹಸಿರು ಪ್ರದೇಸವು ಶೇ. 33.68 ರಿಂದ ಶೇ. 7 ಕ್ಕೆ ಇಳಿಯುವ ನಿರೀಕ್ಷೆ ಇದೆ ಎಂದು ಅಧ್ಯಯನವು ಸೂಚಿಸಿತು. ದೃಶ್ಯೀಕರಿಸಿದ ಬೆಳವಣಿಗೆಯು ಪರಿಣಾಮಕಾರಿಯಾದ ಹಾಗೂ ಸ್ಥೈರಣೀಯ ನಗರ ಯೋಜನೆ ರೂಪಿಸಲು ಒಳನೋಟಗಳನ್ನು ಒದಗಿಸಬಲ್ಲದು.

ಚಿತ್ರ 3.2–ಅ: ನಗರ ಮತ್ತು ನಗರದ ಸುತ್ತ ಇರುವ ಪ್ರದೇಶಗಳಲ್ಲಿ ಸಂಪನ್ಮೂಲಗಳ ಚಕ್ರ




ಮೂಲ: ಭರತ್ ಹಾಗೂ ಇತರರು(2013)

ನಗರದ ಅಂಚಿನಲ್ಲಿರುವ ಪ್ರದೇಶಗಳಲ್ಲಿ ಭೂ ಬಳಕೆಯ ಬದಲಾವಣೆ ಮೇಲಿನ ಪ್ರಭಾವಗಳ ಬಗ್ಗೆ ಅನೇಕ ಅಧ್ಯಯನಗಳು ಪ್ರತಿಫಲಿಸುತ್ತವೆ. ಚೀನಾದಲ್ಲಿನ ಪರ್ಲ್ ನದಿಮುಖಜ ಭೂಮಿಯಲ್ಲಿ ಕಾಫ್‌ಮನ್ ಹಾಗೂ ಇತರರು ಅಧ್ಯಯನ ಕೈಗೊಂಡಿದ್ದಾರೆ(2007). ಆ ಅಧ್ಯಯನದ ಪ್ರಕಾರ, ಭೂ ಬಳಕೆಯಲ್ಲಿನ ಬದಲಾವಣೆಗಳು ಮಣ್ಣಿನ ಭೌತಿಕ ಗುಣಲಕ್ಷಣಗಳ ಬದಲಾವಣೆ, ಮಣ್ಣಿನೊಳಗೆ ಮಳೆ ನೀರು ಇಂಗುವ ಪ್ರಮಾಣ ಕಡಿಮೆ ಯಾಗಿದೆ ಎಂದು ಹಾಗೂ ಈ ಕಾರಣದಿಂದಾಗಿ ವಾತಾವರಣಕ್ಕೆ ಬಿಡುಗಡೆಯಾಗುವ ಮಣ್ಣಿನೊಳಗಿನ ನೀರಿನ ಭಾಷ್ಪೀಕರಣ ಸಹ ಮಂದವಾಗಿದ್ದು, ಚಳಿಗಾಲದಲ್ಲಿ ಮಳೆ ಬೀಳುವುದು ಕಡಿಮೆಯಾಗಿದೆ ಎಂದು ಸೂಚಿಸುತ್ತದೆ. ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಷಯದಲ್ಲೂ ನಿಜವಾಗಿರುವ ಸಾಧ್ಯತೆಗಳಿವೆ. ಭೂಮಿ ಇಲ್ಲದ, ಕಡೆಗಣಿಸಲ್ಪಟ್ಟಿರುವ ಜನರು ಅನಾರೋಗ್ಯಕರ ಪರಿಸ್ಥಿತಿಗಳಲ್ಲಿ ಬದುಕುತ್ತಿರುವುದರಿಂದ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಚಡ್ಡ ಮತ್ತು ಇತರರು (1997) ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾಡಿದ ಅಧ್ಯಯನದ ಪ್ರಕಾರ 4 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ 35ಶೇಕಡ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಕೋಲ್ಕತಾದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ಮಹಿಳೆಯರಲ್ಲಿ ಪದೇ ಪದೇ ಶಕ್ತಿಹೀನತೆ ಕಾಣಿಸಿಕೊಳ್ಳುತ್ತಿದೆ ಎಂದು ದಾಖಲಾಗಿದೆ.

ದೀರ್ಘಕಾಲಿಕ ಊರ್ಜಿತತೆ ಮತ್ತು ನೈಸರ್ಗಿಕ ವೈವಿಧ್ಯತೆಗಳ ದೃಷ್ಟಿಕೋನಗಳಿಂದ ನೋಡಿದಾಗ ಭೂ ಬಳಕೆಯಲ್ಲಿನ ಬದಲಾವಣೆಗಳು ಭಯ ಹುಟ್ಟಿಸುತ್ತವೆ ಮತ್ತು ನಗರೀಕರಣ ಒಂದು ಅನಿವಾರ್ಯ ಪ್ರಕ್ರಿಯೆ. ಈ ಸಂದರ್ಭದಲ್ಲಿ ನಿರ್ಣಯಗಳನ್ನು ಹೇಗೆ ಮತ್ತು ಯಾರ ಹಿತಕ್ಕಾಗಿ ತೆಗೆದುಕೊಳ್ಳಲಾಗುತ್ತಿದೆ ಎಂಬುದು ಮುಖ್ಯವಾಗುತ್ತದೆ. ಹೀಗೆ ಪರೀಕ್ಷೆ ಮಾಡಿದಾಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪರಿಸ್ಥಿತಿ ಅಷ್ಟು ಆಶಾದಾಯಕವಾಗಿಲ್ಲ. ಈ ಪ್ರಕ್ರಿಯೆ ಬೆಂಗಳೂರಿನ ಹಿರಿಯ ರಾಜಕಾರಣಿಗಳ ಮತ್ತು ಅಧಿಕಾರಿಗಳ ಕೈಯಲ್ಲಿ ಕೇಂದ್ರೀಕೃತವಾಗಿದೆ, ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಂದ ಪ್ರಭಾವಿತವಾದಂತೆ ಕಾಣುತ್ತದೆ. ಯೋಜನಾ ಪ್ರಾಧಿಕಾರಗಳ ನಿಯಂತ್ರಣದಲ್ಲಿರುವ ಭೂ ಬಳಕೆ ಯೋಜನೆಗಳು ರಿಯಲ್ ಎಸ್ಟೇಟ್ ಮಾರುಕಟ್ಟೆಗೆ ಪ್ರಯೋಜನವಾಗುವಂತೆ ಆಗಾಗ್ಗೆ ಬದಲಾಗುತ್ತಿರುತ್ತವೆ.[72] ಉದಾಹರಣೆಗೆ ಕೆಐಎಡಿಬಿ ಐಟಿ ಕ್ಷೇತ್ರದ ಹೂಡಿಕೆಗಾಗಿ ಸಾಧ್ಯವಾದಷ್ಟೂ, ಕೃಷಿಯೇತರ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. ಆದರೆ ಅದರ ಅಧಿಕಾರಿಗಳ ಪ್ರಕಾರ ಐಟಿಐಆರ್ ಗೋಸ್ಕರ ಸ್ವಾಧೀನಕ್ಕೆ ತೆಗೆದುಕೊಳ್ಳುವ ಭೂಮಿಯಲ್ಲಿ ಅನೇಕ ವೇಳೆಗಳಲ್ಲಿ ಸಾಕಷ್ಟು ಸಾಗುವಳಿ ಭೂಮಿ ಸೇರಿರುತ್ತದೆ[73] ಈ ಬಗೆಯ ಭೂಮಿ ಸ್ವಾಧೀನದ ನಿರ್ಣಯಗಳಲ್ಲಿ ಅನೇಕವು ಮತ್ತು ಭೂ ಬಳಕೆಯ ಯೋಜನೆಯ ಮಾಹಿತಿಗಳು ಸಕಾಲದಲ್ಲಿ ಸಣ್ಣ ಮತ್ತು ಅತಿ ಸಣ್ಣ ಭೂ ಹಿಡುವಳಿದಾರರನ್ನು ತಲುಪುವುದೇ ಇಲ್ಲ. ಅನೇಕ ವೇಳೆ ಈ ಪ್ರಕ್ರಿಯೆಗಳು ಆರಂಭವಾದ ನಂತರವೇ ಅವರಿಗೆ ಮಾಹಿತಿ

72 http://timesofindia.indiatimes.com/city/bangalore/New-master-plan-for-outer-Bangalore-soon-Siddaramaiah/articleshow/21145819.cms
73 http://www.livemint.com/Companies/39AQppVx6YNRVKUVoDnjM/Karnataka-govt-notifies-land-to-set-up-IT-park.html

ಸಿಗುವುದು ಮತ್ತು ಅವರ ಧ್ವನಿಗೆ ಓಗೊಡುವವರು ಇರುವುದಿಲ್ಲ. ಮಧ್ಯವರ್ತಿಗಳು ಇದರ ಲಾಭ ಪಡೆಯುತ್ತಾರೆ. ಸ್ವಾಧೀನ ಪಡೆದುಕೊಳ್ಳುವ ಭೂಮಿಯನ್ನು ಸರ್ಕಾರವು ಅಧಿಸೂಚಿತ ಭೂಮಿಯನ್ನು ಕೊಳ್ಳುವ ದರಕ್ಕಿಂತ ಕಡಿಮೆ ದರಗಳಿಗೆ ಖರೀದಿಸಲಾಗುತ್ತದೆ. ಅಧಿಸೂಚಿತ ಭೂಮಿಗಳ ಸುತ್ತಮುತ್ತಲಿನ ಪ್ರದೇಶಗಳನ್ನು ರಿಯಲ್ ಎಸ್ಟೇಟ್‌ದಾರರು ಗುರಿಯಾಗಿಟ್ಟುಕೊಳ್ಳುತ್ತಾರೆ. ಇತರರಿಗಿಂತ ಬೇಗ ಹಣ ಹೂಡಿ ಮುಂದೆ ಬೆಲೆ ಏರಿದಾಗ ಹಣ ಮಾಡಿಕೊಳ್ಳುತ್ತಾರೆ.

ಸರ್ಕಾರದೊಂದಿಗೆ ಸಂಪರ್ಕ ಹೊಂದಿರುವ ದೊಡ್ಡ ದೊಡ್ಡ ಮಧ್ಯವರ್ತಿಗಳು ಮತ್ತು ಹೂಡಿಕೆದಾರರು ನಿರ್ಣಯಗಳ ಮೇಲೆ ಪ್ರಭಾವ ಬೀರುತ್ತಾರೆ. ಇದಕ್ಕೆ ಒಂದು ಉತ್ತಮ ಉದಾಹರಣೆ ಎಂದರೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿ. ಒಂದು ತಾಂತ್ರಿಕ ಸಮಿತಿ ವಿಮಾನ ನಿಲ್ದಾಣಕ್ಕಾಗಿ 2,500 ಎಕರೆ ಭೂಮಿಯನ್ನು ಶಿಫಾರಸು ಮಾಡಿತ್ತು. ವಿಮಾನ ನಿಲ್ದಾಣಕ್ಕೆ ಕೊಟ್ಟ ಭೂಮಿ 4,009 ಎಕರೆಗಳು.[73] ಕೇವಲ 400 ಎಕರೆಗಳು ಮಾತ್ರ ಸರ್ಕಾರಕ್ಕೆ ಸೇರಿತ್ತು. ಸುಮಾರು 2,593 ಎಕರೆಗಳನ್ನು ವ್ಯಕ್ತಿಗಳಿಂದ ಸ್ವಾಧೀನಪಡಿಸಿಕೊಳ್ಳಲಾಯಿತು, ಮತ್ತು ಉಳಿದ 1,000 ಎಕರೆಗಳನ್ನು ಅರಣ್ಯ ಭೂಮಿಯಿಂದ ಕೊಡಲಾಯಿತು. ಸುಮಾರು 12 ಗ್ರಾಮಗಳು ಮತ್ತು 1,500 ಜಮೀನಿನ ಒಡೆಯರು ಈ ಬಗೆಯ ಸ್ವಾಧೀನದಿಂದ ಬಾಧಿತರಾದರು ಮತ್ತು ಆ ಭೂಮಿಯನ್ನು ಕೆಐಎಎಲ್ ನ ಯಾವುದೇ ಚಟುವಟಿಕೆಗೂ ಬಳಸಿಲ್ಲ[74]. ಸರ್ಕಾರದ ಭೂ ಸ್ವಾಧೀನಕ್ಕೆ ಮತ್ತು ಒತ್ತುವರಿಗಳಿಗೆ ಅರಣ್ಯ ಭೂಮಿಗಳೇ ಸುಲಭವಾಗಿ ಈಡಾಗುವುದು, ಕಾರಣ ಭೂಮಿಯ ಅತಿಯಾದ ಬೆಲೆಗಳು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 45,000 ಎಕರೆಗಳು ಅರಣ್ಯದ ಅಡಿಯಲ್ಲಿವೆ. ಇವು ಕೂಡ ಇದೇ ಅಪಾಯವನ್ನು ಎದುರಿಸುತ್ತಿವೆ.[75] ಈ ಅರಣ್ಯ ಭೂಮಿಗಳು ವೈವಿಧ್ಯಮಯವಾದ ಸಸ್ಯ ರಾಶಿಯನ್ನು ಮಾತ್ರವೇ ಹೊಂದಿಲ್ಲ, ಅದು ಪ್ಯಾಂಗೋಲಿನ್, ಬೊಗಳುವ ಜಿಂಕೆ, ಮೊಲಗಳು, ಮುಳ್ಳುಹಂದಿಗಳು, ಕಾಡು ಹಂದಿಗಳು, ಹಕ್ಕಿಗಳು ಮತ್ತು ಉರಗಗಳಂತಹ ಸಣ್ಣ ಸಣ್ಣ ಪ್ರಾಣಿಗಳಿಗೂ ತವರಾಗಿದೆ.

## 3.3. ಕೃಷಿ ಭೂಮಿ ಬದಲಾವಣೆ ಪ್ರಕ್ರಿಯೆ

ಭೂಮಿಯ ಬಳಕೆಯು ಕೃಷಿಯಿಂದ ಕೃಷಿಯೇತರಕ್ಕೆ ಬದಲಾವಣೆಯು 3 ವಿಧಗಳಲ್ಲಿ ಆಗುತ್ತದೆ:

ಎ. ಕೈಗಾರಿಕೆಗಳು/ತಂತ್ರಜ್ಞಾನ ಪಾರ್ಕುಗಳು ಇತ್ಯಾದಿಗಳ ನಿರ್ಮಾಣದ ಉದ್ದೇಶಕ್ಕಾಗಿ ಸರ್ಕಾರವು ಸ್ವಾಧೀನ ಪಡಿಸಿಕೊಳ್ಳುವುದು-ಕೆಐಎಡಿಬಿ

ಬಿ. ರಸ್ತೆ/ಬೀದಿ ಅಗಲೀಕರಣಕ್ಕೆ ಜಿಲ್ಲಾ ಭೂಮಿ ಸ್ವಾಧೀನ ಅಧಿಕಾರಿ ಸ್ವಾಧೀನಪಡಿಸಿಕೊಳ್ಳುವುದು (ಜಿಲ್ಲೆಯ ಉಪ-ಆಯುಕ್ತರ ಅಧೀನದಲ್ಲಿ).

ಸಿ. ರೈತರಿಂದ ನೇರವಾಗಿ ಭೂಮಿಯನ್ನು ಕೊಂಡು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತಿಸಿಕೊಳ್ಳುವ ಮಾಲೀಕರು/ಡೆವಲಪರ್ಸ್.

ಜಿಲ್ಲೆಯಲ್ಲಿ ಭೂಮಿಯ ಬಳಕೆಯ ಬದಲಾವಣೆಗೆ ಅನುಮತಿ ನೀಡುವ ಅಧಿಕಾರ ಉಪ-ಆಯುಕ್ತರಿಗೆ ನೀಡಲಾಗಿದೆ. ಅರ್ಜಿಯ ಮೂರು ಪ್ರತಿಗಳು ಜೊತೆಗೆ ಆರ್‌ಟಿಸಿ, 13 ವರ್ಷಗಳ ಋಣಭಾರ ರಾಹಿತ್ಯ ಪತ್ರ, ನಕ್ಷೆ ಮತ್ತು ಇತರ ದಾಖಲೆಗಳನ್ನು (ಫೋಟೋ, ತೆರಿಗೆ ಪಾವತಿ ರಸೀತಿ, ಇತ್ಯಾದಿ) ಸಲ್ಲಿಸಬೇಕು. ಒಂದು ಪ್ರತಿಯನ್ನು ತಾಲೂಕಿನ ತಹಸೀಲ್ದಾರ್‌ಗೆ ಉಲ್ಲಂಘನೆಗಳ ಪರಿಶೀಲನೆ ಮತ್ತು ಪರೀಕ್ಷೆಗಳಿಗಾಗಿ (ಉದಾ: ಎಸ್‌ಸಿ ಮತ್ತು ಎಸ್‌ಟಿ, ಮತ್ತು ಇತರರಿಗೆ ನೀಡಿರುವ ಭೂಮಿ) ಕಳುಹಿಸಬೇಕು. ಇನ್ನೊಂದು ಪ್ರತಿಯನ್ನು ಅಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಅಥವಾ ಬಿಐಎಪಿಎ ಗೆ ಪರಿಶೀಲನೆಗಾಗಿ ಕಳುಹಿಸಬೇಕು. ಪ್ರಾಧಿಕಾರವು ಪರಿವರ್ತನೆಗೊಳ್ಳುತ್ತಿರುವ ಭೂಮಿ ವಲಯದ ನಿಬಂಧನೆಗಳಿಗೆ ಅನುಗುಣವಾಗಿದೆಯೇ ಎಂದು ಪರಿಶೀಲಿಸಿ ನಂತರ ತನ್ನ ಅನುಮತಿ/ತಿರಸ್ಕೃತಿಯ ಬಗ್ಗೆ ತನ್ನ ಅಭಿಪ್ರಾಯವನ್ನು ತಿಳಿಸುತ್ತದೆ. ಡೆವಲಪರ್/ವ್ಯಕ್ತಿಗಳು ಯೋಜನೆಗೆ ಅನುಮೋದನೆ ಪಡೆದುಕೊಳ್ಳಲು ಅಗತ್ಯವಾದ ಅಭಿವೃದ್ಧಿ ಶುಲ್ಕಗಳನ್ನು ಪಾವತಿಸಲು ಯೋಜನಾ ಪ್ರಾಧಿಕಾರವನ್ನು ಸಂಪರ್ಕಿಸಬಹುದು.

## 3.4. ಕೃಷಿ ಮೇಲೆ ಆಗುವ ಪ್ರಭಾವಗಳು

ದೇವನಹಳ್ಳಿ ತಾಲೂಕಿನ ಸವಕನಹಳ್ಳಿ ಮತ್ತು ಕೋಡಿಮಂಚೇನಹಳ್ಳಿಗಳಲ್ಲಿ ನಡೆದ ಕೇಂದ್ರೀಕೃತ ಗುಂಪು ಚರ್ಚೆಗಳು ಯಾವ ಬಗೆಯ ಭೂಮಿ ಮೊದಲು ಪರಿವರ್ತನೆಗೊಳ್ಳುತ್ತದೆ? ಭೂಮಿಯ ಬಳಕೆಯ ಬದಲಾವಣೆಗಳು ಹೇಗೆ ಸಂಭವಿಸುತ್ತವೆ? ಕೃಷಿ ಭೂಮಿ ಮಾಲೀಕರ ಮೇಲೆ ಅದರ ಪ್ರಭಾವ ಹೇಗಾಗುತ್ತದೆ? ಈ ಭೂಮಿ ಬಳಕೆಯ ಬದಲಾವಣೆಯಿಂದ ಭೂ ಮಾಲೀಕರು ಅನುಭವಿಸುವ ಮುಂದಿನ ಪರಿಣಾಮಗಳೇನು? ಇದರಿಂದ ಯಾರಿಗೆ ಅತಿ ಹೆಚ್ಚು ಬಾಧಕ? ಈ ಹೂಡಿಕೆ ವಲಯಗಳಿಗೆ/ಖಾಸಗಿ ಭೂಮಿ ಕೊಳ್ಳುಗರಿಗೆ ಭೂಮಿಯನ್ನು ಕೊಟ್ಟ ಜನರಿಗೆ ನಂತರ ಏನಾಗುತ್ತದೆ? ಇಡೀ ಪ್ರಕ್ರಿಯೆ ಬಗ್ಗೆ ಅವರಿಗೆ ಏನನಿಸುತ್ತದೆ? ಇತ್ಯಾದಿ ವಿಷಯಗಳ ಬಗ್ಗೆ ಗಮನ ಹರಿಸಿತು.

ಭೂಮಿ ಬಳಕೆಯ ಬದಲಾವಣೆಗಳಿಗೆ ಒಳಗಾಗುವ ಭೂಮಿಗಳ ಬಗೆಗಳಲ್ಲಿ ಇವು ಸೇರುತ್ತವೆ:

ಎ. ರಸ್ತೆ ವಿಸ್ತರಿಸಲು ಎಂದು ಸರ್ಕಾರ ಸಾಧೀನಪಡಿಸಿಕೊಳ್ಳುವ ಭೂಮಿ

ಬಿ. ವ್ಯಾಜ್ಯಗಳಲ್ಲಿರುವ ಭೂಮಿ

ಸಿ. ಪಕ್ಕದ ಭೂಮಿಯನ್ನು ಭೂಮಿ ಡೆವಲಪರ್ಸ್ ಗೆ ಮಾರಿದ್ದರಿಂದ ಅಡಚಣೆಗಳನ್ನು ಎದುರಿಸಬೇಕಾಗಿ ಬರುವಂತಹ ಭೂಮಿ

ಡಿ. ಮತ್ತೆಲ್ಲೋ ಮಾಡಿರುವ ಹೂಡಿಕೆಗಾಗಿ ಈ ಭೂಮಿಯ ಸನಿಹ ರಸ್ತೆಗಳನ್ನು ನಿರ್ಮಿಸಬೇಕಾಗಿ ಬಂದರೆ

ಒಮ್ಮೆ ಒಂದು ಭೂಮಿಯನ್ನು ಪರಿವರ್ತಿಸಿದರೆ/ಪರಿವರ್ತನೆಗಾಗಿ ಭೂಮಿ ಡೆವಲಪರ್‌ಗೆ ಮಾರಿದರೆ ಅಕ್ಕಪಕ್ಕದ ಭೂಮಿಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಒತ್ತಡ ಹೇರುತ್ತಾರೆ. ಈ ಒತ್ತಡ ಸಲಹೆ/ಬೆದರಿಕೆಯ ರೂಪಗಳಲ್ಲಿ ಬರುತ್ತದೆ.

ಕೃಷಿ ಕಾರ್ಮಿಕರ ಲಭ್ಯತೆ ಕೂಡ ಕಡಿಮೆಯಾಗಿದೆ ಮತ್ತು ದಿನಗೂಲಿಗಳು ಪುರುಷರಿಗೆ 400 ರೂಗಳಾದರೆ ಮಹಿಳೆಯರಿಗೆ 250-300 ರೂಗಳಾಗಿವೆ (ಬೆಳಗ್ಗೆ 6ರಿಂದ ಮಧ್ಯಾಹ್ನ 1ರವರೆಗೆ). ಉಳುಮೆ, ತೋಡುವುದು, ಸುಗ್ಗಿ ಮತ್ತು ಸಾಗಣೆಯಂತಹ ಕೆಲಸಗಳು ಹೆಚ್ಚು ಹೆಚ್ಚು ಯಾಂತ್ರೀಕೃತಗೊಂಡಿವೆ. ಈಗ ಕೃಷಿಗೆ ಹೆಚ್ಚು ಬಂಡವಾಳದ ಅಗತ್ಯವಿದೆ. ಸಕಾಲಕ್ಕೆ ಟ್ರ್ಯಾಕ್ಟರ್ ಮತ್ತು ಟಿಲ್ಲರುಗಳು ಸಿಗುವುದೇ ಕಷ್ಟವಾಗಿದೆ. ಬಹುತೇಕ ಕೃಷಿ ಕೆಲಸಗಳು ಕಾರ್ಮಿಕರು ಸಿಗದೆ, 4-5 ದಿನಗಳು ಅಥವಾ ವಾರದಿಂದ ಮುಂದಕ್ಕೆ ಹೋಗಿರುತ್ತವೆ (ಒಬ್ಬ ರೈತ ಒಂದು ದಿನ ಮತ್ತೊಬ್ಬ ರೈತನ ಹೊಲಕ್ಕೆ ಕೆಲಸಕ್ಕೆ ಹೋದರೆ ಆ ಮತ್ತೊಬ್ಬ ಮತ್ತೊಂದು ದಿನ ಈ ರೈತನ ಹೊಲಕ್ಕೆ ಬರುತ್ತಾನೆ). ಮಕ್ಕಳು ವಿದ್ಯಾವಂತರಾಗುತ್ತಿರುವುದರಿಂದ ವಂಶಪಾರಂಪರ್ಯವಾಗಿ ಕೂಲಿ ಮಾಡುವ ಪರಿಸ್ಥಿತಿ ಬದಲಾಗಿದೆ.

ಕೃಷಿಗೆ ಬೇಕಾದ ಅತ್ಯಗತ್ಯ ವಸ್ತುವಾದ ನೀರೂ ಸಹ ಸಿಗುವುದು ಕಷ್ಟವಾಗುತ್ತಿದೆ. ವರ್ಷಗಳು ಕಳೆದಂತೆ ಮಳೆ ಕಡಿಮೆಯಾಗುತ್ತಿದೆ, ಕೆರೆ ಕುಂಟೆಗಳು ತುಂಬುತ್ತಿಲ್ಲ. ಅಂತರ್ಜಲದ ಮಟ್ಟ ಕುಸಿದಿದೆ. ಕೊಳವೆ ಬಾವಿಗಳಲ್ಲಿ ಮೊದಲು 350-400 ಅಡಿ ಆಳಕ್ಕೆ ಹೋದರೆ ನೀರು ಸಿಗುತ್ತಿದ್ದರೆ, ಈಗ 1000-1100 ಅಡಿಗೆ ಹೋಗಬೇಕಾಗಿದೆ. 5 ವರ್ಷಗಳ ಹಿಂದೆ ಕೊಳವೆ ಬಾವಿ ತೆಗೆಸಲು 1 ಲಕ್ಷ ರೂ ವೆಚ್ಚವಾಗುತ್ತಿದ್ದರೆ ಈಗ 2.5 - 3.00 ಲಕ್ಷ ರೂಗಳು ಬೇಕಾಗುತ್ತವೆ. ಕೇವಲ 1-2 ಎಕರೆಗಳಷ್ಟು ಒಣ ಭೂಮಿ ಇರುವ ಸಣ್ಣ ಪುಟ್ಟ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಉಳುವ ವೆಚ್ಚ ಬಹಳ ಹೆಚ್ಚಾಗಿ, ಇಂತಹ ರೈತರ ಕೈಗೆಟುಕದಂತಾಗಿದೆ. ಅವರೆಲ್ಲ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅನೇಕ ಭೂ ಮಾಲೀಕರು ತಮ್ಮ ಭೂಮಿಗಳನ್ನು ಪಾಳು ಬಿಟ್ಟಿದ್ದಾರೆ ಮತ್ತು ಕೃಷಿ ಕೂಲಿಯನ್ನೇ ನಂಬಿ ಬದುಕುತ್ತಿದ್ದಾರೆ.

[74] http://www.deccanherald.com/content/350772/more-land-acquired-b039lore-airport.html

[75] ನೋವಿಲ್ಲದೆ ಲಾಭವುಂಟೆ? ಬೃಹತ್ ಯೋಜನೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಭೂ ಕ್ರೋಢೀಕರಣ ಮತ್ತು ಸ್ವಾಧೀನ : ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣ ಸೃಷ್ಟಿಯಲ್ಲಿ ಭಾರತೀಯ ಅನುಭವ: ಕಲ್ಪನಾ ಗೋಪಾಲನ್ ಡಾಕ್ಟರೇಟ್ ಅಭ್ಯರ್ಥಿ, ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ, ಐ ಐ ಎಮ್ ಬೆಂಗಳೂರು

[76] http://www.daijiworld.com/news/news_disp.asp?n_id=50122&n_tit=Bangalore%92s+Hunger+for+Land+Threatens+Forest+Patches+too

ಕೆಲವು ಸಣ್ಣ ಮತ್ತು ಮಧ್ಯಮ ರೈತರಿಗೆ ಕುಟುಂಬದಲ್ಲೇ ಸಾಕಷ್ಟು (3-4) ಕಾರ್ಮಿಕರು ಸಿಗುತ್ತಾರೆ. ಈಗಿನ ಬದಲಾದ ಸನ್ನಿವೇಶದಲ್ಲಿ ಅವರ ಪರಿಸ್ಥಿತಿ ಸುಧಾರಿಸಿದೆ. ಮಾರುಕಟ್ಟೆ ಲಭ್ಯತೆ ಅವರಿಗೊಂದು ವರದಾನವಾಗಿದೆ. ನೀರಾವರಿ ಭೂಮಿಯಲ್ಲಿ ಅವರೀಗ ಸಾಂಪ್ರದಾಯಿಕ ಕಾಳುಕಡಿಗಳನ್ನು ಬಿಟ್ಟು ತರಕಾರಿ ಮತ್ತು ಹೂವಿನ ಗಿಡಗಳನ್ನು ಬೆಳೆಸುತ್ತಿದ್ದಾರೆ. ಅವರು ಬಾಡಿಗೆ ಕೂಲಿಗಳ ಮೇಲೆ ಅವಲಂಬಿಸುವ ಅಗತ್ಯವಿಲ್ಲ. ಹಾಗಾಗಿ ಅವರಿಗೆ ಬೀಳುವ ಖರ್ಚು ಕೇವಲ ಅಗತ್ಯ ವಸ್ತುಗಳದ್ದು ಮಾತ್ರವೇ ಆಗಿದ್ದು ಲಾಭದ ಅಂಶ ಹೆಚ್ಚಿರುತ್ತದೆ.

ಹೆಚ್ಚು ಭೂಮಿಯಿರುವ ದೊಡ್ಡ ರೈತರು ನೀರಾವರಿ ಭೂಮಿಗಳನ್ನು ತರಕಾರಿಗಳು ಮತ್ತು ಹೂವುಗಳನ್ನು ಬೆಳೆಯಲು ಬಳಸಿದರೆ, ಒಣ ಭೂಮಿಗಳನ್ನು ರಾಗಿ ಮತ್ತು ಜೋಳ ಬೆಳೆಯಲು ಬಳಸುತ್ತಾರೆ, ದನಗಳ ಮೇವಿಗಾಗಿ. ಈ ಜನರಿಗೆ ಮಾರುಕಟ್ಟೆಯ ಮಾಹಿತಿ ಚೆನ್ನಾಗಿರುತ್ತದೆ ಮತ್ತು ಅದರಿಂದ ಲಾಭಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಅವರು ಕೃಷಿ ಕಾರ್ಮಿಕರ ನೆರವು ತೆಗೆದುಕೊಳ್ಳುವುದರಿಂದ ಅವರ ಲಾಭಗಳ ಅಂತರ ಕಡಿಮೆಯೇ ಇರುತ್ತದೆ. ಕೆಲವು ದೊಡ್ಡ ರೈತರು ತಮ್ಮ ಭೂಮಿಗಳಲ್ಲಿ ಕೆಲವೊಂದು ಭಾಗಗಳನ್ನು ಮಾರಿ ರಸ್ತೆಗೆ ಹತ್ತಿರವಿರುವ ಭೂಮಿಗಳನ್ನು ಕೊಂಡಿದ್ದಾರೆ. ಅವರು ರಿಯಲ್ ಎಸ್ಟೇಟ್ ಡೆವಲಪರ್ಸ್ ಪರವಾಗಿ ಮಧ್ಯವರ್ತಿಗಳಂತೆ ಕೆಲಸ ಮಾಡುತ್ತಿದ್ದಾರೆ. ಕೆಲವು ದೊಡ್ಡ ರೈತರು ಟ್ರ್ಯಾಕ್ಟರ್/ ಟಿಲ್ಲರುಗಳನ್ನು ಕೊಂಡು ಬಾಡಿಗೆಗೆ ಕೊಡುತ್ತಾರೆ. ಇದು ಅವರಿಗೆ ಒಂದು ಬಗೆಯ ನಿಯಮಿತ ಆದಾಯವನ್ನು ಕೊಡುತ್ತದೆ. ತರಕಾರಿ ಮತ್ತು ಹೂವುಗಳ ಬೆಲೆಗಳು ಗಣನೀಯವಾಗಿ ಮೇಲೇರಿವೆ. ಮಾರುಕಟ್ಟೆ ಬೆಲೆ ಮತ್ತು ಮಾಹಿತಿಗಳನ್ನು ಆಧರಿಸಿ ರೈತರಿಗೆ ಬೆಲೆ ಸಿಗುತ್ತದೆ. ಇದರಲ್ಲಿ ನಷ್ಟವಾಗುವುದು ಅಪರೂಪ.

ಕೆಲವು ಭೂ ಮಾಲೀಕರು ತಮ್ಮ ಭೂಮಿಗಳನ್ನು (1-2 ಎಕರೆಗಳ ಸಣ್ಣ ಜಮೀನುಗಳು) ಕಡಿಮೆಗೆ ಬೆಲೆಗೆ ಮಾರಿ ಕೃಷಿ ಕಾರ್ಮಿಕರಾಗಿದ್ದಾರೆ. ಆದರೆ, ಅವರೀಗ ಪಶ್ಚಾತ್ತಾಪ ಪಡುತ್ತಿದ್ದಾರೆ. ಕೆಲವರು ಕೃಷಿಯೇತರ ಉದ್ಯೋಗಗಳನ್ನು ಅರಸಿ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ಪಟ್ಟಣಗಳಿಗೆ ವಲಸೆ ಹೋಗಿದ್ದಾರೆ. ಕೆಲವರು ಸಣ್ಣ ಪುಟ್ಟ ವ್ಯಾಪಾರಗಳನ್ನು ಆರಂಭಿಸಿದ್ದಾರೆ. ಕೃಷಿ ಕಾರ್ಮಿಕರ ಕೂಲಿ ದರ ಏರಿಕೆಗಳನ್ನು ನೋಡುವಾಗ ತಾವು ಮಾಡಿದ್ದು ಉತ್ತಮವಾಯಿತು ಎಂದು ಅವರು ಭಾವಿಸುತ್ತಾರೆ.

ಸಾಮಾನ್ಯವಾಗಿ ಹಿರಿಯ ರೈತರು ಈ ಬಗೆಯ ಬದಲಾವಣೆಗಳಿಗೆ ಬಹಳ ಅಂಜುತ್ತಾರೆ ಮತ್ತು ಒಪ್ಪುವುದಿಲ್ಲ. ಕೃಷಿಯ ಒಂದು ಅವಿಭಾಜ್ಯ ಅಂಗವಾಗಿದ್ದ ಹೈನುಗಾರಿಕೆ ಮೇವು ಮತ್ತು ಹೈನುಗಳನ್ನು ಮೇಯಿಸಲು ಕೊಡಬೇಕಾದ ಕೂಲಿಗಳ ಬೆಲೆ ಏರಿಕೆ ಕಾರಣವಾಗಿ ಈಗ ಹೆಚ್ಚುಕಡಿಮೆ ಇಲ್ಲವೇ ಇಲ್ಲ ಎನ್ನುವ ಸ್ಥಿತಿ ತಲುಪಿರುವುದನ್ನು ಕಂಡು ಅವರು ಬಹಳ ದುಃಖಪಡುತ್ತಾರೆ. ಮಳೆಯ ಪ್ರವೃತ್ತಿ ಮತ್ತು ಅಂತರ್ಜಲದ ಪರಿಸ್ಥಿತಿ ನೋಡಿದರೆ ಮುಂದೆ ಭಾರಿ ದುರಂತ ಸಂಭವಿಸಲಿದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಭೂಮಿಯ ನಷ್ಟದಿಂದ ಮುಂದೊಂದು ದಿನ ನೀರೂ ಸೇರಿದಂತೆ ಎಲ್ಲಕ್ಕೂ ದುಬಾರಿ ಬೆಲೆ ತೆರಬೇಕಾಗುತ್ತದೆ ಎಂದು ಅವರು ಅನುಮಾನಪಡುತ್ತಾರೆ. ಕೃಷಿಯ ಬಗ್ಗೆ ಇಂದಿನ ಯುವಕರಿಗೆ ಇರುವ ಅನಾದರ ಕೂಡ ಒಂದು ಪ್ರಮುಖ ಕಳವಳವಾಗಿದೆ.

ಸರ್ಕಾರವು ಭೂಮಿ ಸ್ವಾಧೀನ ಪಡಿಸಿಕೊಳ್ಳುವ ವಿಷಯದ ಬಗ್ಗೆ ತಮಗೆ ಸಂಪೂರ್ಣ ಮಾಹಿತಿ ಇಲ್ಲ ಮತ್ತು ತಾವು ಅದರಲ್ಲಿ ನ್ಯಾಯಬದ್ಧ ಹಿತಾಸಕ್ತಿದಾರರಾಗಿ ಭಾಗಿಯಲ್ಲ ಎಂದು ಹೇಳಿದರು. ಈ ವಿಚಾರದಲ್ಲಿ ತಾವು ನಷ್ಟ ಹೊಂದುತ್ತಿದ್ದೇವೆ ಎಂದು ಅವರು ಹೇಳಿದರು. ಕಾರಣ, ವೈವಿಧ್ಯತೆಗೆ ಆಗುವ ನಷ್ಟ, ಉಳುಮೆಯ ವೆಚ್ಚಗಳಲ್ಲಿನ ಬದಲಾವಣೆಗಳು, ಇತ್ಯಾದಿಗಳನ್ನು ಲೆಕ್ಕದಲ್ಲಿ ಹೇಳಲು ಆಗುವುದಿಲ್ಲ. ಅವುಗಳನ್ನು ವ್ಯಾಪಾರ ಮಾಡಲು ಸಾಧ್ಯವಿಲ್ಲ. ಈ ರೈತರು ಹೊಂದಿರುವ ಒಂದು ಖಚಿತ ಅಭಿಪ್ರಾಯವೆಂದರೆ ಅವರ ಭೂಮಿಗಳು ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗಳಿಗಿಂತ ಬಹಳ ಅಮೂಲ್ಯವಾದದ್ದು, ಏಕೆಂದರೆ ಅದು ಅವರ ಜೀವನಾಧಾರವಾಗಿವೆ. ನಾವು ಬದುಕುಳಿಯಲು ಅಹಾರ ಬೆಳೆಯಬೇಕು ಮತ್ತು ನೀರು ಲಭ್ಯವಿರಬೇಕು; ಇವುಗಳನ್ನು ಕೇವಲ ಭೂಮಿ ಮಾತ್ರ ಒದಗಿಸುತ್ತದೆ, ಎಂಬುದು ಅವರ ವಾದ. ಆಹಾರ ಮತ್ತು ನೀರಿನ ಅತ್ಯಂತ ಅಭಾವ ಸ್ಥಿತಿ ಬಂದಾಗ ಮಾತ್ರವೇ ಜನರಿಗೆ ಕೃಷಿಯನ್ನು ದೂರ ಮಾಡಿದುದರ ಪರಿಣಾಮಗಳು ಅರ್ಥವಾಗುತ್ತವೆ ಎಂದು ಕೂಡ ಅವರು ಹೇಳುತ್ತಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲ 4 ತಾಲೂಕುಗಳಲ್ಲೂ ನಗರೀಕರಣ ಹೆಚ್ಚು ಪ್ರಧಾನವಾಗುವುದರಿಂದ ಅದನ್ನು ಯೋಜಿತವಾಗಿ ಮಾಡುವುದರ ಬಗ್ಗೆ ನೋಡುವ ಅಗತ್ಯವಿದೆ. ಅದರಲ್ಲಿ ಒಳಗೊಳ್ಳುವ ಎಲ್ಲ ಹಿತಾಸಕ್ತಿದಾರರೂ ಸರಿಯಾದ ರೀತಿಯಲ್ಲಿ ಸೇರಿಕೊಂಡು ಅದನ್ನು ಊರ್ಜಿತಗೊಳಿಸಬೇಕು. ಯಾವ ಬಗೆಯ ಮಾರ್ಗೋಪಾಯ ನಿಜಕ್ಕೂ ಊರ್ಜಿತವಾಗಬಲ್ಲದು, ಯಾವ ಬಗೆಯ ಕೃಷಿ ಊರ್ಜಿತವಾಗಬಲ್ಲ ಅಭಿವೃದ್ಧಿಗೆ ಉತ್ತೇಜನ ನೀಡುತ್ತದೆ ಮತ್ತು ಅಂತಹ ಇತರ ಪ್ರಶ್ನೆಗಳ ಬಗ್ಗೆ ಕೆಲವಾರು ಒಮ್ಮನಸ್ಸಿನ ವ್ಯಕ್ತಿಗಳು ಸಂಶೋಧನೆ ನಡೆಸಿ ಪರಿಹಾರಗಳನ್ನು ಅರಸುತ್ತಿದ್ದಾರೆ.[77]

[77] http://www.navadarshanam.org/mission.html

## ಕಿರುಕ್ಷೇತ್ರ ಅಧ್ಯಯನ - 4
## ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಸ್ ಸೌಲಭ್ಯ ಮತ್ತು ಗುಣಮಟ್ಟ

### 4.1 ಪ್ರಸ್ತಾವನೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಮಹಾನಗರಕ್ಕೆ ಹತ್ತಿರದಲ್ಲಿರುವುದರಿಂದ ಅಲ್ಲಿ ಒಂದು ಉತ್ತಮವಾದ ಸಾರಿಗೆ ನೀತಿ ಇರುವುದು ಬಹಳ ಮುಖ್ಯವಾಗುತ್ತದೆ. ಬೆಂಗಳೂರನ್ನು ಭಾರತದ ಸಿಲಿಕಾನ್ ವ್ಯಾಲಿಯೆಂದು ಕರೆಯುತ್ತಾರೆ. ಇಲ್ಲಿ ಅನೇಕ ಅಂತಾರಾಷ್ಟ್ರೀಯ ಕಂಪನಿಗಳು, ಪ್ರಸಿದ್ಧ ಶೈಕ್ಷಣಿಕ ಸಂಸ್ಥೆಗಳು, ಆರೋಗ್ಯ, ಮತ್ತು ಮನರಂಜನಾ ಸೌಲಭ್ಯಗಳು ಇವೆ. ಪರಿಣಾಮವಾಗಿ ಜನರು ಅವಕಾಶಗಳನ್ನು, ಸೌಲಭ್ಯಗಳನ್ನು ಅರಸುತ್ತ ಬೆಂಗಳೂರಿನತ್ತ ಮುಖ ಮಾಡುತ್ತಾರೆ. ನಮ್ಮ ಕ್ಷೇತ್ರ ಸರ್ವೇಕ್ಷಣೆಗಳು, ವಿದ್ಯಾರ್ಥಿಗಳ ಜೊತೆ ವಿಚಾರ ವಿನಿಮಯಗಳು ತೋರಿದಂತೆ, ಸುಪ್ರಸಿದ್ಧ ಶೈಕ್ಷಣಿಕ ಸೌಲಭ್ಯಗಳು ಮತ್ತು ಮಹಾನಗರಿಯ ವಾತಾವರಣ, ಬೆಂಗಳೂರಿನ ಪ್ರಮುಖ ಆಕರ್ಷಣೆಗಳು. ಮತ್ತು, ಕರ್ನಾಟಕದ ಜಿಲ್ಲೆಯಲ್ಲಿ ಇರುವ ಕೌಶಲಗಳ-ಅಂತರಗಳನ್ನು ಗುರುತಿಸಲು ನಡೆದ ಇತ್ತೀಚಿನ ಅಧ್ಯಯನವೊಂದು[78] ತಿಳಿಸುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿದ್ಯಾರ್ಥಿಗಳು ಮತ್ತು ಉದ್ಯೋಗಸ್ಥರು ಬೆಂಗಳೂರನ್ನು ಆಯ್ಕೆ ಮಾಡಿಕೊಳ್ಳಲು ಕಾರಣಗಳು ಶೈಕ್ಷಣಿಕ ಹಾಗೂ ವೃತ್ತಿ ಜೀವನದ ಕುರಿತಾದ ಸೌಲಭ್ಯಗಳು (ಇವು, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರಿಗೆ ಬೆಂಗಳೂರು ನಗರದ ಬಗ್ಗೆ ಒಂದು ಕ್ಷಣಿಕನೋಟ ಒದಗಿಸುವುದಕ್ಕಾಗಿ ಕೆಲವು ಉದಾಹರಣೆಗಳು ಅಷ್ಟೇ.[79]

ಭೌಗೋಳಿಕವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೇರವಾಗಿ ಬೆಂಗಳೂರು ನಗರ ಜಿಲ್ಲೆಗಿಂತ ಎತ್ತರದಲ್ಲಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ಜಿಲ್ಲೆಗಳು ಬೆಂಗಳೂರು ನಗರದ ಇಡೀ ಉತ್ತರ ಭಾಗವನ್ನೇ ಆವರಿಸುವಂತೆ ಹರಡಿಕೊಂಡಿದೆ. ಚಿತ್ರಾತ್ಮಕವಾಗಿ ಹೇಳುವುದಾದರೆ ಅದು ಬೆಂಗಳೂರು ನಗರದ ಉತ್ತರ ಭಾಗಗಳ ಮೇಲೆ ತಲೆಕೆಳಗಾದ ಮುಕುಟದಂತೆ ಕುಳಿತಿದೆ. ಇಲ್ಲಿನ ತಾಲೂಕುಗಳ ನಡುವಣ ಪರಸ್ಪರ ಅಂತರಕ್ಕೆ ಹೋಲಿಸಿದರೆ ಬೆಂಗಳೂರು ನಗರವೇ ಅವುಗಳಿಗೆ ಹತ್ತಿರವಿದೆ. ಉದಾಹರಣೆಗೆ: ನೆಲಮಂಗಲದಿಂದ ಬೆಂಗಳೂರು ನಗರಕ್ಕೆ 30 ಕಿ.ಮೀ. ದೂರವಿದೆ, ಆದರೆ ನೆಲಮಂಗಲ-ಹೊಸಕೋಟೆ ದೂರ 54 ಕಿ.ಮೀ (ದೂರಗಳನ್ನು ಗೂಗಲ್ ನಕ್ಷೆಗಳಿಂದ ತೆಗೆದುಕೊಳ್ಳಲಾಗಿದೆ. ಇದು ಕೇವಲ ಅಂದಾಜು ಮಾತ್ರ). ಜೊತೆಗೆ ಬೆಂಗಳೂರು ನಗರಕ್ಕೆ ರಾಷ್ಟ್ರೀಯ ಹೆದ್ದಾರಿಗಳ ಮೂಲಕ ಬರಬಹುದಾದ್ದರಿಂದ ಪ್ರಯಾಣವೂ ಅನುಕೂಲವಾಗಿರುತ್ತದೆ.[80]

**ಚಿತ್ರ 4.1–ಅ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಕ್ಷೆ**




ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ನಗರ ಜಿಲ್ಲೆಗಳ ನಡುವೆ ಪ್ರಾಥಮಿಕ ಮೂಲಭೂತ ಸೌಲಭ್ಯಗಳು ಇವೆ. ಆದ್ದರಿಂದ ಒಂದು ಸಾರಿಗೆ ಕಾರ್ಯನೀತಿಯನ್ನು ಹೊಂದಿರುವುದು ಮುಖ್ಯವಾಗುತ್ತದೆ. ಇದರಿಂದ ಪ್ರಯಾಣದ ಗುಣಮಟ್ಟ ಹೆಚ್ಚುತ್ತದೆ ಮತ್ತು ಸಾರಿಗೆ ಸೇವೆಗಳ ಲಭ್ಯತೆಯನ್ನು ಸುಧಾರಿಸುತ್ತದೆ. ಪ್ರತಿಯಾಗಿ ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನರು ಬೆಂಗಳೂರು ನಗರದಲ್ಲಿ ಲಭ್ಯವಿರುವ ಅವಕಾಶಗಳು ಮತ್ತು ಸೌಲಭ್ಯಗಳ ಲಾಭ ಪಡೆಯಬಹುದು.

ಈ ಅಧ್ಯಯನದಲ್ಲಿ ನಾವು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ದೇವನಹಳ್ಳಿ ಮತ್ತು ಹೊಸಕೋಟೆ ಪಟ್ಟಣಗಳನ್ನು ಬೆಂಗಳೂರು ನಗರಕ್ಕೆ ಸಂಪರ್ಕಿಸುವ ವಿಷಯದಲ್ಲಿ ಬಸ್ ಸೇವೆಗಳ ಪಾತ್ರವನ್ನು ಕುರಿತು ನೋಡೋಣ. ನಿರ್ದಿಷ್ಟವಾಗಿ ನಾವು ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಪ್ರತಿದಿನ ಬೆಂಗಳೂರಿಗೆ ಹೋಗಿ ಬರುವವರಿಗೆ ಲಭ್ಯವಿರುವ ಬಸ್ ಸೇವೆಗಳ ಗುಣಮಟ್ಟವನ್ನು ಮತ್ತು ಲಭ್ಯತೆಯನ್ನು ನೋಡೋಣ. ಲಭ್ಯತೆಯನ್ನು ಲೆಕ್ಕ ಹಾಕುವಾಗ ನಾವು ಪ್ರತಿ ಪ್ರಯಾಣಿಕನಿಗೆ ತಗಲುವ ಪ್ರಯಾಣದ ವೆಚ್ಚ ಮತ್ತು ಲಭ್ಯವಿರುವ ಪ್ರಯಾಣದ ಬಗೆಗಳ ಸಂಖ್ಯೆಗಳನ್ನು ಬಳಸಿಕೊಳ್ಳುತ್ತೇವೆ. ಈ ಸಂಖ್ಯೆಗಳು ಪ್ರಯಾಣದ ಆರ್ಥಿಕ ಮತ್ತು ಭೌತಿಕ ಪರಿಮಾಣಗಳ ಸೂಚಕಗಳು. ಕುತೂಹಲಕಾರಿ ಎಂದರೆ, ಬಹುಪಾಲು ಪ್ರಯಾಣಿಕರು ಬಸ್ ಸೇವೆಗಳನ್ನು ಬಳಸಿಕೊಳ್ಳುವ ಉದ್ದೇಶವೆಂದರೆ ಸಾರ್ವಜನಿಕ ಬಸ್‌ಗಳು ನೀಡುವ ಆಕರ್ಷಕ ಟಿಕೆಟ್ ಸ್ಕೀಮುಗಳು ಸಾರ್ವಜನಿಕ ಬಸ್‌ಗಳಿಗಿಂತ ಖಾಸಗಿ ಬಸ್‌ಗಳು ಬೇಗ ಗಮ್ಯ ತಲುಪುವುದರಿಂದ ಹೆಚ್ಚು ಆಕರ್ಷಕ.

ನಂತರ ನಾವು ಬಸ್ ಸೇವೆಗಳ ಗುಣಮಟ್ಟವನ್ನು ಅಳೆಯಲು ಬಸ್ ಸೇವೆಯ ಲಭ್ಯತೆ ಮತ್ತು ಪ್ರಯಾಣಿಕರ ಪ್ರಯಾಣದ ಅನುಭವಗಳ ಮೇಲೆ ಪರಿಣಾಮ ಬೀರುವ ಅಂಶಗಳನ್ನು ಪರಿಗಣಿಸುತ್ತೇವೆ. ಈ ಅಂಶಗಳಲ್ಲಿ ನಿರ್ವಾಹಕ/ಚಾಲಕರ ಸಂವೇದನ ಶೀಲತೆ, ಸ್ಥಳಾವಕಾಶ ಮತ್ತು ಬಸ್ ಸೇವೆಗಳ ಆವರ್ತನಗಳೂ ಸೇರಿರುತ್ತವೆ. ಬಸ್ಸುಗಳು ನಿಗದಿತ ವೇಳೆಗೆ ಬರದಿರುವುದು ಅತಿ ದೊಡ್ಡ ಸಮಸ್ಯೆ. ದೂರ ಪ್ರಯಾಣಿಕರಿಗಂತೂ ಇದು ಮತ್ತಷ್ಟು ದೊಡ್ಡ ಸಮಸ್ಯೆಯಾಗುತ್ತದೆ.

### 4.2 ಗ್ರಂಥ ಪರಿಶೀಲನೆ

ನಗರಗಳು ಆರ್ಥಿಕ ಚಟುವಟಿಕೆಯ ಕೇಂದ್ರಗಳು. ಸಾಮಾನ್ಯವಾಗಿ, ನಗರದ ಹೊರ ಅಂಚುಗಳಲ್ಲಿ/ಪರಿಧಿಯಲ್ಲಿ ಕೂಲಿ/ಕಾರ್ಮಿಕ ಮತ್ತು ಜಮೀನು ಬೇಡಿಕೆ ಇರುವ ಉದ್ದಿಮೆಗಳು ಹೆಚ್ಚಾಗಿರುತ್ತವೆ ಎಂದು ಗಮನಿಸಲಾಗಿದೆ. ಶಿಕ್ಷಣ ಹೊಂದಿದ ಕಾರ್ಮಿಕರು ಮತ್ತು ಬಂಡವಾಳ ಹೂಡಿಕೆ ಅವಶ್ಯಕತೆ ಮೇಲೆ ಭಾರಿಯಾಗಿ ಅವಲಂಬಿಸುವ ಕೈಗಾರಿಕೆಗಳು ನಗರದ ಕೇಂದ್ರ ಭಾಗಗಳಲ್ಲಿ ಕೇಂದ್ರಿತವಾಗುತ್ತವೆ. ನಗರಗಳ ಸಿದ್ಧಾಂತದ ಪ್ರಕಾರ ಒಂದು ವಿಶಾಲ ಪ್ರದೇಶದಲ್ಲಿ ಗುಂಪು ಗೂಡುವ ಉದ್ದಿಮೆಗಳ ವಿದ್ಯಮಾನ ಮತ್ತು ಪರಸ್ಪರ ಹತ್ತಿರದಲ್ಲಿ ಸ್ಥಾಪನೆಗೊಳ್ಳುವುದನ್ನು ಗುಂಪುಗೂಡುವಿಕೆಯ ಆರ್ಥಿಕತೆ ಎಂದು ಉಲ್ಲೇಖಿಸಲಾಗುತ್ತದೆ. ಸ್ಥಳೀಯ ಮೂಲಭೂತ ಸೌಕರ್ಯಗಳ ಹಂಚಿಕೆ, ಸಮರ್ಥ ಸರಬರಾಜು, ವಿಶೇಷ ಕೌಶಲ್ಯವುಳ್ಳ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಲಭ್ಯವಾಗುವುದು, ಮಾಲಿಕರು ಹಾಗೂ ಉದ್ಯೋಗಿಗಳ ನಡುವೆ ಹೆಚ್ಚಿನ ಒಂದಾಣಿಕೆಗೆ ಉತ್ತಮ ಅವಕಾಶವಿರುವುದು, ಜ್ಞಾನ ವಿನಿಮಯ ಮತ್ತು ಸಮರ್ಥ ವ್ಯಾಪಾರ ರೂಢಿಗಳ ಹಾಗೂ ತಂತ್ರಜ್ಞಾನ ಅಳವಡಿಕೆಗೆ ಅವಕಾಶವಿರುವುದು ನಗರ ಆರ್ಥಿಕತೆ ಗುಂಪುಗೂಡುವಿಕೆಗೆ ಮೂಲವೆಂದು ಡ್ಯೂರಟನ್ ಮತ್ತು ಪುಗ(2004) ಪ್ರತಿಪಾದಿಸಿದ್ದಾರೆ.[81]

ಉತ್ಪಾದನೀಯತೆ ಮೇಲೆ ಆರ್ಥಿಕತೆ ಗುಂಪುಗೂಡುವಿಕೆಯ ಪ್ರಭಾವವನ್ನು ಚೆನ್ನಾಗಿ ಗಮನಿಸಲಾಗಿದ್ದು, ವ್ಯಾಪಕವಾಗಿ ಅಧ್ಯಯನ ಮಾಡಲಾಗಿದೆ. ಉತ್ಪಾದನೀಯತೆ ಮೇಲೆ ಆರ್ಥಿಕತೆ ಗುಂಪುಗೂಡುವಿಕೆಯ ಪ್ರಭಾವವನ್ನು ಪರಿಮಾಣೀಕರಿಸಲು ಮಾಡಿದ ಮೊದಲ ಗಮನಾರ್ಹ ಅಧ್ಯಯನವನ್ನು ಐಯೋ (1975) ಕೈಗೊಂಡಿದ್ದರು. ಅಲ್ಲಿ ಅವರು, ನಗರದ ಜನಸಂಖ್ಯೆಯನ್ನು ದುಪ್ಪಟ್ಟುಗೊಳಿಸುವ ಮೂಲಕ ಕಾರ್ಮಿಕ ಉತ್ಪಾದನೀಯತೆ ಶೇ. 6 ರಷ್ಟು ಹೆಚ್ಚುತ್ತದೆ ಎಂದು ತೋರಿಸಲು ಕಾರ್ಮಿಕ ಉತ್ಪಾದಕತೆಯ ಅಳತೆಯಾಗಿ ಪ್ರತಿ ಕಾರ್ಮಿಕನ ಉತ್ಪಾದಕತೆಯನ್ನು ಬಳಸುತ್ತಾರೆ. ಆದರೆ, ಆರ್ಥಿಕತೆ

---

78 ಕರ್ನಾಟಕ ರಾಜ್ಯಕ್ಕೆ ಜಿಲ್ಲಾವಾರು ಕೌಶಲ್ಯ ಅಂತರ ಅಧ್ಯಯನ(2013), ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ
79 ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನರಿಗೆ ಬೆಂಗಳೂರು ನಗರದ ಆಕರ್ಷಣೆಯ ಒಂದು ಕಿರುಚಿತ್ರ ಒದಗಿಸಲು ಇವು ಕೆಲವು ಉದಾಹರಣೆಗಳು ಮಾತ್ರ
80 ಅಂತರವನ್ನು ಗೂಗಲ್ ನಕ್ಷೆಯಿಂದ ಪಡೆದುಕೊಳ್ಳಲಾಗಿದೆ ಮತ್ತು ಇದು ಎರಡು ಸ್ಥಳಗಳ ನಡುವಿನ ಅಂದಾಜು ದೂರವನ್ನು ಮಾತ್ರ ಒದಗಿಸುತ್ತದೆ.
81 ವಿವರವಾದ ಚರ್ಚೆಗೆ ಪೂಗಾ (2009) ನೋಡಿ)

ಗುಂಪುಗೂಡುವಿಕೆಯಲ್ಲಿ ತೀವ್ರವಾದ ಬಂಡವಾಳ ಬಳಸುವ ಸಾಧ್ಯತೆಗಳಿರುವುದರಿಂದ ಕಾರ್ಮಿಕ ಉತ್ಪಾದನೀಯತೆಯ ಅಳತೆಯಾಗಿ ಪ್ರತಿ ಕಾರ್ಮಿಕನ ಉತ್ಪಾದಕತೆ ಉಪಯೋಗಿಸುವಲ್ಲಿ ಊರ್ಧ್ವಗಾಮಿ ಪಕ್ಷಪಾತವಿದೆ. ಅಮೆರಿಕದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ತಯಾರಿಕಾ ಉದ್ದಿಮೆಗಳಲ್ಲಿ ಘಟಕ ಮಟ್ಟದ ದತ್ತಾಂಶ ಬಳಸುವ ಮೂಲಕ, ಹೆಂಡರ್ಸನ್(2003) ಈ ಸಂಭವ್ಯ ಊರ್ಧ್ವಗಾಮಿ ಪಕ್ಷಪಾತವನ್ನು ಗಣನೆಗೆ ತೆಗೆದುಕೊಳ್ಳಲು ಪ್ರಯತ್ನಿಸಿದ್ದಾರೆ ಮತ್ತು ತಮ್ಮ ಅಂದಾಜಿನಲ್ಲಿ ನಗರ-ಸಮಯ ನಿಶ್ಚಿತ ಪ್ರಭಾವಗಳನ್ನು ಸೇರಿಸುವ ಮೂಲಕ ಗಮನಕ್ಕೆ ಬಾರದ ಮಿಶ್ರರೂಪತೆಯನ್ನು ಗಣನೆಗೆ ತೆಗೆದುಕೊಂಡ ನಂತರ, ಯಂತ್ರ ತಯಾರಿಕೆ ಉದ್ದಿಮೆಗಳನ್ನು ಬಿಟ್ಟು ಅತ್ಯಾಧುನಿಕ ತಂತ್ರಜ್ಞಾನ ಉದ್ದಿಮೆಗಳಲ್ಲಿ ನಗರಗಳ ವೈಯಕ್ತಿಕ ಉತ್ಪಾದನೀಯತೆಯ ಪ್ರಭಾವಗಳನ್ನು ಗಮನಾರ್ಹವಾಗಿ ಕಂಡುಹಿಡಿದ್ದಾರೆ.[82]

ಈ ಅಧ್ಯಯನದ ಫಲಿತಾಂಶಗಳು ಬೆಂಗಳೂರು ನಗರದಂಥ ಆರ್ಥಿಕತೆ ಗುಂಪುಗೂಡುವಿಕೆಯ ಆರ್ಥಿಕ ಚಟುವಟಿಕೆಯ ಸ್ವರೂಪವನ್ನು ಹಾಗೂ ಅದರ ಇರುವಿಕೆಯಿಂದ ಉದ್ಭವವಾಗುವ ಆರ್ಥಿಕ ಅನುಕೂಲಗಳನ್ನು ವಿವರಿಸುತ್ತವೆ. ಆರ್ಥಿಕತೆ ಗುಂಪುಗೂಡುವಿಕೆಯ ವಾಸ್ತವ ಅನುಕೂಲಗಳು ನಗರದ ಕೇಂದ್ರ ಭಾಗದಲ್ಲಿ ನೆಲೆಸಿರುತ್ತವೆ ಎನ್ನುವುದು ಸಹಜ ಮತ್ತು ಈ ಲಾಭಗಳು ವಿಪರೀತ ಕೇಂದ್ರಿತಾವಗಿವೆ. ಯಾನ್ ಲಿಯು ಮತ್ತು ಇತರರು (2011) ಚೀನಾ ದೇಶಮಟ್ಟದ ದತ್ತಾಂಶವನ್ನು ಬಳಸಿ ಸುತ್ತುವರಿದ ದೇಶದ ಆರ್ಥಿಕ ಬೆಳವಣಿಗೆಯ ಮೇಲೆ ದೊಡ್ಡ ನಗರಗಳ ಪ್ರಭಾವ ಕ್ಷೀಣವಾಗಿರುತ್ತದೆ ಎಂದು ಕಂಡುಹಿಡಿದಿದ್ದಾರೆ. ಇದು ಸ್ಥಳವಾಕಾಶದ ಕೊರತೆಯನ್ನು ಸೂಚಿಸುತ್ತದೆ.

ಆರ್ಥಿಕತೆ ಗುಂಪುಗೂಡುವಿಕೆಯ ಲಾಭದಾಯಕತೆಯ ಬೃಹದತೆಯನ್ನು ಸಾರಿಗೆ ಮೂಲಭೂತಸೌಕರ್ಯದಲ್ಲಿ ಗಣನೀಯ ಹೂಡಿಕೆ ಮೂಲಕ ಹೆಚ್ಚಿಸಬಹುದು. ಸಾರಿಗೆ ಮೂಲಭೂತಸೌಕರ್ಯದಲ್ಲಿ ಹಾಗೂ ಸೇವೆಗಳಲ್ಲಿ ಹೂಡಿಕೆಯನ್ನು ಸುಧಾರಿಸುವ ಮಾಡುವ ಮೂಲಕ, ಒಟ್ಟು ಆರ್ಥಿಕತೆಗೆ ಹೆಚ್ಚಿನ ಆರ್ಥಿಕ ಲಾಭ ಪರಿಣಮಿಸುತ್ತದೆ ಎಂದು ತೋರಿಸಲು ವೆನೆಇಯಬಲ್ಸ್(2004) ಒಂದು ಸೈದ್ಧಾಂತಿಕ ಮಾದರಿಯನ್ನು ಅಭಿವೃದ್ಧಿಪಡಿಸಿದ. ಆದರೆ, ಸಾರಿಗೆ ಕುರಿತ ಮಾಹಿತಿಗಳು ಸಾಗಣೆ ಕುರಿತಾದ ಉಪಕ್ರಮಗಳನ್ನು ಹಾಗೂ ಸಾರಿಗೆ ಖರ್ಚುಗಳ ಮೇಲೆ ಅವುಗಳ ಪ್ರಭಾವ, ಸಂಪರ್ಕತೆ ಮತ್ತು ಇತರ ಅಂಶಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸಬೇಕಾಗುತ್ತದೆ ಎನ್ನುವ ಅಂಶವನ್ನು ಒತ್ತಿ ಹೇಳುತ್ತವೆ. ಈ ವ್ಯವಸ್ಥೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಸಾರಿಗೆ ಸೇವೆಯಲ್ಲಿ ತರುವ ಬದಲಾವಣೆಗಳು ಅನಪೇಕ್ಷಿತ ಫಲಿತಾಂಶ ನೀಡಬಹುದು.

**SACTRA** ಅವರಿಂದ ಸಾಗಣೆ ಮೇಲಿನ ಹೂಡಿಕೆ, ಸಾರಿಗೆ ತೀವ್ರತೆ ಮತ್ತು ಆರ್ಥಿಕ ಬೆಳವಣಿಗೆ ನಡುವಿನ ಸಂಬಂಧಗಳ ಕುರಿತಾದ ಒಂದು ಅಧ್ಯಯನ ಸಾರಿಗೆ ಮೇಲಿನ ಹೂಡಿಕೆ ಪ್ರಭಾವ ಬೀರುವ ವ್ಯವಸ್ಥೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ:

ಎ. ಸಾರಿಗೆ ಮೇಲಿನ ಹೂಡಿಕೆ ಉದ್ಯೋಗ ಅವಕಾಶವನ್ನು ವಿಸ್ತರಿಸಬಹುದು ಮತ್ತು ವಿಶೇಷ ಕೌಶಲ್ಯವಿರುವ ಕಾರ್ಮಿಕರನ್ನು ಪಡೆಯುವ ಅವಕಾಶವನ್ನು ಹೆಚ್ಚಿಸುತ್ತದೆ.

ಬಿ. ಅದು, ಸ್ಥಳೀಯ ಜನರಿಗೆ ಉದ್ಯೋಗಾವಕಾಶಗಳನ್ನು ಹಾಗೂ ಆಯ್ಕೆಗಳನ್ನು ಹೆಚ್ಚಿಸಬಹುದು

ಸಿ. ಮಾರುಕಟ್ಟೆಗಳೊಳಗೆ ಮತ್ತು ನಡುವೆ ಚಲನೆಯ ಅವಕಾಶಗಳನ್ನು ಸುಧಾರಿಸುವ ಮೂಲಕ ಸರಕು ಹಾಗೂ ಸೇವೆಗಳ ಮಾರುಕಟ್ಟೆ ವಿಸ್ತರಗೊಳ್ಳಲು ಅನುವು ಮಾಡಿಕೊಡಬಹುದು

ಡಿ. ಹೊಸ ಪ್ರದೇಶಗಳನ್ನು ನಗರ.ಅಭಿವೃದ್ಧಿ ಹೊಂದಿದ ಕೇಂದ್ರಗಳೊಂದಿಗೆ ಜೋಡಿಸುವ ಮೂಲಕ ಅಭಿವೃದ್ಧಿ ಉದ್ದೇಶಗಳಿಗೆ ಭೂಮಿಯ ಲಭ್ಯತೆಯನ್ನು ಹೆಚ್ಚಿಸಬಹುದು.

ಇ. ಸಾರಿಗೆ/ಸಾಗಣೆ ಮೂಲಭೂಅತ ಸೌಕರ್ಯದಲ್ಲಿ ಸುಧಾರಣೆಗಳು ಬಂದರೆ, ಒಳಮುಖ, ಸ್ವೇಚ್ಛಾಚಾರ ಹೂಡಿಕೆಯನ್ನು ಆಕರ್ಷಿಸಬಹುದು. ಇದು, ಆರ್ಥಿಕ ಚಟುವಟಿಕೆಯ ಮಟ್ಟ ಹಾಗೂ ಬೆಳವಣಿಗೆಯ ಮೇಲೆ ಧನಾತ್ಮಕ ಪ್ರಭಾವ ಬೀರಬಹುದು.

ಮೇಲಿನ ಅಂಶಗಳಲ್ಲದೆ,ಮಕ್ಕಲಿಗೆ ಉಚಿತ ಸಾರಿಗೆ ಇದ್ದಾಗಿಯೂ, ಸಾರಿಗೆ ಲಭ್ಯತೆ ಕಡಿಮೆ ಆದಾಯದ ಕುಟುಂಬಗಳ ಮಕ್ಕಳಿಗೆ ಅತ್ಯಾವಶ್ಯಕವಾದದ್ದು. ಅನುಕೂಲಕರ ಸಾರಿಗೆ ಸೇವೆ ಲಭ್ಯವಿಲ್ಲದಿರುವಾಗ ಮಕ್ಕಳು ಶಾಲೆಗಳಿಗೆ ದಾಖಲುಗೊಳ್ಳುವ ಆಯ್ಕೆಗಳು ಸೀಮಿತಗೊಂಡು, ಸಮೀಪದ ಶಾಲೆಗಳಿಗೆ ದಾಖಲಾಗಬೇಕಾಗುತ್ತದೆ. ಸಾಮಾಜಿಕ ಸ್ಥಾನಮಾನ ಮತ್ತು ಆರೋಗ್ಯ ಮಟ್ಟಗಳ ನಡುವೆ ಒಂದು ಬಲವಾದ ಸಹಜ ಸಂಬಂಧವಿದೆ ಎಂದು ಮಾರ್ಮೋಟ್ ಪರಿಶೀಲನೆ(2010) ಕಂಡುಕೊಂಡಿದೆ. ಸಾಮಾಜಿಕ ಅಸಮಾನತೆಗಳು ಆರೋಗ್ಯದಲ್ಲೂ ಅಸಮಾನತ್ವೆ ಉಂಟು ಮಾಡುತ್ತವೆ ಎಂದು ಅದು ಹೇಳುತ್ತದೆ. ಸಕ್ಷಮವಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಇಲ್ಲದಿರುವಾಗ ತಮ್ಮ ನೆರೆಹೊರೆಯಲ್ಲಿ/ಸ್ಥಳೀಯ ಪ್ರದೇಸಗಳಲ್ಲಿ ವಿಶೇಷ ಆರೋಗ್ಯ ಸೌಲಭ್ಯಗಳನ್ನು ಪಡೆದುಕೊಳ್ಳಲು ಕಷ್ಟವಾಗುತ್ತದೆ ಎಂದು ಅವರು ಕಂಡುಕೊಂಡಿದ್ದಾರೆ. ಅಲ್ಲದೆ, ಸಾರಿಗೆ ದಟ್ಟಣೆ, ಮಾಲಿನ್ಯ ಮಟ್ಟ ಹಾಗೂ ಕಾರ್ಬನ್ ಹೆಜೆಜ್ ಗುರುತು ಕಡಿಮೆ ಮಾಡುವಂಥ ಅನುಕೂಲಗಳು ಸಕ್ಷಮ ಸಾರ್ವಜನಿಕ ಸಾರಿಗೆಯನ್ನು ಪ್ರೋತ್ಸಾಹಿಸುವಲ್ಲಿ ಮೂಲಭೂತ ಪ್ರೇರಕ ಅಂಶಗಳು.

## 4.3 ಸರ್ವೇಕ್ಷಣಾ ವಿಧಾನ ಮತ್ತು ದತ್ತಾಂಶ

ಈ ಸರ್ವೇಕ್ಷಣೆಯನ್ನು ದೇವನಹಳ್ಳಿ ಮತ್ತು ಹೊಸಕೋಟೆಯ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಬೆಳಗ್ಗೆ 8 ರಿಂದ ರಾತ್ರಿ 12ರವರೆಗೆ ನಡೆಸಲಾಯಿತು, ದಿನನಿತ್ಯದ ಬೆಂಗಳೂರು ಪ್ರಯಾಣಿಕರಿಗೆ ಬಸ್‌ಗಳ ಲಭ್ಯತೆ ಮತ್ತು ಗುಣಮಟ್ಟಗಳನ್ನು ಅರ್ಥಮಾಡಿಕೊಳ್ಳಲು. ಬಸ್ ನಿಲ್ದಾಣಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶಿಕ್ಷಣ ಇಲಾಖೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಗಳ ಕೆಲವು ಅಧಿಕಾರಿಗಳ ಸಲಹೆ ಪಡೆಯಲಾಗಿತ್ತು. ಅವರೆಲ್ಲ ಪ್ರತಿದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬೆಂಗಳೂರು ನಗರಕ್ಕೆ ಪ್ರಯಾಣಿಸುತ್ತಾರೆ (ಬಸ್ ನಿಲ್ದಾಣದಲ್ಲಿ ಕಾಯುತ್ತಿರುವ ಪ್ರಯಾಣಿಕರು ಬೆಂಗಳೂರು ನಗರಕ್ಕೆ ಪ್ರಯಾಣಿಸುತ್ತಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಪ್ರತಿಯೊಬ್ಬ ಸಂದರ್ಶಕನಿಗೂ ತಿಳಿಸಲಾಗಿತ್ತು. ಇದರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬೆಂಗಳೂರು ನಗರಕ್ಕೆ ಪ್ರಯಾಣಿಸುವವರನ್ನೇ ನಿರ್ದಿಷ್ಟವಾಗಿ ಪ್ರಶ್ನೆ ಕೇಳುವಂತಾಯಿತು)

ಸರ್ವೇಕ್ಷಣಾ ಅವಧಿಯಲ್ಲಿ, ಎರಡು ಬಸ್ ನಿಲ್ದಾಣಗಳಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಯಾವುದೇ ಪ್ರಯಾಣಿಕನನ್ನು ಯಾದೃಚ್ಛೀಕೃತವಾಗಿ ಸಂಪರ್ಕಿಸಲು ಪ್ರತಿಯೊಬ್ಬ ಸಂದರ್ಶಕನಿಗೂ ತಿಳಿಸಲಾಗಿತ್ತು.[83] ಒಬ್ಬ ಮಹಿಳೆ ಮತ್ತು ಒಬ್ಬ ಪುರುಷ ಸಂದರ್ಶನಗಳನ್ನು ಮಾಡಿದರು, ಆಯ್ಕೆ ಮಾಡುವಾಗ ಆಗಬಹುದಾದ ಲಿಂಗ ತಾರತಮ್ಯದ ಸಾಧ್ಯತೆಗಳನ್ನು ತೆಗೆದುಹಾಕಲು. ಆದ್ದರಿಂದ ಸರ್ವೇಕ್ಷಣದ ಅವಧಿಯಲ್ಲಿ ಬೆಂಗಳೂರು ನಗರಕ್ಕೆ ಪ್ರಯಾಣಿಸುತ್ತಿದ್ದ ಯಾವುದೇ ವ್ಯಕ್ತಿ (ಪುರುಷ/ಮಹಿಳೆ) ಸ್ಯಾಂಪಲಿನಲ್ಲಿ ಬರುವ ಸಾಧ್ಯತೆಗಳು ಇದ್ದವು. ಬೆಂಗಳೂರು ಗ್ರಾಮಾಂತರ ಜಿಲ್ಲೆದಿಂದ ಬೆಂಗಳೂರು ನಗರಕ್ಕೆ ಬಸ್ ಸೇವೆಗಳನ್ನು ಬಳಸಿಕೊಂಡು ಪದೇ ಪದೇ/ನಿಯಮಿತವಾಗಿ ಪ್ರಯಾಣಿಸುತ್ತಿದ್ದ ವ್ಯಕ್ತಿ ಸ್ಯಾಂಪಲಿನಲ್ಲಿ ಬರುವ ಸಾಧ್ಯತೆಗಳು ಅಷ್ಟಾಗಿ ಪ್ರಯಾಣಿಸದವರು ಸ್ಯಾಂಪಲಿನಲ್ಲಿ ಬರುವುದಕ್ಕಿಂತ ಹೆಚ್ಚಿತ್ತು. ಆದ್ದರಿಂದ ದತ್ತಾಂಶವು ಪ್ರಯಾಣದ ಆವರ್ತನವನ್ನು ತೂಕಮಾಡಿತ್ತು.

### 4.3.1 ದತ್ತಾಂಶ

ಮಾದರಿ ದತ್ತಾಂಶವು ಲಿಂಗ, ವಯಸ್ಸು, ಮತ, ವೈವಾಹಿಕ ಸ್ಥಿತಿ, ಶೈಕ್ಷಣಿಕ ಅರ್ಹತೆಗಳು, ಉದ್ಯೋಗ, ಮನೆಯಲ್ಲಿರುವ ಒಟ್ಟು ಸದಸ್ಯರು, ಕುಟುಂಬದಲ್ಲಿ ಕೆಲಸ ಮಾಡುವ ಸದಸ್ಯರ ಸಂಖ್ಯೆ, ಉತ್ತರಿಸುತ್ತಿರುವವರ/ಕುಟುಂಬದ ಆದಾಯ ಮತ್ತು ವೆಚ್ಚ, ಇತ್ಯಾದಿ ವ್ಯಾಪಕವಾದ ಜನಸಂಖ್ಯೆಯ ಮತ್ತು ಸಾಮಾಜಿಕ-ಆರ್ಥಿಕ ಲಕ್ಷಣಗಳನ್ನು ಒಳಗೊಂಡಿದೆ. ಮತ್ತೂ, ನಾವು ಪ್ರಯಾಣದ ಉದ್ದೇಶ ಮತ್ತು ಆವರ್ತನ, ಗಮ್ಯ ತಲುಪಲು ಬಳಸುವ ಸಾರಿಗೆಗಳ ಬಗೆಗಳು, ಪ್ರಯಾಣದ ವೆಚ್ಚ ಮತ್ತು ತೃಪ್ತಿಗಳ ಕುರಿತಾಗಿ ಮಾಹಿತಿ ಸಂಗ್ರಹಿಸಿದೆವು. ಈ ಸರ್ವೇಕ್ಷಣದ ದತ್ತಾಂಶ ಬೆಂಗಳೂರು ಗ್ರಾಮಾಂತರ ಜಿಲ್ಲೆದಿಂದ ಬೆಂಗಳೂರು ನಗರಕ್ಕೆ ಪ್ರಯಾಣಿಸುವವರ ಲಕ್ಷಣಗಳನ್ನು ಮತ್ತು ಅನುಭವಗಳನ್ನು ವಿವರಿಸುತ್ತದೆಯೇ ಹೊರತು

[82] ವಿವರವಾದ ಚರ್ಚೆಗೆ ಪೂಗಾ (2009) ನೋಡಿ) ಕ್ರೋಢೀಕೃತ ಆರ್ಥಿಕತೆಗಲ ಕಾರಣ ಉತ್ಪಾದನೀಯತೆ ಮೇಲಿನ ಪ್ರಭಾವದ ಅಂದಾಜುಗಳಿಗೆ ಕಾರಣ (ಎ) ಗುರುತಿಸುವ ಸಮಸ್ಯೆ- ಬೃಹತ್ ಸಂಸ್ಥೆಗಳು ಹಾಗೂ ಅದರ ಮಾರುಕಟ್ಟೆ ಗಾತ್ರದಿಂದಾಗಿ ಹೊಸ ಬೃಹತ್ ಸಂಸ್ಥೆಗಳು ಮಾರುಕಟ್ಟೆ ಪ್ರವೇಶಿಸುತ್ತಿರುವುದು ಇರುವ ಕಾರಣ ಹೆಚ್ಚಿನ ಉತ್ಪಾದನೆಗೆ ಕಾರಣವಾಗಿರಬಹುದು; (ಬಿ) ವಿವಿಧ ಪ್ರದೇಶಗಳಲ್ಲಿ ಕಾರ್ಮಿಕರ ಗುಣಮಟ್ಟದಲ್ಲಿ ವ್ಯತ್ಯಾಸ.

[83] ಬಸ್ ನಿಲ್ದಾಣಗಳಲ್ಲಿ ಕಾಯುವಿಕೆ, ಪ್ರಯಾಣಿಕರು ಬೆಂಗಳೂರು ನಗರಕ್ಕೆ ಪ್ರಯಾಣಿಸುತ್ತಿರುವರೆ ಎಂದು ಪ್ರಯಾಣಿಕರಿಂದ ತಿಳಿದುಕೊಳ್ಳಲು ಪ್ರತಿಯೊಬ್ಬ ಸಂದರ್ಶಕನಿ/ಳಿಗೆ ಸೂಚುಇಸಲಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದ ಬೆಂಗಳೂರು ನಗರಕ್ಕೆ ಪ್ರಯಾಣಿಸುವ ಪ್ರಯಾಣಿಕರಿಗೆ ಈ ಪ್ರಶ್ನೆಗಳನ್ನು ಕೇಲಲಾಗುತ್ತಿದೆ ಎಂದು ಖಚಿತಪಡಿಸಿಕೊಳ್ಳಲು ಈ ಪರಿಶೀಲನೆ ವಿಧಾನ ಕೈಗೊಳ್ಳಲಾಯಿತು.

ಅವರ ಸಾಮಾನ್ಯ ಗುಣಲಕ್ಷಣಗಳು ಮತ್ತು ಅನುಭವಗಳನ್ನಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದ್ದು ಮುಖ್ಯ.

ಈ ಅಧ್ಯಯನದ ಉದ್ದೇಶಕ್ಕಾಗಿ ನಾವು, ಪ್ರತಿಕ್ರಿಯಿಸದವರಲ್ಲಿ ಪ್ರಶ್ನಾವಳಿಯನ್ನು ಪೂರ್ಣಗೊಳಿಸಲು ಸಾಧ್ಯವಾದವರನ್ನು ಮಾತ್ರವೇ ಪರಿಗಣಿಸಿದೆವು. ಆದ್ದರಿಂದ ಅಂತಿಮವಾಗಿ ಸಂದರ್ಶಿಸಿದ 96 ಜನರಲ್ಲಿ 81 ಜನರ ದತ್ತಾಂಶ ಮಾತ್ರ ಇದೆ. ಈ ಅಂತಿಮ 81ರಲ್ಲಿ 34 ಜನರನ್ನು ದೇವನಹಳ್ಳಿ ಬಸ್ ನಿಲ್ದಾಣದಲ್ಲಿ ಸಂದರ್ಶಿಸಲಾಗಿತ್ತು ಮತ್ತು ಉಳಿದ 47 ಜನರನ್ನು ಹೊಸಕೋಟೆ ಬಸ್ ನಿಲ್ದಾಣದಲ್ಲಿ. ಕೋಷ್ಟಕಅ4.1 ಪ್ರತಿಕ್ರಿಯಿಸಿದವರ ಜನಶಾಸ್ತ್ರೀಯ ಮತ್ತು ಸಮಾಜೋ-ಆರ್ಥಿಕ ವ್ಯಕ್ತಿಚಿತ್ರಣವನ್ನು ಸ್ಥೂಲವಾಗಿ ನೀಡುತ್ತದೆ. ನಮ್ಮ ಸ್ಯಾಂಪಲಿನಲ್ಲಿ ಬಹುಪಾಲು ಜನ ಒಂಟಿ (ಶೇ.70.37), ಪುರುಷರು (ಶೇ. 69.14), ಅಕ್ಷರಸ್ಥರು (ಶೇ. 95.53), ಹಿಂದೂ (ಶೇ. 96.29), ಮತ್ತು ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳ ಉದ್ಯೋಗಿಗಳು (ಶೇ.53.09). ನಾವು ಹೊಸಕೋಟೆಯಲ್ಲಿ 18 ವಿದ್ಯಾರ್ಥಿಗಳನ್ನು, ಅಂದರೆ ದೇವನಹಳ್ಳಿಗಿಂತ 10 ಹೆಚ್ಚು, ಸಂದರ್ಶಿಸಲು ಸಾಧ್ಯವಾಯಿತು.

ಹೊಸಕೋಟೆಯಲ್ಲಿ ಉತ್ತರಿಸಿದವರ ಸರಾಸರಿ ಆದಾಯ ದೇವನಹಳ್ಳಿಯಲ್ಲಿ ಉತ್ತರಿಸಿದವರ ಆದಾಯಕ್ಕಿಂತ ಶೇ. 33 ಕಡಿಮೆ ಎಂದು ವರದಿಯಾಗಿತ್ತು. ವೆಚ್ಚದ ವಿಷಯಕ್ಕೆ ಬಂದರೆ, ಎರಡೂ ತಾಲೂಕುಗಳಿಂದ ಉತ್ತರಿಸಿದವರ ವೆಚ್ಚದ ಪರಿಮಾಣ ಒಂದೇ ಇತ್ತು, ಅವರ ಮಾಸಿಕ ಆದಾಯದ ಶೇ.46. ಮಾಸಿಕ ಕುಟುಂಬದ ಆದಾಯ ಮತ್ತು ವೆಚ್ಚದಲ್ಲಿ ಒಂದೇ ಬಗೆಯ ಪ್ರವೃತ್ತಿ ಕಂಡುಬರುತ್ತದೆ. ಆದರೆ ಹೊಸಕೋಟೆಯಿಂದ ಉತ್ತರಿಸಿದವರ ಮಾಸಿಕ ಕುಟುಂಬ ಆದಾಯ ದೇವನಹಳ್ಳಿಯಲ್ಲಿ ಉತ್ತರಿಸಿದವರ ಕುಟುಂಬಗಳಆದಾಯಕ್ಕಿಂತ ಶೇ. 11 ಹೆಚ್ಚಿಗೆ ಇದೆ. ಮತ್ತೂ, ಎರಡೂ ತಾಲೂಕುಗಳಲ್ಲಿ ಸದಸ್ಯರಿರುವ ಪ್ರತಿ ಕುಟುಂಬದಲ್ಲಿ ಇಬ್ಬರು ದುಡಿಯುವ ಸದಸ್ಯರಿದ್ದಾರೆ ಮತ್ತು ದೇವನಹಳ್ಳಿ ಮತ್ತು ಹೊಸಕೋಟೆಗಳಲ್ಲಿ ಅನುಕ್ರಮವಾಗಿ ಸರಾಸರಿ 4 ಮತ್ತು 5 ಸದಸ್ಯರಿದ್ದಾರೆ.

**ಕೋಷ್ಟಕ 4.1–ಅ: ಪ್ರತಿಕ್ರಿಯಿಸಿದವರ ಸ್ಥೂಲ ವ್ಯಕ್ತಿಚಿತ್ರಣ**

| ಪಟ್ಟಿ | ಸಂದರ್ಶನದ ಸ್ಥಳ | | |
|---|---|---|---|
| | ದೇವನಹಳ್ಳಿ | ಹೊಸಕೋಟೆ | ಒಟ್ಟು |
| ಒಟ್ಟು | 34 | 47 | 81 |
| ಪುರುಷ | 24 | 32 | 56 |
| ಮಹಿಳೆ | 10 | 15 | 25 |
| ಅಕ್ಷರಸ್ಥ | 33 | 46 | 79 |
| ಗಮ್ಯ | | | |
| ಬೆಂಗಳೂರು | 29 | 47 | 76 |
| ಇತರ | 5 | 0 | 5 |
| ಮತ | | | |
| ಹಿಂದೂ | 32 | 46 | 78 |
| ಇತರ | 2 | 1 | 3 |
| ವೈವಾಹಿಕ ಸ್ಥಿತಿ | | | |
| ಒಂಟಿ | 17 | 40 | 57 |
| ಮದುವೆಯಾಗಿದೆ | 17 | 7 | 24 |
| ಉದ್ಯೋಗ | | | |
| ವಿದ್ಯಾರ್ಥಿ | 8 | 18 | 26 |
| ಉದ್ಯೋಗಿ1 | 20 | 23 | 43 |
| ಉದ್ಯೋಗದಾತ (ಸ್ವಯಂ–ಉದ್ಯೋಗಿ) | 4 | 2 | 6 |
| ಇತರ2. | 2 | 4 | 6 |

ಸೂಚನೆ: 1. ಉದ್ಯೋಗಿಗಳಲ್ಲಿ ಖಾಸಗಿ ಮತ್ತು ಸರ್ಕಾರಿ, ಇಬ್ಬರೂ ಇದ್ದಾರೆ. 2. ಇತರರಲ್ಲಿ ದಿನಗೂಲಿ ಕಾರ್ಮಿಕರು ಮತ್ತು ಇತರರು ಸೇರಿದ್ದಾರೆ.
3. ಕಂಸಗಳಲ್ಲಿ ಶೇಕಡಗಳನ್ನು ನೀಡಲಾಗಿದೆ. 4. ಸರಾಸರಿಯಿಂದ ಭಿನ್ನವಾದ ಫಲಿತಾಂಶಗಳಿದ್ದರೆ ಪ್ರಕ್ಷೇಪಗಳಲ್ಲಿ[ ] ನೀಡಿದ್ದೇವೆ

**ಕೋಷ್ಟಕ 4.2–ಅ ಪ್ರತಿಕ್ರಿಯಿಸಿದವರ ಆದಾಯ ಮತ್ತು ಖರ್ಚು ವಿವರಗಳು**

| ವಿವರ | ಸಂದರ್ಶನದ ಸ್ಥಳ | | |
|---|---|---|---|
| | ದೇವನಹಳ್ಳಿ | ಹೊಸಕೋಟೆ | ಒಟ್ಟು |
| ಪ್ರತಿಕ್ರಿಯಿಸಿದವನ ಸರಾಸರಿ ಆದಾಯ (ತಿಂಗಳಿಗೆ) | 14,749[15,405] | 9,930[15,152] | 11,978[15,351] |
| ಪ್ರತಿಕ್ರಿಯಿಸಿದವನ ಸರಾಸರಿ ವೆಚ್ಚ (ತಿಂಗಳಿಗೆ) | 7,137[8,258] | 4,297[6,714] | 5,489[7,486] |
| ಕುಟುಂಬದ ಸರಾಸರಿ ಆದಾಯ (ತಿಂಗಳಿಗೆ) | 28,894[25,597] | 32,584[60,252] | 31,035[48,591] |
| ಕುಟುಂಬದ ಸರಾಸರಿ ವೆಚ್ಚ (ತಿಂಗಳಿಗೆ) | 14,809[14,850] | 16,345[30,742] | 15,684[25,040] |
| ಕುಟುಂಬದಲ್ಲಿರುವ ಸರಾಸರಿ ಸದಸ್ಯರ ಸಂಖ್ಯೆ | 4[2] | 5[3] | 5[3] |
| ಕುಟುಂಬದಲ್ಲಿ ಕೆಲಸ ಮಾಡುವ ಸರಾಸರಿ ಸದಸ್ಯರ ಸಂಖ್ಯೆ | 2[1] | 2[1] | 2[1] |

ಗಮನಿಸಿ: ಸರಾಸರಿಯಿಂದ ಭಿನ್ನವಾದ ಫಲಿತಾಂಶಗಳಿದ್ದರೆ ಪ್ರಕ್ಷೇಪಗಳಲ್ಲಿ[ ] ನೀಡಿದ್ದೇವೆ ಮೂಲ: ಸಿಬಿಪಿಎಸ್ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶ

**ಕೋಷ್ಟಕ 4.3–ಅ: ಪ್ರಯಾಣದ ಉದ್ದೇಶ**

| ಪ್ರಯಾಣದ ಉದ್ದೇಶ | ದೇವನಹಳ್ಳಿ | ಹೊಸಕೋಟೆ | ಒಟ್ಟು |
|---|---|---|---|
| ಕೆಲಸ | 18 (52.94) | 24 (51.06) | 42 (51.85) |
| ವ್ಯಾಪಾರ | 4 (11.76) | 2 (4.26) | 6 (7.41) |
| ಶಿಕ್ಷಣ | 6 (17.65) | 18 (38.30) | 24 (29.63) |
| ಆರೋಗ್ಯ ಸಂಬಂಧ | 1(2.94) | 0 (0.00) | 1 (1.23) |
| ಇತರ | 5 (14.71) | 3 (6.38) | 8 (9.88) |

ಕಂಸಗಳಲ್ಲಿನ ಶೇ. ಕಾಲಂಗಳಿಗೆ ಸಂಬಂಧಪಟ್ಟಿದೆ. ಮೂಲ: ಸಿಬಿಪಿಎಸ್ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶ

ನಮ್ಮ ಮಾದರಿಯಲ್ಲಿರುವವರಲ್ಲಿ ಬಹುಪಾಲು ಉದ್ಯೋಗಿಗಳು (ಶೇ. 51.85) ಮತ್ತು ವಿದ್ಯಾರ್ಥಿಗಳು (ಶೇ.29.63) ಮತ್ತು ಇವರು ವಾರದಲ್ಲಿ ಸರಾಸರಿ 5 ಬಾರಿ ಅನುಕ್ರಮವಾಗಿ ಕೆಲಸಕ್ಕೆ ಅಥವಾ ಶಿಕ್ಷಣದ ಉದ್ದೇಶಗಳಿಗಾಗಿ ಬೆಂಗಳೂರು ನಗರಕ್ಕೆ ಪ್ರಯಾಣಿಸುತ್ತಾರೆ. ಉದ್ಯೋಗಿಗಳು ಹೆಚ್ಚಿನ ಸಂಬಳದ ಮತ್ತು ಉತ್ತಮ ವೃತ್ತಿ ಪಥದ ಅವಕಾಶಗಳಿಗೆಂದು ಬೆಂಗಳೂರು ನಗರಕ್ಕೆ ಪ್ರಯಾಣಿಸುತ್ತಾರೆ. ವಿದ್ಯಾರ್ಥಿಗಳು ಬೆಂಗಳೂರು ನಗರದ ಕಾಲೇಜುಗಳಿಗೆ ಸೇರಿದರೆ ಉತ್ತಮ ಶೈಕ್ಷಣಿಕ ಸೌಲಭ್ಯಗಳು, ದೊಡ್ಡ ನಗರದ ಅನುಭವ ಮತ್ತು ಮನರಂಜನಾ ಸೌಲಭ್ಯಗಳು ಸಿಗುತ್ತವೆ ಎಂದರು. ಅವರ ಶಿಕ್ಷಣ ಮುಗಿದ ಬಳಿಕ ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತೇವೆ, ಪ್ರಯಾಣದ ತೊಂದರೆಗಳೇನೇ ಇದ್ದರೂ, ಎಂದರು. ಆದ್ದರಿಂದ ನಗರ ಕೇಂದ್ರಗಳನ್ನು ತಲುಪುವುದರಿಂದ ಆಗುವ ಲಾಭಗಳನ್ನು ಮನಸ್ಸಿನಲ್ಲಿಟ್ಟುಕೊಂಡು ದೇವನಹಳ್ಳಿ ಮತ್ತು ಹೊಸಕೋಟೆಯಿಂದ ಬೆಂಗಳೂರು ನಗರಕ್ಕೆ ಬಸ್ ಸೇವೆಗಳ ಸುಲಭ ಲಭ್ಯತೆ ಮತ್ತು ಗುಣಮಟ್ಟಗಳನ್ನು ಪರಿಶೋಧಿಸುತ್ತೇವೆ.

## 4.4. ಫಲಿತಾಂಶಗಳು

ಬೆಂಗಲೂರು ಗ್ರಾಮಾಂತರದ ದೇವನಹಳ್ಳಿ ಮತ್ತು ಹೊಸಕೋಟೆ ತಾಲೂಕುಗಳ ಜನರು ಆರ್ಥಿಕ / ಶೈಕ್ಷಣಿಕ / ಆರೋಗ್ಯ ಸೌಲಭ್ಯಗಳ ಅವಕಾಶಗಳನ್ನು ಅರಸುತ್ತ ಹೋಗಲು ನೆರವಾಗುವ ನಿಟ್ಟಿನಲ್ಲಿ ಬಸ್ ಸೇವೆಗಳ ಪಾತ್ರವನ್ನು ಪರಿಶೀಲಿಸುತ್ತೇವೆ.

### 4.4.1 ಬಸ್ ಸೇವೆಗಳ ಲಭ್ಯತೆ

ಈ ಎರಡು ತಾಲೂಕುಗಳ ಜನರು ಬೆಂಗಳೂರು ನಗರಕ್ಕೆ ಪ್ರಯಾಣಿಸಲು ಬಳಸುವ ಸಾರಿಗೆ ಸೇವೆಗಳ ಬಗೆ, ಬಗೆಗಳ ಸಂಖ್ಯೆ ಮತ್ತು ಬಸ್ ಟಿಕೆಟುಗಳನ್ನು ಕೊಳ್ಳುವ ಸಾಮರ್ಥ್ಯ ಇತ್ಯಾದಿಗಳ ಆಧಾರದ ಮೇಲೆ ಬಸ್ ಸೇವೆಗಳ ಸುಲಭ ಲಭ್ಯತೆಯನ್ನು ಮೌಲ್ಯ ಮಾಪನ ಮಾಡುತ್ತೇವೆ. ಬಳಸುವ ಸಾರಿಗೆ ಸೇವೆಗಳ ಬಗೆ ಜನರು ಸಾರ್ವಜನಿಕ ಬಸ್ ಸೇವೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೋ ಅಥವಾ ಖಾಸಗಿಯೋ ಎಂಬುದನ್ನು ತೋರುತ್ತದೆ. ಪ್ರಯಾಣಿಕ ಗಮ್ಯ ತಲುಪಲು ಎಷ್ಟು ಬಗೆಗಳಲ್ಲಿ ಪ್ರಯಾಣಿಸಬೇಕು ಎನ್ನುವುದು ಬಸ್ ಸೇವೆಗಳ ಲಭ್ಯತೆಗೆ ವಿಲೋಮಾನುಪಾತದಲ್ಲಿರುತ್ತದೆ. ಈ ಬಗೆಗಳು ಹೆಚ್ಚಾದಷ್ಟೂ ಪ್ರಯಾಣದ ಹೊರೆ ಹೆಚ್ಚುತ್ತದೆ ಮತ್ತು ಜನರ ಪ್ರಯಾಣಿಸುವ ಇಚ್ಛೆ ಕಡಿಮೆಯಾಗುತ್ತದೆ. ಮತ್ತೂ, ಖಾಸಗಿ ಸಾರಿಗೆಯತ್ತ ಜನರು ಹೋಗಬಹುದು, ಇದರಿಂದ ಸಾಮಾಜಿಕ ವೆಚ್ಚ ಹೆಚ್ಚುತ್ತದೆ. ಪ್ರಯಾಣದ ವೆಚ್ಚ ಸುಲಭ ಲಭ್ಯತೆಗೆ ವಿಲೋಮಾನುಪಾತದಲ್ಲಿರುತ್ತದೆ. ಇದೂ ಕೂಡ ಮೇಲಿನ ಪರಿಣಾಮವನ್ನೇ ಬೀರುತ್ತದೆ. ಕೋಷ್ಟಕ 4.4-ಅ ಮೇಲೆ ಚರ್ಚಿಸಿದ ಎರಡು ಕ್ರಮಗಳ ಅಂಕಿಅಂಶಗಳ ಸಾರಾಂಶವನ್ನು ಒದಗಿಸುತ್ತದೆ.

**ಕೋಷ್ಟಕ 4.4–ಅ: ದೇವನಹಳ್ಳಿ ಮತ್ತು ಹೊಸಕೋಟೆಗಳಿಂದ ಬೆಂಗಳೂರು ನಗರಕ್ಕೆ ಸಾರಿಗೆ ಸೌಲಭ್ಯ**

| ಸೂಚಕಗಳು | ದೇವನಹಳ್ಳಿ | ಹೊಸಕೋಟೆ | ಒಟ್ಟು |
|---|---|---|---|
| ತಲಾ ಟ್ರಿಪ್ ಗೆ ಸಂಚರಿಸುವ ಸರಾಸರಿ ದೂರ (ಕಿಮೀ) | 41.88 [17.79] | 29.79 [16.43] | 34.86 [17.94] |
| ಒಂದೇ ಬಗೆಯ ಸಾರಿಗೆ | 11 (35.48) | 20 (64.52) | 31 (40.79) |
| ಎರಡು ಬಗೆಗಳ ಸಾರಿಗೆ | 11 (37.93) | 18 (62.07) | 29 (38.16) |
| ಮೂರು ಬಗೆಗಳ ಸಾರಿಗೆ | 6 (46.15) | 7 (53.85) | 13 (17.11) |
| ನಾಲ್ಕು ಬಗೆಗಳ ಸಾರಿಗೆ | 1 (33.33) | 2 (66.67) | 3 (3.95) |
| ಕೇವಲ ಸಾರ್ವಜನಿಕ ಸಾರಿಗೆಗಳಲ್ಲೇ ಓಡಾಡುವ ಜನರ ಸಂಖ್ಯೆ | 15 (28.85) | 37 (71.15) | 52 (68.42) |
| ಕೇವಲ ಖಾಸಗಿ ಸಾರಿಗೆಗಳಲ್ಲೇ ಓಡಾಡುವ ಜನರ ಸಂಖ್ಯೆ | 10 (71.43) | 4 (28.57) | 14 (18.42) |
| ಎರಡೂ ಬಗೆಯ ಸಾರಿಗೆಗಳಲ್ಲಿ ಓಡಾಡುವ ಜನರ ಸಂಖ್ಯೆ | 4 (40.00) | 6 (60.00) | 10 (13.16) |
| ಸರಾಸರಿ ಸಾರಿಗೆ ವೆಚ್ಚ (ತಿಂಗಳಿಗೆ ರೂಗಳು) | 980.74 [757.73] | 783.74 [766.30] | 866.43 [764.23] |

ಸೂಚನೆ: 1. ಒಟ್ಟು ಕಾಲಂನ ಅಡಿಯಲ್ಲಿ ನೀಡಿರುವ ಶೇಕಡ, ಬೆಂಗಳೂರು ನಗರಕ್ಕೆ ಪ್ರಯಾಣಿಸುವ ಒಟ್ಟು ಸಂಪೂರ್ಣ ಸ್ಯಾಂಪಲ್(76)ನ ಶೇಕಡ
2. ಶೇಕಡಗಳನ್ನು ಕಂಸದಲ್ಲಿ ನೀಡಲಾಗಿದೆ.
3. ಸ್ಟಾ ್ಯಂಡರ್ಡ್ ವ್ಯತ್ಯಯಗಳನ್ನು ಪ್ರಕ್ಷೇಪದಲ್ಲಿ –] ನೀಡಲಾಗಿದೆ. ಮೂಲ: ಸಿಬಿಪಿಎಸ್ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶ

ದೇವನಹಳ್ಳಿಯಿಂದ ಒಬ್ಬ ಪ್ರಯಾಣಿಕ ಬೆಂಗಳೂರು ನಗರ ತಲುಪಲು ಸರಾಸರಿ 42 ಕಿ.ಮೀ. ಪ್ರಯಾಣಿಸಬೇಕು, ಹೊಸಕೋಟೆಯವರು 30 ಕಿ.ಮೀ. ನಮ್ಮ ಫಲಿತಾಂಶಗಳು ತೋರುವಂತೆ 79ಶೇಕಡ ಪ್ರಯಾಣಿಕರು ಬೆಂಗಳೂರು ತಲುಪಲು ಎರಡು ಬಗೆಯ ಸಾರಿಗೆಗಳನ್ನು ಬಳಸುತ್ತಾರೆ. ಪ್ರಯಾಣಿಕರಲ್ಲಿ ಹೆಚ್ಚಿನ ಶೇಕಡ ಪ್ರಯಾಣಿಕರು ಸಾರ್ವಜನಿಕ ಬಸ್ ಸೇವೆಗಳನ್ನು ಬಳಸುತ್ತಾರೆ. ಸಾರ್ವಜನಿಕ ಮತ್ತು ಖಾಸಗಿ ಬಸ್ ಸೇವೆಗಳ ಬಳಕೆಯಲ್ಲಿನ ವ್ಯತ್ಯಾಸ ಹೊಸಕೋಟೆಯಲ್ಲಿ ಎದ್ದು ಕಾಣುತ್ತದೆ, ಶೇ. 78.72 ಪ್ರಯಾಣಿಕರು ಸಾರ್ವಜನಿಕ ಬಸ್ ಪ್ರಯಾಣವನ್ನು ಆಯ್ಕೆ ಮಾಡುತ್ತಾರೆ. ಹೊಸಕೋಟೆಯಲ್ಲಿ ನಮ್ಮ ಸ್ಯಾಂಪಲ್‌ನಲ್ಲಿ ಉತ್ತರಿಸಿದ 47 ಪ್ರಯಾಣಿಕರಲ್ಲಿ ಕೇವಲ ನಾಲ್ವರು ಮಾತ್ರ ಖಾಸಗಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಮತ್ತೊಂದೆಡೆ ದೇವನಹಳ್ಳಿಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಬಸ್‌ಗಳ ಬಳಸುವವರ ನಡುವಿನ ಅಂತರ ಶೇ. 17..24. ಅಲ್ಲಿ ನಮಗೆ ಉತ್ತರಿಸಿದವರಲ್ಲಿ ಬಹಳಷ್ಟು ಜನ ಬಸ್‌ಗಳ ಆವರ್ತನ ಹೆಚ್ಚಬೇಕು, ಆಸನಗಳ ಸಂಖ್ಯೆ ಹೆಚ್ಚಬೇಕು ಆಗ ಪ್ರಯಾಣದ ಗುಣಮಟ್ಟ ಹೆಚ್ಚುತ್ತದೆ ಎಂದರು. ಮತ್ತೂ, ಬಿಎಂಟಿಸಿ ಹೊಸಕೋಟೆಯಿಂದ ಬೆಂಗಳೂರು ನಗರಕ್ಕೆ ವೋಲ್ವೋ ಬಸ್‌ಗಳನ್ನು ಒದಗಿಸಿದೆ. ಸಾಮರ್ಥ್ಯ ಇದ್ದವರಿಗೆ ಇದು ಒಳ್ಳೆಯ ಸೌಲಭ್ಯ.

ಪ್ರತಿ ತಿಂಗಳ ಸರಾಸರಿ ಟಿಕೆಟ್ ವೆಚ್ಚಕ್ಕೆ ಬಂದರೆ. ದೇವನಹಳ್ಳಿ ಪ್ರಯಾಣಿಕರು ಹೊಸಕೋಟೆ ಪ್ರಯಾಣಿಕರಿಗೆ ಹೋಲಿಸಿದರೆ ಅಂದಾಜು 980.74 ರೂ.ಗಳನ್ನು ಹೆಚ್ಚು ವ್ಯಯಿಸುತ್ತಾರೆ. ಆದರೆ ಪ್ರತಿ ತಿಂಗಳಿಗೆ, ಪ್ರತಿ ಕಿ.ಮೀ.ಗೆ, ಹೊಸಕೋಟೆ ಪ್ರಯಾಣಿಕರಿಗೆ ಹೋಲಿಸಿದರೆ ದೇವನಹಳ್ಳಿಯವರು ಅಂದಾಜು ಶೇಕಡ 20.09 ಕಡಿಮೆ ವ್ಯಯಿಸುತ್ತಾರೆ (ಪ್ರತಿ ಕಿಮೀ ಗೆ ಪ್ರಯಾಣದ ವೆಚ್ಚ = ಪ್ರತಿ ತಿಂಗಳಿಗೆ ಸರಾಸರಿ ಟಿಕೆಟ್ ವೆಚ್ಚ / (ಪ್ರತಿ ಟ್ರಿಪ್‌ಗೆ ಪ್ರಯಾಣಿಸಿದ ಸರಾಸರಿ ದೂರ *2*20)[84]. ನಾವು ಪ್ರಯಾಣಿಸಿದ ದೂರವನ್ನೂ ತಿಳಿದಿರುವುದರಿಂದ ಒಬ್ಬ ಪ್ರಯಾಣಿಕ ಒಂದು ತಿಂಗಳಲ್ಲಿ ಮಾಡುವ ಸರಾಸರಿ ಟ್ರಿಪ್‌ಗಳ ಸಂಖ್ಯೆಯಿಂದ (20) ಗುಣಿಸುತ್ತೇವೆ. ಮತ್ತೂ, ಒಬ್ಬ ಪ್ರಯಾಣಿಕ ಬೆಳಿಗ್ಗೆ ಮತ್ತು ಸಂಜೆ ಬಸ್‌ನಲ್ಲೇ ಪ್ರಯಾಣಿಸುತ್ತಾನೆ ಎಂದು ಊಹಿಸಿದ್ದೇವೆ. ಹಾಗಾಗಿ ದೇವನಹಳ್ಳಿ ಪ್ರಯಾಣಿಕರು ಪ್ರತಿ ತಿಂಗಳು ಪ್ರತಿ ಕಿಮೀ ಗೆ 0.59 ರೂ. ವ್ಯಯಿಸಿದರೆ ಹೊಸಕೋಟೆ ಪ್ರಯಾಣಿಕರು 0.66 ರೂ. ವ್ಯಯಿಸುತ್ತಾರೆ). ಮತ್ತೂ, ದೇವನಹಳ್ಳಿ ಪ್ರಯಾಣಿಕರು ತಮ್ಮ ಒಟ್ಟು ವೆಚ್ಚದಲ್ಲಿ ಶೇ. 6.78 ರಷ್ಟು ಪ್ರಯಾಣಕ್ಕೆ ವ್ಯಯಿಸಿದರೆ ಹೊಸಕೋಟೆಯ ಪ್ರಯಾಣಿಕರು ಶೇ. 10.33 ರಷ್ಟು. ಹೀಗೆ, ದೇವನಹಳ್ಳಿ ಪ್ರಯಾಣಿಕರಿಗೆ ದರದ ಅನುಕೂಲವಿದೆ. ಇದಕ್ಕೆ ಕಾರಣ ದೂರ ಮತ್ತು ಬಗೆ ಬಗೆಯ ಪಾಸ್‌ಗಳ ಲಭ್ಯತೆ[85] (ಸರಿಸುಮಾರು ಶೇಕಡ 96 ರಷ್ಟು ಪ್ರಯಾಣಿಕರು ವೆಚ್ಚ ಉಳಿಸಲು ದಿನನಿತ್ಯದ ಅಥವಾ ಮಾಸಿಕ ಪಾಸ್ ಬಳಸುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು).

ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬೆಂಗಳೂರು ನಗರಕ್ಕೆ ಪ್ರಯಾಣಸುವವರಿಗೆ ಬಸ್ ಸೇವೆಗಳ ತೊಂದರೆ ಇಲ್ಲ ಎಂದು ಈ ಮೇಲಿನ ಫಲಿತಾಂಶಗಳು ತೋರುತ್ತವೆ. ಆದರೂ ಕಾಯುವ ಕಾಲ ಕಡಿಮೆ ಮಾಡಲು ಪ್ರಯಾಣಿಕರು ಒಂದಕ್ಕಿಂತ ಹೆಚ್ಚು ಬಗೆಯ ಸಾರಿಗೆಯನ್ನು ಅವಲಂಬಿಸಬೇಕು. ದೇವನಹಳ್ಳಿಯಿಂದ ಬೆಂಗಳೂರು ನಗರಕ್ಕೆ ನೇರ ಬಸ್ ಸೌಲಭ್ಯವಿದ್ದರೆ ಉತ್ತಮ ಎಂದು ಬಹುತೇಕ ಪ್ರಯಾಣಿಕರು ಹೇಳಿದರು.

## 4.4.2 ಬಸ್ ಸೇವೆಗಳ ಗುಣಮಟ್ಟ

ಚಾರಿತ್ರಿಕವಾಗಿ ಗಮನಿಸಿರುವ್ಯದೆಂದರೆ, ಅಭಿವೃದ್ಧಿಗೊಂಡ ನಗರಗಳು ಮತ್ತು ಅವುಗಳ ಸುತ್ತಮುತ್ತಲಿನ ಪ್ರದೇಶಗಳಿಗೆ ಉತ್ತಮ ಸಂಪರ್ಕಗಳಿರುತ್ತದೆ. ಆದ್ದರಿಂದ ಸಾರಿಗೆ ಮೂಲಭೂತ ಸೌಲಭ್ಯದಲ್ಲಿ ಯಾವುದೇ ಸುಧಾರಣೆ ಮಾಡುವುದಿದ್ದರೂ ಕಾಯಬೇಕಾದ ಕಾಲಾವಧಿ ಮತ್ತು ಪ್ರಯಾಣದ ಅವಧಿಗಳು ಕಡಿಮೆಯಾಗಬೇಕು, ಆಸನಗಳ ಸಂಖ್ಯೆ ಹೆಚ್ಚಬೇಕು, ನಿಯಮಿತವಾಗಿರಬೇಕು, ಆವರ್ತನ ಹೆಚ್ಚಬೇಕು, ಗುಣಮಟ್ಟ ಹೆಚ್ಚಬೇಕು, ಇತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಅಧ್ಯಾಯದಲ್ಲಿ ನಾವು ದೇವನಹಳ್ಳಿ ಮತ್ತು ಹೊಸಕೋಟೆಗಳಿಂದ ಬೆಂಗಳೂರು ನಗರಕ್ಕಿರುವ ಬಸ್ ಸೇವೆಗಳ ಗುಣಮಟ್ಟವನ್ನು ಪರಿಶೀಲಿಸುತ್ತೇವೆ.

ಬಸ್ ಸೇವೆಗಳ ಗುಣಮಟ್ಟವನ್ನು ಅಳೆಯುವಾಗ, ಬಸ್ ಸೇವೆಗಳು ಎಷ್ಟು ಸುಲಭವಾಗಿ ಸಿಗುತ್ತವೆ, ಪ್ರಯಾಣದ ಅನುಭವ ಇತ್ಯಾದಿಗಳನ್ನು ಅಳೆಯಲಾಗುತ್ತದೆ (ಕೋಷ್ಟಕಎ2.4). ಪ್ರತಿ ಟ್ರಿಪ್‌ಗೂ ಕಾಯಬೇಕಾದ ಸರಾಸರಿ ಅವಧಿ ಮತ್ತು ಬಸ್ ಸೇವೆಗಳ ಆವರ್ತನವನ್ನು ಬಸ್ ಸುಲಭ ಲಭ್ಯತೆಯ ಅಡಿಯಲ್ಲಿ ಸೇರಿಸಲಾಗಿದೆ. ಪ್ರತಿ ಟ್ರಿಪ್‌ಗೆ ಹಿಡಿಯುವ ಅವಧಿ, ಆಸನಗಳ ಲಭ್ಯತೆ, ನಿಲ್ಲಲು ಸ್ಥಳಾವಕಾಶ, ನಿರ್ವಾಹಕನ ನಡವಳಿಕೆ, ಮತ್ತು ವಾಹನಗಳ ದಟ್ಟಣೆ ಇತ್ಯಾದಿಗಳು ಪ್ರಯಾಣದ ಅನುಭವದ ಅಡಿಯಲ್ಲಿ ಸೇರುತ್ತವೆ. ಈ ಅಂಶಗಳು ಬಸ್ ಸೇವೆಗಳ ಗುಣಮಟ್ಟ ಸುಧಾರಿಸುವ ದೃಷ್ಟಿಯಿಂದಷ್ಟೇ ಮುಖ್ಯವಾಗುವುದಿಲ್ಲ, ಬದಲಿಗೆ ಪ್ರಯಾಣಿಕರು ತಮ್ಮ ಖಾಸಗಿ ಸಾರಿಗೆಗಳನ್ನು ಬಿಟ್ಟು ಬಸ್ ಸೇವೆಗಳನ್ನು ಬಳಸುತ್ತಾರೆ. ಇದರಿಂದ ಸಾಮಾಜಿಕ ವೆಚ್ಚ ಕಡಿಮೆಯಾಗುತ್ತದೆ.

ಗುಣಮಟ್ಟಕ್ಕೆ ಬಂದರೆ, ಆಸನಗಳ ಕೊರತೆ ಮತ್ತು ಜನದಟ್ಟಣೆ ಮುಖ್ಯವಾದ ಸಮಸ್ಯೆಗಳು. ಇದರ ಜೊತೆಗೆ ದೂರವೂ ಹೆಚ್ಚಿದ್ದರೆ ದಿನನಿತ್ಯದ ಪ್ರಯಾಣಿಕರಿಗೆ ಮತ್ತಷ್ಟು ತೊಂದರೆ. ಬಸ್‌ಗಳು ಸರಿಯಾದ ಸಮಯಕ್ಕೆ ಬರದಿರುವುದರ ಬಗ್ಗೆ, ಉತ್ತರಿಸಿದ ಅನೇಕರು ದೂರಿದರು. ವಾಹನಗಳ ದಟ್ಟಣೆಯಿಂದಾಗಿ ಪ್ರಯಾಣಿಕರು ಆಸನಗಳು ಇಲ್ಲದಿದ್ದರೂ ನಿಂತೇ ಪ್ರಯಾಣಿಸುತ್ತಾರೆ. ದೇವನಹಳ್ಳಿಗಿಂತ ಹೊಸಕೋಟೆಯಿಂದ ಬೆಂಗಳೂರು ನಗರಕ್ಕೆ ಬಸ್ ಆವರ್ತನ ಹೆಚ್ಚಿದ್ದರೂ ಈ ಮಾತು ಎರಡೂ ತಾಲೂಕುಗಳ ವಿಷಯದಲ್ಲಿ ಸತ್ಯ.

ಸಾಮಾನ್ಯವಾಗಿ ನಮಗೆ ಉತ್ತರಿಸಿದವರು ಹೇಳಿದ್ದು ಬೆಂಗಳೂರು ನಗರಕ್ಕೆ ಹೋಲಿಸಿದರೆ ಸೇವೆಗಳ ಗುಣಮಟ್ಟ ಕಡಿಮೆಯಿದೆ. ಹೂಡಿಕೆಗಳನ್ನು ಮಾಡಿ ಸಾಕಷ್ಟು ಆಸನಗಳ ವ್ಯವಸ್ಥೆ, ನಿಯಮಿತವಾದ ಬಸ್ ಸಮಯಗಳು, ಬಸ್‌ಗಳ ಆವರ್ತನ ಹೆಚ್ಚಿಸುವುದು ಮತ್ತು ವಾಹನಗಳ ದಟ್ಟಣೆ ನಿಯಂತ್ರಿಸಲು ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಗುಣಮಟ್ಟ ಮತ್ತು ಅದರ ಮೂಲಕ ಪ್ರಯಾಣದ ಅನುಭವವನ್ನು ವಿಪರೀತವಾಗಿ ಸುಧಾರಿಸಲು ಸಾಧ್ಯವಿದೆ ಎಂದು ಅವರು ಹೇಳುತ್ತಾರೆ.

84 ವಿವರವಾದ ಚರ್ಚೆಗೆ ಪೂಗಾ (2009) ನೋಡಿ) ಬಸ್ ನಿಲ್ದಾಣಗಳಲ್ಲಿ ಕಾಯುವಿಕೆ, ಪ್ರಯಾಣಿಕರು ಬೆಂಗಳೂರು ನಗರಕ್ಕೆ ಪ್ರಯಾಣಿಸುತ್ತಿರುವರೆ ಎಂದು ಪ್ರಯಾಣಿಕರಿಂದ ತಿಳಿದುಕೊಳ್ಳಲು ಪ್ರತಿಯೊಬ್ಬ ಸಂದರ್ಶಕನಿ/ಳಿಗೆ ಸೂಚಿಸಲಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದ ಬೆಂಗಳೂರು ನಗರಕ್ಕೆ ಪ್ರಯಾಣಿಸುವ ಪ್ರಯಾಣಿಕರಿಗೆ ಈ ಪ್ರಶ್ನೆಗಳನ್ನು ಕೇಳಲಾಗುತ್ತಿದೆ ಎಂದು ಖಚಿತಪಡಿಸಿಕೊಳ್ಳಲು ಈ ಪರಿಶೀಲನೆ ವಿಧಾನ ಕೈಗೊಳ್ಳಲಾಯಿತು.

85 ಪ್ರತಿಕ್ರಿಯಿಸಿದವರ ಪೈಕಿ ಶೇ. 96 ಜನ ಬೆಂಗಳೂರು ನಗರಕ್ಕೆ ಮತ್ತು ಅಲ್ಲಿಂದ ಪ್ರಯಾಣಿಸುವ ಪ್ರಯಾಣದ ಖರ್ಚನ್ನು ಕಡಿಮೆ ಮಾಡಲು ದಿನದ ಅಥವಾ ಮಾಸಿಕ ಪಾಸ್ ಬಳಸುತ್ತಾರೆ ಎಂಬುದನ್ನು ಗಮನಿಸಬೇಕು..

**ಕೋಷ್ಟಕ 4.5–ಅ: ಬಸ್ ಸೇವೆಯ ಗುಣಮಟ್ಟ**

| ಸೂಚಕಗಳು | ದೇವನಹಳ್ಳಿ | ಹೊಸಕೋಟೆ | ಒಟ್ಟು |
|---|---|---|---|
| ತಲಾ ಟ್ರಿಪ್ ಗೆ ಕಾಯಬೇಕಾದ ಸಮಯ–ಸರಾಸರಿ, ನಿಮಿಷಗಳಲ್ಲಿ | 28 | 17 | 21 |
| | [28] | [10] | [20] |
| ತಲಾ ಟ್ರಿಪ್ ಗೆ ತಗಲುವ ಸಮಯ–ಸರಾಸರಿ, ನಿಮಿಷಗಳಲ್ಲಿ | 111 | 89 | 98 |
| | [68] | [56] | [62] |
| ಬಸ್ ಆವರ್ತನ | | | |
| ಹೆಚ್ಚು | 14 | 24 | 38 |
| | (36.84) | (63.16) | (50.00) |
| ಸಾಧಾರಣ | 13 | 17 | 30 |
| | (43.33) | (56.67) | (39.47) |
| ಕಡಿಮೆ | 2 | 5 | 7 |
| | (28.57) | (71.43) | (9.21) |
| ಆಸನಗಳ ಲಭ್ಯತೆ | | | |
| ಇದೆ | 7 | 18 | 25 |
| | (28.00) | (72.00) | (32.89) |
| ಇಲ್ಲ | 8 | 10 | 18 |
| | (44.44) | (55.56) | (23.68) |
| ಯಾವಾಗಲೂ ಎನ್ನುವಂತಿಲ್ಲ | 14 | 19 | 33 |
| | (42.42) | (57.58) | (43.42) |
| ನಿಲ್ಲಲು ಸ್ಥಳಾವಕಾಶ | | | |
| ಇದೆ | 23 | 38 | 61 |
| | (37.71) | (62.29) | (80.26) |
| ಇಲ್ಲ | 3 | 4 | 7 |
| | (42.86) | (57.14) | (9.21) |
| ಯಾವಾಗಲೂ ಎನ್ನುವಂತಿಲ್ಲ | 3 | 3 | 6 |
| | (50.00) | (50.00) | (7.89) |
| ರಸ್ತೆಯಲ್ಲಿ ವಾಹನಗಳ ದಟ್ಟಣೆ | | | |
| ಬಹಳ ಕಿಕ್ಕಿರಿದಿರುತ್ತವೆ | 13 | 22 | 35 |
| | (37.14) | (62.86) | (46.05) |
| ಕಿಕ್ಕಿರಿದಿರುತ್ತವೆ | 13 | 15 | 28 |
| | (46.43) | (53.57) | (36.84) |
| ಕಿಕ್ಕಿರಿದಿರುವುದಿಲ್ಲ | 3 | 8 | 11 |
| | (27.27) | (72.73) | (14.47) |
| ಕಂಡಕ್ಟರ್/ಚಾಲಕರ ಸಂವೇದನ ಶೀಲತೆ | | | |
| ಬಹಳ ಸಂವೇದನಶೀಲರು | 4 | 2 | 6 |
| | (66.67) | (33.33) | (7.89) |
| ಸಂವೇದನಶೀಲರು | 21 | 37 | 58 |
| | (36.21) | (63.79) | (76.32) |
| ಸಂವೇದನಶೀಲರಲ್ಲ | 3 | 8 | 11 |
| | (27.27) | (72.73) | (14.47) |

ಸೂಚನೆ: 1. ದೇವನಹಳ್ಳಿ ಮತ್ತು ಹೊಸಕೋಟೆ ಕಾಲಂಗಳ ಅಡಿಯಲ್ಲಿ ನೀಡಿರುವ ಶೇಕಡ ಅಡ್ಡಸಾಲಿನ s.

2. ಒಟ್ಟು ಕಾಲಂನ ಅಡಿಯಲ್ಲಿ ನೀಡಿರುವ ಶೇಕಡ, ಬೆಂಗಳೂರು ನಗರಕ್ಕೆ ಪ್ರಯಾಣಿಸುವ ಒಟ್ಟು ಸಂಪೂರ್ಣ ಸ್ಯಾಂಪಲ್(76)ನ ಶೇಕಡ

3. ಶೇಕಡಗಳನ್ನು ಕಂಸದಲ್ಲಿ ನೀಡಲಾಗಿದೆ.

4. ಸ್ಟಾ ್ಯಂಡರ್ಡ್ ವ್ಯತ್ಯಯಗಳನ್ನು ಪ್ರಕ್ಷೇಪದಲ್ಲಿ – ನೀಡಲಾಗಿದೆ.

ಮೂಲ: ಸಿಬಿಪಿಎಸ್ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶ

## 4.5. ತಾತ್ಪರ್ಯ

ಬೆಂಗಳೂರು ನಗರದ ಸಾಮೀಪ್ಯ ಮತ್ತು ಉತ್ತಮ ಸಂಪರ್ಕ ರಸ್ತೆಗಳು ಬೆಂಗಳೂರಿನತ್ತ ಎಲ್ಲರನ್ನೂ ಆಕರ್ಷಿಸುತ್ತವೆ. ಆದರೆ ಸಾರಿಗೆಯಲ್ಲಿ ಮಾಡುವ ಯಾವುದೇ ಹೂಡಿಕೆಗಳು ಜಿಲ್ಲೆಯ ಒಳಗಡೆಯೇ ಸಾರಿಗೆ ಸೇವೆಗಳನ್ನು ಸುಧಾರಿಸುವಂತೆ ಮಾಡಬೇಕು, ಜೊತೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬೆಂಗಳೂರು ನಗರಕ್ಕೆ ಪ್ರಯಾಣ ಸುಗಮವಾಗುವಂತೆ ಮಾಡಬೇಕು. ಜಿಲ್ಲೆಯ ಒಳಗೆ ಸಾರಿಗೆ ವ್ಯವಸ್ಥೆ ದಕ್ಷವಾಗಿದ್ದರೆ ಜಿಲ್ಲೆಯ ಅಭಿವೃದ್ಧಿಗೆ ಪ್ರೋತ್ಸಾಹ ಸಿಗುತ್ತದೆ. ಇದರ ಜೊತೆಗೆ ಜಿಲ್ಲೆಯ ಹೊರಗಿನ ಅವಕಾಶಗಳನ್ನು ಹುಡುಕುವುದಕ್ಕೂ ಅನುಕೂಲವಾಗುತ್ತದೆ.

ಮೊದಲನೆಯದಾಗಿ, ನಮ್ಮ ಫಲಿತಾಂಶಗಳು ತೋರುವಂತೆ ಬೆಂಗಳೂರು ನಗರಕ್ಕೆ ಪ್ರತಿದಿನ ಪ್ರಯಾಣಿಸುವವರಿಗೆ ಬಸ್ ಸೇವೆಗಳ ಲಭ್ಯತೆಯಲ್ಲಿ ಯಾವುದೇ ಕಷ್ಟವಿಲ್ಲ. ಆದರೆ ಪ್ರಯಾಣಿಗರ ಅಗತ್ಯಗಳು ಪ್ರಯಾಣಿಸಬೇಕಾದ ದೂರದ ಜೊತೆಗೆ ನೇರವಾಗಿ ಬದಲಾಗುತ್ತವೆ. ದೇವನಹಳ್ಳಿಯಿಂದ ಓಡಾಡುವವರು ದೇವನಹಳ್ಳಿ-ಬೆಂಗಳೂರು ನಡುವೆ ನೇರ ಬಸ್ಸುಗಳ ಸಂಖ್ಯೆ ಹೆಚ್ಚಳಕ್ಕಾಗಿ ಆಗ್ರಹಿಸಿದರೆ ಹೊಸಕೋಟೆಯ ಜನರು ಹೆಚ್ಚಿನ ವೋಲ್ವೋ ಬಸ್ಸುಗಳನ್ನು ಕಡಿಮೆ ದರದಲ್ಲಿ ಒದಗಿಸಬೇಕೆಂದು ಆಗ್ರಹಿಸುತ್ತಾರೆ. ಎರಡನೆಯದಾಗಿ ಸಾರ್ವಜನಿಕರು ಸಾರ್ವಜನಿಕ ಬಸ್ಸುಗಳನ್ನು ಬಳಸಬೇಕಾದರೆ ಬಸ್ ಸೇವೆಗಳ ಗುಣಮಟ್ಟಗಳು ಸುಧಾರಿಸಬೇಕು. ಅದರಲ್ಲೂ ವಿಶೇಷವಾಗಿ ಆಸನಗಳ ವ್ಯವಸ್ಥೆ, ಬಸ್ ಸಮಯಗಳು, ವಾಹನಗಳ ದಟ್ಟಣೆ, ಇತ್ಯಾದಿ. ಖಾಸಗಿಯಾಗಲಿ ಅಥವಾ ಸಾರ್ವಜನಿಕವಾಗಲಿ, ಬಸ್ ನಲ್ಲಿ ತುಂಬುವ ಜನರ ಸಂಖ್ಯೆಗೆ ಸರ್ಕಾರ ಮಿತಿ ಹಾಕಬೇಕು ಎಂದು ಶಿಫಾರಸ್ಸು ಮಾಡಲಾಗಿದೆ. ಇದರಿಂದ ಮುಖ್ಯ ಸಮಯಗಳಲ್ಲಿ ಬಸ್ಸುಗಳಲ್ಲಿ ಮಿತಿಮೀರಿ ಜನರನ್ನು ತುಂಬುವುದು ತಪ್ಪುತ್ತದೆ.

ಮತ್ತೊಂದು ಗಮನ ಕೊಡಬೇಕಾದ ಕ್ಷೇತ್ರವೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಹಿಳೆಯರ ಸಂಚಾರ. ನಮ್ಮ ಮಾದರಿಯಲ್ಲಿ ಉತ್ತರಿಸಿದವರಲ್ಲಿ ಹೆಚ್ಚಿನ ಜನ ಪುರುಷರೇ. ಹಾಗಾಗಿ ಮಹಿಳೆಯರ ಸಂಚಾರದ ಬಗ್ಗೆ ಪ್ರಶ್ನೆಗಳು ಏಳುತ್ತವೆ. ಭಾರತದಂತಹ ಅಭಿವೃದ್ಧಿಶೀಲ ದೇಶಗಳು ಆರ್ಥಿಕ ಅಭಿವೃದ್ಧಿಯ ಪ್ರಯೋಜನಗಳು ಸಮಾಜದ ಎಲ್ಲ ವರ್ಗದವರಿಗೂ ತಲುಪುವಂತೆ ನೋಡಿಕೊಳ್ಳಬೇಕು.

ಸಾರಿಗೆ ನೀತಿಗಳು ಸಾರ್ವಜನಿಕರ ಅಲ್ಪಕಾಲಿಕ ಹಾಗೂ ದೀರ್ಘಕಾಲಿಕ ಬೇಡಿಕೆಗಳೆರಡನ್ನೂ ಸಮವಾಗಿ ತೂಗಿಸಿಕೊಂಡು ಹೋಗಬೇಕು. ಪ್ರತ್ಯಕ್ಷ ಮತ್ತು ಪರೋಕ್ಷ ಅಂಶಗಳ ಪ್ರಭಾವಗಳನ್ನು ಅರ್ಥಮಾಡಿಕೊಳ್ಳಲು ಈ ನೀತಿಗಳು ಸಮಗ್ರ ಮಾರ್ಗೋಪಾಯಗಳನ್ನು ಪರಿಗಣಿಸಬೇಕು. ಹಲವು ಸರ್ಕಾರಿ ಸಂಸ್ಥೆಗಳ ನಡುವೆ ಸುಸಂಘಟನೆ ಮತ್ತು ಅರಿವು ಇರಬೇಕು. ಉದಾ, ಮೆಟ್ರೋ ಸೇವೆಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕೂ ತಾಲೂಕುಗಳಿಗೆ ವಿಸ್ತರಿಸಬೇಕೆಂದು ಯೋಜನಾ ನಿರ್ಣಯ ಕೈಗೊಳ್ಳಲಾಗಿದೆ. ಆಗ, ಸರ್ಕಾರ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಗುವ ಆಸ್ತಿ ಮೌಲ್ಯ ಸ್ಫೋಟ ಮತ್ತು ಬೆಂಗಳೂರಿಗೆ ಬರುವವರಿಂದ ಆಗುವ ಜನ ಸಂಖ್ಯಾ ಹೆಚ್ಚಳ, ಇತ್ಯಾದಿಗಳನ್ನು ಪರಿಗಣಿಸಬೇಕು. ಒಂದು ಉತ್ತಮವಾಗಿ ಅಭಿವೃದ್ಧಿಗೊಂಡ ಸಾರಿಗೆ ಕಾರ್ಯನೀತಿಯ ಪ್ರಯೋಜನಗಳನ್ನು ಪೂರ್ಣವಾಗಿ ಪಡೆಯಬೇಕಾದರೆ ಈ ಮೇಲಿನ ಅಂಶಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು.

ಮತ್ತೂ, ಬಿಎಂಟಿಸಿ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವೆಚ್ಚ ಮತ್ತು ಕಾರ್ಯಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಯನಗಳನ್ನು ಕೈಗೊಳ್ಳಬೇಕು. ಇದರ ಜೊತೆಗೆ ಸಾರಿಗೆ ನೀತಿಯು ದೂರ ಮತ್ತು ಪ್ರಯಾಣ ಸಮಯ ಎರಡನ್ನೂ ಕಡಿಮೆ ಮಾಡುವ ಪರ್ಯಾಯ ಸಾರಿಗೆ ವ್ಯವಸ್ಥೆಗಳನ್ನು ಸಾರ್ವಜನಿಕರಿಗೆ ಒದಗಿಸುವ ಸಾಧ್ಯತೆಯ ಬಗ್ಗೆಯೂ ಆಲೋಚಿಸಬೇಕು.

# ಮುಂದಿನ ಹಾದಿ



# 12. ಮುಂದಿನ ಹಾದಿ

ಮಾನವ ಅಭಿವೃದ್ಧಿ ವಿಷಯಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಒಂದು ಮಿಶ್ರ ಚಿತ್ರಣವನ್ನು ನೀಡುತ್ತದೆ. ಈ ಜಿಲ್ಲೆಯ ಪ್ರವೃತ್ತಿಗಳನ್ನು ವಿಶ್ಲೇಷಿಸುವಾಗ ಮತ್ತು ಅರ್ಥಮಾಡಿಕೊಳ್ಳುವಾಗ ಅತಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಇದು ಭಾರತದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮಹಾನಗರ ಬೆಂಗಳೂರಿನ ಪಕ್ಕದಲ್ಲೇ ಇದೆ ಎಂಬುದಾಗಿದೆ. ಇದು ಈ ಜಿಲ್ಲೆಯನ್ನೇ ಪ್ರತ್ಯೇಕವಾಗಿ ವಿಶ್ಲೇಷಿಸಲು ಕಷ್ಟವಾಗುವಷ್ಟರ ಮಟ್ಟಿಗೆ ಎಲ್ಲ ವಿದ್ಯಮಾನಗಳ ಮೇಲೆ ಪ್ರಭಾವ ಬೀರುತ್ತದೆ. ಆದರೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾಲೂಕುಗಳ ನಿರ್ದಿಷ್ಟ ವಿಷಯಗಳ/ಸಮಸ್ಯೆಗಳ ಕುರಿತಾಗಿ ಚರ್ಚಿಸುವುದಕ್ಕೆ ಜಿಲ್ಲೆಯನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವುದು ಮುಖ್ಯವಾಗುತ್ತದೆ. ಈ ಮೊದಲೇ ಹೇಳಿದಂತೆ ಈ ಜಿಲ್ಲೆ 2008ರಲ್ಲಿ ಪುನಾರಚನೆಗೊಂಡು ನಾಲ್ಕು ತಾಲೂಕುಗಳು ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲಗಳನ್ನು ಹೊಂದಿದೆ. ಈ ವರದಿಯ ಉದ್ದೇಶಕ್ಕಾಗಿ ಲೆಕ್ಕಮಾಡಿದ ಸೂಚ್ಯಂಕಗಳ ಪ್ರಕಾರ ಈ ತಾಲೂಕುಗಳ ನಡುವೆ ವ್ಯತ್ಯಾಸಗಳು ಬಹಳವಾಗಿವೆ. ಆದರೆ ಯಾವೊಂದು ತಾಲೂಕೂ ಎಲ್ಲದರಲ್ಲೂ ಮುಂದಿಲ್ಲ. 6 ಸೂಚ್ಯಂಕಗಳ 4 ತಾಲೂಕುಗಳ ರಡಾರ್ ವಿಶ್ಲೇಷಣೆ ಇದನ್ನು ಸ್ಪಷ್ಟಪಡಿಸುತ್ತದೆ.

## 12.1. ಬೆಂಗಳೂರು ಗ್ರಾಮಾಂತರ ಜಿಲ್ಲೆ : ಸೂಚ್ಯಂಕಗಳಲ್ಲಿ ಕಾಣುವ ಜಿಲ್ಲೆಯ ಒಳಗಿನ ವ್ಯತ್ಯಾಸಗಳು

ಮಾನವ ಅಭಿವೃದ್ಧಿ ಸೂಚ್ಯಂಕ, ಮಕ್ಕಳ ಅಭಿವೃದ್ಧಿ ಸೂಚ್ಯಂಕ, ಆಹಾರ ಭದ್ರತೆ ಸೂಚ್ಯಂಕ ಮತ್ತು ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕಗಳಲ್ಲಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿರುವ ನೆಲಮಂಗಲ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕದಲ್ಲಿ 3ನೇ ಸ್ಥಾನದಲ್ಲಿದೆ ಹಾಗು ನಗರಾಭಿವೃದ್ಧಿ ಸೂಚ್ಯಂಕದಲ್ಲಿ ಕೊನೆಯ ಸ್ಥಾನದಲ್ಲಿದೆ. ಆದರೂ ಸೂಚ್ಯಂಕಗಳನ್ನು ಆಧರಿಸಿ ಸಾಧನೆಗಳನ್ನು ಗಮನಿಸಿದಾಗ 4 ತಾಲೂಕುಗಳಲ್ಲಿ ಇದೇ ಅತ್ಯಂತ ಸ್ಥಿರ ಸಾಧನೆ ತೋರುವ ತಾಲೂಕು. ಮಾನವ ಅಭಿವೃದ್ಧಿ ಸೂಚ್ಯಂಕ, ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಮತ್ತು ಮಕ್ಕಳ ಅಭಿವೃದ್ಧಿ ಸೂಚ್ಯಂಕಗಳಲ್ಲಿ ದೇವನಹಳ್ಳಿ 2ನೇ ಸ್ಥಾನದಲ್ಲಿದ್ದು ಆಹಾರ ಭದ್ರತೆ ಸೂಚ್ಯಂಕ ಮತ್ತು ನಗರಾಭಿವೃದ್ಧಿ ಸೂಚ್ಯಂಕಗಳಲ್ಲಿ ಕಡಿಮೆ ಮೌಲ್ಯಗಳನ್ನು ಹೊಂದಿದೆ. ಮಾನವ ಅಭಿವೃದ್ಧಿ ಸೂಚ್ಯಂಕ, ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಮತ್ತು ಮಕ್ಕಳ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಕಡಿಮೆ ಮೌಲ್ಯಗಳನ್ನು ಹೊಂದಿರುವ ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ತಾಲೂಕುಗಳು ಆಹಾರ ಭದ್ರತೆ ಸೂಚ್ಯಂಕ ಮತ್ತು ನಗರಾಭಿವೃದ್ಧಿ ಸೂಚ್ಯಂಕಗಳಲ್ಲಿ ಕೊಂಚ ಉತ್ತಮವಾಗಿದೆ. ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಮೌಲ್ಯಗಳಲ್ಲಿ ತಾಲೂಕುಗಳ ನಡುವೆ ವ್ಯತ್ಯಾಸಗಳು ಅತ್ಯಂತ ಕಡಿಮೆ, ಅಂದರೆ ಲಿಂಗ ತಾರತಮ್ಯದಲ್ಲಿ ಎಲ್ಲ ತಾಲೂಕುಗಳು ಸಮಾನ ಸ್ಥಿತಿಯಲ್ಲಿವೆ. ಮಕ್ಕಳ ಅಭಿವೃದ್ಧಿ ಸೂಚ್ಯಂಕದಲ್ಲಿ ತಾಲೂಕುಗಳ ನಡುವೆ ವ್ಯತ್ಯಾಸಗಳು ಬಹಳವಾಗಿದೆ, ಅಂದರೆ ಮಕ್ಕಳ ಅಭಿವೃದ್ಧಿ ಸೂಚ್ಯಂಕದಲ್ಲಿ ಸೇರಿರುವ ಸೂಚಕಗಳ ವಿಷಯದಲ್ಲಿ ತಾಲೂಕುಗಳ ನಡುವೆ ವ್ಯತ್ಯಾಸಗಳು ಬಹಳಷ್ಟಿವೆ. ನಗರಾಭಿವೃದ್ಧಿ ಸೂಚ್ಯಂಕದಲ್ಲೂ ವ್ಯತ್ಯಾಸಗಳು ಹೆಚ್ಚಿಗೆ ಇದ್ದು ನಗರ ಸ್ಥಳೀಯ ಸಂಸ್ಥೆಗಳ ನಡುವೆ ನಗರದ ಸೇವೆಗಳಲ್ಲಿ ವೆತ್ಯಾಸ ಇರುವುದನ್ನು ಸೂಚಿಸುತ್ತದೆ.

ತಾಲೂಕುಗಳ ನಡುವಿನ ವ್ಯತ್ಯಾಸಗಳನ್ನು ಗಮನಿಸುವುದು ಮುಖ್ಯವಾದರೂ, ಈ ಸೂಚ್ಯಂಕಗಳನ್ನು ಗಣಿಸಲು ಬಳಸಿರುವ ಸೂಚಕಗಳು, ಮತ್ತು ಅವುಗಳ ರಚನೆಯು ಈ ವ್ಯತ್ಯಾಸಗಳಿಗೆ ಭಾಗಶಃ ಕಾರಣವಿರಬಹುದು. ಮಾನವ ಅಭಿವೃದ್ಧಿ ಸೂಚ್ಯಂಕ ನಿರ್ದಿಷ್ಟ ವಿವರಣೆಯನ್ನು ಅನುಸರಿಸುತ್ತದೆ. ಆದರೆ ತಾಲೂಕುಗಳ ನಡುವಿನ ವ್ಯತ್ಯಾಸಗಳು ಮಾನವ ಅಭಿವೃದ್ಧಿ ಸೂಚ್ಯಂಕದ ಯಾವುದೇ ಒಂದು, ಎರಡು ಅಥವಾ ಎಲ್ಲ ಮೂರು ಸೂಚಕಗಳಾದ ಶಿಕ್ಷಣ, ಆರೋಗ್ಯ ಮತ್ತು ಜೀವನಮಟ್ಟಗಳಲ್ಲಿ ನಿಜ ವ್ಯತ್ಯಾಸಗಳನ್ನು ಸೂಚಿಸುತ್ತಿರಬಹುದು. ಆದರೆ ಇದನ್ನೇ ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಅಥವಾ ಲಿಂಗ ಸಂಬಂಧಿ ಸಮಾನತೆ ಸೂಚ್ಯಂಕ ವಿಚಾರಗಳಲ್ಲಿ ಹೇಳಲಾಗುವುದಿಲ್ಲ. ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಪುರುಷ ಮತ್ತು ಮಹಿಳೆ ನಡುವಣ ವ್ಯತ್ಯಾಸಗಳನ್ನು ಚಿತ್ರಿಸುತ್ತದೆ, ಮತ್ತು ಜಿಲ್ಲೆಯ ಗರಿಷ್ಠ ಮತ್ತು ಕನಿಷ್ಠ ಮೌಲ್ಯಗಳನ್ನು ಬಳಸಿಕೊಳ್ಳುತ್ತದೆಯಾದುದರಿಂದ ವ್ಯತ್ಯಾಸಗಳು ಕಡಿಮೆ ಇರಲೇಬೇಕು.

ಚಿತ್ರ 12.1: ವೈಯಕ್ತಿಕ ಸೂಚ್ಯಂಕಗಳ ತಾಲೂಕುವಾರು ರಡಾರ್ ವಿಶ್ಲೇಷಣೆ (2011)












ಸೂಚನೆ: GEI = 1- GII; UDI (ದೇವನಹಳ್ಳಿ) = ಸರಾಸರಿ (UDI (ದೇವನಹಳ್ಳಿ ಮತ್ತು ವಿಜಯಪುರ))

ಅಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಅಥವಾ ಅಂಗ ಸಂಬಂಧಿ ಸಮಾನತೆ ಸೂಚ್ಯಂಕ ನಿಜವಾದ ಅಸಮಾನತೆ ಅಥವಾ ಸಮಾನತೆ ಸೂಚ್ಯಂಕವಲ್ಲ. ಅದು ಹೆಚ್ಚಾಗಿ ಸಾದೃಶ್ಯ/ಹೋಲಿಕೆಯ ಸೂಚ್ಯಂಕ. ಹೆಚ್ಚೆಂದರೆ ಅದು ಅಧಿಕೃತ ಸಮಾನತೆಯ ಸೂಚಕವೇ ಹೊರತು ಸಮಾನತೆ/ಅಸಮಾನತೆಯ ಸಮಗ್ರ ಸೂಚಕವಲ್ಲ. ಇನ್ನೂ ವಿವರವಾಗಿ ಹೇಳಬೇಕಾದರೆ ಅದು ಒಂದು ಸೀಮಿತವಾದ ಸೂಚಕಗಳನ್ನು ಮಾತ್ರ ಸೆರೆಹಿಡಿಯುತ್ತದೆ ಮತ್ತು ಅವು ಪುರುಷ ಮತ್ತು ಮಹಿಳೆಯರಿಬ್ಬರಿಗೂ ಒಂದೇಯೇ ಎಂದು ನೋಡುತ್ತದೆ. ಆದರೆ ಸಮಾನತೆ ಎಂಬುದು ಇನ್ನೂ ವಿಶಾಲವಾದ ಅರ್ಥಹೊಂದಿದೆ. ಅದಕ್ಕೆ ಮಹಿಳೆಯರಲ್ಲಿ ಮಾಲಿಕತ್ವ, ಮುಂದಾಳತ್ವ ಹಾಗು ನಿಯಂತ್ರಣ ಕುರಿತಾದ ವಿಷಯಗಳನ್ನು ಸೆರೆಹಿಡಿಯುವ ಸೂಚಕಗಳನ್ನು ಬಳಸಿ ಅಂತಹ ಸೂಚಕಗಳಿಗೆ ಪುರುಷರಲ್ಲಿ ಹೋಲಿಸಿ ವೆತ್ಯಾಸಗಳನ್ನು ನೋಡುವ ಅಗತ್ಯವಿದೆ. ಯಾವ ಬಗೆಯ ಸಮಾನತೆಯ ಬಗ್ಗೆ ಮಾತನಾಡುತ್ತಿದ್ದೇವೆ ಎಂಬುದನ್ನು ನಿರ್ಧರಿಸುವಲ್ಲಿ ಸೂಚಕಗಳ ಆಯ್ಕೆ ಮುಖ್ಯಪಾತ್ರ ವಹಿಸುತ್ತದೆ. ಆರೋಗ್ಯಕ್ಕೆ, ಕೇವಲ ಸಂತಾನೋತ್ಪತ್ತಿ ಸೂಚಕಗಳನ್ನೇ ಸೇರಿಸಿಕೊಂಡರೆ ಅದು ಮಹಿಳೆಯ ಆರೋಗ್ಯವನ್ನು ಕೇವಲ ಗರ್ಭಾಶಯಕ್ಕೆ ಸೀಮಿತಗೊಳಿಸಿದಂತಾಗುತ್ತದೆ. ಸೂಚಕಗಳು ಒಂದನ್ನೊಂದು ನಿರಾಕರಿಸುವಂತಿದ್ದರೆ (ಈ ಮೊದಲೇ ಚರ್ಚಿಸಿದಂತೆ ಈ ಜಿಲ್ಲೆಯಲ್ಲಿ ಕಾಣುವಂತೆ ಸಾಂಸ್ಥಿಕ ಹೆರಿಗೆಗಳು ಹೆಚ್ಚಿರುವುದು ಮತ್ತು ತಾಯಂದಿರ ಮರಣ ಪ್ರಮಾಣ ಹೆಚ್ಚಿರುವುದು), ಅದು ಅಸಾದೃಶ್ಯವನ್ನು ಪತ್ತೆಮಾಡುವುದನ್ನು ಮತ್ತಷ್ಟು ಕಷ್ಟಗೊಳಿಸುತ್ತದೆ. ಕಾರ್ಮಿಕ ಮಾರುಕಟ್ಟೆ ವಿಚಾರದಲ್ಲಿ 'ಕೃಷಿ ಕಾರ್ಮಿಕರು ಮತ್ತು ಕೃಷಿಯೇತರ ಕಾರ್ಮಿಕರು' ಸೂಚಕಗಳು ಕೃಷಿಯಿರಲಿ ಅಥವಾ ಕೃಷಿಯೇತರವಿರಲಿ ಕಡಿಮೆ ಕೂಲಿಯ ಕೆಲಸಗಳಲ್ಲಿ ದುಡಿಮೆ ಮಾಡುತ್ತಿರುವ ಪುರುಷ ಮತ್ತು ಮಹಿಳೆಯರ ಪ್ರಮಾಣವನ್ನು ಪರಿಗಣಿಸಿದ್ದಿದ್ದರೆ ವಾಸ್ತವಕ್ಕೆ ಇನ್ನೂ ಹತ್ತಿರಾಗುತ್ತಿದ್ದವು, ಅದರಂತೆಯೇ, ಶಿಕ್ಷಣದಲ್ಲಿ ಪ್ರಾಥಮಿಕ ಮತ್ತು ದ್ವಿತೀಯ ಹಂತಗಳಲ್ಲಿ ಶಾಲೆಯಲ್ಲಿ ಭಾಗವಹಿಸುವ ಪ್ರಮಾಣಗಳನ್ನು ಪ್ರತ್ಯೇಕಿಸಿದ್ದಿದ್ದರೆ, (ಪ್ರಸ್ತುತ ಅದು ಎರಡನ್ನೂ ಕೂಡಿಸಿ ಭಾಗವಹಿಸುವ ಸಂಯುಕ್ತ ಪ್ರಮಾಣವನ್ನು ಬಳಸುತ್ತಿದೆ) ಮಾನವ ಅಭಿವೃದ್ಧಿ ಸೂಚ್ಯಂಕ ಕೂಡ ಹೆಚ್ಚು ವಾಸ್ತವವಾಗುತ್ತಿತ್ತು.

ಮಕ್ಕಳ ಅಭಿವೃದ್ಧಿ ಸೂಚ್ಯಂಕ ತಾಲೂಕುಗಳ ನಡುವಣ ನಿಜ ವ್ಯತ್ಯಾಸಗಳನ್ನು ತೋರುತ್ತದೆ. ಆದ್ದರಿಂದ ಒಟ್ಟು ತಾಲೂಕುಗಳಲ್ಲಿ ಮಕ್ಕಳ ಅಭಿವೃದ್ಧಿ ಸೂಚ್ಯಂಕಗಳು ಕಡಿಮೆ ಇರುವುದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದೂ ಕೂಡ ಮಕ್ಕಳ, ಅದರಲ್ಲೂ ವಿಶೇಷವಾಗಿ ಅತಿ ಚಿಕ್ಕ ಮಕ್ಕಳ ಅಭಿವೃದ್ಧಿ ಅವಕಾಶಗಳನ್ನು ಮತ್ತು ಸ್ಥಿತಿಗತಿಗಳನ್ನು ಸಂಪೂರ್ಣವಾಗಿ ಪ್ರತಿನಿಧಿಸುವುದಿಲ್ಲ. ಮಕ್ಕಳ ಮರಣ ಪ್ರಮಾಣಕ್ಕೆ ಶಾಲಾ-ಪೂರ್ವ ಸೌಲಭ್ಯಗಳ ಅಡಿಯಲ್ಲಿ ಬರುವ ಮಕ್ಕಳ ಪ್ರಮಾಣ ಸೇರಿಸಿದ್ದರೆ ಅದು ಇನ್ನಷ್ಟು ಬಲಿಷ್ಠ ಸೂಚಕವಾಗುತ್ತಿತ್ತು. ಮಕ್ಕಳ ಬಡತನದ ಬಗ್ಗೆ ನಡೆಯುತ್ತಿರುವ ಸಂಶೋಧನೆ ಈ ಸೂಚ್ಯಂಕದ ರಚನೆಯ ಬಗ್ಗೆ ಮಾಹಿತಿ ನೀಡಬಹುದು.

ಆಹಾರ ಭದ್ರತೆ ಸೂಚ್ಯಂಕದಲ್ಲೂ ಸುಧಾರಣೆಗೆ ಅವಕಾಶಗಳಿವೆ. ಮೊದಲನೆಯದಾಗಿ ಈಗ ಅದು ದೊರೆಗೊಳ್ಳುವಿಕೆ, ಲಭ್ಯತೆ ಮತ್ತು ಜೀರ್ಣಿಸಿಕೊಳ್ಳುವಿಕೆಗಳನ್ನು ಒಟ್ಟಾಗಿ ಸೇರಿಸಿಕೊಂಡಿದೆ. ಇದರಲ್ಲಿ ಒಂದನ್ನೊಂದು ನಿರಾಕರಿಸುವ ಅವಕಾಶಗಳು ಹೆಚ್ಚು. ಇದೊಂದು ಭದ್ರತೆ ಸೂಚ್ಯಂಕವಾದ್ದರಿಂದ ಕೇವಲ ಲಭ್ಯತೆ ಮತ್ತು ದೊರೆಗೊಳ್ಳುವಿಕೆಗಳ ಮೇಲೆ ಮಾತ್ರ ಗಮನ ಹರಿಸುವುದು ಸರಿಯಾಗುತ್ತದೆ. ಇದಕ್ಕಾಗಿ, 'ಆಹಾರದ ಹಕ್ಕು' ಆಂದೋಲನದಲ್ಲಿ ಬಳಸಲಾದ ಅಂಶಗಳನ್ನು ಉಪಯೋಗಿಸುವುದು ಮುಖ್ಯವಾಗುತ್ತದೆ. ಆದರೆ ಆಹಾರ ಭದ್ರತೆ ಸೂಚ್ಯಂಕ ಒಂದೆಡೆ ಅಂಗನವಾಡಿ ವ್ಯಾಪ್ತಿ, ಬಿಸಿಯೂಟ ಮತ್ತು ಸಾರ್ವಜನಿಕ ಪಡಿತರ ವ್ಯವಸ್ಥೆಗಳನ್ನು ಸೇರಿಸಿಕೊಳ್ಳುವುದರ ಜೊತೆಗೆ ಉದ್ಯೋಗ ಖಾತ್ರಿ ಯೋಜನೆಯಂತಹ ಇತ್ಯಾದಿ ಯೋಜನೆಗಳ ದೊರೆಗೊಳ್ಳುವಿಕೆ ಹಾಗು ಬಳಕೆಯಂತಹ ಜೀವನೋಪಾಯ ಭದ್ರತೆ ಉದ್ದೇಶಿತ ಪ್ರಯತ್ನಗಳನ್ನು ಒಳಗೊಳ್ಳುತ್ತದೆ. ಜೊತೆಗೆ ಆಹಾರ ಬೆಳೆಗಳ ಅಡಿಯಲ್ಲಿ ಕೃಷಿ ಮತ್ತು ಸಂಬಂಧಿತ ಸೂಚಕಗಳನ್ನು ಸೇರಿಸಿಕೊಳ್ಳುವುದು, ಒಂದು ಸಣ್ಣ ಭೌಗೋಳಿಕ ಕ್ಷೇತ್ರಕ್ಕೆ ನೋಡಿದಾಗ, ವಿರೂಪಗೊಂಡ ಚಿತ್ರಣವನ್ನು ಕೊಡುತ್ತದೆ. ಅದರಲ್ಲೂ ವಿಶೇಷವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಷಯದಲ್ಲಿ ಆಹಾರದ ಆಮದು ಸಾಮಾನ್ಯವಾದ್ದರಿಂದ ಅದನ್ನು ಪರಿಗಣಿಸಬೇಕಾದ್ದು ಅಗತ್ಯವಾಗುತ್ತದೆ.

ನಗರಾಭಿವೃದ್ಧಿ ಸೂಚ್ಯಂಕ, ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ ಮತ್ತು ಆಹಾರ ಭದ್ರತೆ ಸೂಚ್ಯಂಕಗಳು ಮಾರ್ಗ ಅಥವಾ ದಾರಿಗಳಾದರೆ ಮಾನವ ಅಭಿವೃದ್ಧಿ ಸೂಚ್ಯಂಕ, ಅಂಗ ಸಂಬಂಧಿ ಅಸಮಾನತೆ ಸೂಚ್ಯಂಕ ಮತ್ತು ಮಕ್ಕಳ ಅಭಿವೃದ್ಧಿ ಸೂಚ್ಯಂಕಗಳನ್ನು ಫಲಿತಾಂಶ ಅಥವಾ ಗಮ್ಯಸ್ಥಾನ ಎನ್ನಬಹುದಾಗಿದೆ. ಈ ಎರಡೂ ಬಗೆಯ ಸೂಚ್ಯಂಕಗಳ ನಡುವೆ ಒಂದು ಬಲವಾದ ಸಹಯೋಗವಿರಬೇಕೆಂದು ನಿರೀಕ್ಷಿಸುತ್ತೇವೆ. ಆದರೆ ಇವುಗಳನ್ನು ಒಟ್ಟಿಗೆ ನಕ್ಷೆಯಂತೆ ನೋಡಲು ಹೊರಟಾಗ ನಮ್ಮ ನಿರೀಕ್ಷೆ ಸುಳ್ಳಾಗುತ್ತದೆ (ಚಿತ್ರ 12.2). ಮಾರ್ಗ ಮತ್ತು ಫಲಿತಾಂಶ ಸೂಚ್ಯಂಕಗಳ ನಡುವೆ ಸ್ಪಷ್ಟ ಸಹಯೋಗವಿದ್ದಿದ್ದರೆ ಬಲ ಮೇಲುಗಡೆ ಮತ್ತು ಎಡ ಕೆಳಗಡೆ ಕಾಲುಭಾಗಗಳಲ್ಲಿ ಅಂಕಗಳ ಸಾಂದ್ರತೆ ಹೆಚ್ಚಿರಬೇಕಿತ್ತು. ಆದರೆ ಹಾಗಾಗಿಲ್ಲ. ನೆಲಮಂಗಲದಲ್ಲಿ ಎಲ್ಲ ಫಲಿತಾಂಶ ಸೂಚಕಗಳು ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ ಮತ್ತು ಆಹಾರ ಭದ್ರತೆ ಸೂಚ್ಯಂಕಗಳ ಜೊತೆ ಅಲ್ಪ ಪ್ರಮಾಣದಲ್ಲಿ ಸಂಬಂಧವನ್ನು ತೋರುತ್ತವೆಯಾದರೂ ನಗರಾಭಿವೃದ್ಧಿ ಸೂಚ್ಯಂಕದ ವಿಷಯದಲ್ಲಿ ಅದು ನಿಜವಲ್ಲ. ದೊಡ್ಡಬಳ್ಳಾಪುರದಲ್ಲಿ ಫಲಿತಾಂಶ ಸೂಚಕಗಳಾದ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಅಂಗ ಸಂಬಂಧಿ ಅಸಮಾನತೆ ಸೂಚ್ಯಂಕಗಳು ಸಹಾಯಕ/ಮಾರ್ಗ ಸೂಚ್ಯಂಕಗಳಾದ ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ ಮತ್ತು ಆಹಾರ ಭದ್ರತೆ ಸೂಚ್ಯಂಕಗಳ ಜೊತೆ ಅತೀ ಅಲ್ಪ ಪ್ರಮಾಣದಲ್ಲಿ ಸಂಬಂಧ ತೋರುತ್ತವೆ. ಉಳಿದೆರಡು ತಾಲೂಕುಗಳಲ್ಲಿ ಈ ಮಾರ್ಗ ಸೂಚ್ಯಂಕಗಳು ಮತ್ತು ಫಲಿತಾಂಶ ಸೂಚ್ಯಂಕಗಳ ಸಂಬಂಧಗಳು ಇನ್ನೂ ದುರ್ಬಲವಾಗಿವೆ.

ಚಿತ್ರ 12.2. ತಾಲೂಕುವಾರು ಸೂಚ್ಯಂಕಗಳ ನಕ್ಷೆ (2011)




ಸೂಚನೆ: GEI = 1- GII; UDI (ದೇವನಹಳ್ಳಿ) = ಸರಾಸರಿ (UDI (ದೇವನಹಳ್ಳಿ ಮತ್ತು ವಿಜಯಪುರ))

ಈ ದುರ್ಬಲ ಸಂಬಂಧವನ್ನು ಎರಡೂ ರೀತಿಗಳಲ್ಲಿ ಅರ್ಥೈಸಬಹುದು. ಒಂದು, ಅತ್ಯುತ್ತಮ ಮತ್ತು ಅತಿ ಕಳಪೆ ಸಾಧಕರು ಒಂದು ಬಗೆಯ ಸಂಬಂಧವನ್ನು ತೋರುತ್ತಾರೆಯಾದರೆ, ಉಳಿದೆರಡು ಸ್ಥಿತ್ಯಂತರದಲ್ಲಿವೆ. ಆದ್ದರಿಂದ ಸ್ಪಷ್ಟವಾದ ಸಂಬಂಧಗಳನ್ನು ತೋರುವುದಿಲ್ಲ. ಎರಡನೆಯದಾಗಿ, ಮಾರ್ಗ ಸೂಚಕಗಳನ್ನು ಸೇರಿಸಿ ವಿಶ್ಲೇಷಿಸುವಾಗ ಅದರಲ್ಲಿ ಫಲಿತಾಂಶ ಸೂಚಕಗಳೂ ಸೇರಿರುತ್ತವೆ. ಆದ್ದರಿಂದ ಬಹಳ ಸ್ಪಷ್ಟವಾದ ಚಿತ್ರ ದೊರೆಯುವುದಿಲ್ಲ. ಉದಾ: ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕದಲ್ಲಿ ವೈವಿಧ್ಯವಾದ ಸ್ವಭಾವದ ಎಲ್ಲ ಬಗೆಯ ಸೂಚಕಗಳೂ ಇವೆ. ಆದ್ದರಿಂದ ಅಂತಿಮವಾಗಿ ಯಾವುದರ ಬಗ್ಗೆಯೂ ಏನನ್ನೂ ಹೆಚ್ಚಾಗಿ ಹೇಳುವುದಿಲ್ಲ. ಈ ಸೂಚ್ಯಂಕಗಳ ನಿರ್ಮಾಣ ಮತ್ತು ವ್ಯತ್ಯಯಗಳ ಆಯ್ಕೆ, ಅದು ನಿಜಕ್ಕೂ ಮಾನವ ಅಭಿವೃದ್ಧಿಯತ್ತ ಒಯ್ಯುವುದೋ ಇಲ್ಲವೋ ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಒಂದು ನಿರ್ದಿಷ್ಟ ಬಗೆಯ ಕಾರ್ಯನೀತಿಯತ್ತ ಒಲವನ್ನು ತೋರುತ್ತದೆ. ಉದಾ: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೈಗಾರೀಕರಣದ ವೇಗ ಜನರ ಜೊತೆ ಸಂಪೂರ್ಣ ಮತ್ತು ಸರಿಯಾದ ಸಂವಹನೆ ಇಲ್ಲದೆ ಕೆಲವು ಕಡೆ ನೀರಾವರಿ ಕೃಷಿ ಭೂಮಿಯನ್ನೂ ಸ್ವಾಧೀನಪಡಿಸಿಕೊಳ್ಳುವುದರ ಮೇಲೆ ಆಧರಿಸಿದೆ. ಇದು 'ಆರ್ಥಿಕ ಶ್ರೀಮಂತಿಕೆ'ಯನ್ನು ತರಬಹುದೇ ಹೊರತು 'ಮಾನವ ಜೀವನ ಶ್ರೀಮಂತಿಕೆಯನ್ನು' ತರುವುದಿಲ್ಲ.

## 12.2 ಬೆಂಗಳೂರು ಗ್ರಾಮಾಂತರ: ಸೂಚ್ಯಂಕಗಳ ಆಚೆಗೆ

ಈ ವರದಿಯ ವ್ಯಾಪ್ತಿಯಲ್ಲಿರುವ ಮಾನವ ಅಭಿವೃದ್ಧಿ ಮಾದರಿ ಮತ್ತು ಅಂಶಗಳ ದೃಷ್ಟಿಕೋನದಿಂದ, ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಉತ್ತೇಜನಕಾರಿಯಾದ ಮತ್ತು ಉನ್ನತಿಯ ಸುದ್ದಿಯ ಜೊತೆಗೆ, ಕೆಲವು ಸವಾಲುಗಳನ್ನೂ ಹುಟ್ಟಿಸುತ್ತದೆ. ಇವುಗಳಲ್ಲಿ ಕೆಲವನ್ನು ಪುನಃ ವಿಮರ್ಷಿಸುವ ಅಗತ್ಯವಿರಬಹುದು ಏಕೆಂದರೆ ಇದು ಅಪೂರ್ಣ ವಿಶ್ಲೇಷಣೆಯನ್ನು ಆಧರಿಸಿರಬಹುದು ಹಾಗು ಮುಂಚೆಯೇ ಹೇಳಿದಂತೆ, ಬೆಂಗಳೂರು ನಗರದ ಜೊತೆ ಸೇರಿಸಿ ನೋಡದಿದ್ದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಾಣುವ ಕೆಲವು ಪ್ರವೃತ್ತಿಗಳು ನಮ್ಮನ್ನು ದಾರಿತಪ್ಪಿಸಬಹುದು. ಆದರೂ, ಅವನ್ನು ಕಂಡಂತೆಯೇ ಪ್ರಸ್ತುತಪಡಿಸುವುದು ಬಹಳ ಮುಖ್ಯವಾಗಿದೆ.

ಜಿಲ್ಲೆಯು ಸಾಕ್ಷರತೆ ಮತ್ತು ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯಲ್ಲಿ ಉತ್ತೇಜಕ ಪ್ರವೃತ್ತಿ ತೋರುತ್ತಿದೆ. ಸಾಕ್ಷರತೆಯು ಸುಧಾರಿಸಿದೆ ಮತ್ತು 2001 ಹಾಗೂ 2011ರ ಅವಧಿಯಲ್ಲಿ ಅನಕ್ಷರಸ್ಥರ ನಿಖರ ಸಂಖ್ಯೆಗಳು ಕಡಿಮೆಯಾಗಿದೆ. ಪ್ರಾಥಮಿಕ ಹಂತದಲ್ಲಿ ಸಮಗ್ರ ಮತ್ತು ನಿವ್ವಳ ದಾಖಲಾತಿ ಅನುಪಾತಗಳು ಉತ್ತಮವಾಗಿದ್ದು, ಯಾವುದೇ ಲಿಂಗ ಅಸಮಾನತೆಯನ್ನು ತೋರಿಸುವುದಿಲ್ಲ. ಆದರೆ, ಗುಣಮಟ್ಟದ ಸಮಸ್ಯೆಯು ಈಗಲೂ ಪ್ರಸ್ತುತವಿದೆ. ಪ್ರೌಢಶಾಲಾ ಹಂತದಲ್ಲಿ, ಸುಧಾರಣೆಯಾಗಿದ್ದರೂ, ದಾಖಲಾತಿ ಅನುಪಾತಗಳು ಬಹಳ ಹೆಚ್ಚಾಗಿಲ್ಲ, ಆದರೆ ಲಿಂಗ ಅಸಮಾನತೆಯೂ ಇಲ್ಲ. 10ನೇ ತರಗತಿಯ ಹಂತದಲ್ಲಿ ಉತ್ತೀರ್ಣತೆಯ ಪ್ರಮಾಣ ಸುಧಾರಿಸಿವೆ. ಹಠಾತ್ತನೆ ಲಿಂಗ ಅಸಮಾನತೆಯು ಉದ್ಭವಿಸುತ್ತದೆ ಮತ್ತು ಉನ್ನತಶಿಕ್ಷಣದ ಹಂತದಲ್ಲಿ ಮುಖ್ಯವಾಗಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬಹಳವಾಗಿ ಗೋಚರಿಸುತ್ತದೆ. ಚಿಂತೆಗೆ ಒಂದು ಪ್ರಮುಖ ಕಾರಣವೆಂದರೆ, ಪ್ರೌಢ ಮತ್ತು ಉನ್ನತಶಿಕ್ಷಣದ ಹಂತದಲ್ಲಿ ಶುಲ್ಕ ಪಡೆಯುವ ಖಾಸಗಿ ಸಂಸ್ಥೆಗಳ ಕ್ಷಿಪ್ರ ವ್ಯಾಪಕತೆ. ಲಭ್ಯವಿರುವ ಅಧ್ಯಯನಗಳು ಸೂಚಿಸುವಂತೆ, ಇದು ಸಾಮಾನ್ಯವಾಗಿ ಹುಡುಗಿಯರ ಮತ್ತು ಬಡ ಕುಟುಂಬಗಳ ಹುಡುಗ ಮತ್ತು ಹುಡುಗಿಯರ ಪಾಲ್ಗೊಳ್ಳುವಿಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಂಭವವಿದೆ. ಇತ್ತೀಚೆಗೆ, ಶಿಕ್ಷಣದ ಮೇಲೆ ಸಾರ್ವಜನಿಕ ವೆಚ್ಚವು ನೈಜ ಅಂಕಿಗಳಲ್ಲಿ ಕುಸಿದಿದ್ದು, ಇದು ಉತ್ತೇಜಕ ಸಂಜ್ಞೆಯಲ್ಲ.

ಆರೋಗ್ಯದ ವಿಷಯದಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಮಿಶ್ರ ಚಿತ್ರಣವನ್ನು ನೀಡುತ್ತದೆ. ಉತ್ತಮ ಮಟ್ಟದ ರೋಗನಿರೋಧಕ ಪ್ರತಿರಕ್ಷಣೆ ಮತ್ತು ತುಲನಾತ್ಮಕವಾಗಿ ಕಡಿಮೆ ಮಕ್ಕಳ ಮರಣ ಪ್ರಮಾಣ, ಉನ್ನತ ಮಟ್ಟದ ಸಾಂಸ್ಥಿಕ ಹೆರಿಗೆಗಳು ಮತ್ತು ಹೆಚ್ಚಾದ ತಾಯಂದಿರ ಮರಣ ಪ್ರಮಾಣ, ಸಾರ್ವಜನಿಕ ಆರೋಗ್ಯ ಸೌಲಭ್ಯಗಳು

ಮತ್ತು ಕಾರ್ಯಕರ್ತರ ಉತ್ತಮ ವ್ಯಾಪ್ತಿಯ ಜೊತೆಗೆ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳಲ್ಲಿ ಅತಿಯಾದ ಹೆಚ್ಚಳ, ಇವು ಕೆಲವು ಉದಾಹರಣೆಗಳು. ಅತಿ ಹೆಚ್ಚಿನ ಮಾನವ ಅಭಿವೃದ್ಧಿ ಸೂಚ್ಯಂಕ ಇರುವ ನೆಲಮಂಗಲ, ಅತಿ ಹೆಚ್ಚಿನ ತಾಯಂದಿರ ಮರಣ ಪ್ರಮಾಣ ಆದ 150ಅನ್ನೂ ಹೊಂದಿದೆ. ಹೆಚ್ಚಿನ ಮಟ್ಟದ ಸಾಂಸ್ಥಿಕ ಹೆರಿಗೆ ಮತ್ತು ದಾದಿಯರ ಉತ್ತಮ ವ್ಯಾಪ್ತಿ - ಸುಮಾರು ಶೇ.97ರಷ್ಟು ಇದ್ದರೂ ಹೆಚ್ಚಿನ ತಾಯಂದಿರ ಮರಣ ಪ್ರಮಾಣ ಇರುವುದು, ಸಾಂಸ್ಥಿಕ ಹೆರಿಗಗಳಲ್ಲಿ ಸೇವೆಗಳ ಗುಣಮಟ್ಟದ ಬಗ್ಗೆ ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಇದರ ಜೊತೆಗೆ, ಹೊಸಕೋಟೆಯಲ್ಲಿ ನಡೆದ ಕಿರು ಕ್ಷೇತ್ರ ಅಧ್ಯಯನದ ಸಮೀಕ್ಷೆಯು, ಇಂತಹ ಸೇವೆಗಳ ವ್ಯಾಪ್ತಿಯಲ್ಲಿ ದಲಿತ ಕುಟುಂಬಗಳು ಪೂರ್ಣವಾಗಿ ಇಲ್ಲದಿರುವುದನ್ನೂ ಸೂಚಿಸುತ್ತವೆ.

ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರ ಇಲ್ಲದಿರುವುದರಿಂದ ಇಲ್ಲಿ ಜಿಲ್ಲಾ ಆಸ್ಪತ್ರೆಯಿಲ್ಲ. ಇದರ ಅರ್ಥ, ಜನರು ಆಸ್ಪತ್ರೆ ಸೇವೆಗಳಿಗಾಗಿ ಬೆಂಗಳೂರು ನಗರಕ್ಕೇ ಬರಬೇಕು ಮತ್ತು ಇಲ್ಲಿ ಖಾಸಗಿ ಆಸ್ಪತ್ರೆಗಳು, ಹೆಚ್ಚಾದ ಬೇಡಿಕೆ ಮತ್ತು ತಲನಾತ್ಮಕವಾಗಿ ಹೆಚ್ಚು ಪಾವತಿಸುವ ಸಾಮರ್ಥ್ಯವಿರುವುದರಿಂದ, ಹೆಚ್ಚಿನ ಶುಲ್ಕಗಳನ್ನು ಪಡೆಯಬೇಕಾಗಬಹುದು. ಬಡಕುಟುಂಬಗಳಿಗೆ ಮೀಸಲಿರುವ ಸಾರ್ವಜನಿಕ ಆರೋಗ್ಯ ವಿಮೆಯು ಇನ್ನೂ ಗಣನೀಯವಾಗಿ ಆರಂಭವಾಗಬೇಕಿದೆ. ಇತ್ತೀಚಿನ ದಿನಗಳಲ್ಲಿ ಆರೋಗ್ಯದ ಮೇಲೆ ಸಾರ್ವಜನಿಕ ವೆಚ್ಚವು ನೈಜ ಅಂಶಗಳಲ್ಲಿ ಕುಸಿದಿದ್ದು, ಇದು ಖಂಡಿತವಾಗಿಯೂ ಒಳ್ಳೆಯ ಸಂಕೇತವಲ್ಲ. ಮಾನವ ಅಭಿವೃದ್ಧಿಗೆ ಶಿಕ್ಷಣ ಮತ್ತು ಆರೋಗ್ಯವು ನಿರ್ಣಾಯಕವಾಗಿದ್ದು, ಜಿಲ್ಲೆಯು ಎದುರಿಸುತ್ತಿರುವ ಉಳಿದ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು, ಈ ಎರಡು ಕ್ಷೇತ್ರಗಳಲ್ಲಿ ಕಡಿಮೆಯಾಗುತ್ತಿರುವ ಸಾರ್ವಜನಿಕ ವೆಚ್ಚವು ಚಿಂತೆಗೆ ಕಾರಣವಾಗಿದೆ.

ದೊಡ್ಡ ಸೇವಾಕ್ಷೇತ್ರವು ಜಿಲ್ಲೆಯ ಒಟ್ಟು ಆದಾಯಕ್ಕೆ ಅರ್ಧದಷ್ಟು ಕೊಡುಗೆ ನೀಡುತ್ತಿದ್ದು, ಮತ್ತು ವೇಗವಾಗಿ ವಿಸ್ತರಿಸುತ್ತಿರುವ ಉತ್ಪಾದನಾ ಕ್ಷೇತ್ರವು, ಕರ್ನಾಟಕಕ್ಕೆ ಹೋಲಿಸಿದಂತೆ ಜಿಲ್ಲೆಗೆ ಹೆಚ್ಚಿನ ತಲಾ ಆಂತರಿಕ ಉತ್ಪನ್ನವನ್ನು ತಂದುಕೊಟ್ಟಿದೆ. ಜಿಲ್ಲೆಯ ಆದಾಯಕ್ಕೆ ಕೃಷಿಯು ತನ್ನ ಕೊಡುಗೆಯಲ್ಲಿ ಇಳಿಕೆಯನ್ನು ಕಾಣುತ್ತಿದೆ ಆದರೆ, ಅದು ಜಿಲ್ಲೆ ಕಾರ್ಮಿಕರಲ್ಲಿ ಶೇ. 70 ರಷ್ಟು ಜನರಿಗೆ ಉದ್ಯೋಗ ಒದಗಿಸಿಕೊಟ್ಟಿದೆ. ಬಡತನ ರೇಖೆಗಿಂತ ಕೆಳಗಿರುವ ಜನರ ಪಾಲು ಕರ್ನಾಟಕದಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಶೇ. 29 ಮತ್ತು ಶೇ. 32 ರಷ್ಟು ಇದ್ದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಇದು ಶೇ.10 ಹಾಗು ಶೇ. 6 ರಷ್ಟು ಕಡಿಮೆಯಿದೆ, ನಗರದ ಬಡತನ ಮಟ್ಟಗಳು ತುಲನಾತ್ಮಕವಾಗಿ ಹೆಚ್ಚಾಗಿವೆ. ಕಾರ್ಮಿಕ ಉತ್ಪಾದಕತೆಯು ಹೆಚ್ಚಾಗಿದ್ದು, ಸಮಂಜಸವಾಗಿ ಹೆಚ್ಚಾಗುತ್ತಿದೆ. ಕೂಲಿ ದರಗಳೂ ಹೆಚ್ಚಾಗಿವೆ. ಆದರೆ, ಜಿಲ್ಲೆಯಲ್ಲಿ ಮಹಿಳಾ ಕಾರ್ಮಿಕರ ಪಾಲು ಪುರುಷರ 2/3 ರಷ್ಟು ಇದೆ. ಹಿಡುವಳಿಯ 1/5 ಕ್ಕೂ ಕಡಿಮೆ ಮಹಿಳೆಯರ ಒಡೆತನದಲ್ಲಿದೆ ಮತ್ತು ಅವರು ಗ್ರಾಮೀಣ ಪ್ರದೇಶಗಳಲ್ಲಿ ಕೃಷಿದಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಕೌಟುಂಬಿಕ ಉದ್ಯಮಗಳಲ್ಲಿ ಕಡಿಮೆ ಕೂಲಿಯ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ನಗರ ಪ್ರದೇಶಗಳಲ್ಲಿ ಮಹಿಳಾ ನಿರುದ್ಯೋಗಿ ಪ್ರಮಾಣವು ಬಹಳ ಹೆಚ್ಚಾಗಿದೆ. ಪುರುಷ ಮತ್ತು ಮಹಿಳಾ ಕಾರ್ಮಿಕರಿಗೆ ನೀಡಲಾಗುವ ಕೂಲಿಯ ದರದಲ್ಲಿಯೂ ಬಹಳ ಅಂತರವಿದ್ದು, ಇದರ ಬಗ್ಗೆ ಗಮನ ಹರಿಸಬೇಕಿದೆ.

ಆಸ್ತಿಗಳ ಒಡೆತನ, ನೀರು ಮತ್ತು ಚರಂಡಿಯ ಲಭ್ಯತೆಯ ಅಂಶದಲ್ಲಿ ವ್ಯಕ್ತಪಡಿಸಲಾದ ಜೀವನಮಟ್ಟ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತುಲನಾತ್ಮಕವಾಗಿ ಉತ್ತಮವಾಗಿದೆ.ಇದು ಪ್ರಮುಖವಾಗಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಅನ್ವಯಿಸುತ್ತದೆ. ಇತರ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ ಈ ಜಿಲ್ಲೆಯು ಬಹಳ ಉತ್ತಮವಾದ ಸ್ಥಾನದಲ್ಲಿದೆ. ಉತ್ಸಾಹಿ ಜಿಲ್ಲಾಡಳಿತದ ಬೆಂಬಲದಿಂದಾಗಿ, ಬಹಳಷ್ಟು ಪಂಚಾಯತಿಗಳು ಸಂಪೂರ್ಣ ನೈರ್ಮಲ್ಯತೆ ಆಂದೋಲನವನ್ನು ಗಂಭೀರವಾಗಿ ಪರಿಗಣಿಸಿ, ಈ ವಿಷಯದಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದ್ದಾರೆ. ಕುಡಿಯುವ ನೀರಿನ ಗುಣಮಟ್ಟದ ವಿಚಾರದಲ್ಲೂ ಈ ಜಿಲ್ಲೆಯು ಸುಧಾರಣೆಯನ್ನು ಸಾಧಿಸಿದ್ದು ಕಲ್ಮಶದ ಮಟ್ಟವೂ ಕಡಿಮೆಯಾಗಿದೆ. ಬಹಳಷ್ಟು ಸಂಖ್ಯೆಯಲ್ಲಿ ಪಂಚಾಯತಿಗಳು ಘನತ್ಯಾಜ್ಯ ನಿರ್ವಹಣಾ ಉಪಕ್ರಮಗಳನ್ನೂ ಆರಂಭಿಸಿದ್ದಾರೆ. ನಕಾರಾತ್ಮಕ ವಿಷಯವೆಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ, ಪ್ರಮುಖವಾಗಿ ಪರಿಶಿಷ್ಟ ಜಾತಿಯವರಿಗೆ, ನೀರಿನ ಮತ್ತು ನೈರ್ಮಲ್ಯದ ಲಭ್ಯತೆಯು ಇತರವರ್ಗಗಳಿಗಿಂತ ಬಹಳ ಕಡಿಮೆಯಿದೆ. ಸ್ತ್ರೀ ಪ್ರಧಾನ ಕುಟುಂಬಗಳಿಗೆ, ಇತರರಿಗೆ ಹೋಲಿಸಿದಂತೆ, ನೀರು, ಶೌಚಾಲಯ, ವಿದ್ಯುತ್ ಸಂಪರ್ಕ ಮತ್ತು ಸ್ವಚ್ಛ ಇಂಧನದ ಲಭ್ಯತೆಯು ತುಲನಾತ್ಮಕವಾಗಿ ಕಡಿಮೆಯಿದೆ. ವೇಗ ಪಡೆದುಕೊಂಡಿರುವ ನಗರೀಕರಣವು ಭೂಮಿಯ ಬೇಡಿಕೆಯನ್ನು ಹೆಚ್ಚಿಸಿದ್ದು, ಇದರ ಪರಿಣಾಮವಾಗಿ ಕೆಲವು ತಾಲೂಕುಗಳು ವಸತಿಗಾಗಿ ನಿವೇಶನಗಳ ಅಭಾವವನ್ನು ಎದುರಿಸುತ್ತಿವೆ. ಜಿಲ್ಲೆಯ ನಗರ ಪ್ರದೇಶಗಳು ಹೆಚ್ಚಿದ ಜನಸಂಖ್ಯೆ ಬೆಳವಣಿಗೆಯ ಒತ್ತಡವನ್ನು ಎದುರಿಸುತ್ತಿದ್ದು, ಇದರ ಪರಿಣಾಮವಾಗಿ ನೀರು ಮತ್ತು ನೈರ್ಮಲ್ಯತೆಗೆ ಬೇಡಿಕೆಯು ಹೆಚ್ಚಾಗಿದೆ ವಿಶೇಷವಾಗಿ ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿಯಲ್ಲಿ ಈ ಪರಿಸ್ಥಿತಿಯು ಚಿಂತೆಯನ್ನುಂಟುಮಾಡಿದೆ.

ಈ ಜಿಲ್ಲೆಯು ಹೆಚ್ಚಿನ ಪ್ರಮಾಣದಲ್ಲಿ ಭೂ ಸ್ವಾಧೀನ ಮತ್ತು ಭೂ ಪರಭಾರಿಕೆಯನ್ನು ಅನುಭವಿಸಿದೆ. ಭೂ ಹಿಡುವಳಿಯ ಸಂಖ್ಯೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ದಲಿತರು ಗಣನೀಯ ಪ್ರಮಾಣದ ಹಿಡುವಳಿಯನ್ನು ಕಳೆದುಕೊಂಡಿದ್ದು, ಕಳೆದುಕೊಂಡ ಭೂಹಿಡುವಳಿಯ ಸಂಖ್ಯೆಯು ಗಣನೀಯವಾಗಿಲ್ಲ ಎಂಬುದನ್ನು ತಿಳಿಸುತ್ತದೆ. ಇದು ಹೊಸಕೋಟೆ ಮತ್ತು ದೊಡ್ಡಬಳ್ಳಾಪುರಗಳಲ್ಲಿ ಬಹಳ ನಿಜವಾಗಿತ್ತು. ದೇವನಹಳ್ಳಿ ಮತ್ತು ಹೊಸಕೋಟೆಗಳಲ್ಲಿ ಪರಿಶಿಷ್ಟ ಜಾತಿಯವರ ಭೂಮಿಯು ಗಣನೀಯವಾಗಿ ಕಡಿಮೆಯಾಗಿತ್ತು ಮತ್ತು ಇತರ ವರ್ಗಗಳಿಗೆ ಸೇರಿದ ಅದೇ ವಿಸ್ತೀರ್ಣದ ಭೂಮಿಯಲ್ಲಿ ಶೇ. 25 ರಷ್ಟು ಏರಿಕೆಯಾಗಿತ್ತು ಎಂಬುದನ್ನು ಪರಿಗಣಿಸಿ, ಇತರ ವರ್ಗದವರು ಭೂವ್ಯವಹಾರದ ಕಾರಣಗಳಿಗಾಗಿ ಪರಿಶಿಷ್ಟ ಜಾತಿ ಭೂಮಿಗಳನ್ನು ಸಣ್ಣ ಪ್ರಮಾಣಗಳಲ್ಲಿ ಕೊಂಡಬಹುದು ಎಂದು ಕಂಡುಬರುತ್ತದೆ. ಭೂವ್ಯವಹಾರ ಕ್ಷೇತ್ರದ ಒತ್ತಡಗಳನ್ನು ಪರಿಗಣಿಸಿ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ (ಕೆಲವು ಭೂಮಿಗಳ ವರ್ಗಾವಣೆ ತಡೆ) ಕಾಯಿದೆ, 1978ನ ಉಲ್ಲಂಘನೆಯ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ. ರಾಜ್ಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ನೀಡಿದ ಭೂಮಿಯ ಮಾರಾಟವನ್ನು ಈ ಕಾಯಿದೆಯು ನಿಷೇಧಿಸುತ್ತದೆ.

ಜಿಲ್ಲೆಯಲ್ಲಿ ಕೈಗಾರೀಕರಣ ಮತ್ತು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಸರ್ಕಾರವು ಅಗಾಧ ಪ್ರಮಾಣದ ಬೇಸಾಯದ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು. ಇದು ಆ ಪ್ರದೇಶದ ಅರಣ್ಯವ್ಯಾಪ್ತಿ ಮತ್ತು ಜೀವವೈವಿಧ್ಯತೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ. ಭೂಮಿಯನ್ನು ಕಳೆದುಕೊಂಡ ಬಹಳಷ್ಟು ಸಣ್ಣ ರೈತರು ಕೂಲಿ ಕಾರ್ಮಿಕರಾಗಿದ್ದು, ದೊಡ್ಡ ತೋಟಗಳನ್ನುಳ್ಳವರು, ತರಕಾರಿ, ಹಣ್ಣು ಮತ್ತು ಹೂವುಗಳನ್ನು ಬೆಳೆದು ಲಾಭವನ್ನು ಪಡೆದಿದ್ದಾರೆ. ಸಾಮಾನ್ಯವಾಗಿ ಸಣ್ಣ ರೈತರಿಗೆ ಮುಂಬರುವ ಭೂ ಸ್ವಾಧೀನ ಮತ್ತು ಅಂತಹ ಇತರ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದಿಲ್ಲ, ಹಾಗಾಗಿ ಅವರು ಭೂವ್ಯವಹಾರ ಮಾಡುವವರ ಗುರಿಯಾಗುತ್ತಾರೆ. ಇಲ್ಲಿ, ಮಾಹಿತಿಯನ್ನು ಬಹಳ ಮುಂಚಿತವಾಗಿಯೇ ನೀಡಲು ಹೆಚ್ಚು ವಾಹಿನಿಗಳ ಸೃಷ್ಟಿಗೆ ಮತ್ತು ಮುಂಬರುವ ಬದಲಾವಣೆಗಳ ಬಗ್ಗೆ ಜನರೊಡನೆ ಚರ್ಚಿಸಿ ಆಡಳಿತವನ್ನು ಸುಧಾರಿಸಲು ಬಹಳ ಅವಕಾಶವಿದೆ. ನಗರಾಡಳಿತದ ಸೂಚಕಗಳಲ್ಲಿ ಆದಾಯವನ್ನು ಸೃಷ್ಟಿಸುವ ಸಾಮರ್ಥ್ಯ, ಜಿಲ್ಲೆಯ ಐದು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂರಕ್ಕೆ ಆಸ್ತಿ ತೆರಿಗೆ ಕ್ರೋಢಿಕರಣ ಉತ್ತಮವಾಗಿದೆ ಎಂದು ತೋರಿಸುತ್ತದೆ. ಆದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಂಬಂಧಿತ ಯೋಜನೆಗಳಿಗೆ ಹಣವನ್ನು ವ್ಯಯಿಸುವಲ್ಲಿ ಜಿಲ್ಲೆಯು ಕಳಪೆ ಸಾಧನೆ ಮಾಡಿದೆ. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳನ್ನು ತೆಗೆದುಕೊಂಡರೆ, ಪ.ಜಾ ಮತ್ತು ಪರಿಶಿಷ್ಟ ಪಂಗಡ ನಿಧಿಯ ಶೇ. 42 ರಷ್ಟು ವ್ಯಯಿಸದೇ ಉಳಿದುಕೊಂಡಿದೆ. ಹೊಸಕೋಟೆಯಲ್ಲಿ ಬಳಕೆಯು ಅತಿ ಕಡಿಮೆಯಿದ್ದು, ದೊಡ್ಡಬಳ್ಳಾಪುರ ಪಟ್ಟಣದಲ್ಲಿ ಇದು ಹೆಚ್ಚಾಗಿತ್ತು. ಹೊಸಕೋಟೆಯ ದಲಿತ ಕುಟುಂಬಗಳ ಸಮೀಕ್ಷೆಯನ್ನು ಆಧರಿಸಿದ ಸಣ್ಣ ಅಧ್ಯಯನವು, ತಾರತಮ್ಯದ ಕಟ್ಟುಪಾಡುಗಳು ಸಡಿಲಗೊಂಡಿವೆ ಆದರೆ ಯಾವಾಗಲೂ ಪ್ರತ್ಯೇಕವಾಗಿದ್ದ ಖಾಸಗಿ ಸ್ಥಳದಲ್ಲಿನ ಅಂತರವು ಈಗಲೂ ಪ್ರತ್ಯೇಕವಾಗಿಯೇ ಇದೆ ಎಂಬುದನ್ನು ತೋರಿಸಿತು.

ಇತರ ಸ್ಥಳಗಳಿಗೆ ಹೋಲಿಸಿದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರೀಕರಣ ಪ್ರಕ್ರಿಯೆಯು ಬೆಂಗಳೂರು ನಗರಕ್ಕೆ ಹತ್ತಿರವಿರುವುದರಿಂದ ವೇಗವಾಗಿದೆ. ನಗರವು ತನ್ನದೇ ಪ್ರತ್ಯೇಕ ಅಸ್ತಿತ್ವವನ್ನು ಅಭಿವೃದ್ಧಿಮಾಡಿಕೊಳ್ಳುವುದು, ತನ್ನದೇ ಕೇಂದ್ರ ಸ್ಥಾನವನ್ನು ಹೊಂದುವುದು ಮತ್ತು ನಾಗರಿಕ ಸಮಾಜವನ್ನು ಸಹಭಾಗಿಯಾಗಿ ಸ್ವೀಕರಿಸಿ ಯೋಜನೆಯನ್ನು ತಯಾರಿಸುವುದು ಬಹಳ ಮುಖ್ಯವಾಗಿದೆ, ಏಕೆಂದರೆ ಆಗ, ಸಮಾಜದ ಎಲ್ಲಾ ವರ್ಗಗಳ ನೈಜ ಮಾನವ ಅಭಿವೃದ್ಧಿಗೆ ಕೊಡುಗೆ ನೀಡಬಲ್ಲ ಮತ್ತು ಲಿಂಗಗಳ ನಡುವೆ ಮತ್ತು ಸಾಮಾಜಿಕ ಅಥವಾ ಆರ್ಥಿಕ ವರ್ಗಗಳ ನಡುವೆ ಇರುವ ಅಸಮಾನತೆಯನ್ನು ಕಡಿಮೆಗೊಳಿಸುವ ಅಭಿವೃದ್ಧಿ ಪ್ರಕ್ರಿಯೆಯನ್ನು ಸಾಧಿಸಬಹುದು.



# ಅನುಬಂಧಗಳು



# 1. ಮಾನವ ಅಭಿವೃದ್ಧಿ ವರದಿಯ ತಯಾರಿಕೆ ಪ್ರಕ್ರಿಯೆ ಹಾಗು ದತ್ತಾಂಶದ ವಿಚಾರಗಳು

## ಪ್ರಸ್ತಾವನೆ

ಕರ್ನಾಟಕ ಸರ್ಕಾರವು ಮೈಸೂರು, ಉಡುಪಿ, ಕಲಬುರ್ಗಿ ಹಾಗು ವಿಜಯಾಪುರ ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿಗಳನ್ನು 2008 ರಲ್ಲಿ ಹೊರತಂದಿತು. ಈ ಯಶಸ್ವಿ ಪ್ರಕಟಣೆಯಿಂದ ಪ್ರೇರಣೆಗೊಂಡು ಈ ರಾಜ್ಯದ ಎಲ್ಲಾ ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿಗಳನ್ನು ತಯಾರಿಸಲು ನಿರ್ಧರಿಸಲಾಯಿತು. ಇದಕ್ಕೆ ಪೂರಕವಾಗಿ ಪ್ರತಿ ಜಿಲ್ಲೆ ಗಳಲ್ಲೂ ವಿಶ್ವವಿದ್ಯಾನಿಲಯಗಳು ಹಾಗು ಸಂಶೋಧನಾ ಸಂಸ್ಥೆಗಳನ್ನು ಗುರುತಿಸಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ ತಯಾರಿಕೆಯನ್ನು ವಹಿಸಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ ತಯಾರಿಸಲು ರಾಜ್ಯ ಸರ್ಕಾರದ ಯೋಜನಾ ಇಲಾಖೆಯ ಮಾನವ ಅಭಿವೃದ್ಧಿ ವಿಭಾಗದೊಂದಿಗೆ ಬೆಂಗಳೂರಿನ ಸೆಂಟರ್ ಫಾರ್ ಬಜೆಟ್ ಅಂಡ್ ಪಾಲಿಸೀ ಸ್ಟಡೀಸ್ ಸಂಸ್ಥೆಯು ದಿನಾಂಕ 15 ನವೆಂಬರ್ 2012 ರಂದು ಒಪ್ಪಂದಕ್ಕೆ ಸಹಿಹಾಕಿತು. ರಾಜ್ಯ ಸರ್ಕಾರದ ಯೋಜನಾ ಇಲಾಖೆಯ ಮಾನವ ಅಭಿವೃದ್ಧಿ ವಿಭಾಗವು ಈ ಪ್ರಕ್ರಿಯೆಯ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ನೀಡಿತು.

ಈ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾನವ ಅಭಿವೃದ್ಧಿ ವರದಿ ತಯಾರಿಕೆಯು ಸುಮಾರು 2 ವರ್ಷಗಳ ಅವಧಿಯದಾಗಿದ್ದು, ಇದರಲ್ಲಿ, ತರಬೇತಿಗಳು, ಕಾರ್ಯಾಗಾರಗಳು, ದತ್ತಾಂಶ ಸಂಗ್ರಹಣೆ ಮತ್ತು ಅದರ ಪರಿಶೀಲನೆ, ವಿವಿಧ ಇಲಾಖೆ ಅಧಿಕಾರಿಗಳ ಜೊತೆ ಚರ್ಚೆ, ವಿಷಯ ಪರಿಣಿತರೊಡನೆ ಸಮಾಲೋಚನೆ, ಪ್ರಾಥಮಿಕ ಸಮೀಕ್ಷೆಗಳು, ಪ್ರಾಥಮಿಕ ವರದಿಯ ವಿಮರ್ಶೆ ಮೊದಲಾದ ಪ್ರಕ್ರಿಯೆಗಳು ಒಳಗೊಂಡಿದ್ದವು.

## ತರಬೇತಿ ಮತ್ತು ಕಾರ್ಯಾಗಾರಗಳು

ಈ ರಾಜ್ಯದ ಎಲ್ಲಾ 30 ಜಿಲ್ಲೆಗಳ ಜಿಲ್ಲಾ ಮಾನವ ಅಭಿವೃದ್ಧಿ ವರದಿ ತಯಾರಿಕೆ ಸಲುವಾಗಿ ಆಯಾ ಜಿಲ್ಲೆಯ ಮಾನವ ಅಭಿವೃದ್ಧಿ ತಯಾರಿಕೆಯ ನ್ನು ವಹಿಸಿಕೊಂಡ ಸಂಸ್ಥೆಗಳ/ವಿಶ್ವವಿದ್ಯಾನಿಲಯದ ವಿಭಾಗದ ಪರಿಣಿತರಿಗೆ 4ದಿನದ (ಡಿಸೆಂಬರ್ 26-29, 2012) ಪರಿಚಯಾತ್ಮಕ ತರಬೇತಿಯನ್ನು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಯಿತು. ಇದರಲ್ಲಿ, ಮಾನವ ಅಭಿವೃದ್ಧಿಯ ಪರಿಕಲ್ಪನೆ, ಇದನ್ನು ಅನುಸರಿಸಿ ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಜೀವನೋಪಾಯ , ವಸತಿ, ನಗರೀಕರಣ, ನೈರ್ಮಲ್ಯ, ನೀರು ಪೂರೈಕೆ ಮೊದಲಾದ ವಿಷಯಗಳು ಮತ್ತು ಅದರ ಆಯಾಮಗಳನ್ನು ಜಿಲ್ಲಾ ಮಾನವ ಅಭಿವೃದ್ಧಿ ವರದಿ ತಯಾರಿಕೆಯ ದೃಷ್ಟಿಕೋನದಿಂದ ಚರ್ಚಿಸಲಾಯಿತು.

ಇದಲ್ಲದೆ, ಈ ವರದಿ ತಯಾರಿಕೆಗೆ ಪೂರಕವಾಗಿ ಜುಲೈ 16–17 2013 ರಂದು ತಾಂತ್ರಿಕ ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ, ವಿವಿಧ ಸೂಚಿಗಳ ಹಾಗು ಸೂಚ್ಯಂಕ ಗಳನ್ನು ಪರಿಚಯಿಸಲಾಯಿತು. ಮಾನವ ಅಭಿವೃದ್ಧಿ ಸೂಚ್ಯಂಕ, ಲಿಂಗ ಸಂಬಂಧಿ ಅಸಮಾನತೆ ಸೂಚ್ಯಂಕ, ಮಕ್ಕಳ ಅಭಿವೃದ್ಧಿ ಸೂಚ್ಯಂಕ, ಸಂಯುಕ್ತ ದಲಿತ ಅಭಿವೃದ್ಧಿ ಸೂಚ್ಯಂಕ, ನಗರಾಭಿವೃದ್ಧಿ ಸೂಚ್ಯಂಕ, ಆಹಾರ ಭದ್ರತೆ ಸೂಚ್ಯಂಕ, ಹಾಗು ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕ ಇವುಗಳ ಮಾಪನ ವಿಧಾನ, ಹಾಗು ಅದಕ್ಕಾಗಿ ಬೇಕಾದ ಸೂಚಕಗಳು, ಅವುಗಳ ಬಳಕೆ ಹಾಗು ಅರ್ಥೈಸುವಿಕೆಯನ್ನು ವಿಸ್ತಾರವಾಗಿ ಚರ್ಚಿಸಲಾಯಿತು. ಪರಿಚಯಾತ್ಮಕ ತರಬೇತಿ ಹಾಗು ತಾಂತ್ರಿಕ ತರಬೇತಿ ನಡುವಣ 6 ತಿಂಗಳ ಅವಧಿಯಲ್ಲಿ ಈ ವರದಿಯಲ್ಲಿನ ಬಳಕೆಗಾಗಿ ಬೇಕಾಗುವ ದತ್ತಾಂಶವನ್ನು ಜಿಲ್ಲಾ ಮಟ್ಟದ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಿ ಅವರಿಂದ ಪಡೆಯುವ ಪ್ರಯತ್ನ ಮಾಡಲಾಗಿತ್ತು. ತಾಂತ್ರಿಕ ತರಬೇತಿ ಸಮಯದಲ್ಲಿ ದತ್ತಾಂಶದ ಲಭ್ಯತೆ, ಅವುಗಳ ನಿಖರತೆ, ಮೊದಲಾದ ವಿಷಯಗಳನ್ನು ಚರ್ಚಿಸಲಾಯಿತು. ಜಿಲ್ಲೆಯ ಮುನ್ನೋಟ, ಜನಗಣತಿ ಮಾಹಿತಿ ಮೊದಲಾದವು ಗಳ ಬಳಕೆಯನ್ನು ಉದಾಹರಣೆಗಳೊಂದಿಗೆ ಮಾಪನ ಮಾಡಿ ಅರ್ಥೈಸಲಾಯಿತು. ಈ ವರದಿಗೆ ರಾಷ್ಟ್ರೀಯ ಮಾದರಿ ಸಮೀಕ್ಷೆ, ಆರೋಗ್ಯ ವ್ಯವಸ್ಥೆ ಸಮೀಕ್ಷೆ ಮೊದಲಾದ ಸಮೀಕ್ಷೆಗಳ ವರದಿಗಳನ್ನು ಬಳಸಿ ಅರ್ಥೈಸಬಹುದೆಂದು ತಿಳಿಸಲಾಯಿತು. ಇದಲ್ಲದೆ, ಎಲ್ಲಾ ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿಗಳು ಒಂದು ಸಮಾನತೆಯನ್ನು ಹೊಂದಿರಬೇಕೆಂಬ ದೃಷ್ಟಿಯಿಂದ ವರದಿಯಲ್ಲಿನ ವಿವಿದ ಅಧ್ಯಾಯಗಳು, ಅದರೊಳಗಿನ ಉಪ ಅದ್ಯಾಯಗಳನ್ನು ಸಮಾನವಾಗಿ ಹೊಂದಿರಬೇಕೆಂದು ನಿರ್ಧರಿಸಲಾಯಿತು. ಇದರಿಂದ ಜಿಲ್ಲೆಗಳ ಹೋಲಿಕೆ ಮತ್ತು ಅಬ್ಯಾಸಗಳಿಗೆ ಅನುಕೂಲವಾಯಿತು.

## ಕಾರ್ಯಾಗಾರಗಳು

ಸೆಂಟರ್ ಫಾರ್ ಬಜೆಟ್ ಅಂಡ್ ಪಾಲಿಸೀ ಸ್ಟಡೀಸ್ ಸಂಸ್ಥೆಯು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯೊಡನೆ ಜಿಲ್ಲೆಯ 4 ತಾಲೂಕುಗಳಲ್ಲಿ ತಾಲೂಕು ಮಟ್ಟದ ಕಾರ್ಯಾಗಾರಗಳನ್ನು ಆಯೋಜಿಸಲಾಯಿತು. ಇದಲ್ಲದೆ ಒಂದು ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಸಹ ಆಯೋಜಿಸಲಾಯಿತು. ಈ ಕಾರ್ಯಾಗಾರದಲ್ಲಿ, ಜನಪ್ರತಿನಿಧಿಗಳು, ಅಧಿಕಾರಿಗಳು, ಸ್ವಯಂಸೇವಾಸಂಸ್ಥೆಗಳು, ನಾಗರೀಕ ಸೇವಾ ಸಂಸ್ಥೆಗಳು, ವಿದ್ಯಾರ್ಥಿಗಳು, ಪತ್ರಿಕೆ ಹಾಗು ಸಮೂಹ ಮಾಧ್ಯಮಗಳು, ಸಂಶೋಧನಾ ಸಂಸ್ಥೆಗಳು ಹಾಗು ಆಸಕ್ತ ಜನರು ಪಾಲ್ಗೊಂಡಿದ್ದರು. ಈ ಕಾರ್ಯಾಗಾರದಲ್ಲಿ, ಮಾನವ ಅಭಿವೃದ್ಧಿಯ ಪರಿಕಲ್ಪನೆ, ಇದನ್ನು ಅನುಸರಿಸಿ ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಜೀವನೋಪಾಯ , ವಸತಿ, ನಗರೀಕರಣ, ನೈರ್ಮಲ್ಯ, ನೀರು ಪೂರೈಕೆ ಮೊದಲಾದ ವಿಷಯಗಳು, ವಿವಿಧ ಸೂಚಿಗಳ ಹಾಗು ಸೂಚ್ಯಂಕ ಗಳನ್ನು ಚರ್ಚಿಸಲಾಯಿತು. ಇದರಿಂದ ದತ್ತಾಂಶ ಸಂಗ್ರಹಣೆ ಮತ್ತು ಅರ್ಥೈಸುವಿಕೆಯಲ್ಲಿ ಸಹಾಯವಾಯಿತು. ತಾಲೂಕು ಮಟ್ಟದ ಕಾರ್ಯಾಗಾರಗಳನ್ನು ದಿನಾಂಕ 24-25 ಜುಲೈ 2013ರಲ್ಲಿ ಹಾಗು ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು 4 ಸೆಪ್ಟೆಂಬರ್ 2013ರಂದು ನಡೆಸಲಾಯಿತು.[1]

## ದತ್ತಾಂಶದ ಸಂಗ್ರಹಣೆ, ಪರಿಶೀಲನೆ ಮತ್ತು ಸ್ಥಿರೀಕರಣ.

## ದತ್ತಾಂಶದ ಸಂಗ್ರಹಣೆ

ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯಲ್ಲೂ ದತ್ತಾಂಶ ಸಂಗ್ರಹ ಮತ್ತು ಸ್ಥಿರೀಕರಣಕ್ಕಾಗಿ ಜಿಲ್ಲಾ ಮುಖ್ಯ ಸಮಿತಿಯನ್ನು ಸ್ಥಾಪಿಸಿತು. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅಧ್ಯಕ್ಷರಾದ ಈ ಸಮಿತಿಗೆ ಮುಖ್ಯ ಯೋಜನಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿದ್ದು ಎಲ್ಲಾ ಅಭಿವೃದ್ಧಿ ಇಲಾಖೆಗಳ ಮುಖ್ಯಸ್ಥರು ಮತ್ತು ತಾಂತ್ರಿಕ ಸೇವಾ ಸಂಸ್ಥೆಯವರು ಸದಸ್ಯರಾಗಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲೂ ಸಹ ಜಿಲ್ಲಾ ಮುಖ್ಯ ಸಮಿತಿ ರಚಿಸಲಾಯಿತು. ಇದರ ಪ್ರಥಮ ಸಭೆ ಜನವರಿ 31 2013 ರಂದು ನಡೆಯಿತು. ಈ ಸಂದರ್ಭದಲ್ಲಿ ತಾಂತ್ರಿಕ ಸೇವಾ ಸಂಸ್ಥೆಯಾದ ಸೆಂಟರ್ ಫಾರ್ ಬಜೆಟ್ ಅಂಡ್ ಪಾಲಿಸೀ ಸ್ಟಡೀಸ್‌ನ ಪ್ರತಿನಿಧಿಗಳು ದತ್ತಾಂಶ ಸಂಗ್ರಹಣೆಗಾಗಿ ಮಾದರಿ ಕೋಷ್ಟಕಗಳನ್ನು ತಯಾರಿಸಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ನೀಡಿ ಅದನ್ನು ಪೂರ್ಣವಾಗಿ ತುಂಬುವ ಜವಾಬ್ದಾರಿ ವಹಿಸಲಾಯಿತು. ಈ ಪ್ರಕ್ರಿಯೆಯು ಜಿಲ್ಲಾ ಮುಖ್ಯಸಮಿತಿಯ ಪ್ರತಿಯೊಂದು ಸಭೆಯಲ್ಲೂ ದತ್ತಾಂಶ ಸಂಗ್ರಹಣೆ ಪೂರ್ಣವಾಗುವವರೆವಿಗೂ ನಡೆಯಿತು. ಹಲವಾರು ಬಾರಿ ದತ್ತಾಂಶ ಪರಿಶೀಲಿಸಿ ಪುನರ್ವಿಮರ್ಶಿಸಲಾಯಿತು.

ಬೃಹತ್ ದತ್ತಾಂಶ ಕೂಟಗಳನ್ನು ಪರಿಶೀಲಿಸುವ ಮತ್ತು ಸೂಚ್ಯಂಕಗಳ ಅಭಿವೃದ್ಧಿಯ ಜೊತೆಗೆ, ಇನ್ನೂ ಆಳವಾಗಿ ಜಿಲ್ಲೆಗೆ ನಿರ್ದಿಷ್ಟವಾದ ಸಮಸ್ಯೆಗಳನ್ನು ಪರಿಶೋಧಿಸಲು ಮತ್ತು ಪರಿಶೀಲನೆಯನ್ನು ಪುಷ್ಟಿಗೊಳಿಸುವ ಉದ್ದೇಶದಿಂದ ನಾಲ್ಕು ಕಿರು ಕ್ಷೇತ್ರ ಅಧ್ಯಯನಗಳನ್ನೂ ಮಾಡಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಕೆಳಕಂಡ ನಾಲ್ಕು ಕಿರು ಕ್ಷೇತ್ರ ಅಧ್ಯಯನಗಳನ್ನು ಮಾಡಲಾಯಿತು.

[1] ಇದರ ಪೂರ್ಣ ವಿವರಗಳಿಗೆ ಅನುಬಂಧ 2ಅನ್ನು ನೋಡಿರಿ.

ಇವುಗಳಲ್ಲಿ ಪ್ರಾಥಮಿಕ ಸಮೀಕ್ಷೆಯಿಂದ ವಿವರಗಳನ್ನು ಸಂಗ್ರಹಿಸಲಾಯಿತು. ನಿರ್ಮಲ ಭಾರತ ಅಭಿಯಾನದ ಅಧ್ಯಯನದಲ್ಲಿ ಜಿಲ್ಲಾ ಪಂಚಾಯತಿಯು ಸಾಧನೆ ಮಾಡಿದ ಗ್ರಾಮ ಪಂಚಾಯತಿಗಳನ್ನು ಸಂದರ್ಶಿಸಲಾಯಿತು. ಇದರಂತೆ ಭೂ ಬಳಕೆಯಲ್ಲಿನ ಬದಲಾವಣೆಗಾಗಿ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರದ ರೈತರನ್ನು ಸಂದರ್ಶಿಸಲಾಯಿತು. ಬೆಂಗಳೂರು ಮತ್ತು ದೇವನಹಳ್ಳಿ ನಡುವೆ ಹಾಗೆಯೇ ಬೆಂಗಳೂರು ಮತ್ತು ಹೊಸಕೋಟೆ ನಡುವೆ ದಿನಂಪ್ರತಿ ಜನಸಂಚಾರದ ಅಧ್ಯಯನದಲ್ಲಿ ಬಸ್ ಬಳಕೆಯನ್ನು ಕುರಿತಾದ ಅಭಿಪ್ರಾಯಗಳನ್ನು ಪ್ರಯಾಣಿಕರಿಂದ ಪಡೆಯಲಾಯಿತು.

## ದತ್ತಾಂಶದ ಸ್ಥಿರೀಕರಣ

ದತ್ತಾಂಶ ಪರಿಶೀಲನೆಯಲ್ಲಿ ತೀವ್ರವಾದ ದತ್ತಾಂಶ ಮಿತಿಗಳನ್ನು ಎದುರಿಸಬೇಕಾಯಿತು. ಅವುಗಳಲ್ಲಿ ಕೆಲವು, ಎಲ್ಲಾ ಜಿಲ್ಲೆಗಳಿಗೂ ಸಾಮಾನ್ಯವಾಗಿದ್ದರೆ, ಕೆಲವು ಈ ಜಿಲ್ಲೆಗೆ ನಿರ್ದಿಷ್ಟವಾಗಿದ್ದವು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ನಾಲ್ಕು ತಾಲೂಕುಗಳನ್ನು ತೆಗೆದು ಹೊಸ ಜಿಲ್ಲೆಯಾದ ರಾಮನಗರವನ್ನು ಸ್ಥಾಪಿಸಿದಾಗ, 2008ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಉಳಿದ ನಾಲ್ಕು ತಾಲೂಕುಗಳಿಂದ ಪುನಾರಚಿಸಲಾಯಿತು. ಈಗ ಈ ಜಿಲ್ಲೆಯು ನಾಲ್ಕು ತಾಲೂಕುಗಳನ್ನು ಅಂದರೆ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲಗಳನ್ನು ಹೊಂದಿದೆ. ಹಾಗಾಗಿ, 2011ರ ಅಂಕಿಗಳೊಂದಿಗೆ ಹೋಲಿಕೆಗೆ ಅನುವು ಮಾಡಿಕೊಡಲು, ಹಿಂದಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೇವಲ ನಾಲ್ಕು ತಾಲೂಕುಗಳನ್ನು 2001ರ ಅಂಕಿ-ಅಂಶಗಳಿಗೆ ಪರಿಗಣಿಸಲಾಯಿತು. 2001ರಲ್ಲಿ ತಾಲೂಕುವಾರು ದತ್ತಾಂಶ ಇರುವಂಥ ಸೂಚಕಗಳಿಗೆ ಮಾತ್ರವೇ ಇದು ಸಾಧ್ಯವಾಯಿತು. 2001ರಲ್ಲಿ ಎಲ್ಲಾ ಚರಮೌಲ್ಯಗಳಿಗೆ ತಾಲೂಕುವಾರು ದತ್ತಾಂಶವು ಲಭ್ಯವಿರದಿದ್ದರಿಂದ, ಅಂತಹ ಪ್ರಕರಣಗಳಲ್ಲಿ ಹೋಲಿಕೆಯನ್ನು ಮಾಡಲಾಗಿಲ್ಲ. ದತ್ತಾಂಶದ ನಿಖರತೆಯನ್ನು ಪರೀಕ್ಷಿಸಲು, ದತ್ತಾಂಶಂಶ ಸಂಗ್ರಹಣ ಪ್ರಕ್ರಿಯೆಯಲ್ಲಿ ಕೆಲವು ಸ್ಥಿರೀಕರಣ ಕ್ರಮಗಳನ್ನು ಅಳವಡಿಸಲಾಯಿತು. ಅಂತಿಮ ಚರಮೌಲ್ಯಕ್ಕೆ ಮತ್ತು ಅದನ್ನು ರಚಿಸಲು ಬಳಸಲಾಗಿರುವ ಕೆಳ ಚರಮೌಲ್ಯಗಳು ಎರಡಕ್ಕೂ ದತ್ತಾಂಶವನ್ನು ನೀಡುವಂತೆ ಜಿಲ್ಲೆಯನ್ನು ಕೇಳಲಾಯಿತು. ಉದಾಹರಣೆಗೆ, ಸೂಚ್ಯಂಕದ ಗಣತಿಗೆ ಬಳಸಲಾಗುವ ತಾಯಂದಿರ ಮರಣ ಪ್ರಮಾಣವನ್ನು, ಪ್ರತಿ ತಾಲುಕಿಗೂ ತಾಯಂದಿರ ಮರಣ ಪ್ರಮಾಣ ಮತ್ತು ಜೀವಂತ ಜನ್ಮಗಳ ಪ್ರಮಾಣದ ಜೊತೆಗೆ ಸಂಗ್ರಹಿಸಲಾಯಿತು. ಇದು ಅಂತಿಮ ಚರಮೌಲ್ಯದ ಸ್ವತಂತ್ರ ಗಣತಿಗೆ ಸಹಾಯಕವಾಗಿದ್ದು, ಇಲಾಖೆ ನೀಡಿದ ಅಂಕಿಯೊಂದಿಗೆ ಹೋಲಿಸಲು ಸಹಾಯಕವಾಯಿತು. ಇದು, ಅಂತಿಮ ಚರಮೌಲ್ಯ ಮತ್ತು ಅದನ್ನು ರಚಿಸಲು ಬಳಸುವ ಕೆಳ ಚರಮೌಲ್ಯಗಳಲ್ಲಿ ಇರಬಹುದಾದ ಯಾವುದೇ ಸಮಸ್ಯೆಗಳನ್ನು ಗುರುತಿಸಲೂ ಸಹಾಯಕವಾಗಿದ್ದಿತು.

ಎರಡನೇ ಸ್ಥಿರೀಕರಣ ಕ್ರಮವೆಂದರೆ ವಿವಿಧ ಸೂಚಕಗಳಿಗೆ ಆಂತರಿಕ ಸ್ಥಿರತೆಯ ಪರೀಕ್ಷೆ. ಉದಾಹರಣೆಗೆ, ಪ್ರಾಥಮಿಕ ಶಾಲೆಯ ನಿವ್ವಳ ದಾಖಲಾತಿ ಪ್ರಮಾಣ ಮತ್ತು 6-13 ವರ್ಷ ವಯೋಮನದ ಶಾಲೆಯಿಂದ ಹೊರಗುಳಿದ ಮಕ್ಕಳು ಇವೆರಡೂ ವಿರುದ್ಧವಾದ ಸಂಬಂಧವನ್ನು ಹೊಂದಿವೆ, ಅಂದರೆ ಒಂದು ಹೆಚ್ಚಾದರೆ ಮತ್ತೊಂದು ಕಡಿಮೆಯಾಗಬೇಕು. ನಿವ್ವಳ ದಾಖಲಾತಿ ಪ್ರಮಾಣವು ಹೆಚ್ಚಾದ ವರ್ಷಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಕಡಿಮೆಯಾಗಿದೆಯೇ ಎಂದು ಪರೀಕ್ಷಿಸಲಾಯಿತು. ಈ ಕ್ರಮಗಳ ಜೊತೆಗೆ, ದತ್ತಾಂಶದಲ್ಲಿ ಹಠಾತ್ತನೆಯ ಹೆಚ್ಚಳ ಅಥವಾ ವೈರುದ್ಧ್ಯ ಅಥವಾ ಎರಡು ಚರಮೌಲ್ಯಗಳ ಸಂಬಂಧದಲ್ಲಿ ಬದಲಾವಣೆಯಂತಹ ವಿಭಿನ್ನತೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆಯೂ ಚರ್ಚಿಸಲಾಯಿತು. ಇವಕ್ಕೆ ಸೂಕ್ತವಾದ ಕಾರಣಗಳಿವೆಯೇ ಅಥವಾ ತಪ್ಪು ಮಾಹಿತಿಯಿಂದಾಗಿದೆಯೇ ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯವಾಯಿತು. ಸರ್ಕಾರ ನೀಡಿದ ದತ್ತಾಂಶಕ್ಕೆ ಪರ್ಯಾಯವಾಗಿ ಅಥವಾ ಪರಿಶೀಲನೆಯನ್ನು ಬಲಗೊಳಿಸಲು ಬಳಸಲಾದ ದತ್ತಾಂಶ ಮೂಲಗಳೆಂದರೆ, ಜಿಲ್ಲಾ ಮಟ್ಟದ ಆರೋಗ್ಯ ಸಮೀಕ್ಷೆ (DLHS), ರಾಷ್ಟ್ರೀಯ ಮಾದರಿ ಸಮೀಕ್ಷೆ, ಭಾರತೀಯ ಜನಗಣತಿ (2001 ಮತ್ತು 2011), ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಕಿ-ಅಂಶಗಳ ನೋಟ (2001-2012), ಕರ್ನಾಟಕದ ಅಂಕಿ-ಅಂಶಗಳ ನೋಟ (2011-12) ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ ವರದಿ. ಈ ಮೂಲಗಳ ಬಳಕೆಯು ಪರಿಶೀಲನೆಯನ್ನು ಬಲಗೊಳಿಸಿದವು. ಉದಾ: ಗಿನಿ ಗುಣಾಂಕವನ್ನು, ಆಸ್ತಿ, ಉದ್ಯೋಗ ಮತ್ತು ನಿರುದ್ಯೋಗದ ಪ್ರಮಾಣವನ್ನು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕರ್ನಾಟಕದ ಬಾಲಕರ್ಮಿಕರನ್ನು ಗಣಿಸಲು ರಾಷ್ಟ್ರೀಯ ಮಾದರಿ ಸಮೀಕ್ಷೆಯ 66ನೇ ಸುತ್ತಿನ ದತ್ತಾಂಶವನ್ನು ಬಳಸಲಾಯಿತು. ಆದರೆ ಇಂತಹ ಮೂಲಗಳ ಬಳಕೆಗೂ ಎರಡು ಮಿತಿಗಳಿದ್ದವು 1. ಸಮೀಕ್ಷೆಯನ್ನು ನಡೆಸಲಾದ ಕಾಲವನ್ನು ಆಧರಿಸಿ ಭಿನ್ನ ದತ್ತಾಂಶಗಳಿಗೆ ಅವಧಿಯು ಭಿನ್ನವಾಗಿರಬಹುದು, ಉದಾ: ರಾಷ್ಟ್ರೀಯ ಮಾದರಿ ಸಮೀಕ್ಷೆಯ 66ನೇ ಸುತ್ತನ್ನು 2009-10 ರಲ್ಲಿ ನಡೆಸಲಾಯಿತು ಮತ್ತು 2. ಈ ದತ್ತಾಂಶಗಳು ಇಡೀ ಜಿಲ್ಲೆಗೆ ಲಭ್ಯವಿದ್ದು, ತಾಲೂಕು ಮಟ್ಟದಲ್ಲಿ ವಿಂಗಡಿಸಲಾಗಿಲ್ಲದಿರುವುದು.

## ವರದಿಯ ಮಂಡನೆ

ಡಾ. ವಿನೋದ್ ವ್ಯಾಸುಲು, ಡಾ. ಶ್ರೀಲಕ್ಷ್ಮೀಗುರುರಾಜ್, ಡಾ ಸ್ರಿಜಿತ್ ಮಿಶ್ರ, ಪ್ರೊ. ವಾಣಿ, ಪ್ರೊ ಜೇಮ್ಸ್ ಮೊದಲಾದ ವಿಷಯ ಪರಿಣಿತರನ್ನು ಸಲಹೆ ಸೂಚನೆಗಳಿಗಾಗಿ ಬಳಸಲಾಯಿತು. ದತ್ತಾಂಶ ಪಡೆಯುವ ಪ್ರಕ್ರಿಯೆಯು ಜನವರಿ 2014ಕ್ಕೆ ಮುಗಿದಮೇಲೆ ಆರು ಮಂದಿಯನ್ನೊಳಗೊಂಡ ತಂಡ ಈ ವರದಿಯ ಬರವಣಿಗೆಯಲ್ಲಿ ತೊಡಗಿಕೊಂಡಿತು.ಈ ರೀತಿ ಬರೆದ ಅಧ್ಯಾಯಗಳನ್ನು ಎರೆಡು ಬಾರಿ ಆಂತರಿಕವಾಗಿ ಮತ್ತು ಒಂದು ಬಾರಿ ವಿಷಯ ಪರಿಣಿತರಿಂದ ಪರಿಶೀಲನೆಗೆ ಒಳಪಡಿಸಲಾಯಿತು. ವರದಿಯ ಕರಡು ಪ್ರತಿಗಳನ್ನು ಜಿಲ್ಲಾ ಪಂಚಾಯತಿ, ಗುಣಮಟ್ಟ ಮೇಲ್ವಿಚಾರಣ ಸಮಿತಿಯ ಸದಸ್ಯರು ಹಾಗು ವಿಷಯ ಪರಿಣಿತರಿಗೆ ನೀಡಿ ಅವರ ಸಲಹೆ ಸೂಚನೆಗಳನ್ನು ಪಡೆಯಲಾಯಿತು. ಇದಾದ ಮೇಲೆ ಯೋಜನಾ ಇಲಾಖೆಯ ಮಾನವ ಅಭಿವೃದ್ಧಿ ವಿಭಾಗಕ್ಕೆ ಸಲ್ಲಿಸಲಾಯಿತು. ಯೋಜನಾ ಇಲಾಖೆಯ ಮಾನವ ಅಭಿವೃದ್ಧಿ ವಿಭಾಗದ ವತಿಯಿಂದ ಈ ವರದಿಯನ್ನು ಪರಿಶೀಲನೆಗೆ ವಿಷಯ ಪರಿಣಿತರಿಗೆ ಕಳುಹಿಸಲಾಯಿತು. ವಿಷಯ ಪರಿಣಿತರ ಸಲಹೆಯನ್ನು ಪರಿಗಣಿಸಿ ವರದಿಯನ್ನು ಪರಿಷ್ಕರಿಸಿ ಅಂತಿಮ ಗೊಳಿಸಲಾಯಿತು.

## ತಾತ್ಪರ್ಯ

ಈ ವರದಿಯ ತೆಯಾರಿಕೆಯ ಅವಧಿಯು ಸುಮಾರು 2 ವರ್ಷಗಳು ಆಗಿದ್ದು, ಇದರಲ್ಲಿ ದತ್ತಾಂಶದ ಸಂಗ್ರಹಣೆ, ಅದರ ಪರಿಶೀಲನೆ ಹಾಗು ಸ್ಥಿರೀಕರಣ ಬಹಳ ಸಮಯ ತೆಗೆದು ಕೊಂಡವು. ದತ್ತಾಂಶ ಸಂಗ್ರಹಣೆಯನ್ನು ಸರ್ಕಾರದ ಮಾನವ ಅಭಿವೃದ್ಧಿ ವಿಭಾಗ ನಡೆಸಿ ನಂತರ ತಾಂತ್ರಿಕ ಸೇವಾ ಸಂಸ್ಥೆಗೆ ವಹಿಸಿದ್ದರೆ, ಈ ಪ್ರಕ್ರಿಯೆ ಬಹಳ ಬೇಗ ಮುಗಿಯಬಹುದಾಗಿದ್ದಿತು. ಮಾನವ ಅಭಿವೃದ್ಧಿ ಮಾಪನದಲ್ಲಿ ದತ್ತಾಂಶದ ಪಾತ್ರ, ಇದನ್ನು ಬಳಸುವ ಹಾಗು ಪರಿಶೀಲಿಸುವ ಅಗತ್ಯತೆ ಬಹಳವಾಗಿದೆ. ಇದರಲ್ಲಿ ಅಧಿಕಾರಿಗಳ ಹಾಗು ಜನಪ್ರತಿನಿಧಿಗಳ ಪಾತ್ರ ಮಹತ್ವದ್ದಾಗಿದೆ.

# 2. ಮಾನವ ಅಭಿವೃದ್ಧಿ ಕಾರ್ಯಾಗಾರಗಳ ವಿವರಗಳು

ತಾಲೂಕು ಮತ್ತು ಜಿಲ್ಲಾ ಮಟ್ಟದ ಕಾರ್ಯಾಗಾರಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ನಾಲ್ಕು ತಾಲೂಕುಗಳಲ್ಲಿ ನಡೆಸಲಾಯಿತು. ಕಾರ್ಯಾಗಾರದ ಉದ್ದೇಶವೇನೆಂದರೆ, ಮಾನವ ಅಭಿವೃದ್ಧಿ ವಿಷಯಗಳ ಬಗ್ಗೆ ಸ್ಥಳೀಯ ಜನರನ್ನು ಸಂವೇದನಶೀಲರನ್ನಾಗಿಸುವುದು. ದತ್ತಾಂಶ ಸಂಗ್ರಹಣೆಯ ಪ್ರಕ್ರಿಯೆಯಲ್ಲಿ ಸ್ಥಳೀಯ ಅಧಿಕಾರಿಗಳಿಂದ ಸಹಕಾರವನ್ನು ಕೇಳುವುದು ಮತ್ತು ಮೌಲ್ಯಮಾಪನ ಮಾಡುವುದು ಮತ್ತು ಮಾನವ ಅಭಿವೃದ್ಧಿಯ ಸೂಚ್ಯಂಕಗಳ ಅಭಿವೃದ್ಧಿಪಡಿಸುವಿಕೆಯ ಬಗ್ಗೆ ಚರ್ಚಿಸುವುದು. ಅಲ್ಲದೇ ನೀತಿ ರೂಪಿಸುವಲ್ಲಿ ಇತರೇ ವಿವಿಧ ಸೂಚ್ಯಂಕಗಳು, ಕಾರ್ಯಕ್ರಮದ ಅನುಷ್ಠಾನ ಮತ್ತು ಯೋಜನೆ ರೂಪಿಸುವುದರ ಕುರಿತು ಚರ್ಚಿಸುವುದು. ಕಾರ್ಯಾಗಾರದ ವಿಷಯವನ್ನು ಜಿ.ಪಂ. ಜೊತೆ ಸಮಾಲೋಚಿಸಿ ಅಂತಿಮಗೊಳಿಸಲಾಯಿತು.

ತಾಲೂಕು ಕಾರ್ಯಾಗಾರಗಳನ್ನು ಜುಲೈ 2013ರ 24 ಮತ್ತು 25 ರಂದು ನಡೆಸಲಾಯಿತು. ಮತ್ತು ಜಿಲ್ಲಾ ಕಾರ್ಯಾಗಾರವನ್ನು 4 ಸೆಪ್ಟೆಂಬರ್ 2013 ರಂದು ನಡೆಸಲಾಯಿತು. ಪವರ್ ಪಾಯಿಂಟ್ ಪ್ರಸ್ತುತವನ್ನು ಬಳಸಿ ಕಾರ್ಯಾಗಾರವನ್ನು ಕನ್ನಡದಲ್ಲಿ ನಡೆಸಲಾಯಿತು. ಭಾಗವಹಿಸಿದ ಎಲ್ಲರಿಗೂ ಪ್ರಸ್ತುತ ಪ್ರತಿಯನ್ನು ಮತ್ತು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಡಿಮಾನವ ಅಭಿವೃದ್ಧಿ ವರದಿ ತಯಾರಿಕೆಗೆ ಪ್ರಯತ್ನಗಳನ್ನು, ಅದರ ಅವಶ್ಯಕತೆ, ಉಪಯುಕ್ತತೆ ಮತ್ತು ಡಿಮಾನವ ಅಭಿವೃದ್ಧಿ ವರದಿ ಸಿದ್ಧತೆಯಲ್ಲಿ ಸಮಯಾವಧಿಯನ್ನು ವಿವರಿಸುವ ಒಂದು ಪರಿಚಯಾತ್ಮಕ ಸೂಚನೆ ನೀಡಲಾಯಿತು.

ಪ್ರಸ್ತುತಿಯು ಮಾನವ ಅಭಿವೃದ್ಧಿ ಸೂಚ್ಯಂಕನ ಪರಿಕಲ್ಪನೆ, ಅದರ ಪ್ರಸ್ತುತತೆ ಮತ್ತು ಅದರ ಉಪಯೋಗಗಳಿಗೆ ಒತ್ತು ನೀಡಿದೆ. ಮಾನವ ಅಭಿವೃದ್ಧಿ ಸೂಚ್ಯಂಕ ಅಭಿವೃದ್ಧಿಯ ಅಳತೆಯಾಗಿರುವುದಕ್ಕೆ, ಇದರ ಮೂಲ ಮತ್ತು ಕರ್ನಾಟಕ ರಾಜ್ಯದ ಪ್ರಯತ್ನಗಳನ್ನು ಒಳಗೊಂಡಂತೆ ವಿವಿಧ ಹಂತಗಳಲ್ಲಿ ಎಚ್‌ಡಿ ವರದಿ ತಯಾರಿಕೆಗೆ ಕೂಡಾ ಗಮನ ಹರಿಸಿದೆ. ಪ್ರಸ್ತುತಿಯಲ್ಲಿ ದತ್ತಾಂಶದ ಪ್ರಾಮುಖ್ಯತೆ, ಇದನ್ನು ಒದಗಿಸುವಲ್ಲಿ ಅಧಿಕಾರಿಗಳ ಪಾತ್ರ, ಪರಿಷ್ಕರಣೆ ಮತ್ತು ದತ್ತಾಂಶದ ಜಾರಿಗೊಳಿಸುವಿಕೆಯನ್ನು ಎತ್ತಿ ತೋರಿಸಲಾಗಿದೆ. ಪ್ರಸ್ತುತಿಯು ಸಣ್ಣ ಪ್ರದೇಶದ ಅಧ್ಯಯನಗಳು ಮತ್ತು ಡಿಮಾನವ ಅಭಿವೃದ್ಧಿ ವರದಿ ಅಧ್ಯಯನದ ಭಾಗವಾಗಿ ಲೆಕ್ಕ ಮಾಡಲ್ಪಡುವ ವಿವಿಧ ಸೂಚ್ಯಂಕಗಳನ್ನು ಸಹ ಒತ್ತಿ ಹೇಳುತ್ತದೆ.

ತಾಲೂಕು ಮಟ್ಟದ ಅಧಿಕಾರಿಗಳು, ಪಿಡಿಓಗಳು ಮತ್ತು ಜಿಲ್ಲಾ ಪಂಚಾಯತಿಯ ಕಾರ್ಯದರ್ಶಿಗಳು, ಟಿ.ಪಿ ಯ ಚುನಾಯಿತ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು. ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಮಾಧ್ಯಮಗಳು, ಕಾಲೇಜುಗಳು ಮತ್ತು ಸಾರ್ವಜನಿಕರು ಕಾರ್ಯಾಗಾರದಲ್ಲಿ ಭಾಗವಹಿಸಿದರು. ಪ್ರದೇಶವನ್ನು ಪ್ರತಿನಿಧಿಸುವ ಜಿ.ಪಂ ಸದಸ್ಯರು ಸಹ ಉಪಸ್ಥಿತರಿದ್ದರು. ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳು, ಟಿ.ಪಿಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಡಿಮಾನವ ಅಭಿವೃದ್ಧಿ ವರದಿ ಕಾರ್ಯಗತಗೊಳಿಸುವುದರ ಅವಶ್ಯಕತೆಯ ಬಗ್ಗೆ ಮಾತನಾಡಿದರು. ಜಿಲ್ಲಾ ಪಂಚಾಯತಿ ಅಧಿಕಾರಿಗಳು, ಮುಖ್ಯ ಯೋಜನಾ ಅಧಿಕಾರಿ, ಉಪನಿರ್ದೇಶಕರು ಎಲ್ಲಾ ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು. ಮುಖ್ಯ ಯೋಜನಾ ಅಧಿಕಾರಿಯು ಕಾರ್ಯಾಗಾರದ ಉದ್ದೇಶದ ಸಂಕ್ಷಿಪ್ತ ಪರಿಚಯ ನೀಡಿದರು ಮತ್ತು ಇದು ಸಿಬಿಪಿಎಸ್ ಪ್ರಸ್ತುತಿಯ ಮೂಲಕ ನಡೆಯಿತು. ಪರಸ್ಪರ ಪ್ರಸ್ತುತಿಯು ಡಿಮಾನವ ಅಭಿವೃದ್ಧಿ ವರದಿ ತಯಾರಿಕೆ ಕುರಿತು ಪ್ರಶ್ನೆಗಳು, ಸ್ಪಷ್ಟೀಕರಣ, ಟೀಕೆಗಳನ್ನು ಕೇಂದ್ರೀಕರಿಸುವ ಅಧಿವೇಶನದ ಮೂಲಕ ನಡೆಯಿತು. ನಂತರ ಸಿಬಿಪಿಎಸ್ ತಂಡ ಎಲ್ಲಾ ವಿಷಯಗಳನ್ನು ಮತ್ತೊಮ್ಮೆ ಸಂಕ್ಷೇಪವಾಗಿ  ವಿವರಿಸಿ ಧನ್ಯವಾದ ಹೇಳುವ ಮೂಲಕ ನಡೆಯಿತು.

ಎಲ್ಲಾ 4 ತಾಲೂಕುಗಳಲ್ಲಿಯೂ ಅಭ್ಯರ್ಥಿಗಳು ಬಹಳ ಸಕ್ರಿಯವಾಗಿ ಚರ್ಚೆಗಳಲ್ಲಿ ಪಾಲ್ಗೊಂಡರು. ಹೊಸಕೋಟೆ ತಾಲೂಕಿನಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ಅದಕ್ಕೆ ಕೆಳಗಿನ ಮಟ್ಟಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ದ ಬಳಕೆ ಕುರಿತಂತೆ ಸ್ಪಷ್ಟೀಕರಣಗಳನ್ನು ಕೋರಿದರು. ದೇವನಹಳ್ಳಿಯಲ್ಲಿ, ಕೊನೆಯ ಮಟ್ಟದಲ್ಲಿ ಅಧಿಕಾರಿಗಳು ತರಾತುರಿಯಲ್ಲಿ ದತ್ತಾಂಶ ಭರ್ತಿ ಮಾಡಿದ ಬಗ್ಗೆ ಚರ್ಚೆಯಾಯಿತು. ಇದು ನಿಖರವಲ್ಲದ ದತ್ತಾಂಶಕ್ಕೆ ಮೂಲವಾಗುತ್ತದೆ ಎಂದು ಅವರ ವಾದವಾಗಿತ್ತು. ಅನುಷ್ಠಾನದ ಬಗ್ಗೆ ಹಾಗೂ ಕೆಲವು ಕೆಲಸಗಳಿಗೆ ಇನ್ನೂ ಬಿಲ್ ಪಾವತಿಯಾಗದ ಬಗ್ಗೆ ಉಪಾಧ್ಯಕ್ಷರ ಅನಿಸಿಕೆಯಿಂದ ಚರ್ಚೆ ಸ್ವಲ್ಪ ವಿಷಯ ಬಿಟ್ಟು ಹೋಯಿತು. ದೊಡ್ಡಬಳ್ಳಾಪುರದಲ್ಲಿ ಚರ್ಚೆ ಉತ್ತಮವಾಗಿತ್ತು. ಆ ಪ್ರದೇಶದ ಅಧಿಕಾರಿಗಳೂ ಸೇರಿದಂತೆ ಗ್ರಾ.ಪ. ಸದಸ್ಯರು ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ವಿಧಾನ ಹಾಗೂ ಬಳಸಲಾದ ಸೂಚಕಗಳ ಬಗ್ಗೆ ಸ್ಪಷ್ಟೀಕರಣ ಕೇಳಲಾಯಿತು. ಸೂಚಕಗಳ ಬಳಕೆಯ ಬಗ್ಗೆಯೂ ಅನಿಸಿಕೆಗಳು ಬಂದವು. ಖರ್ಚು ದತ್ತಾಂಶ ಹಾಗೂ ಖರ್ಚಿನ ಕಾಲಮಿತಿಗಳನ್ನೂ ಸೂಚಕಗಳಾಗಿ ಬಳಸುವುದರ ಬಗ್ಗೆ ಗ್ರಾಮ ಪಂಚಾಯತಿ ಸದಸ್ಯರೊಬ್ಬರು ಚರ್ಚೆ ಮಾಡಿದರು. ನೆಲಮಂಗಲದಲ್ಲೂ ಸಹ, ವಿಷಯ ಮಂಡನೆ ನಂತರ ಉತ್ತಮ ಚರ್ಚೆ ನಡೆಯಿತು. ಚರ್ಚೆಯು ಸೂಚ್ಯಂಕಗಳ ಬಳಕೆ ಹಾಗೂ ಈ ಸೂಚ್ಯಂಕಗಳನ್ನು ಬಳಸುವಲ್ಲಿ ಆಯ್ಕೆಯಾದ ಪ್ರತಿನಿಧಿಗಳ ಮತ್ತು ಅಧಿಕಾರಿಗಳ ಪಾತ್ರದ ಬಗ್ಗೆ ಗಮನ ಕೇಂದ್ರೀಕರಿಸಿತು.ಭಾಗವಹಿಸಿದವರ ಪಟ್ಟಿಯನ್ನು ಕೆಳಗೆ ನೀಡಲಾಗಿದೆ.

**ಕೋಷ್ಟಕ 2.1–ಎ ಕಾರ್ಯಾಗಾರದಲ್ಲಿ ಭಾಗವಹಿಸಿದವರ ವಿವರಗಳು**

| ಕ್ರ.ಸಂ. | ಹೆಸರು | ಹುದ್ದೆ | ಸ್ಥಳ |
|---|---|---|---|
| 1. | ಪ್ರಿಯಾಂಕ ಎಚ್ | ಸಹಾಯಕ ತೋಟಗಾರಿಕೆ ಅಧಿಕಾರಿ | ಹೊಸಕೋಟೆ |
| 2. | ಶಕುಂತಲಾ | ಉಪಾಧ್ಯಕ್ಷರು | ವಾಗಟಾ ಗ್ರಾ. ಪಂ |
| 3. | ಅಲಮ್‌ಶಾದ್ | ಅಧ್ಯಕ್ಷರು | ಖಾಜಿ ಹೊಸಹಳ್ಳಿ |
| 4. | ಫರ್ಹಾನಾರಿಯಾಜ್ | ಸದಸ್ಯರು, ತಾಲೂಕು ಪಂಚಾಯತ | ಹೊಸಕೋಟೆ |
| 5. | ಚಿನ್ನಸ್ವಾಮಿ ಗೌಡ | ಅಧಿಕಾರಿ, ಶಿಕ್ಷಣ ವಿಭಾಗ | ಹೊಸಕೋಟೆ |
| 6. | ಹೊನ್ನಗಂಗಪ್ಪ | ಎಡಿಪಿಐ | ಹೊಸಕೋಟೆ |
| 7. | ಮಂಜುಳಾದೇವಿ ಎನ್ | ರೇಷ್ಮೆ ಕೃಷಿ ಸಹಾಯಕ ನಿರ್ದೇಶಕ | ಹೊಸಕೋಟೆ |
| 8. | ವೆಂಕಟೇಶ |  |  |
| 9. | ನಿಖಿಲೇಶ ಎಚ್.ಎ | ಕಾರ್ಯದರ್ಶಿ | ಅನುಗೊಂಡಹಳ್ಳಿ ಗ್ರಾ.ಪಂ. |
| 10. | ಎಂ. ಕೆಂಪಣ್ಣ | ಪಿಡಿಓ | ಬಿ.ಎನ್.ಪುರ ಗ್ರಾ.ಪಂ. |
| 11. | ಅಂಕುಗೌಡ | ಪಿಡಿಓ | ಕಂಬಳಿಪುರ |
| 12. | ಅಮರನಾರಾಯಣಸ್ವಾಮಿ | ಪಿಡಿಓ | ಗಣಗಲೂರು |
| 13. | ಶ್ರೀನಿವಾಸ ಮೂರ್ತಿ | ಪಿಡಿಓ | ಖಾಜಿಹೊಸಹಳ್ಳಿ ಗ್ರಾ.ಪಂ. |
| 14. | ಟ್ರಿಫಲ್ ಶರೀಫ್ | ಪಿಡಿಓ | ತಾವರೆಕೆರೆ ಗ್ರಾ.ಪಂ. |
| 15. | ಅಯೇಶಾ | ಪಿಡಿಓ | ಜಡಿಗೇನಹಳ್ಳಿ ಗ್ರಾ.ಪಂ. |
| 16. | ಪುಷ್ಪಲತಾ | ಪಿಡಿಓ | ನಂದಗುಡಿ |
| 17. | ಚೈತ್ರಾ | ಪಿಡಿಓ | ದೊಡ್ಡರಳಗೆರೆ ಗ್ರಾ.ಪಂ. |
| 18. | ಜಯಪ್ರಕಾಶ್ ಎನ್. | ಪಿಡಿಓ | ದೇವನಗುಂದಿ ಗ್ರಾ.ಪಂ. |
| 19. | ಕೃಷ್ಣಪ್ಪ ಎಚ್.ಎಂ | ಪಿಡಿಓ |  |
| 20. | ರಾಜಣ್ಣ ಎಂ. | ಕಾರ್ಯದರ್ಶಿ | ಮುತ್ಸಂದ್ರ ಗ್ರಾ.ಪಂ. |
| 21. | ಸೋಮೇಶ್ ಕುಮಾರ್ | ಪಿಡಿಓ | ವಾಗಟಾ ಮತ್ತು ಮುತ್ಸಂದ್ರ |
| 22. | ರಾಮೇಶ | ಕಾರ್ಯದರ್ಶಿ | ದೊಡ್ಡಹುಲ್ಲೂರು ಗ್ರಾ.ಪಂ. |
| 23. | ಮುನಿಗಂಗಯ್ಯ | ಕಾರ್ಯದರ್ಶಿ | ನಂದಗುಡಿ ಗ್ರಾ.ಪಂ. |
| 24. | ಶ್ರೀನಿವಾಸ ಎಚ್.ಎಂ | ಸಹಾಯಕ ಕೃಷಿ ಅಧಿಕಾರಿ | ಹೊಸಕೋಟೆ |
| 25. | ರಮೇಶ್ ಕೆ.ಎಂ | ಜಿ.ಪಂ.ಸದಸ್ಯ | ಸಮೇತನಹಳ್ಳಿ |
| 26. | ನಾಗರಾಜ ಬಿ. | ಎಎಓ | ಹೊಸಕೋಟೆ |
| 27. | ಹರೀಶ್ ಬಿ. | ಎಂಐಎಸ್ ಸಂಯೋಜಕರು | ಹೊಸಕೋಟೆ |
| 28. | ಮಂಜುಳಾ ಬಿ. | ವಲಯ ಅರಣ್ಯಾಧಿಕಾರಿ | ಹೊಸಕೋಟೆ |
| 29. | ಕೃಷ್ಣಮೂರ್ತಿ ಬಿ ವಿ | ಎಇಇ | ಪಿಆರ್‌ಇಡಿ ಹೊಸಕೋಟೆ |
| 30. | ಸಾದಿಕ್ | ಸಿಡಿಪಿಓ | ಹೊಸಕೋಟೆ |
| 31. | ಮಾಧುರಾಮ್ | ಸಿಪಿಓ | ಬೆಂಗಳೂರು ಗ್ರಾಮಾಂತರ ಜಿ. ಪಂ. |
| 32. | ಸಿದ್ದೋಜಿ ರಾವ್ | ಉಪನಿರ್ದೇಶಕರು | ಬೆಂಗಳೂರು ಗ್ರಾಮಾಂತರ ಜಿ. ಪಂ. |
| 33. | ಶಂಕರಮ್ಮ | ಪಿಡಿಓ |  |
| 34. | ಮುನಿವೆಂಕಟಪ್ಪ | ಉಪಾಧ್ಯಕ್ಷ | ಟಿಪಿ ಹೊಸಕೋಟೆ |
| 35. | ಮಂಜುಳಾ ವೆಂಕಟೇಶ್ | ಸದಸ್ಯರು ತಾ.ಪಂ | ಹೊಸಕೋಟೆ |
| 36. | ಮಂಜುನಾಥ | ಸದಸ್ಯರು | ಟಿಪಿ ಹೊಸಕೋಟೆ |
| 37. | ಪುಷ್ಪಾ ಭಾಯಿ | ಅಧ್ಯಕ್ಷರ | ಕುಂಬಳಹಳ್ಳಿ ಗ್ರಾ. ಪಂ. |
| 38. | ವರಲಕ್ಷ್ಮಮ್ಮ | ಅಧ್ಯಕ್ಷರು | ಲಕ್ಕೊಂಡಹಳ್ಳಿ ಗ್ರಾ. ಪಂ. |
| 39. | ಉಮಾದೇವಿ | ಅಧಿಕಾರಿ | ಟಿಪಿ ದೇವನಹಳ್ಳಿ |
| 40. | ಅಶ್ವತ್ತಾಮ | ಸಿಡಿಪಿಓ | ದೇವನಹಳ್ಳಿ |
| 41. | ಶಕುಂತಲಾ | ಸದಸ್ಯರು | ಟಿಪಿ ದೇವನಹಳ್ಳಿ |
| 42. | ಪ್ರಿಯಲತಾ | ಟಿಎಚ್‌ಓ | ದೇವನಹಳ್ಳಿ |
| 43. | ಅಮರಾವತಿ | ಅಧ್ಯಕ್ಷರು ಗ್ರಾ.ಪಂ. |  |
| 44. | ಮುನಿರಾಜಮ್ಮ | ಸದಸ್ಯರು | ಟಿಪಿ ದೇವನಹಳ್ಳಿ |
| 45. | ಗಾಯತ್ರಿ | ಸದಸ್ಯರು | ಟಿಪಿ ದೇವನಹಳ್ಳಿ |

| ಕ್ರ.ಸಂ. | ಹೆಸರು | ಹುದ್ದೆ | ಸ್ಥಳ |
|---|---|---|---|
| 46. | ನಾರಾಯಣಸ್ವಾಮಿ | ಜಿ.ಪಂ ಸದಸ್ಯರು | |
| 47. | ವೆಂಕಟೇಶ್ | ಅಧೀಕ್ಷಕರು | ಬಿಸಿಎಂ ಹಾಸ್ಟೆಲ್ |
| 48. | ಗಾಯತ್ರಿ ಎಸ್.ಎಸ್ | ಎಫ್‌ಡಿಎ | ಟಿಪಿ ದೇವನಹಳ್ಳಿ |
| 49. | ಮುನಿಕೃಷ್ಣಪ್ಪ | ಸದಸ್ಯರು | ಟಿಪಿ ದೇವನಹಳ್ಳಿ |
| 50. | ಪಿಲ್ಲಪ್ಪ ಬಿ. | ಸದಸ್ಯರು | ಟಿಪಿ ದೇವನಹಳ್ಳಿ |
| 51. | ನಾರಾಯಣಸ್ವಾಮಿ | ಸದಸ್ಯರು | ಟಿಪಿ ದೇವನಹಳ್ಳಿ |
| 52. | ಚಿಕ್ಕನರಸಯ್ಯ | ಸಹಾಯಕ ನಿರ್ದೇಶಕ | ದೇವನಹಳ್ಳಿ |
| 53. | ನಾಗರಾಜ ಕೆ.ಎನ್ | ವ್ಯವಸ್ಥಾಪಕ | ಬಿಇಓ ಕಛೇರಿ |
| 54. | ಚಿರಂಜೀವಿ ಗೌಡ | ಎಸ್ ಡಿ ಎ | ಬಿಇಓ ಕಛೇರಿ |
| 55. | ಕೃಷ್ಣಪ್ಪ | ಪಿಡಿಓ | ನಲ್ಲೂರು ಗ್ರಾ.ಪಂ. |
| 56. | ಮೀನಾಕ್ಷಿ | ಸದಸ್ಯರು | ಟಿಪಿ ದೇವನಹಳ್ಳಿ |
| 57. | ಬಾಗೇವಾಡಿ ಬಿ ವಿ | ರೇಷ್ಮೆ ಕೃಷಿ ಸಹಾಯಕ ನಿರ್ದೇಶಕರು | ದೇವನಹಳ್ಳಿ |
| 58. | ಸೌಜನ್ಯ | ತೋಟಗಾರಿಕೆ ಸಹಾಯಕ ನರ್ದೇಶಕರು | ದೇವನಹಳ್ಳಿ |
| 59. | ಕೆಂಪೇಗೌಡ | ಸದಸ್ಯರು | ಟಿಪಿ ದೇವನಹಳ್ಳಿ |
| 60. | ಪದ್ಮಾವತಿ ಪಿ | ಸದಸ್ಯರು | ಟಿಪಿ ದೇವನಹಳ್ಳಿ |
| 60. | ಮುನಿವೆಂಕಟಪ್ಪ | ಜಿ.ಪಂ ಸದಸ್ಯರು | ಕೋರಮಂಗಲ |
| 61. | ಶ್ರೀನಿವಾಸ್ ಮೂರ್ತಿ | ಪಿಡಿಓ | ಕನ್ನಮಂಗಲ ಗ್ರಾ.ಪಂ. |
| 62. | ಕೆ.ಆನಂದಕುಮಾರ್ | ಪಿಡಿಓ | ಯಲಿಯೂರು ಗ್ರಾ.ಪಂ. |
| 63. | ತಿ ಮ್ಮೇ ಗೌಡ | ಪಿಡಿಓ | ಗಂಗವಾರ ಚೌಡಪ್ಪನಹಳ್ಳಿ |
| 64. | ವೆಂಕಟೇಶ್ | ಪಿಡಿಓ | ಆವತಿ ಗ್ರಾ.ಪಂ. |
| 65. | ಶಿವಕುಮಾರ್ | ಪಿಡಿಓ | ವೆಂಕಟಗಿರಿ ಕೋಟೆ ಗ್ರಾ.ಪಂ. |
| 66. | ಗೋಪಾಲ್ ರಾವ್ | ಪಿಡಿಓ | ಗೊಡ್ಲುಮುದ್ದೇನಹಳ್ಳಿ ಗ್ರಾ.ಪಂ. |
| 67. | ಚಿನ್ನಸ್ವಾಮಿ | ಅಧ್ಯಕ್ಷರು | ವೆಂಕಟಗಿರಿ ಕೋಟೆ ಗ್ರಾ.ಪಂ. |
| 68. | ರಮಿತಾ | ಪಿಡಿಓ | ಚನ್ನಹಳ್ಳಿ ಗ್ರಾ.ಪಂ. |
| 69. | ಕೆಂಪರಾಜು | ಪಿಡಿಓ | ಕೋರಮಂಗಲ ಗ್ರಾ.ಪಂ. |
| 70. | ಕುಮಾರ್ | ಪಿಡಿಓ | ಅಣ್ಣೇಶ್ವರ ಗ್ರಾ.ಪಂ. |
| 71. | ಚಂದ್ರಶೇಖರ್ | ಪಿಡಿಓ | ಬೂದಿಗೆರೆ ಗ್ರಾ.ಪಂ. |
| 72. | ಕೃಷ್ಣಪ್ಪ | ಪಿಡಿಓ | ನಲ್ಲೂರು ಗ್ರಾ.ಪಂ. |
| 73. | ಬಾಬು | ಪಿಡಿಓ | ಬೆಟ್ಟಕೋಟೆ ಗ್ರಾ.ಪಂ. |
| 74. | ಸಿ ಎ ಶ್ರೀಧರ್ | ಎಇಇ | ಪಿಆರ್‌ಇಡಿ ದೇವನಹಳ್ಳಿ |
| 75. | ಮುನಿರಾಜು | ಬಿಇಓ | ದೇವನಹಳ್ಳಿ |
| 76. | ರಾಧಿಕಾ ತ್ಯಾಗರಾಜ್ | ಅಧ್ಯಕ್ಷರು ಟಿಪಿ | ದೇವನಹಳ್ಳಿ |
| 77. | ಪಟಲಪ್ಪಾ | ಉಪಾಧ್ಯಕ್ಷರು ಟಿಪಿ | ದೇವನಹಳ್ಳಿ |
| 78. | ತಿಮ್ಮಯ್ಯ | ಸದಸ್ಯರು | ಟಿಪಿ ದೇವನಹಳ್ಳಿ |
| 79. | ಅಂಜನಪ್ಪ ಎಂ. | ಸದಸ್ಯರು | ಟಿಪಿ ದೇವನಹಳ್ಳಿ |
| 80. | ಚಂದ್ರಪ್ಪ | ವಲಯಾಧಿಕಾರಿ | ಟಿಪಿ ದೇವನಹಳ್ಳಿ |
| 81. | ಮಮ್ತಾಜ್ ಪಾಷಾ | ವ್ಯವಸ್ಥಾಪಕ ಟಿಎಂಸಿ | ದೇವನಹಳ್ಳಿ |
| 82. | ಎಸ್ ಎಂ ಜೋಶಿ | ಎಇಇ | ಪಿಆರ್‌ಇಡಿ ದೊಡ್ಡಬಳ್ಳಾಪುರ |
| 83. | ಕೆ ಎಚ್ ಎಸ್ ಜಯದೇವಿ | ಸಿಡಿಪಿಓ | ಮಹಿಳಾ ಮತ್ತು ಮಕ್ಕಳ ವಿಭಾಗ |
| 84. | ದೀಪಾ | ಟಿಪಿ ಸದಸ್ಯರು | ದೊಡ್ಡಬಳ್ಳಾಪುರ |
| 85. | ಕೆ.ರಾಮರಾವ್ | ಟಿಪಿ ಸದಸ್ಯರು | ದೊಡ್ಡಬಳ್ಳಾಪುರ |
| 86. | ಎಸ್ ಆರ್ ನಾಗೇಶ | ಟಿಪಿಎಸ್ | ದೊಡ್ಡಬಳ್ಳಾಪುರ |
| 87. | ಪಿ.ಚನ್ನೇಗೌಡ | ಟಿಪಿಎಸ್ | ದೊಡ್ಡಬಳ್ಳಾಪುರ |
| 88. | ಕೆ.ಎಸ್ ಸೋಮಪ್ಪರೆಡ್ಡಿ | ಟಿ ಡಬ್ಲ್ಯೂ ಡಿ ಓ | ವಾಟರ್ ಶೆಡ್ |
